ಮುದ್ರಾಮಂಜೂಷ: ಒಂದು ಸಮಗ್ರ ಅಧ್ಯಯನ

ಶಂಕರನಾರಾಯಣ ಉಡುಪ

ಮಾರ್ಗದರ್ಶನ :

ಡಾ। ಯು. ಪಿ. ಉಪಾಧ್ಯಾಯ

ಪ್ರಾಧ್ಯಾಪಕರು

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ

ಎಂ. ಜಿ. ಎಂ. ಕಾಲೇಜು - ಉಡುಪಿ

ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್. ಡಿ. ಪದವಿಗಾಗಿ ಒಪ್ಪಿಸಿದ ಮಹಾಪ್ರಬಂಧ

ಫೆಬ್ರವರಿ 1995

ಯೋಗ್ಯತಾ ಪತ್ರ

ಶ್ರೀ ಶಂಕರನಾರಾಯಣ ಉಡುಪ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ 'ಮುದ್ರಾಮಂಜೂಷಾ: ಒಂದು ಸಮಗ್ರ ಅಧ್ಯಯನ' ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್‌ಡಿ. ಪದವಿ ಪ್ರಾಪ್ತಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲೆಂದು ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವು ಸಂಶೋಧಕರ ಸ್ವಂತ ಕ್ಷೇತ್ರಕಾರ್ಯ, ಅಭಿಪ್ರಾಯ ಸಂಗ್ರಹ, ಸಂದರ್ಶನ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಪ್ರಾಪ್ತಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ.

ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ
ಎಂ.ಜಿ.ಎಂ. ಕಾಲೇಜು, ಉಡುಪಿ-2.
ದಿನಾಂಕ :- 20.2.1995

ಡಾ: ಯು.ಪಿ.ಉಪಾಧ್ಯಾಯ.
ಸಂಶೋಧನ ಮಾರ್ಗದರ್ಶಕರು.

ಪ್ರಮಾಣ ಪತ್ರ

ಮಂಗಳೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ 'ಮುದ್ರಾಮಂಜೂಷ: ಒಂದು ಸಮಗ್ರ ಅಧ್ಯಯನ' ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವು ಸ್ವತಂತ್ರ ಕೃತಿಯಾಗಿದೆ. ಉಡುಪಿಯ ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರದಲ್ಲಿ ಡಾ॥ ಯು.ಪಿ.ಉಪಾಧ್ಯಾಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಮಹಾಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲ ಎಂದು ತಿಳಿಯಪಡಿಸುತ್ತೇನೆ.

ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ
ಎಂ.ಜಿ.ಎಂ. ಕಾಲೇಜು, ಉಡುಪಿ – 2.

(ಶಂಕರನಾರಾಯಣ ಉಡುಪ)

ದಿನಾಂಕ:– 20.02.1995

ಅನುಕ್ರಮಣಿಕೆ

1. ಕವಿಯ ವರ್ಣಚಿತ್ರ ಮತ್ತು ಜನ್ಮಕುಂಡಲಿ.
2. ಕವಿಯ ಮನೆದೇವರು
3. ಹಸ್ತಪ್ರತಿಯ ಮಾದರಿ ಪತ್ರಗಳು
4. ಕವಿಯ ವಂಶಸ್ಥರು.
5. ವಿಸ್ತೃತ ವಂಶವೃಕ್ಷ.

ಎರಡು ಮಾತು

ಮಂಗಳೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ. ಪದವಿಗಾಗಿ 'ಮುದ್ರಾಮಂಜೂಷ: ಒಂದು ಸಮಗ್ರ ಅಧ್ಯಯನ' ಎಂಬ ಈ ಮಹಾಪ್ರಬಂಧವನ್ನು ಒಪ್ಪಿಸುತ್ತಿದ್ದೇನೆ.

ನನ್ನ ಈ ಮಹಾಪ್ರಬಂಧದ ರಚನೆಗೆ ಭಾಷಾವಿಜ್ಞಾನಿಗಳೂ, ತುಳು ನಿಘಂಟು ಯೋಜನೆಯ ಪ್ರಧಾನ ಸಂಪಾದಕರೂ, ನನ್ನ ಸಂಶೋಧನ ಮಾರ್ಗದರ್ಶಕರೂ ಆಗಿರುವ ಡಾ: ಯು.ಪಿ. ಉಪಾಧ್ಯಾಯರವರು ತಮ್ಮ ನಿರಂತರ ಮಾರ್ಗದರ್ಶನ, ಪ್ರೋತ್ಸಾಹ, ಸಕಾಲಿಕ ಸಲಹೆಗಳು ಹಾಗೂ ಸ್ನೇಹಪೂರ್ಣ ಮಾತುಗಳಿಂದ ನನಗೆ ನೆರವು ನೀಡಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ.

ನನ್ನಲ್ಲಿ ಸಾಹಿತ್ಯ ಸಂಶೋಧನ ವಿಷಯದಲ್ಲಿ ಆಸಕ್ತಿ ಹುಟ್ಟಿಸಿ, ಅಧ್ಯಯನಕ್ಕೆ ಈ ವಿಷಯವನ್ನು ಆಯ್ದುಕೊಳ್ಳುವಂತೆ ಸೂಚಿಸಿದವರು ಡಾ: ಶ್ರೀನಿವಾಸ ಹಾವನೂರರು. ಇದಕ್ಕೆ ಸಂಬಂಧಿಸಿದ ನನ್ನ ಪ್ರಾರಂಭಿಕ ಅಧ್ಯಯನದಲ್ಲಿ ನಾನು ಗಮನಿಸಬೇಕಾದ ಗ್ರಂಥಗಳನ್ನು, ಲೇಖನಗಳನ್ನು ಸೂಚಿಸಿದ್ದಲ್ಲದೆ ಅವರು ಮುದ್ರಾಮಂಜೂಷದ ಒಂದು ಹಸ್ತಪ್ರತಿಯನ್ನು ಒದಗಿಸಿಕೊಟ್ಟು ಉಪಕರಿಸಿದ್ದಾರೆ. ಇಂದಿಗೂ ಅವರು ತೋರಿಸುತ್ತಿರುವ ಅಧ್ಯಯನ ಸಂಬಂಧ ಕಾಳಜಿಯೇ ನನಗೆ ದಾರಿದೀಪವಾಗಿದೆ.

ಪ್ರೊ. ಕು.ಶಿ. ಹರಿದಾಸ ಭಟ್ಟರು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ಈ ಸಂಶೋಧನೆ ನಡೆಸಲು ಅನುವು ಮಾಡಿಕೊಟ್ಟಿದ್ದಾರೆ. ಕೇಂದ್ರದ ಈಗಿನ ನಿರ್ದೇಶಕ ಪ್ರೊ. ಎಚ್.ಕೃಷ್ಣಭಟ್ಟರು ಪ್ರೋತ್ಸಾಹವನ್ನು ನೀಡಿ ನನ್ನ ಅಧ್ಯಯನದ ಪ್ರಗತಿಯನ್ನು ವಿಚಾರಿಸುತ್ತಾ ಬಂದಿದ್ದಾರೆ. ಅಂತೆಯೇ ಇಲ್ಲಿಯ ಡಾ: ಶ್ರೀಮತಿ ಸುಶೀಲಾ ಉಪಾಧ್ಯಾಯ, ಡಾ: ಕೆ.ಪದ್ಮನಾಭ ಕೇಕುಣ್ಣಾಯ ಮೊದಲಾದವರು ನನಗೆ ಸಕಾಲಿಕ ಸಲಹೆ ನೀಡಿ ಉಪಕರಿಸಿದ್ದಾರೆ.

ಮುದ್ರಾಮಂಜೂಷದ ಕರ್ತೃವಿನ ವಂಶಸ್ಥರು ಬೆಂಗಳೂರಿನಲ್ಲಿ ವಾಸ್ತವ್ಯವಿದ್ದಾರೆಂದು ತಿಳಿದು, ಅಲ್ಲಿಗೆ ಹೋಗಿ ಭೇಟಿಯಾದಾಗ — ಶ್ರೀಮತಿ ಲಲಿತಮ್ಮನವರು ತುಂಬ ವಾತ್ಸಲ್ಯದಿಂದ ನೋಡಿಕೊಂಡಿದ್ದಾರೆ. ತಾವು ಹಿರಿಯರಿಂದ ಕೇಳಿ ತಿಳಿದಿದ್ದ ಸಂಗತಿಗಳನ್ನು ನೆನಪಿಸಿಕೊಂಡು ಹೇಳಿದ್ದಾರೆ. ನನ್ನ ಈ ಅಧ್ಯಯನದ ಬಗ್ಗೆ ಅಭಿಮಾನ ಪಟ್ಟಿದ್ದಾರೆ.

ಈ ಗ್ರಂಥದ ಹಸ್ತಪ್ರತಿಗಳನ್ನು ನೋಡಲು ಮೈಸೂರಿಗೆ ಹೋದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರು, ಅಲ್ಲಿಯ ಹಸ್ತಪ್ರತಿ ವಿಭಾಗದ ಅಧಿಕಾರಿಗಳು, ಸಹಾಯಕರು ಬಹಳ ತಾಳ್ಮೆಯಿಂದ ಹಸನ್ಮುಖಿಗಳಾಗಿ ಸಹಕರಿಸಿದ್ದಾರೆ.

......೨.

ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದ ರೇ: ಫಾ: ಜೆ. ಸ್ಟೀವನ್ಸನ್ ಅವರ ಬಗ್ಗೆ, ಇದರ ಮುದ್ರಿತ ಪ್ರತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಹೋದಾಗ ಬೆಂಗಳೂರಿನ ಯುನೈಟೆಡ್ ಥಿಯಾಲಜಿಕಲ್ ಕಾಲೇಜ್ (ಯು.ಟಿ.ಸಿ.) ನ ಫಾದರ್ ಎಂ.ಕೆ.ಕುರಿಯಾಕೋಸ್ ಮತ್ತು ಕುಮಾರಿ ಡೇವಿಡ್ ಅವರು ಅಲ್ಲಿಯ ಗ್ರಂಥಾಲಯದಲ್ಲಿ ನನಗೆ ಬೇಕಾಗಿದ್ದ ವಿಷಯಗಳನ್ನು ಸಂಗ್ರಹಿಸುವಲ್ಲಿ ನೆರವಿತ್ತಿದ್ದಾರೆ. ತುಮಕೂರಿನ ವೆಸ್ಲಿಯನ್ ಚರ್ಚಿಗೆ ಸಂಬಂಧಿಸಿದ ರೇ: ಎ. ತ್ಯಾಗರಾಜು ಅವರು, ಮಂಗಳೂರಿನ ಕರ್ನಾಟಕ ಥಿಯಾಲಜಿಕಲ್ ಕಾಲೇಜ (ಕೆ.ಟಿ.ಸಿ.) ನ ಪ್ರಿನ್ಸಿಪಾಲ್ ರೇ: ಫಾ: ಸಿ.ಎಲ್.ಫುರ್ತಾಡೋ ಮತ್ತು ಗ್ರಂಥಪಾಲ ರೇ. ನವೀನ ಅಲ್ಬುರ್ಕ್ಸ ಇವರು ಮಾಹಿತಿ ಹಾಗೂ ಮುದ್ರಿತ ಪುಸ್ತಕಗಳನ್ನು ಒದಗಿಸಿ ಕೊಟ್ಟಿದ್ದಾರೆ.

ಸುಬ್ರಹ್ಮಣ್ಯ ಮಠದ ಶ್ರೀಶ್ರೀ ವಿದ್ಯಾಭೂಷಣ ತೀರ್ಥ ಶ್ರೀಪಾದಂಗಳವರು ನನ್ನ ಅಧ್ಯಯನಕ್ಕೆ ಅವಶ್ಯಕವಾದ ಅನೇಕ ಗ್ರಂಥಗಳನ್ನು ಒದಗಿಸಿದ್ದಲ್ಲದೇ, ಪ್ರೀತಿಪೂರ್ವಕವಾಗಿ ಹರಸಿದ್ದಾರೆ.

ಉಡುಪಿಯ ಶ್ರೀ ಎಂ. ರಾಜಗೋಪಾಲಾಚಾರ್ಯ, ಬನ್ನಂಜೆ ಗೋವಿಂದಾಚಾರ್ಯ, ಮೈಸೂರಿನ ಡಾ: ಟಿ.ವಿ. ವೆಂಕಟಾಚಲಶಾಸ್ತ್ರಿ, ಡಾ: ಕೆ.ಅನಂತರಾಮು, ಶ್ರೀ ಎಚ್.ಎಂ.ಶಂಕರನಾರಾಯಣ ರಾವ್, ಮಂಗಳೂರಿನ ಡಾ: ಕೆ.ಸುಬ್ರಹ್ಮಣ್ಯಭಟ್, ಶಿಲ್ಪಶಾಸ್ತ್ರವಿಶಾರದ ಮುನಿಯಂಗಳ ಕೃಷ್ಣಭಟ್ ಮೊದಲಾದ ವಿದ್ವಾಂಸರನ್ನು ಸ್ವತಃ ಭೇಟಿಯಾದಾಗ ಅವರು ನನಗೆ ಯೋಚಿತವಾದ ಸಲಹೆ, ಸಹಕಾರವನ್ನು ನೀಡಿದ್ದಾರೆ. ಅದರಲ್ಲಿಯೂ ಶ್ರೀ ಎಂ.ರಾಜಗೋಪಾಲಾಚಾರ್ಯರು ಈ ಕೃತಿಯಲ್ಲಿಯ ಅಲಂಕಾರಗಳನ್ನು ಗುರುತಿಸಿ ಕೊಟ್ಟು ನೆರವಾಗಿದ್ದಾರೆ. ನನ್ನ ಪ್ರಿಯ ಸಹೋದ್ಯೋಗಿ ಬಂಧು ವಿದ್ವಾನ್ ಶ್ರೀ ಎನ್. ಕೇಶವಭಟ್ಟರು ಸಮಯಾಸಮಯವೆನ್ನದೆ ಕೇಳಿದ ನನ್ನ ಪ್ರಶ್ನೆಗಳಿಗೆ, ಸಂದೇಹಗಳಿಗೆಲ್ಲ ಉತ್ತರಿಸಿ ಬರವಣಿಗೆಯಲ್ಲಿಯ ನನ್ನ ತಪ್ಪುಗಳನ್ನು ತಿದ್ದಿ ಮಹದುಪಕಾರ ಮಾಡಿದ್ದಾರೆ.

ಆಕರಗ್ರಂಥ, ಸಂದರ್ಭಗ್ರಂಥಗಳನ್ನು ಹುಡುಕಿಕೊಂಡು ಹೋದಾಗ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯ, ಸಂಸ್ಕೃತ ಕಾಲೇಜಿನ ಗ್ರಂಥಾಲಯ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, (ಅರಮನೆ ಆವರಣ, ಮೈಸೂರು) ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಸಂಶೋಧನ ವಿಭಾಗ, ವೈದಿಕ ಸೊಸೈಟಿ, ಉಡುಪಿಯ ಗೋವಿಂದಪೈ ಸಂಶೋಧನ ಕೇಂದ್ರ, ಸುಬ್ರಹ್ಮಣ್ಯ ಮಠದ ಗ್ರಂಥಾಲಯ, ಸುಬ್ರಹ್ಮಣ್ಯದಲ್ಲಿಯ ಎರಡೂ ಕಾಲೇಜಿನ ಗ್ರಂಥಾಲಯಗಳು — ಹೀಗೆ ವಿವಿಧ ಗ್ರಂಥಾಲಯಗಳಿಂದ ನೆರವು ಪಡೆದಿದ್ದೇನೆ.

........3

ಇಂತಹ ಸಂಶೋಧನ ಕಾರ್ಯ ನಡೆಸುವಾಗ ಮಾಹಿತಿ ಒದಗಿಸಬಹುದಾದ ಎಲ್ಲರನ್ನು ಮುಖತಃ ಭೇಟಿಯಾಗುವುದು ಕಷ್ಟಸಾಧ್ಯವಾದುದರಿಂದ ಅನೇಕ ವಿದ್ವಾಂಸರನ್ನು, ಗ್ರಂಥಾಲಯಗಳನ್ನು ಪತ್ರ ಮೂಲಕ ಸಂಪರ್ಕಿಸಬೇಕಾಯಿತು. ಆಗ ಅವರು ಸಕಾಲದಲ್ಲಿ ಉತ್ತರ ಬರೆದು ನನ್ನ ಅಧ್ಯಯನದ ಉತ್ಸಾಹವನ್ನು ಹೆಚ್ಚಿಸಿದ್ದಾರೆ. ಈ ರೀತಿಯಲ್ಲಿ ತಂಜಾವೂರಿನ ಮಹಾರಾಜಾ ಸರ್ಫೋಜಿ ಸರಸ್ವತಿ ಮಹಲ್ ಲೈಬ್ರೆರಿಯವರು, ರಾಜಸ್ಥಾನದ ಮಹಾರಾಜಾ ಗಂಗಾಸಿಂಘಜೀ ಟ್ರಸ್ಟ್, ಲಾಲಘರ್ ಅರಮನೆ, ಬಿಕಾನೇರ್ ರಾಜಸ್ಥಾನ — ಇಲ್ಲಿಯ ಲೈಬ್ರರಿಯವರು, ರಾಜ್ಯಪತ್ರಾಗಾರ ಇಲಾಖೆಯ ಉಪನಿರ್ದೇಶಕರಾದ ಡಾ: ಶ್ರೀಮತಿ ಗಾಯತ್ರಿ ಜೆ.ವಿ. ಯವರು, ಬೆಂಗಳೂರು ವಿಶ್ವವಿದ್ಯಾನಿಲಯದ ಡಾ: ಹಂ.ಪ. ನಾಗರಾಜಯ್ಯ, ಶ್ರೀ ಎಸ್. ಶಿವಣ್ಣನವರು, ಮಣಿಪಾಲದ ಡಾ: ನ.ಕೃ.ತಿಂಗಳಾಯ, ಡಾ:ವಿದ್ಯಾಸರಸ್ವತಿ, ಶತಾವಧಾನಿ ಆರ್ ಗಣೇಶ್, ಕೆಳದಿಯ ಗುಂಡಾ ಜೋಯಿಸ, ಪಾಲ್ತಾಡಿ ರಾಮಕೃಷ್ಣಾಚಾರ್, ಬಿ.ಜನಾರ್ಧನ ಭಟ್, ಡಾ:ಎಚ್.ಜಿ.ಶ್ರೀಧರ ಮೊದಲಾದವರು ಒದಗಿಸಿದ ಮಾಹಿತಿಗಳನ್ನು ಯಥಾ ಸಂದರ್ಭ ಉಪಯೋಗಿಸಿ ಕೊಂಡಿದ್ದೇನೆ. ವಿವಿಧ ವಿದ್ವಾಂಸರುಗಳು ಪ್ರಕಟಿಸಿದ ಗ್ರಂಥಗಳಿಂದ, ಲೇಖನಗಳಿಂದ ನೆರವು ಪಡೆದಿದ್ದೇನೆ.

ಇನ್ನು, ನಾನು ಅಧ್ಯಾಪಕನಾಗಿ ದುಡಿಯುತ್ತಿರುವ ಸಂಸ್ಥೆ, ಶ್ರೀ ಸುಬ್ರಹ್ಮಣ್ಯೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು, ಸುಬ್ರಹ್ಮಣ್ಯ — ಇದರ ಆಡಳಿತ ವರ್ಗ, ಪ್ರಾಚಾರ್ಯ ಶ್ರೀ ಕೆ. ಮೋಹನಪ್ಪಗೌಡ, ಹಿರಿಯ ಕಿರಿಯ ಸಹೋದ್ಯೋಗಿ ಬಂಧುಗಳು ಇವರೆಲ್ಲ ನನ್ನ ನಿರೀಕ್ಷೆಗೂ ಮೀರಿ ಪ್ರೋತ್ಸಾಹವನ್ನಿತ್ತಿದ್ದಾರೆ. ಗೆಳೆಯ ಶ್ರೀ ಸದಾಶಿವಭಟ್ ಇವರು ನನ್ನ ಕಿರುಕುಳಗಳನ್ನೆಲ್ಲ ಸಹಿಸಿ ಅಂದವಾಗಿ ಈ ಮಹಾಪ್ರಬಂಧದ ಬೆರಳಚ್ಚು ಪ್ರತಿಯನ್ನು ತಯಾರಿಸಿ ಕೊಟ್ಟಿದ್ದಾರೆ.

ಇಷ್ಟಿದ್ದೂ ನನ್ನ ಇತಿಮಿತಿಯ ಅರಿವು ನನಗಿದೆ ಎಂದು ನಮ್ರನಾಗಿ ನೆನಪಿಸಿಕೊಳ್ಳುತ್ತ, ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದವರಿಗೆಲ್ಲ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ
ಎಂ.ಜಿ.ಎಂ. ಕಾಲೇಜ್, ಉಡುಪಿ.
ತಾ: 20.02.1995

(ಶಂಕರನಾರಾಯಣ ಉಡುಪ)

ಸಂಕ್ಷೇಪ ಸೂಚಿ

ಎ.ಕ.	ಎಪಿಗ್ರಾಫಿಯಾ ಕರ್ನಾಟಕ
ಕ.ಇ.ದ.	ಕರ್ನಾಟಕ ಇತಿಹಾಸ ದರ್ಶನ
ಕ.ಕ.ಚ.	ಕರ್ನಾಟಕ ಕವಿ ಚರಿತೆ
ಕ.ಕಾ. ಐ.ವಿ.	ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು
ಕ.ಕಾ.ಸ.ಚಿ.	ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು
ಕ.ಜ.ಜೀ.	ಕರ್ನಾಟಕ ಜನಜೀವನ
ಕ.ಶಾ.ಸಾಂ.ಅ.	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
ಕ.ಸ.ಪ.	ಕರ್ನಾಟಕದಲ್ಲಿ ಸತಿಪದ್ಧತಿ
ಕ.ಸಾ.ಪ.	ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ.
ನಾ.ಕ.ಕಾ.	ನಾಗವರ್ಮನ ಕರ್ನಾಟಕ ಕಾದಂಬರಿ
ಪು.ನಾ.ಚೂ.	ಪುರಾಣ ನಾಮ ಚೂಡಾಮಣಿ.
ಭಾ.ಕಾ.ಮೀ.	ಭಾರತೀಯ ಕಾವ್ಯ ಮೀಮಾಂಸೆ.
ಭಾ.ಸಾ.ಸ.	ಭಾರತೀಯ ಸಾಹಿತ್ಯ ಸಮೀಕ್ಷೆ.
ಶ್ರೀ ಮ.ವಂ.	ಶ್ರೀಮನ್ಮಹಾರಾಜರವರ ವಂಶಾವಳಿ.
ಸ.ಕ.ಸಾ.ಚ.	ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ

ಅನುಕ್ರಮಣಿಕೆ

ಅಧ್ಯಾಯ ಒಂದು

ಅಧ್ಯಾಯ ಒಂದು

ವಿಷಯ ಪ್ರವೇಶ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ ರಚಿತವಾದ ಕೆಂಪುನಾರಾಯಣನ 'ಮುದ್ರಾಮಂಜೂಷ'ವು ಒಂದು ಅಪೂರ್ವ ಗ್ರಂಥವಾಗಿದೆ. ಈ ರಾಜಕೀಯ ಕಾದಂಬರಿಯು ಒಂದು ವಿಶಿಷ್ಟ ಸ್ವತಂತ್ರ ಕೃತಿಯೂ ಹೌದು. ವಿಶಾಖದತ್ತನು ಸಂಸ್ಕೃತದಲ್ಲಿ 'ಮುದ್ರಾರಾಕ್ಷಸ'ವೆಂಬ ನಾಟಕವನ್ನು ಬಹು ಹಿಂದೆಯೇ ರಚಿಸಿದ್ದರೂ ಆ ನಾಟಕದೊಂದಿಗಿನ ಇದರ ಸಂಬಂಧವು ತೀರಾ ಸೀಮಿತವಾಗಿದೆ. ಇದು ರಚಿತವಾದ ಕಾಲದಲ್ಲಿ ವಿಶೇಷ ಪ್ರಚಾರದಲ್ಲಿದ್ದ ಅದ್ಭುತ ರಮಣೀಯ ಸಂಗತಿಗಳನ್ನು, ಅಲೌಕಿಕ — ಅಸಂಭಾವ್ಯ ಸಂಗತಿಗಳನ್ನು ತೋರದೆ, ಹೆಣ್ಣು — ಪ್ರಣಯ — ಶೃಂಗಾರ ಇವುಗಳನ್ನು ಹದವರಿತು ಪ್ರಯೋಗಿಸಿದ್ದುದು ಹಾಗೂ ಮಾನವ ಸ್ವಭಾವದ ಸೂಕ್ಷ್ಮಗಳನ್ನು ದಾಖಲಿಸಿದ್ದುದು ಇದರ ವೈಶಿಷ್ಟ್ಯವಾಗಿದೆ. ಕನ್ನಡವನ್ನು ಕಲಿಯುವ ದೃಷ್ಟಿಯಿಂದಲೂ, ರಾಜನೀತಿಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದಲೂ ವಿದೇಶೀಯರೂ ನಮ್ಮವರೂ ಹಲವಾರು ದಶಕಗಳಿಂದ 'ಓದುತ್ತಾ ಬಂದಿರುವುದು ಇದರ ಮೌಲಿಕತೆಗೆ ಸಾಕ್ಷಿಯಾಗಿದೆ.

ಇಷ್ಟಾದರೂ ಈ ಕೃತಿಯ ಬಗ್ಗೆ ಇಲ್ಲಿಯವರೆಗೆ ಸಮಗ್ರ ಅಧ್ಯಯನ ಆಗಿಲ್ಲ. ಸಿಕ್ಕಿದ್ದ ಮಾಹಿತಿಗಳು ಅಪೂರ್ಣವಾಗಿದ್ದುವು. ಹಾಗಾಗಿ ಅವುಗಳನ್ನೆಲ್ಲ ಸಂಗ್ರಹಿಸಿ, ವಿಶ್ಲೇಷಿಸಿ, ಇನ್ನಷ್ಟು ಆಧಾರಗಳ ಸಹಾಯದಿಂದ ಹೊಸ ಸಂಗತಿಗಳನ್ನು ಹೇಳುವ ಪ್ರಯತ್ನ ಇದಾಗಿದೆ.

ಈ ಕೃತಿಯನ್ನು ಶಾಲಿವಾಹನ ಶಕವರ್ಷ ೧೭೪೫ ಅಂದರೆ ಕ್ರಿ.ಶ. 1823ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರವರ ಆಶ್ರಿತನಾದ ಕೆಂಪುನಾರಾಯಣನು ರಚಿಸಿದನು. ಮತ್ತೆ ಐವತ್ತು ವರ್ಷಗಳ ಅನಂತರ ರೆವರೆಂಡ ಫಾದರ ಜೆ. ಸ್ಟೀವೆನ್ಸನ (J. STEPHENSON) ಎಂಬ ವೆಸ್ಲಿಯನ ಮಿಶನರಿಯು ಪ್ರಥಮವಾಗಿ ಮುದ್ರಿಸಿ (1873) ಹೊರತಂದನು. ಈ ಮುದ್ರಿತ ಪ್ರತಿಯ ಮುನ್ನುಡಿಯಲ್ಲಿ ಅವನು 'ಮುದ್ರಾರಾಕ್ಷಸ, ಮುದ್ರಾಮಂಜೂಷ, ಚಂದ್ರಗುಪ್ತ ಚಾಣಕ್ಯರ ಚರಿತ್ರೆ ಎಂಬ ಬೇರೆ ಬೇರೆ ಹೆಸರುಗಳುಳ್ಳ ಸಂಸ್ಕೃತ ನಾಟಕದ ಅನುವಾದವೇ ಈ ಗ್ರಂಥ.' ಎಂದಿದ್ದಾನೆ. ಆದರೆ 'ಮುದ್ರಾರಾಕ್ಷಸ' ಸಂಸ್ಕೃತ ನಾಟಕಕ್ಕೆ ಮುದ್ರಾಮಂಜೂಷವೆಂಬ ಹೆಸರಿಲ್ಲ. ಮುದ್ರಾಮಂಜೂಷವು ಮುದ್ರಾರಾಕ್ಷಸದ ಯಥಾವತ ಅನುವಾದವೂ ಅಲ್ಲ. ಹಾಗಾಗಿ ಮೇಲಿನ ಹೇಳಿಕೆಯು ಸತ್ಯದೂರವಾದುದಾಗಿದೆ.

ಕವಿಚರಿತೆಕಾರರಾದ ಆರ್ ನರಸಿಂಹಾಚಾರ್ಯರು — ' ಮುದ್ರಾಮಂಜೂಷ — ಇದು ಮುದ್ರಾರಾಕ್ಷಸವೆಂಬ ಸಂಸ್ಕೃತ ನಾಟಕಕ್ಕೆ ಗದ್ಯರೂಪವಾದ ಭಾಷಾಂತರವು'[1] ಎಂದಿದ್ದಾರೆ. ಆದರೆ ಮುದ್ರಾಮಂಜೂಷವು ಮುದ್ರಾರಾಕ್ಷಸದ ಭಾಷಾಂತರವಲ್ಲ. ಇವು ಒಂದೇ ವಸ್ತುವನ್ನೊಳಗೊಂಡ ಎರಡು ಭಿನ್ನ ಕೃತಿಗಳು. ಅವುಗಳ ರಚನೆಯ ಹಿಂದಿದ್ದ ಉದ್ದೇಶವೂ ಬೇರೆ ಬೇರೆ. ಕವಿಚರಿತೆಕಾರರು ರೇ·ಫಾ: ಸ್ಟೀವೆನ್ಸನ್ನರ ಮುನ್ನುಡಿಯನ್ನು ಆಧರಿಸಿ ಹೀಗೆ ಬರೆದಿರಬೇಕು. ಮತ್ತೆ ಅವರು — ' ಆರಂಭದಲ್ಲಿ ಚಾಮುಂಡಿಕಾ ಸ್ತುತಿ ಇದೆ' ಎಂದಿದ್ದಾರೆ. ಮುದ್ರಿತ ಪ್ರತಿಯ ಆರಂಭದಲ್ಲಿ ಚಾಮುಂಡಿಕಾ ಸ್ತುತಿ ಇಲ್ಲ. ಬದಲಾಗಿ —

ಮಹಃಪಾಯಾನ್ಮಹೀಶೂರ ಕೃಷ್ಣರಾಜೇಪ್ಸಿತಾರ್ಥದಂ ।
ಮಹಾಬಲಾದ್ರಿನಿಲಯಂ ಮಹೇಶಾರ್ಧಾಂಗರೂಪಿಣ: ॥

ಎಂಬ ಶ್ಲೋಕವು ಆರಂಭದಲ್ಲಿದೆ. ಇದು ಕವಿಯ ಆಶ್ರಯದಾತನಾದ ಮುಮ್ಮಡಿ ಕೃಷ್ಣರಾಜರ ಕುರಿತಾಗಿ ಇದೆಯೇ ಹೊರತು ಚಾಮುಂಡಿಕಾ ಸ್ತುತಿ ಅಲ್ಲ. ಕವಿಚರಿತೆಕಾರರು ನೋಡಿದ ಪ್ರತಿ ಇದಕ್ಕಿಂತ ಭಿನ್ನವಾಗಿದ್ದಿರಬಹುದೇ? ಎಂಬುದಕ್ಕೆ ಸರಿಯಾದ ಸಾಕ್ಷಿ ಸಿಗುವ ತನಕ ಉತ್ತರಿಸುವುದು ಕಷ್ಟದ ವಿಷಯವಾಗಿದೆ.

ವಾಗ್ಭೂಷಣ ಪತ್ರಿಕೆಯಲ್ಲಿ ಶ್ರೀ ಶೇಷ ಭೀ· ಪಾರಿಶವಾಡ; ಬೆಂಗಳೂರು ಇವರು ' ಮುದ್ರಾರಾಕ್ಷಸ — ಮುದ್ರಾಮಂಜೂಷಗಳ ಅಲ್ಪ ಪರಿಚಯ'[2] ಎಂಬ ಲೇಖನವನ್ನೂ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರು ' ಮುದ್ರಾರಾಕ್ಷಸ — ಮುದ್ರಾಮಂಜೂಷ'[3] ವೆಂಬ ಲೇಖನವನ್ನೂ ಪ್ರಕಟಿಸಿದ್ದಾರೆ. ಈ ಲೇಖನಗಳಲ್ಲಿ ಆ ಎರಡು ಕೃತಿಗಳ ಪರಸ್ಪರ ಸಂಬಂಧದ ಬಗ್ಗೆ ಚರ್ಚಿಸಿದ್ದರೂ ಎರಡೂ ಲೇಖನಗಳು ಮುದ್ರಾಮಂಜೂಷದ ಮುದ್ರಿತ ಪ್ರತಿಯನ್ನೇ ಆಧರಿಸಿ ಹೇಳಿದವುಗಳಾಗಿವೆ.

ದ·ಮಾ· ಮುತ್ತಣ್ಣನವರು ರೇ·ಫಾ: ಜೋನ ಸ್ಟೀವೆನ್ಸನ್ನರ ಬಗ್ಗೆ ಬರೆಯುತ್ತಾ — " ಇವನ ಗ್ರಂಥಗಳಲ್ಲಿ ' ಮುದ್ರಾಮಂಜೂಷ' ಸಂಸ್ಕೃತ ಕೃತಿಯ ಕನ್ನಡ ಭಾಷಾಂತರವು ಅತ್ಯುತ್ತಮವಾಗಿದೆ"[4] ಎಂದಿದ್ದಾರೆ. ಮುದ್ರಾಮಂಜೂಷವು ಸಂಸ್ಕೃತ ಕೃತಿಯಲ್ಲ. ಇದು ಕೆಂಪುನಾರಾಯಣನು ರಚಿಸಿದ ಕನ್ನಡ ಕೃತಿಯು. ರೇ·ಫಾ: ಸ್ಟೀವೆನ್ಸನ್ನರು ಅದನ್ನು ಪರಿಷ್ಕರಿಸಿ ಮುದ್ರಿಸುವ ಕೆಲಸವನ್ನಷ್ಟೇ ಮಾಡಿದ್ದಾರೆ. ಹಾಗಾಗಿ ಇದು ಕೂಡಾ ತಪ್ಪು ಮಾಹಿತಿಯೇ ಆಗಿದೆ.

ರಂ· ಶ್ರೀ ಮುಗಳಿಯವರು — ' ಇದು ಮುದ್ರಾರಾಕ್ಷಸವೆಂಬ ಸಂಸ್ಕೃತ ನಾಟಕಕ್ಕೆ ಗದ್ಯರೂಪವಾದ ಭಾಷಾಂತರವು ಎಂಬ ಹೇಳಿಕೆ ಯಥಾರ್ಥವಲ್ಲ'[5] ವೆಂದು ಸರಿಯಾಗಿಯೇ ಗುರುತಿಸಿದ್ದಾರೆ. ಆದರೆ ಈ ಕೃತಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವಾಗ ಅವರು ಮುದ್ರಿತ ಪ್ರತಿಯನ್ನೇ ಅವಲಂಬಿಸಿದ್ದಾರೆ.

ಹೊಸಗನ್ನಡ ಅರುಣೋದಯ ಕಾಲದ ಕೃತಿಗಳ ಬಗ್ಗೆ ಅಧ್ಯಯನ ಮಾಡಿದ್ದ ಶ್ರೀನಿವಾಸ ಹಾವನೂರರು ಪ್ರಥಮ ಬಾರಿಗೆ 'ಮುದ್ರಾಮಂಜೂಷ' ದ ಮುದ್ರಿತ ಪ್ರತಿಯ ನೈಜತೆಯ ಬಗ್ಗೆ ಸಂದೇಹ ಪಡುತ್ತಾ — "ಕೆಂಪುನಾರಾಯಣನ ಕೃತಿಯನ್ನು ಸಂಪಾದಕನಾದ ಜೆ. ಸ್ಟೀವೆನ್ಸನ್ನನು ಸಾಕಷ್ಟು ತಿದ್ದಿದ್ದಾನೆ. ಕೆಲವು ವಿಷಯಗಳನ್ನು ಬಿಟ್ಟಿದ್ದಾನೆ. ಇದರಿಂದಾಗಿ ಕೃತಿಯ ಮೌಲ್ಯಮಾಪನವು ಸಮರ್ಪಕವಾಗುವುದಿಲ್ಲ"[6] ವೆಂದಿದ್ದಾರೆ.

ಎಂ. ಮರಿಯಪ್ಪ ಭಟ್ಟರವರು — ಕೆಂಪುನಾರಾಯಣನು "ಮುದ್ರಾರಾಕ್ಷಸದೊಳಗಣ ವಸ್ತುವಿಗೆ ಒಂದು ಹೊಸ ರೂಪವನ್ನು ಕೊಟ್ಟು ಸ್ವಾರಸ್ಯವಾಗಿ ಬರೆದಿರುವನು"[7] ಎಂದಿದ್ದರೂ ಹೆಚ್ಚಿನ ವಿವರಣೆ ನೀಡಿಲ್ಲ.

ಕೆ. ವೆಂಕಟರಾಮಪ್ಪನವರು — "ನಂದರ ಮರಣಾನಂತರ ಅಮಾತ್ಯರಾಕ್ಷಸನು ಚಂದ್ರಗುಪ್ತನನ್ನು ಕೊಲ್ಲಲು ಹೂಡಿದ ತಂತ್ರಗಳ ಕಥೆ — ವಿಶಾಖದತ್ತನ 'ಮುದ್ರಾರಾಕ್ಷಸ' ವೆಂಬ ಸಂಸ್ಕೃತ ನಾಟಕದಲ್ಲಿ ಬಂದಿದೆ. ಅದನ್ನೇ ಇಲ್ಲಿ ಕೆಂಪುನಾರಾಯಣನು ಸ್ವಾರಸ್ಯವಾಗಿ ವಿಸ್ತರಿಸಿ ಬರೆದಿರುವನೆಂದು ತಿಳಿಯಬಹುದು"[8] ಎಂದಿದ್ದಾರೆ. ಆದರೆ ಇಲ್ಲಿ ಅಮಾತ್ಯರಾಕ್ಷಸನು ಚಂದ್ರಗುಪ್ತನನ್ನು ಕೊಲ್ಲಲು ಹೂಡಿದ ತಂತ್ರಗಳಿಗಿಂತ, ಕೃತಿಕಾರನು ಅವತರಣಿಕೆಯಲ್ಲಿ ಹೇಳಿಕೊಂಡಂತೆ — 'ಚಾಣಕ್ಯನು ತನಗೆ ಅವಮಾನವನ್ನು ಮಾಡಿದ ನವನಂದರನ್ನು ಕಪಟದಿಂದ ನಿಗ್ರಹಿಸಿ ಶರಣಾಗತನಾದ ಚಂದ್ರಗುಪ್ತನಿಗೆ ಆ ನಂದರಾಜ್ಯಾಧಿಪತ್ಯವನ್ನು ಉಂಟುಮಾಡಿದ್ದೇ ಪ್ರಮುಖ ಘಟನೆಯಾದ್ದರಿಂದ ಮೇಲಿನ ಹೇಳಿಕೆಯು ಉಚಿತವಾಗಿ ಕಾಣುವುದಿಲ್ಲ.

ತ.ಸು. ಶಾಮರಾಯರು ಕೆಂಪುನಾರಾಯಣನ ಬಗ್ಗೆ ಬರೆಯುತ್ತಾ — "ಈತನ ಮುದ್ರಾಮಂಜೂಷವು ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದ ಆಧಾರದ ಮೇಲೆ ರಚಿತವಾದುದು"[9] ಎಂದಿದ್ದಾರೆ. ಆದರೆ 'ಮುದ್ರಾರಾಕ್ಷಸ' ನಾಟಕದಲ್ಲಿಲ್ಲದ ವಿಸ್ತಾರವಾದ ಪೂರ್ವಕಥೆಯು ಇಲ್ಲಿದೆ. ಕಥನ ಸರಣಿಯಲ್ಲಿ ವ್ಯತ್ಯಾಸವಿದೆ. ಕೃತಿಗಳ ಉದ್ದೇಶವೂ ಭಿನ್ನಭಿನ್ನವಾಗಿದೆ. ಕೃತಿಕಾರನು ಈ ನಾಟಕದ ಹೆಸರನ್ನೇ ಪ್ರಸ್ತಾವಿಸಿಲ್ಲ.

ಎ.ಎಸ್. ಜಯರಾಮ ರವರು ಈ ಕೃತಿಯ ಮುದ್ರಣಕಾರರ ಮುನ್ನುಡಿಯನ್ನು ಪ್ರಸ್ತಾಪಿಸಿ "... ಆದ್ದರಿಂದ ಇದರ ಗುಣದೋಷಗಳಲ್ಲಿ ಸಂಪಾದಕರ ಪಾಲು ಎಷ್ಟೆಂಬುದನ್ನು ನಿರ್ಧರಿಸುವುದು ಸಮಸ್ಯೆಯಾಗಿದೆ"[10] ಎಂದೆನ್ನುತ್ತಾರೆ.

ಕ್ರಿ.ಶ. 1984ನೇ ಇಸವಿ ದಶಂಬರ ತಿಂಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಕನ್ನಡ ವಿಭಾಗವು ನಡೆಯಿಸಿದ ವಿಚಾರ ಸಂಕಿರಣದಲ್ಲಿ ಡಾ: ಶ್ರೀಕಂಠ ಕೂಡಿಗೆಯವರು ಮಂಡಿಸಿದ ಪ್ರಬಂಧದಲ್ಲಿ "... ಪೂರ್ವಕವಿಗಳ ರೀತಿಯಲ್ಲಿ ಹದಿನೆಂಟು 'ಅಶಯ' ಗಳ ಅಧ್ಯಾಯ ವಿಂಗಡಣೆ ಇದ್ದರೂ, ಅಷ್ಟಾದಶ

ವರ್ಣನೆಯ ಸಾಹಸ ಮಾಡಿಲ್ಲ. ಒಂದೆರಡು ಸಂದರ್ಭಗಳನ್ನು ಬಿಟ್ಟರೆ ಅನಾವಶ್ಯಕ ವರ್ಣನೆಗೆ ಕೈಹಾಕಿಲ್ಲ... "[11] ಎಂದು ಹೇಳಿದ ಈ ಮಾತು ಮುದ್ರಿತ ಪ್ರತಿಗಷ್ಟೇ ಸರಿಹೊಂದುವಂಥದ್ದಾಗಿದೆ. ಮೂಲ ಕೃತಿಯಲ್ಲಿ ಅಷ್ಟಾದಶ ವರ್ಣನೆಯು ಸಾಂಪ್ರದಾಯಿಕ ಶೈಲಿಯಲ್ಲಿದೆ. ಮುದ್ರಣದ ಸಂದರ್ಭದಲ್ಲಿ ಈ ವಿಚಾರವನ್ನು ಸಂಪಾದಕರು ಹೇಳಿಕೊಂಡಿದ್ದರೂ ಪ್ರಬಂಧಕಾರರು ಈ ಮಾತುಗಳನ್ನು ಗಮನಿಸಿದಂತೆ ಕಾಣುವುದಿಲ್ಲ.

ಆದರೆ ಅದೇ ವಿಚಾರ ಸಂಕಿರಣದ ಮತ್ತೊಂದು ಉಪನ್ಯಾಸದಲ್ಲಿ ಡಾ: ಬಿ. ದಾಮೋದರ ರಾವ ರವರು — " ಮುದ್ರಾಮಂಜೂಷದ ಲಾಕಿಕತೆ, ವಾಸ್ತವತೆಗಳಲ್ಲಿ ಕೃತಿ ಪ್ರಕಟವಾಗುವಾಗ ಅದರಲ್ಲಿ ಭಾರೀ ಬದಲಾವಣೆಗಳನ್ನು ಮಾಡಿದ ಪಾಶ್ಚಾತ್ಯ ಸಂಪಾದಕ ಜೆ. ಸ್ಟೀವೆನ್ಸನ್ನನ ಕೈವಾಡ ಎಷ್ಟು ಎಂಬುದು ಬಹುಶಃ ಸಾಹಿತ್ಯ ಸಂಶೋಧಕರು ನಿಷ್ಕರ್ಷಿಸಬೇಕಾದ ವಿಷಯವಾಗಿದೆ "[12] ಎಂದಿದ್ದಾರೆ. ಈ ಮಾತಿನಲ್ಲಿ ಸತ್ಯಾಂಶವಿದೆ. ಮುದ್ರಿತ ಪ್ರತಿಯಲ್ಲಿ ಆತ ಮಾಡಿಕೊಂಡ ಮಾರ್ಪಾಟುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡುವ ಅಗತ್ಯವಿದೆ.

ಈ ಎಲ್ಲಾ ವಿದ್ವಾಂಸರು ಮುದ್ರಾಮಂಜೂಷದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಕೇವಲ ಮುದ್ರಿತ ಪ್ರತಿಯನ್ನು ಅವಲಂಬಿಸಿಕೊಂಡಿದ್ದರೆ, ಈ ಕೃತಿಯ ಉಪಲಬ್ಧ ಹಸ್ತಪ್ರತಿಗಳನ್ನು ನೋಡಿದ್ದ ಎಚ್.ಎಂ. ಶಂಕರನಾರಾಯಣ ರಾವರವರು —

> 'ಓಲೆಯ ಪ್ರತಿಗೂ ಮುದ್ರಿತ ಗ್ರಂಥಕ್ಕೂ ಭಿನ್ನಪಾಠಗಳು ಹೇರಳವಾಗಿ ಕಂಡುಬರುತ್ತವೆ. ಇಲ್ಲಿ ಬರುವ ಕೆಲವು ಹೊಸ ಶಬ್ದಗಳೂ, ಅಪೂರ್ವ ಪ್ರಯೋಗಗಳೂ ಭಾಷಾ ಚರಿತ್ರೆಯ ದೃಷ್ಟಿಯಿಂದ ಅಭ್ಯಾಸ ಮಾಡಲು ಯೋಗ್ಯವಾಗಿವೆ. ...
> 'ಓಲೆಯ ಪ್ರತಿಯನ್ನು ಪರಿಶೀಲಿಸುವಾಗ ನನ್ನ ಗಮನ ಕಥೆಯ ಮೇಲಿತ್ತು; ಭಾಷೆಯ ಮೇಲಲ್ಲ. ಆನುಷಂಗಿಕವಾಗಿ ದೊರೆತ ವಿಷಯಗಳಲ್ಲಿ ಕೆಲವನ್ನು ಇಲ್ಲಿ ತಿಳಿಸಿದ್ದೇನೆ; ವಿವರಗಳಿಗೆ ಕೈಹಾಕಿಲ್ಲ ... ಮೇಲಿನ ವಿವರಣೆಯ ಮಥಿತಾರ್ಥ ಇಷ್ಟೇ. ಮುದ್ರಿತ ಮುದ್ರಾಮಂಜೂಷದಲ್ಲಿ ಸಂಪಾದಕರು ಕೈಯಾಡಿಸಿರುವುದರಿಂದ, ಈ ಗ್ರಂಥದ ಬೇರೊಂದು ಅಧಿಕೃತ ಮುದ್ರಣದ ಅವಶ್ಯಕತೆ ಇದೆ.... ನೀತಿವಾಕ್ಯಗಳ ಆಕರಗಳು ಇನ್ನೂ ಬೆಳಕು ಕಾಣಬೇಕಾಗಿವೆ... [13]

ಎಂದಿದ್ದಾರೆ.

ಈ ಎಲ್ಲಾ ಅಂಶಗಳನ್ನು ಗಮನಿಸಿ ಉಪಲಬ್ಧವಿದ್ದ ಹಸ್ತಪ್ರತಿಗಳ ಸಹಾಯದಿಂದ 'ಮುದ್ರಾಮಂಜೂಷ' ದ ಶುದ್ಧಪಾಠ ನಿರ್ಣಯವನ್ನು ಕೈಗೊಳ್ಳಲಾಯಿತು[14]. ಇದೀಗ ಮೂಲಕೃತಿಕಾರನ ಅನುವಂಶಸ್ಥರು ಇದೀಗ ಬೆಂಗಳೂರು ಮತ್ತು ಮೈಸೂರುಗಳಲ್ಲಿರುವುದು ತಿಳಿದುಬಂದಿದೆ. ಅವರನ್ನು ಸಂಪರ್ಕಿಸಿದಾಗ ಈ ಕೃತಿಯ ಪೂರ್ಣಪಾಠವಿರುವ ಹಸ್ತಪ್ರತಿಯೊಂದು ಲಭಿಸಿದ್ದು, ಅದರಲ್ಲಿಯ 'ಪಠ್ಯ' ವನ್ನೇ ಈ ಅಧ್ಯಯನಕ್ಕೆ ಆಧಾರವಾಗಿಟ್ಟುಕೊಳ್ಳಲಾಗಿದೆ.

ಈ ಸಂಪ್ರಬಂಧದ ಎರಡನೆಯ ಅಧ್ಯಾಯದಲ್ಲಿ ಕೃತಿ ರಚನೆಯ ಕಾಲದ ರಾಜಕೀಯ, ಸಾಮಾಜಿಕ ಹಿನ್ನೆಲೆಯನ್ನು ಗುರುತಿಸಲಾಗುವುದು. ಕನ್ನಡ ಗದ್ಯವು ಬೆಳೆದು ಬಂದ ಬಗೆಯನ್ನು ಗುರುತಿಸುತ್ತ ಸಮಕಾಲೀನ ಸಾಹಿತ್ಯಕ ಚಟುವಟಿಕೆಗಳನ್ನು ಗಮನಿಸಲಾಗುವುದು. ಈ ಕೃತಿಯ ಕವಿಯ ಹೆಸರು, ಆತನ ಹೆಸರಿನ ಹಿಂದಿನ 'ಕೆಂಪು' ವಿಶೇಷಣದ ಹಿನ್ನೆಲೆ, ಆತನ ಹುಟ್ಟೂರು — ಮನೆದೇವರು ಮತ್ತು ಆತನ ವಂಶವೃಕ್ಷದ ವಿವರಗಳನ್ನು ಕೊಡಲಾಗುವುದು. ಪ್ರಕೃತ 'ಮುದ್ರಾಮಂಜೂಷ' ವು ಆತನ 'ಏಕೈಕ ಉಪಲಬ್ಧ ಕಾವ್ಯಗ್ರಂಥ'. ಅದರ ವಿವಿಧ ಪ್ರತಿಗಳನ್ನು ಪರಿಚಯಿಸಿ, ಮುದ್ರಿತ ಪ್ರತಿಗಳಿಗಿಂತ ಅವು ಹೇಗೆ ಭಿನ್ನವಾಗಿವೆ ಎಂಬುದನ್ನು ಸಂಕ್ಷೇಪವಾಗಿ ತೋರಿಸಿಕೊಡಲಾಗುವುದು. ಅದರೊಂದಿಗೆ ಈ ಕೃತಿಯ ವಿವಿಧ ಪ್ರತಿಗಳ ಸಂಬಂಧದ ನಕ್ಷೆಯನ್ನು ಕೊಡಲಾಗುವುದು.

ಮೂರನೆಯ ಅಧ್ಯಾಯದಲ್ಲಿ 'ಚಂದ್ರಗುಪ್ತ ಚಾಣಕ್ಯರ ಕಥೆ' ಯ ಉಗಮ ಮತ್ತು ವಿಕಾಸವನ್ನು ಗುರುತಿಸಲಾಗುವುದು. ವಿವಿಧ ಪುರಾಣಗಳು, ಬೌದ್ಧ, ಜೈನ, ಗ್ರೀಕ ಪಾಠಾಂತರಗಳು, ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕ, ಈ ನಾಟಕದ ಪೂರ್ವಕಥೆಗಳು — ಮೊದಲಾದವುಗಳ ಪರಿಚಯವನ್ನು ಮಾಡಿಕೊಳ್ಳಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ ಈ ಕೃತಿಯ ಸಾಹಿತ್ಯಕ ಅಧ್ಯಯನವನ್ನು ಮಾಡಲಾಗುವುದು. ಕಥಾಸಾರ, ಶೀರ್ಷಿಕೆ — ಅದರ ಔಚಿತ್ಯ, ಇತರರ ಕಥೆಗಳೊಂದಿಗೆ ತೌಲನಿಕ ಅಧ್ಯಯನದ ಜತೆಗೆ ಕವಿಯು ಇಲ್ಲಿ ಪೂರ್ಣ ಸ್ವಂತಿಕೆಯಿಂದ ಸೇರಿಸಿಕೊಂಡ ಅಂಶಗಳನ್ನು ಪಟ್ಟಿ ಮಾಡಲಾಗುವುದು. ಪಾತ್ರಚಿತ್ರಣ, ಭಾಷಾಶೈಲಿ, ಅಲಂಕಾರಗಳು, ಅಷ್ಟಾದಶ ವರ್ಣನೆಗಳು, ರಸ ನಿರೂಪಣೆ, ಛಂದಸ್ಸು, ಮಹಾಕಾವ್ಯವಾಗಿ 'ಮುದ್ರಾಮಂಜೂಷ' ಈ ಎಲ್ಲಾ ಅಂಶಗಳನ್ನು ಹೇಗೆ ಅಳವಡಿಸಲಾಗಿದೆ ಎಂಬುದನ್ನು ಗುರುತಿಸಲಾಗುವುದು.

ಐದನೆಯ ಅಧ್ಯಾಯದಲ್ಲಿ ವಿವಿಧ ಶಾಸ್ತ್ರಗಳ-ಅರ್ಥಶಾಸ್ತ್ರ, ವೈದ್ಯಶಾಸ್ತ್ರ, ಜ್ಯೋತಿಶ್ಶಾಸ್ತ್ರ, ಶಾಲಿಹೋತ್ರ (ಪಶುವೈದ್ಯ ವಿಜ್ಞಾನ), ಶಿಲ್ಪಶಾಸ್ತ್ರಗಳ — ವಿವಿಧ ವಿಚಾರಗಳು ಈ ಕೃತಿಯಲ್ಲಿ ಹೇಗೆ
ವಿ ಸಮಯೋಚಿತವಾಗಿ ಮೂಡಿಬಂದಿವೆ ಎಂಬುದನ್ನು ಗಮನಿಸಲಾಗುವುದು.

ಆರನೆಯ ಅಧ್ಯಾಯದಲ್ಲಿ 'ಮುದ್ರಾಮಂಜೂಷ' ದ ಸಾಮಾಜಿಕ ಅಧ್ಯಯನ ಮಾಡಲಾಗುವುದು. ಅಂದರೆ ಇಲ್ಲಿನ ಸಮಕಾಲೀನ ನಂಬಿಕೆಗಳು, ಸಂಪ್ರದಾಯಗಳು, ಆಚರಣೆಗಳು, ಶಕುನಗಳು ಸಹಗಮನವೇ ಮೊದಲಾದ ಸಾಮಾಜಿಕ ಪದ್ಧತಿಗಳು, ತತ್ಕಾಲೀನ ಸಮಾಜಚಿತ್ರಣವು ಈ ಕೃತಿಯಲ್ಲಿ ವಿವರಿಸಲ್ಪಟ್ಟಿದ್ದನ್ನು ಅನ್ಯ ಸಾಕ್ಷ್ಯಗಳ ಆಧಾರದಿಂದ ಕಂಡುಕೊಳ್ಳಲಾಗುವುದು.

ಏಳನೆಯ ಅಧ್ಯಾಯದಲ್ಲಿ ಉತ್ತರ ಭಾರತದ ಪ್ರಮುಖ ಭಾಷೆಯಾದ ಹಿಂದಿಯಲ್ಲಿ ಚಂದ್ರಗುಪ್ತ ಸಾಹಿತ್ಯವು ಬೆಳೆದು ಬಂದ ಬಗೆಯನ್ನು ಗುರುತಿಸಲಾಗುವುದು. ಮತ್ತೆ ಔತ್ತರೇಯ ಹಾಗೂ ದಾಕ್ಷಿಣಾತ್ಯ ಪಾಠಗಳಲ್ಲಿಯ ಅಂತರವನ್ನು ಗುರುತಿಸಿ ಅದಕ್ಕೆ ಭೌಗೋಲಿಕ ಹಾಗೂ ಕೃತಿ ರಚನೆಯ ಕಾಲದ ಸನ್ನಿವೇಶಗಳೇ ಕಾರಣವಾಗಿವೆ ಎಂದು ~~ನಿರ್ಣಯಿಸಲಾಗಿದೆ~~ ಸಮರ್ಥಿಸಲಾಗುವುದು.

ಎಂಟನೆಯ ಅಧ್ಯಾಯದಲ್ಲಿ ಈಗಾಗಲೇ ವಿವಿಧ ಅಧ್ಯಾಯಗಳಲ್ಲಿ ಚರ್ಚಿಸಿದ ವಿಚಾರಗಳ ಸಾರಾಂಶವನ್ನು ಹೇಳಲಾಗುವುದು. ಅದರೊಂದಿಗೆ ಮುದ್ರಾಮಂಜೂಷವು ತದನಂತರದ ಕೃತಿಗಳಿಗೆ ಹೇಗೆ ಸ್ಫೂರ್ತಿ ನೀಡಿದೆ ಎಂಬುದನ್ನು ಗುರುತಿಸಲಾಗುವುದು.

ಇದಲ್ಲದೇ ಅನುಬಂಧಗಳಲ್ಲಿ ಕೃತಿಕಾರನ ವರ್ಣಚಿತ್ರದ ನೆರಳಚ್ಚು ಪ್ರತಿ, ಕವಿಯ ವಂಶಸ್ಥರು, ಅವರು ವಾಸಿಸಿದ್ದ ಮನೆ, ಹಸ್ತಪ್ರತಿಯ ಮಾದರಿ ನೆರಳಚ್ಚು ಪ್ರತಿ, ಕೃತಿಯಲ್ಲಿ ಬಂದಂತಹ ವ್ಯಕ್ತಿ, ನಗರ, ನದಿ ... ಮೊದಲಾದವುಗಳ ನಾಮಾವಳಿ, ಸೂಕ್ತಿಗಳು ಮತ್ತು ಗ್ರಂಥ ಋಣವನ್ನು ಕೊಡಲಾಗುವುದು.

●●●●●●

ಅಡಿ ಟಿಪ್ಪಣಿಗಳು

1. 'ಕರ್ಣಾಟಕ ಕವಿಚರಿತೆ — ೩'. ಪು 182.

2. 'ಮುದ್ರಾರಾಕ್ಷಸ — ಮುದ್ರಾಮಂಜೂಷಗಳ ಅಲ್ಪ ಪರಿಚಯ' (ಲೇ.) ವಾಗ್ಭೂಷಣ ಮಾಲೆ 1927. ಬೆಂಗಳೂರು. ಪು. 3 — 12.

3. 'ಮುದ್ರಾರಾಕ್ಷಸ — ಮುದ್ರಾಮಂಜೂಷ' (ಲೇ) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಅಕ್ಟೋಬರ 1932. ಬೆಂಗಳೂರು. ಪು. 182 — 204.

4. '೧೯ ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಪು. 464.

5. 'ಕನ್ನಡ ಸಾಹಿತ್ಯ ಚರಿತ್ರೆ' ಪು. 358.

6. 'ಹೊಸಗನ್ನಡದ ಅರುಣೋದಯ' ಪು. 532 (ಅಡಿಟಿಪ್ಪಣಿ)

7. 'ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ' ಪು. 30

8. 'ಕನ್ನಡ ಸಾಹಿತ್ಯ ಚರಿತ್ರೆ' ಪು. 243.

9. 'ಕನ್ನಡ ಸಾಹಿತ್ಯ ಚರಿತ್ರೆ: ಒಂದು ಸಮೀಕ್ಷೆ' ಪು. 216

10. 'ಹತ್ತೊಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ' ಪು 19

11. 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು' ಪು. 56

12. ಅದೇ ಪು. 88

13. 'ಕೆಂಪುನಾರಾಯಣ: ಕವಿ ಮತ್ತು ಕೃತಿ' ಪು. 14 — 15.

14. 'ಮುದ್ರಾಮಂಜೂಷ: ಹಸ್ತಪ್ರತಿಗಳ ಮತ್ತು ಮುದ್ರಿತ ಪ್ರತಿಗಳ ಪರಸ್ಪರ ಸಂಬಂಧ' (ಅಪ್ರಕಟಿತ ಸಂಪ್ರಬಂಧ). ಇದನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯದವರು ಈ ಲೇಖಕನಿಗೆ ಎಂ.ಫಿಲ. ಪದವಿಯನ್ನಿತ್ತಿದ್ದಾರೆ.

ಅಧ್ಯಾಯ ಎರಡು

ಕರ್ತೃ, ಕೃತಿ ಮತ್ತು ವಿವಿಧ ಪ್ರತಿಗಳು 8 — 45

ರಾಜಕೀಯ, ಸಾಮಾಜಿಕ ಹಿನ್ನೆಲೆ : ಪೀಠಿಕೆ, ರಾಜಕೀಯ ಆಳಿತ — ಒಡೆಯರ ರಾಜಧಾನಿಯಾಗಿ ಶ್ರೀರಂಗಪಟ್ಟಣ — ಮೈಸೂರು — ರಾಜಕುಮಾರರ ಶಿಕ್ಷಣ — ತತ್ಕಾಲೀನ ಬ್ರಾಹ್ಮಣ ಸಮಾಜ.

ಸಾಹಿತ್ಯಕ ಹಿನ್ನೆಲೆ : ಕನ್ನಡ ಗದ್ಯದ ವಿಕಾಸ — ಕನ್ನಡದಲ್ಲಿ ಗದ್ಯಕೃತಿಗಳು — ಮೈಸೂರು ಒಡೆಯರು ಮತ್ತು ಕನ್ನಡ ಗದ್ಯ ಸಾಹಿತ್ಯ — ಚಿಕ್ಕದೇವರಾಜ — ಕಳಲೆ ನಂಜರಾಜಯ್ಯ — ಹೈದರನಾಮೆ — ಮುಮ್ಮಡಿಯವರ ಆರಂಭಿಕ ಕೃತಿಗಳು — ಆಸ್ಥಾನದ ಕನ್ನಡ ಕವಿಗಳು — ಆಸ್ಥಾನದ ಹೊರಗೆ ಮಿಶನರಿಗಳಿಂದ, ಇತರ ಕನ್ನಡಿಗರಿಂದ ಕನ್ನಡದ ಕಾರ್ಯ.

ಕವಿ ವಿಚಾರ : ಹೆಸರು — ಕೆಲವು ವಿಶ್ಲೇಷಣದ ಹಿನ್ನೆಲೆ — ಹುಟ್ಟಿದೂರು — ಮನೆದೇವರು — ಹುಟ್ಟಿದ ವರ್ಷ — ಸಮಕಾಲೀನ ದಾಖಲೆಯಲ್ಲಿ ನಾರಣಶಾಸ್ತ್ರಿ — ವಂಶವೃಕ್ಷ — ಮಕ್ಕಳು — ಮೊಮ್ಮಕ್ಕಳು — ಅವರ ಸ್ಥಾನಮಾನ. ಸಂತತಿ ನಕ್ಷೆ.

ಗ್ರಂಥ ಕರ್ತೃತ್ವ : ಕೃತಿಯ ಕಾಲ — ವಿವಿಧ ಪ್ರತಿಗಳ ಪರಿಚಯ — 'ಓಲೆಗರಿ ಪ್ರತಿ — ಕಾಗದದ ಪ್ರತಿ ಕವಿಯ ವಂಶಸ್ಥರಲ್ಲಿ ದೊರೆತ ಹಸ್ತಪ್ರತಿ — ಅದರಲ್ಲಿಯ ಲಿಪಿಕಾರ ಪ್ರಶಸ್ತಿ — ಮುದ್ರಿತ ಪ್ರತಿಗಳು - ಅವುಗಳ ವಿಭಿನ್ನತೆ ಮತ್ತು ವಿಶೇಷತೆ — ಇತ್ತೀಚಿನ ಮುದ್ರಿತ ಪ್ರತಿ — ಮುದ್ರಿತ ಪ್ರತಿಕಾರರು ಮಾಡಿಕೊಂಡ ಬದಲಾವಣೆಗಳು — 'ಮುದ್ರಾಮಂಜೂಷ'ದ ಶುದ್ಧಪಾಠವನ್ನು ಮುದ್ರಿಸಿ ಪ್ರಕಟಿಸ ಬೇಕಾದ ಅವಶ್ಯಕತೆ — ಕೃತಿಯ ವಿವಿಧ ಪ್ರತಿಗಳ ಸಂಬಂಧದ ನಕ್ಷೆ.

ಅಧ್ಯಾಯ ಎರಡು

ಕರ್ತೃ ಕೃತಿ ಮತ್ತು ವಿವಿಧ ಪ್ರತಿಗಳು

ರಾಜಕೀಯ ಸಾಮಾಜಿಕ ಹಿನ್ನೆಲೆ: ಹದಿನೆಂಟನೆಯ ಶತಮಾನದ ಕೊನೆ ಹಾಗೂ ಹತ್ತೊಂಬತ್ತನೆಯ ಶತಮಾನದ ಆದಿಭಾಗಗಳು ಭಾರತದ ಅಂತೆಯೇ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ವಿಶೇಷ ತಿರುವುಗಳುಳ್ಳ ಕಾಲವಾಗಿದ್ದುವು. ಇಂಗ್ಲಿಷರು ತಮ್ಮ ಪ್ರಭಾವಲಯವನ್ನು ವಿಸ್ತರಿಸಿ 'ಸೂರ್ಯ ಮುಳುಗದ ಸಾಮ್ರಾಜ್ಯ' ವನ್ನು ಕಟ್ಟಲು ಹವಣಿಸುತ್ತಿದ್ದರು. ಅವರು ಒಡ್ಡುವ ಅಭೀಪ್ಸೆಗೆ ಬಲಿಯಾಗಿ ದೇಶೀಯ ಸಣ್ಣಪುಟ್ಟ ರಾಜ್ಯಗಳು ಬಲಹೀನವಾಗಿದ್ದುವು. ಮರಾಠ ಸಾಮ್ರಾಜ್ಯವು ಒಳಜಗಳದಿಂದ ತತ್ತರಿಸುತ್ತಿತ್ತು. ಕ್ರಿ.ಶ.1761 ರಲ್ಲಿ ಕೈತಪ್ಪಿದ್ದ ಮೈಸೂರು ರಾಜ್ಯದ ಆಡಳಿತ ಸೂತ್ರವು ಸುಮಾರು ಮೂವತ್ತೆಂಟು ವರ್ಷಗಳ ಅನಂತರ ಹಿಂದೆ ಅಧಿಕಾರಾರೂಢರಾಗಿದ್ದ ಯದು ವಂಶದ ರಾಜ ಸಂತತಿಯವರಿಗೆ ಪುನಃ ಲಭಿಸಿತ್ತು. ಆಗ ಮಹಾ ಮಾತೃಶ್ರೀ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಐದು ವರ್ಷದ ನಂಜರಾಜನೆಂಬ ಬಾಲಕನನ್ನು ದತ್ತು ತೆಗೆದು ಕೊಂಡು, ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಎಂದು ಹೆಸರಿಟ್ಟು ಮೈಸೂರಿನ ಹಳೆಯ ಕೋಟೆಯಲ್ಲಿ ಲಕ್ಷ್ಮೀರಮಣ ದೇವಾಲಯದ ಬಳಿ ಕಟ್ಟಿದ್ದ ಅಲಂಕೃತ ಮಂದಿರದಲ್ಲಿ ಕ್ರಿ.ಶ.1799ನೇ ಜೂನ 30ರಂದು ಪಟ್ಟಾಭಿಷೇಕ ಮಹೋತ್ಸವವನ್ನು ಜರಗಿಸಿದರು. ಶ್ರೀರಂಗಪಟ್ಟಣದ ದುರ್ಗವು ಕಂಪೆನಿಯ ವಶವಾದ್ದರಿಂದ ಒಡೆಯರ ರಾಜಧಾನಿಯು ಮೈಸೂರಿಗೆ ವರ್ಗಾಯಿಸಲ್ಪಟ್ಟಿತು.

ಸಿಂಹಾಸನವನ್ನು ಕಳೆದುಕೊಂಡ ಟಿಪ್ಪುಸುಲ್ತಾನನ ಸಂತತಿಯವರ ಅಸಮಾಧಾನ, ದೇಶದಲ್ಲಿಯ ಅಶಾಂತತೆಯ ವಿಷಮ ಸ್ಥಿತಿ, ಇಂತಹ ಸಮಯದಲ್ಲಿ ದಿವಾನ ಪೂರ್ಣಯ್ಯನವರು ಈ ರಾಜಮನೆತನದವರಿಗೆ ಬೆಂಬಲವಾಗಿ ನಿಂತು ಆಡಳಿತದಲ್ಲಿ ಸುವ್ಯವಸ್ಥೆಯನ್ನು ಜಾರಿಗೆ ತಂದರು. ಇವರು ಕ್ರಿ.ಶ. 1770ರಿಂದಲೇ ಹೈದರ ಅಲಿಯ ಖಜಾನೆಯಲ್ಲಿ ಗುಮಾಸ್ತೆಯ ಕೆಲಸವನ್ನು ಮಾಡಿಕೊಂಡಿದ್ದರು. ಅರಮನೆಯ ಖಜಾನೆಯಲ್ಲಿ ಶಿರಸ್ತೇದಾರ ಹುದ್ದೆಯಲ್ಲಿದ್ದ ಕೃಷ್ಣರಾಯರು ಮರಾಠಿ ಭಾಷೆಯಲ್ಲಿ ಲೆಕ್ಕಪತ್ರ ಇಡುತ್ತಿದ್ದರು. ಅವರ ಸರಿಸಮಾನ ಹುದ್ದೆಯಲ್ಲಿದ್ದ ಪೂರ್ಣಯ್ಯನವರು ಅದನ್ನು ಕನ್ನಡ ಭಾಷೆಯಲ್ಲಿಡುವಂತೆ 'ಏರ್ಪಾಡು ಮಾಡಿದರು. ಅಲ್ಲಿಂದೀಚೆಗೆ ಇವರಿಗೆ ಮಂತ್ರಿಗೆ ಸಲ್ಲಬೇಕಾದ ಸನ್ಮಾನಗಳು ನಡೆಯುತ್ತಿದ್ದುವಲ್ಲದೇ ಹೈದರ ಅಲಿಯ ದರ್ಬಾರಿ ನಲ್ಲಿ ಇವರು ಪ್ರಮುಖರಲ್ಲೊಬ್ಬರಾದರು.

ಕ್ರಿ.ಶ.1780ನೆಯ ಇಸವಿಯಲ್ಲಿ ಹೈದರಅಲಿಯು ಯುದ್ಧಕ್ಕೆ ಹೊರಟಾಗ ಪೂರ್ಣಯ್ಯ ನವರು ಸೈನ್ಯಕ್ಕೆ ಸರಬರಾಜು ಮಾಡುವ ವಿಷಯದಲ್ಲಿ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತ ಯುದ್ಧವು ಮುಗಿಯುವವರೆಗೂ ಸೈನ್ಯದ ಜತೆಯಲ್ಲೇ ಇದ್ದರು. ಮತ್ತೆ ಟಿಪ್ಪುವಿನ ಕಾಲದಲ್ಲಿ ಹಣಕಾಸು ಮಂತ್ರಿ ಯಾಗಿದ್ದ ಪೂರ್ಣಯ್ಯ, ಯುದ್ಧಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತಿದ್ದರು. ಬ್ರಿಟಿಷರೊಂದಿಗಿನ

ಯುದ್ಧದಲ್ಲಿ (ಕ್ರಿ.ಶ.1791) ಸೋತಾಗ ಒಪ್ಪಂದದ ಕರಡನ್ನು ತಯಾರಿಸಲು ಇವರು ಟಿಪ್ಪುವಿಗೆ ನೆರವಾಗಿದ್ದರು. ಹೀಗೆ ಇವರಿಗೆ ಅಪಾರ ಆಡಳಿತಾನುಭವವಿತ್ತು.

ಅಪ್ರಾಪ್ತ ವಯಸ್ಕರಾದ ಮುಮ್ಮಡಿಯವರು ಪಟ್ಟಾಭಿಷಿಕ್ತರಾದಾಗ ಇವರು ದಿವಾನರಾಗಿ ಅಧಿಕಾರ ಸೂತ್ರವನ್ನು ಕೈಗೆ ತೆಗೆದುಕೊಂಡರು. ಆ ಸಮಯದಲ್ಲಿ ಧೋಂಡಿಯಾ ವಾಘನ ದಂಗೆ (ಕ್ರಿ.ಶ.1799), ಬಲಮನ ರಾಜನ ದಂಗೆ (ಕ್ರಿ.ಶ.1800 – 1802), ವೈನಾಡು ದಂಗೆ (ಕ್ರಿ.ಶ.1802), ಮರಾಠ ಯುದ್ಧ (ಕ್ರಿ.ಶ. 1803), ಮುಂಚಿರದ ಬರಿಗಾಲ ಸೈನಿಕರ ದಮನ (ಕ್ರಿ.ಶ. 1804), ಚಿತ್ತೂರು ಪಾಳೆಯಗಾರರ ನಿಗ್ರಹ (ಕ್ರಿ.ಶ. 1805), ವೆಲ್ಲೂರು ಮುಸಲ್ಮಾನರ ದಂಗೆ (ಕ್ರಿ.ಶ. 1806), ಯುರೋಪಿಯ ಅಧಿಕಾರಿಗಳ ದಂಗೆ (ಕ್ರಿ.ಶ. 1809) – ಹೀಗೆ ಪ್ರತಿ ವರ್ಷ ಸಂಘರ್ಷಗಳನ್ನೆದುರಿಸಬೇಕಾಯಿತು. ರಾಜ ಮತ್ತು ಕಂಪೆನಿಯವರಿಗೆ ಕ್ರಿ.ಶ. 1801, 1803 ಮತ್ತು 1807 ರಲ್ಲಿ ಮೂರು ಪೂರಕ ಒಪ್ಪಂದಗಳಾದವು. ಹೊಸ ರಾಜ್ಯವು ಯಾವುದೇ ಸಾಲ ಅಥವಾ ಕಾದಿರಿಸುವಿಕೆಯಿಲ್ಲದೇ ಹೊಣೆ ಮಾತ್ರ ನಿಭಾಯಿಸಬೇಕಾಗಿತ್ತು. ಈ ಮಧ್ಯೆ ಎರಡು ಸಲ ಕ್ಷಾಮವನ್ನು ಎದುರಿಸಬೇಕಾಯಿತು. ಯುದ್ಧಗಳ ಹೊರೆಯನ್ನು ಹೊರಬೇಕಾಗಿತ್ತು. ಇಂತಹ ವಿಷಮ ಸ್ಥಿತಿಯಲ್ಲಿಯೂ ಪೂರ್ಣಯ್ಯನವರು ಹಾಳು ಗೆಡಹಲಾಗಿದ್ದ ನೀರಾವರಿ ಕಾಮಗಾರಿಗಳನ್ನು ಸರಿಪಡಿಸಿದರು [1]. ಕ್ರಿ.ಶ. 1804ನೆಯ ಇಸವಿಯಲ್ಲಿ ಶ್ರೀರಂಗಪಟ್ಟಣದ ಸಮೀಪ 'ವೆಲ್ಲೆಸ್ಲಿ ಸೇತುವೆ' ಯನ್ನು ಕಟ್ಟಿಸಿದರು [2]. ಇದೇ ವರ್ಷ ಹಿಂದೂ ಶಿಲ್ಪ ಶೈಲಿಗನುಗುಣವಾಗಿ ಕಟ್ಟಲಾದ ಮೈಸೂರು ಅರಮನೆಯ ಕಾಮಗಾರಿಯನ್ನು ಪೂರ್ಣಗೊಳಿಸಲಾಯಿತು [3]. ಆಡಳಿತದಲ್ಲಿ ಸ್ಥಿರತೆಯನ್ನು ತರಲಾಯಿತು. ನ್ಯಾಯಾಡಳಿತದಲ್ಲಿ ಪರಂಪರೆಯ ರೀತಿರಿವಾಜುಗಳಿಗೆ ಹಿಂದೂ ಧಾರ್ಮಿಕ ತತ್ವಗಳಿಗೆ ಮಾನ್ಯತೆಯನ್ನು ಕೊಟ್ಟರು [4].

ಚಿಕ್ಕದೇವರಾಜ ಒಡೆಯರ (ಕ್ರಿ.ಶ. 1672 – 1704) ಆಡಳಿತ ಕಾಲದಲ್ಲಿಯೇ ರಾಜ್ಯವನ್ನು ಹದಿನೆಂಟು ಭಾಗಗಳಾಗಿ ವಿಂಗಡಿಸಿ ಪ್ರತಿ ಜಿಲ್ಲೆಗೂ ಅಠಾರ ಕಛೇರಿಯನ್ನು ಸ್ಥಾಪಿಸಿದ್ದರು [5]. ಅಂತೆಯೇ ಪೂರ್ಣಯ್ಯನವರು ಆಡಳಿತದಲ್ಲಿ 1) ನಿರೂಪದ ಚಾವಡಿ 2) ಅಯಕಟ್ಟಿನ ಚಾವಡಿ (ಪಾರಸೈನ್ಯ ಲೆಕ್ಕ ಪತ್ರ – ಗಡಿಸೀಮೆ) 3) ಮೈಸೂರು ಹೋಬಳಿ ವಿಚಾರ 4) ಪಟ್ಟಣದ ಹೋಬಳಿ 5) ಸೀಮೆ ಕಂದಾಚಾರ (ಶಸ್ತ್ರಾಸ್ತ್ರ ಮದ್ದುಗುಂಡು) 6) ಬಾಗಿಲು ಕಂದಾಚಾರ 7) ಸುಂಕ 8) ಪೊಪ್ಪಿನ ಚಾವಡಿ (ಅಪ್ಪರ ನಿಷ್ಕೃಷ್ಟ ಶುಲ್ಕದಲ್ಲಿ ಸಂದಾಯ) 9) ತುಂಡೀಯ ಚಾವಡಿ (ಶ್ರೀರಂಗಪಟ್ಟಣದ್ದು ಮಾತ್ರ ಶುಲ್ಕ ಸಂಗ್ರಹ ಮಾಡುವ ಚಾವಡಿ) 10) ಪಟ್ಟಣದ ಹೋಬಳಿ – ಅಷ್ಟ ಗ್ರಾಮ ಚಾವಡಿ (ಚಿಕ್ಕದೇವರಾಜ ಸಾಗರ ಕಾಲುವೆ ನೀರು ಪೂರೈಕೆ) 11) ಮೈಸೂರು ಹೋಬಳಿ ಅಷ್ಟಗ್ರಾಮ ಚಾವಡಿ (ದೇವರಾಜ ಕಾಲುವೆ ನೀರು ಪೂರೈಕೆ) 12) ಬೆಣ್ಣೆಯ ಚಾವಡಿ (ಅಮೃತ ಮಹಲ್) 13) ಪಟ್ಟಣದ ಚಾವಡಿ (ರಾಜಧಾನಿಯ ಶಾಸನ ಸುವ್ಯವಸ್ಥೆ, ಸರಕಾರಿ ಕಟ್ಟಡಗಳ ಮೇಲ್ವಿಚಾರಣೆ) 14) ಬೇಹಿನ ಚಾವಡಿ (ಅಂಚೆ, ಗುಪ್ತಚಾರ ವ್ಯವಸ್ಥೆ, ಅಂಚೆ ಹರಿಕಾರ) 15) ಸಮ್ಮುಖದ ಚಾವಡಿ (ಒಡೆಯರ ಆಪ್ತ ಸಿಬ್ಬಂದಿ ವರ್ಗದ ವಿಚಾರ ನೋಡಿಕೊಳ್ಳುವುದು)

16) ದೇವಸ್ಥಾನದ ಚಾವಡಿ (ಧರ್ಮ ಸಂಸ್ಥೆಗಳ ಚಾವಡಿ) 17) ಕಬ್ಬಿಣದ ಚಾವಡಿ (ಉದ್ಯಮ ಇಲಾಖೆ, ಗಣಿ ಕೆಲಸ) 18) ಹೊಗೆಸೊಪ್ಪಿನ ಚಾವಡಿ (ಇದರ ಕ್ರಯ ವಿಕ್ರಯ) — ಹೀಗೆ ಹದಿನೆಂಟು ಕಛೇರಿಗಳು ಅರಮನೆಯ ಉಭಯ ಪಾರ್ಶ್ವಗಳಲ್ಲಿದ್ದುವು. ಮುಂಭಾಗದಲ್ಲಿ ನಾಬತಖಾನೆ ಚಾವಡಿಗಳಿದ್ದು ಪ್ರತಿಯೊಂದು ಚಾವಡಿಗೆ ಮುಖ್ಯಸ್ಥನಾಗಿ 'ಗೊತ್ತುಗಾರ', ಮೂವರು ದಫ್ತರದವರು, ಅಪಿಕಾರರು, ರಾಯಸದವರು ಮತ್ತು ಊಳಿಗದವರು ಇರುತ್ತಿದ್ದರು [6].

ಕ್ರಿ.ಶ. 1810ರಲ್ಲಿ ಮುಮ್ಮಡಿಯವರು ರಾಜ್ಯಭಾರ ಸೂತ್ರವನ್ನು ಸ್ವೀಕರಿಸಿದರು. ಮಹಾರಾಜರು ಪೂರ್ವ ನಿಬಂಧನೆಯ ಮೇರೆಗೂ ತಮ್ಮ ಬುದ್ಧಿ ಪ್ರೌಢಿಮೆಯ ಪ್ರಭಾವದಿಂದಲೂ ದೇಶದಲ್ಲಿ ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡುವುದಕ್ಕೋಸ್ಕರ ಸ್ಥಾಪಿಸಿದ 18 ಕಛೇರಿಗಳು ಇಂತಿವೆ:

1. ದಿವಾನ ಕಛೇರಿ	2. ಕಿಲ್ಲೆ ಕಛೇರಿ	3. ಕಟ್ಲೆ ಕಛೇರಿ
4. ಬಾರ್ಗೀರ ಕಛೇರಿ	5. ಸಂದಲ ಕಛೇರಿ	6. ಸವಾರ ಕಛೇರಿ
7. ತೋಷೆಖಾನೆ	8. ಕಮಿಟ ಕಛೇರಿ	9. ಫಿರ್ಯಾದು ಕಛೇರಿ
10. ಮೋದಿಖಾನೆ	11. ಕಂದಾಚಾರ ಕಛೇರಿ	12. ಬಾರ ಕಛೇರಿ
13. ಬಾರಿಗಾಟ (ಬಾಡಿಗಾರ್ಡ್) ಕಛೇರಿ	14. ದುಯ್ಯಂಬಾರ ಕಛೇರಿ	15. ಜಿನಸಿ ಕಛೇರಿ
16. ಅಂಚೆ ಅಮೃತಮಹಲ ಕಛೇರಿ	17. ಷಾಗಿರ್ದಪೇಶ ಕಛೇರಿ	18. ಜಿಲ್ಲೆ ಕಛೇರಿ [6ಎ]

ಕ್ರಿ.ಶ. 1811 ರಿಂದ 1814ರ ತನಕ ರಾಮರಾವ ಎಂಬವರು ಇವರಿಗೆ ದಿವಾನರಾಗಿದ್ದರು. ಮಹಾರಾಜರು ತಮ್ಮ ಕಾಲವನ್ನೆಲ್ಲ ಸಂಸ್ಕೃತಿ ಮತ್ತು ಸಾಹಿತ್ಯದ ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸುತ್ತಿದ್ದರು. ಇದೇ ಸಮಯವನ್ನು ಸಾಧಿಸಿ ದಿವಾನ ರಾಮರಾಯರು ಸ್ವಾರ್ಥಸಾಧನೆಯಲ್ಲಿ ತೊಡಗಿದರು [7]. ಹಾಗಾಗಿ ಮಹಾರಾಜರು ಕ್ರಿ.ಶ. 1814 — 1818ರ ವರೆಗಿನ ನಾಲ್ಕು ವರ್ಷಗಳ ಕಾಲ ದಿವಾನರುಗಳಿಲ್ಲದೇ ಸ್ವತಃ ಆಡಳಿತ ಮಾಡಿದರು. ಅತ್ತ ಮಹಾರಾಷ್ಟ್ರದಲ್ಲಿ ಕ್ರಿ.ಶ. 1818ರ ಸುಮಾರಿಗೆ ಪೇಶ್ವೆಯವರ ಆಡಳಿತ ಕೊನೆಗೊಂಡಿತು. ಅಲ್ಲಿಂದ ರಾಜಕೀಯ ಸಂತ್ರಸ್ತರು, ವಿದ್ವಾಂಸರುಗಳು ರಾಜಾಶ್ರಯವನ್ನು ಹುಡುಕಿಕೊಂಡು ಮೈಸೂರು ಕಡೆ ಬಂದರು [8]. ಅವರಿಗೆಲ್ಲ ಯೋಗ್ಯತಾನುಸಾರವಾಗಿ ಸ್ಥಾನಮಾನವನ್ನು ಕಲ್ಪಿಸಲಾಯಿತು. ಅನಂತರ ಸಿದ್ಧರಾಜ, ಬಾಬು ರಾವ, ಲಿಂಗರಾಜ, ವೆಂಕಟರಾಜರೇ ಮೊದಲಾದ ಎಂಟು ಜನ ದಿವಾನರಾದರು. ಇವರೆಲ್ಲ ಅಧಿಕಾರ ಸಾಮರ್ಥ್ಯವಿಲ್ಲದವರೂ, ಮೇಲ್ಪಟ್ಟದ ಲಂಚಕೋರರೂ ಆದ್ದರಿಂದ ದುರಾಡಳಿತ, ನಗರದ ದಂಗೆಯುಂಟಾಗಿ ಕ್ರಿ.ಶ. 1831ರಲ್ಲಿ ಬ್ರಿಟಿಷರು ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುವಂತಾಯಿತು

<u>ರಾಜಧಾನಿಯಾಗಿ ಮೈಸೂರು:</u> ಪೌರಾಣಿಕ ಹಿನ್ನೆಲೆ ಪ್ರಕಾರ ಚಂದ್ರವಂಶಕ್ಕೆ ಸೇರಿದ ಗೌತಮ ಗೋತ್ರದವರಿಂದ ಈ ರಾಜಮನೆತನವು ಆರಂಭವಾಯಿತು. [11]. ಯದು ವಂಶದವರು ದ್ವಾರಾವತಿಯಿಂದ ಮೈಸೂರಿಗೆ ಬಂದು ರಾಜ್ಯ ಸ್ಥಾಪನೆ ಮಾಡಿದರೆಂದು 'ಕಂಠೀರವನರಸರಾಜ ವಿಜಯ'ದ ವಂಶವಿಸ್ತಾರ ವರ್ಣನೆಯಲ್ಲಿ

ಹೇಳಿದೆ [12]. ಕೆಲವು ಯಾದವ ರಾಜರು ಕರ್ನಾಟಕಕ್ಕೆ ಬಂದ ವಿಚಾರವನ್ನು ಶಾಸನಗಳು[13] ಕೂಡಾ ಸಮರ್ಥಿಸುತ್ತವೆ. ವಿಜಯನಗರದ ರಾಜಪ್ರತಿನಿಧಿಯಾದ ತಿರುಮಲ ರಾಜನಿಂದ ಕ್ರಿ.ಶ. 1610ರಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಮತ್ತೆ ಕ್ರಿ.ಶ. 1799ರಲ್ಲಿ ಟಿಪ್ಪು ಮಡಿದು, ಶ್ರೀರಂಗ ಪಟ್ಟಣವು ಕಂಪನಿ ಸರಕಾರದ ವಶವಾದ ಮೇಲೆ ಪುನಃ ಮೈಸೂರು ಒಡೆಯರ ರಾಜಧಾನಿಯಾಯಿತು.

ಈಗಿನ ಮೈಸೂರು ನಗರದ ಸುತ್ತಲೂ ದೇವಲಾಪುರವೇ ಮೊದಲಾದ ಎಪ್ಪತ್ತು ಹಳ್ಳಿಗಳಿಂದ ಕೂಡಿದ್ದು ಬಹು ಹಿಂದಿನಿಂದಲೇ 'ಮೈಸೂರು ನಾಡು' ಎಂದು ಕರೆಯಲ್ಪಡುತ್ತಿದ್ದಿತು. ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಮುಖ್ಯವಾಗಿ ಈಗಿನ ಅಗ್ರಹಾರ, ಕೋಟೆ, ದೊಡ್ಡಪೇಟೆ ಸೇರಿ ಮೈಸೂರು ಎನ್ನಿಸಿಕೊಂಡಿತ್ತು. ಈಗಿನ ಮೈಸೂರು ನಗರದ ಮಧ್ಯದಲ್ಲಿರುವ ಸಯ್ಯಾಜಿ ರಾವ್ ರಸ್ತೆಯಿರುವಲ್ಲಿ ಮೊದಲ ಪೂರ್ಣಯ್ಯನವರ ನಾಲೆಯಿತ್ತು. ಅದು ಬಹಳ ದೊಡ್ಡದೂ ಆಳವೂ ಆಗಿತ್ತು. ಕೋಟೆಯ ಸುತ್ತಲೂ ಕಂದಕವಿದ್ದು ಅದರಲ್ಲಿ ನೀರನ್ನು ಬಿಡಲಾಗಿದ್ದಿತು. ದೊಡ್ಡ ಗಡಿಯಾರದಿಂದ ವೆಸ್ಲಿಯನ ಮಿಶನ ಮುದ್ರಣಾಲಯದ ಕಡೆಗೆ ಹೋಗುವ ರಸ್ತೆಯಲ್ಲಿ ದೀವಾನ ಪೂರ್ಣಯ್ಯನವರ ಮನೆಯಿದ್ದಿತ್ತು. ಆಗಿನ ಕಾಲದಲ್ಲಿ ಪಟ್ಟಣವು ವಾಸ್ತುಶಿಲ್ಪ ಶಾಸ್ತ್ರಕ್ಕನುಗುಣವಾಗಿ ರಚಿತವಾಗಿದ್ದು ಆಸ್ಥಾನಿಕರ ಮನೆಗಳು ಅವರವರ ಅಂತಸ್ತಿಗನುಗುಣವಾಗಿ ನಿಶ್ಚಿತಪಡಿಸಿದ ಸ್ಥಳಗಳಲ್ಲಿದ್ದವು [14].

<u>ರಾಜಕುಮಾರರ ಶಿಕ್ಷಣ:</u> ಕೇವಲ ಐದು ವರ್ಷ ಪ್ರಾಯದಲ್ಲೇ ಸಿಂಹಾಸನವನ್ನೇರಿದ ಮುಮ್ಮಡಿಯವರು ಪರಂಪರಾಗತ ರೀತಿಯಲ್ಲಿ ಶಿಕ್ಷಣವನ್ನು ಪಡೆದಿದ್ದರು. ಇಂತಹ ಪದ್ಧತಿಯಲ್ಲಿ ವ್ಯವಸ್ಥಿತವಾಗಿ ರಾಜ್ಯವಾಳಲು ಬೇಕಾದ ಶಿಕ್ಷಣವನ್ನು ಕ್ರಮವಾಗಿ ಕೊಡಲಾಗುತ್ತಿತ್ತು. ಪ್ರತಿ ಅರಮನೆಯಲ್ಲಿ ಇದಕ್ಕಾಗಿ ಮೀಸಲಿಟ್ಟ ಕೋಣೆಗಳಿರುತ್ತಿದ್ದವು. ಚಿತ್ರಶಾಲೆ, ಸಂಗೀತ ಸದನ, ಅಕ್ಷರಾಭ್ಯಾಸದ ಶಾಲೆ, ನೆಲಮಾಳಿಗೆಯ ಗರಡಿ ಮನೆಗಳು ಇತ್ಯಾದಿ. ವಿವಿಧ ವಿಷಯಗಳಲ್ಲಿ ಪರಿಣತರನ್ನೇ ರಾಜವಂಶದವರಿಗೆ ಶಿಕ್ಷಣ ಕೊಡಲು ನೇಮಿಸಲಾಗುತ್ತಿತ್ತು. ಸಂರಕ್ಷಣೆಯ ನೆಪದಲ್ಲಿ (ಗುಪ್ತ)ಚಾರರು ಸದಾ ಅರಸು ಕುಮಾರರನ್ನು ನೆರಳಿನಂತೆ ಹಿಂಬಾಲಿಸಿ, ಅವರು ದುಷ್ಟರ ಸಹವಾಸ, ಕೆಟ್ಟ ಚಟಗಳಿಗೆ ಬಲಿ ಬೀಳದಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದರು. ರಾಜಪುತ್ರನಿಗೆ ಐದು ಅಥವಾ ಎಂಟು ವರ್ಷ ತುಂಬಿತೆಂದರೆ ಅರಸನು ಮಂತ್ರಿಗಳೊಂದಿಗೆ ಸಮಾಲೋಚಿಸಿ, ರಾಜಪುರೋಹಿತರ ಸಲಹೆ ಪಡೆದು, ಶುಭಮುಹೂರ್ತದಲ್ಲಿ ಉಪನಯನ ಮಾಡಿ ವಿದ್ಯಾಭ್ಯಾಸವನ್ನು ಆರಂಭಿಸುತ್ತಿದ್ದನು. ಪ್ರಾಥಮಿಕ ಪಾಠಗಳು ಮುಗಿದ ಅನಂತರ ಪಂಡಿತರಿಂದ ವಿವಿಧ ತಾಳೆಗರಿ ಗ್ರಂಥಗಳ ಶಾಸ್ತ್ರಪರಿಚಯದ ಪಾಠಗಳಾಗುತ್ತಿದ್ದವು. ರತ್ನಖಚಿತ ಆಭರಣಗಳನ್ನು ತೊಟ್ಟು, ರತ್ನಗಂಬಳಿಯ ಮೇಲೆ ಆರೂಢನಾಗಿ, ವಂಶ ಪರಂಪರೆಯ ಚಿಹ್ನವಾದ ರುಮಾಲನ್ನೋ ಕುಲಾಯಿಯನ್ನೋ ಧರಿಸಿ, ರಾಜಕುಮಾರನು ಸತತವಾಗಿ ನಾಲ್ಕೈದು ತಾಸುಗಳ ಅಧ್ಯಯನ ಮಾಡಲೇ ಬೇಕಾಗುತ್ತಿತ್ತು [15].

ಕ್ಷಾತ್ರಧರ್ಮ ಪರಿಪಾಲಕನಿಗೆ ಯುದ್ಧಕಲೆಯಲ್ಲಿ ಪರಿಣತನನ್ನಾಗಿ ಮಾಡುವುದು ಶಿಕ್ಷಕನ ಆದ್ಯ

ಕರ್ತವ್ಯವಾಗಿತ್ತು. ದ್ವಂದ್ವ ಯುದ್ಧ, ಜೋಡಿ ಗದೆ ತಿರುಗಿಸುವಿಕೆ, ತನ್ನತ್ತ ತೂರಿದ ಆಯುಧಗಳಿಂದ ರಕ್ಷಿಸಿಕೊಳ್ಳುವ ಕಲೆ ಇತ್ಯಾದಿ ತಂತ್ರಗಳನ್ನು ಕಲಿಸಲಾಗುತ್ತಿತ್ತು. ಅರಸನಿಗೆ ಪ್ರಜೆಗಳೊಂದಿಗೆ ಸಂಪರ್ಕ ಅತಿ ಮುಖ್ಯವಾದುದರಿಂದ ಆತನ ಮಾತುಗಾರಿಕೆಯನ್ನು ತಿದ್ದಲು ವಿಶೇಷ ಎಚ್ಚರಿಕೆ ವಹಿಸಲಾಗುತ್ತಿತ್ತು. ಇತರರು ಹೇಳುವುದನ್ನು ಅರಸು ಕುಮಾರನು ತಾಳ್ಮೆಯಿಂದ ಕೇಳುವಂತೆ ಪ್ರೋತ್ಸಾಹಿಸಲಾಗುತ್ತಿತ್ತು. ತಾರುಣ್ಯದ ಹೊಸ್ತಿಲು ತಲುಪಿದ ರಾಜಕುಮಾರನಿಗೆ ಯುದ್ಧಶಾಸ್ತ್ರದ ನಿಕಟ ಪರಿಚಯ ಮಾಡಿಕೊಡಲಾಗುತ್ತಿತ್ತು. ಯುದ್ಧದ ಮಂತ್ರಾಲೋಚನೆ ರಹಸ್ಯವಾಗಿ ಕಿಟಕಿ — ಬಾಗಿಲುಗಳು ಇಲ್ಲದ ಕೋಣೆಯಲ್ಲಿ, ಪುನರುಚ್ಚರಿಸುವ ಗಿಳಿ–ಸಾರಿಕೆಗಳು ಇಲ್ಲದಲ್ಲಿ ನಡೆಯುತ್ತಿತ್ತು. ಕಾಲ್ದಳದ ಸ್ಥಾನಮಾನ, ಅಶ್ವಸೇನೆ, ಗಜ ಸೇನೆಗಳ ಕಾರ್ಯವಿಧಾನ — ಮುಂಗಡವಾಗಿ ನಿರ್ಣಯಿಸಬೇಕಾಗಿತ್ತು. ಭಾರವಾದ ತೋಪುಗಳನ್ನು ಸಾಗಿಸುವ ವಿಧಾನ, ಮದ್ದುಗುಂಡುಗಳ ಸುರಕ್ಷಿತತೆ — ಇವುಗಳ ಬಗೆಗೂ ತಿಳಿದುಕೊಳ್ಳಬೇಕಾಗಿತ್ತು. ಅರಮನೆಯ ಹೆಂಗಳೆಯರಿಂದ ತಿಲಕ ಹಚ್ಚಿಸಿಕೊಂಡು, ಆರತಿ ಎತ್ತಿಸಿಕೊಂಡು ಹಿರಿಯರಿಗೆ ನಮಸ್ಕರಿಸಿ, ಆಶೀರ್ವಾದ ಪಡೆದು ಆತ ದಂಡಯಾತ್ರೆಗೆ ಹೊರಡಬೇಕಿತ್ತು. ಸಕಲ ಚರಾಚರ ವಿಶ್ವದ ಪರಿಚಯ ರಾಜಕುಮಾರನಿಗೆ ಇರಬೇಕಾಗಿತ್ತು. ಆತನಿಗೆ ಬೇಟೆಯ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಕಾಡಿನ ಪ್ರಾಣಿಗಳ ಮತ್ತು ಸಸ್ಯಗಳ ಪರಿಚಯವನ್ನು ಮಾಡಿಕೊಡಲಾಗುತ್ತಿತ್ತು. ದೇಶ ಪರ್ಯಟನ ಭಾವೀ ಅರಸನ ಶಿಕ್ಷಣ ಕ್ರಮದಲ್ಲಿ ಸೇರಿರುತ್ತಿತ್ತು. ಯಾತ್ರೆ, ಪ್ರವಾಸಗಳಿಂದ ರಾಜಕುಮಾರನಿಗೆ ಜೀವನದ ಕಷ್ಟಕಾರ್ಪಣ್ಯಗಳ ನಿಕಟವಾದ ಪರಿಚಯವಾಗುತ್ತಿತ್ತಲ್ಲದೇ, ತಾನು ಗೆದ್ದು ವಿಸ್ತರಿಸಬೇಕಾದ ಪ್ರದೇಶಗಳ ಕಲ್ಪನೆಯೂ ಬರುತ್ತಿತ್ತು[16].

‘ಚಿಕ್ಕದೇವರಾಯ ವಂಶಾವಳಿ’ ಯಲ್ಲಿ ಹೇಳಿದ ಚಿಕ್ಕದೇವರಾಯರು (ಕ್ರಿ.ಶ.1672–1704) ಪಡೆದ ಶಿಕ್ಷಣದ ವಿವರಗಳು ಇದನ್ನು ಸಮರ್ಥಿಸುತ್ತವೆ: ಅವರಿಗೆ ಬೇರೆ ಬೇರೆ ವಿಷಯಗಳನ್ನು ಕಲಿಸಲು ಬೇರೆ ಬೇರೆ ಶಿಕ್ಷಕರಿದ್ದರು. ಕಾವ್ಯ ಶಿಕ್ಷಾಚಾರ್ಯರು ಅವರಿಗೆ ಉಚ್ಚಾರಣಾ ಕ್ರಮವನ್ನೂ, ‘ಓದುವುದನ್ನೂ ಕಲಿಸಿದರು. ಈ ಶಿಕ್ಷಣಕ್ಕೆ ಅಬ್ಗ್ರಹಣವೆಂದು ಕರೆದಿದ್ದಾರೆ. ಮತ್ತೊಬ್ಬ ಶಿಕ್ಷಕರು ‘ಪದವಾಕ್ಯ ಪ್ರಮಾಣ’ ಅಥವಾ ವ್ಯಾಕರಣವನ್ನು ಹೇಳಿಕೊಟ್ಟರು. ಮಾರನೆಯವರು ಅನೇಕ ವಿಷಯಗಳ ಜತೆಗೆ ಚರಿತ್ರೆ ಭೂಗೋಳಗಳನ್ನೊಳಗೊಂಡ ಪುರಾಣಗಳನ್ನು ಕಲಿಸಿದರು. ಚಿಕ್ಕ ದೇವರಾಯರು ವಾದ್ಯ ಸಂಗೀತವನ್ನು ಕಲಿತು ವೀಣಾವಾದನದಲ್ಲಿ ನಿಪುಣರಾದರು. ಕಡೆಗೆ ಗರಡಿ ಮನೆಯಲ್ಲಿ ಅಂಗಸಾಧನೆಯನ್ನು ಕಲಿತರು [17]. ಮುಮ್ಮಡಿಯವರಿಗೂ ಇದೇ ರೀತಿಯ ಶಿಕ್ಷಣ ದೊರೆತಿತ್ತು. ಮಹಾಮಾತೃಶ್ರೀಯವರು ದೊರೆಗಳವರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಆಲೋಚಿಸಿ, ಸಕಲ ಕಾರ್ಯಗಳಿಗೂ ಉಪಯುಕ್ತವಾದ ರಾಜನೀತಿ ಮುಂತಾದ ಶಾಸ್ತ್ರಗಳನ್ನೂ, ಕರ್ಣಾಟಕ, ಮಹಾರಾಷ್ಟ್ರ, ಫಾರ್ಸೀ ಮುಂತಾದ ಭಾಷೆಗಳನ್ನು, ಸಂಗೀತ ಸಾಹಿತ್ಯ ಗಣಿತ ವಿದ್ಯೆ ಧನುರ್ವಿದ್ಯೆಗಳು ಮತ್ತು ಶರೀರಕ್ಕೆ ಪುಷ್ಟಿಯನ್ನುಂಟುಮಾಡುವ ಗರಡಿಯ ಸಾಧಕ ಅಶ್ವವಿದ್ಯೆ ಮೊದಲಾದ ಉತ್ತಮ ವಿದ್ಯೆಗಳನ್ನೆಲ್ಲ ಅಭ್ಯಾಸ ಮಾಡಿಸುವರಾಗಿ ಎಂದು ವಂಶಕ್ರಮದಿಂದ ಆಪ್ತರಾಗಿ ಬಂದಿರುವ ಅಂಥಾ ವಿದ್ಯೆಯಲ್ಲಿ ಕುಶಲರಾದ ಜನರುಗಳನ್ನು ನೇಮಿಸಿ ಪ್ರಾರಂಭ ಮಾಡಿಸಿದರು.[17ಎ]

ಕಳೆದ ಶತಮಾನದ ಕೊನೆ ಭಾಗದಲ್ಲಿ ಮೈಸೂರಿನ ಅರಮನೆಯು ಅಗ್ನಿದುರಂತಕ್ಕೊಳಗಾಗಿ ಸುಟ್ಟುಹೋದುದರಿಂದ ಅಲ್ಲಿಯ ಕೆಲವು ದಾಖಲೆಗಳು ನಮಗಿಂದು ಸಿಗುತ್ತಿಲ್ಲ. ಆದ್ದರಿಂದ ಮುಮ್ಮಡಿಯವರ ವಿದ್ಯಾ ಗುರುಗಳಾರು? ವಿವಿಧ ವಿಭಾಗಗಳಲ್ಲಿ ಅವರಿಗೆ ಶಿಕ್ಷಣ — ಪ್ರಶಿಕ್ಷಣ ಕೊಟ್ಟವರ್ಯಾರು? ಎಂಬುದರ ಮಾಹಿತಿ ಸಿಗುತ್ತಿಲ್ಲ. ಆದರೆ ಮೇಲ್ಕಾಣಿಸಿದಂತಹ ಶಿಕ್ಷಣವನ್ನು ಪಡೆದವರಾದ್ದರಿಂದ ಅವರು ಸಂಪ್ರದಾಯನಿಷ್ಠ ಪ್ರಾಜ್ಞ ಪರಂಪರೆಯ ಪ್ರತಿನಿಧಿಯಾಗಿ ಉದಯಿಸಿದರು ಎಂಬುದಂತೂ ನಿಜ. ಈ ಮುನ್ನ ಟಿಪ್ಪುಸುಲ್ತಾನನ ಆಡಳಿತ ಕಾಲದಲ್ಲಿ ಪರ್ಶಿಯನ ಭಾಷೆಯನ್ನು ಬಲಾತ್ಕಾರವಾಗಿ ಹೇರಲಾಗಿದ್ದು, ಕನ್ನಡ ಭಾಷೆಯನ್ನು ಮೂಲೆಗೊತ್ತಲಾಗಿತ್ತು. ಅಂತಹ ಕನ್ನಡದ ಪುನಶ್ಚೇತನದ ಮಹತ್ಕಾರ್ಯವನ್ನು ಮುಮ್ಮಡಿಯವರು ಮಾಡಿದರು.

<u>ತತ್ಕಾಲೀನ ಬ್ರಾಹ್ಮಣ ಸಮಾಜ:</u> ಆಗಿನ ಕಾಲದಲ್ಲಿ ಬ್ರಾಹ್ಮಣರು ಜೀವನಕ್ಕಾಗಿ ಲೌಕಿಕ ವೃತ್ತಿಯನ್ನವಲಂಬಿಸುತ್ತಿದ್ದರೇ ಹೊರತು ಪ್ರಮಾದದಿಂದಲಾದರೂ ನಿತ್ಯಕರ್ಮಾನುಷ್ಠಾನವನ್ನು ಬಿಡುತ್ತಿರಲಿಲ್ಲ. ಅವರು ಉಪಾಸನೆ, ವೈಶ್ವದೇವಗಳನ್ನು ಮಾಡುತ್ತಾ ಆಚಾರಶೀಲರಾಗಿದ್ದರು. ದೇವತಾರ್ಚನೆ, ಋಷಿಪೂಜೆ, ಪ್ರಾಣಿಗಳಲ್ಲಿ ದಯೆಯಿಡುವಿಕೆ, ಪಿತೃಶ್ರಾದ್ಧಗಳು, ಅತಿಥಿ ಸತ್ಕಾರಗಳೆಂಬ ಪಂಚ ಯಜ್ಞಗಳನ್ನು ಅನೂಚಾನವಾಗಿ ನಡೆಯಿಸಿಕೊಂಡು ಬರುತ್ತಿದ್ದರು. ಪ್ರತಿದಿನವೂ ಉಷಃಕಾಲಕ್ಕೆ ಎದ್ದು ಸ್ನಾನ ಮಾಡಿ ನಿತ್ಯಕರ್ಮಗಳನ್ನು ನೆರವೇರಿಸಿಕೊಂಡು ಮತ್ತೆ ಲೋಕ ಹಿತ ಕಾರ್ಯಗಳನ್ನು ಮಾಡುತ್ತಿದ್ದರು. ಗಂಡು ಮಕ್ಕಳಿಗೆ ಎಂಟು ವರ್ಷಕ್ಕೆಲ್ಲ ಉಪನಯನ ಆಗುತ್ತಿದ್ದಿತು. ಅಷ್ಟರೊಳಗೆ ಅಮರ, ವ್ಯಾಕರಣ ಸೂತ್ರಗಳು, ಕಾವ್ಯ ಪಾಠಗಳನ್ನೆಲ್ಲ ಮುಗಿಸಿ ಪ್ರಾಜ್ಞ ಗ್ರಂಥಗಳನ್ನು ‘ಓದುವ ಯೋಗ್ಯತೆ ಸಂಪಾದಿಸುವವರಿದ್ದರು. ಆ ಕಾಲದಲ್ಲಿ ನಾಗರ, ದೇವನಾಗರ, ಗ್ರಂಥ, ತೆಲುಗು ಮತ್ತು ಕನ್ನಡ — ಈ ಐದೂ ಲಿಪಿಗಳ ಬರವಣಿಗೆ ಮತ್ತು ‘ಓದು — ಎರಡನ್ನೂ ಕಲಿಸುತ್ತಿದ್ದರು. ವಿದ್ಯಾರ್ಥಿಗಳು ತಾವು ‘ಓದುತ್ತಿದ್ದ ಪಾಠ ಪುಸ್ತಕಗಳಲ್ಲಿ ಒಂದೊಂದನ್ನು ಒಂದೊಂದು ಲಿಪಿಯಲ್ಲಿ ಬರೆದುಕೊಂಡು ‘ಓದುತ್ತಿದ್ದರು. ಆ ಕಾಲದಲ್ಲಿ ಪ್ರತ್ಯೇಕ ಪಾಠಶಾಲೆಗಳಿರುತ್ತಿದ್ದಿರಲಿಲ್ಲ. ದೊಡ್ಡದೊಡ್ಡ ಪಂಡಿತರ ಮನೆಗಳೇ ಪಾಠ ಶಾಲೆಗಳಾಗಿದ್ದವು.

<u>ಸಾಹಿತ್ಯಿಕ ಹಿನ್ನೆಲೆ:</u>

<u>ಕನ್ನಡ ಗದ್ಯದ ವಿಕಾಸ:</u> ಕನ್ನಡ ಭಾಷೆ ಅತ್ಯಂತ ಪ್ರಾಚೀನವಾದುದು. ಸಂಸ್ಕೃತ, ತಮಿಳುಗಳನ್ನು ಬಿಟ್ಟರೆ ನಮ್ಮ ದೇಶದಲ್ಲಿ ಕನ್ನಡವೇ ಅತ್ಯಂತ ಪ್ರಾಚೀನವಾದ ಹಾಗೂ ಸಮೃದ್ಧವಾದ ಸಾಹಿತ್ಯವನ್ನುಳ್ಳ ಭಾಷೆಯಾಗಿದೆ. ಇದರಲ್ಲಿ ಒಂದು ಸಾವಿರದೈನೂರು ವರ್ಷಗಳಿಗೂ ಮಿಕ್ಕಿದ ಸಾಹಿತ್ಯವಿದೆ. ಇದು ಗದ್ಯ, ಪದ್ಯ, ಚಂಪೂ ರೂಪದಲ್ಲಿ ಹರಿದುಬಂದಿದೆ.

ಸಂಸ್ಕೃತದಂತೆ ಹಳಗನ್ನಡದಲ್ಲೂ ಗದ್ಯಕೃತಿಗಳು ಕಡಿಮೆ. ಗದ್ಯವನ್ನು ಕುರಿತು ಹಿಂದೆ ನಡೆದ ಚರ್ಚೆಯೂ ತೀರ ಸ್ಥೂಲವಾಗಿದ್ದು ಬಾಹ್ಯ ಲಕ್ಷಣಗಳನ್ನು ಮಾತ್ರ ಗುರುತಿಸಿ ಗದ್ಯವನ್ನು ವಿವರಿಸುವ ಪ್ರಯತ್ನ ನಡೆದಿದೆ. ದಂಡಿಯು —‘ ಗದ್ಯ —‘ಓಜೋಗುಣದಿಂದ ಕೂಡಿರಬೇಕು. ಸಮಾಸಭೂಯಿಷ್ಠ

ವಾಗಿರಬೇಕು. ಪಾದಗಳ ನಿಯತತೆ ಇರಬಾರದು. ಕಥೆ ಮತ್ತು ಆಖ್ಯಾಯಿಕೆ — ಎಂದು ಗದ್ಯದಲ್ಲಿ ಎರಡು ವಿಧ. [18] ಎಂದು ಹೇಳುತ್ತಾನೆ. ಕವಿರಾಜಮಾರ್ಗಕಾರನು ಈ ಗುಣಗಳ ಜತೆಗೆ ಗದ್ಯವು —' ಅಲಂಕಾರಯುಕ್ತವಾಗಿರುತ್ತದೆ, ಕ್ರಿಯಾಕಾರಕದಿಂದ ಕೂಡಿರುತ್ತದೆ. ಅರ್ಥವ್ಯಕ್ತಿಯುಳ್ಳ ಪದಸಮುದಾಯವಾಗಿರುತ್ತದೆ' (೧-೨೭) ಎನ್ನುತ್ತಾನೆ[19].

ಕನ್ನಡ ಸಾಹಿತ್ಯದಲ್ಲಿ ಗದ್ಯ ಕೃತಿಗಳು ಬಹಳ ಕಡಿಮೆ. ನೃಪತುಂಗನಿಗಿಂತ ಹಿಂದೆ ಗದ್ಯಾಶ್ರಮ ಗುರುಪಟ್ಟವನ್ನೇರಿದ ವಿಮಲೋದಯಾದಿ ಕವಿಗಳಿದ್ದರೆಂದು ವಿದಿತವಾಗುವುದಾದರೂ ಅವರ ಗ್ರಂಥಗಳಾವುವೂ ದೊರೆತಿಲ್ಲ. ಈಗ ದೊರೆತಿರುವ ಗದ್ಯ ಗ್ರಂಥಗಳಲ್ಲಿ ಕ್ರಿ.ಶ. ಸುಮಾರು 900ರಲ್ಲಿ ಬರೆದಿರಬಹುದಾದ ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯೇ ಪ್ರಥಮ ಗ್ರಂಥ. ಇದಕ್ಕಿಂತ ಮೊದಲು ಗದ್ಯಶಾಸನಗಳಿದ್ದುವು. ಆ ತರುವಾಯ ಕ್ರಿ.ಶ. 978ರಲ್ಲಿ ಚಾವುಂಡರಾಯ, 1165ರಲ್ಲಿ ಹರಿಹರ ಇವರ ಗ್ರಂಥಗಳು ಕಂಡುಬರುತ್ತವೆ. ಇಲ್ಲಿಂದ ಸುಮಾರು ಹದಿನೇಳನೆಯ ಶತಮಾನದವರೆಗೂ ಗದ್ಯದಲ್ಲಿಯೇ ಬರೆದ ಕೃತಿಗಳಾವುವೂ ಗೋಚರವಾಗುವುದಿಲ್ಲ [20]. ಮತ್ತೆ ಕನ್ನಡ ಗದ್ಯ ಗ್ರಂಥಗಳು ರಚಿತವಾದದ್ದು ಮೈಸೂರು ಒಡೆಯರ ಕಾಲದಲ್ಲಿಯೇ.

ಮೈಸೂರು ಒಡೆಯರು ಮತ್ತು ಕನ್ನಡ ಗದ್ಯ ಸಾಹಿತ್ಯ:[21] ಈಗಾಗಲೇ ತಿಳಿಸಿದಂತೆ ಸುಮಾರು ಒಂದೂವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಅದು ವಿಶೇಷವಾಗಿ ರಾಜಾಶ್ರಯದಲ್ಲಿಯೇ ಬೆಳೆದು ಬಂದುದು ಕಂಡುಬರುತ್ತದೆ. ಗಂಗರು, ಚಾಳುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಕವಿಗಳಿಗೆ ಆಶ್ರಯವಿತ್ತು ಪ್ರೋತ್ಸಾಹಿಸಿದಂತೆ ಸುಮಾರು ಐದೂವರೆ ಶತಮಾನ ಕಾಲ ಹಳೆಯ ಮೈಸೂರು ಪ್ರಾಂತವನ್ನಾಳಿದ ಮೈಸೂರ ಒಡೆಯರೂ ಕನ್ನಡದ ಸಾಹಿತ್ಯಕ, ಸಾಂಸ್ಕೃತಿಕ ಪರಂಪರೆಯನ್ನು ವರ್ಣರಂಜಿತವಾಗಿಯೇ ಮುನ್ನಡೆಸಿದರು. ಈ ಕಾಲದಲ್ಲಿ ಸನಾತನ ವೈದಿಕ ಧರ್ಮವು ಪ್ರಬಲಿಸಿತು. ಸಂಸ್ಕೃತ ವ್ಯಾಸಂಗವು ಬಲಗೊಂಡಿತು. ಪುರಾಣೇತಿಹಾಸಗಳ ಕಥೆ, ನೀತಿ ಹಾಗೂ ಸಂದೇಶಗಳನ್ನು ತಿಳಿಯುವ, ತಿಳಿಸುವ ಕುತೂಹಲ ಬೆಳೆಯಿತು. ವಿದ್ವಾಂಸರುಗಳನ್ನಲ್ಲದೆ ಜನಸಾಮಾನ್ಯರನ್ನೂ ಲಕ್ಷ್ಯದಲ್ಲಿಟ್ಟುಕೊಂಡುದರಿಂದ ಸಾಂಪ್ರದಾಯಿಕ ಪದ್ಯಕಾವ್ಯಗಳ ಜೊತೆಗೆ ಗದ್ಯಕಾವ್ಯಗಳೂ, ಟೀಕೆ — ವ್ಯಾಖ್ಯಾನಗಳೂ ಹುಟ್ಟಿಕೊಂಡವು. ರಾಜಾಶ್ರಿತರಾದ ಪಂಡಿತ ಕವಿಗಳು ತಮ್ಮ ಒಡೆಯರ ಸಾಹಸಮಯ ಹಾಗೂ ವೈಭವೋಪೇತ ಜೀವನ ವೃತ್ತಾಂತಗಳನ್ನು, ರಾಜ ಪ್ರಶಂಸೆಯ ಪ್ರಶಸ್ತಿ ಕಾವ್ಯಗಳನ್ನು ರಚಿಸಿದರು.

ಈಗ ತಿಳಿದಿರುವಂತೆ, ಮೈಸೂರರಸರ ಸಾಹಿತ್ಯೇತಿಹಾಸದ ಕಥೆಯು ರಾಜ ಒಡೆಯ (ಕ್ರಿ.ಶ. 1578–1617) ರಲ್ಲಿ ಪ್ರಧಾನಿಯಾಗಿದ್ದನೆಂದು ಭಾವಿಸಿರುವ ಶ್ರೀವೈಷ್ಣವ ಕವಿ ಪ್ರಧಾನಿ ತಿರುಮಲಾರ್ಯ (ಕ್ರಿ.ಶ. ಸು.1600) ನಿಂದ ಆರಂಭವಾಯಿತು. ಆದರೆ ಹದಿನೇಳನೆಯ ಶತಮಾನದ ಅಡುಮಾತಿನ ಕನ್ನಡ ಗದ್ಯದ ಮಾದರಿ ಹಾಗೂ ಮಜಲುಗಳನ್ನು ತೋರಿಸತಕ್ಕ ಕೃತಿಗಳಾಗಿ ' ವಾಲ್ಮೀಕಿ ರಾಮಾಯಣ ಟೀಕೆ' (ರಾಮರಾಜೋಕ್ತಿ ವಿಲಾಸ) ಮತ್ತು ಸ್ಕಾಂದ ಪುರಾಣದಲ್ಲಿಯ ' ಬ್ರಹ್ಮೋತ್ತರ ಖಂಡ ಟೀಕೆ'

(ಮಣಿ ಪ್ರಕಾಶ ವದನ) ಎಂಬ ಎರಡು ಗದ್ಯ ಗ್ರಂಥಗಳು ಇಮ್ಮಡಿ ಚಾಮರಾಜ ಒಡೆಯರ (ಕ್ರಿ.ಶ. 1617–37) ರವರ ಅಂಕಿತದಲ್ಲಿವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಜನಪ್ರಿಯವಾದ ಪುರಾಣೇತಿಹಾಸಗಳನ್ನು ಜನ ಸಾಮಾನ್ಯಕ್ಕೆ ಪರಿಚಯಿಸಲು ಗದ್ಯರೂಪದಲ್ಲಿ ನಿರೂಪಿಸುವ ಪದ್ಧತಿಗೆ ಇವು ಪ್ರೇರಣೆ ನೀಡಿದವೆಂದು ಹೇಳಬಹುದು.

ಮತ್ತೆ, ಗಮನೀಯವಾಗಿ ಸಾಹಿತ್ಯ ಚಟುವಟಿಕೆ ಕಾಣಿಸಿಕೊಂಡುದು ಚಿಕ್ಕದೇವರಾಜ ಒಡೆಯರ (ಕ್ರಿ.ಶ. 1672 – 1704)ರ ಕಾಲದಲ್ಲಿ. ಈತನು ಸ್ವತಃ ಅನೇಕ ಸಂಸ್ಕೃತ, ಕನ್ನಡ ಕೃತಿಗಳನ್ನು ರಚಿಸಿದ್ದು 'ಚಿಕದೇವರಾಜ ಬಿನ್ನಪ' ವು ಮುಖ್ಯವಾಗಿ ಒಂದು ಗದ್ಯರಚನೆಯಾಗಿದೆ. ತಿರುಮಲಾರ್ಯ, ಸಿಂಗರಾರ್ಯ ಚಿಕುಪಾಧ್ಯಾಯ, ಚಿದಾನಂದ ಕವಿ – ಹೀಗೆ ಹಲವರು ಚಿಕ್ಕದೇವರಾಯರ ಆಶ್ರಿತರಾಗಿದ್ದು ಕೃತಿರಚನೆ ಮಾಡಿದರು. ಅವರಲ್ಲಿ ಪ್ರಸಿದ್ಧನಾದ ತಿರುಮಲಾರ್ಯ (ಕ್ರಿ.ಶ. 1645 – 1706) ನು ಚಿಕ್ಕದೇವರಾಜರ ಸಹಪಾಠಿಯಾಗಿ, ಮಿತ್ರನಾಗಿ ಬೆಳೆದು, ಆಸ್ಥಾನ ಪಂಡಿತನೂ, ಮಂತ್ರಿಯೂ ಆಗಿ ಬೆಳಗಿದವನು. ಪ್ರಭುವಿನ ಜೀವನ ಸಾಧನೆಗಳನ್ನು ಕುರಿತಹಾಗೆ ಆತ ರಚಿಸಿದ 'ಚಿಕದೇವರಾಯ ವಂಶಾವಳಿ' ಯು ಗದ್ಯ ಗ್ರಂಥವಾಗಿದ್ದು ಅಸಮಗ್ರವಾಗಿ ದೊರೆತಿದೆ.

ಚಿಕ್ಕದೇವರಾಜರಲ್ಲಿ ಕರಣಿಕಾಗ್ರೇಸರನೂ ಮಂತ್ರಿಯೂ ಆಸ್ಥಾನ ಪಂಡಿತನೂ ಆಗಿದ್ದ ಚಿಕ್ಕುಪಾಧ್ಯಾಯ (ಕ್ರಿ.ಶ. 1672) ನು ಗದ್ಯದಲ್ಲಿ ಕೆಲವು ಸ್ಥಳ ಮಹಾತ್ಮೆಗಳನ್ನೂ, ಟೀಕು ಗ್ರಂಥಗಳನ್ನೂ ಬರೆದಿದ್ದಾನೆ. ಅದೇ ಕಾಲದಲ್ಲಿದ್ದ ಅಳಿಯ ಸಿಂಗರಾರ್ಯ (ಸು. 1680) ನು ಶ್ರೀಹರ್ಷನ 'ರತ್ನಾವಳೀ' ನಾಟಿಕೆಯ ಭಾಷಾಂತರ ಹಾಗೂ ರೂಪಾಂತರವನ್ನು ಮಾಡಿದ್ದಾನೆ. ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಲಾದ ಮೊದಲ ನಾಟಕವಿದು.

ಇಮ್ಮಡಿ ಕಂಠೀರವ ನರಸರಾಜ ಒಡೆಯರ (ಕ್ರಿ.ಶ. 1704 – 14) ರವರ ಕಾಲದಲ್ಲಿ ಕಡತದಲ್ಲಿ ಬರೆದಿಡಲಾದ ಅಜ್ಞಾತಕರ್ತೃವಿನ 'ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ' ಎಂಬ ಗದ್ಯ ಕೃತಿಯು ಆಡುಮಾತಿನ ಶೈಲಿಯಲ್ಲಿದೆ. ಇದು ಈ ಬಗೆಯ ಇತಿಹಾಸದ ಬರವಣಿಗೆಯ ದಾಖಲೆಗಳಲ್ಲಿ ತೀರ ಹಳೆಯದು.

ಒಂದನೆಯ ಕೃಷ್ಣರಾಜ (ಕ್ರಿ.ಶ. 1713 – 31)ರ ಕಾಲದಲ್ಲಿ ವೀರರಾಜನೆಂಬವನು 'ಸಕಲ ವೈದ್ಯ ಸಂಹಿತಾ ಸಾರಾರ್ಣವ' (ವೀರರಾಜೇಂದ್ರೋಕ್ತಿ ವಿಲಾಸ) ವೆಂಬ ವೈದ್ಯ ಗ್ರಂಥವನ್ನು ಗದ್ಯದಲ್ಲಿ ಬರೆದಿದ್ದು ಇದರ ಪ್ರಸ್ತಾವನೆಯಲ್ಲಿ ಮೈಸೂರಿನ ಐತಿಹಾಸಿಕ ವಿಚಾರಗಳಿವೆ. ದಳವಾಯಿ ಕಳಲೆ ವೀರರಾಜಯ್ಯನ ಮನೆವೆಗ್ಗಡೆಯೂ ಆತನ ಆಶ್ರಿತನೂ ಆದ ಚೆನ್ನಯ್ಯನೆಂಬವನು (ಕ್ರಿ.ಶ. 1720) ಹೊಯ್ಸಳ ಕರ್ನಾಟಕ ಬ್ರಾಹ್ಮಣ ಪಂಗಡದವನು. ಈತ ವೀರರಾಜನ ಸೂಚನೆಯಂತೆ ಭಗವದ್ಗೀತೆಗೆ ಟೀಕೆಯೊಂದನ್ನು ಬರೆದಿದ್ದಾನೆ. ಇದು ಅಸಮಗ್ರವಾಗಿ ದೊರೆತಿದ್ದರೂ ಹೊಸಗನ್ನಡ ಗದ್ಯಶೈಲಿಯ ಒಂದು ಒಳ್ಳೆಯ ಮಾದರಿ ಇದರಲ್ಲಿದೆ. ಶ್ರೀ ವೈಷ್ಣವ ವಿದ್ವಾಂಸನಾದ ಶ್ರೀನಿವಾಸನೆಂಬವನು ಮೂವತ್ತು ಅಧ್ಯಾಯಗಳ 'ತುಲಾಕಾವೇರಿ ಮಾಹಾತ್ಮ್ಯ' ಟೀಕೆ (ಚೆಲುವಾಂಬಿಕಾ ವಾಣೀ ವಿಲಾಸ) ಯೆಂಬ ಗದ್ಯ ಕೃತಿಯನ್ನು ರಚಿಸಿ ರಾಣಿ ಚೆಲುವಾಂಬೆ (ಕ್ರಿ.ಶ.ಸು. 1725) ಯ ಹೆಸರಿನಲ್ಲಿ ಪ್ರಸಿದ್ಧ ಪಡಿಸಿದ್ದನು.

ಮೈಸೂರರಸು ದೊಡ್ಡ ಕೃಷ್ಣರಾಜನ ದತ್ತಪುತ್ರ ಇಮ್ಮಡಿ ಕೃಷ್ಣರಾಜ (ಕ್ರಿ.ಶ. 1734 – 66) ನ ದಳವಾಯಿ ಕಳಲೆ ನಂಜರಾಜಯ್ಯ (ಕರಾಚೂರಿ ನಂಜರಾಜಯ್ಯ) ನು ಬಹು ಸಂಖ್ಯೆಯ ಗದ್ಯ ಕೃತಿಗಳನ್ನು ರಚಿಸಿದ್ದನು. ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡದ್ದರಿಂದ 'ಎಲರು ಅರಿವಂತೆ' ಇವುಗಳನ್ನು 'ಅಚ್ಚಗನ್ನಡ'ದಲ್ಲಿ ಬರೆದುದಾಗಿ ಆತ ಹೇಳಿಕೊಂಡಿದ್ದಾನೆ. ಈತನ ಕೃತಿಗಳಲ್ಲಿ 'ಮಹಾಭಾರತ ತಾತ್ಪರ್ಯ ಟೀಕು' (ನಂಜರಾಜ ವಾಣೀವಿಲಾಸ) ಮಹಾಭಾರತದ ಗದ್ಯ ಗ್ರಂಥವಾಗಿದ್ದು ಅಸಮಗ್ರವಾಗಿ ದೊರೆತಿದೆ.

ಹೈದರ ಅಲಿ ಖಾನನಲ್ಲಿ ಮಂತ್ರಿಯಾಗಿದ್ದಂತೆ ತಿಳಿಯುವ ಪ್ರಧಾನ ವೆಂಕಪ್ಪಯ್ಯ ಅಥವಾ ವೆಂಕಾಮಾತ್ಯನೆಂಬ ಬ್ರಾಹ್ಮಣ ಕವಿಯು (ಕ್ರಿ.ಶ.ಸು. 1770) ಕನ್ನಡದಲ್ಲಿ ಹಲವು ಕೃತಿಗಳನ್ನು ರಚಿಸಿದ್ದಾನೆ. ಈ ಕೃತಿಗಳಿನ್ನೂ ಪ್ರಕಟವಾಗಿಲ್ಲವಾದ ಕಾರಣ ಹೆಚ್ಚಿನ ವಿವರ ಲಭ್ಯವಿಲ್ಲ. ಶಾನುಭೋಗ ವೆಂಕಟರಮಣಯ್ಯ (ಕ್ರಿ.ಶ. ಸು 1790) ನು ಮೈಸೂರು ಅರಸರ ಚರಿತ್ರೆಗೆ ಸಂಬಂಧಿಸಿದ ಹಾಗೆ, ಹೈದರ ಅಲಿಯ ಕಾಲದಲ್ಲಿದ್ದ ಖಾಸಾ ಚಾಮರಾಜ ಒಡೆಯರ ಕಾಲ(ಕ್ರಿ.ಶ. 1776–96) ದ ವರೆಗೆ ರಾಜಮನೆತನದ ಚರಿತ್ರೆಯನ್ನು 'ಮೈಸೂರು ರಾಜರ ಚರಿತ್ರೆ' ಎಂಬ ಹೆಸರಿನಿಂದ ನಿರೂಪಿಸಿದ್ದಾನೆ. ಇದು ಗದ್ಯರೂಪವಾದ ಕೃತಿ. ~~(ಹೈದರನಾಮೆ~~)

ಹೈದರ ಅಲಿಯ ಅಂತರಂಗಕ್ಕೆ ಸೇರಿದವನಾದ ನಲ್ಲಪ್ಪನೆಂಬವನು ಕ್ರಿ.ಶ. 1884ರಲ್ಲಿ 'ಹೈದರನಾಮೆ'ಯನ್ನು[21ಎ] ಬರೆದಿದ್ದಾನೆ. ಡಾ. ಫ್ರಾನ್ಸಿಸ ಬುಕಾನಿನ, ಕರ್ನಲ ಮೆಕೆಂಜಿ, ಕರ್ನಲ ಮಾರ್ಕ್ವಿಲ್ಕ್ಸ, ಲೂಯಿ ರೈಸ ಮೊದಲಾದವರು ಬರೆದ ಮೈಸೂರಿನ ಇತಿಹಾಸಕ್ಕೆ ಸಂಬಂಧಿಸಿದ ಕೃತಿಗಳಲ್ಲಿ ಈ ಬಖೈರಿನ ಪ್ರಸ್ತಾಪವಿಲ್ಲ. ಮೊತ್ತಮೊದಲು ಕ್ರಿ.ಶ. 1930ರಲ್ಲಿ ಡಾ. ಎಂ. ಎಚ್. ಕೃಷ್ಣರವರು ಈ ಕೃತಿಯ ಸಾರಾಂಶವನ್ನು ಇಂಗ್ಲಿಷಿನಲ್ಲಿ ಕೊಟ್ಟರು. ಇದರಲ್ಲಿ 'ಹೈದರಅಲಿಯ ವರ್ಷದಿಂದ ವರ್ಷಕ್ಕೆ ಉತ್ಕರ್ಷದೊಂದಿಗೆ ಆರಂಭವಾಗಿ ಆತನ ಮರಣದವರೆಗಿನ ಘಟನೆಗಳಿವೆ. ಇವುಗಳನ್ನು ಹೇಳುವಲ್ಲಿ ಆತ ಸಾಕಷ್ಟು ಸ್ವಾತಂತ್ರ್ಯ ವಹಿಸಿದ್ದಾನೆ. ಕೆಲವು ಹೊಸ ಮಾಹಿತಿಗಳಿವೆ. ಹೈದರನ ವೃತ್ತಾಂತಗಳು – ಆತನ ವಿರೋಧಿಗಳ ಅಥವಾ ಸ್ವಂತದ ಮುಸ್ಲಿಮ ಕಾರ್ಯದರ್ಶಿಗಳ ಹೇಳಿಕೆಗಳಲ್ಲಷ್ಟೇ ಸಿಗುವಾಗ ಈ ವಿವರಗಳು ಮಹತ್ವಪೂರ್ಣದ್ದಾಗಿವೆ'.[21ಬ] ಎಂದಿದ್ದಾರೆ. ಇದು ಕನ್ನಡದಲ್ಲಿ ಕ್ರಿ.ಶ.1971 ರಲ್ಲಿ ಪ್ರಥಮವಾಗಿ ಗ್ರಂಥರೂಪವಾಗಿ ಪ್ರಕಟವಾಯಿತು. ಇದರ ಭಾಷೆಯಲ್ಲಿ ಫಾರಸಿ ಶಬ್ದಗಳು ಅಧಿಕವಿದ್ದರೂ ಸಮಕಾಲೀನ ವಿಷಯಗಳ ದೃಷ್ಟಿಯಿಂದ ಇದೊಂದು ಅಪೂರ್ವ ಕೃತಿಯಾಗಿದೆ.

ಇವಿಷ್ಟು ಹದಿನೆಂಟನೆಯ ಶತಮಾನದ ಕೊನೆಯ ವರೆಗಿನ ಕನ್ನಡ ಗದ್ಯ ಸಾಹಿತ್ಯದ ಪಕ್ಷಿನೋಟ ವಾದರೆ ಇನ್ನು ನಾವು ಹತ್ತೊಂಬತ್ತನೆಯ ಶತಮಾನಕ್ಕೆ ಕಾಲಿಡುತ್ತೇವೆ. ಈ ಕಾಲದ ಸಾಹಿತ್ಯ ರಚನೆ, ಪೋಷಣೆಗಳಿಗೆ ಹಿರಿ ಸ್ಥಾನದಲ್ಲಿ ಗೋಚರಿಸುವವರು ಮುಮ್ಮಡಿ ಕೃಷ್ಣರಾಜ ಒಡೆಯರ (ಕ್ರಿ.ಶ. 1794–1868) ರವರು.

ಮುಮ್ಮಡಿಯವರ ಆರಂಭಿಕ ಕೃತಿಗಳು: ಮುಮ್ಮಡಿಯವರು ಕ್ರಿ.ಶ. 1799 ರಿಂದ 1868ರವರೆಗೆ ದೀರ್ಘಕಾಲದ ಆಳಿತದಲ್ಲಿ ಸ್ವತ: ಅನೇಕ ಕೃತಿಗಳನ್ನು ರಚಿಸಿದ್ದಾರೆ. ಆದರೆ ಕೆಂಪುನಾರಾಯಣನ 'ಮುದ್ರಾಮಂಜೂಷ'ವು ಕ್ರಿ.ಶ. 1823ರಲ್ಲಿ ರಚಿತವಾಗಿದ್ದು ಅದರ ಸಮಕಾಲೀನವಾದ ಕೃತಿಗಳ ಬಗ್ಗೆ ಚರ್ಚಿಸುವುದು ನಮ್ಮ ಉದ್ದೇಶವಾದುದರಿಂದ ಮುಮ್ಮಡಿಯವರ ಆರಂಭಿಕ ಕೃತಿಗಳ ಕಡೆಗಷ್ಟೇ ಇಲ್ಲಿ ಗಮನ ಹರಿಸಲಾಗುವುದು.

ಮುಮ್ಮಡಿಯವರು ಕ್ರಿ.ಶ. 1815ರಲ್ಲಿ ಮಾರ್ಕಂಡೇಯ ಪುರಾಣೋಕ್ತವಾದ 'ದೇವೀ ಮಹಾತ್ಮ್ಯ'ವನ್ನು ಕನ್ನಡ ವ್ಯಾಖ್ಯಾನ ಸಹಿತ ಬರೆದಿದ್ದರು. ರಚನಾ ವರ್ಷವು ದೊರೆತಿರುವ ಮುಮ್ಮಡಿಯವರ ಕೃತಿಗಳಲ್ಲಿ ಇದುವೇ ಪ್ರಾಚೀನವಾದುದೆಂದು ಶ್ರೀನಿವಾಸ ಹಾವನೂರರು ಗುರುತಿಸಿದ್ದಾರೆ [22]. ಜೈಮಿನಿ ಭಾರತ ಅಶ್ವಮೇಧಿಕ ಪರ್ವ ಟೀಕೆಯನ್ನು, ಹರಿಶ್ಚಂದ್ರೋಪಾಖ್ಯಾನವನ್ನು ಮತ್ತು ಶುಕಸಪ್ತತಿಯನ್ನು ಕ್ರಿ.ಶ. 1820ರಲ್ಲಿ ಬರೆದು ಮುಗಿಸಿದ್ದರು.

ಮುಮ್ಮಡಿಯವರಿಗೆ ಅತಿ ಪ್ರಿಯವಾಗಿ ಬಹು ಜನ ರಂಜನಾರ್ಥವಾಗಿ ರಚಿಸಿದ 'ಸೌಗಂಧಿಕಾ ಪರಿಣಯ'ವೆಂಬ ಗದ್ಯರೂಪದ ನವೀನ ಕೃತಿಯು ಕ್ರಿ.ಶ. 1821ರಲ್ಲಿ ರಚಿತವಾಗಿದ್ದು ಮತ್ತೆ ಇದನ್ನು ನಾಟಕ ಹಾಗೂ ಸಾಂಗತ್ಯರೂಪದಲ್ಲಿ ಬೇರೆಯವರಿಂದ ಬರೆಯಿಸಿದಂತೆ ಕಂಡುಬರುತ್ತದೆ. ಇದು ಯಾವುದೊಂದು ಪುರಾಣ ಭಾಗ ಅಥವಾ ಸಂಸ್ಕೃತ ಕಾವ್ಯದ ಅನುವಾದವಾಗಿರದೆ ಬಹುಮಟ್ಟಿಗೆ ನೂತನ ಕಥನ ಸೃಷ್ಟಿಯಾದುದು ಇದರ ಹಿರಿಮೆಯಾಗಿದೆ[23].

ಕ್ರಿ.ಶ. 1823ರಲ್ಲಿ ರಚಿತವಾದ 'ತತ್ವನಿಧಿ'ಯು ಇವರ ಶಾಸ್ತ್ರವಿಷಯಕ ಗ್ರಂಥಗಳಲ್ಲಿ ವಿಶೇಷ ಮಹತ್ತ್ವದ್ದು. ಹಿಂದೂ ಧರ್ಮಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಸಂಕಲನವಿದು. ಈ ಗ್ರಂಥವು ಸಂಸ್ಕೃತ ಶ್ಲೋಕ ಗದ್ಯಗಳಲ್ಲಿದ್ದರೂ ಕೊನೆಯ ಭಾಗದ ಎಲ್ಲಾ ಶ್ಲೋಕಗಳಿಗೆ ಕನ್ನಡದಲ್ಲಿ ಟೀಕೆಯನ್ನು ಕೊಡಲಾಗಿದೆ. 'ಪಾರ್ವತೀಭಕ್ತಿಸಾರ'ವನ್ನು 'ಲಲಿತೋಪಾಖ್ಯಾನ'ವೆಂಬ ಕೃತಿಯನ್ನೂ ಮುಮ್ಮಡಿಯವರು ಕ್ರಿ.ಶ. 1823ರಲ್ಲೇ ರಚಿಸಿದ್ದರೆಂದು ಹೇಳಲಾಗುತ್ತಿದ್ದರೂ ಹಾವನೂರರು ಅವುಗಳು ಅವರ ಕೃತಿಗಳಲ್ಲವೆಂದು ತೋರಿಸಿಕೊಟ್ಟಿದ್ದಾರೆ[24].

ಕ್ರಿ.ಶ. 1826ರಲ್ಲಿ ಅವರು ರಚಿಸಿದ 'ಚಾಮುಂಡಾ ಲಘು ನಿಘಂಟು' ಇದು 152 ಶ್ಲೋಕಗಳ ಪ್ರತ್ಯೇಕವಾದ ಕೃತಿ. ಇದರಲ್ಲಿ ದೇವತೆಗಳು ಧರಿಸುವ ಆಯುಧಗಳು, ಅವರ ವಾಹನ, ಮೃಗ ಇತ್ಯಾದಿಗಳ ನಾಮಾವಳಿಗಳಿವೆ. ಶ್ಲೋಕಗಳಿಗೆ ಕನ್ನಡದಲ್ಲಿ ಟೀಕೆ ಇದೆ. ಹೀಗೆ ಮುಮ್ಮಡಿಯವರಿಗೆ ಚಿಕ್ಕಂದಿನಿಂದಲೇ ಕನ್ನಡ ಗದ್ಯವನ್ನು ಬೆಳೆಸುವುದರಲ್ಲಿ ವಿಶೇಷ ಆಸಕ್ತಿ ಇತ್ತು.

ಕಾವ್ಯ ಕಲಾನಿಧಿಯ ಸಂಪಾದಕರಾಗಿ ವಿವಿಧ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಿದ್ದ ಎಂ.ಎ. ರಾಮಾನುಜಯ್ಯಂಗಾರರು ಮುಮ್ಮಡಿಯವರ 'ಶಾಕುಂತಲ ನಾಟಕ ನವೀನ ಟೀಕೆ'ಯನ್ನು ಪ್ರಕಟಿಸುತ್ತ

(ಕ್ರಿ.ಶ. 1914), ಪ್ರಸ್ತಾವನೆಯಲ್ಲಿ ಮುಮ್ಮಡಿಯವರ ಗದ್ಯ ಕೃತಿಗಳಲ್ಲಿ 'ಮುದ್ರಾಮಂಜೂಷ' ವನ್ನು ಕಾಣಿಸಿದ್ದಾರೆ. ಈ ವಿಷಯದ ಬಗ್ಗೆ ಚರ್ಚಿಸುತ್ತ ಹಾವನೂರರು —'ಪ್ರಚಲಿತವಿರುವ ಕೆಂಪು ನಾರಾಯಣ ವಿರಚಿತ ಮುದ್ರಾಮಂಜೂಷಕ್ಕೂ ಮುಮ್ಮಡಿಯವರ ಹೆಸರಿನಲ್ಲಿರುವ ಮುದ್ರಾಮಂಜೂಷಕ್ಕೂ ಅಂತರವನ್ನು ನಾವು ಕಾಣೆವು. ಈ ಕೃತಿಯನ್ನು ಮುಮ್ಮಡಿಯವರ ಹೆಸರಿನಲ್ಲಿ ನಿರ್ದೇಶಿಸಿದ ಒಂದು ಉಲ್ಲೇಖವಷ್ಟೆ ದೊರೆಯುತ್ತದಲ್ಲದೆ ಹಸ್ತಪ್ರತಿಯಾಗಲೀ ಮುದ್ರಿತ ಪ್ರತಿಯಾಗಲೀ ಇಲ್ಲ' ವೆಂದಿದ್ದಾರೆ. ಹೀಗಾಗಿ 'ಮುದ್ರಾಮಂಜೂಷ' ಕೆಂಪುನಾರಾಯಣನ ಕೃತಿಯೇ. ಅದು ಉತ್ಕೃಷ್ಟ ಕೃತಿಯಾದುದರಿಂದ ಯಾರೋ ಮಹಾರಾಜರ ಕೃತಿಗಳ ಪಟ್ಟಿಯಲ್ಲಿ ಅದನ್ನು ಸೇರಿಸಿರಬಹುದೆಂದು ನಿರ್ಣಯಿಸಬಹುದಾಗಿದೆ.

ಆಸ್ಥಾನದ ಕನ್ನಡ ಕವಿಗಳು: ಕೃಷ್ಣರಾಜರ ಆಸ್ಥಾನದಲ್ಲಿ ಸಂಸ್ಕೃತ ವಿದ್ವಾಂಸರಿಗೆ ಹೆಚ್ಚಿನ ಪ್ರಾಶಸ್ತ್ಯವಿದ್ದರೂ ಕನ್ನಡ ಕವಿ — ಲೇಖಕರು ಅವರ ಔದಾರ್ಯದ ಫಲವನ್ನು ಪಡೆಯುತ್ತಿದ್ದರು. ಇವರಲ್ಲಿ ದೇವಚಂದ್ರ, ಯಾದವ ಕಬ್ಬಿಗ, ರಾಮಕೃಷ್ಣ ಶಾಸ್ತ್ರಿ, ಶ್ರೀನಿವಾಸ ಶಾಸ್ತ್ರಿ, ವೆಂಕಟರಾಮ ಶಾಸ್ತ್ರಿ ಮೊದಲಾದ ಆಸ್ಥಾನಿಕರು ಕೆಂಪುನಾರಾಯಣನ ಸಮಕಾಲೀನರಾಗಿದ್ದು ಕನ್ನಡದಲ್ಲಿ ಕೃತಿ ರಚನೆ ಮಾಡುತ್ತಿದ್ದರು.

ದೇವಚಂದ್ರ (ಕ್ರಿ.ಶ. 1770–1841): ಮುಮ್ಮಡಿ ಕೃಷ್ಣರಾಜರ ತಂದೆಯವರ ಕಾಲದಲ್ಲಿಯೇ ಆಸ್ಥಾನದಲ್ಲಿದ್ದ ದೇವಚಂದ್ರನು ಮೆಕೆಂಜಿಯ ಯೋಜನೆಯ ಸಂಪರ್ಕದಿಂದಾಗಿ 'ರಾಜಾವಳೀ ಕಥಾಸಾರ' ವೆಂಬ ಪುರಾಣೇತಿಹಾಸ — ಐತಿಹ್ಯಗಳು ಬೆರೆತ ಒಂದು ಕುತೂಹಲ ಚರಿತ್ರ ಗ್ರಂಥವನ್ನು ಗದ್ಯದಲ್ಲಿ ರಚಿಸಿದ್ದನು. ಇದರಲ್ಲಿ ಕವಿಗಳು, ಅರಸರು ಮತ್ತು ಜೈನ ಯತಿಗಳ ಸಂಬಂಧದ ಐತಿಹ್ಯ ವಿಸ್ತಾರವಾಗಿಯೂ ಮೈಸೂರು ದೊರೆಗಳ ವಂಶಾವಳಿ ಸಂಕ್ಷೇಪವಾಗಿಯೂ ಬಂದಿದೆ. ಕೆಲವು ಸಮಕಾಲೀನ ವಿಚಾರಗಳ ಬಗ್ಗೆಯೂ ಇಲ್ಲಿ ಮಾಹಿತಿ ದೊರೆಯುತ್ತದೆ. 'ಇಂಗ್ರೇಜಿ ಜನರಲ ಅರಿಷ (ಹ್ಯಾರಿಸ) ಎಂಬ ಸೇನಾಪತಿಯು ಪೂರ್ಣಯ್ಯನೆಂಬ ಬ್ರಾಹ್ಮಣಂಗೆ ಸರ್ವಾಧಿಕಾರವನಿತ್ತು, ರಾಜಸೇವಾ ಕ್ರಮದೊಳಿರಿಸಿದ' ನೆಂಬ [25] ವಿಚಾರ ಇಲ್ಲಿದೆ.

ಯಾದವ ಕಬ್ಬಿಗ (ಕ್ರಿ.ಶ.ಸು.1815): ಈತನು ಸ್ವಕಲ್ಪಿತ ಕಥೆಯೊಂದನ್ನು ವಚನ ಕಾವ್ಯವಾಗಿ ಬರೆದಿದ್ದಾನೆ. ಅಲೌಕಿಕ ಅಸಂಗತ ಘಟನೆಗಳಿದ್ದರೂ ಮಾನವ ಸ್ವಭಾವದ ಸಹಜ ನಡವಳಿಕೆಗಳನ್ನಿಲ್ಲಿ ಕಾಣಬಹುದು. ಮುಮ್ಮಡಿ ಕೃಷ್ಣರಾಜರ ಪ್ರೀತ್ಯಾಸ್ಪದನಾಗಿ ಆಸ್ಥಾನದಲ್ಲಿದ್ದ ಕಾಲಕ್ಕೆ, ಅವನ ಸ್ವಾಭಿಮಾನದ ನಡತೆಯಿಂದಲೋ, ಚಾಡಿಕೋರರ ಮಾತಿನಿಂದಲೋ ಅವನ ಮೇಲೆ ಮಹಾರಾಜರ ಅವಕೃಪೆಯಾಯಿತು. ಯಾದವನು ಆಸ್ಥಾನದಿಂದ ಹೊರಟು ಬಂದು ಹಳ್ಳಿಯಲ್ಲಿಯೇ ನಿಂತನು [26]. 'ಕಲಾವತಿ ಪರಿಣಯ' ದ ರಚನೆಯಾದುದು ಆವಾಗಲೇ. ಕನ್ನಡ ವಚನ ಕಾವ್ಯಗಳಲ್ಲಿ ಇದುವೆದೊಡ್ಡದು. ಇದರ ನಡೆ ಗದ್ಯದಂತೆಯೇ ಇರುವುದರಿಂದ ಗೋವಿಂದ ಪೈಯವರು ಇದನ್ನು ಕನ್ನಡದ ಮೊಟ್ಟಮೊದಲ ಕಾದಂಬರಿ ಎಂದು ಕರೆದರು [27]. 'ಆದರೆ ಈ ಕೃತಿಯನ್ನು ಆಧುನಿಕ ಪೂರ್ಣ ಅರ್ಥದಲ್ಲಿ ಕಾದಂಬರಿ ಎಂದು ಕರೆಯುವುದೇ ತಪ್ಪು ಧೋರಣೆಯು ಗುರುತಾಗಿದೆ. ಐತಿಹಾಸಿಕ ಅಥವಾ ಕಾಲ್ಪನಿಕ ಕಥೆಯನ್ನು ಕೇವಲ ಗದ್ಯದಲ್ಲಿ ಬರೆದರೆ ಅದು ಕಾದಂಬರಿಯಾಗಲಾರದು' [28] ಎಂದು ಆಧುನಿಕ ವಿಮರ್ಶಕರ ಅಭಿಪ್ರಾಯವಿದ್ದರೂ ಕನ್ನಡದಲ್ಲಿ ಇದೊಂದು ವಿಶಿಷ್ಟ ಕೃತಿ ಎಂಬುದನ್ನು ಮರೆಯುವಂತಿಲ್ಲ.

<u>ರಾಮಕೃಷ್ಣ ಶಾಸ್ತ್ರಿ</u> (ಕ್ರಿ.ಶ. 1815): ಸಿಂಹಾಸನಪುರಿಯ ರಾಮಪಂಡಿತನ ಮಗನಾದ ಈತನು 'ಭುವನಪ್ರದೀಪಿಕೆ' ಎಂಬ ಸ್ವರಚಿತ ಸಂಸ್ಕೃತ ಗ್ರಂಥಕ್ಕೆ ಕನ್ನಡ ಟೀಕೆಯನ್ನೂ ಬರೆದಿದ್ದಾನೆ. ಮುಮ್ಮಡಿಯವರ ಸಂತೋಷಾರ್ಥವಾಗಿ ಇದನ್ನು ಕ್ರಿ.ಶ. 1808ರಲ್ಲಿ ಆರಂಭಿಸಿ ಟೀಕೆಯನ್ನು 1815ರಲ್ಲಿ ಮುಗಿಸಿದಂತೆ ಹೇಳಿದ್ದಾನೆ. ಇವನ ಗ್ರಂಥಕ್ಕೆ 'ಕೃಷ್ಣರಾಜ ಗುಣರತ್ನಮಾಲೆ' ಎಂಬ ಹೆಸರೂ ಉಂಟು. ಇದರಲ್ಲಿ ಬ್ರಹ್ಮಾಂಡ ಸೃಷ್ಟಿಯಿಂದ ಮುಮ್ಮಡಿ ಕೃಷ್ಣರಾಜರ ಗುಣ ಕಥನದ ವರೆಗೆ ನಾನಾ ವಿಷಯಗಳು ತುಂಬಿಕೊಂಡಿವೆ. ಹತ್ತು ಪಟಲಗಳಲ್ಲಿ ವಿಶ್ವಕೋಶದ ಹಾಗೆ ಸಾಮಗ್ರಿಯನ್ನು ಸಂಗ್ರಹಿಸಿದೆ.

<u>ಶ್ರೀನಿವಾಸ ಶಾಸ್ತ್ರಿ</u> (ಕ್ರಿ.ಶ. 1812): ಕವಿ ಸಾರ್ವಭೌಮನೆಂದು ಬಿರುದನ್ನು ಪಡೆದಿದ್ದ ಈತ ಕೃಷ್ಣನೃಪಜಯೋತ್ಕರ್ಷ' ವೆಂಬ ಕೃಷ್ಣರಾಜ ಸ್ತುತಿರೂಪವಾದ ಒಂದು ಚಿತ್ರಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ 8 ಪದ್ಯ 6 ಗದ್ಯಗಳಿವೆ. ಇದರಲ್ಲಿ ವಿರಾಮ ಭೇದದಿಂದ ಸಂಸ್ಕೃತ — ಕನ್ನಡ ಎರಡೂ ಭಾಷೆಗಳ ಪದ ವಾಕ್ಯಗಳು ವ್ಯವಸ್ಥೆಗೊಂಡು ಅದಕ್ಕೆ ಅನುಗುಣವಾಗಿ ಅರ್ಥವಾಗುವುದು.

<u>ವೆಂಕಟರಾಮ ಶಾಸ್ತ್ರಿ</u> (ಕ್ರಿ.ಶ. 1823): ಮುಮ್ಮಡಿಯವರ ಆಶ್ರಿತರಲ್ಲಿ ಒಬ್ಬನು ತನ್ನನ್ನು 'ವಿದ್ಯಾವಿಲಾಸ ಚತುರ', 'ಸಾಹಿತ್ಯಾಲಂಕಾರ ಧುರೀಣ' ಎಂದು ವಿಶೇಷಿಸಿ ಹೇಳಿಕೊಂಡಿದ್ದಾನೆ. ಇವನು 1823ರಲ್ಲಿ ಶನಿ ತ್ರಯೋದಶಿ ವ್ರತ, ಅಮಾ ಸೋಮವಾರ ವ್ರತ ಟೀಕೆಗಳನ್ನು ರಚಿಸಿದ್ದಾನೆ. ಆರಂಭದಲ್ಲಿ 'ಲಕ್ಷ್ಮಮ್ಮಣ್ಣಿಯವರಿಗಾಗಿ ದೇವಾಂಡಹಳ್ಳಿ ವೆಂಕಟರಾಮ ಶಾಸ್ತ್ರಿ ಕನ್ನಡಿಸಿದುದು' ಎಂದಿದೆ. ಈತ ಮತ್ತೆ 1839, 42 ರಲ್ಲಿಯೂ ಕೃತಿ ರಚಿಸಿದಂತೆ ತಿಳಿದುಬರುತ್ತದೆ.

ಇವರುಗಳಲ್ಲದೇ, 'ಮಹಾರಾಜರ ಮನ್ನಣೆಗೆ ಪಾತ್ರರಾಗಿದ್ದ ಪ್ರಾರಂಭ ಕಾಲದ ವಿದ್ವಾಂಸರಲ್ಲಿ ಶ್ರೀ ವೈಷ್ಣವ ಮತದ ಕರೂರು ಶ್ರೀನಿವಾಸಾಚಾರ್ಯರು ಪ್ರಮುಖರು. ಅವರ ಶಿಷ್ಯರಾಗಿದ್ದ ತಿರುಮಲೈ ರಂಗಾಚಾರ್ಯರು ಮುಮ್ಮಡಿಯವರಿಗೆ ಸಂಸ್ಕೃತದ ಅಭ್ಯಾಸ ಮಾಡಿಸಿದರು. ಚತುಶ್ಶಾಸ್ತ್ರ ಪಂಡಿತರೆನಿಸಿ, ಪೇಶ್ವೆಯವರಿಂದ ಸನ್ಮಾನಿತರಾಗಿದ್ದ ತ್ರ್ಯಂಬಕ ಶಾಸ್ತ್ರಿಗಳನ್ನು ಕೃಷ್ಣರಾಜರು ತಾವಾಗಿ ಬರಮಾಡಿಸಿಕೊಂಡಿದ್ದರು. ಒಂದೊಂದು ವಿದ್ಯೆಯಲ್ಲಿ ವಿಶೇಷ ಸಾಧನೆಯನ್ನು ಹೊಂದಿದ್ದ ವಿವಿಧ ವಿದ್ವಾಂಸರು ಆಸ್ಥಾನದಲ್ಲಿ ಇದ್ದರು... ವಿಷ್ಣುಪಾದಾಚಾರ್ಯನು ಖಗೋಲ ಜ್ಯೋತಿಷ್ಯಗಳಲ್ಲಿ ಅಪ್ರತಿಮನಾಗಿದ್ದರೆ, ರಾಜೇಶ್ವರ ಶಾಸ್ತ್ರಿಯು ಮಂತ್ರಾಗಮದಲ್ಲಿ ಪ್ರವೀಣನಾಗಿದ್ದನು ... 'ಪರಕಾಲ ವಿಜಯ ಚಂಪೂ' ಕಾವ್ಯವನ್ನು ಬರೆದ ಪೆರಿಯ ಕೃಷ್ಣಮಾಚಾರ್ಯರೇ ಮೊದಲಾದ ಸಂಸ್ಕೃತ ಗ್ರಂಥಕಾರರೂ ಕೃಷ್ಣರಾಜರ ಆಸ್ಥಾನದಲ್ಲಿದ್ದು ದೊರೆಗಳ ನಿಕಟವರ್ತಿಗಳಾಗಿದ್ದರು [29].

ಹೀಗೆ ಮುಮ್ಮಡಿಯವರು ತಾವು ಸ್ವತಃ ಕೃತಿ ರಚನೆ ಮಾಡಿದುದಲ್ಲದೇ ಹೊಸಗನ್ನಡ ಸಾಹಿತ್ಯದ ಮೂಲಭೂತ ಲಕ್ಷಣವಾದ ಗದ್ಯ ರಚನೆಗೆ ಅನನ್ಯವಾದ ಪ್ರಚೋದನೆಯಿತ್ತರು. ಈ ಕಾಲದಲ್ಲಿ ಸ್ವತಂತ್ರವಾದ ಕಲ್ಪಿತ ಗದ್ಯಕಾವ್ಯಗಳು, ಪುರಾಣಗಳ ಅನುವಾದಗಳು, ತತ್ವನಿಧಿಯಂತಹ ಶಾಸ್ತ್ರಗ್ರಂಥಗಳು, ನಿಘಂಟುಗಳು, ಚಿತ್ರಕಾವ್ಯಗಳು ರಚಿತವಾದವು. 'ಕೋಶೋವಾನ ಆಚಾರ್ಯ:' ಎಂಬ ಮಾತಿನಂತೆ ವಿಶ್ವಕೋಶಗಳ ಹಾಗೆ ಸಾಮಗ್ರಿಯನ್ನು ಸಂಗ್ರಹಿಸಿ ಬರೆಯುವ ಪ್ರವೃತ್ತಿಯೂ ಕಂಡುಬರುತ್ತದೆ.

ಸಂಸ್ಥಾನದ ಹೊರಗೂ ಕನ್ನಡದ ಕೆಲಸ ಸಾಗುತ್ತಿತ್ತು. ವಿಲಿಯಂ ಕೇರಿಯು ಕ್ರಿ.ಶ. 1817ರಲ್ಲಿ 'ಗ್ರಾಮರ್ ಆಫ ದಿ ಕರ್ನಾಟಕ ಲ್ಯಾಂಗ್ವೇಜ' ನ್ನು, 1823ರಲ್ಲಿ ಬೈಬಲ್ಲಿನ ಕನ್ನಡ ಗದ್ಯಾನುವಾದವನ್ನು ಪ್ರಕಟಿಸಿದನು. ಕ್ರಿ.ಶ. 1820ರಲ್ಲಿ ಜಾನ ಮೆಕೆರಲ ಎಂಬವನು ಮತ್ತೊಂದು ಕನ್ನಡ ವ್ಯಾಕರಣ ಪುಸ್ತಕವನ್ನು ಹೊರತಂದನು. ಜೆ. ಹ್ಯಾಂಡ್ಸನು 1822ರ ಸುಮಾರಿನಲ್ಲಿ 'ಅಪೋಸ್ತಲನಾದ ಪೌಲು ಎಫೀಸಿಪಟ್ಟಣದವರಿಗೆ ಬರೆದ ಪತ್ರಿಕೆಯು' ಎಂಬ ಗದ್ಯ ಕೃತಿಯನ್ನು ಹೊರತಂದನು. ರೆವರೆಂಡ ರೀವನು 1824ರಲ್ಲಿ ಇಂಗ್ಲಿಷ ಕನ್ನಡ ಶಬ್ದಕೋಶವನ್ನೂ 1832ರಲ್ಲಿ ಕನ್ನಡ ಇಂಗ್ಲೀಷ ಶಬ್ದಕೋಶವನ್ನೂ ಹೊರತಂದನು. ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ ಎಂಬವನು ಸು. 1830ರಲ್ಲಿ 'ಹೊಸಗನ್ನಡ ನುಡಿಗನ್ನಡಿ' ಎಂಬ ವ್ಯಾಕರಣ ಪುಸ್ತಕವನ್ನು ಬರೆದಿದ್ದನು.

ಹೀಗೆ ಹೊಸಗನ್ನಡ ಗದ್ಯವು ರೂಪುಗೊಳ್ಳುತ್ತಿದ್ದ ವಿಶಿಷ್ಟ ಸಂದರ್ಭದಲ್ಲಿ ಮುಮ್ಮಡಿಯವರ ಆಶ್ರಯದಲ್ಲಿ ಕೆಂಪುನಾರಾಯಣನು ಇದ್ದನು. ಈ ಕವಿಗಳು ಯಾರೂ ತಮ್ಮ ಸಮಕಾಲೀನ ಇತರ ಕವಿಗಳ ಬಗ್ಗೆ ಪ್ರಸ್ತಾಪಿಸದಿದ್ದುದು ಆಶ್ಚರ್ಯದ ಸಂಗತಿಯಾಗಿದೆ.

<u>ಕವಿ ವಿಚಾರ:</u>

ಮುದ್ರಾಮಂಜೂಷವನ್ನು ರಚಿಸಿದವನು ನಾರಾಯಣನೆಂಬವನು. ತನ್ನ ಕೃತಿಯ ಪ್ರತಿ ಆಶ್ವಾಸದ ಕೊನೆಯಲ್ಲಿ ಆತನು "ಶ್ರೀಮದ್ರಾಜಾಧಿರಾಜ ಬಿರುದೆಂತೆಂಬರ ಗಂಡ ಶ್ರೀ ಮಹೀಶೂರ ನರಪತಿ ಶ್ರೀ ಕೃಷ್ಣರಾಜೇಂದ್ರಾಶ್ರಿತ ಹೊಯಿಸಣಿಗೆ ಕುಲ ಸಂಜಾತ ನಾರಾಯಣಶರ್ಮ ವಿರಚಿತಮಪ್ಪ ಮುದ್ರಾಮಂಜೂಷವೆಂಬ ಗ್ರಂಥದಲ್ಲಿ ... ಆಶ್ವಾಸಃ ಸಮಾಪ್ತಃ" ಎಂದು ಹೇಳಿದ್ದಾನೆ. ಇದರಿಂದ ಆತ ಹೊಯಿಸಳ ಕರ್ನಾಟಕ ಮತದ ಸ್ಮಾರ್ತ ಬ್ರಾಹ್ಮಣನೆಂದು ತಿಳಿದುಬರುವುದು. ಬ್ರಾಹ್ಮಣರು ನಮಸ್ಕರಿಸುವಾಗ, ತನ್ನ ಕುರಿತು ಹೇಳುವಾಗ 'ಶರ್ಮ' ಎಂಬ ಪದವನ್ನು ಸೇರಿಸಿಕೊಳ್ಳುವ ರೂಢಿ ಹಿಂದಿತ್ತು. ಇಂದಿಗೂ ಸಾಂಪ್ರದಾಯಿಕ ಕ್ರಮದಲ್ಲಿ ತಮ್ಮ ಪ್ರವರ ಹೇಳಿ ನಮಸ್ಕರಿಸುವವರು ತಮ್ಮ ಹೆಸರಿನ ಮುಂದೆ 'ಶರ್ಮಾ' ಎಂದು ಹೇಳಿಕೊಳ್ಳುವುದನ್ನು ಗಮನಿಸಬಹುದಾಗಿದೆ. ಆದ್ದರಿಂದ 'ಶರ್ಮಾ' ಎಂಬುದು ಕುಲಸೂಚಕ ಪದವಾಗಿ ಇಲ್ಲಿ ಉಪಯೋಗಿಸಲ್ಪಟ್ಟಿಲ್ಲ ಎಂದು ತಿಳಿಯಬೇಕಾಗಿದೆ [30].

ಕ್ರಿ.ಶ. 1873ರಲ್ಲಿ ಇದನ್ನು ಸಂಪಾದಿಸಿ ಮೊದಲ ಸಲ ಮುದ್ರಿಸಿದ ವೆಸ್ಲಿಯನ ಮಿಶನರಿ ಜೆ. ಸ್ಟೀವೆನ್ಸನ್ನನು ಕೃತಿಯ ಅವತರಣಿಕೆಯನ್ನು (ಮೂಲ ಪಾಠವನ್ನು ತಿದ್ದಿ) ಬರೆಯುವಾಗ 'ಕೆಂಪುನಾರಾಯಣನೆಂಬ ಕವಿಯು ... ಪೇಳ್ವನು' ಎಂದು ಮುದ್ರಿಸಿದ್ದಾನೆ. ಕವಿಯ ಹೆಸರಿನ ಹಿಂದೆ 'ಕೆಂಪು' ಮೊದಲು ಕಾಣಿಸಿಕೊಂಡದ್ದು ಇಲ್ಲಿ. (ಹೆಚ್ಚಿನ ವಿವರ ಹಸ್ತಪ್ರತಿಗಳ ಪರಿಚಯದ ಸಂದರ್ಭದಲ್ಲಿ ಹೇಳಿದೆ.) ಮತ್ತೆ ಕವಿಯು ಕೆಂಪುನಾರಾಯಣನೆಂದೇ ಪ್ರಸಿದ್ಧನಾಗಿದ್ದಾನೆ.

ಇದೇ ಕೃತಿಯ 'ಒರಿಗರಿ ಪ್ರತಿಯು ರಕ್ಷಾಕವಚದ ಮೇಲೆ 'ಓರಿಯಂಟಲ ರಿಸರ್ಚ ಇನ್ಸ್ಟಿಟ್ಯೂಟ

ನವರು ಅಂಕಿಸಿದ್ದ ಪರಿಚಯ ಪತ್ರದಲ್ಲಿ ಕವಿ 'ಕೆಂಪುನಾರಾಯಣ ಶಾಸ್ತ್ರಿ' ಎಂದಿದೆ [31]. ಕವಿಚರಿತೆಕಾರರೂ[32] ಒಂದೆಡೆ ಈತನನ್ನು 'ಕೆಂಪುನಾರಾಯಣ ಶಾಸ್ತ್ರಿ' ಎಂದಿದ್ದಾರೆ. ಆದರೆ ಕೃತಿ ಪರಿಚಯದ ಸಂದರ್ಭದಲ್ಲಿ ಅವರು 'ಕೆಂಪುನಾರಾಯಣ' ಎಂದಷ್ಟೇ ಕವಿಯ ಹೆಸರನ್ನು ಉಳಿಸಿಕೊಂಡಿದ್ದಾರೆ.

ಶ್ರೀ ಸಿ.ಕೆ. ವೆಂಕಟರಾಮಯ್ಯನವರು 'ಕೆಂಪುನಾರಾಯಣ' ಎಂಬ ಶೀರ್ಷಿಕೆಯ ಲೇಖನದಲ್ಲಿ ಆತ 'ಹೊಯ್ಸಣಿಗ' ಬ್ರಾಹ್ಮಣ ಕುಲದವನು ಎಂದಷ್ಟೇ ಹೇಳಿದ್ದಾರೆ. ವಿವರವಾದ ಚರ್ಚೆಗೆ ಕೈಹಾಕಿಲ್ಲ[33].

ಕಾದಂಬರೀ ಸಂಗ್ರಹ ಗ್ರಂಥಮಾಲೆಯ ಸಂಪಾದಕರಾದ ಸಿ. ವೆಂಕಟರಮಣ ಶಾಸ್ತ್ರಿಗಳು — 'ಕೆಂಪುಶಾಸ್ತ್ರಿಗಳೇ ಮುದ್ರಾಮಂಜೂಷವೆಂಬ ಕನ್ನಡದ ವಚನ ಗ್ರಂಥವನ್ನು ರಚಿಸಿದವರು; ಇವರನ್ನು ಕೆಂಪುನಾರಾಯಣ ಕವಿಯೆನ್ನುವರು' ಎಂದಿದ್ದಾರೆ [34]. ಇದರಿಂದ ಮುಮ್ಮಡಿಯವರ ಆಸ್ಥಾನದಲ್ಲಿದ್ದ ಈ ಕವಿಯು 'ಕೆಂಪುಶಾಸ್ತ್ರಿ'ಗಳೆಂದೇ ಪ್ರಸಿದ್ಧರಾಗಿದ್ದರೆಂದು ತಿಳಿದುಬರುತ್ತದೆ. ಈ ವಿಚಾರ ಜನಜನಿತವಾದುದರಿಂದಲೇ ಜೆ. ಸ್ಟೀವೆನ್ಸನ್ನನು ಕವಿಯ ಹೆಸರನ್ನು 'ಕೆಂಪುನಾರಾಯಣ'ನೆಂದೂ 'ಓರಿಯೆಂಟಲ ರಿಸರ್ಚ್ ಇನ್ಸ್ಟಿಟ್ಯೂಟಿನವರು ಮತ್ತು ಕವಿಚರಿತೆಕಾರರು 'ಕೆಂಪುನಾರಾಯಣ ಶಾಸ್ತ್ರಿ' ಎಂದು ಹೇಳಿದರೆಂದು ತಿಳಿಯಬಹುದಾಗಿದೆ.

ಕವಿಯು ತನ್ನ ಕೃತಿಯಲ್ಲಿ ಎಲ್ಲಿಯೂ ಕೆಂಪು ಎಂಬುದನ್ನಾಗಲೀ, ಶಾಸ್ತ್ರಿ ಎಂಬುದನ್ನಾಗಲೀ ಬಳಸಿಲ್ಲ. 'ಕೆಂಪು' ವಿಶೇಷಣವು ಕವಿಯ ಹೆಸರಿನ ಹಿಂದೆ ಏಕೆ ಸೇರಿರಬಹುದು ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ಸಿಗುತ್ತಿಲ್ಲ. ಮುಮ್ಮಡಿಯವರ ಆಸ್ಥಾನದಲ್ಲಿ ಅನೇಕ ಜನ ಶಾಸ್ತ್ರಿಗಳಿದ್ದು ಇವರ ಕೆಂಪು ಮೈ ಬಣ್ಣದಿಂದಾಗಿ ಇವರನ್ನು 'ಕೆಂಪು ಶಾಸ್ತ್ರಿ'ಗಳೆಂದು ಕರೆದಿದ್ದು ಮತ್ತೆ ಅದೇ ರೂಢಿಯಾಗಿರಬಹುದೆಂದು ಊಹಿಸಬಹುದಾಗಿದೆ (ಅವರ ವಂಶಸ್ಥರಿಗೂ ಈ ಬಗ್ಗೆ ಸ್ಪಷ್ಟ ಮಾಹಿತಿ ಗೊತ್ತಿಲ್ಲದಿದ್ದರೂ ಅವರು ಇದೇ ಊಹೆಯನ್ನು ಸಮರ್ಥಿಸುತ್ತಾರೆ). ಮುಮ್ಮಡಿ ಕೃಷ್ಣರಾಜರು ತಮ್ಮ ಅರಸೊತ್ತಿಗೆಯ ಕಾಲದಲ್ಲಿ ಬರೆಯಿಸಿದ್ದ ಒಂದು ವರ್ಣಚಿತ್ರದಲ್ಲಿ 'ಕೆಂಪುಶಾಸ್ತ್ರಿಗಳು' ಎಂಬ ಉಲ್ಲೇಖವಿದ್ದು ಇದು 'ಮುದ್ರಾಮಂಜೂಷ'ದ ಕರ್ತೃ ಕೆಂಪುನಾರಾಯಣ ಕವಿಯದೇ ಎಂದು ತಿಳಿಯಬಹುದಾಗಿದೆ.[35] ಇಷ್ಟಿದ್ದೂ ಮುದ್ರಿತ ಕೃತಿಯು ಒಂಬತ್ತು ಆವೃತ್ತಿಗಳಲ್ಲಿ ಹೊರಬಂದಿದ್ದು ಅವುಗಳಲ್ಲಿ ಕವಿಯ ಹೆಸರು 'ಕೆಂಪುನಾರಾಯಣ'ನೆಂದು ಇದ್ದುದರಿಂದ ಕಾಲಾಂತರದಲ್ಲಿ ಆ ಹೆಸರೇ ಜನಪ್ರಿಯವಾಗಿ ಉಳಿದವು ಮೂಲೆಗುಂಪಾದವು.

ಇದೀಗ ಬೆಂಗಳೂರು — ಮೈಸೂರುಗಳಲ್ಲಿ ವಾಸ್ತವ್ಯವಿರುವ ಈ ಕವಿಯ ವಂಶಸ್ಥರು ತಮ್ಮ ಹಿರಿಯರಿಂದ ಕೇಳಿ ತಿಳಿದಿದ್ದ ಕೆಲವು ಅಪೂರ್ವ ಮಾಹಿತಿಗಳು ಲಭ್ಯವಿದ್ದು ಅವು ಇಂತಿವೆ.

ಕವಿಯ ಹುಟ್ಟೂರು ತಿರುಮಕೂಡಲು ನರಸೀಪುರ [36]. ಇದು ಮೈಸೂರಿನಿಂದ ಸುಮಾರು 30 ಕಿ.ಮೀಟರಿನಷ್ಟು ದೂರದಲ್ಲಿದ್ದು ಕಾವೇರಿ — ಕಪಿಲಾ ನದಿಗಳ ಸಂಗಮಸ್ಥಳವಾಗಿದೆ. ಕಪಿಲಾ ನದಿಯ ದಂಡೆಯಲ್ಲಿ ಗುಂಜಾ ನರಸಿಂಹ ಸ್ವಾಮಿಯ ದೇವಾಲಯವಿದೆ [37].

ಇದೇ ಗುಂಜಾ ನರಸಿಂಹ ಕವಿಯ ಮನೆದೇವರು. ಹಾಗಾಗಿ ಆತ ತನ್ನ ಕೃತಿಯ ಹೆಚ್ಚಿನೆಲ್ಲ ಅಧ್ಯಾಯಗಳ ಆರಂಭದಲ್ಲಿ ' ಶ್ರೀ ಗುಂಜಾ ನರಸಿಂಹಾಯ ನಮಃ ' ಎಂದು ಸ್ಮರಿಸಿದ್ದಾನೆ [38]. ಆತನ ಗೋತ್ರ ಆತ್ರೇಯ [39]. ಆತನ ಊರಾದ ತಿರುಮಕೂಡಲು ನರಸೀಪುರದ ಅಕ್ಕಪಕ್ಕಗಳಲ್ಲಿ ಸೋಸಲೆ, ಗರ್ಗೇಶ್ವರಿ ಮೊದಲಾದ ಊರುಗಳಿದ್ದು ಅವು ಸನಾತನ ಸಂಪ್ರದಾಯಸ್ಥ ಬ್ರಾಹ್ಮಣ ಮನೆತನಗಳಿಗೆ ಹೆಸರುವಾಸಿಯಾಗಿದ್ದುವು. ಅಲ್ಲೆಲ್ಲಾ ಸಂಸ್ಕೃತ ಕಾವ್ಯ, ಜ್ಯೋತಿಷ, ಆಯುರ್ವೇದ, ವ್ಯಾಕರಣ ಇತ್ಯಾದಿ ಶಾಸ್ತ್ರಗಳ ಅಧ್ಯಯನ — ಅಧ್ಯಾಪನ ಸಾಗುತ್ತಿತ್ತು. ಆದರೆ ನಮ್ಮ ಕವಿಯ ಗುರುಗಳು ಯಾರು? ಈತ ಯಾವ್ಯಾವ ಗ್ರಂಥಗಳನ್ನು 'ಓದಿಕೊಂಡಿದ್ದ? — ಎಂಬುದಕ್ಕೆ ಸ್ಪಷ್ಟ ಮಾಹಿತಿ ಸಿಗುವುದಿಲ್ಲ. ಈತನ ಗೆಳೆಯರ, ಆಶ್ರಯರ, ಸಮವಯಸ್ಕರ ಬಗೆಗೂ 'ಏನೊಂದೂ ಸುಳಿವು ಸಿಗುತ್ತಿಲ್ಲ. ಈತನು ತನ್ನ ಕೃತಿಯಲ್ಲಿ ತನ್ನ ಗುರು ಪರಂಪರೆಯನ್ನಾಗಲೀ, ತನ್ನ ಮುಂಚಿನ ಕವಿಗಳ ಬಗ್ಗೆಯಾಗಲೀ ಯಾವೊಂದು ವಿಚಾರವನ್ನೂ ಹೇಳಿಲ್ಲ. (ಆಗಿನ ಸಮಕಾಲೀನ ಕವಿಗಳ ಕೃತಿಗಳಲ್ಲಿಯೂ ಈತನ ಬಗ್ಗೆ ಪ್ರಸ್ತಾಪವಿಲ್ಲವೆಂಬುದನ್ನು ಈ ಹಿಂದೆ ಗಮನಿಸಿದ್ದೇವೆ).

ಪ್ರತ್ಯೇಕ ಪಾಠ ಶಾಲೆಗಳು ಇಲ್ಲದಿದ್ದ ಆ ಕಾಲದಲ್ಲಿ ದೊಡ್ಡ ದೊಡ್ಡ ಪಂಡಿತರ ಮನೆಗಳೇ ಪಾಠಶಾಲೆಗಳಾಗುತ್ತಿದ್ದುವು. ಈ ಕವಿಯ ಮನೆಯಲ್ಲಿಯೂ ಇಂತಹದೇ ವಾತಾವರಣವಿದ್ದಿತೆಂಬುದಕ್ಕೆ, ಅವರ ವಂಶಸ್ಥರು ಇಂದಿಗೂ ಕಾಪಾಡಿಕೊಂಡು ಬಂದ ಹಸ್ತಪ್ರತಿ ಸಂಗ್ರಹಗಳಲ್ಲಿರುವ ಅಪೂರ್ವ ಗ್ರಂಥಗಳೇ ಸಾಕ್ಷಿಯಾಗಿವೆ [40]. ಇವುಗಳನ್ನು ನಾನು ಗಮನಿಸಿ ನೋಡಿದಾಗ — ಇವೆಲ್ಲಾ ಕವಿಯ ಕಾಲದಲ್ಲಿಯೇ ಆವರಲ್ಲಿದ್ದು, ಮತ್ತಿನವರು ಅವುಗಳನ್ನು ಕಾಪಾಡಿಕೊಂಡು ಬಂದಿದ್ದಾರೆಂದು ತಿಳಿಯಿತು.

ಉದಾಹರಣೆಗೆ ಕ್ರಮಸಂಖ್ಯೆ 12, 212ರ 'ಓಲೆಗರಿ ಕಟ್ಟಿನಲ್ಲಿ ನಂದಿ ನಾಗರಿ ಲಿಪಿಯಲ್ಲಿ ರಾಮಾಯಣದ ಅಯೋಧ್ಯಾಕಾಂಡವಿದ್ದರೂ ಅದರಲ್ಲಿ ಶಾಲಿವಾಹನ ಶಕವರ್ಷ 1748ನೇ ವ್ಯಯನಾಮ ಸಂವತ್ಸರಕ್ಕೆ ಸಂಬಂಧಪಟ್ಟ ವಿವರಗಳನ್ನೊಳಗೊಂಡ ಕನ್ನಡ ಲಿಪಿಯ ಕೆಲವು ಬಿಡಿ ಹಾಳೆಗಳಿವೆ. ಇದು ' ಮುದ್ರಾಮಂಜೂಷ'ದ ರಚನೆಯ ಕಾಲಕ್ಕಿಂತ ಕೇವಲ ಮೂರು ವರ್ಷ ಅನಂತರದ್ದಾಗಿದ್ದು, ತತ್ಕಾಲೀನ ಸಂಗತಿಗಳನ್ನು ದಿನಚರಿಯಂತೆ ಬರೆದಿಟ್ಟದ್ದಾಗಿದೆ. ಇದರಲ್ಲೂ ' ಲಕ್ಷ್ಮೀನೃಸಿಂಹ ಪ್ರಸೀದ' ಎಂದಿರುವುದರಿಂದ ಕವಿಯು ಮನೆದೇವರನ್ನು ಸ್ಮರಿಸಿ, ತನಗೆ ಬೇಕಾದ ವಿವರಗಳನ್ನು ಬರೆಯುತ್ತಿದ್ದಾನೆ ಎಂದು ಗ್ರಹಿಸಬಹುದಾಗಿದೆ. ಇದೇ ಕಟ್ಟಿನ ಮತ್ತೊಂದು ಹಾಳೆಯಲ್ಲಿ' ವಿಕ್ರಮ ಸಂವತ್ಸರದ ಚೈತ್ರ ಬಹುಳ 1ರಲ್ಲು ನಾರಣ ಶಾಸ್ತ್ರಿಗಳಿಗೆ ನಾರಸಿಂಹನು ಬರದುಕೊಟ್ಟ ರಶಿತಿ' ಎಂದಿದೆ. ಇಲ್ಲಿ ಪ್ರಸ್ತಾಪಿಸಿದ ' ನಾರಣಶಾಸ್ತ್ರಿ' ' ಮುದ್ರಾಮಂಜೂಷ' ದ ಕೃತಿಕಾರನೇ ಆಗಿರಬೇಕು. ಈ ವಿಕ್ರಮ ಸಂವತ್ಸರವು ಕೃತಿ ರಚನೆಯಾದ ಸ್ವಭಾನು ಸಂವತ್ಸರಕ್ಕಿಂತ ಮೂರು ವರ್ಷ ಮೊದಲಿನದ್ದಾಗಿದೆ. ಇದರಿಂದ ಸಾಮಾನ್ಯ ಜನರು ವ್ಯವಹಾರದಲ್ಲಿ ಇವರನ್ನು ನಾರಾಯಣ (ನಾರಣ) ಶಾಸ್ತ್ರಿಗಳೆಂದು ಕರೆಯುತ್ತಿದ್ದರೆಂಬ ವಿಚಾರವೂ ತಿಳಿದುಬರುತ್ತದೆ. ಈ ಎಲ್ಲಾ ಸಂಗತಿಗಳು ಒಂದಕ್ಕೊಂದು ಹೊಂದಿಕೆಯಾಗುವುದರಿಂದ ಇಲ್ಲಿಯ ಈ ತಾಳೆಯೋಲೆಗರಿಗಳಲ್ಲಿಯ ಬರಹಗಳು ಕವಿಗೆ ಸಂಬಂಧಿಸಿದ್ದುವೆಂದು ನಿಶ್ಚಿತವಾಗಿ ಹೇಳಬಹುದಾಗಿದೆ.

ಇದೇ ಹಸ್ತಪ್ರತಿ ಸಂಗ್ರಹದ 12, 217ನೇ ನಂಬರಿನ 'ಓಲೆಗರಿಯ ಕಟ್ಟು ಸೂರ್ಯಸಿದ್ಧಾಂತ, ಚಂಪೂರಾಮಾಯಣದ ಕೆಲವು ಭಾಗ, ಆಯುರ್ವೇದ ಗ್ರಂಥದ ಕೆಲವು ಭಾಗಗಳನ್ನು ಹೊಂದಿದ್ದು ಅಲ್ಲಿಯೂ ಕನ್ನಡ ಲಿಪಿಯಲ್ಲಿರುವ ಕೆಲವು ಬಿಡಿ ಹಾಳೆಗಳಿವೆ. ಅದರಲ್ಲಿರುವ ಜನ್ಮಕುಂಡಲಿಯೊಂದರ ವಿವರ ಇಂತಿದೆ:

" ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೬೯೫ನೇ ಸಂದ ವರ್ತಮಾನ ವಿಜಯ ಸಂವತ್ಸರದ ಚೈತ್ರ ಬಹುಳ ೯ (ಕುಜ) ಶ್ರವಣಾ ೪೫|| ಸಾಧ್ಯ ೧೧-೩೦ ತೈತಲೆ ೮ ಈ ಶುಭ ದಿವಸದಲ್ಲಿ ರಾತ್ರಿ ೧೯|| ಘಳಿಗೆ ವೇಳೆ ಚಂದ್ರೋದಯ ಕಾಲದಲ್ಲಿ ರಾಮಾಶಾಸ್ತ್ರಿಗಳಿಗೆ ಕುಮಾರ ಜನನ. "

ಇಲ್ಲಿ ಹೇಳಿದ ಶಕ ವರ್ಷವು ಕ್ರಿ.ಶ. 1773ನೇ ಇಸವಿಯಾಗುತ್ತದೆ. ಮಗುವಿನ ಹೆಸರನ್ನು ಹೇಳಿಲ್ಲ. ತಂದೆಯ ಹೆಸರು ' ರಾಮಾಶಾಸ್ತ್ರಿ ' ಗಳೆಂದಿದೆ. ಈ ಕೃತಿ ರಚನೆ ಮಾಡುವ ಕಾಲದಲ್ಲಿ ಈ ಜಾತಕನಿಗೆ ಐವತ್ತು ವರ್ಷ ಪ್ರಾಯವಾಗುವುದು [41]. ಅಂದರೆ ಈ ಜಾತಕವು ಕೆಂಪು ನಾರಾಯಣನದ್ದೇ ಎಂದಾಯಿತು. ಕವಿಯ ತಂದೆಯ ಹೆಸರು ರಾಮಾಶಾಸ್ತ್ರಿಗಳು. ಕವಿಯ ಮಗನ ಹೆಸರೂ ರಾಮಾಶಾಸ್ತ್ರಿಯೇ [42]. ಅಜ್ಜನ ಹೆಸರನ್ನು ಮೊಮ್ಮಗನಿಗೆ ಇಡುವ ಸಂಪ್ರದಾಯ ಇತ್ತೀಚಿನವರೆಗೂ ಇದ್ದುದರಿಂದ ಇದು ಮೇಲಿನ ಹೇಳಿಕೆಯನ್ನು ಇನ್ನಷ್ಟು ಸಮರ್ಥಿಸುತ್ತದೆ.

ಮುಮ್ಮಡಿಯವರು ಕ್ರಿ.ಶ. 1799ರಲ್ಲಿ ಸಿಂಹಾಸನಾರೂಢರಾಗಿ ಕ್ರಿ.ಶ. 1811ರಲ್ಲಿ ರಾಜ್ಯದ ಆಡಳಿತ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡಾಗ ಸನಾತನ ಧರ್ಮದ ಕಡೆಗಿನ ತಮ್ಮ ವಿಶೇಷ ಒಲವನ್ನು ತೋರುತ್ತಾ, ಪಂಡಿತ ವಿದ್ವಾಂಸರುಗಳನ್ನು ತಮ್ಮ ಕಡೆಗೆ ಆಕರ್ಷಿಸಿದ್ದರು. ಇದೇ ಸಮಯದಲ್ಲಿ ಮೈಸೂರಿನಿಂದ ತಿರುಮಕೂಡಲು ನರಸೀಪುರಕ್ಕೆ ಭಾಟಾ ಮಾರ್ಗವೂ ಆಗಿತ್ತು [43]. ಹಾಗಾಗಿ ತನ್ನ ಹುಟ್ಟೂರಿನಿಂದ ಕವಿಯು ರಾಜಾಶ್ರಯವನ್ನು ಹುಡುಕಿಕೊಂಡು ಮೈಸೂರಿಗೆ ಬಂದಿರಬೇಕು ಮತ್ತು ತನ್ನಲ್ಲಿದ್ದ ಆಯುರ್ವೇದ, ಜ್ಯೋತಿಷ, ರಾಜನೀತಿ, ವ್ಯಾಕರಣ ಮೊದಲಾದ ಶಾಸ್ತ್ರಗಳಲ್ಲಿಯ ಪ್ರತಿಭೆಯಿಂದ ಮಹಾರಾಜರ ಅನುಗ್ರಹಕ್ಕೆ ಪಾತ್ರರಾಗಿರಬೇಕು.

ಶಾಲಿವಾಹನ ಶಕವರ್ಷ ೧೭೪೨ (ಕ್ರಿ.ಶ. 1820)ನೇ ಪ್ರಮಾಥಿ ಸಂ||ರದ ಶ್ರಾವಣ ಶುದ್ಧ ದಶಮೀ ಭಾನುವಾರದಂದು ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ತ್ರಿಮತಸ್ಥ ಬ್ರಾಹ್ಮಣ ದಂಪತಿಗಳನ್ನು ವಸ್ತ್ರಗಳಿಂದಲೂ ಚಿನ್ನ ಬೆಳ್ಳಿಗಳಿಂದ ಮಾಡಿದ ಆಭರಣಗಳಿಂದಲೂ ಅಲಂಕರಿಸಿ ಗೃಹೋಪಕರಣ, ಭೋಗೋಪಕರಣ, ವಸ್ತ್ರಪಾತ್ರಗಳನ್ನೂ ಗೋಮಹಿಷಿ ಮುಂತಾದವುಗಳನ್ನೂ ಮುಂದಿನ ಫಲ ಬರುವವರೆಗೆ ಪರಾಪೇಕ್ಷೆಯಿಲ್ಲದಂತೆ ಸೋಪಸ್ಕರವಾಗಿ ಕೊಟ್ಟಿದ್ದರು. ಈ ದಿನ ಧಾರೆಯೆರೆದು ಕೊಟ್ಟ ೨೨ ಬ್ರಾಹ್ಮಣರ ವೃತ್ತಿ ಮತ್ತು ೨ ದೇವರ ವೃತ್ತಿ, ಅಂತು ೨೪ ವೃತ್ತಿಗಳಿಗೂ ನಂಜನಗೂಡಿನ ಸಮೀಪ ಕಪಿಲಾ ನದೀ ತೀರದಲ್ಲಿ ಕತ್ತವಾಡಿಪುರವೆಂಬ ಅಗ್ರಹಾರಕ್ಕೆ ಉತ್ತರದಲ್ಲಿ ೨೪ ಮನೆಗಳನ್ನು ಕಟ್ಟಿಸಿಕೊಟ್ಟರು. ಇದಕ್ಕೆ ಕಳಲೆ ತಾಲ್ಲೂಕಿಗೆ ಪಳಿತವಾದ ಕೂಡಲಾಪುರ ಮುಂತಾದ ಅಸಲೀ ಗ್ರಾಮಗಳನ್ನೂ ದಾಖಲೆ ಗ್ರಾಮ 4ನ್ನೂ ಹಿರಣ್ಯೋದಕ ಧಾರಾಪೂರ್ವಕವಾಗಿ ಕೊಟ್ಟು ಈ ಅಗ್ರಹಾರಕ್ಕೆ ಕೃಷ್ಣರಾಜೇಂದ್ರಪುರಾಗ್ರಹಾರವೆಂಬುದಾಗಿ ನಾಮಧೇಯವನ್ನುಂಟು ಮಾಡಿದರು [44]. ಈ ೨೪ ಮನೆಗಳ ಪೈಕಿ ಒಂದು ಮನೆ ಕೆಂಪುನಾರಾಯಣ ಕವಿಗೆ

ಸಿಕ್ಕಿರಬೇಕು.[45]

ಹೊಸದಾಗಿ ರಚಿಸಲಾದ ಈ ಅಗ್ರಹಾರದ ಜನರಿಗೆ ಕಳ್ಳಕಾಕರು ಉಪಟಳವನ್ನುಂಟು ಮಾಡುತ್ತಿದ್ದರು. ಇಲ್ಲಿಯ ಜನರು ಕಳ್ಳರ ಬಾಧೆಯನ್ನು ತಾಳಲಾರದೆ ಬಂದು ದೊರೆಗಳಿಗೆ ವಿಜ್ಞಾಪಿಸಿಕೊಳ್ಳಲು, ಆಳಿದ ಮಹಾಸ್ವಾಮಿಯವರು ಮೈಸೂರು ಕೋಟೆಗೆ ನೈಋತ್ಯದಿಕ್ಕಿನಲ್ಲಿ ಎಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಟ್ಟು ಸುಖವಾಗಿರುವಂತೆ ಕಟ್ಟಳೆ ಮಾಡಿಸಿದರು[46]. ಹೀಗೆ ಅರಮನೆ ಕೋಟೆಯೊಳಗೆಯೇ ಆಶ್ರಯವನ್ನು ಪಡೆದ ಕವಿ ಕೆಲವೇ ಸಮಯದಲ್ಲಿ ಅಪೂರ್ವ ಕೃತಿ ರಚನೆ ಮಾಡಿದ್ದು, ಅದರಲ್ಲಿ ಸಮಸಾಮಯಿಕ ಸಂಗತಿಗಳನ್ನು ಸೇರಿಸಿದ್ದು ಸಹಜವೇ ಆಗಿದೆ.

ಈ ಕೆಂಪುಶಾಸ್ತ್ರಿಗಳ ಪುತ್ರ ಕೆಂಪುರಾಮ ಶಾಸ್ತ್ರಿಗಳು ಆಸ್ಥಾನದ ವೈದ್ಯಪಂಡಿತರು. ಇವರು ಮೈಸೂರಿನ ಹಳೇ ಅಗ್ರಹಾರದಲ್ಲಿ ಇದ್ದರು[48]. ಇವರ ಮಗ ಸುಬ್ಬಣ್ಣ. ಹಿಂದೆ ಪ್ರಸ್ತಾಪಿಸಿದ ಹಸ್ತಪ್ರತಿ ಕ್ರಮಸಂಖ್ಯೆ 12,212ರಲ್ಲಿ 'ಶಾ.ಶ.೧೭೪೮ನೇ ವ್ಯಯನಾಮ ಸಂ।ರದ ಮಾಘಶುದ್ಧ ಚಂದ್ರವಾರ ಈ ಶುಭ ದಿವಸದಲ್ಲಿ ಸೂರ್ಯೋದಯವಾದ 5 ಘಳಿಗೆ ಮೇಲೆ ಕುಂಭಲಗ್ನದಲ್ಲಿ ಶ್ರೀ ಅಹೋಬಲ ಸುಬ್ರಹ್ಮಣ್ಯನ ಜನನ. ಶ್ರೀನೃಸಿಂಹ ಪ್ರಸೀದ' ಎಂದಿದೆ. ಕ್ರಿ.ಶ. 1826ನೇ ಇಸವಿಗೆ ಸರಿಹೊಂದುವ ಈ ಜಾತಕವು ಕೆಂಪುನಾರಾಯಣ ಕವಿಯ ಮೊಮ್ಮಗನಾದ ಇದೇ ಸುಬ್ಬಣ್ಣನದಿರಬಹುದು (ಆಗ ಕವಿಯ ಪ್ರಾಯ ಐವತ್ತುಮೂರು ವರ್ಷ). ಈ ಸುಬ್ಬಣ್ಣನವರು ತಮ್ಮ ಭಾವಂದಿರಾದ ಸೋಸಲೆ ಗರಳಪುರಿ ಶಾಸ್ತ್ರಿಗಳವರಿಂದ ವೈದ್ಯಶಾಸ್ತ್ರದ ವಾಗ್ಭಟವೇ ಮೊದಲಾದ ನಿದಾನ ಗ್ರಂಥಗಳನ್ನು ವ್ಯಾಸಂಗ ಮಾಡಿದ್ದರು[49].

ಸುಬ್ಬಣ್ಣನವರ ಮಗ ಕೆಂಪುರಾಮಪಂಡಿತರು. ಗರಳಪುರೀ ಶಾಸ್ತ್ರಿಗಳು ತಮ್ಮ ಎರಡನೆಯ ಮಗಳು ಸೀತಮ್ಮಳನ್ನು ಇವರಿಗೆ ಕೊಟ್ಟು ಮದುವೆ ಮಾಡಿದ್ದರು. ಇದೇ ಗರಳಪುರೀ ಶಾಸ್ತ್ರಿಗಳು ತಮ್ಮ ಅಳಿಯಂದಿರಾದ ಕೆಂಪುರಾಮಪಂಡಿತರಿಗೆ ಅರಮನೆಯ ಶಿಲಾಯಂತ್ರ ಮುದ್ರಾಶಾಲೆಯಲ್ಲಿ ಅಚ್ಚುಹಾಕಿಸಿದ್ದ ಬಾಹಟ ಗ್ರಂಥವನ್ನು ಸಂಪೂರ್ಣವಾಗಿ ಪಾಠ ಹೇಳಿದ್ದರು[50]. ಕ್ರಿ.ಶ. ಸುಮಾರು 1894ರಲ್ಲಿ ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವೈದ್ಯವಿಭಾಗವನ್ನು ಆರಂಭಿಸಿದ ಮಹಾರಾಜರು, ಅದಕ್ಕೆ ಪುಟ್ಟಸ್ವಾಮಿ ಪಂಡಿತರನ್ನು ಪ್ರಧಾನಾಧ್ಯಾಪಕರನ್ನಾಗಿ ನೇಮಿಸಿದರು. ಈ ವಿಭಾಗದ ಮೊದಲ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಕೆಂಪುರಾಮ ಪಂಡಿತರು ಪುಟ್ಟಸ್ವಾಮಿ ಪಂಡಿತರ ಪ್ರಧಾನ ಶಿಷ್ಯರಾಗಿದ್ದರು[51].

ಕ್ರಿ.ಶ. 1910ನೇ ಇಸವಿಯಲ್ಲಿ ಸಂಸ್ಕೃತ ಮಹಾಪಾಠಶಾಲೆಯ ವೈದ್ಯವಿಭಾಗವು ಅಲ್ಲಿಂದ ಬೇರ್ಪಟ್ಟು ದೇವರಾಜ ಮಾರ್ಕೆಟ್ಟಿನ ಉತ್ತರ ಭಾಗದಲ್ಲಿ ಸ್ವತಂತ್ರವಾಗಿ ನಡೆಯಲು ಏರ್ಪಾಡಾಯಿತು. ಆಗ ಕೆಂಪುರಾಮಪಂಡಿತರು ಮುಖ್ಯ ವೈದ್ಯರಾಗಿದ್ದು, ವಿದ್ಯಾರ್ಥಿಗಳಿಗೆ ಯಶಸ್ವಿಯಾಗಿ ವೈದ್ಯಶಾಸ್ತ್ರವನ್ನು ಬೋಧಿಸುತ್ತಲೂ, ಔಷಧಾಲಯದಲ್ಲಿ ರೋಗಿಗಳನ್ನು ಆಸಕ್ತಿಯಿಂದ ನೋಡುತ್ತಲೂ ಇದ್ದುದರಿಂದ ಬಹು ಬೇಗ ಈ ಔಷಧಾಲಯವು ನಗರದಲ್ಲೆಲ್ಲ ಪ್ರಖ್ಯಾತವಾಗಿ ಕೆಂಪುರಾಮಪಂಡಿತರ ಆಸ್ಪತ್ರೆಯೆಂದೇ ರೂಢಿ ಹೊಂದಿತು.[52]

ಈ ಕೆಂಪುರಾಮೋಪಂಡಿತರು ಚಾವಡಿಬೀದಿಯ ಮನೆಯಲ್ಲಿ ವಾಸವಾಗಿದ್ದರು. ಅವರಿಗೆ ಒಂದು ಗಂಡು ಸಂತಾನ ಆಗಿತ್ತು. — ಸ್ವಾಮಿ ಎಂದು ಆತನ ಹೆಸರಿದ್ದಿರಬೇಕು — ಚಿಕ್ಕ ವಯಸ್ಸಿನಲ್ಲಿಯೇ ಆತ ತೀರಿಕೊಂಡಿದ್ದ. ಇವರ ಮಗಳು ಲಕ್ಷ್ಮೀನರಸಮ್ಮ. ಆಕೆ ನೋಡಲು ತುಂಬಾ ಕೆಂಪುಕೆಂಪಾಗಿದ್ದರು. ಇವರ ಪತಿ ಡಿ. ವೆಂಕಟಾಚಲಯ್ಯ. ಈ ದಂಪತಿಗಳಿಗೆ ಒಬ್ಬ ಗಂಡುಮಗ — ವೆಂಕಟಸುಬ್ಬಯ್ಯ. ನಾಲ್ಕು ಜನ ಹೆಣ್ಣುಮಕ್ಕಳು. ಅವರಲ್ಲಿ ಒಬ್ಬರ ಹೆಸರು ಮಂಗಳ ಗೌರಮ್ಮ. ವ್ಯವಹಾರನಾಮ ತಂಗಮ್ಮ. ಈ ವೆಂಕಟಸುಬ್ಬಯ್ಯನವರಿಗೆ ವೆಂಕಟರಮಣ, ವೆಂಕಟರಾಮು, ವೆಂಕಟಶ್ಯಾಮಣ್ಣ ಮತ್ತು ವೆಂಕಟಗಿರಿ — ಎಂಬ ನಾಲ್ಕು ಜನ ಮಕ್ಕಳಲ್ಲಿ ಇಬ್ಬರು ಸ್ವರ್ಗವಾಸಿಗಳಾಗಿದ್ದು ಉಳಿದಿಬ್ಬರು ವೆಂಕಟರಮಣ ಮತ್ತು ವೆಂಕಟಶ್ಯಾಮಣ್ಣ ಎಂಬುವರು ಮೈಸೂರಿನಲ್ಲಿ ವಾಸವಾಗಿದ್ದಾರೆ. ತಂಗಮ್ಮನವರ ಮಗಳು ಲಲಿತಮ್ಮನವರು ಬೆಂಗಳೂರಿನಲ್ಲಿ ವಾಸ್ತವ್ಯವಿದ್ದಾರೆ. ಇವರ ಮಗ ಪ್ರಭಾಶಂಕರ ನಾಡಿಗ್ ಖಾಸಗಿ ಸಂಸ್ಥೆಯೊಂದರಲ್ಲಿ ಹಿರಿಯ ಟೆಲಿಕಾಂ ಅಧಿಕಾರಿ. ರಾಕೇಶ, ರಕ್ಷಾ — ಇವರ ಪುಟಾಣಿ ಮಕ್ಕಳು [53].

ಕೆಂಪುನಾರಾಯಣ ಕವಿಯ ಮೊಮ್ಮಗನ ಮಗನಾದ ಕೆಂಪುರಾಮೋಪಂಡಿತರಿಗೆ ಗಂಡು ಸಂತಾನವಿಲ್ಲದೇಹೋದರೂ, ಹೆಣ್ಣುಮಗಳ ವಂಶಸ್ಥರು ಇಂದು ಒಳ್ಳೆಯ ಸ್ಥಾನಮಾನದಲ್ಲಿದ್ದಾರೆಂಬುದು ಸಂತೋಷದ ಸಂಗತಿಯಾಗಿದೆ.

●●●●● ●●●●●

ಸಂತತಿ ನಕ್ಷೆ

- ರಾಮಾಶಾಸ್ತ್ರಿಗಳು ([illegible])
  - ಕೆಂಪು ಶಾಸ್ತ್ರಿಗಳು (ಜ. 1773 ?) (ಕೆಂಪುನಾರಾಯಣ (ಶಾಸ್ತ್ರಿ)) — ಈ ಗ್ರಂಥದ ಕರ್ತೃ
    - ಕೆಂಪು ರಾಮಾ ಶಾಸ್ತ್ರಿಗಳು (ಆಸ್ಥಾನ ವೈದ್ಯಪಂಡಿತರು)
      - ಸುಬ್ಬಣ್ಣನವರು (ಸುಬ್ರಹ್ಮಣ್ಯ)(ಜ. 1836 ?) (ಗರಳಪುರೀ ಶಾಸ್ತ್ರಿಗಳ ತಂಗಿಯ ಗಂಡ)
        - ಕೆಂಪುರಾಮಾ ಪಂಡಿತರು (ಜ.ಸು. 1860) (ಗರಳಪುರೀ ಶಾಸ್ತ್ರಿಗಳ 2ನೇ ಮಗಳ ಗಂಡ)
          - ಮಗ ಸ್ವಾಮಿ (ಚಿಕ್ಕವಯಸ್ಸಿನಲ್ಲಿಯೇ ಮೃತ)
          - ಮಗಳು ಲಕ್ಷ್ಮೀನರಸಮ್ಮ (ಮ. 1955)
            - ಮಗ ವೆಂಕಟಸುಬ್ಬಯ್ಯ
              - ಮಕ್ಕಳು
                - 4 ಗಂಡು
                  1. ವೆಂಕಟರಮಣಯ್ಯ
                  2. ವೆಂಕಟರಾಮಯ್ಯ (ಬದುಕಿಲ್ಲ)
                  3. ವೆಂಕಟಶಾಮಯ್ಯ
                  4. ವೆಂಕಟಗಿರಿ (ಬದುಕಿಲ್ಲ)
                - 1 ಹೆಣ್ಣು ಸೀತಮ್ಮ (ಬದುಕಿಲ್ಲ)
            - ನಾಲ್ಕು ಜನ ಹೆಣ್ಣುಮಕ್ಕಳು
              - 1. ತಂಗಮ್ಮ (ಮಂಗಳ ಗೌರಮ್ಮ ಮ. 1983)
                - ಲಲಿತಮ್ಮ (ಜ. 15–7–1924)
                  - ಪ್ರಭಾಶಂಕರ
                    - ರಾಕೇಶ
                    - ರಕ್ಷಾ

ಇನ್ನಷ್ಟು ವಿವರಗಳು ಕೊನೆಯ ಅನುಬಂಧದಲ್ಲಿದೆ.

ಗ್ರಂಥ ಕರ್ತೃತ್ವ

ಈಗ ತಿಳಿದಿರುವ ಮಟ್ಟಿಗೆ 'ಮುದ್ರಾಮಂಜೂಷ' ವು ಕೆಂಪುನಾರಾಯಣನ ಏಕೈಕ ಕೃತಿ. ಗ್ರಂಥಾಂತ್ಯದಲ್ಲಿ ಆತನು –

ಶಾಲಿವಾಹನ ಶರತ್ಸು ಗತಾಸು ಬಾಣ ಯುಗ ಮುನೀಂದು ಸಂಖ್ಯಾಸು ।
ನಾರಾಯಣೇನ ರಚಿತಂ ಮುದ್ರಾಮಂಜುಷಾಹ್ವಯಂ ಕಾವ್ಯಂ ॥

(ಬಾಣ – ಐದು, ಯುಗ – ನಾಲ್ಕು, ಮುನಿ – ಏಳು, ಇಂದು – ಒಂದು. ಈ ಸಂಖ್ಯೆಯನ್ನು ಬಲದಿಂದ ಎಡಕ್ಕೆ ಓದಿದಾಗ ೧೭೪೫ ಬರುತ್ತದೆ. ಇದು ಶಾಲಿವಾಹನ ಶಕೆ ವರ್ಷ). ಎಂದಿರುವುದರಿಂದ ಇದನ್ನು ~~ಶಾ.ಶ. ವರ್ಷ ೧೭೪೫~~ ಅಂದರೆ ಕ್ರಿ.ಶ. ವರ್ಷ 1823ರಲ್ಲಿ ಬರೆದು ಪೂರ್ತಿಗೊಳಿಸಿದ್ದಾನೆಂದು ಗೊತ್ತಾಗುವುದು.

ಆತನ ವಂಶಸ್ಥರಲ್ಲಿ ದೊರೆತ ವಿವಿಧ ತಾಳೆಗರಿ ಗ್ರಂಥ (ವಿವರಗಳನ್ನು ಹಿಂದೆ ಹೇಳಿದೆ ಅಡಿಟಿಪ್ಪಣಿ 40) ಗಳೆಲ್ಲ ಕವಿಯ ಸಂಗ್ರಹದವುಗಳೆಂದು ಹಿಂದೆಯೇ ಗಮನಿಸಿದ್ದೇವೆ. ಈ ಹಸ್ತಪ್ರತಿಗಳಲ್ಲಿ ವಿವಿಧ ಕೋಶಗಳು, ನಿಘಂಟುಗಳು, ವೈದ್ಯ ಗ್ರಂಥಗಳು, ರಾಮಾಯಣ, ಮಹಾಭಾರತ, ಶಿಶುಪಾಲ ವಧೆ ಮೊದಲಾದ ಕಾವ್ಯಗಳಿದ್ದು – ಇವುಗಳಲ್ಲಿ ಈತನ ಸ್ವರಚಿತ ಕೃತಿಗಳೆಷ್ಟು, ಸಂಗ್ರಹಿಸಿಟ್ಟುಕೊಂಡ ಅನ್ಯರ ಕೃತಿಗಳೆಷ್ಟು – ಎಂಬುದನ್ನು ನಿರ್ಣಯಿಸುವುದು ಕಷ್ಟದ ವಿಷಯವಾಗಿದೆ. ಕೆಲವು ಕೃತಿಗಳು ನಂದಿನಾಗರಿ ಲಿಪಿಯಲ್ಲಿದ್ದು ಅದೇ ಹೆಸರಿನ ಕೃತಿಗಳು ಕನ್ನಡ ಲಿಪಿಯಲ್ಲೂ ಇರುವುದನ್ನು ಗಮನಿಸಿದರೆ ಸಂಸ್ಕೃತದಲ್ಲಿಯ ಮೂಲ ಕೃತಿಗಳನ್ನು ಈತ ಕನ್ನಡಕ್ಕೆ ಅನುವಾದಿಸಿಯೋ ರೂಪಾಂತರಗೊಳಿಸಿಯೋ ತಂದಿರಬಹುದೇ ಎಂಬ ಅನುಮಾನವು ಮೂಡಿಬರುವುದು. ಇದನ್ನು ಸಮರ್ಥಿಸುವಂತೆ ಆತನ ಸಂಗ್ರಹದಲ್ಲಿ 'ವಾಲ್ಮೀಕಿ ರಾಮಾಯಣ', 'ಮುದ್ರಾರಾಕ್ಷಸ' ಗಳು ನಂದಿನಾಗರಿ ಲಿಪಿಯಲ್ಲಿದ್ದಂತೆ 'ಚಂಪೂರಾಮಾಯಣ', 'ಮುದ್ರಾಮಂಜೂಷ' ಗಳು ಕನ್ನಡ ಲಿಪಿಯಲ್ಲಿವೆ. ಇದರಿಂದ 'ಮುದ್ರಾಮಂಜೂಷ' ದ ರಚನೆಯ ಸಂದರ್ಭದಲ್ಲಿ ಕವಿಯು 'ಮುದ್ರಾರಾಕ್ಷಸ' ನಾಟಕವನ್ನು ಎದುರಿಗೆ ಇಟ್ಟುಕೊಂಡಿದ್ದನೆಂಬುದನ್ನೂ ಊಹಿಸಬಹುದಾಗಿದೆ.

<u>'ಮುದ್ರಾಮಂಜೂಷ' ದ ವಿವಿಧ ಪ್ರತಿಗಳ ಪರಿಚಯ:</u> ಕೃತಿ ರಚನೆಯಾದ ಐವತ್ತು ವರ್ಷಗಳ ಅನಂತರ ಇದನ್ನು ವೆಸ್ಲೆಯನ ಮಿಶನರಿಯಾದ ಜೆ. ಸ್ಟೀವನ್ಸನ್ನನು (J. STEPHENSON) ಕ್ರಿ.ಶ. 1873ರಲ್ಲಿ ಪ್ರಥಮ ಬಾರಿಗೆ ಮುದ್ರಿಸಿ ಪ್ರಕಟಿಸಿದನು. ಹಾಗೆ ಮುದ್ರಿಸುವಾಗ ಆತ ತಮ್ಮ ಮುನ್ನುಡಿಯಲ್ಲಿ – 'ಕನ್ನಡ ಸಾಹಿತ್ಯದ ಸದ್ಯದ ಪರಿಸ್ಥಿತಿ ಅತೃಪ್ತಿಕರವೆಂಬ ಸರ್ಕಾರದ ಸೂಚನೆಗನುಸಾರ ಉಪಯುಕ್ತವಾದ ಕಥನಕಾವ್ಯವಾಗಿ ಮಾಡಿಸಬೇಕೆಂಬ ದೃಷ್ಟಿಯಿಂದ ಹಿತವಲ್ಲದ ಭಾಗಗಳನ್ನು ಬಿಟ್ಟು, ವೈಪರೀತ್ಯಗಳನ್ನು ತಗ್ಗಿಸಿ, ಅತಿಯಾಗಿರುವ ವಿವರಗಳನ್ನು ಸಂಕ್ಷೇಪಿಸಿ ಮುದ್ರಿಸಿದೆ' ಎಂದಿದ್ದಾನೆ. ಇದರಿಂದಾಗಿ ಈ ಮುದ್ರಿತ ಪ್ರತಿಯಿಂದ ಮೂಲ ಕೃತಿಕಾರನ ಆಶಯವನ್ನು ತಿಳಿಯಲು ಕಷ್ಟವಾಗುವುದು. ಹಾಗಾಗಿ 'ಮುದ್ರಾಮಂಜೂಷ' ದ ಹಸ್ತಪ್ರತಿಗಳನ್ನು ಹುಡುಕಿ ಅಧ್ಯಯನ ಮಾಡಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದಲ್ಲಿ ಎರಡು ಹಸ್ತಪ್ರತಿಗಳಿದ್ದು ಅವುಗಳ ವಿವರ ಇಂತಿದೆ:

<u>1) ಓಲೆಗರಿ ಪ್ರತಿ:</u> ಈ ಓಲೆಗರಿ ಪ್ರತಿಯ ನಂಬರು ಕೆ 79.[54] ಇದರ ಮೇಲ್ಭಾಗದ ಮರದ ಹಲಗೆಯ ಮೇಲೆ ಅಂಟಿಸಿದ 'ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್ ಮೈಸೂರು' ಇದರ ಹೆಸರಿನ ಚೀಟಿಯಲ್ಲಿ 'ಮುದ್ರಾಮಂಜೂಷ, ಕರ್ತೃ ಕೆಂಪುನಾರಾಯಣಶಾಸ್ತ್ರಿ. ಓಲೆಗಳು 209. ಲಿಪಿ ಕನ್ನಡ' ಎಂದಿದೆ.

ಇದರಲ್ಲಿ 199 ಓಲೆಗಳ ವರೆಗೆ ಕನ್ನಡ ಅಂಕಿಯಲ್ಲಿ ನಂಬರು ಹಾಕಿದ್ದು ಮತ್ತೆ ಹತ್ತು ಓಲೆಗಳಲ್ಲಿ ನಂಬರು ಹಾಕಿಲ್ಲ. ಕೊನೆಯ 209ನೆಯ ಓಲೆಯ ಹಿಂಬದಿಯ ತುದಿಯವರೆಗೂ ಬರಹವಿದ್ದು ವಾಕ್ಯ ಅಪೂರ್ಣವಾಗಿದೆ. ಪ್ರತಿಯೊಂದು ಓಲೆಯ ಅಳತೆ 51·5 ಸೆಂ· X 55 ಸೆಂ·ಮೀ· ಆಗಿದೆ. ಓಲೆಯ ಎರಡೂ ಬದಿಗಳಲ್ಲಿ ಬರೆದಿದ್ದು ಸರಾಸರಿ ಎಂಟು ಪಂಕ್ತಿಗಳಿವೆ. ಪ್ರತಿ ಪಂಕ್ತಿಯಲ್ಲಿ ಸರಾಸರಿ 90 ಅಕ್ಷರಗಳಿವೆ. ಓಲೆಗಳ ಮೇಲೆ ಕಂಠದಿಂದ ಬರೆದಿದ್ದು ಮಸಿ ಲೇಪನವನ್ನು ಮಾಡಿದೆ. ಈ ಮಸಿ ಲೇಪನವು ತೆಳ್ಳಗಾಗಿದ್ದುದರಿಂದ ಹಾಳೆಗಳಲ್ಲಿಯ ಬರಹವನ್ನು ಓದಲು ಕಷ್ಟವಾಗುವುದು. ಕೊನೆಯ ಕೆಲವು ಹಾಳೆಗಳಿಗೆ ಮಸಿ ಲೇಪನ ಮಾಡಿಲ್ಲವಾದ ಕಾರಣ ಅವು ಹೊಸತಾಗಿ ಕಾಣುವವು. ಬರೆಯುವುದಕ್ಕಿಂತ ಮೊದಲೇ ಶಿಥಿಲಗೊಂಡ ಹಾಳೆಗಳಲ್ಲಿ ಪೂರ್ಣವಾಗಿ ಬರೆಯದೆ (~~~~~ ~~~~) ಹೀಗೆ ಗೆರೆ ಹಾಕಿ ಬಿಟ್ಟಿದ್ದು ಕಂಡುಬರುತ್ತದೆ. ಕೆಲವು ಹಾಳೆಗಳ ಹಿಂಭಾಗಗಳನ್ನು ಪೂರ್ಣವಾಗಿ ಬಿಟ್ಟಿದ್ದು, ಇವುಗಳಲ್ಲಿ 'ತ್ಯಕ್ತಪುಟ' 'ಈ ಪುಟ ಬರೆಯೂದಕ್ಕೆ ಆಗಲಿಲ್ಲ' ಎಂದೆಲ್ಲ ಸ್ಪಷ್ಟಸೂಚನೆ ಇದೆ. ಕೊನೆಯಲ್ಲಿ ಕೆಲವು ಅಳಕ (ಖಾಲಿ ಹಾಳೆಗಳು) ಗಳಿವೆ. ಒಂದು ಹಾಳೆಯಲ್ಲಿ 'ಶ್ರೀ ಜುಂಡಲಿಂಗಾಯ ನಮಃ' ಎಂದು ಬರೆದಿದ್ದು 'ಸ್ವಾರ್ಥೈರ್ದಗಳ....' ಎಂದು ಗೂಢರೇಖು ಸಂಜ್ಞೆಯ ಬರಹವಿದೆ[55]. ಇದಾದ ಮೇಲೆ ಸುಂದರವಾದ ಕೆಲವು ಚಿತ್ರಗಳಿವೆ. ಹಿಂಬದಿಯಲ್ಲಿ 'ಸಂದೇಹ 93 ವಾಲೆ ಹಿಂದಳ ಪುಟ 8ನೇ ಪಂಗ್ತಿ' ಎಂದಿದ್ದರೂ ಅಲ್ಲಿ ನೋಡುವಾಗ ಅಂತಹ ಸಂದೇಹಕ್ಕೆ ಕಾರಣ ತಿಳಿದುಬರುವುದಿಲ್ಲ.

ಒಟ್ಟಿನ ಮೇಲೆ, ಇಲ್ಲಿನ ಅಕ್ಷರಗಳು ಮುದ್ದಾಗಿದ್ದರೂ ಸ್ಖಾಲಿತ್ಯಗಳು ತುಂಬಾ ಇವೆ. ಅಲ್ಲಲ್ಲಿ ಲಿಪಿಕಾರ ಹೊಡೆದು, ತಿದ್ದಿ ಸರಿಮಾಡಿದ್ದು ಎಡ ಬಲ ಮೇಲ್ಭಾಗಗಳಲ್ಲಿ — ಬಿಟ್ಟುಹೋದ ಅಂಶಗಳನ್ನು ಸಣ್ಣಕ್ಷರಗಳಲ್ಲಿ ಬರೆದದ್ದು ಕಂಡುಬರುತ್ತದೆ. ಇದು ಹಸ್ತಪ್ರತಿಯ ಸೊಬಗಿಗೆ ಭಂಗ ತಂದರೂ ಅದರ ಶುದ್ಧತೆಯನ್ನು ಕಾಪಾಡಿಕೊಳ್ಳುವ ಪ್ರಯತ್ನದ ದೃಷ್ಟಿಯಿಂದ ಮೆಚ್ಚತಕ್ಕ ಅಂಶವಾಗಿದೆ. ಓಲೆಗಳನ್ನು ದಪ್ಪ ಮರದ ಹಲಗೆಯ ರಕ್ಷಾ ಕವಚಗಳಿಂದ ಮುಚ್ಚಿದೆ. ಓಲೆ ಗರಿಗಳ ಎರಡೂ ತುದಿಗಳಲ್ಲಿ ಸ್ವಲ್ಪ ಸ್ವಲ್ಪ ಸ್ಥಳ ಬಿಟ್ಟು ಎರಡು ರಂಧ್ರಗಳನ್ನು ಮಾಡಿದ್ದು, ಆ ರಂಧ್ರಗಳಿಗೆ ದಾರವನ್ನು ಪೋಣಿಸಿ ಓಲೆಗರಿಗಳಿಗೆ ಧಕ್ಕೆಯಾಗದಂತೆ ರಕ್ಷಾ ಕವಚಗಳಿಗೆ ಸುತ್ತಿದೆ. ಇದು ವಿಶೇಷ ಕಲಾವಂತಿಕೆಯಿಂದ ಕೂಡಿಲ್ಲದಿದ್ದರೂ, ಅಂಚಿನಲ್ಲಿ ಪಟ್ಟಿಗಳಿವೆ.

ಇಡೀ ಗ್ರಂಥವನ್ನು ಒಬ್ಬನೇ ವ್ಯಕ್ತಿ ಪ್ರತಿ ಮಾಡಿದ್ದಿರಬಹುದಾದರೂ ಅತನು ತನ್ನ ಬಗ್ಗೆ

'ಏನನ್ನೂ ಹೇಳಿಕೊಂಡಿಲ್ಲ. ಹೀಗಾಗಿ ಪ್ರತಿಕಾಲ, 'ಲಿಕಾರ, ಅಂಜನಕಾರರ ಹೆಸರುಗಳು ಅವರ ಕಾಲ, ಊರು, ಪ್ರತಿ ಮಾಡಿದ ಕಾಲ, ಇದಕ್ಕೆ ಉಪಯೋಗಿಸಿದ ಮೂಲ ಮಾತೃಕೆ — ಇತ್ಯಾದಿಗಳ ಬಗ್ಗೆ ಯಾವುದೇ ಮಾಹಿತಿ ಸಿಗುವುದಿಲ್ಲ. ಈ ಪ್ರತಿಕಾರನು ಹೆಚ್ಚಿನ ಅಧ್ಯಾಯಗಳ ಆರಂಭದಲ್ಲಿ ಮಾಡಿದ ದೇವತಾ ಸ್ತುತಿಯ ಆಧಾರದ ಮೇಲೆ ಈತನು ವೀರಶೈವ ಮತಸ್ಥನಿರಬೇಕೆಂದು ಊಹಿಸಬಹುದಾಗಿದೆ.

ಈ 'ಓಲೆಗರಿ ಪ್ರತಿಯ ಮೊದಲ ಹಾಳೆಯ ಎಡಭಾಗದ ಅಡ್ಡಬದಿಯಲ್ಲಿ — ಕೆಳಗಿನಿಂದ ಮೇಲಕ್ಕೆ 'ಮುದ್ರಾಮಂಜೂಷ' ಎಂದು ಬರೆದಿದೆ. ಮೇಲ್ಭಾಗದ ತುದಿಯಲ್ಲಿ 'ಶ್ರೀಗಣಾಧಿಪತಯೇ ನಮಃ ಶ್ರೀ ಶಾರದಾ ಗುರುಭ್ಯೋ ನಮಃ' ಎಂದಿದ್ದು ಮತ್ತೆ ಗ್ರಂಥವು ಅವತರಣಿಕೆಯೊಂದಿಗೆ ಆರಂಭವಾಗುವುದು. ಇಡೀ ಕಥೆಯು ಹದಿನೆಂಟು ಆಶಯ (ಅಧ್ಯಾಯ)ಗಳಲ್ಲಿ ವಿಸ್ತರಿಸಲ್ಪಟ್ಟಿದ್ದು ಪ್ರತಿ ಆಶಯದ ಕೊನೆಯಲ್ಲಿ ಅಯಾ ಆಶಯದ ಹೆಸರಿನೊಂದಿಗೆ ಮೂಲ ಗ್ರಂಥದ ಕೃತಿಕಾರ ಪ್ರಶಸ್ತಿ ಇದೆ. ಹದಿನೆಂಟನೆಯ ಆಶಯವು ಅಪೂರ್ಣವಿದ್ದು ರಾಕ್ಷಸನು ಚಾಣಕ್ಯನಿದ್ದೆಡೆಗೆ ಬರುವಲ್ಲಿಯವರೆಗಿನ ಕಥೆ ಮಾತ್ರ ಇದೆ. ಮುಂದೆ ಕೆಲವು ಖಾಲಿ ಹಾಳೆಗಳಿರುವುದರಿಂದ ಯಾವುದೋ ವಿಘ್ನ ಬಂದು ಬರವಣಿಗೆ ನಿಂತುಹೋಯಿತೆಂದು ಊಹಿಸಬಹುದಾಗಿದೆ.

ಹೀಗಾಗಿ ಶುದ್ಧಪಾಠ ನಿರ್ಣಯಕ್ಕೆ ಉಳಿದ ಪ್ರತಿಗಳಿಗೆ ಪೂರಕವಾಗಿ ಇದನ್ನು ಉಪಯೋಗಿಸಿ ಕೊಳ್ಳಲಾಗಿದೆ.

<u>ಕಾಗದದ ಪ್ರತಿ:</u> ಈ ಪ್ರತಿಯೂ ಮೈಸೂರು ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದಲ್ಲಿದೆ. ಇದರ ನಂಬ್ರ ಕೆ.ಬ. 529. ಇದರ ಆರಂಭದಲ್ಲಿ ಕನಿಷ್ಟಪಕ್ಷ ಒಂದು ಹಾಳೆ ಲುಪ್ತವಾಗಿದ್ದು ಪ್ರತಿಕಾರ ಆರಂಭದಲ್ಲಿ 'ಏನು ಬರೆದಿದ್ದಾನೆಂದು ತಿಳಿದುಬರುವುದಿಲ್ಲ. ಪ್ರಕೃತ 305 ಹಾಳೆಗಳಿದ್ದು ಅವುಗಳ ಎರಡೂ ಬದಿಯಲ್ಲಿ ಬರೆಯಲಾಗಿದೆ. ಈ ಕಾಗದಗಳನ್ನು ಒಟ್ಟಿಗೆ ಕಟ್ಟಿದ್ದು ಮಗ್ಗುಲಲ್ಲಿ ಹೊಲಿಗೆ ಹಾಕಲಾಗಿದೆ. ಇದರಲ್ಲಿಯ ಅಕ್ಷರಗಳು ಅಂದವಾಗಿದ್ದು ತಪ್ಪುಗಳು ಕಡಿಮೆ. ಇಲ್ಲಿಯ ಬರಹವನ್ನು ಸೂಕ್ಷ್ಮವಾಗಿ ಗಮನಿಸಿದರೆ ಕನಿಷ್ಟ ಪಕ್ಷ ಇಬ್ಬರು ಲಿಪಿಕಾರರು ಇದನ್ನು ಪ್ರತಿ ಮಾಡಿದಂತೆ ಕಂಡುಬರುವುದು. ಕಥೆಯು 'ಓಲೆಗರಿ ಪ್ರತಿಯಲ್ಲಿದ್ದಂತೆಯೇ ಹದಿನೆಂಟು ಆಶಯಗಳಲ್ಲಿ ಹರಡಿಕೊಂಡಿದೆ. ಲಿಪಿಕಾರ ತನ್ನ ಸ್ವಂತ ವಿಷಯವನ್ನಾಗಲೀ, ಕೃತಿಯನ್ನು ಪ್ರತಿ ಮಾಡಿದ ವರ್ಷವನ್ನಾಗಲಿ —'ಏನೊಂದನ್ನೂ ತಿಳಿಸಿಲ್ಲ. ಆಶಯಗಳ ಆರಂಭದಲ್ಲಿ 'ಶ್ರೀ ಗುಂಜಾನರಸಿಂಹಾಯ ನಮಃ' 'ಶ್ರೀ ಸಾಂಬ ಸದಾಶಿವಾಯ ನಮಃ' ಇತ್ಯಾದಿ ದೇವತಾ ಸ್ತುತಿಗಳಿವೆ.

ಮೊದಲ ಹಾಳೆ ಇಲ್ಲವಾದ್ದರಿಂದ ಪಾಟಲೀಪುರದ ವರ್ಣನೆಯ ಮಧ್ಯಭಾಗದಿಂದ ಕಥೆಯು ಮುಂದು ವರಿದಿದೆ. ಗ್ರಂಥದ ಕೊನೆಯಲ್ಲಿ ಆಶ್ರಯದಾತನನ್ನು ಹೊಗಳುವ ಶ್ಲೋಕವೊಂದಿದೆ. ಮತ್ತೆ ಎರಡು ಆದ್ಯಾವೃತ್ತಗಳಿದ್ದು ಒಂದರಲ್ಲಿ ಕೃತಿ ಪೂರ್ಣಗೊಂಡ ವರ್ಷ, ಮತ್ತೊಂದರಲ್ಲಿ ವಿದ್ವಜ್ಜನರ ಹೊಗಳಿಕೆ ಇವೆ.

ಈ ಎರಡೂ ಹಸ್ತಪ್ರತಿಗಳಲ್ಲಿ ಅಕಾರಕ್ಕೆ ಎಕಾರ ಪ್ರಯೋಗ, ಹ್ರಸ್ವ ದೀರ್ಘಗಳ, ಅಲ್ಪಪ್ರಾಣ

ಮಹಾಪ್ರಾಣಗಳ ವ್ಯತ್ಯಸ್ತ ಪ್ರಯೋಗ, ನಣ — ಲಳ — ಶಷಸಗಳ ಅಭೇದ ಪ್ರಯೋಗ ಮೊದಲಾದ ಕಾಗುಣಿತದ ತಪ್ಪುಗಳು ಕಂಡುಬಂದರೂ ಉಳಿದಂತೆ ಇವುಗಳಲ್ಲಿ ಹೆಚ್ಚಿನ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. ಇವುಗಳಲ್ಲಿ ಕಾಗದದ ಪ್ರತಿಯು ಹೆಚ್ಚು ಶುದ್ಧಪಾಠವುಳ್ಳದ್ದಾಗಿದೆ.

<u>ಲಲಿತಮ್ಮನವರಲ್ಲಿದ್ದ ಹಸ್ತಪ್ರತಿ:</u> ಕವಿಯ ವಂಶಸ್ಥರಾದ ಶ್ರೀಮತಿ ಲಲಿತಮ್ಮನವರು ಒದಗಿಸಿದ ಹಸ್ತಪ್ರತಿಗಳ ಸಂಗ್ರಹದಲ್ಲಿ ' ಮುದ್ರಾಮಂಜೂಷ' ದ ತಾಳೆಗರಿ ಪ್ರತಿಯೊಂದಿದ್ದು ಅದು ಹಲವು ಕಾರಣಗಳಿಂದ ಬಹು ಮಹತ್ವದ ಪ್ರತಿಯಾಗಿದೆ.

ಪರಿಚಯ: ಈಗ ಪ್ರಕಟವಾಗಿರುವ ವಿವಿಧ ಸಂಸ್ಥೆಗಳ ' ಹಸ್ತಪ್ರತಿಸೂಚಿ' ಗಳಲ್ಲಿ ಈ ಪ್ರತಿಯ ಬಗ್ಗೆ ಮಾಹಿತಿ ಸಿಗುವುದಿಲ್ಲ. ಇದರಲ್ಲಿ 209 + 5 ಹಾಳೆಗಳಿದ್ದು ಎರಡೂ ಬದಿಯಲ್ಲಿ ದಪ್ಪವಾದ ಮರದ ಹಲಗೆಗಳ ರಕ್ಷಾ ಕವಚವಿದೆ. ಮೇಲ್ಭಾಗದ ಹಲಗೆಯ ಒಳಭಾಗದಲ್ಲಿ ರಂಗೋಲಿಯನ್ನು ಹೋಲುವಂತಹ ಚಿತ್ರವನ್ನು ಬಿಡಿಸಲಾಗಿದೆ. ಕೆಳಗಿನ ಹಲಗೆಯ ಒಳಭಾಗದಲ್ಲಿ ಒಂದು ಬಳ್ಳಿ ಹಾಗೂ ಹೂವಿನ ಗಿಡದ ಚಿತ್ರವನ್ನು ಕೊರೆಯಲಾಗಿದೆ. ತಾಳೆ ಗರಿಗಳು ಹಾಗೂ ಮರದ ಪಟ್ಟಿಗಳಲ್ಲಿ ಸಮಾನ ಅಂತರದಲ್ಲಿ ಎರಡು ರಂಧ್ರಗಳನ್ನು ಕೊರೆದಿದ್ದು, ಒಂದರಲ್ಲಿ ಮಾತ್ರ ದಾರವನ್ನು ಹಾಕಿದ್ದು ಹೊರಗಡೆಯಿಂದ ಕಟ್ಟಲಾಗಿದೆ. ಹಲಗೆಯ ಮೇಲ್ಭಾಗದಲ್ಲಿ ಯಾವುದೇ ಬರಹಗಳಾಗಲೀ, ಬರಹಗಳನ್ನು ಅಂಟಿಸಿದ ಚೀಟಿಗಳಾಗಲೀ ಇಲ್ಲ.

ಪ್ರತಿಯೊಂದು ಓಲೆಯ ಎರಡೂ ಬದಿಗಳಲ್ಲಿ ಬರೆದಿದ್ದು, ಸರಾಸರಿ ಒಂಬತ್ತು ಪಂಕ್ತಿಗಳಿವೆ. ಪ್ರತಿ ಪಂಕ್ತಿಯ ಎಡಬಲಗಳಲ್ಲಿ ಮುಂದಿನ ಪಂಕ್ತಿಗಳನ್ನು ಓದಲು ಅನುಕೂಲವಾಗುವಂತೆ ಕನ್ನಡ ಅಂಕಿಗಳನ್ನು ಹಾಕಿದೆ. ಪ್ರತಿ ಪಂಕ್ತಿಯಲ್ಲಿ ಸರಾಸರಿ ತೊಂಬತ್ತು ಅಕ್ಷರಗಳಿವೆ. ಓಲೆಗಳ ಮೇಲೆ ಕಂಠದಿಂದ ಬರೆದಿದ್ದು ಮಸಿ ಲೇಪನವನ್ನು ಮಾಡಿದೆ. ಪ್ರತಿ ಓಲೆಯ ಉದ್ದಗಲ ಸು. 52.5 X 5 ಸೆಂ.ಮೀ. ಇದೆ. ಈ ಗ್ರಂಥದ ಮೊದಲೆರಡು ಹಾಳೆಗಳಲ್ಲಿ, ನಾಲ್ಕನೆಯ ಹಾಳೆಯಲ್ಲಿ ಮತ್ತು ಕೊನೆಯಲ್ಲಿಯ ಹಾಳೆಯಲ್ಲಿ — ಹೀಗೆ ಒಟ್ಟು ನಾಲ್ಕು ಸಲ ಗ್ರಂಥಾರಂಭವನ್ನು ಮಾಡಿದ್ದು ಕಂಡುಬರುತ್ತದೆ. ಈ ಎಲ್ಲಾ ನಾಲ್ಕು ಹಾಳೆಗಳಲ್ಲಿ ಸಮಾನವಾಗಿ ದೇವತಾ ಸ್ತುತಿ ಆದ ನಂತರ —

> ಶ್ರೀ: ಪಾಂಯಾನ ಮಹೀಶೂರ ಕೃಷ್ಣರಾಜೇಪ್ಸಿತಾರ್ಥದಂ ।
> ಮಹಾಬಲಾದ್ರಿನಿಲಯಂ ಮಹೇಶಾರ್ಧಾಂಗ ರೂಪಿಣ: ॥

ಎಂಬ ಶ್ಲೋಕವಿದೆ. ಇದು ಮುದ್ರಿತ ಪ್ರತಿಯಲ್ಲಿದ್ದು ಮೈಸೂರು ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ಓಲೆಗರಿ ಪ್ರತಿಯಲ್ಲಿಲ್ಲ.

ಈ ನಾಲ್ಕು ಹಾಳೆಗಳಲ್ಲಿರುವ ಅವತರಣಿಕೆಗಳಲ್ಲಿ ಭಿನ್ನಪಾಠಗಳಿವೆ. ಮೊದಲನೆಯದರಲ್ಲಿ ಉತ್ತಮಪುರುಷವಾಚಕ ನಿರೂಪಣೆಯಿದ್ದು ಕೆಂಪುನಾರಾಯಣನ ಹೆಸರನ್ನು ಹೇಳಿಲ್ಲ. ಕಥೆಯು ನಿಜವಾಗಿ ಆರಂಭವಾಗುವ ನಾಲ್ಕನೆಯ ಹಾಳೆಯಲ್ಲಿ ಅವತರಣಿಕೆಯನ್ನು ಪ್ರಥಮ ಪುರುಷವಾಚಕ (Third Person)ದಲ್ಲಿ ಹೇಳಿದ್ದು ಕೊನೆಯಲ್ಲಿ ' ಕೆಂಪುನಾರಾಯಣನೆಂಬ ಕವಿಯು ... ಪೇಳ್ವುದೆಂತೆನೆ' ಎಂದಿದೆ.

ಅಂದರೆ ಮೊದಲನೆಯ ಹಾಳೆಯು ಈ ಮೊದಲು ಉಪಲಬ್ಧವಿದ್ದ ಹಸ್ತಪ್ರತಿಯ ಪಾಠದಂತೆಯೂ, ನಾಲ್ಕನೆಯ ಹಾಳೆಯ ಪಾಠವು ಮುದ್ರಿತ ಪ್ರತಿಯ ಪಾಠದಂತೆಯೂ ಇವೆ. ಹೀಗೆ ಎರಡು ಭಿನ್ನಪಾಠಗಳು ಈಗ ಒಂದೇ ಹಸ್ತಪ್ರತಿಯಲ್ಲಿ ದೊರೆತಿರುವುದು ಕುತೂಹಲದ ಸಂಗತಿಯಾಗಿದೆ.

<u>ಲಿಪಿಕಾರ ಪ್ರಶಸ್ತಿ:</u> ಗ್ರಂಥಾರಂಭದ ಮೂರನೆಯ 'ಒಲೆಯಲ್ಲಿ ಲಿಪಿಕಾರ — ಬಗ್ಗೆ ಮಾಹಿತಿ ಸಿಗುವುದು. ಈ 'ಒಲೆಯ ಒಂದು ಬದಿಯಲ್ಲಿ' ಶ್ರೀರಾಮಾಯ ನಮಃ' ಎಂದು ಮೂರು ಸಲ ಬರೆದಿದೆ. ಮತ್ತೊಂದು ಬದಿಯಲ್ಲಿ ' ನಂಜುಂಡನಿಗೆ ವಾಲೆ ನೂಂದದ್ದು ಖಾತೆಯಿಂದ ೨ ಆವರ್ತಿಗೆ ಕೊಟ್ಟಿದೆ. ಸುಬ್ಬಣ್ಣನಿಗೆ ೯ ವರ್ತಿಗೆ ಕೊಡಲು ಇದೆ. ನಂಜಪ್ಪನಿಗೆ... ಪ್ರಥಮದಲ್ಲಿ ಕಿತ್ತೂರ ರಾಶ್ಯೆಯನಿಗೆ ಶಿರಃ ೨ ವಾಲೆ Expaid ದೆ ... " ಎಂದಿದೆ. ಮತ್ತೆ ಸ್ವಲ್ಪ ಜಾಗ ಬಿಟ್ಟು —' ಗುಬ್ಬಿಗೆ ೪೪ ರಿಂದಾ ೧೦೬ ವರೆಗೆ ವೆಂಕಟ ಶೆಟ್ಟಿಗೆ ೧೦೭ ರಿಂದಾ ೧೨೨ ವರೆಗೆ ನನಗೆ ೧೨೩ ರಿಂದ ಆಖೈರುವರೆಗೆ' ಎಂದೂ ಬರೆದಿದೆ.

ಇದರಿಂದ ನಂಜುಂಡ, ಸುಬ್ಬಣ್ಣ, ನಂಜಪ್ಪ, ಕಿತ್ತೂರ ರಾಶ್ಯೆಯ, ಗುಬ್ಬಿ (ಯಾವ?), ವೆಂಕಟ ಶೆಟ್ಟಿ — ಇವರೆಲ್ಲ ಲಿಪಿಕಾರರಾಗಿದ್ದು ಹೀಗೆ ಬರೆದಾತ (ನಾವು) ಅವರ ಮುಖ್ಯಸ್ಥನಂತೆ ಕಂಡುಬರುತ್ತದೆ. ಇಲ್ಲಿ ಗುಬ್ಬಿಯ ಪ್ರಸ್ತಾಪವಿರುವುದರಿಂದ ಮುದ್ರಿತ ಪ್ರತಿಯನ್ನು ಪ್ರಕಟಿಸಿದ ಜೆ. ಸ್ಟೀವೆನ್ಸನ್ನನು, ಇಲ್ಲಿಯ ಪ್ರತಿಕಾರರ ಸಂಪರ್ಕವಿಟ್ಟುಕೊಂಡಿದ್ದಿರಬಹುದೆಂದು ಊಹಿಸಲು ಅವಕಾಶವಿದೆ. 'ಏಕೆಂದರೆ, ಆತನು ಕ್ರಿ.ಶ. 1866 — 67 ರಲ್ಲಿ ಗುಬ್ಬಿಯಲ್ಲಿಯೂ, 1868 ರಿಂದ 1873 (ಈ ಕೃತಿ ಮುದ್ರಿತವಾದ ವರ್ಷ) ದ ತನಕ ತುಮಕೂರಿನಲ್ಲಿಯೂ ಇದ್ದು ಕನ್ನಡ ಗ್ರಂಥಗಳ ಸಂಪಾದನೆ, ಪ್ರಕಟಣೆಯ ಕಾರ್ಯ ಮಾಡುತ್ತಿದ್ದನು.[56] ಅಲ್ಪಸ್ವಲ್ಪ ಅಕ್ಷರ ಸ್ಖಾಲಿತ್ಯಗಳಿದ್ದರೂ ಇದು ಪೂರ್ಣಪಾಠವಿರುವ 'ಏಕೈಕ ಹಸ್ತಪ್ರತಿಯಾಗಿದೆ.

<u>ಮುದ್ರಿತ ಪ್ರತಿಗಳು:</u> ಈ ಹಿಂದೆ ಹೇಳಲಾದಂತೆ ವೆಸ್ಲಿಯನ ಮಿಷನರಿಯಾದ ಜೆ. ಸ್ಟೀವೆನ್ಸನ್ನನು (J STEPHENSON) ಕೃತಿಯನ್ನು ಕ್ರಿ.ಶ. 1873ರಲ್ಲಿ ಮುದ್ರಿಸಿ ಪ್ರಕಟಿಸಿದನು. ಹಾಗೆ ಮುದ್ರಿಸಿ ಪ್ರಕಟಿಸಲು ಆತನು ಉಪಯೋಗಿಸಿಕೊಂಡಿದ್ದಿರಬಹುದಾದ ಮೂಲಪ್ರತಿಯಾಗಲೀ, ಅದರ ಬಗ್ಗೆ ಇತರ ಮಾಹಿತಿಗಳಾಗಲೀ ಸಿಕ್ಕಿಲ್ಲ. ಮತ್ತೆ ಇದು ಎಂಟು ಸಲ ಪುನರ್ ಮುದ್ರಣಗೊಂಡಿದ್ದು, ಅವುಗಳ ಭಿನ್ನತೆ, ವಿಶೇಷತೆಗಳನ್ನು ಗುರುತಿಸಲಾಗುವುದು.

<u>ಪ್ರಥಮ ಮುದ್ರಣ ಕ್ರಿ.ಶ. 1873:</u> ಇದರಲ್ಲಿ 4 + 401 ಪುಟಗಳಿವೆ. ವಿಷಯಾನುಕ್ರಮಣಿಕೆಯು (Content) ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿದೆ. ಪೀಠಿಕೆ (Preface)ಯು ಇಂಗ್ಲಿಷಿನಲ್ಲಿ ಮಾತ್ರ ಇದ್ದು ಮಾಡಿಕೊಂಡ ಬದಲಾವಣೆಯ ಬಗ್ಗೆ ವಿವರಗಳು ಇಂತಿವೆ:

<u>PREFACE</u>

This work is translation, by Kempunārāyana, of the Sanskrit Drama, variously entitled Mudra Rakshasa, Mudra Manjusha' and the

History of Chandragupt and Chanakya.

It has been selected as a Text Book for young men espiring to University honours and, in accordance with a recent minute of Government on the unsatisfactory character of native literatures, really objectionable parts have been omitted[57], extravagances sobered down and tedious details condensed, so as to utilise a really valuable narrative.

The History consists of a well-arranged plot to secure the kingdom of Magadha [58] to Chandragupta, by the overthrow of the rightful heirs, which is eventually accomplished through the intrigues of the Brahman Chānakya.

As a literary work the style is good, the varied incidents interesting, abounding in references to Hindu customs and the book may be read with advantage by Europeans as well as native students.

TUMKUR,
January 1873. J.S.

ಇದಾದಮೇಲೆ, ಹಿಂದೆ ಉದ್ಧರಿಸಲಾದ ಶ್ಲೋಕ ಮತ್ತು ಅವತರಣಿಕೆಗಳೊಂದಿಗೆ ಮೊದಲ ಅಧ್ಯಾಯವು ಆರಂಭವಾಗುವುದು. ಅಧ್ಯಾಯಗಳ ಆರಂಭದಲ್ಲಿ ದೇವತಾಸ್ತುತಿಗಳಿಲ್ಲ. ಬದಲಾಗಿ ಆಯಾ ಆಶಯಗಳ ಹೆಸರನ್ನು ಮೊದಲೇ ಹೇಳಿದೆ (ಹಸ್ತಪ್ರತಿಗಳಲ್ಲಿ ಇವು ಆಶಯದ ಅಂತ್ಯದಲ್ಲಿವೆ). ಗ್ರಂಥದ ಕೊನೆಯಲ್ಲಿ ಗ್ರಂಥಕಾರ ಪ್ರಶಸ್ತಿ, ನಿರ್ಮಾಣದ ಕಾಲ, ಸಜ್ಜನ ಪ್ರಶಂಸೆಗಳಿವೆ. ಪುಟದ ಮಧ್ಯದಲ್ಲಿ ಅಧ್ಯಾಯ ಮುಗಿದಿದ್ದಾಗ ಅದೇ ಪುಟದಲ್ಲಿ ಮುಂದಿನ ಅಧ್ಯಾಯವನ್ನು ಆರಂಭಿಸಿದೆ. ಈ ಮುದ್ರಣದ ಒಂದು ಪ್ರತಿಯು ಮಂಗಳೂರಿನ 'ಕರ್ನಾಟಕ ಥಿಯಾಲಜಿಕಲ್ ಕಾಲೇಜ್' ನಲ್ಲಿದೆ.

<u>ಎರಡನೆಯ ಮುದ್ರಣ 1898:</u> ಮುಖಪುಟದಲ್ಲಿ 'ಮುದ್ರಾಮಂಜೂಷ' ಎಂಬ ಶೀರ್ಷಿಕೆ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿದ್ದು ಇತರ ವಿವರಗಳು ಇಂಗ್ಲಿಷಿನಲ್ಲಿ ಮಾತ್ರ ಇವೆ. ಜಾನ ಸ್ಟೀವೆನ್ಸನ್‌ರಿಂದ ತಿದ್ದಿ ಸಂಪಾದಿಸಿದ್ದೆಂದು ಬರೆದಿದ್ದು ಕೆಳಗಡೆ ಪುನಃ 'ತಿದ್ದಿ ಪರಿಷ್ಕರಿಸಿದ ಹೊಸ ಮುದ್ರಣ' ವೆಂದಿದೆ. ವಿಷಯಾನುಕ್ರಮಣಿಕೆಯು ಮೊದಲ ಮುದ್ರಣದಲ್ಲಿದ್ದಂತೆ ಎರಡೂ ಭಾಷೆಗಳಲ್ಲಿದೆ. ಮುನ್ನುಡಿಯನ್ನು

ಅಂತೆಯೇ ಕೊಟ್ಟಿದೆ. 'ಅರಸರುಂ ಮಂತ್ರಿಗಳುಂ' ಎಂದಿದ್ದನ್ನು 'ಅರಸರೂ ಮಂತ್ರಿಗಳೂ' ಎಂದು ರೂಪ ಬದಲಾಯಿಸಿದ್ದನ್ನು ಕಾಣಬಹುದು.

ಮೂರನೆಯ ಮುದ್ರಣ 1905: ಇದು ಎಲ್ಲಾ ರೀತಿಯಿಂದಲೂ ಎರಡನೆಯ ಮುದ್ರಣದಂತೆಯೇ ಇದೆ. ಮುಖಪುಟದಲ್ಲಿ ಮಾತ್ರ 'ತಿದ್ದಿ ಪರಿಷ್ಕರಿಸಿದ' ಮೂರನೆಯ ಮುದ್ರಣವೆಂದಿದೆ. ಈ ಎರಡು ಮತ್ತು ಮೂರನೆಯ ಮುದ್ರಣದ ಪ್ರತಿಗಳು ಬೆಂಗಳೂರಿನ 'ಯುನೈಟೆಡ್ ಥಿಯಾಲಜಿಕಲ್ ಕಾಲೇಜ್' ನಲ್ಲಿವೆ.

ನಾಲ್ಕನೆಯ ಮುದ್ರಣ 1912: ವಿಶೇಷ ಬದಲಾವಣೆಗಳಿಲ್ಲ. ಗ್ರಂಥದ ಕೊನೆಯಲ್ಲಿ 'ಕಾವ್ಯಗ್ರಂಥ' ಎಂದಿದ್ದರ ಬದಲಾಗಿ 'ಚಂಪೂಗ್ರಂಥ'[59] ವೆಂದಿದೆ. ಈ ಮುದ್ರಣದ ಒಂದು ಪ್ರತಿಯು ಮೈಸೂರಿನ ಡಾ: ಟಿ.ವಿ. ವೆಂಕಟಾಚಲ ಶಾಸ್ತ್ರಿಗಳವರ ಬಳಿಯಿದೆ.

ಐದನೆಯ ಮುದ್ರಣ ~~[illegible]~~ ಇದರಲ್ಲಿ VI+327 ಪುಟಗಳಿವೆ. ವಿಷಯಾನುಕ್ರಮಣಿಕೆಯ ಅನಂತರ ಅವತರಣಿಕೆಗಿಂತ ಮೊದಲು ಎಡ ಬದಿಯ ಒಂದು ಪುಟದಲ್ಲಿ ಸುಮಾರು 60 ಶಬ್ದಗಳ 'ಶುದ್ಧಾಶುದ್ಧ ಪತ್ರ' ವಿದೆ. ಇದರ ಒಂದು ಪ್ರತಿ ಶ್ರೀಮತಿ ಲಲಿತಮ್ಮನವರಲ್ಲಿದೆ.

ಆರನೆಯ ಮುದ್ರಣ 1923: ಮುನ್ನುಡಿ ಬಿಟ್ಟು ಉಳಿದೆಲ್ಲ ಅಂಶಗಳೂ ಕನ್ನಡದಲ್ಲಿವೆ. ಮುನ್ನುಡಿಯ ಅನಂತರ ಇಂಗ್ಲಿಷಿನಲ್ಲಿಯೇ 'ಫ' ಉಪಯೋಗಿಸಬೇಕಾದಲ್ಲೆಲ್ಲಾ 'ಪ' ಅಕ್ಷರ ಪ್ರಿಂಟಾಗಿದೆಯೆಂದೂ ಅನಿವಾರ್ಯ ಕಾರಣಗಳಿಂದಾಗಿ ಉಂಟಾದ ಈ ತಪ್ಪನ್ನು ಕ್ಷಮಿಸಬೇಕೆಂದೂ ಕೇಳಿಕೊಳ್ಳಲಾಗಿದೆ. ಈ ಮುದ್ರಣದ ಪ್ರತಿ ಮಂಗಳೂರಿನ ಕೆ.ಟಿ.ಸಿ.ಯಲ್ಲಿ ಇದೆ.

ಏಳನೆಯ ಮುದ್ರಣ 1929: ನಾನು ನೋಡಿದ ಈ ಪುಸ್ತಕದ ಹೊರಪುಟದಲ್ಲಿ 'ಏಳನೆಯ ಮುದ್ರಣವೆಂತಲೂ, ಒಳಗಿನ ಪುಟದಲ್ಲಿ ಆರನೆಯ ಮುದ್ರಣವೆಂತಲೂ ಇದ್ದಿತು. ಇದರಲ್ಲಿ ಹೆಚ್ಚಿನ ಬದಲಾವಣೆಗಳಿಲ್ಲವೆಂದು ತಿಳಿಯ ಬಹುದು. ಬೆಂಗಳೂರಿನ ಯು.ಟಿ.ಸಿ.ಯಲ್ಲಿ ಈ ಪ್ರತಿ ಇದೆ.

ಎಂಟನೆಯ ಮುದ್ರಣ 1945: ಹಿಂದಿನ ಮುದ್ರಣಗಳಂತೆಯೇ ಇದೆ. ಸುಳ್ಯದ ಶ್ರೀ ತುದಿಯಪ್ಪ ವಿಷ್ಣಯ್ಯರಲ್ಲಿ ಈ ಮುದ್ರಣದ ಪ್ರತಿ ಇದೆ.

ಒಂಬತ್ತನೆಯ ಮುದ್ರಣ 1953: ಗ್ರಂಥಾರಂಭದ ವಿವರಗಳೆಲ್ಲ ಕನ್ನಡದಲ್ಲಿವೆ. ಇಲ್ಲಿಯ ವರೆಗಿನ ಆವೃತ್ತಿಗಳಲ್ಲಿ ಇಂಗ್ಲಿಷಿನಲ್ಲಿ ಕೊಟ್ಟಿದ್ದ ಮುನ್ನುಡಿಯನ್ನು ಮೊದಲ ಬಾರಿಗೆ ಕನ್ನಡದಲ್ಲಿ ಕೊಟ್ಟಿದೆ. ಮೊದಲ ಮುದ್ರಣದ ಮುನ್ನುಡಿಯ ಕೊನೆಯಲ್ಲಿ ಇಂಗ್ಲಿಷಿನಲ್ಲಿದ್ದ ಜೆ.ಎಸ್. ಗೆ ಬದಲಾಗಿ ಇಲ್ಲಿ ಜೆ.ಸಾ. ಎಂದು ಬರೆದಿದೆ. ಇಂಗ್ಲಿಷಿನಲ್ಲಿದ್ದ ಬರಹವು ಜೆ. ಸ್ಟೀವನ್ಸನ್ನನ ಹೆಸರಿನ ಮೊದಲಕ್ಷರಗಳಾಗಿ ಪ್ರತಿನಿಧಿಸಿದಂತೆ ಕನ್ನಡದಲ್ಲಿಯ 'ಜೆ.ಸಾ.' ವು ಪ್ರತಿನಿಧಿಸುವುದಿಲ್ಲ. ಈ ಮುದ್ರಣದ ಒಂದು ಪ್ರತಿಯು ನನ್ನಲ್ಲಿದೆ.

ಒಂದನೆಯ ಆವೃತ್ತಿಯಿಂದ ಒಂಬತ್ತನೆಯ ಆವೃತ್ತಿಯ ಮುದ್ರಣದ ವರೆಗೆ ಆದ ತಿದ್ದುಪಡಿಗಳಲ್ಲಿ ಮೂಲ ಸಂಪಾದಕರ ಆಶಯಕ್ಕೆ ವಿರುದ್ಧವಾಗಿ ತಪ್ಪುಗಳು ಸೇರಿಕೊಂಡಿದ್ದು ಉದಾಹರಣೆಗೆ ಕೆಲವನ್ನು ಇಲ್ಲಿ ತೋರಿಸಲಾಗಿದೆ:—

ಪ್ರಥಮ ಮುದ್ರಣ	ನವಮ ಮುದ್ರಣ
ಅ) ರಾಜೋತ್ಸವನಾದ ಸರ್ವಾರ್ಥ ಸಿದ್ಧಿಯ ಅಧಿಪತ್ಯದಲ್ಲಿ ವೃದ್ಧರ ಮುಂದೆ ಬಾಲಕರಿಗೆ ಸಾವು ಇಂದಿನ ವರೆಗೂ ··· ಉಂಟಾದುದಿಲ್ಲ (ಪು·8)	ರಾಜೋತ್ಸವನಾದ ಸರ್ವಾರ್ಥಸಿದ್ಧಿಯ ಅಧಿಪತ್ಯದಲ್ಲಿರುವ ··· ವೃದ್ಧರ ಮುಂದೆ ಬಾಲಕರಿಗೆ ನೋವು ಇಂದಿನವರೆಗೂ ಉಂಟಾದುದಿಲ್ಲ (ಪು·36)·
ಆ) ನಿತ್ಯಕಟ್ಟೆ (ಪು·45)	ನಿಚ್ಚಗಟ್ಟೆ (ಪು·36)
ಇ) ಚಾಣಕ್ಯನಿಗೆ ಶೂರನಾದ ನಿನ್ನಲ್ಲಿ ದ್ವೇಷವಿದ್ದಂತೆ ವಿರೋಧನನಲ್ಲಿ ಇರಲಾರದು (ಪು·240)	ಚಾಣಕ್ಯನಿಗೆ ಶೂರನಾದ ನನ್ನಲ್ಲಿ ದ್ವೇಷವಿದ್ದಂತೆ ವಿರೋಧನನಲ್ಲಿ ಇರಲಾರದು (ಪು· 187)
ಈ) [illegible] ಅಂತ್ಯಾಕ್ಕ ರೋಹಿತಾಕ್ಷನೇ (ಪು· 287)	ಅಂತ್ಯಾಕ್ಕ ರಾಜಸೇನನೇ (ಪು·225)
ಉ) ಮಲತು ನಡೆವವರಿಗೆ (ಪು· 310)	ಮರೆತು ನಡೆದವರಿಗೆ (ಪು· 242)
ಊ) ಇವು ನಾವು ಧರಿಸಿದವಾದುದರಿಂದ (ಪು· 353)	ಇವು ನಿಮ್ಮಿಂದ ಧರಿಸಲ್ಪಟ್ಟವುಗಳಾದುದರಿಂದ (ಪು· 278)
ಋ) ಮುದ್ರಾಮಂಜೂಷವೆಂಬ ಕಾವ್ಯಗ್ರಂಥದಲ್ಲಿ (ಪು· 401)	ಮುದ್ರಾಮಂಜೂಷವೆಂಬ ಚಂಪೂಗ್ರಂಥದಲ್ಲಿ··· (ಪು· 315)

ಮೊದಲ ಮುದ್ರಣದಲ್ಲಿ ಅಸ್ಪಷ್ಟವಾಗಿದ್ದವುಗಳನ್ನು ತಿದ್ದಿ ಸರಿಪಡಿಸಿದ್ದೂ ಉಂಟು· ಉದಾ:—

··· ಅಮಾನತ್ಯನ ಕುಟುಂಬದವರಂ ನಾನು ಕೊಡುವವನಲ್ಲ· ಎಲ್ಲ ಇದ್ದರೆ ಒಪ್ಪಿಸರಿ ಎನಲು (ಪು 300)	··· ಅಮಾತ್ಯ ಕುಟುಂಬದವರು ಇದ್ದರೂ ನಾನು ಕೊಡುವವನಲ್ಲ· ಇಲ್ಲದಿರುವವರಂ ಹೇಗೆ ಒಪ್ಪಿಸರಿ? ಎಂದನು (ಪು· 235)

ಇದೇ ರೀತಿಯಲ್ಲಿ ಭಾಷಿಕ ಬದಲಾವಣೆಗಳನ್ನು ಈ ಕೆಳಗಿನ ಉದಾಹರಣೆಯಿಂದ ಕಂಡುಕೊಳ್ಳಬಹುದು·

ಪ್ರಥಮ ಮುದ್ರಣ	ನವಮ ಮುದ್ರಣ
ಈ ಧರಣಿ ಮಂಡಲದೊಳ್, ಐವತ್ತಾರು ದೇಶದೊಳ್, ಬಹು ರಮಣೀಯವಾದ ಸಕಲ ವಿದ್ಯಾಶೋಭಿತವಾದ ಗೌಡದೇಶದೊಳ್, ಗಂಗಾನದೀ ತೀರದೊಳ್ ಪಾಟಲೀ ಪುಟವೆಂಬುದೊಂದು ಮನೋಹರವಾದ ಪಟ್ಟಣ ಕಂಗೊಳಿಸುತ್ತಿರ್ಪುದು· ಆ ಪಟ್ಟಣಕ್ಕೆ ಕುಸುಮಪುರ ವೆಂದೂ ಪೆಸರುಂಟು·	ಈ ಧರಣೀ ಮಂಡಲದೊಳಿರ್ಪ ಐವತ್ತಾರು ದೇಶಂಗಳೊಳ್ ಬಹು ರಮಣೀಯವಾ ವಿದ್ವಜ್ಜನ ಶೋಭಿತವಾ ಆದ ಗೌಡ ದೇಶದೊಳ್ ಪ್ರವಹಿಸುತ್ತಿರುವ ಗಂಗಾನದೀ ತೀರದೊಳ್ ಸರ್ವ ಸಂಪತ್ಸಮೃದ್ಧವಾದ ಪಾಟಲೀಪುಟ ವೆಂಬುದೊಂದು ಪಟ್ಟಣಂ ಕಂಗೊಳಿಸುತ್ತಿರ್ಪುದು· ಆ ನಗರಕ್ಕೆ ಕುಸುಮಪುರವೆಂದೂ ಪೆಸರುಂಟು·

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ತಿಳಿದು ಬರುವುದೇನೆಂದರೆ, ಒಂಬತ್ತನೆಯ ಆವೃತ್ತಿಯು ವಿಷಯದ ದೃಷ್ಟಿಯಿಂದ ಮೊದಲ ಆವೃತ್ತಿಯಂತೆಯೇ ಇದ್ದರೂ ಬೇರೆ ಬೇರೆ ಕಾಲದ ಸಂಪಾದಕರ ತಿದ್ದುಪಡಿಕೆಯಿಂದಾಗಿ ಭಾಷೆಯಲ್ಲಿ ಬದಲಾವಣೆ ಹೊಂದಿದೆ· ಅಕಾರಣ, ಅನವಧಾನದ ತಪ್ಪುಗಳು ಸೇರಿಕೊಂಡಿವೆ· (ಅಪರೂಪದಲ್ಲಿ ಮೂಲ ಸಂಪಾದಕನ ಹೇಳಿಕೆ ಅಸ್ಪಷ್ಟವಿದ್ದಲ್ಲಿ ಅದನ್ನು ತಿದ್ದಿ ಸರಿಪಡಿಸಿ ಹೇಳುವ ಪ್ರಯತ್ನ ನಡೆದಿದೆ)· ಆದ್ದರಿಂದ ನವಮ ಮುದ್ರಣದ ಪ್ರತಿಯನ್ನು 'ಓದಿಕೊಂಡು ಮೂಲ ಕವಿಯ ಮೇಲಾಗಲೀ,

ಮೂಲ ಸಂಪಾದಕರ ಮೇಲಾಗಲೀ ಆರೋಪ ಹೊರಿಸಿದಲ್ಲಿ, ಅದು ಸತ್ಯದೂರವಾಗಿರುವ ಸಂದರ್ಭಗಳೇ ಹೆಚ್ಚಾಗಿರುವ ಸಾಧ್ಯತೆ ಇದೆ.

<u>ಮುದ್ರಾಮಂಜೂಷದ ಇತ್ತೀಚಿನ ಮುದ್ರಿತ ಪ್ರತಿ: 1985:</u> ಮೆಸ್ಸಿಯುನ ಪ್ರೆಸ್ಸಿನವರು ಒಂಬತ್ತನೆಯ ಮುದ್ರಣ (1953) ವನ್ನು ತಂದ 32 ವರ್ಷಗಳ ತರುವಾಯ ಕ್ರಿ.ಶ. 1985ರ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು 'ಮುದ್ರಾಮಂಜೂಷ' ವನ್ನು ಪುನ: ಮುದ್ರಿಸಿ ಪ್ರಕಟಿಸಿದ್ದಾರೆ. ಇದರಲ್ಲಿ

ಮುದ್ರಾಮಂಜೂಷ
(ಚಂದ್ರಗುಪ್ತ ಚಾಣಕ್ಯರ ಚರಿತ್ರೆಯು)
ಸಂಪಾದಕರು
ಕೆಂಪುನಾರಾಯಣ
ಪ್ರಕಾಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಎಂದಿದೆ.

ಈ ಪುಸ್ತಕವು ಪಠ್ಯ ವಿಷಯದಲ್ಲಿ ಸ್ಟೀವೆನ್ಸನ್ನಿನ ಪ್ರತಿಯ ಒಂಬತ್ತನೆಯ ಮುದ್ರಣದ ಯಥಾನಕಲಾಗಿದೆ. ಅಂದರೆ ಸ್ಟೀವನ್ಸನ ಸಂಪಾದಿಸಿ ಮುದ್ರಿಸಿದ ಮೊದಲ ಮುದ್ರಣ (1873) ದಲ್ಲಿ ಶುದ್ಧ ಪಾಠವಿದ್ದೂ ಅನಂತರದ ಮುದ್ರಣಗಳಲ್ಲಿ ನುಸುಳಿಕೊಂಡ ತಪ್ಪುಗಳು ಒಂಬತ್ತನೆಯ ಮುದ್ರಣದಲ್ಲಿದ್ದಂತೆ ಇದರಲ್ಲಿಯೂ ಇವೆ. ಅಷ್ಟಲ್ಲದೇ ಇಲ್ಲಿ ಮೂಲ ಗ್ರಂಥಕರ್ತನಾದ ಕೆಂಪುನಾರಾಯಣನನ್ನು ಸಂಪಾದಕನೆಂದು ಕರೆದಿದ್ದು ಮುದ್ರಿತ ಪ್ರತಿಯ ಸಂಪಾದಕನಾದ ಜೆ. ಸ್ಟೀವೆನ್ಸನ್ನನ ಹೆಸರನ್ನು ಹೇಳದಿದ್ದುದು, ಅವನು 'ತಿದ್ದಿ, ಸಂಪಾದಿಸಿದ' ಎಂದು ಪ್ರಾಮಾಣಿಕವಾಗಿ ಹೇಳಿಕೊಂಡ ಮುನ್ನುಡಿಯನ್ನು ಕೈಬಿಟ್ಟುದು — ಇವೆಲ್ಲ ಗೊಂದಲವನ್ನುಂಟು ಮಾಡುವವು.

ಈ ವರೆಗಿನ ಅಧ್ಯಯನದಿಂದ — ಮೂರು ಹಸ್ತಪ್ರತಿಗಳೂ ಒಂದೇ ರೀತಿಯಲ್ಲಿರುವವು. ಮುದ್ರಿತ ಪ್ರತಿಗಳು ಮಾತ್ರ ಭಿನ್ನಪಾಠಗಳಿಂದ ಕೂಡಿವೆಯೆಂದು ತಿಳಿದುಬರುವುದು. ಆ ಮುದ್ರಿತ ಪ್ರತಿಗಳಲ್ಲಿ ಮಾಡಿಕೊಂಡ ಮಾರ್ಪಾಡುಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದಾಗಿದೆ.

<u>ಹಸ್ತಪ್ರತಿಗಳಲ್ಲಿದ್ದು ಮುದ್ರಿತ ಪ್ರತಿಗಳಲ್ಲಿಲ್ಲದ ಭಾಗಗಳು:</u>

1) ನಗರ, ಸ್ತ್ರೀ, ಒಡ್ಡೋಲಗ, ಸೈನ್ಯ, ಚಂದ್ರೋದಯ ಮೊದಲಾದವುಗಳ ವಿಸ್ತೃತವಾದ ವರ್ಣನೆ [60].
2) ಕಾರಾಗೃಹದಿಂದ ಬಿಡುಗಡೆಯಾಗುವಾಗ ಚಂದ್ರಗುಪ್ತನು ನಂದರಿಗೆ ತೋರಿಸಿದ ಸ್ವಾಮಿಭಕ್ತಿಯ ಪ್ರದರ್ಶನದ ಚಿತ್ರಣ.
3) ವಿವರವಾಗಿ ಹೇಳಿದ ರಾಕ್ಷಸನ ಕಾರ್ಯದಕ್ಷತೆ.
4) ಕ್ಷಪಣಕನು ವಿಷಕನ್ಯೆಯನ್ನು ಪರ್ವತೇಶ್ವರನ ಸನ್ನಿಧಿಗೆ ತಂದಾಗ ಕಾಮಪರವಶನಾದ ಆ ಅರಸನ ಸ್ಥಿತಿಯ ವರ್ಣನೆ.

5) ರಾಕ್ಷಸ, ಭಾಗುರಾಯಣ, ಮಲಯಕೇತು ಮೊದಲಾದವರು ತಮ್ಮ ತಮ್ಮ ಮನಸ್ಸಿನಲ್ಲಿ ಯೋಚಿಸಿದಂತೆ ಹೇಳಿದ ಮಾತುಗಳು.

6) ಇಂದುಶರ್ಮನ ಆಶ್ರಮದಿಂದ ಬೀಳ್ಕೊಡುವಾಗ ಚಾಣಕ್ಯ ಹೇಳಿದ ಮಾತುಗಳು — ಮೊದಲಾದವು.

<u>ಹಸ್ತಪ್ರತಿಗಳಲ್ಲಿಲ್ಲದೆ ಮುದ್ರಿತ ಪ್ರತಿಯಲ್ಲಿ ಹೊಸದಾಗಿ ಸೇರಿಸಿದ್ದ ಭಾಗಗಳು:</u>

1) ವಿವಿಧ ಶ್ಲೋಕಗಳನ್ನು ಉದ್ಧರಿಸಿ ಹೇಳಿದ ಮಾತುಗಳು [61].

2) ನಂದರು ಯುದ್ಧಕ್ಕೆ ಹೊರಟಾಗ ಅವರ ಪತ್ನಿಯರ ಅಳಲಿನ ವಿಸ್ತೃತ ರೂಪ.

3) ಶತ್ರು ಸೇನೆಯು ಬರುವುದೆಂಬುದನ್ನು ಕೇಳಿ ಪಾಟಲೀಪುರದ ಹೆಂಗಳೆಯರು, ವರ್ತಕರು ಆಡಿಕೊಂಡರೆಂದು ಹೇಳಿದ ಮಾತುಗಳು.

4) ನಂದರ ಅಂತ್ಯಕಾಲದ ಅಂತರಾಳದ ಮಾತುಗಳು.

5) ಚಾರುವರ್ಮ ಮತ್ತಿತರರ ಅಮಾತ್ಯ ಪ್ರೇಮ ಚಿತ್ರಣ.

6) ರಾಕ್ಷಸನು ತಾನಾಗಿ ಚಾಣಕ್ಯನ ಬಳಿಗೆ ಬಂದಾಗ ಚಾಣಕ್ಯನು ತನ್ನ ಮಿತ್ರರು ಹಾಗೂ ಶಿಷ್ಯರುಗಳನ್ನೆಲ್ಲ ಪರಿಚಯಿಸಿ ಹೇಳುವ ಮಾತುಗಳು.

7) ವಿಷ್ಣುದೇವಾಲಯದ ಸ್ಥಾಪನೆ, ಆರ್ಯ ವಿಷ್ಣುಗುಪ್ತರ ವಿಗ್ರಹ ಪ್ರತಿಷ್ಠಾಪನೆಯ ವಿಚಾರಗಳು

— ಮೊದಲಾದುವು.

ಇವುಗಳನ್ನೆಲ್ಲ ಗಮನಿಸಿ ನೋಡಿದಾಗ ~~ಕೇವಲ~~ ಹಸ್ತಪ್ರತಿಯನ್ನಾಧರಿಸಿ 'ಮುದ್ರಾಮಂಜೂಷ' ದ ಶುದ್ಧಪಾಠವನ್ನು ಮುದ್ರಿಸಿ ಪ್ರಕಟಿಸುವ ಅವಶ್ಯಕತೆಯಿದೆ — ಎಂದು ತಿಳಿದುಬರುವುದು.

••••• •••••

ಮುದ್ರಾಮಂಜೂಷದ ವಿವಿಧ ಪ್ರತಿಗಳು ಮತ್ತು ಅವುಗಳ ಸಂಬಂಧ

ಮುದ್ರಾಮಂಜೂಷ

ಮೂಲಮಾತೃಕೆ (ಕವಿಪ್ರತಿ)

ಕ್ರಿ.ಶ.1823

1. ಓಲೆಗರಿ ಪ್ರತಿ
   ನಂ. ಕೆ.79
   ಮೈಸೂರು ವಿ.ವಿ.
   ಕ.ಅ.ಸಂ.ಯ
   ಹಸ್ತಪ್ರತಿ ವಿಭಾಗ
   ದಲ್ಲಿದೆ.
   (ಕಾಲ ಗೊತ್ತಿಲ್ಲ)
   (ಅಂತ್ಯ ಭಾಗವಿಲ್ಲ)

2. ಕಾಗದದ ಪ್ರತಿ
   ನಂ. ಕೆಬಿ 529
   ಮೈಸೂರು ವಿ.ವಿ.
   ಕ.ಅ.ಸಂ.ಯ
   ಹಸ್ತಪ್ರತಿ ವಿಭಾಗ
   ದಲ್ಲಿದೆ.
   (ಕಾಲ ಗೊತ್ತಿಲ್ಲ)
   (ಆದಿ ಭಾಗವಿಲ್ಲ)

3. ಮುದ್ರಿತ ಪ್ರತಿ
   ಸಂಪಾದಕ
   ಜೆ. ಸ್ಟೀವೆನಸನ
   ಮೊದಲ ಮುದ್ರಣ 1873
   ↓
   ಎರಡನೆಯ ಮುದ್ರಣ 1898
   ↓
   ಮೂರನೆಯ ಮುದ್ರಣ 1905
   ↓
   ನಾಲ್ಕನೆಯ ಮುದ್ರಣ 1912
   ↓
   ಐದನೆಯ ಮುದ್ರಣ 1919
   ↓
   ಆರನೆಯ ಮುದ್ರಣ 1923
   ↓
   ಏಳನೆಯ ಮುದ್ರಣ 1929
   ↓
   ಎಂಟನೆಯ ಮುದ್ರಣ 1945
   ↓
   ಒಂಬತ್ತನೆಯ ಮುದ್ರಣ 1953
   ↓
   ಕರ್ನಾಟಕ ಸರ್ಕಾರ
   ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
   ಬೆಂಗಳೂರು 1985.

4. ಓಲೆಗರಿ ಪ್ರತಿ
   ಕವಿಯ ವಂಶಸ್ಥರಲ್ಲಿ
   ದೊರೆತದ್ದು.
   (ಕಾಲ ಗೊತ್ತಿಲ್ಲ)
   ಪೂರ್ಣ ಪಾಠವಿದೆ.

ಅಡಿಟಿಪ್ಪಣಿಗಳು

1. ಕೃಷ್ಣರಾವ್ ಎಂ.ವಿ. ಮತ್ತು ಕೇಶವ ಭಟ್ಟ ಎಂ 1970: 'ಕರ್ನಾಟಕದ ಇತಿಹಾಸದರ್ಶನ' ಪು. 930 — 933.

2. ಲಿಂಗಯ್ಯ ಎಂ.ಕೆ. 1982 'ಮೈಸೂರು: ಒಂದು ಅಧ್ಯಯನ' ಪು. 365. ಟಿಪ್ಪುಸುಲ್ತಾನನು ಕ್ರಿ.ಶ. 1783 — 1799) ತನ್ನ ಆಡಳಿತ ಕಾಲದಲ್ಲಿ ಫ್ರೆಂಚ್ ಇಂಜಿನಿಯರ್ ಡಿ' ಹ್ಯಾವಿಲ್ಯಾಂಡ್ ಎಂಬ ಶಿಲ್ಪಿಯ ಸಹಾಯದಿಂದ ತೂಗಾಡುವ ಸೇತುವೆಯೊಂದನ್ನು ರಂಗನಾಥ ಸ್ವಾಮಿ ದೇವಾಲಯದ ದಕ್ಷಿಣ ಭಾಗದಲ್ಲಿ ನಿರ್ಮಿಸಿದ್ದು, ಇದು ನೂರಹನ್ನೆರಡು ಅಡಿ ಉದ್ದವಾಗಿಯೂ ಮೂರು ಅಡಿ ಅಗಲ ವಾಗಿಯೂ ಇದ್ದು, ಮಧ್ಯಭಾಗದಲ್ಲಿ ನಡೆದಾಗ ಎರಡು ಮೂರು ಅಂಗುಲ ತೂಗಾಡುತ್ತಿತ್ತಂತೆ. (ಶ್ರೀನಿವಾಸ ರಾವ ಕೊರಟಿ ನೋಡುವ ಬೀಡುಗಳು ಪು.42). ಇದೇ ಸೇತುವೆಯನ್ನು ಪೂರ್ಣಯ್ಯನವರು ದುರಸ್ತಿಮಾಡಿಸಿ 'ವೆಲ್ಲೆಸ್ಲಿ ಸೇತುವೆ' ಎಂದು ಕರೆದಿರಬಹುದು.

3. ಅದೇ ಪು. 35.

4. ಕ್ರಮಸಂಖ್ಯೆ 1, ಪುಟ 935

5. ಕ್ರಮಸಂಖ್ಯೆ 2, ಪುಟ 383.

6. ವಿವರಗಳಿಗೆ ಕ್ರಮಸಂಖ್ಯೆ 1, ಪುಟ 935

6ಎ. ರಾಮಕೃಷ್ಣ ರಾವ ಬಿ. 1922 ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ-೨ ಮೈಸೂರು ಪು.38–39.

7. ಕ್ರಮಸಂಖ್ಯೆ 2, ಪು. 389.

8. ಇದರ ವಿಷಯ ಮು.ಮಂ.ದಲ್ಲಿ ಬರುವುದಿಲ್ಲ, ಅದನ್ನು 'ಸಮಕಾಲೀನ ವಿಚಾರ'ಗಳಲ್ಲಿ ಹೇಳಿದೆ.

9. ಕ್ರಮಸಂಖ್ಯೆ 1, ಪುಟ 936

10. ——

11. ಕ್ರಮಸಂಖ್ಯೆ 2, ಪು. 377.

12. ಶರ್ಮಾ ತಿ.ತಾ. (ಸಂ.) 1974 ಕಂಠೀರವ ನರಸರಾಜ ವಿಜಯ. ಪುಟ. 37.

13. E.C. VOL. IV, Ch. 92.

14. ವಿವರಗಳಿಗೆ ಕ್ರ.ಸಂಖ್ಯೆ 2, ಪುಟ 3 ಮತ್ತು 375, 376.

15. ನೋಡಿ. ಜ್ಯೋತ್ಸ್ನಾ ಕಾಮತ 1988. ಕರ್ನಾಟಕದ ಶಿಕ್ಷಣ ಪರಂಪರೆ ಮುಂಬಯಿ ಪು.37

16. ಅದೇ ಪುಟ 38 — 39.

17. ದೀಕ್ಷಿತ ಜಿ.ಎಸ. 1970: ಶಿಕ್ಷಣ ಮತ್ತು ವಿಜ್ಞಾನ (ಕರ್ನಾಟಕ ಪರಂಪರೆ II) ಪು. 113-4.

17ಎ. ಕ್ರಮಸಂಖ್ಯೆ 10. ಪುಟ 255.

18. ನಾಗಭೂಷಣ ಸ್ವಾಮಿ ಓ ಎಲ 1983. ವಿಮರ್ಶೆಯ ಪರಿಭಾಷೆ, ಶಿವಮೊಗ್ಗ ಪು.234.
~~ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ~~.

19. ಅದೇ. ಪು.234.

20. ಬಸವಾರಾಧ್ಯ ಎನ (ಸಂ) 1982. ಪ್ರಾಚೀನ ಕನ್ನಡ ಗದ್ಯವಿಕಾಸ. ಮುನ್ನುಡಿ ಪು IV

21. ಇಲ್ಲಿಯ ಮಾಹಿತಿಗಳನ್ನು ಡಾ: ಟಿ.ವಿ ವೆಂಕಟಾಚಲ ಶಾಸ್ತ್ರಿಗಳವರ ಲೇಖನ 'ಕನ್ನಡ ಸಾಹಿತ್ಯಕ್ಕೆ ಮೈಸೂರು ಒಡೆಯರ ಕೊಡುಗೆ — ಪ್ರ. ಕರ್ನಾಟಕ [illegible] ಸಂಯುಕ್ತ ಸಂಚಿಕೆ 1991. ದಿಂದ ಆಯ್ದುಕೊಂಡಿದೆ (ಪು. 1 — 39).

೨೧ಎ. ಶರ್ಮ ತಿ.ತಾ. (ಸಂ). 1971. 'ಚಾರಿತ್ರಿಕ ದಾಖಲೆಗಳು' ಬೆಂಗಳೂರು ಮುನ್ನುಡಿ ಪು.8.

22. ಶ್ರೀನಿವಾಸ ಹಾವನೂರ 1974. ಹೊಸಗನ್ನಡದ ಅರುಣೋದಯ ಪು. 191.

23. ಅದೇ ಪು. 193

24. ಅದೇ ಪು. 178-79

25. ಇನ್ನು ಮುಮ್ಮಡಿಯವರು ಕಾಳಿದಾಸನ ನಾಟಕತ್ರಯವನ್ನೂ, ಭವಭೂತಿಯ ಉತ್ತರರಾಮ ಚರಿತವನ್ನೂ, ರತ್ನಾವಳೀ ನಾಟಕವನ್ನೂ ಕನ್ನಡ ಗದ್ಯದಲ್ಲಿ ರಚಿಸಿದಂತೆ ತಿಳಿದುಬಂದರೂ ಇವುಗಳಲ್ಲಿ ಮಾಲವಿಕಾಗ್ನಿಮಿತ್ರದ ಕಥೆಯರಚನಾ ಕಾಲವೊಂದೇ ತಿಳಿದುಬಂದಿದೆ (ಕ್ರಿ.ಶ. 1847). ಮೊದಲ ಮೂರು ಕೃತಿಗಳು ಸೇರಿ 'ಕೃಷ್ಣರಾಜ ವಾಣೀ ವಿಲಾಸ ರತ್ನಾಕರ' ವೆಂಬ ಹೆಸರನ್ನೂ ಮತ್ತಿನ ಎರಡು ಕೃತಿಗಳು ಸೇರಿ 'ಕೃಷ್ಣರಾಜ ಸೂಕ್ತಿ ಮುಕ್ತಾವಳಿ' ಎಂಬ ಹೆಸರನ್ನೂ ಪಡೆದಿದ್ದುವು. ಇವುಗಳೆಲ್ಲ ಸರಿ ಸುಮಾರಿಗೆ ಒಂದೇ ಕಾಲದಲ್ಲಿ ರಚಿತವಾದುವೆಂದು ನಿರ್ಣಯಿಸುವುದಾದರೆ, ಕೆಂಪುನಾರಾಯಣನ ಮುದ್ರಾಮಂಜೂಷಕ್ಕಿಂತ ನಂತರದವುಗಳೆಂದು ಸಿದ್ಧವಾಗುವುದು. ಇದನ್ನು ಒಪ್ಪಿಕೊಂಡಲ್ಲಿ ಸಂಸ್ಕೃತ ನಾಟಕವನ್ನು ಕನ್ನಡದ ಕಥನ ಗದ್ಯಕ್ಕೆ ಮೊದಲು ತಿರುಗಿಸಿದ ಕೀರ್ತಿ ಕೆಂಪುನಾರಾಯಣನಿಗೆ ಸಲ್ಲುತ್ತದೆ.

25ಎ. ಸಣ್ಣಯ್ಯ ಬಿ.ಎಸ.(ಸಂ). 1988. ದೇವಚಂದ್ರವಿರಚಿತ ರಾಜಾವಳಿ ಕಥಾಸಾರ. ಪು. 356. ಈ ವಿಚಾರವನ್ನು ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ ೧ ರಲ್ಲಿ (ಪು.251) ಹೇಳಿದೆ.

26. ವೆಂಕಟವಾರಣಪ್ಪ ಬೆಳ್ಳಾವೆ. (ಲೇ.) 1925. ಪರಿಷತ್ಪತ್ರಿಕೆ. ಸಂ. 9. ಪು.

27. ಕನ್ನಡ ಸಾಹಿತ್ಯ ಸಮ್ಮೇಳನ. ಮುಂಬಯಿ 1950. ಅಧ್ಯಕ್ಷ ಭಾಷಣ.

28. ಕೃಷ್ಣಮೂರ್ತಿ ಕಿತ್ತೂರ (ಲೇ.) 1982. ಹೊಸಗನ್ನಡದ ಆರಂಭಕಾಲ (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ 5. ರಲ್ಲಿ) ಪು. 373.

29. ನೋಡಿ ಕ್ರ.ಸಂ. 22, ಪುಟ 164.

30. ಶ್ರೀ ಎಚ್.ಎಂ. ಶಂಕರನಾರಾಯಣರು 'ಕೆಂಪುನಾರಾಯಣ: ಕವಿ ಮತ್ತು ಕೃತಿ' ಯಲ್ಲಿ— 'ಶರ್ಮ ಎಂಬುದನ್ನು ಬ್ರಾಹ್ಮಣರು ತಮ್ಮ ಹೆಸರಿನೊಡನೆ ಸೇರಿಸಿಕೊಳ್ಳುವುದು ರೂಢಿ' (ಪು.11) ಎಂಬುದಾಗಿ ಹೇಳಿದ್ದರೂ ಅದೇ ಕೃತಿಯಲ್ಲಿ (ಪು.27) ಮತ್ತಿತರ ತಮ್ಮ ಗ್ರಂಥಗಳು ಹಾಗೂ ಲೇಖನಗಳಲ್ಲಿ ಕವಿಯ ಹೆಸರನ್ನು 'ನಾರಾಯಣ ಶರ್ಮ' ಎಂದಿದ್ದಾರೆ. ಗ್ರಂಥಾಂತ್ಯದಲ್ಲಿ ಕವಿಯೇ 'ನಾರಾಯಣಕೇನ ರಚಿತಂ' ಎಂದಷ್ಟೇ ತನ್ನ ಬಗ್ಗೆ ಹೇಳಿಕೊಂಡಿದ್ದಾನೆ.

31. ಕನ್ನಡ ಅಧ್ಯಯನ ಸಂಸ್ಥೆ. ಹಸ್ತಪ್ರತಿ ಸಂಖ್ಯೆ ಕೆ.79. ಮೈಸೂರು.

32. ನರಸಿಂಹಾಚಾರ್ಯ ಆರ್ 1974. ಕರ್ನಾಟಕ ಕವಿ ಚರಿತೆ ತೃತೀಯ ಸಂಪುಟ. ಬೆಂಗಳೂರು ಪು.17.

33. 'ಕೆಂಪುನಾರಾಯಣ' (ಲೇ.): ಏಪ್ರಿಲ 1963. ಬೆಂಗಳೂರು ಪು.78.

34. ಸೋಸಲೆ ಗರಳಪುರೀ ಶಾಸ್ತ್ರಿಗಳ ಚರಿತ್ರೆ 191. ಮೈಸೂರು ಪು.17.

35. ವಿವರಗಳಿಗೆ: ವೆಂಕಟಾಚಲ ಶಾಸ್ತ್ರಿ ಟಿ.ವಿ. ಜನವರಿ — ಫೆಬ್ರುವರಿ 1990 ಸಂಶೋಧನ ವ್ಯಾಸಂಗ. (ದ್ವೈಮಾಸಿಕ): 'ಕೆಂಪುನಾರಾಯಣ: ಒಂದು ಟಿಪ್ಪಣಿ' ಪು. 8, 9.

36. ಶ್ರೀಮತಿ ಲಲಿತಮ್ಮ ನಾಡಿಗ್ ರವರ ಹೇಳಿಕೆ.

37. ನಾನು ಈ ಸ್ಥಳಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ದೇವಸ್ಥಾನದ ಅರ್ಚಕರಾದ ಶ್ರೀ ದೊರೆಸ್ವಾಮಿ ಅಯ್ಯಂಗಾರರವರು ಕ್ಷೇತ್ರ ಪುರಾಣವನ್ನು ಹೇಳಿದರಲ್ಲದೇ ಹಿಂದೆ ಆದಿ ಶಂಕರಾಚಾರ್ಯರು ಈ ದೇವರನ್ನು ತಮ್ಮ ಕೈಯಿಂದ ಪೂಜಿಸಿದ್ದರೆಂದೂ, ಕಳೆದ ಶತಮಾನದಲ್ಲಿ ಇಲ್ಲಿ ವಿಶೇಷವಾಗಿ ಹೊಯ್ಸಳ ಕರ್ನಾಟಕ ಪಂಗಡದ ಬ್ರಾಹ್ಮಣರಿದ್ದರೆಂದೂ ತಿಳಿಸಿದರು. ಸ್ವಮತವನ್ನು ಮಾತ್ರ ಶ್ರೇಷ್ಠವೆಂದು ಹೇಳದೇ ಇತರ ಮತೀಯರನ್ನು ನಿಂದಿಸದೇ — ತಾವು ಕೇಳಿ, ನೋಡಿ ಇದ್ದ ವಿಚಾರಗಳನ್ನು ಪ್ರಾಂಜಲ ಮನಸ್ಸಿನಿಂದ ಅವರು ತಿಳಿಸುತ್ತಿದ್ದಾಗ ಅವರ ಬಗ್ಗೂ ಗೌರವಾದರ ಹುಟ್ಟಿತು. ನನ್ನ ಕೇಳಿಕೆಯ ಮೇರೆಗೆ ಅವರು 'ಗುಂಜಾನರಸಿಂಹ' ದೇವರ ಭಾವಚಿತ್ರದ ಪ್ರತಿಯನ್ನು ಕೊಟ್ಟು ಉಪಕರಿಸಿದ್ದಾರೆ.

ಊರಿನ ಉತ್ತರಕ್ಕೆ ನದಿಯ ದಂಡೆಯಲ್ಲಿ ಉತ್ತರಾಭಿಮುಖವಾಗಿ ಈ ದೇವಾಲಯವಿದೆ. ಸುಮಾರು ದೊಡ್ಡ ಕಟ್ಟಡ. ಕೃಷ್ಣದೇವರಾಯನ ಕಾಲದ ಶಾಸನಗಳು ಕಾಣಸಿಗುತ್ತವೆ. ಮೂಗೂರು ಅರಸರು ಮತ್ತು ಮುಮ್ಮಡಿಯವರು ಈ ದೇವಾಲಯದ ಕಟ್ಟಡವನ್ನು ವಿಸ್ತರಿಸಿದರಂತೆ. ಇಲ್ಲಿ ಸೊಗಸಾದ ಗರ್ಭಗೃಹ, ಮಂಟಪ, ಪ್ರಾಕಾರ, ಮಹಾದ್ವಾರ ಮತ್ತು ಗೋಪುರಗಳಿವೆ. ಮಂಟಪದ

ಮುಂದೆ, ಬಲಿಪೀಠದ ಬಳಿ ಪರಸ್ಪರ ಎದುರಿಗಿರುವ ಕಂಬಗಳ ಮೇಲೆ ಅಂಜಲೀಬದ್ಧ ಭಂಗಿಯಲ್ಲಿರುವ ಎರಡು ಮೂರ್ತಿಗಳಿವೆ. ಮೂಲ ದೇವರಾದ ನರಸಿಂಹನ ಬಲಗೈಯ ಹೆಬ್ಬೆರಳು ಮತ್ತು ತೋರು ಬೆರಳುಗಳ ನಡುವೆ ಗುಂಜಾ ಸಸ್ಯದ ಕಾಂಡವೊಂದನ್ನು ಬಿಡಿಸಲಾಗಿದೆ. ಈ ಕ್ಷೇತ್ರ ಪಾವಿತ್ರ್ಯದಲ್ಲಿ ಕಾಶಿಗಿಂತ ಒಂದು ಗುಂಜ ತೂಕ ಹೆಚ್ಚು ಎಂಬ ಅಂಶವನ್ನು ಇದು ಸೂಚಿಸುತ್ತದೆಂಬ ನಂಬುಗೆಯಿದೆ. ಕರ್ನಾಟಕವಿ. ವಿಶ್ವಕೋಶ ಪು.733 — 734.

38. ಈ ಸ್ತುತಿ ಭಾಗವನ್ನು ಮುದ್ರಿತ ಪ್ರತಿಕಾರ ಪೂರ್ಣವಾಗಿ ಕೈಬಿಟ್ಟಿದ್ದಾನೆ. ಉಳಿದೆರಡು ಹಸ್ತಪ್ರತಿಗಳವರು ಕೆಲವೊಮ್ಮೆ ಉಳಿಸಿಕೊಂಡಿದ್ದು ಮತ್ತೆ ಕೆಲವು ಸಲ ತಮ್ಮ ಇಷ್ಟ ದೈವಗಳನ್ನು ಸ್ತುತಿಸಿದ್ದಾರೆ. ಆದರೆ ಕವಿಯ ವಂಶಸ್ಥರಲ್ಲಿ ದೊರೆತ, ಬಹುಶಃ ಕವಿಯ ಮಾರ್ಗದರ್ಶನದಲ್ಲೇ ಬರೆಯಲಾದ ಪ್ರತಿಯಲ್ಲಿ ಈ ಸ್ತುತಿ ಸ್ಪಷ್ಟವಾಗಿ ಇದೆ.

39. ಶ್ರೀಮತಿ ಲಲಿತಮ್ಮನವರ ಹೇಳಿಕೆ.

40. ಕವಿಯ ವಂಶಸ್ಥರಾದ ಶ್ರೀಮತಿ ಲಲಿತಮ್ಮ ನಾಡಿಗರವರ ಮನೆಯಲ್ಲಿದ್ದ ಹಸ್ತಪ್ರತಿಗಳ ಕಟ್ಟುಗಳನ್ನು 'ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಮೈಸೂರಿಗೆ ತಾ.5-12-1989ರಂದು ಹಸ್ತಾಂತರಿಸಿದ್ದು ಅಲ್ಲಿ ಹಸ್ತಪ್ರತಿಗಳ ಕ್ರಮಸಂಖ್ಯೆ 12205 ರಿಂದ 12223ರ ವರೆಗೆ ಇಡಲಾಗಿದ್ದು, ಈ ಸಂಗ್ರಹದಲ್ಲಿ ನಂದಿನಾಗರಿ, ತೆಲುಗು ಲಿಪಿಗಳಾಗಿ ಮತ್ತು ಕನ್ನಡ ಲಿಪಿಗಳಲ್ಲಿ ಬರೆದ ಗ್ರಂಥಗಳಿವೆ. ಒಂದೇ ಕಟ್ಟಿನಲ್ಲಿ ಕೆಲವು ಲಿಪಿಗಳ ಪತ್ರಗಳು ಸೇರಿಕೊಂಡದ್ದೂ ಇವೆ.

<u>ಇದಲ್ಲದೆ ಇತರ ಕೃತಿಗಳು:</u> 1) ಮುದ್ರಾರಾಕ್ಷಸ ನಾಟಕ 2) ಜಾನಕೀ ಪರಿಣಯ 3) ಆಶ್ವಲಾಯನ ಗೃಹ್ಯಸೂತ್ರ 4) ರಾಮಾಷ್ಟೋತ್ತರ ಸ್ತೋತ್ರ 5) ಶಬ್ದ ರತ್ನಾಕರ ಕೋಶ 6) ವೈಜಯಂತೀ ಕೋಶ 7) ಮೇದಿನೀ ಕೋಶ 8) ಬಾಹಟ — ವೈದ್ಯ ಗ್ರಂಥ 9) ಅಷ್ಟಾಂಗ ನಿಘಂಟು 10) ಅಷ್ಟಾಂಗ ಹೃದಯ 11) ಸಾರೋದ್ಧಾರ ನಿಘಂಟು 12) ಗಂಧಕ ಶುದ್ಧಿ 13) ಆನಂದಕಂದ ರಸಶಾಸ್ತ್ರ 14) ರಸನಿರೂಪಣ 15) ವಾಲ್ಮೀಕಿ ರಾಮಾಯಣ — ವಿವಿಧ ಕಾಂಡಗಳು 16) ಶಾಸನೋಕ್ತ ಶಾಂತಿ 17) ಚಂದ್ರಾಲೋಕ 18) ಸೂರ್ಯಸಿದ್ಧಾಂತ 19) ಚಂಪೂ ರಾಮಾಯಣ 20) ಚಂಪೂ ಭಾರತ 21) ವೈದ್ಯವಲ್ಲಭ ಗ್ರಂಥ 22) ರಸಾಯನ ವಿಧಾನ ಶಿಶು — ರೋಗಚಿಕಿತ್ಸಾ ಕ್ರಮ 23) ಶಿಶುಪಾಲವಧ 24) ವಿಶ್ವಗುಣಾದರ್ಶ ಚಂಪೂ 25) ಸಾಮುದ್ರಿಕಾ 26) ಷಟ ಸಮಾಸ ಇತ್ಯಾದಿ...

41. ಹದಿನೆಂಟನೆಯ ಶತಮಾನದ ಕೊನೆಯಲ್ಲಿ, ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಬದುಕಿದ್ದು ಕೃತಿ ರಚನೆ ಮಾಡಿದ ಕೆಂಪುನಾರಾಯಣ ಕವಿಯ ಮತ್ತು ಅವನ ಕೃತಿಯಾದ 'ಮುದ್ರಾಮಂಜೂಷ' ದ ವಿಷಯದಲ್ಲಿ ನಾಲ್ಕು ಮಾತನ್ನು ಹೇಳುವುದಾಗಿ ಶ್ರೀ ಎಚ್.ಎಂ. ಶಂಕರನಾರಾಯಣ ರಾವ ಹೇಳಿದ ಮಾತನ್ನು ಇದು ಸಮರ್ಥಿಸುತ್ತದೆ (ಅಡಿ ಟಿಪ್ಪಣಿ 30, ಪು.17)

42. ವಿವರಗಳಿಗೆ ಅಡಿ ಟಿಪ್ಪಣಿ 34 ಪು. 17

43. ವಿವರಗಳಿಗೆ 6ಎ, ಪು. 161.

44. ಅದೇ. ಪುಟ 153. ಅವರು ದಾನವಾಗಿತ್ತ ಹನ್ನೆರಡು ಅಗ್ರಹಾರಗಳ ಪಟ್ಟಿ ಇದು ಮೊತ್ತಮೊದಲನೆಯದು. ಪು. 158.

45. ಕತ್ತವಾಡಿಪುರ ಅಗ್ರಹಾರದಲ್ಲಿ ತಮ್ಮ ಹಿರಿಯರು ಇದ್ದರೆಂಬ ಮಾತನ್ನು ತಾನು ಕೇಳಿದುದಾಗಿ ಶ್ರೀಮತಿ ಲಲಿತಮ್ಮನವರು ನೆನಪಿಸಿಕೊಳ್ಳುತ್ತಾರೆ. ಈ ಸಂಬಂಧವಾಗಿ ಹೆಚ್ಚಿನ ವಿವರಗಳೇನಾದರೂ ಸಿಗಬಹುದೇನೋ ಎಂದು ಎಪಿಗ್ರಾಫಿಯಾ ಕರ್ನಾಟಕದ ವಿವಿಧ ಸಂಪುಟಗಳನ್ನು ನೋಡಿದಾಗ ಅಲ್ಲಿ ಯಾವುದೇ ಮಾಹಿತಿ ಸಿಗಲಿಲ್ಲ. ಅಲ್ಲಿ ಪ್ರಕಟಿಸಲಾದ ಶಾಸನಗಳಲ್ಲಿ ಇದರ ಉಲ್ಲೇಖವಿಲ್ಲ. ೧೮,೧೯ ನೇ ಶತಮಾನದ ಎಲ್ಲಾ ದಾನಗಳೂ ಶಾಸನರೂಪದಲ್ಲಿ ಪ್ರಕಟವಾಗಿಲ್ಲ; ಕೆಲವು ಪತ್ರರೂಪದಲ್ಲೇ ಉಳಿದಿವೆ ಎಂಬುದು ಗೊತ್ತಾದಾಗ ಮೈಸೂರಿನ ಅರಮನೆ ಆವರಣದಲ್ಲಿರುವ ಪತ್ರಾಗಾರದ ಉಪನಿರ್ದೇಶಕರಾದ ಡಾ: ಜಿ.ವಿ. ಗಾಯತ್ರಿಯವರನ್ನು ಪತ್ರಮೂಲಕ ಸಂಪರ್ಕಿಸಿದೆ. ಅವರು ತಮ್ಮ ಉತ್ತರದಲ್ಲಿ 'ಅಲ್ಲಿ ಸಹ ಆ ಬಗ್ಗೆ ಮಾಹಿತಿ ಲಭ್ಯವಿಲ್ಲ' ವೆಂದು ಬರೆದು ತಿಳಿಸಿದರು. ಇದರಿಂದಾಗಿ ಮೂಲ ದಾಖಲೆಯನ್ನು ನೋಡುವ ಅವಕಾಶ ತಪ್ಪಿದಂತಾಗಿದೆ.

46. ಕ್ರಮಸಂಖ್ಯೆ 10. ಪು. 154.

47. ತಮ್ಮ ವಂಶದ ಹಿರಿಯರು ಅರಮನೆಯ ಕೋಟೆಯೊಳಗೂ ಇದ್ದು, ಅವರುಗಳನ್ನು ಅರಮನೆಗೆ ಕರೆಯಿಸಿಕೊಳ್ಳುವ ಸಂದರ್ಭದಲ್ಲಿ ಪೆಟ್ಟಿಗೆ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಕರೆಯುತ್ತಿದ್ದರೆಂದೂ, ತಮ್ಮ ಒಬ್ಬರು ಹಿರಿಯರನ್ನು ಅವರ ಬಂಧುಗಳು 'ಕೋಟೆ ಅತ್ತೆ' ಎಂದೇ ಸಂಬೋಧಿಸುತ್ತಿದ್ದರೆಂದೂ ಶ್ರೀಮತಿ ಲಲಿತಮ್ಮನವರು ಹೇಳುತ್ತಾರೆ.

48 — 49. ಕ್ರಮಸಂಖ್ಯೆ 34, ಪುಟ 17.

50. ಕ್ರಮಸಂಖ್ಯೆ 34, ಪುಟ31.

51. ಶ್ರೀಕಂಠಮೂರ್ತಿ ಕೆ ಆರ 1972. ಕರ್ನಾಟಕದ ಆಯುರ್ವೇದ ಇತಿಹಾಸ. ಪುಟ 82.

52. ಅದೇ ಪುಟ 90

53. ಲಲಿತಮ್ಮನವರ ಹೇಳಿಕೆ. ಇವರ ಹಿರಿಯರು ವಾಸವಾಗಿದ್ದ ಮನೆಯ ಚಿತ್ರವನ್ನು ಅನುಬಂಧದಲ್ಲಿ ಕೊಟ್ಟಿದೆ. ಇದು ಇತ್ತೀಚಿನವರೆಗೂ ಇದ್ದಿತ್ತು. ಹೆಣ್ಣುಮಕ್ಕಳೆಲ್ಲ ವಿವಾಹವಾಗಿ ಹೋಗಿ, ಜಾಗವನ್ನು ಮಾರಾಟ ಮಾಡಿದಾಗ ಆ ಮನೆಯನ್ನು ಕೆಡಹಿ ಅಲ್ಲಿ ಇದೀಗ ಹೊಸ ನಮೂನೆಯ ಮನೆ ನಿರ್ಮಾಣವಾಗಿದೆ

54. ಇದನ್ನು 'ಕೆಂಪನಾರಾಯಣ: ಕವಿ ಮತ್ತು ಕೃತಿ' (ಅಡಿಟಿಪ್ಪಣಿ ಸಂ.30) ಪುಸ್ತಕದಲ್ಲಿ ಕ 73 ಎಂದು (ಪುಟ 10) ಸೂಚಿಸಿದೆ. ಆ ನಂಬ್ರದ ಗ್ರಂಥವು 'ರುಕ್ಮಾಂಗದ ಚರಿತ್ರೆ' ಯಾಗಿದೆ.

55. ಈ ಗೂಢ ಲೇಖ ಸಂಜ್ಞೆಯ ಅರ್ಥವನ್ನು ತಿಳಿಯಬೇಕೆಂಬ ಕುತೂಹಲದಿಂದ, ಅದನ್ನು ಶತಾವಧಾನಿ ಆರ್. ಗಣೇಶರವರ ಗಮನಕ್ಕೆ ತಂದೆನು. ಅದನ್ನು ನೋಡಿ ಅವರು ಹೀಗೆ ಉತ್ತರ ಬರೆದಿದ್ದಾರೆ: 'ಈ ಪದ್ಯವು ಬಂಧ, ವರ್ಣ, ಗತಿ, ಶ್ಲೇಷ ಜಾತಿಗೆ ಸೇರಿದ 'ಚಿತ್ರ ಕವಿತ್ವ' ವೇನಲ್ಲ. ಆದರೆ ಇದನ್ನು ಕೇವಲ ಶಬ್ದಚಿತ್ರವೆಂದು ತಾತ್ತ್ವಿಕವಾಗಿ ಹೇಳಬಹುದಷ್ಟೇ. ಪಾಠದಲ್ಲಿ ತುಂಬ ಲಿಪಿ — ಅಕ್ಷರ ಸಾಂಕರ್ಯಗಳಿರುವುದರಿಂದ ಅರ್ಥ ಸ್ಪಷ್ಟವಾಗುತ್ತಿಲ್ಲ. ಇದು ಶಿವಸ್ತುತಿಯಂತಿದೆ. ಇಟ, ಇನ, ಈಶ, ಶತ್ಯಕ, ಶಾಸನ ಪ್ರತ್ಯಯಾದಿಗಳಿಂದಲೂ ಘೂಣ ಪ್ರಕಲ್ಪಿತವಾಗಿಯೂ ಇರುವುದರಿಂದ ಪದ್ಯದಲ್ಲಿ ಉಚ್ಚಾರ ಶ್ಲೇಷವೂ ಅರ್ಥಶ್ಲೇಷವೂ ಇದೆ. ಇದು ಶಾರ್ದೂಲ ವಿಕ್ರೀಡಿತ ವೃತ್ತದ ಪದ್ಯ. ಆದರೆ ಪಾಠದೋಷದಿಂದಾಗಿ ಛಂದಸ್ಸು ತುಂಬಾ ತಪ್ಪಿದೆ.

56. ವಿವರಗಳಿಗೆ: ಶಂಕರನಾರಾಯಣ ಉಡುಪ 1990. ಮುದ್ರಾಮಂಜೂಷ: ಹಸ್ತಪ್ರತಿಗಳ ಮತ್ತು ಮುದ್ರಿತ ಪ್ರತಿಗಳ ಪರಸ್ಪರ ಸಂಬಂಧ (ಅಪ್ರಕಟಿತ ಸಂಪ್ರಬಂಧ). ಪು. 17 — 18.

57. ಮುದ್ರಿತ ಪ್ರತಿಯ ಮುನ್ನುಡಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಶ್ರೀ ಎಚ್. ಎಂ. ಶಂಕರನಾರಾಯಣ ರಾವ್ ಅವರು — " ಸ್ವಲ್ಪ ಹೆಚ್ಚು ಕಡಿಮೆ ಸ್ತ್ರೀ ಪಾತ್ರ ರಹಿತವಾದ ಮುದ್ರಾ ಮಂಜೂಷದಲ್ಲಿ ಆಕ್ಷೇಪಕರವಾದ ವಿಷಯಗಳೇನಿವೆಯೋ ದೇವರೇ ಬಲ್ಲ! " (ಪು.9) ಎಂದಿದ್ದಾರೆ. (ನೋಡಿ ಅ.ಟಿ.ಸಂ.30). ಸಂಸ್ಕೃತದ 'ಮುದ್ರಾರಾಕ್ಷಸ' ನಾಟಕದಲ್ಲಿ ಸ್ತ್ರೀಪಾತ್ರಗಳು ಇಲ್ಲವೆಂಬಷ್ಟು ಕಡಿಮೆ ಹೌದು. ಆದರೆ 'ಮುದ್ರಾಮಂಜೂಷ' ವು ಸ್ತ್ರೀಪಾತ್ರ ರಹಿತವಾದ ಕೃತಿಯಲ್ಲ. ಕಥಾರಂಭದಲ್ಲಿಯೇ ಇಲ್ಲಿ ಸುನಂದಾ ದೇವಿಯ ಸುದೀರ್ಘ ವರ್ಣನೆಯಿದೆ. ಸರ್ವಾರ್ಥಸಿದ್ಧಿಯು ತನ್ನ ಪ್ರಿಯ ಪತ್ನಿಯರೊಡನೆ ಸುಕಥಾವಿನೋದ ಗೋಷ್ಠಿಯಲ್ಲಿ ಕಾಲ ಕಳೆಯುತ್ತಿದ್ದ ಚಿತ್ರಣವಿದೆ. ಮುರಾದೇವಿಯು ಪುತ್ರಮರಣ ಶೋಕದ ವಾರ್ತೆಯನ್ನು ಕೇಳುವುದಕ್ಕಿಂತ ಮೊದಲು ಗಂಗೆ ಸೇರಿದಳೆಂದು ಹೇಳಿದೆ. ಯುದ್ಧಕ್ಕೆ ನಂದರು ಹೊರಟು ನಿಂತಾಗ ತಮ್ಮ ತಮ್ಮ ಪತಿಗಳನ್ನು ಅಗಲಲಾರದೆ ವಿಲಪಿಸುವ ನಂದ ಪತ್ನಿಯರ ಜೀವಂತ ಚಿತ್ರಣವಿದೆ. ತನ್ನ ಯಜಮಾನನ ಅಣತಿಯಂತೆ ಪರ್ವತೇಶ್ವರನ ಬಳಿ ಸಾರಿ ತನ್ನ ಮಾತು, ಅಂಗ — ಭಂಗಿಗಳಿಂದಲೇ ಆತನನ್ನು ಆಕರ್ಷಿಸಿ ಬೆರೆತು, ಮತ್ತೆ ಅಪರಾಧಿ ಭಾವದಿಂದ ಅರಮನೆಯ ಹೊರಗೆ ಹೋಗುವ ವಿಷಕನ್ಯೆಯ ಚಿತ್ರಣವಿದೆ. ಮಿತ್ರ ಸ್ನೇಹಕ್ಕಾಗಿ ಜೀವ ಕೊಡಲು ತಯಾರಾದ ಚಂದನದಾಸನನ್ನು ಹಿಂಬಾಲಿಸುವ ಆತನ ಪತ್ನಿಯ ಅಳಲಿನ ಚಿತ್ರಣವಿದೆ — ಇವೆಲ್ಲ ಔಚಿತ್ಯಪೂರ್ಣವಾಗಿ ಚಿತ್ರಿಸಲ್ಪಟ್ಟಿವೆ.

ಸಂಪಾದಕರು ಈ ಕೃತಿಯನ್ನು ಸಂಪಾದಿಸುವಾಗ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡದ್ದರಿಂದ 'ರತಿರಭಸಜನಿತ ಸ್ವೇದಬಿಂದುಗಳು', 'ಅವಳಂ ಚುಂಬಿಸುತ ತಕ್ಕೈಸಿಕೊಂಡು ತನ್ನ ಶಯನ ಗೃಹದ ಮಂಚಕ್ಕೆ ಸೆಳೆದು ಮನದ ತವಕ ಹೆಚ್ಚಿ ಬರುತ್ತಿರಲು ನನ್ನ ಗಿಣಿಯೇ ನಾರೀಮಣಿಯೇ ಎಂದು ಆಲಿಂಗಿಸಿ ಚುಂಬಿಸಿ ಮನದಣಿಯುವಂತೆ ಕ್ರೀಡಿಸಿದನು' ಮುಂತಾದ ಶೃಂಗಾರದಮಾತುಗಳು ಆಕ್ಷೇಪಕರವಾಗಿ

ಕಂಡಿದ್ದರೆ ಅದು ಸಹಜವೇ ಆಗಿದೆ. ಹಾಗಾಗಿ ಅವುಗಳನ್ನು ಕೈಬಿಟ್ಟಿದ್ದಾನೆ.

58. 'ಚಂದ್ರಗುಪ್ತನಿಗೆ ಮಗಧರಾಜ್ಯವನ್ನು ಸಂಪಾದಿಸಿಕೊಡಲು ....' ಎಂದು ಮುನ್ನುಡಿಯಲ್ಲಿ ಹೇಳಿದೆ. ಸಾಮಾನ್ಯವಾಗಿ ಕಥೆಯು ಹಾಗೇ ಜನಜನಿತವಾಗಿದೆ. ಆದರೆ ಮುದ್ರಾಮಂಜೂಷದಲ್ಲಿ ಚಂದ್ರಗುಪ್ತನು ಸಂಪಾದಿಸಬಯಸಿದುದು ಗೌಡ ದೇಶವನ್ನು. ಅದರ ರಾಜಧಾನಿ ಪಾಟಲೀಪುರ. ಇಲ್ಲಿ ಮಗಧವು ಒಂದು ಸಣ್ಣ ರಾಜ್ಯ. ಅಲ್ಲಿಯ ರಾಜನು ಮೊದಲು ನಂದರಿಂದ ಪರಾಜಿತನಾಗಿದ್ದನು. ಹಾಗಾಗಿ ಮಗಧ ಪತಿಯು ಪರ್ವತರಾಜನ ಕಡೆಯಿಂದ ನಂದರ ವಿರುದ್ಧ ಯುದ್ಧಕ್ಕೆ ಬರುವನು.

59. ಈ ಬಗ್ಗೆ ಶ್ರೀ ಎಚ್.ಎಂ. ಶಂಕರನಾರಾಯಣ ರಾವ್ ಆಕ್ಷೇಪವೆತ್ತಿದ್ದು (ಅಡಿ ಟಿಪ್ಪಣಿ 30, ಪುಟ 27) ಅದರ ಪೂರ್ಣಪಾಠ ಹೀಗಿದೆ:
'ಹದಿನೆಂಟನೆಯ ಆಶಯದ ಕೊನೆಯಲ್ಲಿ' ಶ್ರೀ ನಾರಾಯಣಶರ್ಮ ವಿರಚಿತವಾದ ಚಂಪೂ ಗ್ರಂಥದಲ್ಲಿ' ಎಂದು ಹೇಳಿರುವುದರಿಂದ, ಕವಿ ಇದನ್ನು ಚಂಪೂ ಗ್ರಂಥವೆಂದು ಭಾವಿಸಿರುವುದಾಗಿ ತೋರುತ್ತದೆ. ಚಂಪೂ ಕಾವ್ಯದಲ್ಲಿ ಗದ್ಯಪದ್ಯಗಳು ಜೊತೆ ಜೊತೆಯಾಗಿಯೇ ಬರಬೇಕು. ಮುದ್ರಾಮಂಜೂಷದಲ್ಲಿ ಕನ್ನಡ ಪದ್ಯಗಳಿಲ್ಲ. ಗ್ರಂಥದ ಮೊದಲಲ್ಲಿ ಹಾಗೂ ಕೊನೆಯಲ್ಲಿ ಬರುವ ಎರಡು ಅನುಷ್ಟುಪ್, ಎರಡು ಆರ್ಯಾವೃತ್ತಗಳನ್ನು ಬಿಟ್ಟರೆ, ಉದಾಹೃತ ಸಂಸ್ಕೃತ ಶ್ಲೋಕಗಳನ್ನುಳಿದರೆ ಸಮಗ್ರ ಗ್ರಂಥ ಕನ್ನಡ ಗದ್ಯದಲ್ಲಿದೆ. ಈ ಪದ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬಹುಶಃ ವಿದ್ವಾಂಸರ ಮನ್ನಣೆಯನ್ನು ದೊರಕಿಸಿಕೊಳ್ಳಲು — ಕವಿ ತನ್ನ ಕೃತಿಯನ್ನು ಚಂಪೂ ಗ್ರಂಥವೆಂದು ಕರೆದಿರಬಹುದು.'

ಇವರು ಹಸ್ತಪ್ರತಿಗಳನ್ನು ನೋಡಿದ್ದವರು. ಅವುಗಳಲ್ಲಿ ಉದಾಹೃತ ಸಂಸ್ಕೃತ ಶ್ಲೋಕಗಳಿಲ್ಲ ವೆಂಬುದನ್ನು ಗುರುತಿಸಿದವರು (ಅದೇ ಪು.12). ಹಾಗಿದ್ದೂ ಹಸ್ತಪ್ರತಿಯ ಕೊನೆಯಲ್ಲಿ 'ಏನು ಹೇಳಿದೆಯೆಂಬ ವಿಚಾರವನ್ನು ಇವರು ಗಮನಿಸಿದಂತಿಲ್ಲ. ಅಲ್ಲಿ ಇದನ್ನು ಕಾವ್ಯ ಗ್ರಂಥ ವೆಂದೇ ಹೇಳಿದೆ. ಅಷ್ಟುಮಾತ್ರವಲ್ಲ; ಸ್ವತಃ ಸ್ಟೀವನ್ಸನನು ಮೊದಲ ಮುದ್ರಣದ ಪ್ರತಿಯಲ್ಲಿ ಇದನ್ನು 'ಚಂಪೂ ಗ್ರಂಥ' ವೆಂದು ಕರೆದಿಲ್ಲ. 'ಕಾವ್ಯಗ್ರಂಥ' ಎಂದೇ ಹೇಳಿದ್ದಾನೆ. ನಾಲ್ಕನೆಯ ಮುದ್ರಣದ ಕಾಲದಲ್ಲಿ ತತ್ಕಾಲೀನ (ಅನಾಮಧೇಯ) ಸಂಪಾದಕನು ಇದರಲ್ಲಿರುವ ಉದಾಹೃತ ಶ್ಲೋಕಗಳನ್ನು ಗಮನಿಸಿ, ತಪ್ಪು ತಿಳುವಳಿಕೆಯಿಂದ 'ಚಂಪೂಗ್ರಂಥ' ವೆಂದು ಕರೆದನು. ಈ ತಪ್ಪನ್ನು ಮೂಲ ಕೃತಿಕಾರನ ಮೇಲೆ ಹೊರಿಸುವುದು ಸರಿಯಲ್ಲ. ಹಾಗಾಗಿ 'ವಿದ್ವಾಂಸರ ಮನ್ನಣೆಯನ್ನು ದೊರಕಿಸಿಕೊಳ್ಳಲು' ಇತ್ಯಾದಿ ಗಳೆಲ್ಲ ಅಪ್ರಸ್ತುತ.

60. ಅವುಗಳ ಯಥಾಪಾಠವನ್ನು 4ನೇ ಅಧ್ಯಾಯದ ಅಷ್ಟಾದಶ ವರ್ಣನೆಯಲ್ಲಿ ಕಾಣಬಹುದು.

61. ಹೀಗೆ ಉದ್ಧರಿಸಿ ಹೇಳಿದ ಪೂರ್ಣ ಶ್ಲೋಕಗಳ ಸಂಖ್ಯೆ 24. ಇವುಗಳಲ್ಲಿ ನಾಲ್ಕನ್ನು 'ಪಂಚತಂತ್ರ'ದಿಂದ, ಮೂರನ್ನು 'ಭರ್ತೃಹರಿಯ ಶತಕ' ಗಳಿಂದ, ಎರಡನ್ನು 'ಸುಭಾಷಿತ ರತ್ನ ಭಾಂಡಾಗಾರ' ದಿಂದ

ಮತ್ತು 'ಪ್ರಸನ್ನರಾಘವ', 'ವಿಕ್ರಮಚರಿತ', 'ನವರತ್ನಸ್ತೋತ್ರ, 'ಕುವಲಯಾನಂದ', 'ವೇತಾಲ ಪಂಚವಿಂಶತಿಕಾ', 'ಪ್ರಸಂಗಾಭರಣಂ', 'ಧರ್ಮವಿವೇಕ', 'ಶಾರ್ಙ್ಗಧರ ಪದ್ಧತಿ' ಗಳಿಂದ ತಲಾ ಒಂದೊಂದು ವೃತ್ತ ಅಥವಾ ಶ್ಲೋಕಗಳನ್ನು ಆಯ್ದುಕೊಳ್ಳಲಾಗಿದೆ. ಇವಲ್ಲದೆ ಇನ್ನು ಉಳಿದ 7 ಶ್ಲೋಕಗಳ ಮೂಲ ಗೊತ್ತಾಗಿಲ್ಲ.

ಈ ಉದಾಹೃತ ಶ್ಲೋಕಗಳಿಂದ ಮೂಲ ಕೃತಿಕಾರನ ಆಶಯಕ್ಕೆ ಭಂಗ ಬಂದಿದೆ ಎಂಬುದಕ್ಕೆ ಒಂದು ಉದಾಹರಣೆ ಹೀಗಿದೆ।

ಚಾಣಕ್ಯ ಚಂದ್ರಗುಪ್ತರು ಪರ್ವತರಾಜನ ಆಸ್ಥಾನಕ್ಕೆ ಬಂದು ನಂದರ ವಿರುದ್ಧ ಹೋರಾಡಲು ಸಹಾಯ ಮಾಡಬೇಕೆಂದು ಕೇಳಿಕೊಂಡಾಗ ಪರ್ವತರಾಜನು ಉಲೂಕ, ಶಬರವರ್ಮರೇ ಮೊದಲಾದವರೊಡನೆ ಮಂತ್ರಾಲೋಚನೆ ಮಾಡುತ್ತಾನೆ. ಆ ಸಂದರ್ಭದಲ್ಲಿ ಶಬರವರ್ಮನು — 'ನಂದರು ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡು ಕೊಬ್ಬಿದ್ದಾರೆ. ಎಷ್ಟು ಸಿಕ್ಕಿದರೂ ಅವರಿಗೆ ತೃಪ್ತಿಯಿಲ್ಲ. ಛಿದ್ರವುಂಟಾದ ಈ ಸಮಯದಲ್ಲಿಯೇ ನಾವು ಯುದ್ಧ ಮಾಡುವುದು ಲೇಸು — ಎಂದು ಈ ಶ್ಲೋಕವನ್ನು ಉದ್ಧರಿಸುತ್ತಾನೆ:

ಅಗ್ನಿರ್ವಿಪ್ರೋಯಮೋ ರಾಜಾ ಸಮುದ್ರಮುದರಂಗೃಹಂ ।
ಸಪ್ತೈತಾನಿ ನ ಪೂರ್ಯಂತೆ ಪೂರ್ಯಮಾಣಾ: ಪುನ:ಪುನ: ॥

ಇದರಲ್ಲಿ ಅಗ್ನಿ, ವಿಪ್ರ, ಯಮ, ರಾಜಾ··· ಹೀಗೆ ಏಳರಲ್ಲಿ ರಾಜರು (ಅಂದರೆ ನಂದರು) ಅತೃಪ್ತರು ಎಂದು ಹೇಳುವುದು ಸಂಪಾದಕನ ಉದ್ದೇಶ. ಆದರೆ ಇದೇ ಶ್ಲೋಕದಲ್ಲಿ ವಿಪ್ರ (ಅಂದರೆ ಚಾಣಕ್ಯ) ನಿಗೂ ಅದೇ ದೋಷ ಉಂಟಾಗುವುದರಿಂದ, ಆತನನ್ನು ಪಕ್ಷೀಕರಿಸುವುದೆಂದು ಹೇಳಿದರೆ ಪೂರ್ವಾಪರ ವಿರೋಧವಾಗುವುದು. ಆದ್ದರಿಂದ ಈ ಸಂದರ್ಭಕ್ಕೆ ಈ ಶ್ಲೋಕವು ಹೊಂದುವುದಿಲ್ಲ.

●●●●●●●●●●

ಅಧ್ಯಾಯ ಮೂರು

ಚಂದ್ರಗುಪ್ತ ಚಾಣಕ್ಯರ ಕಥೆ : ಉಗಮ ಮತ್ತು ವಿಕಾಸ   46 – 84

ಪೀಠಿಕೆ – ವಿಷ್ಣುಪುರಾಣ – ಭಾಗವತ – ವಾಯುಪುರಾಣ – ಮತ್ಸ್ಯಪುರಾಣಗಳಲ್ಲಿಯ ಕಥೆ – ಬೃಹತ್ಕಥೆ – (ಬೃಹತ್ಕಥಾ ಮಂಜರಿ ಮತ್ತು ಕಥಾ ಸರಿತ್ಸಾಗರ ಸಹಿತ) ಯಲ್ಲಿಯ ಕಥೆ.

ಬೌದ್ಧ ಪಾಠಾಂತರಗಳು – ಮಹಾವಂಶ ಮತ್ತು ಅದರ ಟೀಕೆಗಳು – ಮಿಲಿಂದ ಪನ್ಹನು ಹೇಳಿದ ಕಥೆ – ಆರ್ಯ ಮಂಜುಶ್ರೀ ಮೂಲ ಕಲ್ಪದಲ್ಲಿಯ ಕಥೆ.

ಜೈನ ಪಾಠಾಂತರಗಳು – ಹರಿಷೇಣನ ಬೃಹತ್ಕಥಾಕೋಶ – ಹೇಮಚಂದ್ರನ ಪರಿಶಿಷ್ಟಪರ್ವ, ವಡ್ಡಾರಾಧನೆ ರಾಜಾವಳೀ ಕಥಾಸಾರದಲ್ಲಿಯ ಕಥೆಗಳು.

ಗ್ರೀಕ ಪಾಠಾಂತರಗಳು – ಕರ್ಟಿಯಸನೆ ಹೇಳಿದ ಕಥೆ – ಡಯೊಡೋರಸನೆ ಹೇಳಿದ ಕಥೆ – ಪ್ಲುಟಾರ್ಕ ಹೇಳಿದ ಕಥೆ – ಜಸ್ಟಿನ ಹೇಳಿದ ಕಥೆ – ಅರಿಯನ ಹೇಳಿದ ಕಥೆ.

ಕೇವಲ ಒಂದೆರಡು ಹೆಸರುಗಳ ಸಾಮ್ಯವನ್ನು ಬಿಟ್ಟರೆ ಈ ಪಾಠಾಂತರ ಕಥೆಗಳಲ್ಲಿಯ ವಿವರಗಳನ್ನು ಮುದ್ರಾಮಂಜೂಷಾಕಾರನು ತನ್ನ ಕೃತಿಯಲ್ಲಿ ಅಳವಡಿಸಿಕೊಂಡಿಲ್ಲವೆಂಬ ನಿರ್ಣಯ.

ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕ : ಪ್ರಸ್ತಾವನೆ – ಕವಿವಿಚಾರ – ಏಳು ಅಂಕಗಳಲ್ಲಿಯ ನಾಟಕದ ಸಾರಾಂಶ – ಪೂರ್ಣವಾಗಿಯಲ್ಲದಿದ್ದರೂ ಕೆಂಪುನಾರಾಯಣನು ವಿಶಾಖದತ್ತನಿಗೆ ಋಣಿಯಾಗಿದ್ದನೆಂಬ ನಿರ್ಣಯ.

ಮುದ್ರಾರಾಕ್ಷಸ' ನಾಟಕದ ಪೂರ್ವಕಥೆಗಳು : ಮುದ್ರಾರಾಕ್ಷಸ ಪೂರ್ವ ಪೀಠಿಕಾ – ಮುದ್ರಾರಾಕ್ಷಸ ಕಾವ್ಯ – ಮುದ್ರಾರಾಕ್ಷಸ ನಾಟಕ ಕಥಾ – ಮುದ್ರಾರಾಕ್ಷಸ ಕಥಾಸಾರ – ಮುದ್ರಾರಾಕ್ಷಸ ನಾಟಕ ವ್ಯಾಖ್ಯಾನ – (ಜಗದ್ಧರನೆಂಬ ವಿದ್ವಾಂಸನ ವ್ಯಾಖ್ಯಾನ – ನಾಟಕದ ತ್ರಿವೇಂದ್ರಂ ಹಸ್ತಪ್ರತಿಯಲ್ಲಿಯ ಪಾಠ – ಬಿಕಾನೆರ ಹಸ್ತಪ್ರತಿಯಲ್ಲಿಯ ಪಾಠ – ಬಂಗಾಳದ ಹಸ್ತಪ್ರತಿಯಲ್ಲಿಯ ಪಾಠ) – ಮತ್ತು ಮಹಾಕವಿ ಭೀಮನ 'ಪ್ರತಿಜ್ಞಾ ಚಾಣಕ್ಯ' ಕೃತಿಗಳನ್ನು ಗಮನಿಸಲಾಗಿದೆ. ಇವುಗಳಲ್ಲಿ ದಾಕ್ಷಿಣಾತ್ಯ ಪಾಠಗಳನ್ನು ಮಾತ್ರ ನಮ್ಮ ಕವಿ ನೋಡಿದ್ದಿರಬಹುದಾದ್ದರಿಂದ ಮುಂದಿನ ಅಧ್ಯಾಯದಲ್ಲಿ ಅವುಗಳ ತೌಲನಿಕ ಅಧ್ಯಯನ ಮಾಡಲಾಗುವುದು.

ಅಧ್ಯಾಯ ಮೂರು

ಚಂದ್ರಗುಪ್ತ — ಚಾಣಕ್ಯರ ಕಥೆ: ಉಗಮ ಮತ್ತು ವಿಕಾಸ

ಮುದ್ರಾಮಂಜೂಷದ ಕಥೆಯ ಹರಹು ತುಂಬಾ ವಿಸ್ತಾರವಾದುದು. ಇದು ಗೌಡ ದೇಶದ ಅರಸುಗಳ 'ಏಳುಬೀಳಿನ ಕಥೆ; ಚಾಣಕ್ಯನೆಂಬ ಬ್ರಾಹ್ಮಣನು ನವಕೋಟಿ ಶತೇಶ್ವರರಾದ ನಂದರನ್ನು ನಾಶಮಾಡಿ ಚಂದ್ರಗುಪ್ತನನ್ನು ರಾಜನನ್ನಾಗಿ ಮಾಡಿದ ಕಥೆ. ಸುಮಾರು ಎರಡು ಸಾವಿರದ ಮುನ್ನೂರು ವರ್ಷಗಳ ಹಿಂದೆ ನಡೆದಿದ್ದಿರಬಹುದಾದ ಈ ಐತಿಹಾಸಿಕ ವೃತ್ತಾಂತವನ್ನು, ಕನ್ನಡದ ಗದ್ಯ ಕಥೆಯಾಗಿ ಅಳವಡಿಸುವಲ್ಲಿ ಕವಿಯು ಎಲ್ಲಿಂದ ಮೂಲ ಸಾಮಗ್ರಿಗಳನ್ನು ಪಡೆದನೆಂಬುದನ್ನು ವಿಚಾರ ಮಾಡಬೇಕಾಗಿದೆ.

ಕವಿಯು ತನ್ನ ಕೃತಿಯ ಅವತರಣಿಕೆಯಲ್ಲಿ —' ಸಂಕ್ಷೇಪವಾಗಿ ಪುರಾಣದಲ್ಲಿ ಹೇಳಿದ ಕಥೆಯನ್ನು ··· ವಿವರಿಸಿ ಹೇಳುತ್ತಿರ್ದೆನ ' ಎಂದಿದ್ದಾನೆ. ಪುರಾಣಗಳು ಮುಖ್ಯವಾಗಿ ಇರುವುದು ಹದಿನೆಂಟು. ಇವುಗಳಲ್ಲಿ ವಿಷ್ಣುಪುರಾಣ, ಭಾಗವತ, ವಾಯುಪುರಾಣ ಮತ್ತು ಮತ್ಸ್ಯಪುರಾಣಗಳಲ್ಲಿ ಇದಕ್ಕೆ ಸಂಬಂಧಿಸಿದ ಕಥೆಯ ಸೂಚನೆಯಿರುವುದು. ಅವುಗಳಲ್ಲಿಯ ಮೂಲ ಪಾಠವು ಹೀಗಿದೆ:

<u>ಅ) ವಿಷ್ಣುಪುರಾಣ[1]:</u> ಅನುಲ್ಲಂಘಿತ ಶಾಸನಃ ಮಹಾಪದ್ಮಃ 'ಏಕಛತ್ರಾಂ ಪಾಥಿವೀಂ ಭೋಕ್ಷ್ಯತೇ ತಸ್ಯಾಪ್ಯಷ್ಟೌ ಸುತಾಃ ಸುಮಾಲಾದ್ಯಾಃ ಭವಿತಾರಃ । ತತ ಪುತ್ರಾಶ್ಚೈಕಂ ವರ್ಷಶತಂ ಅವನೀ ಪತಯೋ ಭವಿಷ್ಯಂತಿ । ತತಶ್ಚ ನವಚೈತಾನ್ನಂದಾನ ಕೌಟಿಲ್ಯೋ ನಾಮ ಬ್ರಾಹ್ಮಣಃ ಸಮುದ್ಧರಿಷ್ಯತಿ ತೇಷಾಮಭಾವೇ ಮೌರ್ಯಾಃ ಪೃಥಿವೀಂ ಭೋಕ್ಷ್ಯಂತಿ । ಕೌಟಿಲ್ಯ 'ಏವ ಚಂದ್ರಗುಪ್ತಂ ಉತ್ಪನ್ನಂ ರಾಜ್ಯೇ ಅಭಿಷೇಕ್ಷ್ಯತಿ । ತಸ್ಯಾಪಿ ಪುತ್ರೋ ಬಿಂದುಸಾರೋ ಭವಿಷ್ಯತಿ । ···

ಮಹಾಪದ್ಮನು ತನ್ನ ಆಜ್ಞೆಗೆ ತಡೆಯಿಲ್ಲದೇ 'ಏಕಚ್ಛತ್ರಾಧಿಪತಿಯಾಗಿ ಭೂಮಿಯನ್ನು ಅನುಭವಿಸುವನು. ಅವನಿಗೆ ಸುಮಾಲರೇ ಮೊದಲಾದ ಎಂಟು ಜನ ಮಕ್ಕಳಾಗುವರು. ಮಹಾಪದ್ಮನೂ ಅವನ ಮಕ್ಕಳೂ ಒಂದು ನೂರು ವರ್ಷಗಳ ವರೆಗೆ ರಾಜರಾಗಿ ಭೂಮಿಯನ್ನು ಅನುಭವಿಸುವರು. ಈ ಒಂಬತ್ತು ಜನ ನಂದರನ್ನು ಕೌಟಿಲ್ಯನೆಂಬ ಬ್ರಾಹ್ಮಣನು ನಾಶಮಾಡುವನು. ಆಮೇಲೆ ಮೌರ್ಯರು ರಾಜರಾಗುವರು. ಕೌಟಿಲ್ಯನೇ ಚಂದ್ರಗುಪ್ತನನ್ನು ರಾಜನನ್ನಾಗಿ ಮಾಡುವನು. ಅವನ ಮಗನೇ ಬಿಂದುಸಾರನು ···

<u>ಆ) ಭಾಗವತ[2]:</u> ನವನಂದಾನ ದ್ವಿಜಃ ಕಶ್ಚಿತ ಪ್ರಪನ್ನಾನ್ ಉದ್ಧರಿಷ್ಯತಿ । ತೇಷಾಮಭಾವೇ ಜಗತೀಂ ಮೌರ್ಯಾಃ ಭೋಕ್ಷ್ಯಂತಿ ವೈ ಕಲೌ । ಸ 'ಏವ ಚಂದ್ರಗುಪ್ತಂ ವೈ ದ್ವಿಜೋ ರಾಜ್ಯೇ ಅಭಿಷೇಕ್ಷ್ಯತಿ । ತತ್ಸುತೋ ವಾರಿಸಾರಸ್ತು ··· ।

ಪಾಪಿಷ್ಠರಾದ ನವನಂದರನ್ನು ಬ್ರಾಹ್ಮಣನೊಬ್ಬನು ಕೊಲ್ಲುವನು. ಅವರು ನಷ್ಟರಾದ ಮೇಲೆ ಈ ಭೂಮಿಯನ್ನು ಮೌರ್ಯರು ಆಳುವರು. ಆ ಬ್ರಾಹ್ಮಣನೇ ಚಂದ್ರಗುಪ್ತನನ್ನು ರಾಜ್ಯಾಭಿಷಿಕ್ತನನ್ನಾಗಿ ಮಾಡುವನು. ಚಂದ್ರಗುಪ್ತನ ಮಗನು ವಾರಿಸಾರನು ...

<u>ಇ) ವಾಯುಪುರಾಣ[3]:</u> ಮಹಾನಂದಿ ಸುತಶ್ಚಾಪಿ ಶೂದ್ರಾಯಾಂ ಕಾಲ ಸಂವೃತ: । ಉತ್ಪತ್ಸ್ಯತೇ ಮಹಾಪದ್ಮ: ಸರ್ವಕ್ಷತ್ರಾಂತರೇ ನೃಪ: ॥ ತತ: ಪ್ರಭೃತಿ ರಾಜಾನೋ ಭವಿಷ್ಯಾ: ಶೂದ್ರಯೋನಯ: । ಏಕರಾಟ ಸ ಮಹಾಪದ್ಮ: 'ಏಕಚ್ಛತ್ರೋ ಭವಿಷ್ಯತಿ ॥ ಅಷ್ಟಾವಿಂಶತಿ ವರ್ಷಾಣಿ ಪೃಥಿವೀಂ ಪಾಲಯಿಷ್ಯತಿ । ಸರ್ವಕ್ಷತ್ರಹೃತೋದ್ಧೃತ್ಯ ಭಾವಿನೋಽರ್ಥಸ್ಯ ವೈ ಬಲಾತ ॥ ಸಹಸ್ರಾ: ತತ್ಸುತಾಹ್ಯಷ್ಟೌ ಸಮಾ ದ್ವಾದಶ ತೇ ನೃಪಾ: । ಮಹಾಪದ್ಮಸ್ಯ ಪರ್ಯಾಯೇ ಭವಿಷ್ಯಂತಿ ನೃಪಾ: ಕ್ರಮಾತ । ಉದ್ಧರಿಷ್ಯತಿ ತಾನ ಸರ್ವಾನ ಕೌಟಿಲ್ಯೋ ವೈ ದ್ವಿರಷ್ಟಭಿ: । ಭುಕ್ತ್ವಾ ಮಹೀಂ ವರ್ಷಶತಂ ನಂದೇಂದು: ಸ ಭವಿಷ್ಯತಿ ॥ ಚಂದ್ರಗುಪ್ತಂ ನೃಪಂ ರಾಜ್ಯೇ ಕೌಟಿಲ್ಯ: ಸ್ಥಾಪಯಿಷ್ಯತಿ । ಚತುರ್ವಿಂಶತ ಸಮಾ ರಾಜಾ: ಚಂದ್ರಗುಪ್ತೋ ಭವಿಷ್ಯತಿ ॥

ಮಹಾನಂದಿಯ ಕುಮಾರನೂ ಶೂದ್ರ ಸ್ತ್ರೀಯಲ್ಲಿ ಉತ್ಪನ್ನನೂ ಆದ ಮಹಾಪದ್ಮನು ರಾಜನಾಗಿ ಈ ಭೂಮಂಡಲವನ್ನು ಪಾಲಿಸುವನು. ಅನಂತರ ಶೂದ್ರವಂಶೀಕರೇ ರಾಜರಾಗುವರು. ಆ ಮಹಾಪದ್ಮನು 'ಏಕಚ್ಛತ್ರಾಧಿಪತಿಯೂ ಚಕ್ರವರ್ತಿಯೂ ಆಗಿ ಇಪ್ಪತ್ತೆಂಟು ವರ್ಷಗಳ ಕಾಲ ಈ ಭೂಮಿಯನ್ನು ಪಾಲಿಸುವನು. ಮುಂದೆ ನಡೆಯಬೇಕಾದ ಅರ್ಥಾನುಗುಣವಾಗಿ ಇವನು ಸಕಲ ರಾಜರನ್ನು ಜಯಿಸಿ ರಾಜ್ಯವನ್ನು ನಿಷ್ಕಂಟಕವನ್ನಾಗಿ ಮಾಡಿ ಆಳುವನು. ಅವನ ಮಕ್ಕಳಾದ ಹನ್ನೆರಡು ಜನ ರಾಜರುಗಳು ಸಾವಿರದೆಂಟು ವರ್ಷಗಳು ಕ್ರಮವಾಗಿ ರಾಜ್ಯವಾಳುವರು. ಈ ಮಹಾಪದ್ಮನ ಪರ್ಯಾಯ ಕಾಲವು ಈ ರೀತಿಯಾಗುವುದು. ಕೌಟಿಲ್ಯ ನಾಮಕನಾದ ಚಾಣಕ್ಯನು ಈ ಸಮಸ್ತ ರಾಜರುಗಳನ್ನು ಮೂಲೋತ್ಪಾಟನ ಮಾಡಿ ನಂದರ ಶತ್ರುವಾದ ಚಂದ್ರಗುಪ್ತನಿಗೆ ಆ ರಾಜ್ಯವನ್ನು ಕೊಡುವನು. ನಂದ ಕುಲಮಣಿಯಾದ ಚಂದ್ರಗುಪ್ತನು ಚಾಣಕ್ಯನಿಂದ ರಾಜ್ಯವನ್ನು ಹೊಂದಿ ಇಪ್ಪತ್ತನಾಲ್ಕು ವರ್ಷಗಳ ಕಾಲ ರಾಜ್ಯವನ್ನಾಳುವನು.

<u>ಈ) ಮತ್ಸ್ಯಪುರಾಣ[4]:</u> ಮಹಾನಂದಿ ಸುತಶ್ಚಾಪಿ ಶೂದ್ರಾಯಾಂ ಕಲಿಕಾಂಶಜ: । ಉತ್ಪತ್ಸ್ಯತೇ ಮಹಾಪದ್ಮ: ಸರ್ವಕ್ಷತ್ರಾಂತಕೋ ನೃಪ: । ತತ: ಪ್ರಭೃತಿ ರಾಜಾನೋ ಭವಿಷ್ಯಾ: ಶೂದ್ರಯೋನಯ: । 'ಏಕರಾಟ ಸ ಮಹಾಪದ್ಮ: 'ಏಕಚ್ಛತ್ರೋ ಭವಿಷ್ಯತಿ ॥ ಅಷ್ಟಾಶೀತಿಸ್ತು ವರ್ಷಾಣಿ ಪೃಥಿವ್ಯಾಂ ಚ ಭವಿಷ್ಯತಿ । ಸರ್ವಕ್ಷತ್ರ ಮುಥೋತ್ಪಾದ್ಯ ಭಾವಿನಾರ್ಥೇನ ಚೋದಿತ: ॥ ಸುಕಲ್ಪಾದಿ ಸುತಾಹ್ಯಷ್ಟೌ ಸಮಾ ದ್ವಿದಶ ತೇ ನೃಪಾ: । ಮಹಾ ಪದ್ಮಸ್ಯ ಪರ್ಯಾಯೇ ಭವಿಷ್ಯಂತಿ ನೃಪಾ: ಕ್ರಮಾತ । ಉದ್ಧರಿಷ್ಯತಿ ಕೌಟಿಲ್ಯ: ಸರ್ವ್ಯೈ: ದ್ವಾದಶಭಿ: ಸುತಾನ । ಕೌಟಿಲ್ಯಶ್ಚಂದ್ರಗುಪ್ತಂ ತು ತತೋ ರಾಷ್ಟ್ರೇಭಿಷೇಕ್ಷ್ಯತಿ ॥ ಭುಕ್ತ್ವಾ ಮಹೀಂ ವರ್ಷಶತಂ ತತೋ ಮೌರ್ಯಾನ ಗಮಿಷ್ಯತಿ ॥

ಮಹಾನಂದಿಗೆ ಶೂದ್ರ ಸ್ತ್ರೀಯೊಬ್ಬಳ ಹೊಟ್ಟೆಯಲ್ಲಿ ಕಲಿಯ ಅಂಶದಿಂದ ಮಹಾಪದ್ಮನೆಂಬ ಮಗನು ಹುಟ್ಟುವನು. ಅವನು ಅರಸನಾಗಿ ಕ್ಷತ್ರಿಯರೆಲ್ಲರ ವಿನಾಶಕ್ಕೂ ಕಾರಣನಾಗುವನು. ಅಲ್ಲಿಂದ ಮುಂದೆ ಶೂದ್ರವರ್ಣದವರು ರಾಜರಾಗುವರು. ಆ ಮಹಾಪದ್ಮನು ಚಕ್ರವರ್ತಿಯಾಗಿ 'ಏಕಚ್ಛತ್ರಾಧಿಪತಿಯೆನಿಸುವನು. ಅವನು ಎಪ್ಪತ್ತೆಂಟು ವರ್ಷಗಳ ಕಾಲ ಭೂಪತಿಯಾಗಿರುವನು. ಕ್ಷತ್ರಿಯ ಕುಲವೆಲ್ಲವನ್ನೂ ಅವನು ನಿರ್ಮೂಲಗೊಳಿಸುವನು. ಮುಂದೆ ಹಾಗಾಗಬೇಕೆಂಬ ದೈವ ಸಂಕಲ್ಪವಿರುವುದರಿಂದಲೇ ಅವನಿಗೆ ಹಾಗೆ ಬುದ್ಧಿ ಹುಟ್ಟುವುದು. ಸುಕಲ್ಪ ಮುಂತಾದ ಎಂಟು ಜನರು ಮಹಾಪದ್ಮನ ಮಕ್ಕಳು. ಅವನ ತರುವಾಯ ಅವರು ಹನ್ನೆರಡು ವರ್ಷಗಳ ಕಾಲ ಅರಸರಾಗುವರು. ಆ ಬಳಿಕ ಕೌಟಿಲ್ಯನು ಮಹಾಪದ್ಮನ ಮಕ್ಕಳನ್ನು ನಿರ್ಮೂಲಗೊಳಿಸಿ ಚಂದ್ರಗುಪ್ತನಿಗೆ ರಾಜ್ಯದಲ್ಲಿ ಅಭಿಷೇಕ ಮಾಡುವನು. ಆ ಚಂದ್ರಗುಪ್ತನು ನೂರು ವರ್ಷ ಆಳಿದ ಬಳಿಕ ರಾಜ್ಯವು ಮೌರ್ಯ ವಂಶದ ಮುಂದಿನ ಅರಸರನ್ನು ಸೇರುವುದು.

ಈ ಎಲ್ಲಾ ಪುರಾಣದ ಹೇಳಿಕೆಗಳು ಹೆಚ್ಚು ಕಡಿಮೆ ಒಂದೇ ರೀತಿಯಾಗಿರುವುವು. ಇವುಗಳಲ್ಲಿ ಹೇಳಿದಂತೆ ನಂದರ ಅರಸು ಮಹಾಪದ್ಮ. ಆತನಿಗೆ ಎಂಟು ಜನ ಮಕ್ಕಳು. 'ಮುದ್ರಾಮಂಜೂಷ'ದಲ್ಲಿ ಅರಸು ಸರ್ವಾರ್ಥ ಸಿದ್ಧಿಯು ಚಂದ್ರವಂಶದವನು. ಅವನ ಒಂಬತ್ತು ಜನ ಮಕ್ಕಳೇ ನವನಂದರು. ಚಾಣಕ್ಯನು ನಂದರನ್ನು ಸಂಹರಿಸಿ ಚಂದ್ರಗುಪ್ತನಿಗೆ ಅವರ ರಾಜ್ಯವನ್ನು ಕೊಡಿಸಿದ. ವಿಸ್ತಾರವಾದ ಕಥೆ, ಯುದ್ಧ, ರಾಜತಂತ್ರಗಳ ವಿವರಗಳು ಪುರಾಣಗಳಲ್ಲಿಲ್ಲ. ಬದಲಾಗಿ ಆ ಹೇಳಿಕೆ ಮಾತ್ರ ಇದೆ. ಇಷ್ಟು ಸ್ವಲ್ಪ ವಸ್ತುವಿನಿಂದ ಅಷ್ಟು ವಿಸ್ತಾರವಾದ ಕಥೆಯನ್ನು ವಿವರಿಸಿ ಹೇಳುವುದೆಂದರೆ ಅದು ಆಶ್ಚರ್ಯದ ಮಾತೇ ಸರಿ. ಹಾಗಾಗಿ ಕವಿಯು ಇನ್ನು ಕೆಲವು ಆಕರಗಳನ್ನು ಅವಶ್ಯ ನೋಡಿರಬೇಕು.

ಇದೇ ವಸ್ತುವಿನ ಉತ್ತರ ಭಾಗದ ಕಥೆಯನ್ನು ಹೊಂದಿರುವ ಸಂಸ್ಕೃತ ನಾಟಕ 'ಮುದ್ರಾರಾಕ್ಷಸ'ಕ್ಕೆ ಬೃಹತ್ಕಥೆಯು ಆಧಾರವಿರಬಹುದೆಂದು ದಶರೂಪಕದ ವ್ಯಾಖ್ಯಾನಕಾರನಾದ ಧನಿಕನು ಹೇಳಿದ್ದರಿಂದ[5] ಅದನ್ನೀಗ ಗಮನಿಸಲಾಗುವುದು.

<u>ಬೃಹತ್ಕಥೆ[6]:</u> (ಬೃಹತ ಕಥಾಮಂಜರಿ ಮತ್ತು ಕಥಾ ಸರಿತ್ಸಾಗರ ಸಹಿತ): ಬೃಹತ್ಕಥೆಯನ್ನು ಗುಣಾಢ್ಯನೆಂಬವನು ಪೈಶಾಚೀ ಭಾಷೆಯಲ್ಲಿ ಬರೆದಿದ್ದನು. ಸಾತವಾಹನನೆಂಬವನು ಅದಕ್ಕೆ ಪೀಠಿಕಾರೂಪವಾದ 'ಕಥಾಪೀಠ' ಲಂಬಕವನ್ನು ಬರೆದಿದ್ದನು. ಇದರಲ್ಲಿ ಮತ್ತು ಇದನ್ನು ಅನುಸರಿಸಿ ಬರೆದವುಗಳೆಂದು ಹೇಳಲಾದ ಕ್ಷೇಮೇಂದ್ರನ 'ಹ ಬೃಹತ ಕಥಾ ಮಂಜರಿ' ಹಾಗೂ ಸೋಮದೇವನ 'ಕಥಾ ಸರಿತ್ಸಾಗರ'ಗಳಲ್ಲಿಯೂ ಕಥಾಪೀಠ ಲಂಬಕಗಳಿದ್ದು, ಅವುಗಳಲ್ಲಿ ನಂದರ, ಚಂದ್ರಗುಪ್ತ — ಚಾಣಕ್ಯರ ಪ್ರಸ್ತಾಪವಿದೆ. ಅವುಗಳ ಸಂಕ್ಷೇಪ ರೂಪ ಇಂತಿದೆ:

'ವರರುಚಿಯು ನಂದನಲ್ಲಿ ಮಂತ್ರಿತ್ವ ಮಾಡಿ, ಬೇಡಗೊಂಡು ವಿಂಧ್ಯವಾಸಿನಿಯ ದರ್ಶನಕ್ಕೆ ಹೋದನು. ಅಲ್ಲಿ ಇಂದ್ರದತ್ತ, ವ್ಯಾಡಿಯರೆಂಬ ಸಹೋದರರ ದರ್ಶನವಾಯಿತು. ಇವರು ಪಾಟಲೀಪುರದಲ್ಲಿದ್ದ ವರ್ಷನೆಂಬ ಬ್ರಾಹ್ಮಣನಲ್ಲಿ ವಿದ್ಯೆಯನ್ನು ಕಲಿತರು. ಗುರುದಕ್ಷಿಣೆಯನ್ನು ಸಂಪಾದಿಸಲು ಅಯೋಧ್ಯೆ

ಯಲ್ಲಿ ಶಿಬಿರ ಮಾಡಿಕೊಂಡಿದ್ದ ನಂದನನ್ನು ನೋಡುವುದಕ್ಕೆ ಹೋದರು. ಅವರು ಅಲ್ಲಿ ತಲಪುವುದಕ್ಕೂ ರಾಜನು ಕಾಲಾಧೀನನಾಗುವುದಕ್ಕೂ ಸರಿಹೋಯಿತು. ಆಗ ಇಂದ್ರದತ್ತನು ಯೋಗ ಬಲದಿಂದ ನಂದನ ದೇಹವನ್ನು ಹೊಕ್ಕನು. ವರ ರುಚಿಯು ಯೋಗನಂದನನ್ನು ನೋಡಿ ಗುರುದಕ್ಷಿಣೆಯನ್ನು ಬೇಡಲು ಅವನು ಒಂದು ಕೋಟಿ ಹೊನ್ನನ್ನು ಕೊಡುವಂತೆ ಮಂತ್ರಿಯಾದ ಶಕಟಾಲನಿಗೆ ಆಜ್ಞೆ ಮಾಡಿದನು. ಪರಕಾಯ ಪ್ರವೇಶವನ್ನು ಊಹಿಸಿ ಶಕಟಾಲನು ಇಂದ್ರದತ್ತನ ದೇಹವನ್ನು ಸುಡಿಸಿದನು. ಯೋಗನಂದನು ವರರುಚಿಯನ್ನು ಮಂತ್ರಿಯನ್ನಾಗಿ ಮಾಡಿಕೊಂಡನು.

‘ ಯೋಗದಲ್ಲಿದ್ದ ಬ್ರಾಹ್ಮಣನನ್ನು ಸುಡಿಸಿ ಬಿಟ್ಟನೆಂದು ತಪ್ಪು ಹೊರಿಸಿ ಶಕಟಾಲನನ್ನೂ ಅವನ ನೂರು ಮಂದಿ ಮಕ್ಕಳನ್ನೂ ರಾಜನು ಹಾಳು ಭಾವಿಗೆ ಹಾಕಿಸಿದನು. ನಿತ್ಯವೂ ಒಂದು ಶ್ರಾವೆಯಲ್ಲಿ ಅನ್ನ, ಒಂದು ಶ್ರಾವೆಯಲ್ಲಿ ನೀರು — ಇಷ್ಟು ಮಾತ್ರ ಅಲ್ಲಿಗೆ ಹೋಗುತ್ತಿದ್ದು ಮಕ್ಕಳ ಅಣತಿಯಂತೆ ಶಕಟಾಲನೊಬ್ಬನು ಮಾತ್ರ ಮುಯ್ಯಿ ತೀರಿಸಿಕೊಳ್ಳಲೆಂದು ಜೀವ ಹಿಡಿದುಕೊಂಡಿದ್ದನು. ಅನಂತರ ಯೋಗನಂದನು ಪಾಟಲೀಪುತ್ರಕ್ಕೆ ಬಂದನು. ವರರುಚಿಯು ಅವನ ಮಂತ್ರಿಯಾಗಿದ್ದನು.

‘ ಕಾಲಕ್ರಮದಲ್ಲಿ ಯೋಗನಂದನು ಕಾಮಿಯೂ ವಿಶೃಂಖಲನೂ ಆದನು. ಆದ್ದರಿಂದ ಶಕಟಾಲನ ಸಹಾಯವಿರುವುದು ಒಳ್ಳೆಯದೆಂದು ವರರುಚಿಯು ಅವನನ್ನು ಎತ್ತಿ ತರಿಸಿ ಮತ್ತೆ ಮಂತ್ರಿಯನ್ನಾಗಿ ಮಾಡಿದನು.

‘ ಒಮ್ಮೆ ಚಿತ್ರಗಾರನು ಬರೆದ ಯೋಗನಂದನ ಮತ್ತು ಅವನ ಹೆಂಡತಿಯ ಚಿತ್ರ ನೋಡಿ ವರ ರುಚಿಯು ಅದರ ವಿಲಕ್ಷ ಲಕ್ಷಣಗಳಿಂದ ಸೊಂಟದ ಬಳಿಯ ಮಚ್ಚೆಯನ್ನು ಊಹಿಸಿ ಬರೆದನು. ಇದರಿಂದ ಭ್ರಾಂತಿಗೊಳಗಾದ ರಾಜನು ವರರುಚಿಯನ್ನು ಕೊಲ್ಲಿಸುವಂತೆ ಶಕಟಾಲನಿಗೆ ಆಜ್ಞೆ ಮಾಡಿದನು. ಆದರೆ ಶಕಟಾಲನು ಈತನನ್ನು ಕೊಲ್ಲದೇ ತನ್ನ ಮನೆಯಲ್ಲಿ ಮುಚ್ಚಿಟ್ಟುಕೊಂಡು ಮತ್ತಾರನ್ನೋ ಕೊಂದು ವರರುಚಿಯನ್ನು ಕೊಂದಂತೆ ತಿಳಿಸಿದನು.

‘ ಒಮ್ಮೆ ಯೋಗ ನಂದನ ಮಗ ಹಿರಣ್ಯಗುಪ್ತನಿಗೆ ಹುಚ್ಚು ಹಿಡಿಯಿತು. ಅದನ್ನು ನೋಡಿದ ರಾಜನು — ‘ಈಗ ವರರುಚಿಯು ಇದ್ದಿದ್ದರೆ ಇದಕ್ಕೆ ಕಾರಣವನ್ನೂ, ನಿವಾರಣೆಯನ್ನೂ ಹೇಳುತ್ತಿದ್ದನು; ನಾನು ಅನ್ಯಾಯವಾಗಿ ಆತನನ್ನು ಕೊಲ್ಲಿಸಿದೆ' ಎಂದು ಪಶ್ಚಾತ್ತಾಪಪಟ್ಟನು. ಆಗ ಶಕಟಾಲನು ರಾಜನಿಂದ ಅಭಯವನ್ನು ಪಡೆದು ವರರುಚಿಯನ್ನು ಹೊರಕ್ಕೆ ತಂದನು. ವರರುಚಿಯು ಸರಸ್ವತೀ ವರಪ್ರಸಾದದಿಂದ ಹುಚ್ಚಿನ ಕಾರಣವನ್ನು ತಿಳಿದು ಹೇಳಿದನು. ಅಲ್ಲಿಂದ ವರರುಚಿಯು ಮನೆಗೆ ಬಂದಾಗ ತಾಯಿ, ಪತ್ನಿಯರು ಮೃತಹೊಂದಿದ್ದನ್ನು ಕೇಳಿ ದುಃಖಗೊಂಡು ವೈರಾಗ್ಯದಿಂದ ಕಾಡಿಗೆ ಹೋದನು.

'ಅತ್ತ ಶಕಟಾಲನು ಚಾಣಕ್ಯನನ್ನು ಅರಮನೆಯಲ್ಲಿನ ಬ್ರಾಹ್ಮಣಾರ್ಥಕ್ಕೆ ಕರೆದನು. ಸುಬಂಧುವೆಂಬ ಇನ್ನೊಬ್ಬ ಬ್ರಾಹ್ಮಣನು ಇರಲೆಂದು ರಾಜನು ಹಠ ಹಿಡಿದನು. ಚಾಣಕ್ಯನು ಕೋಪಗೊಂಡು ಮಾಟ ಕೃತ್ಯ ನಡೆಸಿದನು. ಅದರಿಂದ ನಂದನಿಗೆ ಜ್ವರ ಬಂದು ಒಂದು ವಾರದಲ್ಲಿ ಸತ್ತುಹೋದನು. ಆಮೇಲೆ ಶಕಟಾಲನು ಅವನ ಮಗನಾದ ಹಿರಣ್ಯಗುಪ್ತನನ್ನು ಕೊಂದು ಪೂರ್ವನಂದನ ಮಗನಾದ ಚಂದ್ರಗುಪ್ತನನ್ನು ಪಟ್ಟಕ್ಕೆ ತಂದನು. ಚಾಣಕ್ಯನನ್ನು ಅವನಿಗೆ ಮಂತ್ರಿಯನ್ನಾಗಿ ಮಾಡಿದ ಮೇಲೆ ಪುತ್ರಶೋಕದಿಂದ ಶಕಟಾಲನು ಕಾಡಿಗೆ ಹೊರಟುಹೋದನು.'

ಇಲ್ಲಿ ಕಥೆಯು ಹೀಗಿದ್ದು ಇದಕ್ಕೂ ಮುದ್ರಾಮಂಜೂಷಕ್ಕೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

ಬೃಹತ್ಕಥೆ	ಮುದ್ರಾಮಂಜೂಷ
1. ಇಂದ್ರದತ್ತನೆಂಬ ಬ್ರಾಹ್ಮಣನು ಯೋಗಬಲದಿಂದ ನಂದನ ದೇಹವನ್ನು ಹೊಕ್ಕವನು.	1. ಸರ್ವಾರ್ಥಸಿದ್ಧಿಯು ರಾಜನು. ನವನಂದರು ಆತನ ಮಕ್ಕಳು.
2. ಮೊದಲಿನಿಂದಲೂ ಮಂತ್ರಿಯಾಗಿದ್ದವನು ಶಕಟಾಲನು. ಯೋಗನಂದನು ರಾಜನಾದ ಮೇಲೆ ವರರುಚಿಯನ್ನು ಮಂತ್ರಿಯನ್ನಾಗಿ ಮಾಡಿಕೊಂಡಿದ್ದನು.	2. ಸರ್ವಾರ್ಥ ಸಿದ್ಧಿಗೆ ವಕ್ರನಾಸರೇ ಮೊದಲಾದ ಎಂಟು ಜನ ಮಂತ್ರಿಗಳು. ಅಮಾತ್ಯ ರಾಕ್ಷಸನು ಅವರಲ್ಲಿ ಪ್ರಸಿದ್ಧನಾದವನು.
3. ಯೋಗದಲ್ಲಿದ್ದ ಬ್ರಾಹ್ಮಣನನ್ನು ಸುಡಿಸಿಬಿಟ್ಟನೆಂದು ಯೋಗನಂದನು ತಪ್ಪುಹೊರಿಸಿ ಶಕಟಾಲನನ್ನೂ ಅವನ ಮಕ್ಕಳನ್ನೂ ಹಾಳು ಬಾವಿಗೆ ಹಾಕಿಸಿದನು. ಅಲ್ಲಿ ಶಕಟಾಲನೊಬ್ಬನು ಉಳಿದುಕೊಂಡನು.	3. ಮೌರ್ಯರು ತಮಗಿಂತ 'ಅಧಿಕರಾದಾರು' ಎಂಬ ಈರ್ಷೆಯಿಂದ ನಂದರು ಅವರನ್ನು ನೆಲಮಾಳಿಗೆಯಲ್ಲಿ ಕೂಡಿಹಾಕಿದರು. ಅಲ್ಲಿ ಚಂದ್ರಗುಪ್ತನೊಬ್ಬನು ಮಾತ್ರ ಉಳಿದುಕೊಂಡನು.
4. ಯೋಗನಂದನು ಕಾಮಿಯೂ ವಿಶೃಂಖಲನೂ ಆದಾಗ ಶಕಟಾಲನ ಸಹಾಯವಿರುವುದು ಒಳ್ಳೆಯದೆಂದು ವರರುಚಿಯು ಆತನನ್ನು ಎತ್ತಿ ತರಿಸಿ ಮಂತ್ರಿಯನ್ನಾಗಿ ಮಾಡಿದನು.	4. ಪರರಾಜರು ಕಪಟಸಿಂಹವನ್ನು ಕಳುಹಿಸಿದಾಗ ಅದರ ರಹಸ್ಯ ಭೇದ ಮಾಡಿದ್ದರಿಂದ ಚಂದ್ರಗುಪ್ತನು ಬಿಡುಗಡೆಗೊಂಡು ಬ್ರಾಹ್ಮಣ ಭೋಜನ ಗೃಹದ ಮೇಲ್ವಿಚಾರಕನಾಗಿ ನೇಮಿಸಲ್ಪಟ್ಟನು.
5. ಶಕಟಾಲನು ಚಾಣಕ್ಯನನ್ನು ಬ್ರಾಹ್ಮಣಾರ್ಥಕ್ಕೆ ಕರೆದನು.	5. ಚಾಣಕ್ಯನನ್ನು ಭೋಜನ ಶಾಲೆಗೆ ಕರೆದವನು ಚಂದ್ರಗುಪ್ತನು.

6. ಸುಬಂಧುವೆಂಬ ಇನ್ನೊಬ್ಬ ಬ್ರಾಹ್ಮಣನು ಇರಲೆಂದು ನಂದನು ಹಟ ಹಿಡಿದು ಚಾಣಕ್ಯನನ್ನು ಕಡೆಗಣಿಸಿದನು.

7. ಚಾಣಕ್ಯನು ನಂದರನ್ನು ಕೊಂದದ್ದು ಮಾಟ ಕೃತ್ಯದ ಮೂಲಕ.

8. ಶಕಟಾಲನು ಪೂರ್ವನಂದನ ಮಗನಾದ ಚಂದ್ರಗುಪ್ತನನ್ನು ಪಟ್ಟಕ್ಕೆ ತಂದನು.

9. ಶಕಟಾಲನು ಚಾಣಕ್ಯನನ್ನು ಚಂದ್ರಗುಪ್ತನ ಮಂತ್ರಿಯನ್ನಾಗಿ ಮಾಡಿದ ಮೇಲೆ ಪುತ್ರಶೋಕದಿಂದ ಕಾಡಿಗೆ ಹೋದನು.

6. ಚಾಣಕ್ಯನ ಮಹತ್ವವನ್ನು ಅರಿಯದೇ ಪಂಚೆ ಬ್ರಾಹ್ಮಣನೆಂದು ಹೀಗಳೆದು ನಂದರು ಆತನನ್ನು ಹೊರತಳ್ಳಿಸಿದರು.

7. ನಂದರನ್ನು ಸಂಹರಿಸಿದ್ದು ತಂತ್ರದ ಮೂಲಕ.

8. ಚಾಣಕ್ಯನು ಮೌರ್ಯನ ಮಗನಾದ ಚಂದ್ರಗುಪ್ತನನ್ನು ಪಟ್ಟಕ್ಕೆ ತಂದನು.

9. ಚಾಣಕ್ಯನು ನಂದರ ಮಂತ್ರಿಯಾಗಿದ್ದ ರಾಕ್ಷಸನನ್ನು ಚಂದ್ರಗುಪ್ತನಿಗೆ ಮಂತ್ರಿಯನ್ನಾಗಿ ಮಾಡಿದ ಮೇಲೆ ತಪಸ್ಸಿಗೆ ಹೋದನು.

ಬೃಹತ್ಕಥೆಯಲ್ಲಿ ಮುಖ್ಯ ಪಾತ್ರಗಳು ವರರುಚಿ ಮತ್ತು ಶಕಟಾಲರು. ಮುದ್ರಾಮಂಜೂಷದಲ್ಲಿ ಚಾಣಕ್ಯ ಮತ್ತು ರಾಕ್ಷಸರು. ಮುದ್ರಾಮಂಜೂಷದಲ್ಲಿಯ ಕಥೆಯ 'ಓಟ, ಘರ್ಷಣೆಯ ತೀವ್ರತೆ ಬೃಹತ್ಕಥೆಯ ಕಥೆಯಲ್ಲಿಲ್ಲ. ಇದರಿಂದ ಮುದ್ರಾಮಂಜೂಷಕಾರನು ಬೃಹತ್ಕಥೆಯ ಈ ಭಾಗಕ್ಕೆ ಋಣಿಯಾಗಿಲ್ಲವೆಂದು ಗೊತ್ತಾಗುವುದು.

••• ••• •••

ಬೌದ್ಧ ಪಾಠಾಂತರಗಳು[7]

(ಅ)

ಸಿಂಹಳ ದೇಶದ ಬೌದ್ಧ ವೃತ್ತಾಂತ 'ಮಹಾವಂಶ' ಮತ್ತು ಅದರ ಟೀಕೆಗಳು ಚಂದ್ರಗುಪ್ತ ಚಾಣಕ್ಯರ ಕಥೆಯನ್ನು ಹೇಳುತ್ತವೆ. ಮಹಾವಂಶವನ್ನು ಇಂಗ್ಲಿಷಿಗೆ ಅನುವಾದಿಸಿದ ಜ. ಟರ್ನರ ಅವರು ತಮ್ಮ ಗ್ರಂಥದ ಮುನ್ನುಡಿಯಲ್ಲಿ ಇದನ್ನು ಸಂಗ್ರಹಿಸಿ ಹೇಳಿದ್ದು ಅದರ ಮುಖ್ಯಾಂಶ ಹೀಗಿದೆ:

ನವನಂದರಲ್ಲಿ ಕೊನೆಯವನಾದ ಧನನಂದನು ಪ್ರಜೆಗಳಿಗೆ ಅಗಾಧ ತೆರಿಗೆ ಹೊರಿಸಿ ಸಂಪತ್ತನ್ನು ಕೂಡಿಹಾಕಿದ್ದ. ಆತನು ಎಂಬತ್ತು ಕೋಟಿ ಧನವನ್ನು ಸಂಗ್ರಹಿಸಿ ಗಂಗಾನದಿ ದಂಡೆಯ ಕೆಳಗೆ ಬಂಡೆಯ ಗುಹೆಯಲ್ಲಿ ಅಡಗಿಸಿಟ್ಟಿದ್ದನು.

ಬುದ್ಧನು ಜೀವಂತವಾಗಿದ್ದಾಗಲೇ ಶಾಕ್ಯವಂಶದ ಕೆಲವರು 'ವಿಧುಧಭೂ' ನೆಂಬ ರಾಜನಿಂದ ಹಿಮಾಲಯದ ಕಡೆಗೆ 'ಓಡಿಸಲ್ಪಟ್ಟಿದ್ದು, ಅವರು ಅಲ್ಲೇ ಒಂದು ಕಡೆ ನೆಲೆಸಿದ್ದರು. ಆ ನೆಲವು ಮಯೂರಗಳಿಂದ ತುಂಬಿದ್ದರಿಂದ, ಆ ವಂಶವು ಮೌರ್ಯವಂಶವೆಂದೇ ಪ್ರಸಿದ್ಧವಾಯಿತು.

ಅತ್ತ ಪಕ್ಷ ಶಿಲೆಯಲ್ಲಿ ಚಾಣಕ್ಯನೆಂಬ ಬ್ರಾಹ್ಮಣನು ವೇದ, ಮಂತ್ರ, ಯುದ್ಧ ಕೌಶಲ್ಯ ಹಾಗೂ ರಾಜನೀತಿಯಲ್ಲಿ ನಿಪುಣನಿದ್ದು ರಾಜದಂಡವನ್ನು ಹಿಡಿಯಲು ಸಮರ್ಥನಾಗಿದ್ದನು. ಆತನ ತಂದೆ ಮೃತಹೊಂದಿದ್ದನು. ಒಮ್ಮೆ ಅವನ ತಾಯಿಯು, ಆತನ ಬೆಳೆಯುತ್ತಿದ್ದ ಹಲ್ಲುಗಳನ್ನು ನೋಡಿ — 'ಆತನಿಗೆ ರಾಜತ್ವ ಬರುವ ಸಂಭವವಿದೆಯೆಂದೂ, ತನಗೆ ಮಾತ್ರ ಅದು ಇಷ್ಟವಿಲ್ಲವೆಂದೂ' ಹೇಳಿದಳು. ಪ್ರಭುತ್ವದ ಬದಲಾಗಿ ತಾಯಿಯ ಪ್ರೀತಿಯನ್ನೇ ಮೆಚ್ಚಿದ ಆತನು ತನ್ನ ಹಲ್ಲುಗಳನ್ನೇ ತುಂಡರಿಸಿಕೊಂಡನು ಮತ್ತು ಮೊದಲೇ ಕುರೂಪಿಯಾಗಿದ್ದ ತನ್ನ ಆಕೃತಿಯನ್ನು ಇನ್ನಷ್ಟು ವಿರೂಪಗೊಳಿಸಿಕೊಂಡನು.

ಪಾಟಲೀಪುರದ ಧನನಂದನು ಕಾಲಾಂತರದಲ್ಲಿ ಸಂಪತ್ತಿನ ಆಕಾಂಕ್ಷೆಯನ್ನು ಬಿಟ್ಟನು ಮತ್ತು ದಾನ ದತ್ತಿಗಳನ್ನು ಕೊಡಲು ಆರಂಭಿಸಿದನು. ಒಂದು ಧರ್ಮಛತ್ರವನ್ನು ಕಟ್ಟಿಸಿ ಅದರಲ್ಲಿ ಒಬ್ಬ ಅತ್ಯಂತ ಪ್ರಸಿದ್ಧ ಬ್ರಾಹ್ಮಣನಿಗೆ ನೂರು ಕೋಟಿ ಹಣವನ್ನೂ, ಅತ್ಯಂತ ಕಿರಿಯ ಬ್ರಾಹ್ಮಣನಿಗೆ ಒಂದು ಲಕ್ಷವನ್ನೂ ಕೊಡುವ 'ಏರ್ಪಾಡು ಮಾಡಿದನು. ಚಾಣಕ್ಯನು ತರ್ಕಕ್ಕಾಗಿ ಪಾಟಲೀಪುರಕ್ಕೆ ಬಂದು ಮುಖ್ಯ ಬ್ರಾಹ್ಮಣನಿಗಾಗಿ ಕಾದಿರಿಸಿದ್ದ ಆಸನದಲ್ಲಿ ಕುಳಿತನು. ಧನನಂದನು ಅಲ್ಲಿಗೆ ಬಂದು ಮುಖ್ಯಾಸನದಲ್ಲಿ ಈತನು ಕುಳಿತುಕೊಂಡಿದ್ದುದನ್ನು ನೋಡಿ ಎಳೆಸಿ ಹಾಕಿಸಿದನು. ಆಗ ಚಾಣಕ್ಯನು ಸಿಟ್ಟಿನಿಂದ ಎದ್ದು, ತನ್ನ ಜನಿವಾರವನ್ನು ಕಡಿದು ಹಾಕಿ ಆಭರಣಗಳನ್ನು ಎಸೆದುಬಿಟ್ಟು, ಬೌದ್ಧ ಸನ್ಯಾಸಿಯ ವೇಷವನ್ನು ಧರಿಸಿದನು. ಇದರಿಂದ ನಂದನ ಸಿಟ್ಟು 'ಓಡಿಹೋಗಿ, ಆತನು ಅಲ್ಲಿಂದ ಕಣ್ಮರೆಯಾದನು.

ನಂತರ ಪರಿಜನರಲ್ಲಿ ಪರ್ವತೇಶ್ವರನೆಂಬ ರಾಜಕುಮಾರನೊಬ್ಬನಿದ್ದನು. ಚಾಣಕ್ಯನು ಆ ರಾತ್ರಿ ಅವನಲ್ಲಿಗೆ ಹೋಗಿ ಆತನಿಗೆ ಸಾಮ್ರಾಜ್ಯವನ್ನು ಕೊಡುವುದಾಗಿ ಮಾತುಕೊಟ್ಟು ತನ್ನ ಕಡೆಗೆ ಮಾಡಿಕೊಂಡನು. ಅವರಿಬ್ಬರು ವಿಂಧ್ಯ ಪರ್ವತದ ಕಡೆಗೆ ಓಡಿಹೋದರು. ಚಾಣಕ್ಯನು ಕಾರ್ಷಾಪಣವೆಂಬ ನಾಣ್ಯಗಳನ್ನು ಪುನರ್ಮುದ್ರಿಸಿ ಎಂಬತ್ತು ಕೋಟಿಯಷ್ಟು ಹಣವನ್ನು ಮಾಡಿಕೊಂಡನು. ಪುನಃ, ಪಟ್ಟಕ್ಕೆ ಎನಿಸಬಹುದಾದ ಇನ್ನೊಬ್ಬ ತರುಣನನ್ನು ಹುಡುಕುತ್ತಾ ಅವನು ಮೌರ್ಯವಂಶದ ಚಂದ್ರಗುಪ್ತನ ಬಳಿಗೆ ಬಂದನು.

ಚಂದ್ರಗುಪ್ತನು ತನ್ನ ತಾಯಿಯ ಗರ್ಭದಲ್ಲಿದ್ದಾಗಲೇ, ನೆರೆಯ ರಾಜಕುಮಾರನೊಬ್ಬನು ಆಕ್ರಮಣ ಮಾಡಿ ಈತನ ತಂದೆಯನ್ನು ಕೊಂದಿದ್ದನು. ಗರ್ಭಿಣಿಯಾದ ರಾಣಿಯು ಪುಷ್ಪಪುರದಲ್ಲಿ ಆಶ್ರಯವನ್ನು ಪಡೆದಿದ್ದು, ಅಲ್ಲಿ ಅವಳು ಹಸುಗಳ ದೊಡ್ಡಿಯ ಬಳಿಯಲ್ಲಿ ಮಗುವನ್ನು ಹಡೆದಳು. ಚಂದ್ರನೆಂಬ ಹೆಸರಿನ ತಾಕತ್ತಾಳ ಎತ್ತು ಆ ಮಗುವನ್ನು ರಕ್ಷಿಸಿತು. ಹಾಗಾಗಿ ಮಗುವಿಗೆ ಚಂದ್ರಗುಪ್ತನೆಂದು ಹೆಸರಾಯಿತು. ಮಕ್ಕಳು ಆಟವಾಡುವಾಗ ಈತನು ರಾಜನ ಪಾತ್ರವನ್ನು ವಹಿಸಿದ್ದನು. ಸಂಭಾವ್ಯ ರಾಜನನ್ನು ಹುಡುಕುತ್ತಿದ್ದ ಚಾಣಕ್ಯನು ಈ ಹುಡುಗನನ್ನು ಕಂಡು, ಸಾವಿರ ಕಾರ್ಷಾಪಣಗಳನ್ನು ಕೊಟ್ಟು ಅವನನ್ನು ಕೊಂಡುಕೊಂಡನು. ಚಾಣಕ್ಯನು, ಪರ್ವತಕ ಮತ್ತು ಚಂದ್ರಗುಪ್ತರಿಬ್ಬರ ಕುತ್ತಿಗೆಗೂ ಲಕ್ಷ ರೂಪಾಯಿ ಬೆಲೆ ಬಾಳುವ ಚಿನ್ನದಲ್ಲಿ ಸುತ್ತಿದ ÷ ಉಣ್ಣೆದಾರವನ್ನು ತೊಡಿಸಿದನು.

ಒಮ್ಮೆ ಇಬ್ಬರು ರಾಜಕುಮಾರರಿಗೂ ಕನಸು ಬಿದ್ದು ಅವರಿಬ್ಬರೂ ಗುಟ್ಟಾಗಿ ಅದನ್ನು ಚಾಣಕ್ಯನಿಗೆ ತಿಳಿಸಿದರು. ಇದರಿಂದ ಚಾಣಕ್ಯನಿಗೆ — ಪ್ರಭುತ್ವಕ್ಕೆ ಚಂದ್ರಗುಪ್ತನೇ ಹೊರತು ಪರ್ವತಕನಲ್ಲ — ವೆಂಬ ವಿಚಾರ ತಿಳಿಯಿತು. ಒಂದು ದಿನ ಆ ಮೂವರೂ ಒಂದು ಮರದ ಕೆಳಗಡೆ ಮಲಗಿದ್ದರು. ಮೊದಲು ಚಾಣಕ್ಯ ಮತ್ತು ಪರ್ವತಕನು ಎದ್ದುಗೊಂಡರು. ಚಾಣಕ್ಯನು ಅವರಿಬ್ಬರ ಅರ್ಹತೆಯನ್ನು ಪರೀಕ್ಷಿಸಲು, ಪರ್ವತಕನ ಕೈಯಲ್ಲಿ ಖಡ್ಗವನ್ನು ಕೊಟ್ಟು, ಚಂದ್ರಗುಪ್ತನ ಕುತ್ತಿಗೆಯಲ್ಲಿರುವ ದಾರವನ್ನು ತುಂಡು ಮಾಡದೇ ತರುವಂತೆ ಹೇಳಿದನು. ಪರ್ವತನಿಗೆ ಅದು ಸಾಧ್ಯವಾಗಲಿಲ್ಲ. ಮತ್ತೊಂದು ದಿನ, ಪರ್ವತನು ನಿದ್ರಿಸುತ್ತಿದ್ದಾಗ ಆತನ ಕುತ್ತಿಗೆಯಲ್ಲಿದ್ದ ದಾರವನ್ನು ಅಂತೆಯೇ ತರುವಂತೆ ಚಾಣಕ್ಯನು ಚಂದ್ರಗುಪ್ತನಿಗೆ ಹೇಳಿದನು. ದಾರವನ್ನು ಕತ್ತರಿಸದೆ ಅದನ್ನು ತರುವ ಒಂದೇ ಉಪಾಯವೆಂದರೆ ಪರ್ವತನ ಕುತ್ತಿಗೆಯನ್ನು ಕಡಿಯುವುದೆಂದು ಕಂಡುಕೊಂಡ ಚಂದ್ರಗುಪ್ತನು ಅಂತೆಯೇ ಮಾಡಿ ಆ ದಾರವನ್ನು ತಂದು ಚಾಣಕ್ಯನಿಗೆ ಕೊಟ್ಟನು. ಚಂದ್ರಗುಪ್ತನ ಯೋಗ್ಯತೆಗೆ ಚಾಣಕ್ಯನು ತೃಪ್ತಿಪಟ್ಟುಕೊಂಡು ಏಳು ವರ್ಷಗಳಲ್ಲಿ ಅವನಿಗೆ ಎಲ್ಲವನ್ನೂ ಹೇಳಿಕೊಟ್ಟನು. ಚಂದ್ರಗುಪ್ತನು ಪ್ರಾಪ್ತ ವಯಸ್ಕನಾದಾಗ ಚಾಣಕ್ಯನು ಅಡಗಿಸಿಟ್ಟ ಹಣವನ್ನು ಹೊರತಂದನು ಮತ್ತು ಚಂದ್ರಗುಪ್ತನಿಗಾಗಿ ಒಂದು ಸೈನ್ಯವನ್ನು ಸಂಘಟಿಸಿದನು.

ಚಂದ್ರಗುಪ್ತ ಮತ್ತು ಚಾಣಕ್ಯರು ಹಳ್ಳಿ ಮತ್ತು ಪಟ್ಟಣಗಳನ್ನು ಮುತ್ತ ತೊಡಗಿದರೂ ಅವರು ಜಯಶಾಲಿಗಳಾಗಲಿಲ್ಲ. ಆಗ ಅವರು ಧಾಳಿ ಮಾಡುವುದನ್ನು ಬಿಟ್ಟು ಜನರ ಮನಸ್ಸನ್ನು ಅರಿಯ

ತೊಡಗಿದರು. ಒಮ್ಮೆ ಹೀಗೆ ಅವರಿಬ್ಬರು ಅಂಡಲೆಯುತ್ತಿದ್ದಾಗ ಒಬ್ಬಳು ಹೆಂಗಸು ತನ್ನ ಮಕ್ಕಳಿಗೆ ದೋಸೆಯನ್ನು ತಿನ್ನಲು ಕೊಡುತ್ತಿದ್ದಳು. ಆ ಮಕ್ಕಳು (ಬಿಸಿ) ದೋಸೆಯ ಬದಿಯನ್ನು ತಿನ್ನುವುದನ್ನು ಬಿಟ್ಟು ಮಧ್ಯದಲ್ಲಿ ಕೈಹಾಕುತ್ತಿದ್ದವು. ಆಗ ಆ ಹೆಂಗಸು ತನ್ನ ಮಕ್ಕಳನ್ನು — ಗಡಿನಾಡುಗಳನ್ನು ವಶಪಡಿಸಿಕೊಳ್ಳುವುದಕ್ಕಿಂತ ಮೊದಲು ಕೇಂದ್ರಸ್ಥಾನವನ್ನು ಮುತ್ತುವ ಚಂದ್ರಗುಪ್ತನಂತೆ ಹುಚ್ಚರೆಂದು — ಛೇಡಿಸಿದಳು. ಇದರಿಂದ ಪಾಠ ಕಲಿತ ಚಾಣಕ್ಯ ಮತ್ತು ಚಂದ್ರಗುಪ್ತರು, ಪುನಃ ತಮ್ಮ ಸೈನ್ಯವನ್ನು ಸಂಘಟಿಸಿ ಗಡಿನಾಡ ಪ್ರಾಂತಗಳನ್ನು ವಶಪಡಿಸಿಕೊಳ್ಳತೊಡಗಿದರು. ಅದಾದ ನಂತರ ಅವರು ಸುಲಭವಾಗಿ ಕುಸುಮಪುರವನ್ನು ಮುತ್ತಿ ಧನನಂದನನ್ನು ಕೊಂದು, ಸಿಂಹಾಸನವನ್ನು ತಮ್ಮದಾಗಿಸಿಕೊಂಡರು.

ತಕ್ಷಣವೇ ಚಂದ್ರಗುಪ್ತನನ್ನು ಸಿಂಹಾಸನಕ್ಕೇರಿಸದೇ ಚಾಣಕ್ಯನು, ಬೆಸ್ತನೊಬ್ಬನನ್ನು ಹುಡುಕಿ, ಆತನ ಸಹಾಯದಿಂದ ನಂದನು ಗಂಗಾ ನದಿಯಲ್ಲಿ ಅಡಗಿಸಿಟ್ಟ ಸಂಪತ್ತನ್ನು ಕಂಡುಹಿಡಿದನು. ಮೊದಲು ಆ ಬೆಸ್ತನಿಗೇ ರಾಜಾಧಿಕಾರ ಕೊಡುವೆನೆಂದು ಹೇಳಿ, ಆ ಸಂಪತ್ತನ್ನು ಹುಡುಕಿಯಾದ ಮೇಲೆ ಆ ಬೆಸ್ತನನ್ನು ಕೊಂದು ಚಂದ್ರಗುಪ್ತನನ್ನು ಸಮ್ರಾಟನನ್ನಾಗಿ ಮಾಡಿದನು.

ಮತ್ತೆ ಈ ಟೀಕೆಯಲ್ಲಿ ಚಾಣಕ್ಯನು ಚಂದ್ರಗುಪ್ತನ ದೇಹವನ್ನು ವಿಷ ಪ್ರತಿರೋಧಕವನ್ನಾಗಿ ಮಾಡಿದನೆಂದೂ, ಚಂದ್ರಗುಪ್ತನ ಸತ್ತ ರಾಣಿಯ ಗರ್ಭದಿಂದ ಬಿಂದುಸಾರನನ್ನು ಹೊರತೆಗೆಯಲಾಯಿತೆಂದೂ ಹೇಳಿದೆ. ಮತ್ತೆ ಬ್ರಾಹ್ಮಣ ಪುರಾಣಗಳಲ್ಲಿ ಹೇಳಿದುದಕ್ಕಿಂತ ಭಿನ್ನವಾಗಿ ಇಲ್ಲಿ — ನಂದನ ಬದಲಾಗಿ ಚಂದ್ರಗುಪ್ತನ ದೇಹದಲ್ಲಿ ಪರಕಾಯ ಪ್ರವೇಶ ಮಾಡಲಾಯಿತೆಂದೂ, ಹಾಗೆ ಮಾಡಿದವನು ದೇವಗರ್ಭನೆಂಬ ಯಕ್ಷನೆಂದೂ, ಬ್ರಾಹ್ಮಣ ಪುರೋಹಿತನೊಬ್ಬನಿಂದ ಆತನ ಈ ಉಪಾಯವನ್ನು ಕಂಡುಕೊಂಡ ಬಿಂದುಸಾರನು ಆ ಯಕ್ಷನನ್ನು ಕೊಲ್ಲಿಸಿದನೆಂದೂ ಹೇಳಲಾಗಿದೆ.

(೮)

ಮಿಲಿಂದ ಪನ್ಹನು ನಂದರು ಹಾಗೂ ಚಂದ್ರಗುಪ್ತ — ಚಾಣಕ್ಯರ ನಡುವಿನ ಘೋರ ಯುದ್ಧವನ್ನು ವರ್ಣಿಸುತ್ತಾನೆ. ಆತನ ಹೇಳಿಕೆಯಂತೆ ನಂದರ ಸೇನಾಧಿಪತಿ ಭದ್ರಶಾಲ. ಈ ಯುದ್ಧದಲ್ಲಿ ಅಸಂಖ್ಯಾತ ಕಾಲಾಳು, ಕುದುರೆ, ಆನೆ ಮತ್ತು ರಥಗಳು ನಾಶವಾದುದಾಗಿ ಆತ ಹೇಳುತ್ತಾನೆ.

(೯)

‘ಆರ್ಯ ಮಂಜುಶ್ರೀ ಮೂಲಕಲ್ಪ’ ವು ನಂದ, ಚಂದ್ರಗುಪ್ತ — ಚಾಣಕ್ಯರ ಬಗ್ಗೆ ಹೀಗೆ ಹೇಳುತ್ತದೆ:

ಶೂರಸೇನನ ನಂತರ ನಂದನು ಪಾಟಲೀಪುರದ ರಾಜನಾದನು. ಅವನು ಬಹು ದೊಡ್ಡದೂ ಬಲಿಷ್ಠವೂ ಆದ ಸೈನ್ಯವನ್ನು ಹೊಂದಿದ್ದನು. ನಿಜವಾಗಿಯೂ ಆತನು ಶೂರಸೇನನ ಒಬ್ಬ ಮಂತ್ರಿಯಾಗಿದ್ದವನು, ಮಂತ್ರವನ್ನೇ ಪ್ರಯೋಗಿಸಿ ಅನರ್ಘ್ಯ ಸಂಪತ್ತನ್ನು ಸಂಪಾದಿಸಿ ಸಿಂಹಾಸನವನ್ನು 'ಏರಿದ್ದನು. ನಂದರ ಕಾಲದಲ್ಲಿ ಬ್ರಾಹ್ಮಣ್ಯದ ಪುನರುತ್ಥಾನವಾಯಿತು. ಆ ನಂದನು ಮಗಧದ ತಾರ್ಕಿಕ ಬ್ರಾಹ್ಮಣರಿಗೆ ಹೆಚ್ಚು ಮಹತ್ವ ಕೊಟ್ಟಿದ್ದನು (ಹಾಗಾಗಿ ಈ ಬೌದ್ಧರ ಕೃತಿಯು ಆತನನ್ನು ನೀಚಕುಲಕಾಯತನು ಎಂದು ಕರೆಯುತ್ತದೆ). ಆತನ ಮಂತ್ರಿಯು ಪ್ರಸಿದ್ಧನಾದ ವರರುಚಿಯಾಗಿದ್ದನು. ಕೊನೆಯಲ್ಲಿ ನಂದನು ಆ ಮಂತ್ರಿಗಳನ್ನು ದೂರ ಮಾಡಿದ್ದರಿಂದ ಕಾಯಿಲೆ ಬಿದ್ದು ಸತ್ತನು. ಆತನು ಅರವತ್ತಾರು ವರ್ಷಗಳ ಕಾಲ ಆಳಿದ್ದನು. ಬ್ರಾಹ್ಮಣನಾದ ಪಾಣಿನಿಯು ಆತನ ಮಿತ್ರನಾಗಿದ್ದನು. ನಂದನ ನಂತರ ಚಂದ್ರಗುಪ್ತನು ಅರಸನಾದನು. ಆತನು ಬೌದ್ಧನಲ್ಲವಾದುದರಿಂದ ಮಧ್ಯರಾತ್ರಿಯಲ್ಲಿ ಸತ್ತನು. ಆಗ ಆತನ ಕಿರಿಯ ವಯಸ್ಸಿನ ಮಗನಾದ ಬಿಂದುಸಾರನನ್ನು ಪಟ್ಟಕ್ಕೇರಿಸಲಾಯಿತು. ಚಾಣಕ್ಯನೇ ಆತನ ಪ್ರಸಿದ್ಧ ಮಂತ್ರಿ. ಆತ ಬಹಳ ಸಿಟ್ಟಿನ ಮನುಷ್ಯ. (ಬೌದ್ಧರು ಆತನನ್ನು ನರಕಕ್ಕೆ ಕಳುಹಿಸಿ ತೃಪ್ತಿಪಟ್ಟುಕೊಂಡಿದ್ದಾರೆ).

ಜೈನ ಪಾಠಾಂತರಗಳು[8]

(ಅ)

ಹರಿಷೇಣ (ಕ್ರಿ.ಶ. 931–2) ನು ತನ್ನ ಬೃಹತ್ಕಥಾಕೋಶದಲ್ಲಿ ಚಾಣಕ್ಯನ ಈ ಕಥೆಯನ್ನು ಕೊಡುತ್ತಾನೆ:

ಪಾಟಲೀಪುತ್ರದಲ್ಲಿ ನಂದನೆಂಬ ರಾಜನು ಆಳುತ್ತಿದ್ದನು. ಅವನ ರಾಣಿ ಸುವ್ರತ. ಆತನಿಗೆ ಕವಿ, ಸುಬಂಧು ಮತ್ತು ಶಕಟರೆಂಬ ಮೂವರು ಪ್ರಸಿದ್ಧ ಮಂತ್ರಿಗಳಿದ್ದರು. ಅದೇ ನಗರದಲ್ಲಿ ಕಪಿಲನೆಂಬ ಬ್ರಾಹ್ಮಣನಿದ್ದನು. ಆತನ ಪತ್ನಿ ದೇವಿಲಾ. ಮಗನ ಹೆಸರು ಚಾಣಕ್ಯ. ಚಾಣಕ್ಯನು ಶಿಕ್ಷಣದ ಎಲ್ಲಾ ಶಾಖೆಗಳಲ್ಲಿ ವಿದ್ವಾಂಸನಾಗಿದ್ದನು. ಆತನ ಪತ್ನಿ ಯಶೋಮತಿ. ಕಪಿಲನಿಗೆ ಬಂಧುಮತಿಯೆಂಬ ಸಹೋದರಿಯಿದ್ದಳು. ಆಕೆಯನ್ನು ಆತ ನಂದನ ಮಂತ್ರಿಯಾದ ಕವಿಗೆ ಕೊಟ್ಟು ಮದುವೆ ಮಾಡಿದ್ದನು.

ಒಮ್ಮೆ ಗಡಿನಾಡ ಅರಸರುಗಳು ನಂದನ ವಿರುದ್ಧ ದಂಗೆಯೆದ್ದಾಗ, ಇದು ಕವಿಗೆ ಗೊತ್ತಾಗಿ ಆತನು ನಂದನಿಗೆ ಮಾಹಿತಿ ಕೊಟ್ಟನು. ರಾಜನು ಕವಿಗೆ ಪ್ರಜೆಗಳಿಂದ ದ್ರವ್ಯ ಸಂಗ್ರಹಿಸಿ ಗಡಿನಾಡ ರಾಜರುಗಳನ್ನು ಕೊಂಡುಕೊಳ್ಳುವಂತೆ ಹೇಳಿದನು. ನಂದನೇ ಹೀಗೆ ಆಜ್ಞೆ ಮಾಡಿದ್ದರೂ, ಖಜಾನೆಯು ಪೂರ್ಣವಾಗಿ ಖಾಲಿಯಾದಾಗ ಅದು ನಂದನನ್ನು ರೇಗಿಸಿತು. ಪರಿಣಾಮವಾಗಿ ಆತನು — ಕವಿ ಮತ್ತು ಆತನ ಕುಟುಂಬದವರನ್ನು ಹಾಳು ಬಾವಿಗೆ ತಳ್ಳುವಂತೆ ಆಜ್ಞೆ ಮಾಡಿದನು. ಪ್ರತಿನಿತ್ಯ ಅವರಿಗಾಗಿ ಒಂದು ಹಿಡಿಯಷ್ಟು ಆಹಾರವು ಅಲ್ಲಿಗೆ ಹೋಗುತ್ತಿತ್ತು. ಕವಿಯು — ನಂದನ ವಿರುದ್ಧ ಪ್ರತೀಕಾರ ಮಾಡಲು ಶಕ್ತರಾದವರು ಅದನ್ನು ತಿನ್ನಬಹುದೆಂದು ಹೇಳಿದನು. ಆಗ ಉಳಿದವರು ಆತನನ್ನೇ ಶಿಫಾರಸು ಮಾಡಿದರು. ಕವಿಯು ಬಾವಿಯ

ಬದಿಯಲ್ಲಿ ಒಂದು ಜಳ್ಳನ್ನು ತೋಡಿ, ಅಲ್ಲದೆ ಪ್ರತಿ ದಿನ ಬರುತ್ತಿದ್ದ ಆಹಾರವನ್ನು ಸೇವಿಸಿಕೊಂಡಿದ್ದನು. ಕುಟುಂಬದವರೆಲ್ಲ ತೀರಿಕೊಂಡರು. ಅವನು ಅದೇ ಸ್ಥಿತಿಯಲ್ಲಿ ಮೂರು ವರ್ಷಗಳ ಕಾಲ ಬದುಕುಳಿದನು. ಗಡಿನಾಡ ರಾಜರುಗಳು ಕವಿಗುಂಟಾದ ಈ ವಿಪತ್ತನ್ನು ಕೇಳಿ ನಂದನ ರಾಜಧಾನಿಯನ್ನು ಆಕ್ರಮಿಸತೊಡಗಿದರು. ತತ್ಕ್ಷಣವೇ ನಂದನು ಕವಿಯಲ್ಲಿ ಕ್ಷಮೆ ಕೇಳಿ ಅತನನ್ನು ಬಾವಿಯಿಂದ ಮೇಲಕ್ಕೆ ತಂದನು. ನಷ್ಟಭರ್ತಿಗಾಗಿ ರಾಜನು ಹಣದ ಎಲ್ಲಾ ವ್ಯವಹಾರವನ್ನು ಕವಿಯೇ ನೋಡಿಕೊಳ್ಳುವಂತೆ ವರವನ್ನು ಕೊಟ್ಟನು.

ಒಮ್ಮೆ ಚಾಣಕ್ಯನು ಹುಲ್ಲಿನ ಜೊಂಡೊಂದನ್ನು ಬೇರು ಸಹಿತ ಕೀಳುವುದನ್ನು ಕಂಡ ಕವಿಯು ಕಾರಣವನ್ನು ಕೇಳಿದನು. ಆ ಹುಲ್ಲು ತನ್ನ ಕಾಲನ್ನು ಚುಚ್ಚಿದುದರಿಂದ ಅದನ್ನು ತಾನು ಮೂಲೋತ್ಪಾಟನ ಮಾಡುವುದಾಗಿ ಚಾಣಕ್ಯನು ಹೇಳಿದನು. ಆತನ ಮಾತನ್ನು ಕೇಳಿದ ಕವಿಯು ನಂದನನ್ನು ಸಮೂಲ ನಾಶ ಮಾಡಬಲ್ಲ ವ್ಯಕ್ತಿ ಇವನೆಂದು ನಿಶ್ಚಯಿಸಿದನು. ಒಮ್ಮೆ ಕವಿಯು — ' ಒಬ್ಬ ಮನುಷ್ಯನು ರಾಜನೀತಿಯ ಒಳ್ಳೆ ತಿಳುವಳಿಕೆಯನ್ನು ಪಡೆದವನಾಗಿದ್ದು, ಪ್ರಯತ್ನ ಪಡಲು ನಿರ್ಧರಿಸಿದರೆ, ಅತನು ಖಂಡಿತಕ್ಕೂ ಜಗತ್ತನ್ನೇ ಗೆಲ್ಲುವನು' ಎಂಬ ಅರ್ಥ ಬರುವ ಪದ್ಯವನ್ನು ಬರೆದನು. ಚಾಣಕ್ಯನು ಇದನ್ನು ನೋಡಿ ಕವಿಯ ನಿರೀಕ್ಷೆಯನ್ನು ದೃಢಪಡಿಸಿಕೊಂಡನು.

ಒಮ್ಮೆ ಚಾಣಕ್ಯನು ತನ್ನ ಪತ್ನಿಯೊಂದಿಗೆ ಕವಿಯ ಮನೆಗೆ ಊಟಕ್ಕೆ ಹೋಗಿದ್ದನು. ಕವಿಯು ಚಾಣಕ್ಯನನ್ನು ಪರೀಕ್ಷಿಸಲು ಬಯಸಿ, ಚಾಣಕ್ಯನ ಮನೆಯ ಅಂಗಳದಲ್ಲಿ ಕೆಲವು ಚಿನ್ನದ ನಾಣ್ಯಗಳನ್ನು ಚೆಲ್ಲಿಸಿದನು. ಚಾಣಕನ ಪತ್ನಿ ಯಶೋಮತಿಯು ಆ ನಾಣ್ಯಗಳನ್ನು ಸಂಗ್ರಹಿಸಿಕೊಂಡಳು. ಆಕೆಯು ತನ್ನ ಪತಿಗೆ — ' ಬಹುಶ: ನಂದನು ಬ್ರಾಹ್ಮಣರಿಗೆ ಹಸುಗಳನ್ನು ದಾನ ಕೊಡುತ್ತಿದ್ದಾನೆ. ನೀವೂ ಹೋಗಿ ಹಸುಗಳನ್ನು ತನ್ನಿ' ಎಂದು ಹೇಳಿದಳು. ಕವಿಯ ಸಲಹೆಯಂತೆ ನಂದನೂ ಬ್ರಾಹ್ಮಣರಿಗೆ ಹಸುಗಳನ್ನು ಕೊಡತೊಡಗಿದನು. ಕವಿಯು ಚಾಣಕ್ಯನಿಗೂ ಸುದ್ದಿ ಮುಟ್ಟಿಸಿ ಮೊದಲ ಮಣೆಯಲ್ಲಿ ಕುಳಿತುಕೊಳ್ಳುವಂತೆ ಹೇಳಿದನು. ಚಾಣಕ್ಯನು ಅಂತೆಯೇ ಮಾಡಲು, ಒಂದರಿಂದ ಮತ್ತೊಂದು ಮಣೆಗೆ ಆತನನ್ನು ತಳ್ಳಲಾಯಿತು. ಕೊನೆಗೆ ಚಾಣಕ್ಯನಿಗೆ ಮಣೆಯೇ ಸಿಗಲಿಲ್ಲ. ಅಲ್ಲದೆ ಅಧಿಕಾರಿಗೆ ಇದನ್ನು ತಿಳಿಸಿದಾಗ, ಈತನನ್ನೇ ಹೊರಕ್ಕೆ ತಳ್ಳಿಹಾಕಿದರು. ಆಗ ಕೋಪಗೊಂಡ ಚಾಣಕ್ಯನು — ' ನಂದ ವಂಶವನ್ನೇ ಮೂಲೋತ್ಪಾಟನ ಮಾಡುವುದಾಗಿ ಪ್ರತಿಜ್ಞೆ ಮಾಡಿದನು ಮತ್ತು ' ನಂದರ ಸಿಂಹಾಸನವನ್ನು ಅಪೇಕ್ಷಿಸುವವರು ತನ್ನ ಬಳಿಗೆ ಬರಬೇಕೆಂದು ಘೋಷಿಸಿದನು. ಆಗ ಒಬ್ಬ ಮನುಷ್ಯನು ಆತನ ಬಳಿ ಬಂದು ನಿಂತನು. ಮತ್ತೆ ಅವರಿಬ್ಬರು ಸಮುದ್ರದ ಮಧ್ಯದ ಸುರಕ್ಷಿತ ಸ್ಥಳಕ್ಕೆ ತೆರಳಿದರು. ಬಳಿಕ ಚಾಣಕ್ಯನು ಗಡಿನಾಡ ಬೆಟ್ಟ ಗುಡ್ಡಗಳ ರಾಜರುಗಳೊಂದಿಗೆ ಒಪ್ಪಂದ ಮಾಡಿಕೊಂಡನು. ಅವರ ಸಹಾಯದಿಂದ ನಂದರನ್ನು ನಾಶಪಡಿಸಿ, ಪಾಟಲೀಪುರದಲ್ಲಿ ಆ ಮನುಷ್ಯನನ್ನು ಸ್ಥಾಪಿಸಿದನು.

ಬಹುಕಾಲದ ನಂತರ ಚಾಣಕ್ಯನು ವೈರಾಗ್ಯವನ್ನು ತಾಳಿ, ಜೈನ ಸಂನ್ಯಾಸಿಯಾದನು. ಐನೂರು ಜನ ಶಿಷ್ಯರೊಂದಿಗೆ ದಕ್ಷಿಣಕ್ಕೆ ತೆರಳಿ ಮಹಾಕ್ರೌಂಚಪುರದ ಪಶ್ಚಿಮದಲ್ಲಿ ವಾಸಿಸಿದನು. ನಂದನ ಮಂತ್ರಿಯಾಗಿದ್ದ ಸುಬಂಧು, ಯಾರನ್ನು ಚಾಣಕ್ಯನು ಕೊಲ್ಲಿಸಿದ್ದನೋ ಆತನು ಚಾಣಕ್ಯನ ವಿರುದ್ಧ ಕೋಪ ಪ್ರದರ್ಶಿಸಿ ಆತನಿಗೆ ಹಾನಿಯುಂಟು ಮಾಡ ಬಯಸಿದ್ದನು. ತತ್ಫಲವಾಗಿ ಆತನು ನರಕಕ್ಕೆ ಹೋದನು. ಈಗಲೂ ಚಾಣಕ್ಯನಿದ್ದ ಪುಣ್ಯಸ್ಥಾನವು ಅಲ್ಲಿದೆಯೆಂದೂ, ಸಾಧುಸಂತರು ಅಲ್ಲಿ ಪೂಜೆ ಸಲ್ಲಿಸುತ್ತಾರೆಂದೂ ಹೇಳುತ್ತಾರೆ.

(ಆ)

ಹರಿಷೇಣನ ಅದೇ ಗ್ರಂಥದ 157ನೆಯ ಕೊನೆಯ ಕಥೆಯಲ್ಲಿ ಶಕಟಾಲನನ್ನು ಕುರಿತು ಹೇಳುತ್ತದೆ. ಈ ಹಿಂದಿನ ಕಥೆಯಲ್ಲಿ ಹೇಳಿದಂತೆ ಶಕಟಾಲನು ನಂದರ ಪ್ರಸಿದ್ಧ ಮೂವರು ಮಂತ್ರಿಗಳಲ್ಲಿ ಒಬ್ಬನಾಗಿದ್ದಾನೆ. ಇಲ್ಲಿ ಆ ಶಕಟಾಲ ಜೈನ ಸನ್ಯಾಸಿಯಾದಂತೆ ತಿಳಿಸಿದೆ. ನಂದನ ಪತ್ನಿ ಸುನಂದೆಯೆಂದೂ ಇಲ್ಲಿ ಹೇಳಿದೆ. 'ಕಥಾಸರಿತ್ಸಾಗರ' ದಲ್ಲಿ ಹೇಳಿದ ಕಥೆಯಂತೆ ಇದು ಮುಂದುವರಿಯುತ್ತದೆ. ನೂರು ಮಂದಿ ಮಕ್ಕಳಿದ್ದು ಮತ್ತೆ ಅವರೊಂದಿಗೆ ಬಾವಿಗೆ ತಳ್ಳಲ್ಪಟ್ಟವನು ಇಲ್ಲಿ ಶಕಟಾಲ. ಹಾಗಾಗಿ ಕಾಲಕ್ರಮದಲ್ಲಿ ಆ ನೂರು ಮಂದಿ ಮಕ್ಕಳೂ ನಂದರ ಶತ್ರುಗಳಾಗುತ್ತಾರೆ.

(ಇ)

ಹೇಮಚಂದ್ರನು ''ಪರಿಶಿಷ್ಟಪರ್ವ' ದ ಎಂಟನೆಯ ಅಧ್ಯಾಯದಲ್ಲಿ ನಂದ, ಚಂದ್ರಗುಪ್ತ — ಚಾಣಕ್ಯರ ಕಥೆಯ ಜೈನ ಪಾಠಾಂತರವನ್ನು ಕೊಡುತ್ತಾನೆ. ಮೊದಲಿನ ಕಥೆಯು ಶಕಟಾಲ, ಯೋಗನಂದ ಮತ್ತು ವರರುಚಿಗಳ ಬಗ್ಗೆ ಹೇಳಿಯಾದ ನಂತರ ಹೇಮಚಂದ್ರನು ಚಾಣಕ್ಯ ಮತ್ತು ಚಂದ್ರಗುಪ್ತರ ಕಥೆ ಹೇಳಲು ಆರಂಭಿಸುತ್ತಾನೆ.

ಗೊಲ್ಲ ದೇಶದ ಚಾಣಕ್ಯವೆಂಬ ಹಳ್ಳಿಯಲ್ಲಿ ಚಣಿ ಎಂಬ ಬ್ರಾಹ್ಮಣನಿದ್ದನು. ಚಣೇಶ್ವರಿ — ಆತನ ಪತ್ನಿ. ಅವರ ಮಗ ಚಾಣಕ್ಯ. ಆತನ ಹಲ್ಲಿನ ಲಕ್ಷಣದಿಂದ ಮುಂದೆ ಅತ ರಾಜ ಅಥವಾ ರಾಜನಿಗೆ ಸಮನಾಗುವವನಾಗಿ ತಿಳಿಯುತ್ತಿತ್ತು. ಕೆಲವು ಪ್ರಾಜ್ಞರ ಮಾತಿನಂತೆ ಆತನ ಹಲ್ಲುಗಳನ್ನು ತುಂಡರಿಸಲಾಯಿತು. ಚಾಣಕ್ಯನ ಪತ್ನಿಯ ಶ್ರೀಮಂತಿಕೆಯ ಬಯಕೆಯಂತೆ ಆತನು ಪಾಟಲೀಪುತ್ರಕ್ಕೆ ಹೋಗಿ ನಂದರಿಂದ ಬಹುಮಾನವನ್ನು ಪಡೆಯಲು ನಿಶ್ಚಯಿಸಿದನು. ಅಲ್ಲಿ ಅರಮನೆಗೆ ಹೋದ ಚಾಣಕ್ಯನು ಅಲ್ಲಿ ನಂದನ ಸ್ವಂತ ಆಸನದಲ್ಲಿ ಕುಳಿತನು. ಆಗ ನಂದನು ಆಸನವನ್ನು ಖಾಲಿ ಮಾಡಿಸಿ ಆತನಿಗೆ ಅವಮಾನ ಮಾಡಿದನು. ನಂದರನ್ನು ನಿರ್ಮೂಲ ಮಾಡುವ ಪ್ರತಿಜ್ಞೆ ಮಾಡಿ ಸಿಟ್ಟುಗೊಂಡು ಹೋದ ಚಾಣಕ್ಯನು, ರಾಜನಾಗಲು ಅರ್ಹ ವ್ಯಕ್ತಿಯನ್ನು ಹುಡುಕತೊಡಗಿದನು. ನಂದರ ಆಹಾರಕ್ಕಾಗಿ ನವಿಲುಗಳನ್ನು ಸಾಕಿ ಬೆಳೆಸುತ್ತಿದ್ದ

'ಮಯೂರಪೋಷಕ' ವೆಂಬ ಹಳ್ಳಿ ಇತ್ತು. ಅಲ್ಲಿಯ ಮುಖ್ಯಸ್ಥನ ಮಗಳು ಗರ್ಭಿಣಿಯಾಗಿದ್ದಳು. ಚಾಣಕ್ಯನು ಅವಳ ಆ ಮಗುವನ್ನು ತನಗೆ ಕೊಡುವಂತೆ ಕೇಳಿದಾಗ, ಅವರು ಅಂತೆಯೇ ಭಾಷೆ ಕೊಟ್ಟರು. ಗರ್ಭಿಣಿಯಾದ ಹೆಂಗಸು ಚಂದ್ರನನ್ನು ಕುಡಿದದ್ದರಿಂದ ಆತನ ಹೆಸರು ಚಂದ್ರಗುಪ್ತನೆಂದಾಯಿತು. ಆಗಲೇ ಚಾಣಕ್ಯನು ರಸವಾದಿಗಳನ್ನು ಹುಡುಕಿಕೊಂಡು ಹೋಗಿ ಚಿನ್ನವನ್ನು ತಯಾರು ಮಾಡಿದನು. ಮಗುವಾಗಿದ್ದಾಗಲೇ ಚಂದ್ರಗುಪ್ತನ ಆಟಗಳಲ್ಲಿ ರಾಜನನ್ನು ಅನುಕರಿಸುತ್ತಿದ್ದನು. ಇದನ್ನು ನೋಡಿದ ಚಾಣಕ್ಯನು ಸಂತೋಷಪಟ್ಟನು.

ಇವರಿಬ್ಬರೂ ಸೇರಿ ನಂದರ ವಿರುದ್ಧ ಆಕ್ರಮಣ ಮಾಡತೊಡಗಿದರು. ರಸವಿದ್ಯೆಯಿಂದ ಸಂಗ್ರಹಿಸಿದ ಚಿನ್ನದಿಂದ ಸೈನ್ಯವನ್ನು ಕಟ್ಟಿದರು. ನಂದರ ರಾಜಧಾನಿಯನ್ನು ಮುತ್ತಿಗೆ ಹಾಕಿದರೂ ಇವರಿಗೆ ಗೆಲುವು ಸಾಧಿಸಲಿಲ್ಲ. ನಂದರ ಕುದುರೆ ಸವಾರ ಸೈನ್ಯದಿಂದ ಎರಡು ಸಲ ಇವರು ತಪ್ಪಿಸಿಕೊಳ್ಳಬೇಕಾಯಿತು.

ಹೀಗೆ ತಪ್ಪಿಸಿಕೊಳ್ಳುತ್ತಿದ್ದಾಗ ಚಾಣಕ್ಯನು — 'ಒಬ್ಬ ಮುದುಕಿಯು ತನ್ನ ಮಕ್ಕಳಲ್ಲಿ ಚಾಣಕ್ಯನಲ್ಲಿದ್ದಂತಹ ಮೂರ್ಖತನವನ್ನು ಕಂಡುಕೊಂಡು ಹಳಿಯುತ್ತಿದ್ದುದನ್ನು' ನೋಡಿದನು. ಆ ಮಕ್ಕಳು ಗಂಜಿಯ ಬಟ್ಟಲಿನ ಬದಿಯಲ್ಲಿದ್ದುದನ್ನು ಮೊದಲು ಊಟಮಾಡುವ ಬದಲು ಮಧ್ಯಭಾಗಕ್ಕೆ ಕೈಹಾಕುತ್ತಿದ್ದರು. ಇದರಿಂದ ಕೈ ಸುಟ್ಟುಕೊಳ್ಳುತ್ತಿದ್ದರು. ಇದನ್ನು ನೋಡಿಯೇ ಆಕೆ ಆ ಮಕ್ಕಳನ್ನು ಚಾಣಕ್ಯನಿಗೆ ಹೋಲಿಸಿ ಹೇಳಿದ್ದಳು. ಈ ಚಾಣಕ್ಯನು ನಂದರ ಗಡಿ ಭಾಗಗಳನ್ನು ಗೆಲ್ಲುವುದಕ್ಕೆ ಮುಂಚಿತವಾಗಿಯೇ ರಾಜಧಾನಿಯನ್ನು ಆಕ್ರಮಿಸುತ್ತಿದ್ದುದು ತಪ್ಪೆಂದು ಆಕೆಯ ಅಭಿಪ್ರಾಯವಾಗಿತ್ತು. ಆ ಮುದುಕಿಯ ಮಾತಿನಿಂದ ಪ್ರಭಾವಿತನಾಗಿ ಚಾಣಕ್ಯನು ಹಿಮಾಲಯ ಪರ್ವತದ ತಪ್ಪಲಿನ ಪರ್ವತ ರಾಜ್ಯಕ್ಕೆ ಹೋಗಿ ಆತನಿಗೆ ಅರ್ಧರಾಜ್ಯ ಕೊಡುವುದಾಗಿ ತಿಳಿಸಿ, ಆತನೊಂದಿಗೆ ಬಂದು ನಂದರ ರಾಜಧಾನಿಯನ್ನು ಮುತ್ತಿದನು. ನಂದನು ಸೋತು, 'ಏಕಾಕಿಯಾಗಿ ರಥದಲ್ಲಿ ತನ್ನ ಕುಟುಂಬದೊಂದಿಗೆ ಹೊರಟುಹೋದನು. ನಂದ ಪುತ್ರಿಯು ಚಂದ್ರಗುಪ್ತನನ್ನು ಪ್ರೀತಿಸಿ ಅವರಿಬ್ಬರ ವಿವಾಹವಾಯಿತು.

ನಂದರ ಅರಮನೆಗೆ ಪ್ರವೇಶಿಸಿದಾಗ ಅಲ್ಲೊಬ್ಬಳು ವಿಷಕನ್ಯೆಯಿದ್ದಳು. ಅವಳ ಸೌಂದರ್ಯದಿಂದ ಆಕರ್ಷಿತನಾದ ಪರ್ವತರಾಜನು ಅವಳನ್ನು ಸಂಪರ್ಕಿಸಿ ಮೃತಹೊಂದಿದನು. ಇದು ಚಾಣಕ್ಯನ ಇಚ್ಛೆಯಂತೆಯೇ ಆಯಿತು. ಹೀಗೆ ಚಂದ್ರಗುಪ್ತನು 'ಏಕಚಕ್ರಾಧಿಪತಿಯಾದನು (ಈ ಘಟನೆಯು ಮಹಾವೀರನ ನಿರ್ವಾಣಕ್ಕಿಂತ 155 ವರ್ಷಗಳ ಮೊದಲು ನಡೆಯಿತು)(ಕ್ರಿ.ಶ.:ಪೂ. 313) ಚಾಣಕ್ಯನು ಬಿಂದುಸಾರನ ಮಂತ್ರಿಯಾಗಿಯೂ ಮುಂದುವರಿದನು.

ವಡ್ಡಾರಾಧನೆ [9]

ಕನ್ನಡ ಸಾಹಿತ್ಯದಲ್ಲಿ ದೊರೆತ ಮೊದಲ ಗದ್ಯ ಕೃತಿಯಾದ ವಡ್ಡಾರಾಧನೆಯು ಹತ್ತೊಂಬತ್ತು ಜೈನ ಧಾರ್ಮಿಕ ಕಥೆಗಳ ಗೊಂಚಲು. ಇದರ ಕಾಲವು ಸುಮಾರು ಕ್ರಿ.ಶ. ೯೨೦ (ಕ್ರಿ.ಶ. ಹತ್ತನೆಯ ಶತಮಾನದ ಪೂರ್ವಾರ್ಧವು).

ಇದರಲ್ಲಿಯ ಆರನೆಯ ಕಥೆಯಾದ 'ಭದ್ರಬಾಹು ಭಟಾರರ ಕಥೆ' ಮತ್ತು ಹದಿನೆಂಟನೆಯ ಕಥೆಯಾದ 'ಚಾಣಕ್ಯ ರಿಸಿಯ ಕಥೆ' — ಇವುಗಳಲ್ಲಿ ನಂದವಂಶ, ಚಂದ್ರಗುಪ್ತ ಹಾಗೂ ಚಾಣಕ್ಯರ ಪ್ರಸ್ತಾವ ಬರುತ್ತವೆ.

ಅ) ಭದ್ರಬಾಹು ಭಟಾರರ ಕಥೆ: ಭದ್ರಬಾಹು ಭಟಾರರು ಮುನಿ ಸಮೂಹಕ್ಕೆ ಮುಖಂಡರಾಗಿ ಸಂಚಾರ ಮಾಡುತ್ತಾ ಇದ್ದರು ಎಂಬಲ್ಲಿ ಈ ವಿಚಾರ ಬರುತ್ತದೆ.

> .... ಮಗಧೆ ನಾಡಿನಲ್ಲಿ ಪಾಟಲೀಪುತ್ರವೆಂಬ ಪಟ್ಟಣ. ಅಲ್ಲಿ ನಂದನೆಂಬ ಅರಸನು ಬಹುಕಾಲ ರಾಜ್ಯವಾಳುತ್ತಿದ್ದು, ಒಮ್ಮೆ ಚಾಣಕ್ಯನೆಂಬ ಬ್ರಾಹ್ಮಣನನ್ನು ಅಪಮಾನ ಮಾಡಿ ನೂಕಿ 'ಒಡಿಸಲು, ಆತನು ಪ್ರತಿಜ್ಞೆ ಮಾಡಿ, ಕಾಲಾನುಕ್ರಮದಲ್ಲಿ ನಂದನನ್ನು ನಾಶ ಮಾಡಿ ಅವನ ಸ್ಥಾನದಲ್ಲಿ ಚಂದ್ರಗುಪ್ತನೆಂಬವನನ್ನು ಕೂರಿಸಿದನು... [9ಎ]

ಇಲ್ಲಿಯ ಕಥಾ ಭಾಗವು ಐತಿಹಾಸಿಕ ಅಂಶಗಳನ್ನೊಳಗೊಂಡಿದ್ದರೂ ಅತಿ ಸಂಕ್ಷೇಪವಾಗಿ ಇದೆ. ಯಾವುದೇ ವಿಕೃತಿಯನ್ನು ಹೊಂದಿಲ್ಲ. ಇದರಿಂದ ಕ್ರಿ.ಶ. ಹತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಈ ವಿಚಾರವು ನಿಜರೂಪದಲ್ಲಿ ಜನಜನಿತವಾಗಿದ್ದಿತೆಂದು ತಿಳಿಯಬಹುದು.

ಅ) ಚಾಣಕ್ಯ ರಿಸಿಯ ಕಥೆ: ಇಲ್ಲಿಯ ಕಥಾಭಾಗವು ಇಂತಿದೆ:

> ಜಂಬೂ ದ್ವೀಪದ ಭರತ ಕ್ಷೇತ್ರದಲ್ಲಿ ಮಗಧೆ ಎಂಬ ನಾಡು. ಅಲ್ಲಿ ಪಾಟಲೀಪುತ್ರವೆಂಬ ಪಟ್ಟಣ. ಅದನ್ನು ಆಳುತ್ತಿದ್ದವನು ನಂದವಂಶದ ಪದ್ಮನೆಂಬ ಅರಸ. ಅವನ ರಾಣಿ ಸುಂದರಿ. ಅವರ ಮಗ ಮಹಾಪದ್ಮ. ಕಾಪಿ ಎಂಬ ಅವರ ಮಂತ್ರಿಗೆ ವಿಶ್ವಸೇನನೆಂಬ ಹೆಸರೂ ಇತ್ತು. ಒಂದು ದಿನ ಮಂತ್ರಿಯು ಅರಸನನ್ನು ಇರಿದುಕೊಂಡು ಕೆಸರು ತುಂಬಿದ ಬಾವಿಗೆ ನೂಕಿಬಿಟ್ಟನು. ತಾನು ರಾಣಿಯೊಡನೆ ಕಳ್ಳತನದ ಬಾಳ್ವೆ ಮಾಡುತ್ತಿದ್ದನು. ಅರಸು ಕುಮಾರ ಮಹಾಪದ್ಮನಿಗೆ ಪಟ್ಟಾಭಿಷೇಕವಾಯಿತು. ಸುವ್ರತೆ ಆತನ ಪಟ್ಟದರಸಿಯಾದಳು.

ವಿಶ್ವಸೇನನು ತನ್ನ ತಂದೆಯನ್ನು ಕೊಂದ ವಿಚಾರವು ಮಹಾಪದ್ಮನಿಗೆ ತಿಳಿದಾಗ ಆತನನ್ನೂ, ಆತನ ಹೆಂಡತಿ ಮಕ್ಕಳು, ಬಂಧುಬಾಂಧವರನ್ನೂ ಒಂದು ನೆಲಮಾಳಿಗೆಯಲ್ಲಿ ಕೂಡಿಹಾಕಿ ಸ್ವಲ್ಪ ಮಾತ್ರ ಅನ್ನ ನೀರನ್ನು ಒದಗಿಸತೊಡಗಿದನು. ಆಗ ಕಾಪಿಯು ತನ್ನವರನ್ನು ಕುರಿತು — ' ನಮ್ಮಲ್ಲಿ ಹಗೆಯನ್ನು ನಾಶಮಾಡಿ ನಂದವಂಶವನ್ನು ಹೆಸರಿಲ್ಲದಂತೆ ಮಾಡುವ ಸಾಮರ್ಥ್ಯ, ಬುದ್ಧಿಶಕ್ತಿಯನ್ನು ಯಾವನು ಹೊಂದಿದ್ದಾನೋ ಅವನು ಮಾತ್ರ ಈ ಅನ್ನವನ್ನು ತಿಂದು ಬದುಕಲಿ' ಎಂದನು. ಆಗ ಅವನ ಮಗನಾದ ಸುಬಂಧು ಹಾಗೆಯೇ ಮಾಡುವುದಾಗಿ ಪ್ರತಿಜ್ಞೆ ಮಾಡಿ ಉಳಿದನು. ಉಳಿದವರು ಸತ್ತುಹೋದರು.

ಮೂರು ವರ್ಷಗಳು ಕಳೆದ ನಂತರ ಶತ್ರುಗಳು ರಾಜ್ಯದ ಮೇಲೆ ಮುತ್ತಿಗೆ ಹಾಕಿದಾಗ ಮಹಾಪದ್ಮನಿಗೆ ಮಂತ್ರಿಯ ನೆನಪಾಯಿತು. ಅವರ್ಯಾರಾದರೂ ಇನ್ನೂ ಬದುಕಿದ್ದಾರೆಯೇ ನೋಡಿ ಬನ್ನಿ ಎಂದಾಗ ಸುಬಂಧುವೊಬ್ಬ ಉಳಿದುಕೊಂಡಿದ್ದ. ಆತನನ್ನು ಕರೆತರಿಸಿ ಮಂತ್ರಿಪದವಿ ಕೊಡಲಾಯಿತು. ಆತನು ಶತ್ರುಗಳ ಸೈನ್ಯವನ್ನು ಅಡಗಿಸಿ ರಾಜ್ಯವನ್ನು ಪೂರ್ವ ಸ್ಥಿತಿಗೆ ತಂದನು. ಆತನ ಸ್ಥಾನ ಮಾನ ಹೆಚ್ಚಿತು. ಶಕಟಾಲನು ತನ್ನ ಪುತ್ರಿ ನಂದವತಿಯನ್ನು ಸುಬಂಧುವಿಗೆ ಕೊಟ್ಟು ಮದುವೆ ಮಾಡಿದನು.

ಇತ್ತ ಮಗಧ ನಾಡಿನ ಶಾಲ್ಮಲೀ ಅಗ್ರಹಾರದಲ್ಲಿ ಸೋಮಶರ್ಮ ಮತ್ತು ಕಪಿಲೆಯರೆಂಬ ದಂಪತಿಗಳಿಗೆ ಚಾಣಾಕ್ಷನೆಂಬ ಮಗನು ಹುಟ್ಟಿದನು. (' ಇವನಿಂದ ನಂದವಂಶವು ಕ್ಷಯವಾಗುತ್ತದೆ' ಎಂದು ವಸಂತಕನೆಂಬ ನೈಮಿತ್ತಿಕನು ಭವಿಷ್ಯ ನುಡಿದಿದ್ದನು). ಚಾಣಾಕ್ಯನು ಎಲ್ಲಾ ವಿದ್ಯೆಗಳನ್ನು ಕಲಿತು ಮುನಿಗಳ ಬಳಿ ಧರ್ಮವನ್ನು ಕೇಳಿ ಶ್ರಾವಕ ವ್ರತಗಳನ್ನು ಕೈಗೊಂಡು ಸಮ್ಯಕ್ ದೃಷ್ಟಿಯಾದನು. ಆತನು ಪಾಟಲೀ ಪುತ್ರಕ್ಕೆ ಹೋಗಲು ಮಂತ್ರಿ ಶಕಟಾಲನು ತನ್ನ ಮಗಳು ಯಶೋಮತಿಯನ್ನು ಅವನಿಗೆ ಮದುವೆ ಮಾಡಿಕೊಟ್ಟನು.

ಒಂದು ದಿನ ಶೋಣಾನದಿಯ ತೀರದಲ್ಲಿ ಚಾಣಾಕ್ಯನ ಕಾಲಿಗೆ ಒಂದು ದರ್ಭೆಯ ಕುಡಿ ಚುಚ್ಚಿ ರಕ್ತ ಬಂದಿತು. ಅವನಿಗೆ ಆ ದರ್ಭೆಯ ಮೇಲೆ ಮುನಿಸು ಉಕ್ಕಿ, ಅದನ್ನು ಬೇರು ಸಹಿತ ಕಿತ್ತು ಸುಟ್ಟನು. ಅದನ್ನು ನೋಡಿ ಸುಬಂಧುವು ಅವನ ಬಳಿಗೆ ಹೋಗಿ ತನ್ನ ವೃತ್ತಾಂತವನ್ನು ಹೇಳಿಕೊಂಡರೆ ತನ್ನ ಗುರಿ ಸಾಧನೆಯಾಗಿ ವೈರಿ ವಿಧ್ವಂಸನ ಮಾಡಲು ಸಾಧ್ಯವಾಗುವುದು — ಎಂದು ಯೋಚಿಸಿದನು.

ಒಂದು ದಿನ ವಿಶೇಷದೂಟದ ಸಂದರ್ಭದಲ್ಲಿ ಸುಬಂಧುವಿನ ಹೆಂಡತಿಯು ಚಾಣಾಕ್ಯನ ಹೆಂಡತಿಗೆ ಕೇವಲ ಸ್ವಲ್ಪ ಅನ್ನದ ಗಂಜಿಯನ್ನು ಕಳುಹಿಸಿಕೊಟ್ಟಳು. ಇದರಿಂದ ಬಡತನಕ್ಕಾಗಿ ನೊಂದ ಚಾಣಾಕ್ಯನು ಧನ ಸಂಪಾದನೆ ಮಾಡಬೇಕೆಂದು ನಿಶ್ಚಯಿಸಿದನು. ಆಗ ಸುಬಂಧುವು ಚಾಣಾಕ್ಯನಿಗೆ ಮಹಾರಾಜನಲ್ಲಿ ಅಗ್ರಾಸನವನ್ನು ಬೇಡಿಕೊಳ್ಳಲು ಹೇಳಿದನು.

ಮಹಾಪದ್ಮನು ಚಾಣಾಕ್ಯನಿಗೆ ಅಗ್ರಾಸನವನ್ನು ಕೊಟ್ಟನು. ಇತ್ತ ಸುಬಂಧುವಿನ ಪಿತೂರಿಯಿಂದ ವಂಶಕ್ರಮಾಗತರಾಗಿ ಅಗ್ರಾಸನವನ್ನು ಅನುಭವಿಸುತ್ತಿದ್ದ ಬ್ರಾಹ್ಮಣರು ಆಕ್ಷೇಪಿಸಿದಾಗ ಮಹಾರಾಜನು ಚಾಣಾಕ್ಯನನ್ನು ಅಗ್ರಾಸನದಿಂದ ಕೆಳಗಿಳಿಸುವಂತೆ ಆಜ್ಞಾಪಿಸಿದನು. ಇದನ್ನು ಕೇಳಿದ ಚಾಣಾಕ್ಯನಿಗೆ ಕ್ರೋಧವುಕ್ಕಿ ಬಂದು ನಂದನ ಸಹವನ್ನೂ, ಸುಬಂಧುವಿನ ಬಂಧುವರ್ಗವನ್ನೂ ನಾಶ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದ್ದಲ್ಲದೇ ಹಾಗೆ ಮಾಡದೇ ಕಾನೆ ಕಟ್ಟುವುದಿಲ್ಲವೆಂದು ಶಪಥ ಮಾಡಿ ಮಹೋದಕ ಪಟ್ಟಣಕ್ಕೆ ಹೋದನು.

ಆಗ ಮಹೋದಕ ಪಟ್ಟಣದಲ್ಲಿ ಮಯೂರ ವಂಶದ ಕುಮುದಪಾಲ ಅರಸನು ಆಳುತ್ತಿದ್ದನು. ಅವನ ಮಡದಿ ಮುಂದೆ ಎಂಬವಳು. ಅವಳು ಗರ್ಭಿಣಿಯಾದಾಗ ಆಕೆಗೆ ಚಂದ್ರನನ್ನು ನುಂಗಬೇಕೆಂದು ಬಯಕೆ ಉಂಟಾಯಿತು. ಅರಸನು ಆಕೆಯ ಇಷ್ಟವನ್ನು ಪೂರೈಸುವುದು ಹೇಗೆಂದು ವಿಹ್ವಲನಾಗಿದ್ದಾಗ ಚಾಣಾಕ್ಯನು ಬಂದು — ಆಕೆಯ ಹೊಟ್ಟೆಯಲ್ಲಿ ಹುಟ್ಟುವ ಮಗುವನ್ನು ತನಗೆ ಕೊಡುವುದಾದರೆ ಅವಳ ಬಯಕೆಯನ್ನು ತಾನು ಈಡೇರಿಸುವುದಾಗಿ ಹೇಳಿದನು. ಚಾಣಾಕ್ಯನ ತಂತ್ರದಿಂದ ರಾಣಿಯು ಚಂದ್ರನನ್ನು ನುಂಗಿದೆನೆಂದು ತೃಪ್ತಿಹೊಂದಿ ಗಂಡು ಮಗುವನ್ನು ಹಡೆದಳು. ಆ ಮಗುವಿಗೆ ಚಂದ್ರಭುಕ್ತನೆಂದು ನಾಮಕರಣ ಮಾಡಿದರು. ಆತನಿಗೆ ಎಳವೆಯಿಂದಲೇ ಆಹಾರದೊಂದಿಗೆ ಸ್ವಲ್ಪ ಸ್ವಲ್ಪ ವಿಷವನ್ನು ತಿನ್ನಿಸತೊಡಗಿದರು. ಅಲ್ಲಿಯ ಸಾಮಂತರನ್ನು, ಮಂತ್ರಿಗಳನ್ನು ಒಲಿಸಿಕೊಂಡು, ಸಾಕಷ್ಟು ಸೈನ್ಯವನ್ನು ಸಂಗ್ರಹಿಸಿಕೊಂಡು ಚಂದ್ರಭುಕ್ತನನ್ನು ಕರೆದುಕೊಂಡು ಹೋಗಿ ಚಾಣಾಕ್ಯನು ಮಹಾಪದ್ಮನ ಮೇಲೆ ಯುದ್ಧಮಾಡಿದನು. ಮೊದಲು ಸೋಲುತ್ತಾ ಬರಲು ಮತ್ತೆ ಒಬ್ಬ ಮುದುಕಿಯ ಮಾತಿನಂತೆ ರಾಜಕಾರ್ಯ ಸಾಧಿಸಿ ಗೆದ್ದನು. ಚಂದ್ರಭುಕ್ತನಿಗೆ ರಾಜ್ಯಾಭಿಷೇಕ ಮಾಡಿದನು. ಮಹಾಪದ್ಮನ ಅರಸಿ ಚಂದ್ರಮತಿ ಮಹಾದೇವಿಯನ್ನೇ ಪಟ್ಟದರಸಿ ಮಾಡಿದನು, ಉಪಾಯದಿಂದ ಭಂಡಾರವನ್ನು ತುಂಬಿದನು.

ಇತ್ತ ಚಂದ್ರಮತಿ ಮಹಾದೇವಿಯು ಚಂದ್ರಭುಕ್ತನಿಂದ ಗರ್ಭ ಧರಿಸಿದಳು. ಒಮ್ಮೆ ಆಕೆಯು ಪತಿಯು ಉಂಡ ಅನ್ನವನ್ನು ಉಣ್ಣಲು ಆಕೆಗೆ ವಿಷ ಏರಿತು. ಆಗ ಚಾಣಾಕ್ಯನು ಆಕೆಯ ಹೊಟ್ಟೆಯನ್ನು ಸೀಳಿ ಮಗುವನ್ನು ಹೊರತೆಗೆದನು. ಪತ್ನಿ ವಿಯೋಗದಿಂದ ಚಂದ್ರಭುಕ್ತ ಸತ್ತುಹೋದನು. ಮಗುವಿನ ತಲೆಯ ಮೇಲೆ ವಿಷದ ಬಿಂದು ಬಿದ್ದುದರಿಂದ ಚಾಣಾಕ್ಯನು ಮಗುವಿಗೆ ಬಿಂದುಸಾಗರನೆಂದು ಹೆಸರಿಟ್ಟನು.

ಬಿಂದುಸಾಗರನಿಗೆ ಯೌವನ ಪ್ರಾಪ್ತಿಯಾಗಲು ಚಾಣಾಕ್ಯನಿಗೆ ವಿರಕ್ತಿ ಉಂಟಾಯಿತು. ಒಡನೆಯೇ ಸೆರೆಯಲ್ಲಿದ್ದ ಸುಬಂಧುವನ್ನು ಬಿಡಿಸಿ ಕರೆಸಿ ಸನ್ಮಾನ ಮಾಡಿ ಆತನನ್ನು ಬಿಂದುಸಾಗರನ ಮಂತ್ರಿಯನ್ನಾಗಿ ಮಾಡಿದನು. ಆಮೇಲೆ ಚಾಣಾಕ್ಯನು ಸಮಸ್ತವನ್ನು ತೊರೆದು ತಪಸ್ಸಿಗೆ ಹೊರಟುಹೋದನು[9ಬ].

ರಾಜಾವಳಿ ಕಥಾಸಾರ [10]

ದೇವಚಂದ್ರ (ಕ್ರಿ.ಶ. 1770 – 1841) ನು ಬರೆದ ರಾಜಾವಳಿ ಕಥಾಸಾರದ 'ಷಷ್ಠಾಧಿಕಾರಂ'ದಲ್ಲಿ ಈ ಕಥೆಯು ಇದ್ದು ಇಂತಿದೆ:—

ನಂದ ಮಹಾರಾಜನು ಪಾಟಲೀಪುತ್ರದಲ್ಲಿದ್ದನು. ಆತನಿಗೆ ಬಂಧು, ಸುಬಂಧು, ಕುಬೇರ ಮತ್ತು ಶಕಟಾಳರೆಂಬ ನಾಲ್ವರು ಮಂತ್ರಿಗಳು. ಇವರಲ್ಲಿ ಶಕಟಾಲನು ಚತುರೋಪಾಯ ಸಂಪನ್ನನು. ಒಮ್ಮೆ ಶತ್ರುರಾಜರು ಸಮರ ಸಾರಲು, ಅವರು ಅತಿ ಬಲಿಷ್ಠರಿದ್ದುದರಿಂದ ಶಕಟಾಲನು ಬಹುದ್ರವ್ಯವನ್ನು ಕೊಟ್ಟು ಅವರನ್ನು ಹಿಂದಕ್ಕೆ ಕಳುಹಿಸಿದನು.

ಮತ್ತೊಮ್ಮೆ ನಂದನು ಭಂಡಾರವು ಖಾಲಿಯಾದುದನ್ನು ನೋಡಿ ಶಕಟಾಲನ ಮೇಲೆ ಸಿಟ್ಟುಗೊಂಡು ದುಷ್ಟಬುದ್ಧಿಯಿಂದ ಆತನನ್ನು ಪತ್ನೀಪುತ್ರ ಸಹಿತವಾಗಿ ನೆಲಮಾಳಿಗೆಯೊಳಿಟ್ಟು ಸ್ವಲ್ಪ ಮಾತ್ರವೇ ಅನ್ನ – ನೀರು ಕೊಡುವ ವ್ಯವಸ್ಥೆ ಮಾಡಿದನು. ನಂದ ವಂಶವನ್ನು ನಿರ್ಮೂಲನ ಮಾಡಲು ಸಮರ್ಥನಾದವನೊಬ್ಬ ಬದುಕುಳಿಯಲೆಂದು ಅವರು ನಿಶ್ಚಯಿಸಿದಂತೆ ಶಕಟಾಲನನ್ನು ಸಶಕ್ತಪಡಿಸಿ ಉಳಿದವರು ಮರಣ ಹೊಂದಿದರು.

ಪ್ರಧಾನರಿಲ್ಲದ ರಾಜ್ಯವು ಸುಲಭದಲ್ಲಿ ವಶವಾಗುವುದೆಂದು ತಿಳಿದ ಪರರಾಜರು ಪುನಃ ಮುತ್ತಿಗೆ ಹಾಕಿದಾಗ, ನಂದನು ವಿಚಾರಿಸಿ ಬದುಕಿದ್ದ ಶಕಟಾಲನನ್ನು ತಾನೇ ಹೋಗಿ ಕರೆತಂದು ಮುಂಚಿನ ಅಧಿಕಾರವನ್ನು ಕೊಡುತ್ತೇನೆಂದಾಗ ಒಪ್ಪದೇ ಶಕಟಾಲನು ಛತ್ರಸಾಲೆಯ ನಿಯೋಗಾಧ್ಯಕ್ಷನಾಗಿದ್ದುಕೊಂಡಿದ್ದು ಅರಸನಿಗೆ ಅಪಾಯವನ್ನು ಚಿಂತಿಸುತ್ತಿದ್ದನು.

ಅದೇ ಸಮಯದಲ್ಲಿ, ಒಂದು ದಿನ ಊರ ಹೊರಭಾಗದಲ್ಲಿ ಸುತ್ತುತ್ತಿದ್ದಾಗ ದರ್ಭೆಯ ಮೊನೆಯು ಚುಚ್ಚಿದ ಕಾರಣಕ್ಕೆ ಅದನ್ನು ಸಮೂಲವಾಗಿ ಕಿತ್ತು ಸುಟ್ಟು ಗಾಳಿಗೆಸೆಯುತ್ತಿದ್ದ ಚಾಣಕ್ಯನೆಂಬ ಬ್ರಾಹ್ಮಣನನ್ನು ಕಂಡು ಈತನಿಂದಲೇ ನಂದ ವಂಶ ನಿರ್ಮೂಲ ಮಾಡಿಸಬಹುದೆಂದು ನಿಶ್ಚಯಿಸಿದನು. ಛತ್ರದಲ್ಲಿ ಅರಸನಿಂದ ಚಾಣಕ್ಯನಿಗೆ ತಿರಸ್ಕಾರವುಂಟಾಗುವಂತೆ ಮಾಡಿ, ಚಾಣಕ್ಯನು ಸಿಟ್ಟುಗೊಂಡು ಪರರಾಜರ ಸಹಾಯದಿಂದಲೂ ಮಂತ್ರೋಪಾಯದಿಂದಲೂ ನಂದ ವಂಶವನ್ನೇ ನಿರ್ಮೂಲ ಮಾಡಿ ವೃದ್ಧ ಚಂದ್ರಗುಪ್ತನೆಂಬ ಅರಸನಿಗೆ ಪಟ್ಟ ಕಟ್ಟಿದನು.

ಕೆಲವು ದಿವಸ ಕಳೆಯಲು ಚಂದ್ರಗುಪ್ತನು ತನ್ನ ಮಗ ಬಿಂದುಸಾರನಿಗೆ ರಾಜ್ಯವನ್ನು ಕೊಟ್ಟು ಚಾಣಕ್ಯನೊಡಗೂಡಿ ತಪಸ್ಸಿಗೆ ಹೋದನು.

ಗ್ರೀಕ ಪಾಠಾಂತರಗಳು [11]

— ಅ —

ಕರ್ಟಿಯಸನ ಹೇಳಿದ ಕಥೆ

ಅಲೆಕ್ಝಾಂಡರನು ಕ್ರಿ.ಪೂ. 326ರಲ್ಲಿ ಝೇಲಮ ನದಿಯ ದಂಡೆಯ ಮೇಲೆ ಪುರೂರವನನ್ನು ಸೋಲಿಸಿದ ನಂತರ ಈ ದೇಶದ ಪೂರ್ವ ಭಾಗಕ್ಕೂ ಮುನ್ನಡೆಯಲು ಯೋಚಿಸುತ್ತಿದ್ದನು. ಆಗ ಅವನಿಗೆ ಭಾರತದಲ್ಲಿಯೇ ದೊಡ್ಡದಾದ ಗಂಗಾ ನದಿಯ ದಂಡೆಯ ಮೇಲೆ ಗಂಗರಾಷ್ಟ್ರ ಮತ್ತು ಪ್ರಾಚ್ಯ — ಎಂಬಿಬ್ಬರು ಇರುವುದಾಗಿಯೂ ಅಲ್ಲಿಯ ರಾಜ ಅಗ್ರಮನು 20,000 ಅಶ್ವದಳ, 2,00,000 ಕಾಲಾಳುಗಳು, 2 ಸಾವಿರ ರಥಗಳು ಮತ್ತು ಅತಿ ಮುಖ್ಯವಾದ 3,000 ಆನೆಗಳನ್ನು ಹೊಂದಿದ್ದನೆಂದು ತಿಳಿಸಲಾಯಿತು. ಇದನ್ನು ನಂಬಲಾಗದ ವರದಿಯೆಂದು ಪರಿಗಣಿಸಿದ ಅಲೆಕ್ಝಾಂಡರನು ಪುರೂರವನಲ್ಲಿ ಆ ಬಗ್ಗೆ ಕೇಳಿದನು. ಪುರೂರವನು ಆ ವಿಚಾರವನ್ನು ಒಪ್ಪಿದ್ದಲ್ಲದೇ — ಅಲ್ಲಿನ ಈಗಿನ ಅರಸನು, ಒಬ್ಬ ಕ್ಷೌರಿಕನ ಮಗನೆಂದೂ, ಆ ಕ್ಷೌರಿಕನ ರಾಣಿಯ ಪ್ರೀತಿಯನ್ನು ಸಂಪಾದಿಸಿ, ರಾಜನನ್ನು ಕೊಂದು, ಆತನೇ ಈ ರಾಜಕುಮಾರರ ರಕ್ಷಕನಾಗಿದ್ದು, ಅವರನ್ನೆಲ್ಲಾ ಕೊಂದು ಸಿಂಹಾಸನವನ್ನು ಕಸಿದುಕೊಂಡದ್ದಾಗಿಯೂ ಆತನ ಮಗನೇ ಈಗಿನ ರಾಜನೆಂದೂ ತಿಳಿಸಿದನು. ಈತನೂ ಹೀನಯನಾದ್ದರಿಂದ ತನ್ನ ಪ್ರಜೆಗಳಲ್ಲಿ ತಾತ್ಸಾರಕ್ಕೆ ಗುರಿಯಾಗಿದ್ದಾನೆಂಬುದನ್ನೂ ಹೇಳಿದನು.

— ಆ —

ಡಯೋಡರಸನ ಹೇಳಿದ ಕಥೆ

ಡಯೋಡರಸನು ಮೇಲಿನ ಮಾಹಿತಿಗಳನ್ನೇ ಒದಗಿಸುತ್ತಾನೆ. ಆದರೆ ಆತನು ಹೇಳುವ ಗಜ ಸೈನ್ಯದ ಬಲದ ಸಂಖ್ಯೆ 4,000 ಮತ್ತು ಪೂರ್ವದೇಶದ ಅರಸನ ಹೆಸರು ಕ್ಸಾಂಡ್ರಮಸನ (ಚಂದ್ರಗುಪ್ತ) ನೆಂದೂ ಹೇಳುತ್ತಾನೆ.

— ಇ —

ಪ್ಲೂಟಾರ್ಕ ಹೇಳಿದ ಕಥೆ

ಅಲೆಕ್ಝಾಂಡರ ಮತ್ತು ಪುರೂರವನ ಯುದ್ಧವಾಗುವುದಕ್ಕಿಂತ ಮೊದಲು, ಕೆಲವು ಭಾರತೀಯ ರಾಜಕುಮಾರರು ಅಲೆಕ್ಝಾಂಡರನ ಕಡೆ ಸೇರಿದ್ದರು. ಆಗ ಪಂಜಾಬಿನ ಬ್ರಾಹ್ಮಣರು ಆ ರಾಜಕುಮಾರರನ್ನು ನಿಂದಿಸಿ, ದಂಗೆಯೇಳುವಂತೆ ಮಾಡಿದರು. ಇದಕ್ಕಾಗಿ ಅಲೆಕ್ಝಾಂಡರನು ಆ ಬಹುತೇಕ ಬ್ರಾಹ್ಮಣರನ್ನೂ ಗಲ್ಲಿಗೇರಿಸಿದನು. ಮಗಧದ ರಾಜನ ಸಾಮರ್ಥ್ಯದ ಬಗ್ಗೆ ಪ್ಲೂಟಾರ್ಕನೂ ಮೇಲಿನವೇ ವಿವರಗಳನ್ನು ಹೇಳಿದರೂ ಆ ರಾಜನ ಸೈನ್ಯದ ಅಂಕಿ ಸಂಖ್ಯೆಗಳನ್ನು ಬಹಳಷ್ಟು ಹೆಚ್ಚಿಸಿ ಹೇಳಿದ್ದಾನೆ. ಈ ಸಂಖ್ಯೆಗಳನ್ನು

ಅತಿಶಯವನ್ನಾಗಿ ಮಾಡಿ ಹೇಳಿದ್ದಲ್ಲವೆಂದು ಆತನೇ ಹೇಳಿಕೊಂಡಿದ್ದು, ಅದೇ ಸಮಯದಲ್ಲಿ ಚಂದ್ರಗುಪ್ತನು ಸಿಂಹಾಸನವನ್ನು 'ಏರಿದನಂತರವೂ ಸೆಲ್ಯೂಕಸನಿಗೆ 500 ಆನೆಗಳನ್ನು ಕೊಟ್ಟು ತಪ್ಪಿಸಿಕೊಂಡು, ತನ್ನ ಆರು ಲಕ್ಷ ಸೈನ್ಯದೊಂದಿಗೆ ಇಡೀ ಭಾರತವನ್ನು ತನ್ನ ವಶ ಮಾಡಿಕೊಂಡನೆಂದೂ ಹೇಳಿದ್ದಾನೆ. (ಆಗಿನ್ನೂ ಯುವಕನಾಗಿದ್ದ ಚಂದ್ರಗುಪ್ತನು, ಅಲೆಕ್ಸಾಂಡರನನ್ನು ಕಂಡು, ಆತನು ಇಡೀ ಭಾರತವನ್ನು ತನ್ನ ವಶ ಮಾಡಿಕೊಳ್ಳಬಹುದೆಂದೂ, ಯಾಕೆಂದರೆ ಪ್ರಜೆಗಳು ರಾಜನನ್ನು ಆತನ ಹೀನ ಜನ್ಮಕ್ಕಾಗಿಯೂ ಕೆಟ್ಟ ಕೆಲಸಕ್ಕಾಗಿಯೂ ರಾಜನನ್ನು ದ್ವೇಷಿಸುತ್ತಿದ್ದಾರೆಂದು ಹೇಳಿದನೆಂಬ ಮಹತ್ವದ ಸಂಗತಿಯನ್ನೂ ದಾಖಲೆ ಮಾಡಿದ್ದಾನೆ.)

— ಈ —

ಜಸ್ಟಿನ ಹೇಳಿದ ಕಥೆ

ಅಲೆಕ್ಸಾಂಡರನ ಮರಣದ ನಂತರ, ಭಾರತವು ತನ್ನ ದಾಸ್ಯದ ನೊಗವನ್ನು ಕಿತ್ತೆಸೆಯಲು, ಆತನ ಅಧಿಕಾರಿಗಳನ್ನು ಕೊಂದು ಹಾಕಿತು. ಚಂದ್ರಗುಪ್ತನೇ ಈ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳು ವಾಗಿದ್ದನು. ಅವನು ಸಾಮಾನ್ಯವಾಗಿ ಹುಟ್ಟಿದರೂ, ಆತನ ಶುಭ ಲಕ್ಷಣಗಳಿಂದಾಗಿ ರಾಜ್ಯ ವೈಭವವನ್ನು ಅನುಭವಿಸುವಂತಾದನು. ಅವನ ಸೊಕ್ಕಿನ ವರ್ತನೆಯಿಂದಾಗಿ ಅಲೆಕ್ಸಾಂಡರನಿಗೆ ಅಥವಾ ನಂದನಿಗೆ ಅಪಚಾರ ವಾಗುವಂತೆ ಮಾಡಿದನು. ಆಗ ರಾಜನು ಅವನನ್ನು ಕೊಲ್ಲುವಂತೆ ಆಜ್ಞೆ ಹೊರಡಿಸಿದಾಗ, ಈತನು ಅಲ್ಲಿಂದ 'ಓಡಿಹೋದನು. ಆತನೊಮ್ಮೆ ಬಳಲಿಕೆಯಿಂದ ಮಲಗಿದ್ದಾಗ, ಸಿಂಹವೊಂದು ಬಂದು ಆತನ ಬೆವರನ್ನು ಒರೆಸಿ ಮೌನವಾಗಿ ಹೊರಟುಹೋಯಿತು. ಈ ಶುಭಶಕುನದಿಂದ ಉತ್ತೇಜಿತನಾಗಿ, ಅರಬ್ಬರೆಂಬ ಗುಡ್ಡಗಾಡು ಜನರ ಸೈನ್ಯವನ್ನು ಸಂಘಟಿಸಿದನು. ಕೆಲವು ಸೈನಿಕರನ್ನು ಬಾಡಿಗೆಗೆ ಕೊಂಡುಕೊಂಡು ಅಲೆಕ್ಸಾಂಡರನ ಅಧಿಕಾರಿಗಳ ಮೇಲೆ ಆಕ್ರಮಣ ಮಾಡಿದನು. ಈ ಯುದ್ಧದಲ್ಲಿ ಕಾಡಾನೆಯೊಂದು ತಾನಾಗಿ ಬಂದು ಆತನನ್ನು ತನ್ನ ಬೆನ್ನ ಮೇಲೇರಿಸಿಕೊಂಡಿತು. ಅಲೆಕ್ಸಾಂಡರನ ಸಾಮ್ರಾಜ್ಯವು ಆತನ ಸೇನಾಪತಿಗಳಲ್ಲಿ ಹಂಚಿಹೋಗಿ ಸೆಲ್ಯುಕಸ ನಿಕೋಟರನು ಭಾರತಕ್ಕೆ ಬಂದು ಲಗ್ಗೆ ಹಾಕುತ್ತಿದ್ದಾಗ, ಚಂದ್ರಗುಪ್ತನು ಇಡೀ ಭಾರತವನ್ನು ಆಳುತ್ತಿದ್ದನು. ಸೆಲ್ಯೂಕಸನು ಚಂದ್ರಗುಪ್ತನೊಡನೆ ಒಪ್ಪಂದವೊಂದನ್ನು ಮಾಡಿಕೊಂಡು ಹಿಂದಿರುಗಿದನು.

ಸೆಲ್ಯೂಕಸನು ಚಂದ್ರಗುಪ್ತನೊಡನೆ ವೈವಾಹಿಕಸಂಬಂಧವನ್ನು 'ಏರ್ಪಡಿಸಿಕೊಳ್ಳುವ ತನಕವೂ ಯುದ್ಧವಾಡಿದನು. (ಕ್ರಿ.ಶ.ಪೂ.305)

ಆರಿಯನ ಹೇಳಿದ ಕಥೆ

ಹೀಗೆ ಬೌದ್ಧ, ಜೈನ ಮತ್ತು ಗ್ರೀಕ ಮೂಲದ ಚಂದ್ರಗುಪ್ತ — ಚಾಣಕ್ಯರ ಕಥೆಗಳನ್ನು ನೋಡಿದಾಗ — ಇಲ್ಲಿಯ ವಿವರಗಳನ್ನು ಮುದ್ರಾಮಂಜೂಷಕಾರನು ತನ್ನ ಕೃತಿಯಲ್ಲಿ ಅಳವಡಿಸಿ ಕೊಂಡಿಲ್ಲವೆಂದು ಹೇಳಬಹುದಾಗಿದೆ.

ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕ

ನವನಂದರನ್ನು ಕೊಂದು ಚಾಣಕ್ಯನು ಅವರ ರಾಜ್ಯವನ್ನು ಚಂದ್ರಗುಪ್ತನಿಗೆ ಕೊಡಿಸುವ ಸಂದರ್ಭದಲ್ಲಿ ನಂದರ ಮಂತ್ರಿಯಾಗಿದ್ದ ಅಮಾತ್ಯರಾಕ್ಷಸನನ್ನು ಚಂದ್ರಗುಪ್ತನ ಮಂತ್ರಿಯನ್ನಾಗಿ ಮಾಡಿದ ಕಥಾಭಾಗವು ನಮಗೆ ಮೊದಲು ದೊರೆಯುವುದು 'ಮುದ್ರಾರಾಕ್ಷಸ' ನಾಟಕದಲ್ಲಿ. ಈ ಕಥೆಗೆ ಸಂಬಂಧಿಸಿದ ಪ್ರಮುಖ ಪಾತ್ರಗಳಾದ ಸರ್ವಾರ್ಥಸಿದ್ಧಿ, ರಾಕ್ಷಸ, ಮಂತ್ರಿ — ಸೇನಾಪತಿಗಳ ಹೆಸರು ಇವೆಲ್ಲ ಮೊದಲು ಇಲ್ಲಿಯೇ ಕಾಣಿಸಿಕೊಳ್ಳುವವು.

ಈ ನಾಟಕದ ಕರ್ತೃ ವಿಶಾಖದತ್ತ. ನಾಟಕದಲ್ಲಿಯ ಪ್ರಸ್ತಾವನೆಯಿಂದ ಆತ ಸಾಮಂತ ವಟೇಶ್ವರದತ್ತನ ಮೊಮ್ಮಗನೆಂದೂ, ಮಹಾರಾಜ ಭಾಸ್ಕರದತ್ತನ ಮಗನೆಂದೂ ಗೊತ್ತಾಗುತ್ತದೆ. ಇವರು ಯಾವ ಕಾಲದಲ್ಲಿ, ಎಲ್ಲಿ ಇದ್ದರು ಎಂಬುದು ಖಚಿತವಾಗಿ ತಿಳಿದುಬಂದಿಲ್ಲ. ಬಹು ಜನ ವಿದ್ವಾಂಸರ ಅಭಿಪ್ರಾಯದಂತೆ ಈ ನಾಟಕವು ಇಮ್ಮಡಿ ಚಂದ್ರಗುಪ್ತ (ಕ್ರಿ.ಶ. ಸು. 450) ನ ಕಾಲದಲ್ಲಿ ರಚಿತವಾಗಿದ್ದಿರಬೇಕು[12a].

ಇದು ಏಳು ಅಂಕಗಳ, ವೀರರಸ ಪ್ರಧಾನವಾದ, ಶೃಂಗಾರದ ಪ್ರಸ್ತಾಪವೇ ಇಲ್ಲದ ನಾಟಕ. ಚಾಣಕ್ಯ ಚಂದ್ರಗುಪ್ತರನ್ನು ಭೇದಿಸಲು ರಾಕ್ಷಸನೂ, ರಾಕ್ಷಸ — ಮಲಯಕೇತುವನ್ನು ಭೇದಿಸಲು ಚಾಣಕ್ಯನೂ ಪ್ರಯತ್ನಿಸುವುದು ಈ ನಾಟಕದ ವಸ್ತು. ಮಲಯಕೇತುವಿನ ನಿಗ್ರಹ ಮತ್ತು ರಾಕ್ಷಸ ಸಂಗ್ರಹ ಇವೆರಡೂ ಸಾಧ್ಯವಾದುದನ್ನು ಈ ನಾಟಕ ತೋರಿಸಿಕೊಡುತ್ತದೆ. ಇದರ ಸಾರಾಂಶ ಹೀಗಿದೆ:

<u>ಮೊದಲನೆಯ ಅಂಕ:</u> ಮುದ್ರಾಲಾಭ: ನಂದ ಕುಲ ವಿನಾಶದಿಂದ ಕುಪಿತನಾದ ಅಮಾತ್ಯ ರಾಕ್ಷಸನು ಪಿತೃವಧೆಯಿಂದ ಉರಿದೆದ್ದ ಪರ್ವತಕನ ಮಗ ಮಲಯಕೇತುವನ್ನು ಕೂಡಿಕೊಂಡು, ದಂಡೆತ್ತಿಬರುವ ಸುದ್ದಿ ಚಾಣಕ್ಯನಿಗೆ ತಿಳಿಯುತ್ತದೆ. ಈ ದಾಳಿಯನ್ನು ವ್ಯರ್ಥಗೊಳಿಸಿ ರಾಕ್ಷಸನನ್ನು ಸಂಗ್ರಹಿಸುವ ಕುರಿತು ಚಾಣಕ್ಯನು ಚಿಂತಿಸುತ್ತಿರುವಾಗ ನಿಪುಣಕನೆಂಬ ಗೂಢಚಾರನು ಅದೃಷ್ಟವಶಾತ್ ದೊರೆತ ರಾಕ್ಷಸನ ಮುದ್ರೆಯುಂಗುರವನ್ನು ತಂದುಕೊಟ್ಟನು. ಆಗ ಚಾಣಕ್ಯನು ಶಕಟದಾಸನಿಂದ ಕುಲಗೋತ್ರಗಳಿಲ್ಲದ ಒಂದು ಕಾಗದವನ್ನು ಬರೆಯಿಸಿ, ಅದಕ್ಕೆ ಆ ಉಂಗುರದಿಂದ ಮೊಹರು ಮಾಡಿಸಿ ಅದನ್ನು ಸಿದ್ಧಾರ್ಥಕನಿಗೆ ಕೊಟ್ಟನು. ಪರ್ವತೇಶ್ವರನು ಧರಿಸಿದ್ದ ಆಭರಣಗಳನ್ನು ವಿಶ್ವಾವಸುವೇ ಮೊದಲಾದ ಮೂವರು ಬ್ರಾಹ್ಮಣರಿಗೆ ದಾನ ಕೊಡಲು ಚಂದ್ರಗುಪ್ತನಿಗೆ ಹೇಳಿ ಕಳುಹಿಸಿದನು. ರಾಕ್ಷಸನ ಹಿತೈಷಿಯಾದ ಶಕಟದಾಸನನ್ನು ಶೂಲಕ್ಕೇರಿಸುವಂತೆ ಹೇಳಿ, ಆಗ ಸಿದ್ಧಾರ್ಥಕನು ಅವನನ್ನು ಅಲ್ಲಿಂದ ಬಿಡಿಸಿ ರಾಕ್ಷಸನಿದ್ದಲ್ಲಿಗೆ ಕರೆದುಕೊಂಡು ಹೋಗುವಂತೆಯೂ, ಮಿತ್ರನನ್ನು ರಕ್ಷಿಸಿದ್ದಕ್ಕಾಗಿ ರಾಕ್ಷಸನು ಕೊಡುವ ಪಾರಿತೋಷಕವನ್ನು ಪರಿಗ್ರಹಿಸುವಂತೆಯೂ ಹೇಳಿದನು. ಚಂದನದಾಸನನ್ನು ಕರೆಯಿಸಿ ಬಂಧನದಲ್ಲಿಡಿಸಿದನು. ಭದ್ರಭಟರೇ ಮೊದಲಾದ ಸೇನಾಪತಿಗಳನ್ನು ವಿಶ್ವಾಸಕ್ಕೆ ತಂದುಕೊಂಡು, ಮಲಯಕೇತುವಿನಲ್ಲಿ ಆಶ್ರಯಪಡೆದುಕೊಳ್ಳುವಂತೆ ಮಾಡುವನು.

<u>ಎರಡನೆಯ ಅಂಕ:</u> ರಾಕ್ಷಸ ವಿಚಾರ: ಚಂದ್ರಗುಪ್ತನ ನಾಶಕ್ಕೆಂದು ರಾಕ್ಷಸನು 'ಏರ್ಪಡಿಸಿದ್ದ ತಂತ್ರಗಳೆಲ್ಲ ವಿಫಲವಾಗಿ, ಆತನಿಗೆ ಪ್ರತಿಕೂಲವಾಗಿಯೇ ಪರಿಣಮಿಸಿತು. ವಿಷಕನ್ಯೆಯಿಂದ ಪರ್ವತರಾಜನು ಸತ್ತನು; ಅವಳನ್ನು ಕಳುಹಿಸಿದವನು ರಾಕ್ಷಸನು ಎಂಬ ಅಪಖ್ಯಾತಿ ಹರಡಿತು. ಅವಳನ್ನು ಕರೆದುತಂದಿದ್ದ ಜೀವಸಿದ್ಧಿಯು ದೇಶಚ್ಯುತನಾದನು. ಪರ್ವತರಾಜನ ತಮ್ಮನಾದ ವೈರೋಚಕ, ಸೂತ್ರಧಾರನಾದ ದಾರುವರ್ಮ, ಮಾವಟಿಗನಾದ ಬರ್ಬರಕ, ವೈದ್ಯನಾದ ಅಭಯದತ್ತ, ಶಯನಗೃಹದಲ್ಲಿದ್ದ ಪ್ರಮೋದಕ — ಎಲ್ಲರೂ ಹತರಾದರು. ಈ ಸುದ್ದಿ ಕೇಳುತ್ತಿದ್ದಾಗಲೇ ಸಿದ್ಧಾರ್ಥಕನು ಶಕಟದಾಸನನ್ನು ಶೂಲದಿಂದ ತಪ್ಪಿಸಿ ಕರೆ ತಂದದ್ದರಿಂದ, ಸಂತುಷ್ಟನಾದ ರಾಕ್ಷಸನು ತಾನು ಧರಿಸಿದ್ದ ಒಡವೆಗಳನ್ನು ಸಿದ್ಧಾರ್ಥಕನಿಗೆ ಬಹುಮಾನವಾಗಿ ಕೊಡುವನು. ಅವನು ತಾನು ತಂದಿದ್ದ ಮುದ್ರೆಯುಂಗುರವನ್ನು ರಾಕ್ಷಸನಿಗೆ ಕೊಟ್ಟು, ಅದರಿಂದಲೇ ಒಡವೆಗಳ ಪೆಟ್ಟಿಗೆಗೆ ಮೊಹರು ಮಾಡಿ ಅದನ್ನು ಅಲ್ಲಿಯೇ ಇಟ್ಟಿರುವಂತೆ ಕೇಳಿಕೊಂಡನು. ಅದಕ್ಕೆ ರಾಕ್ಷಸನು ಒಪ್ಪಿ ಸಿದ್ಧಾರ್ಥಕನನ್ನು ತನ್ನಲ್ಲಿಯೇ ನಿಲ್ಲಿಸಿಕೊಂಡನು. ಅತ್ತ ಚಾಣಕ್ಯನಿಂದ ಪ್ರೇರಿತರಾಗಿದ್ದ ಬ್ರಾಹ್ಮಣರು ವರ್ತಕವೇಷದಿಂದ ಪರ್ವತರಾಜನ ಆಭರಣಗಳನ್ನು ತಂದು ರಾಕ್ಷಸನಿಗೆ ಮಾರುವರು. ಗುಪ್ತಚಾರನು ಚಂದ್ರಗುಪ್ತನು ಚಾಣಕ್ಯನ ಮೇಲೆ ಸಿಟ್ಟಾಗಿದ್ದಾನೆಂದು ತಿಳಿಸಿದಾಗ — ಚಾಣಕ್ಯನ ಆಜ್ಞಾಭಂಗ ಮಾಡಿದಾಗೆಲ್ಲ ಚಂದ್ರಗುಪ್ತನನ್ನು ಉತ್ತೇಜಿಸುವಂತೆ ಸಮರ್ಥ ಪದ್ಯಗಳನ್ನು ರಚಿಸಲು ರಾಕ್ಷಸನು ತನ್ನ ಪರವಾದ ಸ್ತುತಿ ಪಾಠಕರಿಗೆ ಹೇಳಿ ಕಳುಹಿಸುತ್ತಾನೆ.

<u>ಮೂರನೆಯ ಅಂಕ: ಕೃತಕ ಕಲಹ:</u> ಚಂದ್ರಗುಪ್ತನು ಪುರಜನರು ಕೌಮುದೀ ಮಹೋತ್ಸವವನ್ನು ಆಚರಿಸುವಂತೆ ಆಜ್ಞೆ ಹೊರಡಿಸುವನು. ಚಾಣಕ್ಯನು ಅದನ್ನು ನಿಷೇಧಿಸುವನು. ಇದೇ ಕಾರಣಕ್ಕಾಗಿ ಅವರು ಕಪಟ ವ್ಯಾಜ್ಯ ಮಾಡುವರು. ಆಗ ಸ್ತನಕಲಶನೆಂಬ ವೈತಾಳಿಕನು ಉತ್ತೇಜಕವಾದ ಮಾತುಗಳಿಂದ ಚಂದ್ರಗುಪ್ತನನ್ನು ಹೊಗಳಲು, ಚಾಣಕ್ಯನು ಅದು ರಾಕ್ಷಸನ ತಂತ್ರವೆಂದರಿತು ಜಗಳನ್ನು ಹೆಚ್ಚಿಸುವನು. ಚಂದ್ರಗುಪ್ತನು ರಾಕ್ಷಸನನ್ನು ಹೊಗಳಿ ಚಾಣಕ್ಯನನ್ನು ಅಲ್ಲಗಳೆಯಲು, ಚಾಣಕ್ಯನು ಕೋಪಗೊಂಡವನಂತೆ ಅಮಾತ್ಯಾಧಿಕಾರವನ್ನು ತೊರೆಯುವನು.

<u>ನಾಲ್ಕನೆಯ ಅಂಕ: ರಾಕ್ಷಸೋದ್ಯೋಗ:</u> ಇತ್ತ ರಾಕ್ಷಸನು ದೂತರಿಂದ ಪಾಟಲೀಪುರದ ವೃತ್ತಾಂತವನ್ನು ಕೇಳುತ್ತಿರುವಾಗ, ಅವನನ್ನು ನೋಡಬೇಕೆಂದು ಮಲಯಕೇತುವು ಭಾಗುರಾಯಣನೊಡನೆ ಬರುವನು. ಭಾಗುರಾಯಣನು ಭದ್ರಭಟ, ರಾಕ್ಷಸ ಮುಂತಾದವರ ಮಾತಿಗೆ ಅಪಾರ್ಥ ಮಾಡಲು, ಮಲಯಕೇತುವು ರಾಕ್ಷಸನಿಗೆ ಚಂದ್ರಗುಪ್ತನಲ್ಲಿ ಅನುರಕ್ತಿಯಿದೆಯೆಂದು ಭಾವಿಸುವನು. ಚಾಣಕ್ಯ — ಚಂದ್ರಗುಪ್ತರಿಗೆ ಜಗಳ ಹುಟ್ಟಿತೆಂದು ಕೇಳಿ ರಾಕ್ಷಸನು ಅವರ ಮೇಲೆ ದಂಡೆತ್ತಿ ಹೋಗಲು ಸೈನ್ಯವನ್ನು ಸಿದ್ಧಗೊಳಿಸುವನು.

<u>ಐದನೆಯ ಅಂಕ: ಕೂಟ ಲೇಖ:</u> ಜೀವಸಿದ್ಧಿ ಉಂಡಿಗೆಯನ್ನು ತೆಗೆದುಕೊಳ್ಳುವುದಕ್ಕೆಂದು ಭಾಗುರಾಯಣನ ಹತ್ತಿರಕ್ಕೆ ಬಂದು ಅಲ್ಲಿದ್ದ ಮಲಯಕೇತು ಕೇಳುವ ಹಾಗೆ ' ರಾಕ್ಷಸನೇ ವಿಷಕನ್ಯೆಯಿಂದ ಪರ್ವತರಾಜನನ್ನು

ಕೊಲ್ಲಿಸಿದನು" ಎಂದು ಹೇಳುವನು. ಸಿದ್ಧಾರ್ಥಕನು ಹಿಂದೆ ಶಕಟದಾಸನಿಂದ ಬರೆಸಿದ್ದ ಕುಲಗೋತ್ರಗಳಿಲ್ಲದ ಕಾಗದವನ್ನೂ, ರಾಕ್ಷಸನ ಮುದ್ರಿಕೆಯಿಂದ ಮೊಹರು ಮಾಡಿಸಿದ್ದ ಆಭರಣಗಳ ಪೆಟ್ಟಿಗೆಯನ್ನೂ ತೆಗೆದುಕೊಂಡು ಹೋಗಿ ಸಿಕ್ಕಿಬಿದ್ದು, ಮಲಯಕೇತುವಿಗೆ ಅದೆಲ್ಲ ರಾಕ್ಷಸನ ಉಪಾಯವೆಂದೂ, ಅವನೂ ಚಿತ್ರವರ್ಮಾದಿ ರಾಜರುಗಳೂ ಚಂದ್ರಗುಪ್ತನ ಅನುಗ್ರಹಾಕಾಂಕ್ಷಿಗಳೆಂದೂ ತಿಳಿಸುವನು. ಅಸಮಾಧಾನಗೊಂಡ ಮಲಯಕೇತುವು ರಾಕ್ಷಸನನ್ನು ಕೇಳಿದಾಗ, ಇದೆಲ್ಲ ಸುಳ್ಳೆಂದು ಸಾಧಿಸಲು ಅವನಿಗೆ ಸಾಧ್ಯವಾಗುವುದಿಲ್ಲ. ಅದರ ಪರಿಣಾಮವಾಗಿ ಮಲಯಕೇತುವು ರಾಕ್ಷಸನನ್ನು 'ಓಡಿಸಿ ಚಿತ್ರವರ್ಮಾದಿಗಳನ್ನು ಕೊಲ್ಲಿಸುವನು.

<u>ಆರನೆಯ ಅಂಕ: ಕಪಟಪಾಶ:</u> ಉಳಿದ ಸಾಮಂತರೂ ಹೆದರಿ ಮಲಯಕೇತುವನ್ನು ಬಿಟ್ಟು ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿದರು. ಆಗ 'ಏಕಾಕಿಯಾದ ಮಲಯಕೇತುವನ್ನು ಭದ್ರಭಟಾದಿಗಳು ಸೆರೆ ಹಿಡಿದರು. ರಾಕ್ಷಸನು ಹತಾಶನಾಗಿ ಹತ್ತಿರದಲ್ಲಿದ್ದ ಪಾಟಲೀಪುರದ ಉದ್ಯಾನಕ್ಕೆ ಬಂದನು. ಅಲ್ಲಿ ಉದುಂಬರನೆಂಬವನು ನೇಣುಹಾಕಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದನು. ಚಂದನದಾಸನು ವಧ್ಯಸ್ಥಾನದಲ್ಲಿರುವುದನ್ನು ತಿಳಿದು ಅವನನ್ನು ಬಿಡಿಸಿಕೊಳ್ಳಲು ರಾಕ್ಷಸನು ಸ್ಮಶಾನದ ಕಡೆ ಹೊರಟನು.

<u>'ಏಳನೆಯ ಅಂಕ: ನಿರ್ವಹಣ:</u> ವಧ್ಯಸ್ಥಾನಕ್ಕೆ ಬಂದ ಚಂದನದಾಸನು ತನ್ನ ಕುಟುಂಬದವರನ್ನು ಹಿಂದಕ್ಕೆ ಕಳುಹಿಸಿದನು. ಆಗಲೇ ರಾಕ್ಷಸನು ಅಲ್ಲಿಗೆ ಬಂದು ಆ ವಿಚಾರವನ್ನು ಚಾಣಕ್ಯನಿಗೆ ತಿಳಿಸಲು ಹೇಳುವನು. ಚಾಣಕ್ಯನೂ ಚಂದ್ರಗುಪ್ತನೂ ಅವನನ್ನು ಕಂಡು ಮಂತ್ರಿಪದವಿಯನ್ನು ಸ್ವೀಕರಿಸುವಂತೆ ಪ್ರಾರ್ಥಿಸುವರು. ಚಂದನದಾಸನನ್ನು ಬದುಕಿಸಿಕೊಳ್ಳಲು ಅವನು ಅಧಿಕಾರವನ್ನು ಕೈಕೊಳ್ಳುವನು. ರಾಕ್ಷಸನ ಅಪೇಕ್ಷೆಯಂತೆ ಮಲಯಕೇತುವಿಗೆ ತಂದೆಯ ರಾಜ್ಯ ಸಿಗುವುದು. ಚಾಣಕ್ಯನು ತನ್ನ ಜುಟ್ಟನ್ನು ಕಟ್ಟುವನು.

ಇಲ್ಲಿ ನಾಟಕಕಾರನು ಕಥೆಯು ಎದ್ದುಕಾಣುವಂತೆ, ಪಾತ್ರಗಳು ಸ್ವತಃ ಕಣ್ಣೆದುರಿಗೆ ಬಂದು ನಿಲ್ಲುವಂತೆ ನಾಟಕವನ್ನು ರಚಿಸಿದ್ದಾನೆ. ನಾಟಕದ ಪೂರ್ವಕಥೆಗೆ ಸಂಬಂಧಿಸಿದ ಕೆಲವು ಸೂಚನೆಗಳೂ ಕಂಡು ಬರುತ್ತವೆ. 'ಮುದ್ರಾಮಂಜೂಷ' ದ ಕವಿ ನಾಟಕದಲ್ಲಿ ಬಂದಿರುವ ಈ ಸೂಚನೆಗಳನ್ನು ತನಗೆ ಬೇಕಾದಂತೆ ಹಿಗ್ಗಿಸಿಕೊಂಡಿದ್ದಾನೆ. 'ಮುದ್ರಾಮಂಜೂಷ' ವೆಂಬ ಹೆಸರಿಡಲೂ ಅತನಿಗೆ 'ಮುದ್ರಾರಾಕ್ಷಸ' ವೇ ಪ್ರೇರಣೆಯಾಗಿರಬಹುದು.[13] 'ರಾಕ್ಷಸನ ಮುದ್ರಿಕಾ ಗ್ರಹಣ' ಗದ್ಯ ಕೃತಿಯಲ್ಲಿ ಹದಿಮೂರನೆಯ ಆಶಯವು. ಅಲ್ಲಿಯ ವರೆಗಿನ ಕಥೆಯನ್ನು ವಿಸ್ತಾರವಾಗಿ ವಿವರಿಸಿಕೊಂಡು ಬಂದ ಕವಿಯು ಅಲ್ಲಿಂದ ಮತ್ತೆ ನಾಟಕದ ಕಥೆಯನ್ನು ಅನುಸರಿಸಿದ್ದಾನೆ. ಹೀಗೆ ಪೂರ್ಣವಾಗಿಯಲ್ಲದಿದ್ದರೂ ಕವಿಯು ವಿಶಾಖದತ್ತನಿಗೆ ಋಣಿಯಾಗಿದ್ದಾನೆ.

ಮುದ್ರಾರಾಕ್ಷಸ ನಾಟಕದ ಪೂರ್ವಕಥೆಗಳು

ಚಾಣಕ್ಯ ಚಂದ್ರಗುಪ್ತರ ಕಥೆ ಭಾರತೀಯರಿಗೆ ಸಾವಿರಾರು ವರ್ಷಗಳಿಂದಲೂ ಅಚ್ಚುಮೆಚ್ಚಾಗಿದೆ. ವೈದಿಕ, ಜೈನ, ಬೌದ್ಧ ಮತಸ್ಥರ ಗ್ರಂಥಗಳಲ್ಲಿ ಈ ಕಥೆಯ ಭಿನ್ನ ಭಿನ್ನ ರೂಪಗಳನ್ನು ಗುರುತಿಸಬಹುದಾದರೂ ಜನತೆಗೆ ಹೆಚ್ಚು ಪರಿಚಿತವಾದ ಕಥಾರೂಪವೆಂದರೆ ವಿಶಾಖದತ್ತನು ' ಮುದ್ರಾರಾಕ್ಷಸ' ನಾಟಕದಲ್ಲಿ ಎತ್ತಿತೋರಿಸಿರುವ ವೃತ್ತಾಂತವೇ.

ಈ ನಾಟಕವು ಅದರ ಜಟಿಲ ತಂತ್ರದಿಂದಾಗಿ ಓದುವವರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. ಏಕೆಂದರೆ ನಾಟಕದಲ್ಲಿ ರಂಗದ ಮೇಲೆ ಪ್ರದರ್ಶಿತವಾಗುವ ಕಾರ್ಯಕ್ಕಿಂತ ಪರ್ಯಾಯವಾಗಿ ಸೂಚಿಸುವ ಕಾರ್ಯಗಳೇ ಹೆಚ್ಚು. ಹಾಗೆ ಸೂಚಿತವಾಗುವ ವಿಚಾರಗಳನ್ನೆಲ್ಲ, ಜೊತೆಯೇ ನೆನಪಿಟ್ಟುಕೊಳ್ಳುವುದು ಸುಲಭ ಸಾಧ್ಯವಲ್ಲ. ಈ ಕೊರತೆಯನ್ನು ನಿವಾರಿಸುವುದಕ್ಕಾಗಿ ಅನೇಕ ಕವಿಗಳು (ವಿದ್ವಾಂಸರು) ಆ ನಾಟಕದ (ಹಿನ್ನೆಲೆ) ಪೂರ್ವಕಥೆಯನ್ನು ಸ್ವತಂತ್ರವಾಗಿ ಬರೆಯಲು ಪ್ರಯತ್ನಿಸಿದ್ದಾರೆ. ಇಂತಹವು ನಾಲ್ಕು ಬಗೆಯವುಗಳಾಗಿವೆ:[14] (1) ಐತಿಹಾಸಿಕ ಹಿನ್ನೆಲೆಯ ವಿವರಗಳನ್ನು ಮಾತ್ರ ಕೊಡುವಂತಹವು. (2) ಮೊದಲಿನ ಸಂಗತಿಗಳೊಂದಿಗೆ ನಾಟಕದ ಕಥೆಯನ್ನು ಹೇಳುವಂತಹವು (3) ಗದ್ಯದಲ್ಲಿ ಇರುವಂತಹವು (4) ಪದ್ಯದಲ್ಲಿ ಇರುವಂತಹವು. ಇಂತಹವುಗಳನ್ನು ಒಂದೊಂದಾಗಿ ಪರಿಶೀಲಿಸಲಾಗುವುದು.

1. ಮುದ್ರಾರಾಕ್ಷಸ ಪೂರ್ವಪೀಠಿಕಾ ಅಥವಾ ಮುದ್ರಾರಾಕ್ಷಸ ಪೂರ್ವ ಸಂಕಥಾನಕ: ಇದನ್ನು ಬರೆದವನು ಅನಂತ ಭಟ್ಟನೆಂಬವನು[15]. ಆತನು 17ನೇ ಶತಮಾನದ ಮಧ್ಯಭಾಗದಲ್ಲಿ ಗೋದಾವರೀ ದಂಡೆಯಲ್ಲಿಯ ಪುಣ್ಯಸ್ತಂಭ ಎಂಬಲ್ಲಿದ್ದನು. ಈತನ ಕೃತಿಯು ಗದ್ಯದಲ್ಲಿದ್ದು ಕೇವಲ ನಾಟಕದ ಪೀಠಿಕೆಯ ವರೆಗಿನ ಕಥೆಯನ್ನು ಮಾತ್ರ ಹೇಳುತ್ತದೆ. ರಾಜೇಂದ್ರಲಾಲ ಮಿತ್ರ ಎಂಬವರು ತಮ್ಮ ಗಮನಕ್ಕೆ ಬಂದ ಇದರ ಹಸ್ತಪ್ರತಿಯೊಂದರ ಬಗ್ಗೆ ಹೇಳಿದ್ದು, ಇನ್ನೆರಡು ಪ್ರತಿಗಳು ಬಿಕಾನೇರ ಅನುಪ ಸಂಸ್ಕೃತ ಲೈಬ್ರರಿಯಲ್ಲಿದೆ[16]. ಅನಂತ ಭಟ್ಟನ ಕೃತಿಯ ಸಾರಾಂಶವನ್ನು ಜೀವಾನಂದ ವಿದ್ಯಾಸಾಗರರು ತಮ್ಮ ' ಮುದ್ರಾರಾಕ್ಷಸ' ನಾಟಕದ ಮೊದಲಲ್ಲಿ ಕೊಟ್ಟಿದ್ದಾರೆ. ಅದರ ಕಥಾ ಸಾರಾಂಶ ಇಂತಿದೆ: ಸುಧನ್ವನೆಂಬವನು ನಂದರಾಜ. ಆತನ ಪಟ್ಟದ ರಾಣಿ ರತ್ನಾವತಿ. ಅವಳಿಗೆ ಉಗ್ರಧನ್ವ, ತೀಕ್ಷ್ಣಧನ್ವರೇ ಮೊದಲಾದ ಒಂಬತ್ತು ಜನ ಮಕ್ಕಳು. ರಾಜನ ಕ್ಷತ್ರಿಯಳಲ್ಲದ ಪತ್ನಿಯ ಪುತ್ರ ಚಂದ್ರಗುಪ್ತನು ಚಿಕ್ಕಂದಿನಲ್ಲೇ ವಿಶೇಷ ಪ್ರಗತಿ ಹೊಂದಿದವನಾದ್ದರಿಂದ ತನ್ನ ಅಣ್ಣಂದಿರ ಮತ್ಸರಕ್ಕೆ ಪಾತ್ರನಾದನು.

ಒಮ್ಮೆ ರಾಜನು ಉತ್ಸವವೊಂದನ್ನು ನೋಡಲು ಸುಮಂಗಲೆಯೆಂಬ ದಾಸಿಯೊಂದಿಗೆ ಉದ್ಯಾನಕ್ಕೆ ಹೋಗಿದ್ದನು. ಅಲ್ಲಿ ಆತ ಆಲದ ಮರದಡಿ ಕ್ಷಣ ಕಾಲ ನಿಂತು ಫಕ್ಕನೆ ನಕ್ಕನು; ಆತನು

ನಗುವುದನ್ನು ನೋಡಿ ಆಕೆಯೂ ನಕ್ಕಳು. ಅದನ್ನು ಗಮನಿಸಿದ ರಾಜನು — ತಾನು ನಗಾಡಿದ ಕಾರಣವನ್ನು ಕಂಡುಹಿಡಿದು ಒಂದು ದಿನದಲ್ಲಿ ಹೇಳಬೇಕೆಂದೂ, ಇಲ್ಲದಿದ್ದಲ್ಲಿ ಅವಳಿಗೆ ಮರಣದಂಡನೆ ವಿಧಿಸುವುದಾಗಿಯೂ ಆಜ್ಞೆ ಮಾಡಿದನು. ಇದನ್ನು ಕೇಳಿ ಕಂಗಾಲಾದ ಆಕೆ ರಾತ್ರಿ ಹೊತ್ತಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ನದಿಯ ದಂಡೆಗೆ ಹೋದಳು. ಅಲ್ಲಿದ್ದ ಬ್ರಾಹ್ಮಣನೊಬ್ಬನು ಆಕೆಯ ಕಷ್ಟದ ಕಾರಣವನ್ನು ಕೇಳಿದನು. ಆಕೆ ಹಿಂದಿನ ದಿನದ ಘಟನೆ ಹಾಗೂ ಸಂದರ್ಭಗಳನ್ನು ವಿವರಿಸಿದಳು. ಆಗ ಬ್ರಾಹ್ಮಣನು — 'ರಾಜನು, ಇರುವೆಗಳಿಂದ ಎಳೆಯಲ್ಪಡುವ ಚಿಕ್ಕ ಬೀಜಗಳನ್ನು — ಇವೇ ಮುಂದೆ ದೊಡ್ಡ ಮರವಾಗಿ ಆನೆಗಳಿಂದಲೂ ಎಳೆಯಲಸಾಧ್ಯವಾಗುವುದನ್ನು ನೆನೆದು — ನೋಡಿ ನಕ್ಕನು' ಎಂದನು. ಸುಮಂಗಲೆಯು ಅಂತೆಯೇ ರಾಜನಿಗೆ ಹೇಳಲು ಅದನ್ನು ಕೇಳಿ ಅವಳ ಬುದ್ಧಿಶಕ್ತಿಗೆ ಮೆಚ್ಚಿ ಬಹುಮಾನಗಳನ್ನು ಕೊಟ್ಟು ಕಳುಹಿಸಿದನು.

ಕೆಲವು ಕಾಲ ಕಳೆದ ಮೇಲೆ ಶತ್ರುರಾಜರು ನಂದರ ಮತ್ತು ಅವರ ಮಂತ್ರಿಗಳ ಬುದ್ಧಿಶಕ್ತಿಯನ್ನು ಪರೀಕ್ಷಿಸಲು ದೇವದಾರು ಮರದ ಸಣ್ಣ ಕೋಲೊಂದನ್ನು ಕಳುಹಿಸಿಕೊಟ್ಟು ಅದರ ಬುಡ ಮತ್ತು ತುದಿ ಭಾಗವನ್ನು ಕಂಡುಹಿಡಿಯಲು ಹೇಳಿದರು. ನಂದರಿಗಾಗಲೀ ಅವರ ಮಂತ್ರಿಗಳಿಗಾಗಲೀ ಇದು ಸಾಧ್ಯವಾಗಲಿಲ್ಲ. ರಾಜನು ಸುಮಂಗಲೆಯನ್ನು ಈ ಸಮಸ್ಯೆ ಬಿಡಿಸಿ ಹೇಳುವಂತೆ ಕೇಳಿದನು. ಆಗ ಆಕೆ ಕಳೆದ ಸಲವೂ ತಾನು ಸಮಸ್ಯೆಯನ್ನು ಬಿಡಿಸಿದ್ದಲ್ಲವೆಂದೂ, ನದಿಯ ದಂಡೆಯಲ್ಲಿದ್ದ ಸುಬುದ್ಧಿ ಶರ್ಮನೆಂಬ ಬ್ರಾಹ್ಮಣನು ಅದಕ್ಕೆ ಪರಿಹಾರವನ್ನು ಹೇಳಿದ್ದೆಂದೂ, ಈಗಲೂ ಆತ ಅಲ್ಲಿದ್ದರೆ ಕೇಳಿ ಪ್ರಯತ್ನಿಸುವುದಾಗಿಯೂ ಹೇಳಿದಳು. ರಾಜನ ಅಣತಿಯಂತೆ ಆಕೆ ನದಿಯ ದಂಡೆಗೆ ಹೋಗಿ ಸಮಸ್ಯೆಯನ್ನು ಹೇಳಿ ಆತನನ್ನು ಅರಮನೆಗೆ ಕರೆದುಕೊಂಡು ಬಂದಳು. ಆತನು ಆ ಕೋಲನ್ನು ನೀರಿಗೆ ಎಸೆದು ಅದರ ಬುಡ ಮತ್ತು ತುದಿಯನ್ನು ಕಂಡುಹಿಡಿದನು. ಇದರಿಂದ ಸಂತುಷ್ಟನಾದ ದೊರೆಯು ತುಂಬಾ ಸಂತೋಷಪಟ್ಟು ತನ್ನ ಮಂತ್ರಿ ಹಾಗೂ ಸ್ನೇಹಿತನನ್ನಾಗಿ ಮಾಡಿಕೊಂಡನು. ಆ ಬ್ರಾಹ್ಮಣನು ಮೊದಲು ಚಂದನದಾಸನೆಂಬ ವ್ಯಾಪಾರಿಯ ಆಶ್ರಿತನಾಗಿದ್ದನು. ಮಂತ್ರಿಯಾದ ಮೇಲೆ ತನ್ನ ಶೌರ್ಯದಿಂದಾಗಿ ಆತನು ರಾಕ್ಷಸನೆಂದು ಪ್ರಸಿದ್ಧನಾದನು.

ಕೆಲವೇ ಸಮಯದಲ್ಲಿ ಅರಸನು ಮೃತಹೊಂದಿದನು. ಆತನ ದೇಹವನ್ನು ದಹಿಸುವುದಕ್ಕಿಂತ ಮೊದಲು ಅದು ಪುನಃ ಜೀವ ಪಡೆಯಿತು. ವಿಂಧ್ಯಾಚಲ ಪ್ರದೇಶದ ಕಾಡಿನ ಮಧ್ಯಸ್ಥನಾಗಿದ್ದ ಸುವಿದ್ಯಾ ಎಂಬ ಹೆಸರಿನ ತಪಸ್ವಿಯು ಸುಶೀಲ ಮತ್ತು ಬಹುಶ್ರುತರೆಂಬ ತನ್ನ ಇಬ್ಬರು ಶಿಷ್ಯರೊಂದಿಗೆ ತನ್ನ ಗುರುವಾದ ನೇಪಾಳದ ನೀಲಕಂಠನಿಗೆ ಗುರುದಕ್ಷಿಣೆ ಕೊಡಲೆಂದು ಹಣ ಕೇಳಲು ಕುಸುಮಪುರಕ್ಕೆ ಬಂದಿದ್ದನು. ಆತನು ಯೋಗಿಯಾದ್ದರಿಂದ 'ಪರಕಾಯಪ್ರವೇಶ' ವು ಆತನಿಗೆ ಗೊತ್ತಿತ್ತು. ತನ್ನ ಒಬ್ಬ ಶಿಷ್ಯನಿಗೆ — ತನ್ನ ದೇಹವನ್ನು ಕಾಪಾಡಿಕೊಳ್ಳುವಂತೆ ಹೇಳಿ, ಮತ್ತೊಬ್ಬನಲ್ಲಿ — ನಂಜೆ ಬಂದು ತನ್ನಲ್ಲಿ ಹಣ ಕೇಳಬೇಕೆಂದು ಹೇಳಿ ಆತನ ರಾಜನ ದೇಹವನ್ನು ಪ್ರವೇಶಿಸಿದನು. ಪುನರ್ಜೀವ ಪಡೆದ ಮೇಲೆ

ಈ ರಾಜನು ಶಿಷ್ಯನು ಕೇಳಿದ ಶ್ರೀಮಂತಿಕೆಯನ್ನು ಕೊಟ್ಟನು. ಇದನ್ನೆಲ್ಲ ಗಮನಿಸುತ್ತಿದ್ದ ರಾಕ್ಷಸನು, ಪರಕಾಯ ಪ್ರವೇಶದ ಈ ತಂತ್ರವನ್ನು ಊಹಿಸಿ, ಕುದುರೆಯನ್ನೇರಿ, ಮೃತ ದೇಹವನ್ನು ಹುಡುಕ ತೊಡಗಿದನು. ಅರಮನೆಗೆ ಹಣ ಕೇಳಲು ಬಂದಿದ್ದ ಶಿಷ್ಯ ಹಾಗೂ ಮತ್ತೊಬ್ಬ ಶಿಷ್ಯನ ವಶದಲ್ಲಿದ್ದ ಶವವನ್ನು ಅತನು ಕಂಡುಹಿಡಿದ. ರಾಕ್ಷಸನು ಆ ದೇಹವನ್ನು ಸುಡಿಸಿಬಿಟ್ಟನು ಮತ್ತು ಆ ಇಬ್ಬರು ಶಿಷ್ಯರನ್ನು ಗಂಗಾನದಿಗೆ ತಳ್ಳಿಸಿ ಬಿಟ್ಟನು. ಸುಬಿದ್ಧನಿಗೆ ಇದು ತಿಳಿದು ಸಮಯಕ್ಕೆ ತಕ್ಕಂತೆ ಸಂಯಮದಿಂದ ಹೊಂದಿಕೊಂಡನು ಮತ್ತು ರಾಕ್ಷಸನನ್ನು ಕಡೆಗಣಿಸುತ್ತಾ, ವಕ್ರನಾಸನಿಗೆ ಅನುಕೂಲನಾಗಿದ್ದ ರಾಕ್ಷಸನು ಆ ರಾಜನನ್ನು ಬಿಟ್ಟು ಪರ್ವತಕೇಶ್ವರನ ಮಂತ್ರಿಯಾದನು. ನಂದರ ಒಬ್ಬ ಮಂತ್ರಿ ಶಕಟಾರನೆಂಬವನು, ಪರ್ವತರಾಜ್ಯದ ಬಳಿಯ ಪ್ರಾಂತದ ಮುಖ್ಯಸ್ಥನಾಗಿದ್ದನು. ಸುಬುದ್ಧಿ ಎಂಬವನು ನಂದನ ಮಂತ್ರಿಯಾದನೆಂದು ಕೇಳಿದಾಗ, ರಾಜನಿಗೆ ಹತ್ತಿರದವನಾಗಲು ರಾಜಧಾನಿಗೆ ಬಂದು ನೆರೆಸಿದನು.

ಒಮ್ಮೆ ಈ ಕೃತಕ ನಂದನೂ ಶಕಟಾರನೂ ಬೇಟೆಯಾಡಲು ಹೋದರು. ಬಳಲಿ ಬಾಯಾರಿದ ರಾಜನು ನೀರು ತರುವಂತೆ ಮಂತ್ರಿಗೆ ಆದೇಶಿಸಿದನು. ಮಂತ್ರಿಯು ಸಮೀಪದ ಸರೋವರದ ಬಳಿ ಹೋದಾಗ ಶಾಸನಗಲ್ಲೊಂದನ್ನು ನೋಡಿದನು. ಅದರಲ್ಲಿ — ' ರಾಜಶಕ್ತಿಯುಳ್ಳ ರಾಜ ಮತ್ತು ಪ್ರಬಲನಾದ ಮಂತ್ರಿ ಇವರಿಬ್ಬರಲ್ಲಿ ಹೊಂದಾಣಿಕೆಯಾಗುವುದಿಲ್ಲ. ಅವರಲ್ಲಿ ಒಬ್ಬನು ಕೊಲ್ಲಲ್ಪಡಬೇಕು' ಎಂದು ಕೊರೆಯಲ್ಪಟ್ಟಿತ್ತು. ರಾಜನು ಇದನ್ನು ನೋಡುವುದು ಮಂತ್ರಿಗೆ ಇಷ್ಟವಿದ್ದಿಲ್ಲ. ಹಾಗಾಗಿ ಆತನು ಆ ಕಲ್ಲು ಚಪ್ಪಡಿಯನ್ನು ತಿರುಗಿಸಿಹಾಕಿದನು. ಆಗಲೇ ರಾಜನು ಅಲ್ಲಿಗೆ ಬಂದು ಕಲ್ಲನ್ನು ತಿರುಗಿಸಬೇಕೆನ್ನುವಷ್ಟರಲ್ಲಿ ಮಂತ್ರಿಯು ಮತ್ತೊಂದು ಕಲ್ಲನ್ನು ಎತ್ತಿಹಾಕಿ ರಾಜನನ್ನು ಕೊಂದು ಬಿಟ್ಟನು. ಆ ರಾಜನ ದೇಹವನ್ನು ಕಲ್ಲುಚಪ್ಪಡಿಯ ಅಡಿ ಹುದುಗಿಸಿಟ್ಟು, ಹಿಂದಿರುಗಿ ಬಂದು ರಾಜನು ಬೇಟೆಯ ಸಮಯದಲ್ಲಿ ನಾಪತ್ತೆಯಾದನೆಂದು ಹೇಳಿದನು. ನಿಜವಾದ ನಂದನ ಹಿರಿಯ ಮಗ ಉಗ್ರಧನ್ವನು ರಾಜನಾದನು.

ಒಮ್ಮೆ, ಉಗ್ರಧನ್ವನು, ಹಕ್ಕಿಯೊಂದು ತನ್ನ ಮರಿಯನ್ನು ಪ್ರೀತಿಸುವುದನ್ನು ಕಂಡು, ಹಿಂದಿನ ರಾಜನು ನಾಪತ್ತೆಯಾದ ಅಸಲಿ ಕಾರಣವನ್ನು ಕಂಡುಕೊಳ್ಳಬೇಕೆಂದು ಬಯಸಿದನು. ಮೂರು ದಿನಗಳಲ್ಲಿ ಮಾಹಿತಿಯನ್ನು ತಂದು ಒದಗಿಸಬೇಕೆಂದು ಆತನು ಗುಪ್ತಚರರಿಗೆ ಆಜ್ಞಾಪಿಸಿದನು. ಕರುಣಾಕರನೆಂಬ ಗುಪ್ತಚಾರನು ತಾಂತ್ರಿಕನೊಬ್ಬನ ಬಳಿ ಬಂದು, ಮೃತ ದೇಹವೊಂದರಲ್ಲಿ ಭದ್ರಕಾಳಿಯನ್ನು ಆಹ್ವಾನಿಸಿ, ಆ ಮೂಲಕ ಶಕಟಾರನು ಹೇಗೆ ಕಾಡಿನಲ್ಲಿ ರಾಜನನ್ನು ಕೊಂದನೆಂಬುದನ್ನು ಕಂಡುಕೊಂಡನು. ಅದರಂತೆ ರಾಜಾಜ್ಞೆಯಾಗಿ ಶಕಟಾರ, ಆತನ ಪತ್ನಿ, ಸಂಕಟವರ್ಮ, ವಿಕಟವರ್ಮ, ಸುಮತಿ, ಮಿತ್ರಗುಪ್ತ, ಪ್ರಕಟಾರ ಮತ್ತು ವಿಕಟಾರ ಎಂಬ ಹೆಸರಿನ ಆತನ ಆರು ಜನ ಮಕ್ಕಳನ್ನು ಚಿಕ್ಕ ನೆಲಮಾಳಿಗೆಗೆ ತಳ್ಳಿ ಸ್ವಲ್ಪ ಆಹಾರ ಮತ್ತು ನೀರನ್ನು ಒದಗಿಸಲಾಯಿತು. ವಿಕಟಾರನೊಬ್ಬನ ಹೊರತು ಉಳಿದವರೆಲ್ಲ ಸತ್ತುಹೋದರು.

ಈ ಮಧ್ಯೆ, ರಾಕ್ಷಸನು ಪರ್ವತೇಶ್ವರನನ್ನು ಬಿಟ್ಟು ಕುಸುಮಪುರಕ್ಕೆ ಹಿಂದಿರುಗಿ ಬಂದನು ಮತ್ತು ರಾಜನು ಆತನನ್ನು ತನ್ನ ಮಂತ್ರಿಯನ್ನಾಗಿ ಮಾಡಿಕೊಂಡನು. ಕಿರಿಯನಾದ ಶಕಟಾರನ ಮೇಲೆ ಕರುಣೆದೋರಿ ರಾಜನೂ ರಾಕ್ಷಸನೂ ಆತನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದರು. ರಾಕ್ಷಸನು ಶಕಟಾರನಿಗೆ ಶ್ರಾದ್ಧಕ್ಕೆ ಬ್ರಾಹ್ಮಣರನ್ನು ಕರೆಯುವ ಕೆಲಸಕ್ಕೆ ಸೇರಿಸಿಕೊಂಡನು. ಶಕಟಾರನು ಶಿವಗುಪ್ತನ ಮಗನಾದ ಎಂಬತ್ತು ವರ್ಷದ ಕೊಳಕು ಮುದುಕ ವಿಷ್ಣುಗುಪ್ತನನ್ನು ಭೇಟಿಯಾದನು. ಆತನಾದರೋ ಸಿಟ್ಟಿನಿಂದ — ಇರುವೆಗಳು ಬೇರು ಸಹಿತ ತಿಂದು ನಾಶಪಡಿಸಲೆಂದು — ಹುಲ್ಲಿನ ಹೊಂಡಿಯ ಬುಡಕ್ಕೆ ಸಕ್ಕರೆಯನ್ನು ಚೆಲ್ಲುತ್ತಿದ್ದನು. ಶಕಟಾರನು ಅದರ ಕಾರಣವನ್ನು ಕೇಳಿದಾಗ ಆ ಬ್ರಾಹ್ಮಣನು — ತನ್ನ ತಂದೆಯು ಸ್ನಾನಕ್ಕೆಂದು ಹೋಗುತ್ತಿದ್ದಾಗ ಹುಲ್ಲನ್ನು ಎಡವಿ ಬಿದ್ದು ಆತನು ಸತ್ತನೆಂದೂ ಹಾಗಾಗಿ ಎಲ್ಲ ಹುಲ್ಲುಗಳನ್ನು ಭೂಮಿಯಿಂದ ಮೂಲೋತ್ಪಾಟನ ಮಾಡುವುದಾಗಿಯೂ' ಹೇಳಿದನು. ಈ ವಿಷ್ಣುಗುಪ್ತನ ವಿಚಾರವನ್ನು ನೋಡಿ ಅರಸನು ಆತನನ್ನು ಹೀಗಳೆಯುವುದು ಖಂಡಿತವೆಂದು ತಿಳಿದು, ಹೀಗೆ ಉಂಟಾದ ಕ್ರೋಧದಿಂದಲೂ ಈತನು ರಾಜನ ವಿರುದ್ಧ ಪ್ರತೀಕಾರ ಮಾಡುವನೆಂದು ನಿಶ್ಚಯಿಸಿ, ವಿಷ್ಣುಗುಪ್ತನನ್ನು ಶ್ರಾದ್ಧಕ್ಕೆ ಆಹ್ವಾನಿಸಿದನು. ಆಹ್ವಾನದಂತೆ ವಿಷ್ಣುಗುಪ್ತನು ಹೋದಾಗ ಆತನನ್ನು ಆಸನದಿಂದ ತಳ್ಳಿಹಾಕಿಸಿದರು. ಆತನ ಜುಟ್ಟು ಬಿಚ್ಚಿಹೋದಾಗ, ನಂದರನ್ನು ಸಮೂಲ ನಾಶ ಮಾಡುವುದಾಗಿ ಪ್ರತಿಜ್ಞೆ ಮಾಡಿದನು. ಇಲ್ಲಿಂದ ಮುಂದೆ ನಮಗೆ ಶಕಟಾರನ ಬಗ್ಗೆ ಮಾಹಿತಿ ಸಿಗುವುದಿಲ್ಲ. ಚಾಣಕ್ಯನು — ರಾಜಾಸನಸ್ಥರು ಯಾರಿದ್ದೀರೆಂದು ಕರೆ ಕೊಟ್ಟನು. ಸುಧನ್ವ ನಂದನ ಒಬ್ಬ ಮಗನಾದ ಮೌರ್ಯ ಚಂದ್ರಗುಪ್ತನು ರಾಜಸೇನ, ಭಾಗುರಾಯಣ ಮತ್ತು ಇತರರೊಂದಿಗೆ ವಿಷ್ಣುಗುಪ್ತನೊಂದಿಗೆ ಹೊರಟರು. ಅವರು ಚಾಣಕ್ಯನ ರಾಜನೀತಿಶಾಸ್ತ್ರದ ವಿದ್ಯಾರ್ಥಿಯಾಗಿದ್ದ ಪರ್ವತಕೇಶ್ವರನ ಸಹಾಯವನ್ನು ಪಡೆದು ಕುಸುಮ ಪುರವನ್ನು ಮುತ್ತಿಗೆ ಹಾಕಿದರು. ಪರ್ವತಕೇಶ್ವರನಿಗೆ ಅರ್ಧರಾಜ್ಯ ಕೊಡುವುದೆಂದು ಮಾತು ಕೊಡಲಾಯಿತು. ಯುದ್ಧದಲ್ಲಿ ನಂದರು ಕೊಲ್ಲಲ್ಪಟ್ಟರು ಮತ್ತು ಕುಸುಮಪುರವು ಚಂದ್ರಗುಪ್ತನ ವಶವಾಯಿತು. ಅರಸನ ಚಿಕ್ಕಪ್ಪನ ಮಗ ಸರ್ವಾರ್ಥ ಸಿದ್ಧಿಯು ಕಾಡಿಗೆ ಹೊರಟು ಹೋದನು. ರಾಕ್ಷಸನು ಪರ್ವತಕೇಶ್ವರ ನೊಂದಿಗೆ ಒಳಸಂಚು ಮಾಡಿ, ವಿಷಕನ್ಯೆಯೊಬ್ಬಳನ್ನು ಚಂದ್ರಗುಪ್ತನಲ್ಲಿಗೆ ಕಳುಹಿಸಿಕೊಟ್ಟನು. ಆದರೆ ಚಾಣಕ್ಯನು ಇದನ್ನು ಗಮನಿಸಿ ಆ ವಿಷಕನ್ಯೆಯಿಂದ ಪರ್ವತರಾಜನನ್ನೇ ಕೊಲ್ಲಿಸಿದನು.

2. ಮುದ್ರಾರಾಕ್ಷಸ ಕಾವ್ಯ[19]: ವಿದ್ಯಾರಾಜನೆಂಬುವನು ಇದರ ಕರ್ತೃ. ಈತನು ತನ್ನನ್ನು ಸೂರ್ಯ ವಂಶದ ರಾಜನೊಬ್ಬನ ಮಹಾಮಾತ್ಯನೆಂದುಕೊಂಡಿದ್ದಾನೆ. ಈ ಕೃತಿಯ ಹಸ್ತಪ್ರತಿಯು ಪಂಜಾಬ ವಿಶ್ವವಿದ್ಯಾಲಯ ಲೈಬ್ರರಿಯಲ್ಲಿದೆ. ಇದು ನಾಟಕದ ಕಾವ್ಯರೂಪವಾಗಿದ್ದು ಕೇವಲ ಎಂಬತ್ತೇಳು ಹಾಳೆಗಳನ್ನು ಹೊಂದಿ ಅಪೂರ್ಣವಾಗಿದೆ.

3. ಮುದ್ರಾರಾಕ್ಷಸ ನಾಟಕ ಕಥಾ[20]: (ಕ್ರಿ.ಶ. 1600). ಇದು ಮುದ್ರಾರಾಕ್ಷಸ ನಾಟಕದ ವಿವರಗಳನ್ನು ಗದ್ಯದಲ್ಲಿ ಕೊಡುವಂಥದು. ಇದರಲ್ಲಿ ಪೂರ್ವಕಥೆಯೊಂದಿಗೆ ನಾಟಕದ ವಸ್ತುವಿನ ವಿವರವೂ ಇದೆ. ಈ ಹಿಂದೆ ಅನಂತಭಟ್ಟ ಮೊದಲಾದವರು ನಾಟಕದ ಆರಂಭದ ವರೆಗಿನ ಘಟನೆಗಳನ್ನಷ್ಟೇ ಹೇಳಿದ್ದರೆ, ಇಲ್ಲಿ ಪ್ರಪ್ರಥಮವಾಗಿ ಪೂರ್ಣಕಥೆಯ ಎಲ್ಲ ವಿವರಗಳು ಹದವರಿತು ನಿರೂಪಿತವಾಗಿವೆ.

ಈ ಕೃತಿಯ ಕರ್ತೃ ಮಹಾದೇವನು. ಆತನು ಶ್ರೀವತ್ಸ ಗೋತ್ರದ ಬ್ರಾಹ್ಮಣನು. ಸಾಹಿತ್ಯ, ವೇದಾಂತಗಳಲ್ಲಿ ವಿದ್ವಾಂಸ. ಬಹುಶಃ ಈತನು ತಂಜಾವೂರು ದೊರೆಯ ಆಶ್ರಿತನಾಗಿದ್ದಿರಬೇಕು.

ಈ ಚಿಕ್ಕ ಗ್ರಂಥವು ಗದ್ಯದಲ್ಲೇ ರಚಿತವಾಗಿದ್ದರೂ, ಇದರಲ್ಲಿ ಹನ್ನೊಂದು ಪದ್ಯಗಳಿವೆ. ಅವುಗಳಲ್ಲಿ ಹತ್ತು 'ಮುದ್ರಾರಾಕ್ಷಸ' ನಾಟಕದ್ದೇ ಆಗಿದೆ. ಕಥೆಯು ಸಾಂಪ್ರದಾಯಿಕ ರೀತಿಯಲ್ಲಿ ದೇವತಾಸ್ತುತಿಯಿಂದ ಆರಂಭವಾಗದೇ 'ಪಾಟಲೀಪುರಂ ನಾಮ ಕಾಚನ ರಾಜಧಾನೀ ವರ್ತತೇ' ಎಂದು ನೇರವಾಗಿ ಆರಂಭವಾಗಿದೆ. 'ರಾಜಾ ಚಂದ್ರಗುಪ್ತೋ..ಪಿ ಸಾರ್ವಭೌಮಸ್ಸನ ಚತುಸ್ಸಾಗರೀ ಮೇಖಲಾಂ ವಸುಂಧರಾಂ ಅಪಾಲಯತ ಇತಿ ಸರ್ವಂ ಶಿವಂ' ಎಂದು ಮುಕ್ತಾಯವಾಗಿದೆ. ಇದರ ಕಥಾ ಸಾರಾಂಶ ಇಂತಿದೆ:

ಪಾಟಲೀಪುರವೆಂಬ ನಗರದಲ್ಲಿ ರಾಜನಾಗಿದ್ದ ಸರ್ವಾರ್ಥ ಸಿದ್ಧಿಗೆ ಇಬ್ಬರು ಹೆಂಡತಿಯರು — ಕ್ಷತ್ರಿಯಳಾದ ಸುನಂದೆ, [illegible] ಸೂತಪುತ್ರಿಯಾದ ಮುರೆ. ಬಹುಕಾಲ ಮಕ್ಕಳಿಲ್ಲದ ಇವರಿಗೆ ಮುನಿಯೊಬ್ಬನು ಬಂದು ಅನುಗ್ರಹಿಸಿದನು. ಇದರಿಂದ ಸುನಂದೆಯು ಮಾಂಸದ ಮುದ್ದೆಯನ್ನು ಹೆತ್ತಳು. ಅದನ್ನು ಒಂಬತ್ತು ತುಂಡುಗಳನ್ನಾಗಿ ಮಾಡಿ ತುಪ್ಪದ ಕೊಡಗಳಲ್ಲಿಟ್ಟಾಗ ಒಂಬತ್ತು ಜನ ಮಕ್ಕಳು ಹುಟ್ಟಿದರು. ಮುರೆಗೆ ಒಬ್ಬ ಮಗನು ಹುಟ್ಟಿದನು. ಆ ಮೌರ್ಯನಿಗೆ ತಂದೆಯಷ್ಟೇ ಶೂರರಾದ ನೂರು ಜನ ಮಕ್ಕಳು ಹುಟ್ಟಿದರು. ಅವರಲ್ಲಿ ಮೂರನೆಯವನಾದ ಚಂದ್ರಗುಪ್ತನು ಅತ್ಯಂತ ಬುದ್ಧಿವಂತನೂ, ದಂಡನೀತಿಯಲ್ಲಿ ನಿಷ್ಣಾತನೂ ಆಗಿದ್ದನು.

ತನಗೆ ರಾಜ್ಯ ದೊರಕುವುದಿಲ್ಲವೆಂದರಿತ ಮೌರ್ಯನು ನಂದರಲ್ಲಿ ಭೇದವನ್ನು ಬಿತ್ತಿದನು. ಒಬ್ಬೊಬ್ಬರು ಒಂದೊಂದು ವರ್ಷ ರಾಜ್ಯವಾಳಬೇಕೆಂಬ ಸಲಹೆ ಇತ್ತ. ತಮ್ಮೊಂದಿರಲ್ಲಿ ಜಗಳ ಹುಟ್ಟಿದಾಗ ರಾಕ್ಷಸನು ಹೇಳಿ ಎತ್ತುವುದರ ಮೂಲಕ ಈ ಜಗಳವನ್ನು ಪರಿಹರಿಸಿ, ರಾಜ್ಯವನ್ನು ಕಾಪಾಡಿದನು. ದಾಯಾದ ಮತ್ಸರದಿಂದ ಕೂಡಿದ ನಂದರು ರಾಕ್ಷಸನನ್ನೊಳಗೊಂಡು ಮಂತ್ರಾಲೋಚನೆಯ ಮಂದಿರದಲ್ಲಿ ಮೌರ್ಯನನ್ನೂ ಆತನ ಮಕ್ಕಳನ್ನೂ ಕೊಂದರು. ಅವರಲ್ಲಿ ಚಂದ್ರಗುಪ್ತನು ಮಾತ್ರ ಬದುಕಿಕೊಂಡನು.

ಒಮ್ಮೆ ಅನ್ಯರಾಜನಿಂದ ಕಳುಹಿಸಲ್ಪಟ್ಟ ಕಪಟಸಿಂಹವನ್ನು ಪಂಜರದಿಂದ ಹೊರತರುವ ತಂತ್ರವು ಯಾರಿಗೂ ಹೊಳೆಯದೇ ಇದ್ದಾಗ, ವೃದ್ಧಮಂತ್ರಿಯೊಬ್ಬನ ಸಲಹೆಯಂತೆ ಬಂಧನದಲ್ಲಿದ್ದ ಚಂದ್ರಗುಪ್ತನು ಬಿಡುಗಡೆಹೊಂದಿ, ಕರಗಿಸಿ ಆ ಕಪಟವನ್ನು ಭೇದಿಸಿದನು. ಮೊದಲು ನಂದರು ಆತನಿಗೆ ತಂದೆಯು

ಅಧಿಕಾರವನ್ನೇ ಕೊಡುವೆವು ಎಂದಿದ್ದರೂ, ಮತ್ತೆ ತಾವಾಡಿದ ಮಾತಿನಂತೆ ಅದನ್ನು ಕೊಡದೆ ಅನ್ನ ಸತ್ರಾಧಿಕಾರವನ್ನು ಕೊಟ್ಟರು.

ಒಂದು ದಿನ ಚಂದ್ರಗುಪ್ತನು ಬ್ರಾಹ್ಮಣರಿಗಾಗಿ ಕಾಯುತ್ತಾ ಕುಳಿತಿದ್ದಾಗ ತರುಣನೂ, ತೇಜಸ್ವಿಯೂ ಆದ ಬ್ರಾಹ್ಮಣನ ಪಾದಕ್ಕೆ ದರ್ಭೆಯ ಕುಡಿಯೊಂದು ಚುಚ್ಚಲು, ಅವನು ಅದನ್ನು ಬೇರು ಸಹಿತ ಹೊರಗೆಳೆದು ಪುಡಿ ಮಾಡಿ ನೀರಿನಲ್ಲಿ ಸೇರಿಸಿ ಕುಡಿಯುವುದನ್ನು ಕಂಡನು. ಆಗ ಚಂದ್ರಗುಪ್ತನು ಆಶ್ಚರ್ಯದಿಂದ ಆ ಬ್ರಾಹ್ಮಣನನ್ನು ಸಮೀಪಿಸಿ ಆತನ ಬಗ್ಗೆ ವಿಚಾರಿಸಿದನು. ಆ ಬ್ರಾಹ್ಮಣನು — 'ತಾನು ಚಾಣಕ್ಯನೆಂಬ ದಕ್ಷಿಣ ದೇಶೀಯನು. ನನ್ನ ಕಾಲಿನಲ್ಲಿ ಗಾಯವನ್ನುಂಟುಮಾಡಿದ ಈ ಹುಲ್ಲನ್ನು ಹೀಗೆ ಪುಡಿ ಮಾಡಿ ಕುಡಿಯದಿದ್ದರೆ ನನ್ನ ಸಿಟ್ಟು ಶಮನಗೊಳ್ಳಲಾರದು, ಹತ್ತು ಸಾವಿರ ರಾಜರನ್ನು ಕೂಡಾ ತಾನು ಬುದ್ಧಿ ಬಲದಿಂದ ಗೆಲ್ಲಬಲ್ಲೆನು' ಎಂದು ಹೇಳಿದನು. ಮತ್ತೆ ಚಾಣಕ್ಯನು ನಂದರ ಭೋಜನಶಾಲೆಗೆ ಹೋದನು. ಅಲ್ಲಿ ರಾಜರಿಗೆ ಒಂಬತ್ತು, ಸರ್ವವಿದ್ಯಾ ಪಾರಂಗತನಾದ ಬ್ರಾಹ್ಮಣನಿಗೆ ಒಂದು — ಹೀಗೆ ಒಟ್ಟು ಹತ್ತು ಚಿನ್ನದ ಪಾತ್ರೆಗಳಿದ್ದುವು. ಮತ್ತೆ ತೊಂಬತ್ತು ತಟ್ಟೆಗಳು ಇತರ ಬ್ರಾಹ್ಮಣರಿಗಾಗಿ ಇದ್ದುವು. ಚಾಣಕ್ಯನು ಚಿನ್ನದ ತಟ್ಟೆಯ ಎದುರಿನ ವಿದ್ವದಾಸನದಲ್ಲಿ ಕುಳಿತನು. ಹೀಗಿರಲು ನಂದರು ಬಂದು ಈತನನ್ನು ನೋಡಿ — 'ಯಾರೀತ, ಗಡ್ಡ-ಮೀಸೆ (ಶ್ಮಶ್ರು) ಬಾರದ ಪೋರ ಅಗ್ರಾಸನದಲ್ಲಿ ಕುಳಿತಿದ್ದಾನೆ?' ಎಂದು ಹೇಳಿ ಸೇವಕರಿಂದ ಎಳೆಸಿ ಹಾಕಿಸಿದನು. ತಾನೇ ಜುಟ್ಟನ್ನು ಬಿಚ್ಚಿಕೊಂಡು ಚಾಣಕ್ಯನು ನಂದರನ್ನು ಕೊಂದ ನಂತರವೇ ಜುಟ್ಟನ್ನು ಕಟ್ಟುವುದಾಗಿ ಪ್ರತಿಜ್ಞೆ ಮಾಡಿದನು. ಅದಕ್ಕಾಗಿ ಪರ್ವತೇಶ್ವರನ ಬಳಿ ಹೋಗಿ ಸಹಾಯ ಕೇಳಿದನು.

ಇತ್ತ ಚಾಣಕ್ಯನ ಸಹಾಧ್ಯಾಯಿಯಾದ ಇಂದುಶರ್ಮನೆಂಬವನು ಜ್ಯೋತಿಷ, ಮಂತ್ರ ಶಾಸ್ತ್ರಗಳಲ್ಲಿ ನಿಪುಣನಾಗಿದ್ದು, ಮಿತ್ರನ ಆದೇಶದಂತೆ ಕ್ಷಪಣಕ ವೇಷ ಧರಿಸಿ ರಾಕ್ಷಸನನ್ನು ಆಶ್ರಯಿಸಿದ್ದನು. ಕಾಲಾಂತರದಲ್ಲಿ ಎಲ್ಲಾ ಸೇನಾಪತಿಗಳೊಂದಿಗೆ ವಿಶ್ವಾಸವನ್ನು ಬೆಳೆಸುತ್ತಾ — 'ವೈಶಾಖ ಶುದ್ಧ ಹುಣ್ಣಿಮೆಯ ದಿನ ನಿಮ್ಮ ಗ್ರಹಗತಿ ಚೆನ್ನಾಗಿಲ್ಲ, ಯುದ್ಧಕ್ಕೆ ಹೋದರೆ ನೀವು ಸಾಯುತ್ತೀರಿ' ಎಂದು ಅವರುಗಳಿಗೆಲ್ಲಾ ಬೇರೆ ಬೇರೆಯಾಗಿ ಹೇಳಿ, ಪರ್ವತರಾಜನಿಗೂ ನಂದರಿಗೂ ನಡೆವ ಯುದ್ಧದಲ್ಲಿ ಅವರು ತಟಸ್ಥರಾಗುವಂತೆ ಮಾಡಿದನು. ಆ ಯುದ್ಧದಲ್ಲಿ ನಂದರು ಹತರಾದರು. ರಾಕ್ಷಸನು ಬದುಕುಳಿದನು.

ಒಳಗೆ ಮತ್ಸರ ತುಂಬಿಕೊಂಡಿದ್ದರೂ ರಾಕ್ಷಸನು ಚಂದ್ರಗುಪ್ತನನ್ನು ಆಶ್ರಯಿಸಿದನು. ಭೋಗಿಸಿದಾತ ತಕ್ಷಣವೇ ಮೃತಪಡುವ ವಿಷಕನ್ಯೆಯನ್ನು ಸೃಷ್ಟಿಸಿ ಕ್ಷಪಣಕನು ರಾಕ್ಷಸನ ವಶಕೊಟ್ಟನು. ಆ ಕನ್ಯೆಯಿಂದ ಚಂದ್ರಗುಪ್ತನನ್ನು ಕೊಲ್ಲಿಸಬೇಕೆಂದು ರಾಕ್ಷಸನು ಬಯಸಿದ್ದರೂ ಚಾಣಕ್ಯನ ಎಚ್ಚರದಿಂದಾಗಿ ಪರ್ವತರಾಜನು ಅವಳನ್ನು ಕೂಡಿ ಮೃತನಾದನು. ಪಾಟಲೀಪುರದಲ್ಲಿದ್ದು, ತಂದೆಯ ಮರಣದಿಂದ ವ್ಯಾಕುಲನಾಗಿದ್ದ ಮಲಯಕೇತುವನ್ನು ಭಾಗುರಾಯಣನು ಬೋಧಿಸಿ ಅವನ ರಾಜಧಾನಿಗೆ ಕರೆದುಕೊಂಡು ಹೋದನು.

ಮೊದಲೇ ನಗರದಿಂದ ಹೊರಹೋಗಿದ್ದ ರಾಕ್ಷಸನು ಮಲಯಕೇತುವಿನ ಬಳಿ ಬಂದು ಆತನಿಗೆ ನಂದ ರಾಜ್ಯವನ್ನು ಕೊಡಿಸುವುದಾಗಿ ಭರವಸೆಯಿತ್ತನು. ಇಲ್ಲಿಂದ ನಂತರದ ಕಥೆಯು ನಾಟಕದಲ್ಲಿಯಂತೆಯೇ ಸಾಗುವುದು.

4. ಮುದ್ರಾರಾಕ್ಷಸ ಕಥಾಸಾರ [21]: ಈ ಕೃತಿಯು ಕೆಲವು ಹಸ್ತಪ್ರತಿಗಳಲ್ಲಿ 'ಮುದ್ರಾರಾಕ್ಷಸ ಕಥಾ ಸಂಗ್ರಹ' ವೆಂದೂ ಮತ್ತೆ ಕೆಲವರಲ್ಲಿ 'ಚಾಣಕ್ಯ ಕಥಾ' ಅಥವಾ 'ಕೌಟಿಲ್ಯ ಕಥಾಸಾರ' ಎಂದೂ ಕೃತಿಯ ಹೆಸರನ್ನು ಹೇಳಿದೆ [22].

ಈ ಕೃತಿಯನ್ನು ರಚಿಸಿದವನು ರವಿನರ್ತಕ ಅಥವಾ ರವಿಕರ್ತನ. ಮದ್ರಾಸಿನಿಂದ ವಿ. ರಾಮಸ್ವಾಮಿ ಶಾಸ್ತ್ರಿಗಳು ಪ್ರಕಾಶಗೊಳಿಸಿದ ಸಂಸ್ಕರಣದ ಆದಿ, ಮಧ್ಯ, ಅಂತ್ಯಗಳೆಲ್ಲಲ್ಲಿ ಕವಿಯ ಹೆಸರನ್ನು 'ರವಿಕರ್ತನ' ಎಂದು ಹೇಳಿದ್ದರೆ,; ಕಲ್ಕತ್ತಾ ಸಂಸ್ಕರಣದಲ್ಲಿ 'ರವಿ-ನರ್ತಕ' ಎನ್ನಲಾಗಿದೆ. ಕವಿಯ ವಿಷಯದಲ್ಲಿ ಸಂಪ್ರದಾಯದ ಕಥೆ ಹೀಗಿದೆ:

ಕೇರಳದ ಪ್ರಸಿದ್ಧ ಪುರುಷನಾದ ಮೇಲಪುತ್ತೂರಿನ ನಾರಾಯಣ ಭಟ್ಟನು (ಕ್ರಿ.ಶ.1559–1666) ತನ್ನ ಪ್ರಬಂಧಗಳನ್ನು ನಾಟ್ಯ ಸಂಘದವರ ಅಭಿನಯಕ್ಕಾಗಿ ಚಾಕ್ಯಾರ್ ಸ್ನೇಹಿತನಾದ ರವಿಗಾಗಿ ರಚನೆ ಮಾಡಿದನಂತೆ. ಈ ರವಿಯೇ ಮುದ್ರಾರಾಕ್ಷಸ ನಾಟಕದ ಕಥೆಯನ್ನು ಪೂರ್ವಕಥೆಯೊಡನೆ ಕಾವ್ಯರೂಪದಲ್ಲಿ ರಚಿಸಿದನು. (ರವಿನರ್ತಕನ ಈ ಪಾಠವನ್ನು ಆಧರಿಸಿ ಮಲೆಯಾಳ ಭಾಷೆಯಲ್ಲಿ [illegible] 'ಚಾಣಕ್ಯಸೂತ್ರ' ವೆಂಬ ಕೃತಿಯೊಂದಿದೆ – ಎಂದು ತಿಳಿದುಬಂದಿದೆ)[23].

ರವಿನರ್ತಕನು ತನ್ನ ಕಾವ್ಯದ ಆರಂಭದಲ್ಲಿ –

ಚಾಣಕ್ಯಸ್ಯ ಕಥಾ ಸೇಯಂ ವಿದ್ಯತೇ ಗದ್ಯರೂಪಿಣೀ ।
ಅಥತಾಂ ಪದ್ಯತಾಂ ನೇತುಂ ಉದ್ಯಂತೋ ರವಿನರ್ತಕಃ ॥

ಎಂದು ಗದ್ಯದಲ್ಲಿದ್ದ ಚಾಣಕ್ಯ ಕಥೆಯನ್ನು ಪದ್ಯದಲ್ಲಿ ಹೇಳಲು ತೊಡಗಿದ್ದಾಗಿ ಹೇಳಿಕೊಂಡಿದ್ದಾನೆ. ರವಿನರ್ತಕನ ಎದುರಿಗಿದ್ದ ಗದ್ಯ ಕೃತಿ ಪ್ರಾಯಃ ಮಹಾದೇವನ ಕೃತಿಯೇ ಆಗಿರಬೇಕು. ಏಕೆಂದರೆ ಇವೆರಡರಲ್ಲಿಯೂ ವಸ್ತುವು ಪೂರ್ವಕಥೆ ಹಾಗೂ ನಾಟಕದ ಭಾಗಗಳನ್ನೊಳಗೊಂಡಿದೆ; ಕಥೆಯ ಮುಖ್ಯ ಘಟನೆಗಳೆಲ್ಲವೂ ಏಕರೂಪದ್ದಾಗಿವೆ; ರವಿನರ್ತಕನ ಅನೇಕ ಹೇಳಿಕೆಗಳು ಮಹಾದೇವನ ಹೇಳಿಕೆಗೆ ಸಮೀಪದ್ದಾಗಿವೆ. ಹಾಗೆಂದು ರವಿನರ್ತಕನು ಕೇವಲ ದಾಸ್ಯಭಾವದಿಂದ ಗದ್ಯವನ್ನು ಪದ್ಯವನ್ನಾಗಿ ಪರಿವರ್ತಿಸಿಲ್ಲ; ಕೆಲವು ವಿಷಯಗಳಲ್ಲಿ ಮೂಲದಿಂದ ದೂರ ಸರಿಯುವ ಸ್ವಾತಂತ್ರ್ಯವಹಿಸಿದ್ದಾನೆ

ಕಾವ್ಯವು 'ಶ್ರೀಮನ್ನಾರಾಯಣೋ ಜಯತಿ' ಎಂಬ ಸ್ತೋತ್ರದಿಂದ ಮೊದಲಾಗುತ್ತದೆ. ಕಥಾವಸ್ತುವನ್ನು ಯಾವುದೇ ಸರ್ಗಗಳಾಗಿ ವಿಭಜಿಸಿಲ್ಲ. 363 ಶ್ಲೋಕಗಳೊಂದಿಗೆ ಕಥೆಯು ಮುಕ್ತಾಯವಾಗುವುದು.

ರವಿನರ್ತಕನದು ಸರಳವೂ ಸುಂದರವೂ ಕಾವ್ಯಮಯವೂ ಆದ ರಚನೆ. ಅಲ್ಲಲ್ಲಿ ಬರುವ ಶ್ಲೇಷೆ , ಅನುಪ್ರಾಸಾದಿ ಅಲಂಕಾರಗಳಿಂದ ಕಥೆಯ ಓಟಕ್ಕೆ ಧಕ್ಕೆಯುಂಟಾಗಿಲ್ಲ. ಬದಲಾಗಿ ಕಾವ್ಯದ ಮೆರುಗು ಹೆಚ್ಚಿದೆ. ಮಹಾದೇವನ ಕಥಾ ಭಾಗದಲ್ಲಿ ರವಿನರ್ತಕನು ಮಾಡಿಕೊಂಡ ವ್ಯತ್ಯಾಸಗಳು ಹೀಗಿವೆ: ಸರ್ವಾರ್ಥಸಿದ್ಧಿಯೇ ನಂದನೆಂದು ರವಿನರ್ತಕನ ಸ್ಪಷ್ಟವಾದ ಹೇಳಿಕೆ. ಋಷಿಯು ಪಾದೋದಕದ ಪ್ರೋಕ್ಷಣೆಯ ಒಂಬತ್ತು ಹನಿಗಳು ಮಾತ್ರ ಸುನಂದೆಯ ತಲೆಯ ಮೇಲೆ ಬಿದ್ದುವು. ಆಕೆ ಗೊಣಗುತ್ತಾ ಅದನ್ನು ಧರಿಸಿದಳು. ಸರ್ವಾರ್ಥಸಿದ್ಧಿಗೆ ಮೊದಲು ಮೌರ್ಯ ಆ ಬಳಿಕ ನವನಂದರು ಹುಟ್ಟುತ್ತಾರೆ. ಗರ್ಭ[redacted] ಪಿಂಡವೊಂದು ಜನಿಸಿದುದಕ್ಕೆ ದುಃಖಿತನಾದ ದೊರೆಗೆ ಅಶರೀರವಾಣಿಯು ಒಂಬತ್ತು ಜನ ಮಕ್ಕಳಾಗಿದ್ದಾರೆಂದು ಧೈರ್ಯಕೊಡುತ್ತದೆ. ಗದ್ಯದಲ್ಲಿ ಹೇಳಿದ್ದ ತುಪ್ಪದ ಕೊಡವು ಇಲ್ಲಿ ಎಣ್ಣೆಯ ಪಾತ್ರೆಯಾಗಿದೆ. ಇಲ್ಲಿ ಹೇಳಿದ ಮಂತ್ರಿ ರಾಕ್ಷಸನು ಕೋಪಿಷ್ಠನೂ, ಸ್ತ್ರೀಯರಲ್ಲಿ ಮತ್ತು ಯುದ್ಧದಲ್ಲಿ ಆಸಕ್ತಿಯಿಲ್ಲದವನೂ ಆಗಿದ್ದಾನೆ.

ಮಕ್ಕಳಲ್ಲಿ ಹಿರಿಯನಾರು ಎಂಬ ಚಿಂತೆ ರಾಜನನ್ನು ಕಾಡಿದಾಗ, ನಂದ ರಾಜ್ಯವನ್ನು ಒಂಬತ್ತು ಭಾಗಗಳನ್ನಾಗಿಸುವ ಸೂಚನೆಯನ್ನು ವಕ್ರನಾಸ ಕೊಡುತ್ತಾನೆ. ಮಕ್ಕಳಲ್ಲಿ ಒಬ್ಬನನ್ನು ದೊರೆಯನ್ನಾಗಿ ಮಾಡಿ, ಉಳಿದವರನ್ನು ಅವನ ಸೇವಕರನ್ನಾಗಿ ಮಾಡುವ ಸೂಚನೆ ಮೌರ್ಯನಿಂದ ಬಂತು. ಪಾಟಲೀಪುರಕ್ಕೆ ಸಮನಾದ ಎಂಟು ಪಟ್ಟಣಗಳನ್ನು ಕಟ್ಟಿ, ಕೋಶ ಸೇನೆಗಳನ್ನು ಒಂಬತ್ತಾಗಿ ಭಾಗಿಸಬೇಕೆಂದು ರಾಕ್ಷಸನು ಸಲಹೆ ಮಾಡಿದನು.

ಅರಗಿನ ಸಿಂಹವನ್ನು ಕಳುಹಿಸುವ ದೊರೆ ಇಲ್ಲಿ ವಂಗ ದೇಶದವನೆಂದು ಹೇಳಿದೆ. ಅನ್ಯ ರಾಜನ ಕಪಟವನ್ನು ಭೇದಿಸಬಲ್ಲ ಚಂದ್ರಗುಪ್ತನ ಬುದ್ಧಿ ಕೌಶಲವನ್ನು ಕೊಂಡಾಡುವವನು ವಿಶಾಖನೆಂಬ ಮಂತ್ರಿ. ತನ್ನನ್ನು ರಾಜಸಭೆಗೆ ಕರೆಯಬಂದ ಅಧಿಕಾರಿಗಳಲ್ಲಿ ತನ್ನನ್ನು ಕೊಲ್ಲುವಂತೆ ಚಂದ್ರಗುಪ್ತನು ಪ್ರಾರ್ಥಿಸುತ್ತಾನೆ. ಆತನ ಮನವೊಲಿಸಲು ನಂದರು ಆತನ ತಂದೆಯ ಕೋಶವನ್ನು ಕೊಡುವುದಾಗಿ ಹೇಳುತ್ತಾರೆ. ತಂದೆಯ ಉದ್ಯೋಗವನ್ನಲ್ಲ. ಚಾಣಕ್ಯನು ಬೆಂಕಿಯಿಂದ ಹುಲ್ಲಿನ ಗುತ್ತಿಯನ್ನು ಸುಟ್ಟನೇ ಹೊರತು ಅದನ್ನು ಬೇರು ಸಹಿತ ಕಿತ್ತು ಪುಡಿ ಮಾಡಿ ನೀರಿನಲ್ಲಿ ಸೇವಿಸಿ ಕುಡಿದದ್ದಲ್ಲ. ಆತನು ತನ್ನನ್ನು ದಾಕ್ಷಿಣಾತ್ಯನೆಂದು ಹೇಳಿಕೊಳ್ಳುವುದಿಲ್ಲ. ನಂದರ ಭೋಜನಶಾಲೆಯಲ್ಲಿ ಊಟದ ತಟ್ಟೆಗಳು ಕೇವಲ ನೂರಲ್ಲ. ಸಾವಿರ ತಟ್ಟೆಗಳಿದ್ದುವು. ವಿನಾನೆ ಬಾರದ ಮೋರೆ ಚಾಣಕ್ಯನು ನಂದರಿಗೆ ಕಪಿಯಾಗಿ ಕಂಡನು. ರಾಜಭಟರು ಇವನನ್ನು ಬಲವಾಗಿ ಹಿಡಿದೆಳೆದಾಗ ಚಾಣಕ್ಯನ ಜುಟ್ಟು ಮತ್ತು ಉತ್ತರೀಯ (ಮೇಲುಹೊದಿಕೆ) ಜಾರಿ ಹೋಗುತ್ತದೆ. ಆತನೇ ಬಿಚ್ಚಿಕೊಂಡು ಪ್ರತಿಜ್ಞೆ ಮಾಡುವುದಲ್ಲ.

ಇಂದುಶರ್ಮನು ಮೊದಲು ಜ್ವರವನ್ನು ಬರಿಸುವನು. ಮತ್ತೆ ಬ್ರಾಹ್ಮಣ ಭೋಜನವನ್ನು ಮಾಡಿಸದಂತೆ ತಡೆಯುವನು. ಅನಂತರ ಒಂದು ಉನ್ಮಾದ ಗ್ರಹವನ್ನು ಹುಟ್ಟಿಸುವನು. ಚಂದ್ರಗುಪ್ತನು

ನಂದರಿಂದ ಗಡಿಪಾರು ಮಾಡಲ್ಪಡುವನು. ಆಗ ಚಾಣಕ್ಯನು ಆತನನ್ನು ನಗರದಿಂದ ಹತ್ತು ಯೋಜನಗಳ ದೂರದ ವರ್ಧಮಾನವೆಂಬ ಊರಿನಲ್ಲಿ ನಿಲ್ಲುವಂತೆ ಮಾಡುವನು. ಅಲ್ಲಿ ಶಬರನಾಥನೆಂಬ ಕಾಡಿನ ಮುಖ್ಯಸ್ಥನ ಪರಿಚಯವು ಚಂದ್ರಗುಪ್ತನಿಗಾಗುವುದು.

ದೂರದ ರಾಜನೊಬ್ಬನಲ್ಲಿ ವೈರವೆಂದೂ ಅವನ ಮೇಲೆ ದಂಡೆತ್ತಿ ಹೋಗಬೇಕೆಂದೂ ಪರ್ವತರಾಜನು ನೆಪ ಹೇಳಿ ನಂದರ ವಿರುದ್ಧ ತನ್ನ ಸೈನ್ಯ ಮುಂದುವರಿಯುವಂತೆ ಮಾಡುವನು. ಯುದ್ಧ ಆರಂಭವಾಗುವುದು ವೈಶಾಖ ಹುಣ್ಣಿಮೆ ದಿನದ ಬದಲು ಆಷಾಢ ಕೃಷ್ಣ ಪಕ್ಷದ ಮೊದಲ ದಿನವೆಂದು ಇಲ್ಲಿ ಹೇಳಿದೆ. ಚಾಣಕ್ಯನ ಮಾತಿನಂತೆ ಚಂದ್ರಗುಪ್ತನು ತನ್ನ ಕೋಶದ ಅರ್ಧವನ್ನು ಪರ್ವತರಾಜನಿಗೆ ಕೊಡಲೊಪ್ಪಿ ಆತನೊಡನೆ ಒಪ್ಪಂದ ಮಾಡಿಕೊಂಡನು. ಯುದ್ಧದ ಆರಂಭದಲ್ಲಿ ಚಂದ್ರಗುಪ್ತನು ರಾಕ್ಷಸನನ್ನು ಭೇಟಿಯಾಗಿ ಆತನ ಕಾಲಿಗೆರಗಿ, ರಾಜಪುತ್ರನಾದ ಕಾರಣ ತನ್ನ ಹಕ್ಕಿನಂತೆ ನ್ಯಾಯವಾಗಿ ಬರಬೇಕಾದ ರಾಜ್ಯಭಾಗವನ್ನು ಕೊಡಿಸಿದರೆ ಯುದ್ಧವನ್ನು ನಿಲ್ಲಿಸುವುದಾಗಿ ಹೇಳುವನು. ಆದರೆ ರಾಕ್ಷಸನು ಅವನನ್ನು ಬೈದು ಯುದ್ಧ ಮಾಡುವಂತೆ ಹೇಳಿ ತಿಳಿಸುವನು.

ನಗರವನ್ನು ಚಾಣಕ್ಯನು ಮುತ್ತಿಗೆ ಹಾಕುವನು. ಸರ್ವಾರ್ಥಸಿದ್ಧಿಯು ಕಾಡಿಗೆ ತೆರಳುವನು. ಅಲ್ಲಿಂದ ಮುನಿವೇಷಧಾರಿಗಳಾದ ಚಾರರೊಡನೆ, ಚಂದ್ರಗುಪ್ತನ ವಧೆಗಾಗಿ ವಿಷಯುಕ್ತ ಫಲಗಳನ್ನು ಕಳುಹಿಸಿ ಕೊಡುವನು. ಆದರೆ ಚಾಣಕ್ಯನ ಬುದ್ಧಿವಂತಿಕೆಯಿಂದ ಸರ್ವಾರ್ಥಸಿದ್ಧಿಯೇ ಅದನ್ನು ತಿಂದು ಸಾಯುವನು. ಮಲಯಕೇತುವು ತನ್ನ ತಂದೆಯ ಕೊಲೆಗಾರನನ್ನು ಕೊಲ್ಲದೇ ತಾನು ತಂದೆಯ ಉತ್ತರ ಕ್ರಿಯೆಯನ್ನು ನಡೆಸುವುದಿಲ್ಲವೆಂದು ಪ್ರತಿಜ್ಞೆ ಮಾಡುವನು.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ರವಿನರ್ತಕನು ಪಾತ್ರಗಳ ವ್ಯಕ್ತಿತ್ವ ಚಿತ್ರಣಕ್ಕೆ ಹೆಚ್ಚು ಗಮನಕೊಟ್ಟಂತೆ ಕಾಣುತ್ತದೆ. ಮತ್ಸರಗ್ರಸ್ತನಾದ ಮೌರ್ಯನ ಮನಸ್ಸನ್ನು ತೆರೆದು ತೋರಿಸುವುದರಲ್ಲಿ, ಚಾಣಕ್ಯನ ದರ್ಪ — ಅಭಿಮಾನ — ತಂತ್ರ — ಫಲಗಳನ್ನು ಪ್ರದರ್ಶಿಸುವುದರಲ್ಲಿ ಮತ್ತಿತರ ಪಾತ್ರಗಳ ಸೃಷ್ಟಿ ಚಿತ್ರಣದಲ್ಲಿ ರವಿನರ್ತಕನು ಮಹಾದೇವನಿಗಿಂತ ಹೆಚ್ಚು ಜಾಣ್ಮೆಯನ್ನು ತೋರಿದ್ದಾನೆ. ಸಂಭಾಷಣೆಗಳು, ಚೆಲುವಾದ ಸೂಕ್ತಿಯಂತಹ ಮಾತುಗಳು ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿವೆ [23ಎ].

5. ಮುದ್ರಾರಾಕ್ಷಸ ನಾಟಕ ವ್ಯಾಖ್ಯಾನ[24]: ಢುಂಢಿರಾಜನೆಂಬವನು ಈ ನಾಟಕಕ್ಕೆ ಪ್ರಸಿದ್ಧವಾದ ವ್ಯಾಖ್ಯಾನ (ಕ್ರಿ.ಶ. 1713) ವನ್ನು ಬರೆದಿದ್ದಾನೆ. ತಂಜಾವೂರು ಜಿಲ್ಲೆಯ ಕುಂಭಕೋಣವದಲ್ಲಿಯ ಸ್ವಾಮಿ ಮಲೈಸ್ಥಳವು ಆತನ ಊರು. ಲಕ್ಷ್ಮಣ ಆತನ ತಂದೆ. ತಂಜಾವೂರಿನಲ್ಲಿ ಕ್ರಿ.ಶ. 1710 — 1720 ರ ವರೆಗೆ ಆಳಿದ ಒಂದನೆಯ ಸರ್ಫೋಜಿಯ ಮಂತ್ರಿ ತ್ರ್ಯಂಬಕಯಜ್ವನು ಢುಂಢಿರಾಜನ ಆಶ್ರಯದಾತನು.

ಈ ಢುಂಢಿರಾಜನು ತನ್ನ ವ್ಯಾಖ್ಯಾನಕ್ಕೆ ಉಪೋದ್ಘಾತರೂಪವಾಗಿ ಪೂರ್ವಕಥೆಯನ್ನು ಸಂಗ್ರಹವಾಗಿ ಎಂಬತ್ತನಾಲ್ಕು ಶ್ಲೋಕಗಳಲ್ಲಿ ಬರೆದು ಸೇರಿಸಿದ್ದಾನೆ. ಇದು ಮಹಾದೇವನ ನಿರೂಪಣೆಗೆ ಸಂವಾದಿಯಾಗಿದೆ. ಆದರೆ ಅದರಲ್ಲಿ ಎದ್ದುಕಾಣುವ ಕೆಲವಂಶಗಳು ಹೀಗಿವೆ:

ನಂದವಂಶದ ಸರ್ವಾರ್ಥಸಿದ್ಧಿಗೆ 'ನವಕೋಟಿ ಶತೇಶ್ವರನೆಂಬ ಬಿರುದಿತ್ತು. ಆತನ ಮಂತ್ರಿಗಳಲ್ಲಿ ರಾಕ್ಷಸನೆಂಬ ಬ್ರಾಹ್ಮಣನು ದಂಡನೀತಿ ಪ್ರವೀಣಶೂರನೂ ಆಗಿದ್ದನು. ರಾಜನು ಸಿಂಪಡಿಸಿದ ತಪಸ್ವಿಯ ಪಾದೋದಕವನ್ನು ಅಶ್ರದ್ಧೆಯಿಂದ ಸ್ವೀಕರಿಸಿದ್ದರಿಂದ ಸುಖಂದೆಯ ತಲೆಯ ಮೇಲಿನಿಂದ ಅವು ಕೆಳಗೆ ಬಿದ್ದುವು. ಭಕ್ತಿಯಿಂದ ಸ್ವೀಕರಿಸಿದ್ದರಿಂದ ಮುರೆಯ ತಲೆಯ ಮೇಲೆ ಬಿದ್ದುದು ಒಂದೇ ಬಿಂದುವಾದರೂ ಅದು ಸ್ಥಿರವಾಗಿ ನಿಂತಿತು.

ಮಕ್ಕಳು ಬೆಳೆದು ದೊಡ್ಡವರಾದ ತಕ್ಷಣವೇ ಸರ್ವಾರ್ಥ ಸಿದ್ಧಿಯು ರಾಜ್ಯವನ್ನು ಅವರಿಗೆ ಒಪ್ಪಿಸಿ, ಮೌರ್ಯನನ್ನು ಸೇನಾಪತಿಯನ್ನಾಗಿ ಮಾಡಿ ತಪಸ್ಸಿಗೆ ಹೊರಟುಹೋದನು. ಕಾಲಾಂತರದಲ್ಲಿ ಮೌರ್ಯನಿಗೆ ನೂರು ಜನ ಮಕ್ಕಳಾಗಲು, ನಂದರು ಅಸೂಯೆಯಿಂದ ಅವರೆಲ್ಲರನ್ನೂ ನೆಲ ಮಾಳಿಗೆಯಲ್ಲಿ ಬಂಧಿಸಿ ಕೊಲ್ಲಿಸಿದರು.

ಇಲ್ಲಿ ಕಪಟಸಿಂಹವನ್ನು ಕಳುಹಿಸಿದವನು ಸಿಂಹಳ ದೇಶದ ದೊರೆಯೆಂದು ಹೇಳಿದೆ. ಅರೆ ಜೀವದಿಂದ ಬದುಕುಳಿದಿದ್ದ ಚಂದ್ರಗುಪ್ತನು ಸಿಂಹವನ್ನು ಪರೀಕ್ಷಿಸಿ ತಂತ್ರವನ್ನು ಕಂಡುಕೊಂಡು ಕಾಯಿಸಿದ ಕಬ್ಬಿಣದ ಸಲಾಕೆಯಿಂದ ಮೇಣವನ್ನು ಕರಗಿಸುವವನು. ಚಂದ್ರಗುಪ್ತನು ಅಜಾನುಬಾಹುವಾಗಿ, ಎಲ್ಲಾ ಚಕ್ರವರ್ತಿ ಲಕ್ಷಣಗಳಿಂದಲೂ ಕೂಡಿದವನಾಗಿದ್ದನು. ಶೌರ್ಯ, ಔದಾರ್ಯ, ಗಾಂಭೀರ್ಯ, ವಿನಯವೇ ಮೊದಲಾದ ಸಕಲ ಗುಣ ಸಮನ್ವಿತನಾಗಿದ್ದನು. ಇದೀಗ ಆತನು ಅನ್ನ ಸತ್ರಾಧಿಕಾರವನ್ನು ಪಡೆದನು.

ಕೋಪಿಷ್ಠ ಸ್ವಭಾವದ ಚಾಣಕ್ಯನು ಇನ್ನೂ ಬಾಲ್ಯಾವಸ್ಥೆಯವನಾಗಿದ್ದನು. ಔಷನಸ ದಂಡನೀತಿಯಲ್ಲೂ ಜ್ಯೋತಿಶ್ಶಾಸ್ತ್ರದಲ್ಲೂ ಅತ ನಿಪುಣನಾಗಿದ್ದನು. ಚಣಕನೆಂಬ ಹೆಸರಿನ ತಂದೆಯು ನೀತಿಶಾಸ್ತ್ರವನ್ನು ರಚಿಸಿದ್ದನು. ಈ ಚಾಣಕ್ಯನು ಚಂದ್ರಗುಪ್ತನಿಗೆ ಸಹಾಯ ಮಾಡುವುದಾಗಿ ಭರವಸೆಯಿತ್ತನು.

ನಂದರು ಚಾಣಕ್ಯನನ್ನು ಅಪಮಾನಗೊಳಿಸಲು — 'ಏನೊಂದೂ ತಪ್ಪು ಮಾಡದ ಬ್ರಾಹ್ಮಣನಾದ ನನ್ನನ್ನು ಈ ಮದಾಂಧರು, ದುರ್ಮತಿಗಳು ಹೀಗೆ ಅವಮಾನಪಡಿಸಿದ್ದರಿಂದ ಅವರನ್ನು ಸಮೂಲವಾಗಿ ನಾಶ ಮಾಡಿ ಜುಟ್ಟನ್ನು ಕಟ್ಟುವೆನು' ಎಂದು ಪ್ರತಿಜ್ಞೆ ಮಾಡಿದನು.

ಇಂದುಶರ್ಮನ ಸಹಾಯದಿಂದ ಚಾಣಕ್ಯನು ರಾಕ್ಷಸನೇ ಮೊದಲಾದವರನ್ನು ಮೋಸಗೊಳಿಸಿದನು. ಚಂದ್ರಗುಪ್ತನನ್ನು ಕೊಲ್ಲಿಸುವುದಾಗಿ ರಾಕ್ಷಸನೂ ಕುಟಿಲೋಪಾಯಗಳನ್ನು ಮಾಡಿದನು. ನಗರವ

ವಶವಾದ ನಂತರವೂ ರಾಕ್ಷಸನು ವಿಷಕನ್ಯೆಯನ್ನು ಕಳುಹಿಸಿಕೊಟ್ಟನು. ಚಾಣಕ್ಯನು ಅವಳಿಂದ ಪರ್ವತರಾಜನನ್ನು ಕೊಲ್ಲಿಸಿದನು. ಕ್ರಮೇಣ ರಾಕ್ಷಸನು ಮಲಯಕೇತುವನ್ನು ಸೇರಿ ನಂದರಾಜ್ಯವನ್ನೂ ಆತನಿಗೇ ಕೊಡಿಸುವೆನೆಂದು ಕುಸುಮಪುರದೆಡೆಗೆ ಹೊರಡುವನು. ಇವಿಷ್ಟು ಇಲ್ಲಿ ರೂಪಿತವಾದ ನಾಟಕದ ಪೂರ್ವಕಥೆ.

ಇತರ ಪಾಠಾಂತರಗಳು

6. ಜಗದ್ಧರನೆಂಬ ಪ್ರಸಿದ್ಧ ವಿದ್ವಾಂಸನು[25] (ಕ್ರಿ.ಶ. 1300–1400) ಮುದ್ರಾರಾಕ್ಷಸ ನಾಟಕಕ್ಕೆ ವ್ಯಾಖ್ಯಾನವನ್ನು ಬರೆದಿದ್ದನು. ಅದರ ಒಂದು ಹಸ್ತಪ್ರತಿಯು ಮದ್ರಾಸ ಸರ್ಕಾರ ಪ್ರಾಚ್ಯ ಹಸ್ತಪ್ರತಿ ಭಂಡಾರದಲ್ಲಿ ದೊರೆಯುತ್ತದೆ. ಆತನೂ ತನ್ನ ವ್ಯಾಖ್ಯಾನವನ್ನು ಆರಂಭಿಸುವುದಕ್ಕಿಂತ ಮೊದಲು ಪೂರ್ವ ಕಥೆಯನ್ನು ಸಂಕ್ಷಿಪ್ತವಾಗಿ ಕೊಟ್ಟಿದ್ದು ಅದು 'ಬೃಹತ್ಕಥೆ' ಯಲ್ಲಿ ಹೇಳಿದ ಕಥೆಯನ್ನು ಹೋಲುತ್ತದೆ. ಇದರಲ್ಲಿ ಚಂದ್ರಗುಪ್ತನನ್ನು ನಂದನ ಭಾವನೆಂದೂ ಇವನಿಗೆ ಪ್ರತಿಯಾಗಿ ಪರ್ವತೇಶ್ವರನ ಮಗನಾದ ಮಲಯ ಕೇತುವನ್ನು ರಾಜನನ್ನಾಗಿ ಮಾಡಲು ರಾಕ್ಷಸನು ಪ್ರಯತ್ನಿಸಿದನು ಎಂದೂ ಹೇಳಿದೆ.

7. ನಾಟಕದ ತ್ರಿವೇಂಡ್ರಮ್ ಹಸ್ತಪ್ರತಿಯಲ್ಲಿಯ ಪಾಠ[26]: ಮಹಾರಾಜರ ಅರಮನೆ ಲೈಬ್ರರಿ ತ್ರಿವೇಂಡ್ರಮ್ ಇಲ್ಲಿಯ ಹಸ್ತಪ್ರತಿ ನಂ. 1559ರಲ್ಲಿ ಮುದ್ರಾರಾಕ್ಷಸ ನಾಟಕ ಬರೆದು ಮುಗಿಸಿದ ಅನಂತರ ಈ ಕಥೆ ಇದೆ: ಇದರಂತೆ ಒಂಬತ್ತು ಜನ ಮಕ್ಕಳ ತಂದೆ ವೀರಸೇನ ಮತ್ತು ಆತನ ಕಿರಿಯ ಸಹೋದರನೇ ಸರ್ವಾರ್ಥಸಿದ್ಧಿ. ವೀರಸೇನನಿಗೆ ಮೂವರು ಕ್ಷತ್ರಿಯ ರಾಣಿಯರು. ಪ್ರತಿಯೊಬ್ಬರಿಗೂ ಮೂವರು ಗಂಡುಮಕ್ಕಳು. ಅವರೇ ನವನಂದರು. ಈ ರಾಣಿಯರಲ್ಲದೇ ವೀರಸೇನನಿಗೆ ರೂಪಕಲಾಳೆಂಬ ಶೂದ್ರಪತ್ನಿಯಿದ್ದು ಅವಳ ಮಗ ಚಂದ್ರಗುಪ್ತ. ಇಲ್ಲಿ ಚಂದ್ರಗುಪ್ತನು ನಂದರ ಮಲತಮ್ಮನೇ ಹೊರತು ಮಲಮಗನಲ್ಲ. ಸರ್ವಾರ್ಥಸಿದ್ಧಿಯು ಚಂದ್ರಗುಪ್ತನ ಚಿಕ್ಕಪ್ಪ.

8. ಬಿಕಾನೇರ ಹಸ್ತಪ್ರತಿಯಲ್ಲಿಯ ಪಾಠ[27]. ಅಜ್ಞಾತ ಕರ್ತೃವಿನ ಈ ಪಾಠಾಂತರದಲ್ಲಿ ಈ ಕಥೆ ಹೀಗಿದೆ:

ಸೂರ್ಯವಂಶ ಮತ್ತು ನಂದಾನ್ವಯದ ಚಿತ್ರಸೇನನು ಪಾಟಲೀಪುತ್ರವನ್ನು ಆಳುತ್ತಿದ್ದನು. ಆತನಿಗೆ ಸುಮತಿ ಮತ್ತು ರಂಭಾವತಿಯರೆಂಬ ಇಬ್ಬರು ರಾಣಿಯರು. ವೀರಸೇನನು ಮೊದಲನೆಯವಳ ಮಗ. ಸರ್ವಾರ್ಥಸಿದ್ಧಿಯು ಎರಡನೆಯವಳ ಮಗ. ಎರಡನೆಯವನು ಕಾಡಿಗೆ ಹೊರಟು ಹೋಗಲು ವೀರಸೇನನು ಪಟ್ಟಕ್ಕೇರಿದನು. ವೀರಸೇನನಿಗೆ ಮಾದ್ರಿ, ಮಾಗಧಿ ಮತ್ತು ವೈದಕ್ಯಳೆಂಬ ಮೂವರು ರಾಣಿಯರು. ಶೂರಸೇನ, ಸತ್ಯವ್ರತ ಮತ್ತು ಶ್ರುತಧ್ವಜರು ಮೊದಲನೆಯವಳ ಮಕ್ಕಳು. ನಳ, ಕರ್ಣ ಮತ್ತು ಭೀಮರು ಎರಡನೆಯವಳ ಮಕ್ಕಳು ಮತ್ತು ರಾಮ, ಹರಿಶ್ಚಂದ್ರ ಹಾಗೂ ದೀರ್ಘಾಯುವು — ಇವರು ಮೂರನೆಯವಳ ಮಕ್ಕಳು. ಈ ಮೂವರು ರಾಣಿಯರಲ್ಲದೇ ರಾಜನಿಗೆ ದಕ್ಷಿಣ ಭಾರತದ ರಾಜಕುಮಾರಿಯೊಬ್ಬಳು

ದಾಸಿಯಾಗಿದ್ದಳು. ಅವಳ ಮಗನೇ ಚಂದ್ರಗುಪ್ತ.

ವೀರಸೇನನಿಗೆ ವೈರೋಚನ, ವಕ್ರನಾಸ ಮತ್ತು ರಾಕ್ಷಸರೆಂಬ ಮೂರು ಜನ ಮಂತ್ರಿಗಳು. ಕಾಲಕ್ರಮದ ತನ್ನ ದಿಗ್ವಿಜಯ ಯಾತ್ರೆಯಲ್ಲಿ ವೀರಸೇನನು ಮಹಾಕಾವನೆಂಬ ಪಾರಸಿಕ ರಾಷ್ಟ್ರದ ಯವನರಾಜನನ್ನು ಸೋಲಿಸಿ ಆತನನ್ನು ತನ್ನ ಸಾಮಂತನನ್ನಾಗಿ ಮಾಡಿಕೊಂಡನು. ಆತನೇ ಪರ್ವತಕೇಶ್ವರ ಮತ್ತು ಆತನ ಮಗ ಮಲಯಕೇತು.

ರಾಜನು ಬೇಟೆಗೆ ಹೋಗುವಿಕೆ, ಕಲ್ಲದಪ್ಪಣಿಯಲ್ಲಿಯ ಬರಹ — ಇತ್ಯಾದಿ ವಿಚಾರಗಳೆಲ್ಲ ಅನಂತಭಟ್ಟನ ಪಾಠದಂತೆಯೇ ಇದ್ದರೂ, ಇಲ್ಲಿಯ ಮಂತ್ರಿಯ ಹೆಸರನ್ನು ಹೇಳುವಾಗ ಆತನನ್ನು ವೈರೋಚನನೆಂದು ಹೇಳಲಾಗಿದೆ.

ಹಿರಿಯ ಮಗನಾದ ಶೂರಸೇನನು ಪಟ್ಟವೇರಿದನು. ಹಿಂದಿನ ಅರಸನ ಶೂದ್ರ ಪತ್ನಿಯ ಮಗನಾದ ಚಂದ್ರಗುಪ್ತನು ಮತ್ಸರಗೊಂಡು, ಶೂರಸೇನನನ್ನು ಸಿಂಹಾಸನದಿಂದ ಕೆಳಗಿಳಿಸಲು ಪರ್ವತೇಶ್ವರನ ಬಳಿ ಬರುತ್ತಾನೆ. ಹಿಂದಿನ ರಾಜನ ಕೊಲೆಯನ್ನು ಕಣ್ಣಾರೆ ಕಂಡಿದ್ದ ಕುರುಬನೊಬ್ಬನು ದೀಪೋತ್ಸವ ಹಾಗೂ ಗೋಕ್ರೀಡೆಗಳನ್ನು ನೋಡಲು ರಾಜಧಾನಿಗೆ ಬರುವನು. ಅಲ್ಲಿ ಬಂಧುವಿನೊಬ್ಬನ ಮೂಲಕ ಕಾಡಿನಲ್ಲಿ ನಡೆದ ಎಲ್ಲಾ ಘಟನೆಗಳನ್ನೂ ರಾಜನಾದ ಶೂರಸೇನನಿಗೆ ತಿಳಿಸುವನು. ತದನಂತರ ರಾಜನು ರಾಕ್ಷಸನಿಗೆ ಅನುಕೂಲನಾಗಿದ್ದು ವೈರೋಚನನನ್ನು ಕೊಲ್ಲಿಸಲು ಸಮಯ ಕಾಯುತ್ತಿದ್ದನು. ಅವನು ಸ್ವತಃ ಕಾಡಿಗೆ ಹೋಗಿ ಕುರುಬನು ಹೇಳಿದ ಸಂಗತಿಯ ಸತ್ಯವನ್ನು ಕಂಡುಕೊಂಡನು. ಪರಿಣಾಮವಾಗಿ ವೈರೋಚನ ಹಾಗೂ ಆತನ ಕುಟುಂಬದವರನ್ನು ಜೈಲಿಗೆ ತಳ್ಳಿ ಸೀಮಿತ ಪ್ರಮಾಣದ ಆಹಾರ ಮತ್ತು ನೀರನ್ನು ಒದಗಿಸಲಾಯಿತು. ಕೊನೆಯ ಮಗನನ್ನು ಹೊರತುಪಡಿಸಿ, ಆ ಕುಟುಂಬದ ಉಳಿದ ಸದಸ್ಯರು ಅಲ್ಲೇ ಮರಣಹೊಂದಿದರು.

ಕೆಲವು ಕಾಲ ಕಳೆದ ಮೇಲೆ ಒಮ್ಮೆ ಅತ ಕಾಯಿಲೆ ಬಿದ್ದಾಗ ಆತನ ಯೋಗ್ಯತೆಯನ್ನು ಗಮನಿಸಿದ ರಾಜನು ವೈರೋಚನನ ಮಗನನ್ನು ಬಿಡುಗಡೆ ಮಾಡಿದನು. ಉಪವಾಸದಿಂದಿದ್ದ ಹುಡುಗನನ್ನು ಉಪಚರಿಸಲಾಯಿತು. ಮತ್ತೆ ಆತನನ್ನು ಜೂಜೋಟದ ಮೇಲ್ವಿಚಾರಕನನ್ನಾಗಿ ಮಾಡಿ, ಆಮೇಲೆ ದಂಡಾಧಿಕಾರವನ್ನು ಕೊಟ್ಟು ಕೊನೆಗೆ ಭೋಜನಾಧಿಕಾರಿಯನ್ನಾಗಿ ಮಾಡಲಾಯಿತು. ಪಾಡ್ಯದ ದಿನ ಶ್ರಾದ್ಧಕ್ಕೆ ಬ್ರಾಹ್ಮಣನನ್ನು ಆಮಂತ್ರಿಸಲು ಹೇಳಿದಾಗ ಆತನು — ಬೇರು ಕಿತ್ತ ಹುಲ್ಲಿನಡಿಗೆ ಬಿಸಿ ಅಂಬಲಿಯನ್ನು ಸುರಿಯುತ್ತಿದ್ದ; ಕೊಳಕಾದ, ಸಿಟ್ಟಿನ ನೈಷ್ಠಿಕ ಬ್ರಾಹ್ಮಣನನ್ನು ಕರೆದನು. ಕಥೆಯು ಉಳಿದಂತೆ ಇತರ ಪಾಠಾಂತರಗಳನ್ನು ಅನುಸರಿಸುತ್ತದೆ. ಕುಸುಮಪುರದ ಯುದ್ಧದಲ್ಲಿ ಚಾಣಕ್ಯನು ಮೋಹಕ ಮಂತ್ರಗಳನ್ನು ಉಪಯೋಗಿಸಿದ — ಎಂಬ ಅಂಶವು ಹೆಚ್ಚಾಗಿದೆ.

9. ಬಂಗಾಳದ ಪ್ರತಿಯಲ್ಲಿನ ಪಾಠಾಂತರ [28]

ಕ್ರಿ.ಶ. 1922ರಲ್ಲಿ ಬಂಗಾಳದ ನಾಶಿಪುರದಿಂದ ಪ್ರಕಟವಾದ, ಹರಿದಾಸ ಸಿದ್ಧಾಂತ ವಾಗೀಶ ಭಟ್ಟಾಚಾರ್ಯರ ವ್ಯಾಖ್ಯಾನವಿರುವ ಮುದ್ರಾರಾಕ್ಷಸ ನಾಟಕದೊಂದಿಗೆ ಇರುವ ಕಥೆ ಹೀಗಿದೆ:

ಶೂದ್ರರಾಜನಾದ ಮಹಾಪದ್ಮಪತಿ ನಂದನಿಗೆ ಒಂಬತ್ತು ಜನ ಮಕ್ಕಳು. ಅವರೇ ನವನಂದರು, ರಾಣಿ ರತ್ನಾವಳಿಯ ಮಕ್ಕಳು. ಮತ್ತೊಬ್ಬ ಮಗ ಚಂದ್ರಗುಪ್ತನು ಆತನ ಕ್ಷೌರಿಕ ಜಾತಿಯ ಪತ್ನಿ ಮುರೆಯ ಮಗ. ಚಂದ್ರಗುಪ್ತ ಮೌರ್ಯನು ಎಲ್ಲರಿಗಿಂತ ಹಿರಿಯನೂ ಉತ್ತಮನೂ ಆಗಿದ್ದನು. ಆದರೆ ಆತನು ಸಹೋದರರ ತುಚ್ಛೀಕಾರಕ್ಕೆ ಒಳಗಾಗಿದ್ದನು. ಪದ್ಮನಂದನು ತನ್ನ ದಾಯಾದಿ ವಿಶ್ವಕೇತು ಎಂಬುವನನ್ನು ವಾಯುವ್ಯ ದಿಕ್ಕಿನ ಗಡಿ ಪ್ರಾಂತದ ಮಂಡಲಾಧಿಪತಿಯನ್ನಾಗಿ ಮಾಡಿದ್ದನು. ವಿಶ್ವಕೇತುವಿನ ಮಗ ಮಲಯಕೇತುವು ಪಾಟಲೀಪುತ್ರದಲ್ಲೇ ವಾಸಿಸುತ್ತಿದ್ದನು. ಮಹಾಪದ್ಮನಿಗೆ ರಾಕ್ಷಸ, ವಕ್ರನಾಸ ಮತ್ತು ಶಕಟಾರರೆಂಬ ಮೂರು ಜನ ಮಂತ್ರಿಗಳು. ಇವರಲ್ಲಿ ಶಕಟಾರನೆಂಬುವನು — ಜೀವಂತ ಮನುಷ್ಯನನ್ನು ಶವವೆಂದು ತಪ್ಪು ತಿಳಿದು ನುಡಿಸಿದನೆಂಬ ಕಾರಣಕ್ಕಾಗಿ ರಾಜನು ಆತನನ್ನು ಸಕುಟುಂಬವಾಗಿ ನೆಲಮಾಳಿಗೆ ತಳ್ಳಿ ಸ್ವಲ್ಪ ಮಾತ್ರವೇ ಆಹಾರ ಮತ್ತು ನೀರಿನ ವ್ಯವಸ್ಥೆ ಮಾಡಿದನು. ಆತನ ಕುಟುಂಬವು ನಾಶವಾಗಲು ಶಕಟಾರನೊಬ್ಬನು ಬದುಕುಳಿದನು. ರಾಜನು ಆತನ ಬಗ್ಗೆ ಕರುಣೆದೋರಿ, ಕಾರಾಗೃಹದಿಂದ ಬಿಡಿಸಿ, ಪುನ: ಮಂತ್ರಿಯನ್ನಾಗಿ ಮಾಡಿಕೊಂಡನು.

ಒಮ್ಮೆ ಶಕಟಾರನು ತಕ್ಷಶಿಲೆಯ ವಿದ್ವಾಂಸನಾದ ಕೊಳಕು ಚಾಣಕ್ಯನನ್ನು ಭೇಟಿಯಾದನು. ಆತನ ಮದುವೆಯ ದಿನ ಸಂಜೆ, ಆತನ ಕಾಲಿಗೆ ಚುಚ್ಚಿ, ಕಾರ್ಯಕ್ರಮಕ್ಕೆ ಅಡ್ಡಿಯುಂಟು ಮಾಡಿದ್ದರಿಂದ ಅವನು ಹುಲ್ಲಿನ ಬುಡಕ್ಕೆ ಮಜ್ಜಿಗೆಯನ್ನು ಸುರಿಯುತ್ತಿದ್ದನು. ಚಾಣಕ್ಯನು ತುಂಬಾ ಸಿಟ್ಟಿನವನಾಗಿದ್ದು ಆ ಹುಲ್ಲನ್ನು ಬೇರು ಸಹಿತ ನಾಶ ಮಾಡುವುದಕ್ಕಾಗಿ ಹಾಗೆ ಮಾಡಿದ್ದನು. ಸಾಕಷ್ಟು ಪ್ರತೀಕಾರ ಮಾಡಲು ಅರ್ಹತೆಯುಳ್ಳವನಾಗಿ, ರಾಜನಿಂದ ಅವಮಾನಿಸಲ್ಪಡಲು ಸಾಕಷ್ಟು ಕೊಳಕಾಗಿರುವ ಚಾಣಕ್ಯನನ್ನೇ ಕರೆದು ಆತನು ಶ್ರಾದ್ಧಕ್ಕೆ ಅರಮನೆಗೆ ಆಮಂತ್ರಿಸಿದನು. ನಿರೀಕ್ಷಿಸಿದಂತೆ ಅಲ್ಲಿ ಚಾಣಕ್ಯನು ರಾಜನಿಂದ ಅವಮಾನಿತನಾಗಿ, ನಂದ ವಂಶ ನಿರ್ಮೂಲನ ಮಾಡಿದ ನಂತರವೇ ಜುಟ್ಟು ಕಟ್ಟುವುದಾಗಿ ಪ್ರತಿಜ್ಞೆ ಮಾಡಿದನು. ಚಾಣಕ್ಯನು ರಾಜ್ಯಾಕಾಂಕ್ಷಿಗಳು ಮುಂದೆ ಬರಬೇಕೆಂದು ಕರೆ ನೀಡಿದನು. ಚಂದ್ರಗುಪ್ತನು ಮುಂದೆ ಬಂದನು. ಭದ್ರಭಟ ಮೊದಲಾದವರು ಇವನನ್ನು ಕೂಡಿಕೊಂಡರು. ಅವರ ಪರ್ವತಕೇಶ್ವರನ ಸಹಾಯವನ್ನು ಯಾಚಿಸಿದರು. ಚಾಣಕ್ಯನು ಮಾಟ ಮಾಡಿದನು. ಅದರ ಪರಿಣಾಮವಾಗಿ ಆರು ತಿಂಗಳ ನಂತರ ನಂದರು ಸತ್ತರು.

10. <u>ಮಹಾಕವಿ ಭೀಮನ 'ಪ್ರತಿಜ್ಞಾ ಕೌಟಿಲ್ಯ'</u> : ಅಭಿನವ ಗುಪ್ತನು ನಾಟ್ಯಶಾಸ್ತ್ರಕ್ಕೆ ತಾನು ಬರೆದ ವ್ಯಾಖ್ಯಾನ 'ಅಭಿನವ ಭಾರತಿ' ಯಲ್ಲಿ — 'ವಿಶಾಖದತ್ತನ ಮುದ್ರಾರಾಕ್ಷಸ ನಾಟಕವಲ್ಲದೇ ಇದೇ

ವಸ್ತುವನ್ನೊಳಗೊಂಡ ಇನ್ನೊಂದು ಪ್ರಮುಖ ನಾಟಕವು ಸಂಸ್ಕೃತದಲ್ಲಿದ್ದು — ಅದರ ಹೆಸರು ಪ್ರತಿಜ್ಞಾ ಕೌಟಿಲ್ಯವೆಂದೂ, ಅದನ್ನು ರಚಿಸಿದವನು ಮಹಾಕವಿ ಭೀಮನೆಂದೂ[30], ಹೇಳಿದ್ದಾನೆ. ಅಭಿನವ ಗುಪ್ತನು ಉದ್ಧರಿಸಿ ಹೇಳಿದ ಪಂಕ್ತಿಗಳಿಂದ ನಮಗೆ ತಿಳಿದುಬರುವುದೇನೆಂದರೆ — 'ಈ ನಾಟಕದಲ್ಲಿ ಮಲಯಕೇತುವಿನ ಬದಲ್ ವಿಂಧ್ಯಕೇತುವೆಂಬ ಪಾತ್ರವನ್ನು ತಂದಿದ್ದು ಆತನನ್ನು ಶಕಾರನೆಂದು ಕರೆದಿದ್ದಾನೆ[31]. ಪ್ರಕೃತ ಈ ನಾಟಕವು ಅಲಭ್ಯವಿದ್ದು, ಅದು ಬೆಳಕಿಗೆ ಬಂದಲ್ಲಿ ವಿಭಿನ್ನ ಪಾಠಗಳ ಮಧ್ಯದ ಎಳೆಗಳನ್ನು ಗುರುತಿಸಲು ಸಹಾಯಕವಾಗುವುದೆಂದು ನಂಬಲಾಗಿದೆ.

ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ ಚಂದ್ರಗುಪ್ತ — ಚಾಣಕ್ಯರ ಕಥೆಯು ವಿಸ್ತಾರವಾಗಿಯೂ ವೈವಿಧ್ಯಮಯವಾಗಿಯೂ ಹರಡಿದೆ. ಇವುಗಳಲ್ಲಿ ನಮ್ಮ ಕವಿ ಯಾವಾವುದಕ್ಕೆ ಎಷ್ಟೆಷ್ಟು ಋಣಿಯಾಗಿದ್ದಾನೆಂಬುದನ್ನು ಮುಂದಿನ ಅಧ್ಯಾಯದಲ್ಲಿ 'ಕಥಾ ಸಾರ' ವನ್ನು ಹೇಳಿಯಾದ ನಂತರ ಚರ್ಚಿಸಲಾಗುವುದು.

••••••••••

ಟಿಪ್ಪಣಿಗಳು

1. ಪಂಡಿತ ಗಂಜಾಂ ತಿಮ್ಮಣ್ಣಯ್ಯ (ಅನು): 1948: 'ವಿಷ್ಣುಪುರಾಣಂ' , ಮೈಸೂರು ಪು. 435 — 36.

2. ಕೃಷ್ಣಶಂಕರ ಶಾಸ್ತ್ರಿ (ಸಂ.) 1975. 'ಶ್ರೀಮದ್ಭಾಗವತ ಮಹಾಪುರಾಣಂ — ದ್ವಾದಶಸ್ಕಂಧ: (ಸಂಸ್ಕೃತ) ಅಹಮದಾಬಾದ್. ಪು.11, 12.

3. ಸೀತಾರಾಮಾಚಾರ ಆರ್ (ಅನು). 1948. 'ಶ್ರೀಬ್ರಹ್ಮಾಂಡಮಹಾಪುರಾಣವು' ಸಂ. ಮೈಸೂರು. ಪು. 75—76.

4. ರಂಗಾಚಾರ ವಾಜಪೇಯಂಯಂಶ್ರೀ (ಅನು) 1947: 'ಶ್ರೀಮತ್ಸ್ಯಮಹಾಪುರಾಣವು' ಸಂ. ಮೈಸೂರು. ಪು 193— 94.

5. ಉದ್ಧೃತ: ಕೃಷ್ಣಶಾಸ್ತ್ರಿ ಎ.ಆರ್. 1970 'ಸಂಸ್ಕೃತ ನಾಟಕ' ಮೈಸೂರು ಪು. 192.

6. ಕೃಷ್ಣಶಾಸ್ತ್ರಿ ಎ.ಆರ್. ಕಥಾಮೃತ. ಮೈಸೂರು 1989 ಪು. 2 — 8 ಮತ್ತು ಪುರಾಣಿಕ ಎನ್ಸೈಕ್ಲೋಪೀಡಿಯಾ: 'ವರರುಚಿ' ಪುಟ 829—30. (ಸಂ: ವೆಟ್ಟಮ ಮಣಿ — ಮೋತೀಲಾಲ ಬನಾರಸಿದಾಸ. ಡೆಲ್ಲಿ 1989.

7. ಉದ್ಧೃತ: ರಾಘವನ ವಿ. 1973. 'ದಿ ಮುದ್ರಾರಾಕ್ಷಸ ನಾಟಕಕಥಾ ಆಫ್ ಮಹಾದೇವ' (ಇಂಗ್ಲಿಷ್) ತಂಜಾವೂರು. ಪು. 58—61.

8. ಅದೇ ಪುಟ 62—66.

9. ನರಸಿಂಹಾಚಾರ ಡಿ.ಎಲ್.(ಸಂ) 1978. 'ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ' ಮೈಸೂರು

9ಎ. ನೋಡಿ ಅದೇ ಪು.75.

9ಬ. ಅದೇ ಪು.179—192.

10. ಜಿ.ಎಸ್. ಸಣ್ಣಯ್ಯ 1988 (ಸಂ) 'ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ' ಮೈಸೂರು ಪು.80—81

11 ಕ್ರಮಸಂಖ್ಯೆ 7, ಪು.67—68

12. ತೆಲಾಂಗ್ ಕೆ.ಟಿ. 1918. 'ಮುದ್ರಾರಾಕ್ಷಸವು ಮುಂಬಯಿ.

13ಅ. ಕೃಷ್ಣಶಾಸ್ತ್ರಿ ಎ.ಆರ್. 1970 'ಸಂಸ್ಕೃತ ನಾಟಕ' ಪು. 186

13. ಈ ಸಂಪ್ರಬಂಧದ 4ನೆಯ ಅಧ್ಯಾಯದಲ್ಲಿ 'ಕಥಾಸಾರ' ಹೇಳಿದ ನಂತರ ಶೀರ್ಷಿಕೆಯ ಕುರಿತಾಗಿ ಚರ್ಚಿಸಲಾಗುವುದು.

14. ಕ್ರಮಸಂಖ್ಯೆ 7 ಪು 1

15. ಈತನನ್ನೂ ಈತನ ಕೃತಿಯನ್ನೂ ಶ್ರೀನಿವಾಸ ಹಾವನೂರರು ತಮ್ಮ 'ಹೊಸಗನ್ನಡದ ಅರುಣೋದಯ' ದಲ್ಲಿ ಉದ್ಧರಿಸಿದ್ದಾರೆ (ಪುಟ 531).

16. ಈ ಸಂಬಂಧವಾಗಿ ತಾ.7-02-1991ರಂದು ಪತ್ರಮೂಲಕ ಆ ಲೈಬ್ರರಿಯವರನ್ನು ಸಂಪರ್ಕಿಸಿದಾಗ ಅವರು ತಾ.20-3-1991ರಂದು ಉತ್ತರಿಸಿ — 'ತಮ್ಮಲ್ಲಿ ಅಂತಹ ಹಸ್ತಪ್ರತಿಗಳು ಇರುವುದು ಹೌದೆಂದೂ, ಬಹು ಹಿಂದೆ ಒಮ್ಮೆ ಅದನ್ನು ಮುದ್ರಿಸಿದ್ದು, ಈಗ ಮುದ್ರಿತ ಪ್ರತಿಗಳು ಲಭ್ಯವಿಲ್ಲವೆಂದೂ ಹಸ್ತಪ್ರತಿಗಳ ಫೋಟೋಸ್ಟಾಟ್ ಅಥವಾ ಮೈಕ್ರೋಪ್ರತಿ ಮಾಡಲು ಸದ್ಯ ಅವಕಾಶವಿಲ್ಲ' ವೆಂದೂ ತಿಳಿಸಿದ್ದಾರೆ.

18. ಕ್ರ.ಸಂ. 7, ಪು. 48 — 51.

19. ಕ್ರ.ಸಂ. 7, ಪು. 2, 3

20. ಕ್ರ.ಸಂ. 7, ಪು. 7, 8

21. ಕೃಷ್ಣಮೂರ್ತಿ ಕೆ. 1961. 'ರವಿಕರ್ತನ ವಿರಚಿತ ಮುದ್ರಾರಾಕ್ಷಸ ಕಥಾಸಾರ' ಮೈಸೂರು.

22. ಅದೇ ಪೀಠಿಕೆ ಪು.11.

23. ಕ್ರಮಸಂಖ್ಯೆ 7, ಅಡಿ ಟಿಪ್ಪಣಿ ನಂ. 7, ಪು.4.

23ಎ. ಎಚ್.ಎಂ. ಶಂಕರನಾರಾಯಣ ರಾವ್ ಅವರು (ಪ್ರೊ: ಡಿ ಎಲ್ ನರಸಿಂಹಾಚಾರ್ಯರಿಗೆ ಒಪ್ಪಿಸಿದ ಅಭಿನಂದನ ಗ್ರಂಥ) ಉಪಾಯನದಲ್ಲಿ 'ಮಹಾದೇವ — ರವಿನರ್ತಕ' ಎಂಬ ಲೇಖನ ಬರೆದಿದ್ದಾರೆ. ಪು. 466—73.

24. ಕ್ರ.ಸಂ. 12, ಉಪೋದ್ಘಾತ, ಪು. 39—46.

25. ಕ್ರ.ಸಂ. 7, ಪು 44

26. ಅದೇ ಪು.47

27. ಅದೇ ಪು. 51—53.

28. ಅದೇ ಪು. 53—54.

29. ಅದೇ ಪು. 54

30. ಉದ್ಧೃತ ಅದೇ ಪು.54

31. ಈ ವಿಚಾರವು ಶೂದ್ರಕನ ' ಮೃಚ್ಛಕಟಿಕ ' ನಾಟಕದ ಶಕಾರನನ್ನು ಹೋಲುವುದೆಂದು ಡಾ: ವಿ. ರಾಘವನ ಅಭಿಪ್ರಾಯ ಪಟ್ಟಿದ್ದಾರೆ. ಅದೇ. ಅಡಿಟಿಪ್ಪಣಿ.

ಅಧ್ಯಾಯ ನಾಲ್ಕು

ಮುದ್ರಾಮಂಜೂಷ : ಸಾಹಿತ್ಯಕ ಅಧ್ಯಯನ 85 – 184

ಕಥಾಸಾರ – ಹದಿನೆಂಟು ಆಶಯಗಳಲ್ಲಿರುವ ಕಥೆಯ ಸಂಕ್ಷೇಪ ನಿರೂಪಣೆ – ಶೀರ್ಷಿಕೆ – ಅದರ ಔಚಿತ್ಯ – ಮಹಾದೇವ – ರವಿನರ್ತಕ ಢುಂಡಿರಾಜ ಮತ್ತು ಕೆಂಪುನಾರಾಯಣರ ಕಥಾ ನಿರೂಪಣೆಗಳ ತೌಲನಿಕ ಅಧ್ಯಯನ – ಮುಗ್ರಾರಾಕ್ಷಸ ಮತ್ತು ಮುದ್ರಾರಾಕ್ಷಸಗಳಲ್ಲಿಯ ಸಾಮ್ಯ – ವೈಷಮ್ಯ. ಈ ಕೃತಿಯಲ್ಲಿ ಕವಿಯ ಪೂರ್ಣ ಸ್ವಂತಿಕೆಯಿಂದ ಸೇರಿಸಿಕೊಂಡ ೫ ಅಂಶಗಳು.

ಪಾತ್ರ ಚಿತ್ರಣ : ಪ್ರಸ್ತಾವನೆ – ಕಥಾನಾಯಕ ಚಂದ್ರಗುಪ್ತ – ಚಾಣಕ್ಯ – ರಾಕ್ಷಸ ಪರ್ವತರಾಜ – ಇಂದುಶರ್ಮ ಮತ್ತು ಅತನ ಶಿಷ್ಯರು – ಸ್ತ್ರೀ ಪಾತ್ರಗಳು, ಸರ್ವಾರ್ಥ ಸಿದ್ಧಿ – ನೂರಾಯರ್ಮ – ಮಲಯಕೇತು – ಇತರ ಪಾತ್ರಗಳು.

ಭಾಷೆ –ಶೈಲಿ – ಪ್ರಸ್ತಾವನೆ – ವ್ಯಾಕರಣ ವಿಶೇಷ – ಗಾದೆ ಮಾತುಗಳು. ನೀತಿವಾಕ್ಯಗಳು – ನ್ಯಾಯಗಳು – ಪತ್ರಗಳು – ಕಪಟ ಲೇಖನಗಳು – ಸಂಭಾಷಣೆ – ಸಂಗ್ರಹಕೌಶಲ.

ಅಲಂಕಾರಗಳು – ಉಪಮಾ – ಶಿಷ್ಟೋಪಮಾ – ಉತ್ಪ್ರೇಕ್ಷೆ – ಪರಿಸಂಖ್ಯಾ – ಕಾವ್ಯಲಿಂಗ ಸ್ವಭಾವೋಕ್ತಿ – ಅತಿಶಯೋಕ್ತಿ – ಪ್ರಶ್ನಾಲಂಕಾರ.

ಅಷ್ಟಾದಶ ವರ್ಣನೆಗಳು : ನಗರ – ಸ್ತ್ರೀ – ಚಂದ್ರೋದಯ – ಸೂರ್ಯೋದಯ – ಉದ್ಯಾನವನ – ಪುಷ್ಪಶ್ರಮ – ಸಂಭೋಗ, ವಿಪ್ರಲಂಭ ಶೃಂಗಾರ – ಯಾತ್ರ, – ದೂತ – ನಾಯಕಾಭ್ಯುದಯ – ಮಂತ್ರ ಇತ್ಯಾದಿ.

ರಸ ನಿರೂಪಣೆ : ಪ್ರಸ್ತಾವನೆ – ವೀರ – ರೌದ್ರ – ಭೀಭತ್ಸ – ಭಯಾನಕ – ಅದ್ಭುತ – ಕರುಣ – ಶೃಂಗಾರ (ಸಂಭೋಗ –ವಿಪ್ರಲಂಭ) – ಹಾಸ್ಯ – ಶಾಂತ.

ಛಂದಸ್ಸು – ಕವಿ ಸ್ವತಂತ್ರವಾಗಿ ರಚಿಸಿದ ಶ್ಲೋಕಗಳು ಮತ್ತು ಅಂತ್ಯಗಳು.

ಮಹಾಕಾವ್ಯವಾಗಿ ಮುದ್ರಾಮಂಜೂಷ : ಹದಿನೆಂಟು ಆಶಯ (ಅಧ್ಯಾಯ) ಗಳಲ್ಲಿ ವಸ್ತು, ಆರಂಭದಲ್ಲಿ ಕಥಾವಸ್ತುವಿನ ನಿರ್ದೇಶ – ಧೀರೋದಾತ್ತ ನಾಯಕ – ಅರ್ಥಗೌರವದಿಂದ ಕೂಡಿದ ಭಾಷೆ – ಅಲಂಕಾರಗಳು – ಅಷ್ಟಾದಶ ವರ್ಣನೆಗಳು – ರಾಜ್ಯಪ್ರಾಪ್ತಿಯಂತಹ ಐಹಿಕ ಅರ್ಥಕ್ಕೆ ಪ್ರಾಧಾನ್ಯ – ಲೋಕಸ್ವಭಾವದ ಚಿತ್ರಣ – ರಸಗಳ ಪ್ರತಿಪಾದನೆಯಿಂದ ಕೂಡಿದುದು.

ಅಧ್ಯಾಯ ನಾಲ್ಕು

ಮುದ್ರಾಮಂಜೂಷ: ಸಾಹಿತ್ಯಕ ಅಧ್ಯಯನ

ಕಥಾಸಾರ

೧. ನಂದೋತ್ಪತ್ತಿ

ಗೌಡ ದೇಶದ ರಾಜಧಾನಿಯಾದ ಪಾಟಲೀಪುರಕ್ಕೆ ಚಂದ್ರವಂಶದ ಸರ್ವಾರ್ಥಸಿದ್ಧಿಯು ಅರಸು. ಇವನಿಗೆ ಪಟ್ಟಮಹಿಷಿ ಸುನಂದಾದೇವಿ; ಮುರಾದೇವಿ ಪ್ರೇಮದ ಪತ್ನಿ. ವಕ್ರನಾಸನೇ ಮೊದಲಾದ ಅಷ್ಟಮಂತ್ರಿಗಳಲ್ಲಿ ಸಂಧಿವಿಗ್ರಹಿಯಾದ ಅಮಾತ್ಯ ರಾಕ್ಷಸನು ಪ್ರಜ್ಞಾಶಾಲಿಯಾಗಿದ್ದು ಅರಸನ ವಿಶ್ವಾಸಕ್ಕೆ ಪಾತ್ರನಾಗಿದ್ದನು. ದೊರೆಯು ಮಕ್ಕಳಿಲ್ಲದ ಚಿಂತೆಯಲ್ಲಿದ್ದಾಗ ವೀತಹವ್ಯರೆಂಬ ಮುನಿಗಳು ಆಗಮಿಸಿ ಅನುಗ್ರಹಿಸಿದ್ದರಿಂದ ಮುರಾದೇವಿಯಲ್ಲಿ ಮೌರ್ಯನೆಂಬ ಮಗನೂ ಸುನಂದಾದೇವಿಯಲ್ಲಿ ನಂದನೇ ಮೊದಲಾದ ಒಂಬತ್ತು ಜನ ಮಕ್ಕಳೂ ಜನಿಸಿದರು.

೨. ಚಂದ್ರಗುಪ್ತ ಬಂಧ ವಿಮೋಚನ

ಮೌರ್ಯನು ಬಾಗುರಾಯಣ, ಭದ್ರಭಟರೇ ಮೊದಲಾದ ಅಷ್ಟಸೇನಾಧಿಪತಿಗಳ ಸಹಕಾರದಿಂದ ಸಿಂಹಾಸನಾರೋಹಣವನ್ನುಳಿದ ಅಧಿಕಾರವನ್ನು ನಡೆಸುತ್ತಿದ್ದನು. ಕಾಲಕ್ರಮದಲ್ಲಿ ಆತನಿಗೆ ಚಂದ್ರಗುಪ್ತನೇ ಮೊದಲಾದ ನೂರು ಜನ ಮಕ್ಕಳಾದರು. ಮೌರ್ಯಪುತ್ರರ ಅಭಿವೃದ್ಧಿಯನ್ನು ಸಹಿಸದ ನಂದರು, ಸರ್ವಾರ್ಥಸಿದ್ಧಿಯೊಡನೆ ರಾಕ್ಷಸನು ಪ್ರಯಾಗ ತೀರ್ಥಯಾತ್ರೆಗೆ ಹೋಗಿದ್ದ ಸಮಯದಲ್ಲಿ ಊರ ಹೊರಗಡೆ ಉದ್ಯಾನದಲ್ಲಿ ನೂತನವಾಗಿ ಕಟ್ಟಿಸಿದ್ದ ನೆಲಮಾಳಿಗೆಯಲ್ಲಿ ನೂಕಿ ಮೌರ್ಯನನ್ನು ಅವನ ಮಕ್ಕಳನ್ನೂ ಕೊಂದರು. ದೈವಯೋಗದಿಂದ ಬದುಕಿದ ಚಂದ್ರಗುಪ್ತನು ಸೆರೆಮನೆಯಲ್ಲಿರಬೇಕಾಯಿತು. ನಂದರ ಪರೀಕ್ಷೆಗಾಗಿ ಪರ್ವತರಾಜನು ಕಳುಹಿಸಿದ ಪಂಜರದ ಕೃತಕ ಸಿಂಹವನ್ನು ಪರೀಕ್ಷೆ ಮಾಡಿ ಜಯಶಾಲಿಯಾದ ಚಂದ್ರಗುಪ್ತನು, ಸೆರೆಮನೆಯಿಂದ ಬಿಡುಗಡೆ ಹೊಂದಿ, ಬ್ರಾಹ್ಮಣರ ಭೋಜನದ ಅನ್ನಸತ್ರಾಧಿಕಾರಿಯಾಗಿ ನಿಂತನು.

೩. ಚಂದ್ರಗುಪ್ತ ಚಾಣಕ್ಯರ ಪರ್ವತರಾಜ್ಯ ಪ್ರವೇಶ

ಅನ್ನಸತ್ರದ ಎದುರಿನಲ್ಲಿ, ದಾರಿಯಲ್ಲಿ ಹೋಗುತ್ತ, ಕಾಲಿಗೆ ಸುತ್ತಿಕೊಂಡ ಗರಿಕೆಯ ಬಳ್ಳಿಯನ್ನು ಬೇರು ಸಹಿತ ನಿರ್ಮೂಲ ಮಾಡಿದ ಚಾಣಕ್ಯನನ್ನು ಕಂಡು, ಇಂತಹ ಕೋಪವಿದ್ದವರಲ್ಲೇ ಆಶ್ರಿತಾಭಿಮಾನವು ದೃಢವಾಗಿರುವುದೆಂದು ನಿಶ್ಚಯಿಸಿ ಚಂದ್ರಗುಪ್ತನು ಆತನನ್ನು ಆಶ್ರಯಿಸಿದನು. ಶರಣಾಗತನಾದ

ಚಂದ್ರಗುಪ್ತನಿಗೆ ಅಭಯವನ್ನು ಕೊಡುವ ಸಲುವಾಗಿ ಧರ್ಮ ವಿರುದ್ಧವಲ್ಲದ ಒಂದು ಕುಚೇಷ್ಟೆಯನ್ನು ಆಚರಿಸಲು, ಚಾಣಕ್ಯನು ಅನ್ನಸತ್ರದಲ್ಲಿ ರಾಜಾರ್ಹವಾದ ಸುವರ್ಣಪೀಠವನ್ನು ಅಗ್ರ ಭಾಗದಲ್ಲಿ ಹಾಕಿಕೊಂಡು ಕುಳಿತಿದ್ದನು. ನಂದರು ದೈವಸಂಕಲ್ಪದಿಂದ ವಿಮರ್ಶೆಯನ್ನು ಮಾಡದೆ ದೂತರಿಂದ ಅವನನ್ನು ಎಳೆಸಲು ಆ ರಭಸಕ್ಕೆ ಚಾಣಕ್ಯನ ಜುಟ್ಟು ಬಿಚ್ಚಿಹೋಗಲು, ನಂದರನ್ನು ಸಂಹರಿಸಿದ ನಂತರವೇ ಜುಟ್ಟನ್ನು ಕಟ್ಟುವುದಾಗಿ ಆತನು ಪ್ರತಿಜ್ಞೆ ಮಾಡುವನು. ಈ ತನ್ನ ಕಾರ್ಯಸಾಧನೆಗಾಗಿ ಚಾಣಕ್ಯನು ತನ್ನ ಸಹಾಧ್ಯಾಯಿಯಾದ ಇಂದುಶರ್ಮನ ಸಹಕಾರವನ್ನು ಅಪೇಕ್ಷಿಸುವನು. ಚಂದ್ರಗುಪ್ತನಿಂದಲೇ ನಂದರ ಶತ್ರು, ಮಿತ್ರ, ಉದಾಸೀನ ರಾಜ್ಯರಾಜ್ಯರೆಂದು ತಿಳಿದು ನಿಮಿತ್ತಾಂತರದಿಂದ ಭಾಗುರಾಯಣ ಭದ್ರಭಟರಿಂದ ಹಸ್ತಾಕ್ಷರ ಸಂಗ್ರಹಿಸಿಕೊಂಡು ತಂದ ಚಂದ್ರಗುಪ್ತನೊಡನೆ ಪರ್ವತರಾಜನಲ್ಲಿಗೆ ಪ್ರಯಾಣ ಮಾಡುವನು.

೪. ಪರ್ವತರಾಜನ ಸೇನಾಗಮನ

ಕ್ಷಪಣಕ ವೇಷ ಧರಿಸಿದ ಇಂದುಶರ್ಮನು, ತನ್ನ ಶಿಷ್ಯರೊಂದಿಗೆ ಪಾಟಲೀಪುರಕ್ಕೆ ತೆರಳುವನು. ಅಲ್ಲಿ ವೈದ್ಯ, ಮಂತ್ರಜ್ಞ ಮೊದಲಾದವರ ವೇಷ ಧರಿಸಿ ರಾಕ್ಷಸನೇ ಮುಂತಾದ ಅಧಿಕಾರಿಗಳನ್ನು ಆಶ್ರಯಿಸಿ ತನ್ನ ಕಾಪಟ್ಯವು ಪರರಿಗೆ ಲೇಶಮಾತ್ರವೂ ತಿಳಿಯದಂತೆ ಇರುತ್ತಿದ್ದನು. ಅತ್ತ ಚಾಣಕ್ಯ – ಚಂದ್ರಗುಪ್ತರಿಗೆ ಪರ್ವತರಾಜನಲ್ಲಿ ಆದರದ ಸ್ವಾಗತ ದೊರೆಯುತ್ತದೆ. ನಂದರೊಡನೆ ಯುದ್ಧ ಮಾಡುವ ವಿಚಾರದಲ್ಲಿ ಪರ್ವತರಾಜನ ಮಂತ್ರಿಗಳಾದ ಉಲೂಕ, ಶಬರವರ್ಮರಲ್ಲಿ ಭಿನ್ನಾಭಿಪ್ರಾಯವೇರ್ಪಡುತ್ತವೆ. ಉಲೂಕನಿಗೆ ರಾಕ್ಷಸನ ಸಾಮರ್ಥ್ಯದ ಯಥಾರ್ಥ ಜ್ಞಾನವಿದ್ದುದರಿಂದ ಆತ ಚಂದ್ರಗುಪ್ತನ ಕಾರಣದಿಂದಾಗಿ ನಂದರೊಡನೆ ವೈರ ಕಟ್ಟಿಕೊಳ್ಳಬಾರದೆನ್ನುತ್ತಾನೆ. ಆದರೆ ಶಬರವರ್ಮ ಛಿದ್ರ ಉಂಟಾದ ಈ ಸಂದರ್ಭದಲ್ಲೇ ನಂದನಿಗ್ರಹ ಅಗತ್ಯವೆನ್ನುತ್ತಾನೆ. ಈ ಮಧ್ಯೆ ಪರ್ವತರಾಜನ ಮೇಲೆ ಬಂದಿದ್ದ ಲಂಪಾಕಾಧಿಪತಿಯ ಕುತ್ತನ್ನು, ಚಾಣಕ್ಯನು ಕಾಮರೂಪ ದೇಶಾಧಿಪತಿಗೆ ಕಪಟ ಪತ್ರ ಬರೆಯುವುದರ ಮೂಲಕ ಪರಿಹರಿಸುತ್ತಾನೆ. ಈಗ ಚಂದ್ರಗುಪ್ತನಿಗೆ ಸಹಾಯ ಮಾಡುವುದು ಪರ್ವತರಾಜನ ಕರ್ತವ್ಯವೇ ಆಗುತ್ತದೆ. ಇದರೊಂದಿಗೆ ಚಾಣಕ್ಯನು ತೋರಿಸಿದ ಅರ್ಧ ರಾಜ್ಯದ ಆಸೆಗೆ ಮರುಳಾಗಿ, ಪರ್ವತರಾಜನು ಸೇನಾ ಸಮೇತ ಗೌಡರಾಜ್ಯಾಭಿಮುಖನಾಗಿ ತೆರಳುತ್ತಾನೆ.

೫. ರಾಕ್ಷಸ ಭೇದೋಪಾಯ ಭಂಗವು

ಪರ್ವತರಾಜನ ಸೇನೆ ಪಾಟಲೀಪುರಕ್ಕೆ ಹತ್ತಿರವಾದುದನ್ನು ಗೂಢಚಾರರಿಂದ ತಿಳಿದು, ರಾಕ್ಷಸನಿಗೆ ಆತಂಕವುಂಟಾಗುತ್ತದೆ. ಪರ್ವತರಾಜನ ಬಳಿ ವರ್ತಕ ವೇಷದಿಂದಿದ್ದ ತನ್ನ ಕಡೆಯವರ ಮೂಲಕ ರಾಕ್ಷಸನು

ಮಾಡಬೇಕೆಂದಿದ್ದ ಭೇದೋಪಾಯವು, ಕ್ಷಪಣಕನ ಮೂಲಕ ಚಾಣಕ್ಯನಿಗೆ ತಿಳಿಯುತ್ತದೆ. ಆಗ ಆತ ಅದಕ್ಕೆ ತಕ್ಕ ಪ್ರತೀಕಾರವನ್ನು ಕೈಕೊಳ್ಳುತ್ತಾನೆ. ಇತ್ತ ಕ್ಷಪಣಕನ ಶತ್ರು ಪಲಾಯನ ಜಪದ ಸಲಹೆಯನ್ನು ರಾಕ್ಷಸನು ಅಂಗೀಕರಿಸಿ, ಭಾಗುರಾಯಣನಿಂದ ಅದಕ್ಕೆ ಬೇಕಾದ 'ಏರ್ಪಾಟನ್ನು ಮಾಡಿಸುತ್ತಾನೆ. ಚಾಣಕ್ಯನ ಕಡೆಯ ಮಾಸೋಪವಾಸಿಯೇ ಅಲ್ಲಿ ಆರ್ತ್ವಿಜ್ಯವನ್ನು ಒಪ್ಪಿಕೊಳ್ಳುತ್ತಾನೆ. ಪರ್ವತರಾಜನ ನಿಯೋಗಿಯಾದ ಕಮಲಾಪೀಡನು ಚಾಣಕ್ಯನ ಆಣತಿಯಂತೆ, ನಂದರ ಮಿತ್ರನಾದ ಕಾಶೀರಾಜನಲ್ಲಿಗೆ ಹೋಗಿ, ಆತನು ಯಾರಿಗೂ ಸಹಾಯವಾಗದಂತೆ ಉಪಾಯದಿಂದ ಆತನನ್ನು ತಡೆಯುತ್ತಾನೆ.

೬. ನಂದರ ಪ್ರಯಾಣವು

ತನ್ನ ಭೇದೋಪಾಯ ಭಂಗವಾದುದು ದೂತರ ಮೂಲಕ ತಿಳಿದಾಗ, ರಾಕ್ಷಸನು ತನ್ನ ಬಳಿಯಿದ್ದ ಕ್ಷಪಣಕನ ಮೇಲೆ ಅನುಮಾನಪಟ್ಟು, ಬ್ರಾಹ್ಮಣನೊಬ್ಬನ ಮೂಲಕ ಅವನನ್ನು ಪರೀಕ್ಷಿಸಿ, ಅವನು ನಿರ್ದೋಷಿಯೆಂಬ ತೀರ್ಮಾನಕ್ಕೆ ಬರುತ್ತಾನೆ. ಪರ್ವತರಾಜನೊಡನೆ ತಾತ್ಕಾಲಿಕವಾಗಿಯಾದರೂ ಸಂಧಿ ಮಾಡಿಕೊಂಡು, ಒಳ್ಳೆಯ ಕಾಲವನ್ನು ಕಾದು ಶತ್ರುಗಳನ್ನು ನಿಗ್ರಹಿಸಬೇಕೆಂಬ ಸರ್ವಾರ್ಥಸಿದ್ಧಿಯ ಸಲಹೆಗೆ, ನಂದರು ಒಪ್ಪದೆ ತಾಯಿಯನ್ನೂ ಪತ್ನಿಯರನ್ನೂ ಒಪ್ಪಿಸಿ, ಯುದ್ಧಕ್ಕೆ ಹೊರಡುವರು. ಆಗ ಅಪಶಕುನಗಳಾಗುವುವು. ಆ ಸಮಯದಲ್ಲಿ ಶಿವವರ್ಮನಿಂದ ದುರ್ಗರಕ್ಷಣೆಯಾಯಿತೆಂಬ ಶುಭ ಸಮಾಚಾರ ಕೇಳಿದ ನಂದರು ಜಪಶಾಲೆಯ ಬಳಿಗೆ ಬಂದು, ಮಾಸೋಪವಾಸಿಯ ಮಾತಿಗೆ ಮರುಳಾಗಿ, ಅಲ್ಲಿ ಪೂರ್ಣಾಹುತಿಯ ಕಾಲದಲ್ಲಿ ಕಾಣಲಿರುವ ದೇವತಾಹಸ್ತ ದರ್ಶನಕ್ಕೆ ಬರಬೇಕೆಂದು ತಮ್ಮಲ್ಲಿಯೇ ತೀರ್ಮಾನಿಸಿಕೊಂಡರು. ಮಾಸೋಪವಾಸಿಯ ಕೋರಿಕೆಯಂತೆ ಜಪಶಾಲೆಯ ಸುತ್ತಲೂ ಶೂದ್ರಾದಿಗಳು ಬಾರದಂತೆ ಕಟ್ಟಪ್ಪಣೆ ಮಾಡಿದರು.

೭. ನಂದರ ಯುದ್ಧವು

ಶತ್ರುಸೇನೆ ಬರುವ ಸುದ್ದಿಯನ್ನು ಕೇಳಿ ಪಾಟಲೀಪುರ ನಿವಾಸಿಗಳು ಬಹು ವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು. ಚಾಣಕ್ಯನ ಕಡೆಯ ಸಿದ್ಧಾರ್ಥಕನು — ಚಂದ್ರಗುಪ್ತನಿಗೆ ಕೊನೆಗೆ ಜಯವಾಗುವುದೆಂದೂ ಅವನ ವಿಶ್ವಾಸವನ್ನು ದೃಢಪಡಿಸಿಕೊಳ್ಳಬೇಕೆಂದೂ — ಮುಖ್ಯ ಸೇನಾಧಿಪತಿಯಾದ ಭಾಗುರಾಯಣನನ್ನು ಭೇದಿಸುವನು. ಭಾಗುರಾಯಣನ ಮಾತಿನಂತೆ ಭದ್ರಭಟಾದಿಗಳು ಯುದ್ಧ ಮಾಡದೆ ತಟಸ್ಥರಾಗುವರು. ಇದನ್ನರಿತ ರಾಕ್ಷಸನು ಸೇನಾಪತಿಗಳನ್ನು ಎದುರು ಹಾಕಿಕೊಳ್ಳಲು ಇಷ್ಟಪಡದೆ, ತಾನೇ ಯುದ್ಧಮಾಡಿ ನಂದರಿಗೆ ಜಯ ಸಂಪಾದಿಸಿ ಕೊಡಲು ನಿಶ್ಚಯಿಸುತ್ತಾನೆ. ಕಪಟ ಸಂಧಿಗಾಗಿ ಪರ್ವತರಾಜನ ಸಮೀಪಕ್ಕೆ ವಿಷ್ಣುದಾಸನೆಂಬ ನಿಯೋಗಿಯನ್ನು ಕಳುಹಿಸುತ್ತಾನೆ. ಅತ್ತ, ಬಹುವಾಗಿ

ತನ್ನ ಸೇನೆ ಹತವಾದುದರಿಂದಲೂ, ಅಂಗಾರವರ್ಮನಿಂದ ಪುರರಕ್ಷಣೆಯ ಬಗೆಗಿನ ಆತಂಕದ ಪತ್ರ ಬಂದುದರಿಂದಲೂ ಪರ್ವತರಾಜನು, ಚಂದ್ರಗುಪ್ತನನ್ನು ನಂದರಿಗೆ ಒಪ್ಪಿಸಿ ಅವರಿಂದ ಅರ್ಧ ರಾಜ್ಯವನ್ನು ಪಡೆಯುವ ರಾಕ್ಷಸನ ಸಲಹೆಗೆ ಒಪ್ಪುವುದರಲ್ಲಿರುತ್ತಾನೆ. ಶಬರವರ್ಮನಿಂದ ಇದನ್ನರಿತ ಚಾಣಕ್ಯನು — 'ಪಾಟಲೀಪುರ ಕೈವಶವಾಯಿತು, ನಂದರು ಹತರಾದರು, ರಾಕ್ಷಸನು 'ಓಡಿಹೋದನು' ಎಂದು ಡಂಗುರ ಸಾರಿಸಿ ರಾಜಧಾನಿ ಶಾಹುರೀ ನಗರದಲ್ಲಿ ಸಕ್ಕರಿ ಹಂಚಿಸಬೇಕೆಂದೂ, ಶೇಖರನಿಗೆ ಸೇನಾಧಿಪತ್ಯವನ್ನು ಕಟ್ಟಿ ತನ್ನಲ್ಲಿಗೆ ಕಳುಹಿಸಬೇಕೆಂದೂ ಪರ್ವತರಾಜನಿಗೆ ಸಲಹೆ ಮಾಡಿದನು. ಚಾಣಕ್ಯನ ಅಸಾಧಾರಣವಾದ ಬುದ್ಧಿಕೌಶಲಕ್ಕೆ ಮೆಚ್ಚುತ್ತಾ ಪರ್ವತರಾಜನು ಅದನ್ನು ಒಪ್ಪಿದನು.

೮. ನಂದನಿರ್ಯಾಣವು

ಕಪಟ ಮಲಯಕೇತುವು ಕಾಶೀಮಾರ್ಗವಾಗಿ ಗಮಿಸುವನು. ರಾಕ್ಷಸನು ಗಾಢನಿದ್ರೆಯಲ್ಲಿದ್ದಾಗ, ಜಪಶಾಲೆಯಿಂದ ಗುಡಾರದಲ್ಲಿದ್ದ ನಂದರಿಗೆ ಕರೆ ಬರುವುದು. ರಾಕ್ಷಸನ ನಿದ್ರಾಭಂಗ ಮಾಡಲು ಇಷ್ಟಪಡದೆ, ನಂದರು ಜಪಶಾಲೆಯ ಕಡೆಗೆ ಹೊರಡುತ್ತಾರೆ. ವೈರಾಗ್ಯದ ನೆಪದಿಂದ ಅಲ್ಲಿ ಮೈಗಾವಲಿನವರನ್ನು ದೂರವಿಡಬೇಕಾಗುತ್ತದೆ. ಅಷ್ಟರಲ್ಲಿ, ಅವರಿಗೆ ಮಲಯಕೇತುವು ಕಾಶೀರಾಜನಿಗೆ ಸೆರೆಸಿಕ್ಕಿರುವ ವರ್ತಮಾನವು ತಲುಪುವುದು. ಸೆರೆಸಿಕ್ಕಿದವನು ಕಪಟ ಮಲಯಕೇತು. ಇದು ಚಾಣಕ್ಯನ ತಂತ್ರ. ಈ ವೇಳೆಗೆ ಕಾಶೀರಾಜನ ಸೈನಿಕ ವೇಷಧಾರಿಗಳಾದ ಶೇಖರನ ಸೈನಿಕರು ನಂದರನ್ನು ಸುತ್ತುಗಟ್ಟುತ್ತಾರೆ. ಕಪಟ ಮಲಯಕೇತುವು ಖಡ್ಗಹಸ್ತನಾಗಿ ಪಲ್ಲಕ್ಕಿಯಿಂದ ಇಳಿಯಲು, ಶತ್ರುಗಳ ಮೋಸ ಗೊತ್ತಾಗಿ ನಂದರು ಧೈರ್ಯಗೆಡದೆ ಶೌರ್ಯದಿಂದ ಹೋರಾಡಿ ಸಾಯುವರು. ರಾಕ್ಷಸನಿಗೆ ಎಚ್ಚರವಾಗುವಷ್ಟರಲ್ಲಿ ಸರ್ವನಾಶವಾಗಿತ್ತು. ಆತನ ಮೈಗಾವಲಿನ ಜನಕ್ಕೆ ಗೊತ್ತುಗಾರನಾದ ವಿನತನೆಂಬವನು ರಾಕ್ಷಸನಿಗೆ ಶಸ್ತ್ರ ಸನ್ಯಾಸವನ್ನು ಬೋಧಿಸುವನು. ಭಾಗುರಾಯಣನು ಅಂತಃಪುರದ ರಕ್ಷಣೆಯ ದೃಷ್ಟಿಯಿಂದ ಪಟ್ಟಣವನ್ನು ಶತ್ರುಗಳಿಗೆ ಒಪ್ಪಿಸಲು ಹೇಳುವನು. ನಂದ ಸಂಹಾರದಿಂದ ಸಂತೃಪ್ತಿಹೊಂದಿದ ಚಾಣಕ್ಯನು ಶಿಖೆಯನ್ನು ಬಂಧಿಸುವನು. ಪುರರಕ್ಷಕನಾದ ಭಾಗುರಾಯಣನು ಶರಣಾಗತನಾಗುವನು. ನಂದಪತ್ನಿಯರು ಸಹಗಮನ ಮಾಡುವರು.

೯. ವಿಷಕನ್ಯಾಗಮನವು

ರಾಕ್ಷಸನು ತನ್ನ ಮನೆಯವರನ್ನು ಸ್ನೇಹಿತನಾದ ಚಂದನದಾಸನ ಮನೆಯಲ್ಲಿ ಬಿಟ್ಟು ಶಿಲ್ಪಿ ದಾರುವರ್ಮ, ಮಾವುತ ಬರ್ಬರಕ, ಭವನಾಧಿಕಾರಿ, ರಾಜವೈದ್ಯ ಮೊದಲಾದವರಿಗೆ ಚಂದ್ರಗುಪ್ತನನ್ನು ಕೊಲ್ಲಲು ಸೂಚನೆಗಳನ್ನು ಕೊಡುವನು. ಮತ್ತೆ ತಾನು ನಗರದ ಹೊರಗೆ ಇದ್ದು, ಚಾಣಕ್ಯ — ಚಂದ್ರಗುಪ್ತರಲ್ಲಿ ವೈರವನ್ನು ಸಾಧಿಸಲು ಯೋಚಿಸುತ್ತಾನೆ. ಚಂದ್ರಗುಪ್ತನಿಗೆ ವಿಷಕನ್ಯೆಯ ಸಂಪರ್ಕ

ಉಂಟಾಗುವಂತೆ ಮಾಡಲು ಕ್ಷಪಣಕನನ್ನು ನಿಯೋಜಿಸಿ ತಾನು ನಗರವನ್ನು ಬಿಡುತ್ತಾನೆ. ವಿಷಕನ್ಯೆಯನ್ನು ಪರೀಕ್ಷಿಸಿದ ಕ್ಷಪಣಕನು ಪ್ರಕಾರಾಂತರಗಳಿಂದ ಅವಳ ವೃತ್ತಾಂತವನ್ನು ಚಾಣಕ್ಯನಿಗೆ ತಿಳಿಸುವನು. ನಂದರ ನಿಯೋಗ ಬಂದು ಹೇಳಿದ ಸ್ವಲ್ಪ ಮಾತಿಗೆ ವಿಹ್ವಲನಾಗಿ ಕೃತಘ್ನನಾದ ಪರ್ವತರಾಜನನ್ನು ಸಂಹರಿಸುವುದು ಅಗತ್ಯವೆಂದು ಮನಗಂಡು ಚಾಣಕ್ಯನು ಆ ವಿಷಕನ್ಯೆಯನ್ನು ಪರ್ವತರಾಜನ ಬಳಿ ಕಳುಹಿಸಬೇಕೆಂದು ತೀರ್ಮಾನಿಸುವನು.

೧೦. ಪರ್ವತರಾಜನ ಮರಣವು

ತಾನು ಪರರ ರಾಜ್ಯದಲ್ಲಿದ್ದೇನೆಂಬ ವಿಚಾರವನ್ನು ನೆನಸಿಕೊಳ್ಳದ, ಕಾಮುಕನಾದ ಪರ್ವತರಾಜನು ಎಳೆಯ ಸುಂದರಿಯಾದ ವಿಷಕನ್ಯೆಯನ್ನು ನೋಡಿ ಮರುಳಾಗಿ, ಅವಳನ್ನು ಕೂಡಿ ಮೃತನಾಗುವನು. ಪರ್ವತರಾಜನ ಮರಣವನ್ನು ಖಚಿತ ಮಾಡಿಕೊಂಡ ಭಾಗುರಾಯಣನು ಚಾಣಕ್ಯನ ಆದೇಶದಂತೆ, ಮಲಯಕೇತುವಿದ್ದಲ್ಲಿಗೆ ಹೋಗಿ, ರಾಕ್ಷಸನ ಮೇಲೆ ತಪ್ಪು ಅಭಿಪ್ರಾಯ ಉಂಟಾಗುವಂತೆ ವರದಿ ಒಪ್ಪಿಸಿ, ಅದರೊಟ್ಟಿಗೆ ಚಾಣಕ್ಯನಿಂದ ಬರಲಿರುವ ಆಪತ್ತನ್ನೂ ತಿಳಿಸಿ ಅವನನ್ನು ರಾಜಧಾನಿಗೆ ಹೋಗುವಂತೆ ಪ್ರೇರೇಪಿಸುವನು. ರಾಜಕೀಯವಾಗಿ ಉಪಯುಕ್ತವೆನಿಸುವ ಹಿತವಾಕ್ಯಗಳನ್ನು ಹೇಳಿದ ಭಾಗುರಾಯಣನನ್ನು ತನ್ನ ಜತೆಯಲ್ಲಿಯೇ ಕರೆದುಕೊಂಡು ಮಲಯಕೇತುವು ತನ್ನ ರಾಜ್ಯಕ್ಕೆ ಹಿಂದಿರುಗುವನು.

೧೧. ಸರ್ವಾರ್ಥಸಿದ್ಧಿ ರಾಜನ ಪಂಡತ್ವವು

ಚಂದ್ರಗುಪ್ತನ ರಾಜ್ಯಾಭಿಷೇಕದ ಬಗೆಗಿನ ಡಂಗುರ ಸಾರಲಾಗುವುದು. ಚಾಣಕ್ಯನು ರಾಕ್ಷಸನಿಂದ ನಿಯಮಿತರಾದ ದಾರುವರ್ಮರೇ ಮೊದಲಾದವರ ಕೃತ್ರಿಮಗಳನ್ನು ಬಯಲಿಗೆಳೆದು ಅವರನ್ನು ಶಿಕ್ಷಿಸುವನು. ಅರ್ಧ ರಾಜ್ಯದ ಆಶೆಯಿಂದ ಪರ್ವತರಾಜನ ತಮ್ಮನಾದ ವಿರೋಧಕನು ಚಾಣಕ್ಯನ ತಂತ್ರಕ್ಕೆ ಬಲಿಯಾಗಿ ಸಾಯುವನು. ಇತ್ತ ಸರ್ವಾರ್ಥಸಿದ್ಧಿಯು ಚಂದ್ರಗುಪ್ತನ ಹೊಗಳಿಕೆಯನ್ನು ಸಹಿಸಲಾರದೆ ಸುರಂಗಮಾರ್ಗದಿಂದ ನೈಮಿಶಾರಣ್ಯಕ್ಕೆ ಹೋಗಿ ನೆಲೆಸುವನು. ರಾಜನಿಗೆ ದತ್ತು ತಂದು, ನಂದ ವಂಶವನ್ನು ಮುಂದುವರಿಸಬಹುದೆಂಬ ರಾಕ್ಷಸನ ಯೋಚನೆಯನ್ನು ಶಂಕಿಸಿ, ಚಾಣಕ್ಯನು ಚಂಡಾಲರಿಂದ ರಾಜನನ್ನು ಕೊಲ್ಲಿಸುತ್ತಾನೆ. ಸುನಂದಾದೇವಿ ಸಹಗಮನ ಮಾಡುತ್ತಾಳೆ. ಕ್ಷಾಮಕನೆಂಬ ಬೀಸಣಿಗೆಯ ಭೃತ್ಯ ನಗರಕ್ಕೆ ಹಿಂದಿರುಗುತ್ತಾನೆ.

೧೨. ಮಲಯಕೇತು ರಾಕ್ಷಸರ ಸಖ್ಯವು

ಸರ್ವಾರ್ಥಸಿದ್ಧಿರಾಯನ ಮರಣವನ್ನು ಕ್ಷಾಮಕನಿಂದ ಕೇಳಿ ತಿಳಿದ ರಾಕ್ಷಸನು ತನ್ನ

ಪ್ರಯತ್ನ ವ್ಯರ್ಥವಾದುದಕ್ಕಾಗಿ ದುಃಖಿಸುವನು. ಸಮಾನದುಃಖಿಯಾದ ಮಲಯಕೇತುವನ್ನು ಆಶ್ರಯಿಸಿ, ಚಾಣಕ್ಯ — ಚಂದ್ರಗುಪ್ತರನ್ನು ನಾಶಮಾಡುವ ಆಲೋಚನೆಯಿಂದ ಅವನಲ್ಲಿಗೆ ಬರುವನು. ರಾಕ್ಷಸನ ಯೋಗ್ಯತೆಯನ್ನು ತಂದೆಯಿಂದ ಕೇಳಿ ತಿಳಿದಿದ್ದ ಮಲಯಕೇತುವು, ಅವನನ್ನು ಗೌರವಿಸಿ, ಪ್ರೀತಿ ದ್ಯೋತಕವಾಗಿ ಕೊಟ್ಟ ಆಭರಣವನ್ನು ರಾಕ್ಷಸನು ಸ್ವೀಕರಿಸುವನು. ಅಲ್ಲಿ ಸರ್ವಾಧಿಕಾರವನ್ನು ವಹಿಸಿಕೊಂಡ ರಾಕ್ಷಸನ ರಾಜತಂತ್ರ ವಿಚಾರ ಕೌಶಲ್ಯವನ್ನೂ ಆತನ ಜ್ಞಾನ ಶಕ್ತಿಯನ್ನೂ ಪ್ರಜೆಗಳೆಲ್ಲರೂ ಕೊಂಡಾಡತೊಡಗಿದರು.

೧೩. ರಾಕ್ಷಸ ಮುದ್ರಿಕಾ ಗ್ರಹಣವು

ಚಾಣಕ್ಯನ ಆದೇಶದಂತೆ ಭದ್ರಭಟಾದಿಗಳು ಮಲಯಕೇತುವನ್ನಾಶ್ರಯಿಸುವರು. ರಾಕ್ಷಸನು ಅವರಿಗೆ ಅನುಕೂಲವಲ್ಲದ ಉದ್ಯೋಗಗಳಲ್ಲಿ ನೇಮಿಸಿ, ಅವರ ಕೈಯ ದ್ರವ್ಯಗಳನ್ನು ವ್ಯಯಮಾಡಿಸುತ್ತ ಅವರ ಮನೋಭಾವವನ್ನು ತಿಳಿಯಬೇಕೆಂದು ನಿರೀಕ್ಷಿಸುತ್ತಿದ್ದನು. ಇತ್ತ ರಾಕ್ಷಸನ ಪತ್ನಿಪುತ್ರರು ಚಂದನದಾಸನ ಬಳಿಯಲ್ಲಿದ್ದಾರೆ, ರಾಕ್ಷಸನ ಹೆಂಡತಿ ಗರ್ಭಿಣಿ ಎಂಬುದನ್ನು ಮಗಾಳನಿಂದ ಅರಿತ ಚಾಣಕ್ಯನು, ಮಂತ್ರಸಾನಿಯ (ಸೂಲಗಿತ್ತಿಯ) ಮೂಲಕ ಉಪಾಯವಾಗಿ ರಾಕ್ಷಸನ ಮುದ್ರಿಕೆಯನ್ನು ತರಿಸುವನು. ಆ ಬಳಿಕ ಒಂದು ಕಪಟ ಲೇಖನವನ್ನು ಸೃಷ್ಟಿಮಾಡಿ, ಶಕಟದಾಸನ ಕೈಯಿಂದ ಅದನ್ನು ಬರೆಯಿಸಿ, ಮುಂದಿನ ಕಾರ್ಯಸಾಧನೆಗಾಗಿ ಅದನ್ನು ಸಿದ್ಧಾರ್ಥಕನಿಗೆ ಕೊಡುವನು. ಇದಾದ ಮೇಲೆ ಪರ್ವತರಾಜನ ಆಭರಣಗಳನ್ನು ಚಾಣಕ್ಯನು ವಿಶ್ವಾವಸುವೇ ಮೊದಲಾದ ಮೂವರು ಬ್ರಾಹ್ಮಣರಿಗೆ ದಾನ ಕೊಡಿಸುವನು. ಆ ಬಳಿಕ ರಾಕ್ಷಸನ ಸ್ನೇಹಿತರೆನ್ನುವ ಕಾರಣಕ್ಕಾಗಿ — ಕ್ಷಪಣಕನನ್ನು ಊರಿನಿಂದ ಹೊರ ಹೊರಡಿಸುವಂತೆ ಮತ್ತು ಶಕಟದಾಸನನ್ನು ಶೂಲಕ್ಕೆ ಏರಿಸುವಂತೆ — ಚಾಣಕ್ಯನು ಅಪ್ಪಣೆ ಮಾಡುವನು. ತನ್ನ ವಶದಲ್ಲಿದ್ದ ರಾಕ್ಷಸನ ಪತ್ನೀ ಪುತ್ರರನ್ನು ಒಪ್ಪಿಸಲು ನಿರಾಕರಿಸಿದ ಚಂದನದಾಸನ ಐಶ್ವರ್ಯವನ್ನು ರಾಜಕೋಶಕ್ಕೆ ಸೇರಿಸಿ, ಚಂದ್ರಗುಪ್ತನಿಂದ ಶಿಕ್ಷೆ ವಿಧಿಸುವುದಾಗಿ ಚಾಣಕ್ಯನು ಚಂದನದಾಸನಿಗೆ ತಿಳಿಸುವನು.

೧೪. ಕ್ಷಪಣಕಾಪಮಾನವು

ಚಂದ್ರಗುಪ್ತನು ಏರ್ಪಡಿಸಿದ್ದ ಕೌಮುದೀ ಮಹೋತ್ಸವವನ್ನು ಚಾಣಕ್ಯನು ನಿಲ್ಲಿಸಿ ಬಿಡುವನು. ಇತ್ತ ಹಾವಾಡಿಗನ ವೇಷದಲ್ಲಿದ್ದ ರಾಕ್ಷಸನ ಚಾರನಾದ ವಿರಾಧಗುಪ್ತನು ರಾಕ್ಷಸನಿಗೆ ಪಾಟಲೀಪುರದ ಎಲ್ಲ ಸಮಾಚಾರವನ್ನೂ, ಅದರೊಂದಿಗೆ ತಾನು ಕಂಡ ಕ್ಷಪಣಕಾಪಮಾನ, ಶಕಟದಾಸನ ಶೂಲಾರೋಹಣದ ರಾಜಾಜ್ಞೆಗಳನ್ನೂ ವಿವರಿಸುವನು. ಇದನ್ನು ಕೇಳಿದ ರಾಕ್ಷಸನ ದುಃಖ ಉಕ್ಕಿ ಬರುತ್ತದೆ. ಈ ಸಮಯಕ್ಕೆ ಸರಿಯಾಗಿ ಶಕಟದಾಸನು ಸಿದ್ಧಾರ್ಥಕನೊಂದಿಗೆ ಅಲ್ಲಿಗೆ ಬಂದು ತನ್ನ ಪ್ರಾಣವುಳಿಸಿದ ಸಿದ್ಧಾರ್ಥಕನನ್ನು ಪರಿಚಯಿಸುತ್ತಾನೆ. ಶಕಟದಾಸನ ಆಗಮನದಿಂದ ಸಂತೋಷಗೊಂಡ ರಾಕ್ಷಸನು, ಮಲಯಕೇತುವು ತನಗೆ

ಕೊಟ್ಟಿದ್ದ ಆಭರಣಗಳನ್ನು ಸಿದ್ಧಾರ್ಥಕನಿಗೆ ಬಹುಮಾನವಾಗಿ ಕೊಡುವನು. ಸಿದ್ಧಾರ್ಥಕನು ತನ್ನಲ್ಲಿದ್ದ ಮುದ್ರಿಕೆಯನ್ನು ರಾಕ್ಷಸನ ವಶಕ್ಕೆ ಒಪ್ಪಿಸಿ ಅವನ ಸೇವೆಯಲ್ಲಿಯೇ ನಿಲ್ಲಬಯಸುವನು. ಅದನ್ನು ಮನ್ನಿಸಿದ ರಾಕ್ಷಸನು ಇನ್ನು ಮುಂದಿನ ತನ್ನ ಎಲ್ಲ ಪತ್ರವ್ಯವಹಾರಗಳಿಗೂ ಅದರಿಂದಲೇ ಮುದ್ರೆಯೊತ್ತ ಬೇಕೆಂದು ಆದೇಶಿಸಿ, ಹೆಚ್ಚಿನ ವರ್ತಮಾನಗಳ ಸಂಗ್ರಹಕ್ಕಾಗಿ ಗೂಢಚಾರರನ್ನು ನೇಮಿಸುವನು.

೧೫. ಚಾಣಕ್ಯ ಚಂದ್ರಗುಪ್ತರ ಕಪಟಕಲಹವು

ಚಾಣಕ್ಯನಿಂದ ಕಳುಹಿಸಲ್ಪಟ್ಟ ವಿಶ್ವಾವಸುವೇ ಮೊದಲಾದವರು ರಾಕ್ಷಸನಲ್ಲಿಗೆ ಬಂದು ಆಭರಣವನ್ನು ಮಾರಾಟ ಮಾಡುವರು. ಕೌಮುದೀ ಮಹೋತ್ಸವವನ್ನು ನಿಲ್ಲಿಸಿದುದರ ವಿಷಯದಲ್ಲಿ ಚಾಣಕ್ಯ — ಚಂದ್ರಗುಪ್ತರಿಗೆ ಕಪಟ ಕಲಹ ನಡೆದು ಚಾಣಕ್ಯನು ಪ್ರಾಧಾನ್ಯಶಸ್ತ್ರವನ್ನು ತ್ಯಜಿಸಿಹೋಗುವನು. ಚಂದ್ರಗುಪ್ತನೂ ಚಾಣಕ್ಯನನ್ನು ಮಂತ್ರಿಪದದಿಂದ ತೆಗೆಯಲಾಗಿದೆ — ಎಂದು ಡಂಗುರ ಸಾರಿಸುವನು. ಚಾಣಕ್ಯ — ಚಂದ್ರಗುಪ್ತರಿಗೆ ವೈಮನಸ್ಯವುಂಟಾಗಿದೆ ಎಂಬ ವಾರ್ತೆ ದೇಶ ವಿದೇಶಗಳಲ್ಲಿ ಹಬ್ಬುವುದು. ಇದನ್ನು ಕೇಳಿದ ರಾಕ್ಷಸನಿಗೆ ಹರ್ಷವುಂಟಾಗಿ ಮಲಯಕೇತುವಿನೊಂದಿಗೆ ದಂಡೆತ್ತಿ ಹೋಗಲು ನಿರ್ಧರಿಸುವನು.

೧೬. ಮಲಯಕೇತು — ರಾಕ್ಷಸರ ಸಂವಾದವು

ಕರಭಕನೆಂಬ ಗೂಢಚಾರನು ಪಾಟಲೀಪುರದ ವಿಷಯಗಳನ್ನೆಲ್ಲಾ ತಿಳಿಸುವನು. ಆಗ ಅಪಶಕುನಗಳುಂಟಾಗುವುವು. ತಲೆನೋವಿನಿಂದ ನರಳುತ್ತಿದ್ದ ಅಮಾತ್ಯನನ್ನು ನೋಡಲು, ಭಾಗುರಾಯಣ ನೊಡನೆ ಬಂದಿದ್ದ ಮಲಯಕೇತುವು ಮರೆಯಲ್ಲಿ ನಿಂತು ಗೂಢಚಾರನೊಂದಿಗಿನ ರಾಕ್ಷಸನ ಸಂವಾದವನ್ನು ಆಲಿಸುವನು. ಸಭೆಯಲ್ಲಿ ಚಂದ್ರಗುಪ್ತನು ರಾಕ್ಷಸನನ್ನು ಹೊಗಳಿದನು, ಸಚಿವ ಪದವಿ ಚಾಣಕ್ಯನ ಕೈ ಬಿಟ್ಟಿತು — ಎಂದು ಕರಭಕನು ಹೇಳಿದ ಮಾತಿಗೆ ಭಾಗುರಾಯಣನು ವಿಪರೀತ ಅರ್ಥ ಕಲ್ಪಿಸಿ, ರಾಕ್ಷಸನ ವಿಷಯವಾಗಿ ಮಲಯಕೇತುವಿನ ಮನಸ್ಸಿನಲ್ಲಿ ಶಂಕೆಯುಂಟಾಗುವಂತೆ ಮಾಡುವನು. ಅಮಾತ್ಯರಾಕ್ಷಸನಿಂದ ಚಂದ್ರಗುಪ್ತನ ಯೋಗ್ಯತೆಯ ಇತಿಮಿತಿಗಳನ್ನು ಕೇಳಿ ತಿಳಿದ ಮಲಯಕೇತುವು ಸೇನೆಯನ್ನು ಪಾಟಲೀ ಪುರದ ವಿಜಯ ಯಾತ್ರೆಗೆ ಹೊರಡಿಸುವನು.

೧೭. ರಾಕ್ಷಸ ನಿರಸನವು

ಪಾಟಲೀಪುರಕ್ಕೆ ಹೋಗುವವರಿಗೆ ಮುದ್ರೆಯನ್ನು ಕೊಡುವ ಕೆಲಸವನ್ನು ಭಾಗುರಾಯಣನೇ ಇಟ್ಟುಕೊಳ್ಳುತ್ತಾನೆ. ಮುದ್ರೆಯನ್ನು ಕೇಳಲು ಬಂದ ಕ್ಷಪಣಕನಿಂದ ರಾಕ್ಷಸನೇ ಪರ್ವತರಾಜನ ಮರಣಕ್ಕೆ ಕಾರಣವೆಂಬ ಮಾತು ಹೊರಬೀಳುತ್ತದೆ. ಈ ಮಾತನ್ನು ಕೇಳಿದ ಮಲಯಕೇತುವಿಗೆ ಪಿತೃಶೋಕ ಉಕ್ಕಿ

ಹರಿಯುತ್ತದೆ; ರಾಕ್ಷಸನ ನಿಸ್ಪೃಹತೆಯ ವಿಷಯದಲ್ಲಿ ಅನುಮಾನ ಹೆಚ್ಚಾಗುತ್ತದೆ. ಇಷ್ಟೇ ಅಲ್ಲದೆ ಸಿಕ್ಕಿಬಿದ್ದ ಸಿದ್ಧಾರ್ಥಕನಿಂದ ಆಭರಣದ ಪೆಟ್ಟಿಗೆ ಲೇಖನಗಳು ಬಯಲಿಗೆ ಬಂದು, ರಾಕ್ಷಸನು ಚಂದ್ರಗುಪ್ತನ ಪಕ್ಷಪಾತಿ ಎನ್ನುವುದು ದೃಢವಾಗುತ್ತದೆ. ಕ್ರೋಧಾಂಧನಾದ ಮಲಯಕೇತುವಿನ ಅವಿವೇಕದಿಂದ ಚಿತ್ರವರ್ಮಾದಿಗಳು ಹತರಾಗುತ್ತಾರೆ. ಹತಾಶನಾದ ರಾಕ್ಷಸನು ಚಂದನದಾಸನನ್ನು ಪ್ರಾಣಾಪಾಯದಿಂದ ಪಾರುಮಾಡುವುದೇ ತನ್ನ ಮುಂದಿನ ಕರ್ತವ್ಯವೆಂದು ನಿರ್ಧರಿಸಿ ಪಾಟಲೀಪುರದತ್ತ ಸಾಗುವನು.

೧೮. ಚಂದ್ರಗುಪ್ತ ಮಹಾರಾಜನ ಪಟ್ಟಾಭಿಷೇಕ

ಭದ್ರಭಟಾದಿಗಳು ಮಲಯಕೇತುವನ್ನು ಸೆರೆಹಿಡಿದು ಪಾಟಲೀಪುರಕ್ಕೆ ಕರೆತರುತ್ತಾರೆ. ಇತ್ತ ಚಂದನದಾಸನ ಬಿಡುಗಡೆಗಾಗಿ ಹೊರಟಿದ್ದ ರಾಕ್ಷಸನಿಗೆ ಪಾಟಲೀಪುರದ ಉದ್ಯಾನದಲ್ಲಿ ನೇಣುಹಾಕಿಕೊಳ್ಳುತ್ತಿದ್ದ ಪುರುಷನೊಬ್ಬನಿಂದ ಚಂದನದಾಸನನ್ನು ಶೂಲಕ್ಕೇರಿಸುವ ವಿಚಾರ ತಿಳಿಯುತ್ತದೆ. ವಧಾಸ್ಥಾನಕ್ಕೆ ಬಂದು ಚಂದನದಾಸನ ಬದಲಾಗಿ ತನ್ನನ್ನೇ ಶೂಲಕ್ಕೇರಿಸಬೇಕೆಂದು ರಾಕ್ಷಸನು ಕೇಳಿಕೊಳ್ಳುವನು. ಚಾಣಕ್ಯನ ಅಪ್ಪಣೆಯಿಲ್ಲದೆ ಇದು ಅಸಾಧ್ಯವೆಂದು ತಿಳಿದಾಗ ನಿರುಪಾಯನಾಗಿ ಆತ ಚಾಣಕ್ಯನ ಬಳಿ ಹೋಗುವನು. ತನ್ನ ಬಳಿ ಬಂದ ರಾಕ್ಷಸನನ್ನು ನೋಡಿ ಸಂತೋಷಗೊಂಡ ಚಾಣಕ್ಯನು, ತನ್ನ ಎಲ್ಲ ತಂತ್ರಗಳನ್ನೂ ಅದರ ಹಿಂದಿದ್ದ ಧಾರ್ಮಿಕ ಕಾರಣಗಳನ್ನೂ ತಿಳಿಸುತ್ತಾನೆ. ಚಂದನದಾಸನು ಬದುಕಬೇಕೆಂದಿದ್ದರೆ ಪ್ರಾಧಾನ್ಯ ಶಸ್ತ್ರವನ್ನು ಪರಿಗ್ರಹಿಸಬೇಕೆಂದು ಆಗ್ರಹಿಸುತ್ತಾನೆ. ನಿರ್ವಾಹವಿಲ್ಲದೆ ಅಮಾತ್ಯನು ಚಂದ್ರಗುಪ್ತನ ಸಚಿವ ಪದವಿಯನ್ನು ಸ್ವೀಕರಿಸುವನು. ಮಲಯಕೇತು ಚಂದ್ರಗುಪ್ತರು ಸ್ನೇಹಿತರಾದರು. ವೈಭವದಿಂದ ಚಂದ್ರಗುಪ್ತನ ಪಟ್ಟಾಭಿಷೇಕವನ್ನು ನೆರವೇರಿಸಿ, ರಾಜ್ಯಭಾರದ ವಿಷಯದಲ್ಲಿ ಅವನಿಗೆ ಸರಿಯಾದ ತಿಳುವಳಿಕೆ ಕೊಟ್ಟು ಚಾಣಕ್ಯನು ತಪೋವನಕ್ಕೆ ತೆರಳುವನು. ಇತ್ತ ಚಂದ್ರಗುಪ್ತನು ವೈಭವದಿಂದ ಸಾಮ್ರಾಜ್ಯ ಪದವಿಯನ್ನು ಅನುಭವಿಸುತ್ತಿದ್ದನು.

....

ಶೀರ್ಷಿಕೆ

'ಮುದ್ರಾರಾಕ್ಷಸ' ನಾಟಕದ ಪೂರ್ವಕಥೆಯನ್ನು ಬರೆದ ದಾಕ್ಷಿಣಾತ್ಯರಾದ ಮಹಾದೇವ, ರವಿನರ್ತಕ ಹಾಗೂ ಢುಂಢಿರಾಜರ[1] ಕೃತಿಗಳನ್ನು ಕೆಂಪುನಾರಾಯಣನು ನೋಡಿರುವ ಸಾಧ್ಯತೆಯಿರುವುದರಿಂದ ಈ ಎಲ್ಲರ ಹೇಳಿಕೆಗಳನ್ನು ತೌಲನಿಕವಾಗಿ ನೋಡಲಾಗುವುದು.

ಒಂದು ಒಳ್ಳೆಯ ಕೃತಿಯನ್ನು ರಚನೆ ಮಾಡುವ ಕೃತಿಕಾರನು ತನ್ನ ಕೃತಿಗೆ ತನಗೆ ಒಪ್ಪಿಗೆಯಾಗುವ ಹೆಸರನ್ನಿಡುತ್ತಾನೆ. ಅದು ಅವನ ಹಕ್ಕು ಕೂಡಾ. ಪೂರ್ವೋತ್ತರ ವಿರೋಧವಿಲ್ಲದಂತೆ ಸಂವಿಧಾನವನ್ನು ರಚಿಸಿ, ಕ್ರಿಯಾ ಸಮೂಹವನ್ನು ವಿಮರ್ಶೆಗೈದು ಕೃತಿ ರಚನೆ ಮಾಡಿದ ಕೆಂಪುನಾರಾಯಣನು

ತನ್ನ ಕೃತಿಗೆ ಅನ್ವರ್ಥಕವಾಗಿ 'ಮುದ್ರಾಮಂಜೂಷ' ವೆಂದು ಹೆಸರಿಟ್ಟಿದ್ದಾನೆ.

ಶ್ರೀ ಎಚ್.ಎಂ. ಶಂಕರನಾರಾಯಣರಾಯರು (ಕೆಂಪುನಾರಾಯಣ: ಕವಿ ಮತ್ತು ಕೃತಿ ಪು.42) " 'ಮುದ್ರಾರಾಕ್ಷಸ' ಎಂಬ ಹೆಸರು ನಾಟಕಕ್ಕೆ ಚೆನ್ನಾಗಿ ಒಪ್ಪುತ್ತದೆ (ಮತ್ತೆ ಅಡಿಟಿಪ್ಪಣಿಯಲ್ಲಿ). ಆದರೆ 'ಮುದ್ರಾಮಂಜೂಷ' ಎಂಬ ಹೆಸರು ಹಾಗಲ್ಲ. ಮುದ್ರೆಯಿಂದ ಮುದ್ರಿತವಾದ ಪೆಟ್ಟಿಗೆ ಎಂಬ ಹೆಸರಿನಿಂದ ಪೂರ್ವಕಥೆ ಸ್ವಲ್ಪವೂ ಸೂಚಿತವಾಗುವುದಿಲ್ಲ. ಗದ್ಯ ಗ್ರಂಥದ (ಶೀರ್ಷಿಕೆಯ?) ಔಚಿತ್ಯವನ್ನು ಸಮರ್ಥಿಸುವುದು ಕಷ್ಟ " ಎಂದಿದ್ದಾರೆ.

ನಾಟಕದಲ್ಲಿ ಬಂದಿದ್ದಂತೆ ಇಲ್ಲಿಯೂ ಸಿದ್ಧಾರ್ಥಕನು ರಾಕ್ಷಸನ ಮುದ್ರೆ ಹಾಕಿದ ಪೆಟ್ಟಿಗೆಯನ್ನು ಕೊಂಡುಹೋಗುತ್ತಿದ್ದಾಗ ಭಾಗುರಾಯಣ, ಮಲಯಕೇತುವಿಗೆ ಸಿಕ್ಕಿಬಿದ್ದ ವಿಚಾರವು ಇದೆಯಾದರೂ ಕೃತಿಯ ಶೀರ್ಷಿಕೆಯನ್ನು ಆ ಉದ್ದೇಶದಿಂದ ಹೇಳಿದೆ ಎಂದು ತಿಳಿಯಬೇಕಾಗಿಲ್ಲ. ಇಲ್ಲಿ ಕವಿಯು ತನ್ನ ಸಮಗ್ರ ಕೃತಿಯನ್ನು 'ರಾಜನೀತಿಕೋಶ' ದ ಪೆಟ್ಟಿಗೆಗೆ ಹೋಲಿಸಿದ್ದು ಅದನ್ನು 'ಮುದ್ರೆಯೊತ್ತಿ ಇಟ್ಟಿದೆ' ಎಂಬರ್ಥದಲ್ಲಿ 'ಮುದ್ರಾಮಂಜೂಷ' ವೆಂದು ಕರೆದಿದ್ದಿರಬಹುದು. ಸೂಕ್ಷ್ಮ ಬುದ್ಧಿಯೆಂಬ ಕೀಲಿಕೈಯುಳ್ಳ ನಿಷ್ಣಾತರು ಮಾತ್ರ ಈ ಕೋಶವನ್ನು ತೆರೆಯಲು ಸಮರ್ಥರು — ಎಂದು ಇದು ಧ್ವನಿಸುತ್ತದೆ. ಹಾಗಾಗಿ ಇಲ್ಲಿ ಪೂರ್ವಕಥೆ ಎಂಬ ಭೇದಭಾವ ಇಲ್ಲದೇ ಸಮಗ್ರ ಕೃತಿಯೇ ಸೂಚಿತವಾಗಿದೆ ಎಂದು ತಿಳಿಯಬಹುದು.

'ಮುದ್ರಾರಾಕ್ಷಸ' ನಾಟಕದ ಪೂರ್ವಕಥೆಯನ್ನು ಬರೆದ ದಾಕ್ಷಿಣಾತ್ಯರಾದ ಮಹಾದೇವ, ರವಿನರ್ತಕ ಹಾಗೂ ಢುಂಢಿರಾಜರ[1] ಕೃತಿಗಳನ್ನು ಕೆಂಪುನಾರಾಯಣನು ನೋಡಿರುವ ಸಾಧ್ಯತೆಯಿರುವುದರಿಂದ ಆ ಎಲ್ಲರ ಹೇಳಿಕೆಗಳನ್ನು ತೌಲನಿಕವಾಗಿ ನೋಡಲಾಗುವುದು.

ಮಹಾದೇವ	ರವಿನರ್ತಕ	ಢುಂಢಿರಾಜ	ಕೆಂಪುನಾರಾಯಣ
1. ಪಾಟಲೀಪುರವೆಂಬ ನಗರದಲ್ಲಿ ಸರ್ವಾರ್ಥಸಿದ್ಧಿಯೆಂಬ ರಾಜನು ಚತುಸ್ಸಾಗರ ಪರ್ಯಂತ ಭೂಮಿಯನ್ನು ಕಾಪಾಡುತ್ತಿದ್ದನು.	1. ಮಂದಾಕಿನೀ ತಟದಲ್ಲಿರುವ ಪಾಟಲೀಪುತ್ರ ನಗರದ ರಾಜನು ಸರ್ವಾರ್ಥಸಿದ್ಧಿಯು ಅಥ ನಂದನು.	1. ಪುರಾಣದಲ್ಲಿ ' ನಂದಾಂತ ಕ್ಷತ್ರಿಯಕುಲ ' ವೆಂದು ಹೇಳಿದ್ದರೂ ಈ ಕಲಿಯುಗದ ಆದಿಯಲ್ಲಿ ' ನವ ಕೋಟಿ ಶತೇಶ್ವರ ' ನಾದ ಸರ್ವಾರ್ಥ ಸಿದ್ಧಿಯೆಂಬ ರಾಜನಿದ್ದನು.	1. ಗೌಡದೇಶದಲ್ಲಿ ಹರಿಯುವ ಗಂಗಾ ನದಿ ದಡದಲ್ಲಿದ್ದ ಪಾಟಲೀಪುರವೆಂಬ ನಗರದಲ್ಲಿ ಚಂದ್ರವಂಶ ಪರಂಪರಾಪ್ರಾಪ್ತನಾಗಿ ಬಂದ ಸರ್ವಾರ್ಥಸಿದ್ಧಿಯೆಂಬ ರಾಜನಿದ್ದನು.
2. ಆ ರಾಜನಿಗೆ ಇಬ್ಬರು ಹೆಂಡತಿಯರು. ಹಿರಿಯಳಾದ ಸುನಂದೆ ಕ್ಷತ್ರಿಯ ವಂಶದವಳು. ಮುರಾ ಎಂಬ ಎರಡನೆಯವಳು ಸೂತಪುತ್ರಿಯು.	2. ಆ ರಾಜನು ಸುನಂದೆಯೆಂಬ ರಾಜಪುತ್ರಿಯನ್ನು ಮದುವೆಯಾಗಿದ್ದನಲ್ಲದೇ ಮನ್ಮಥನ ಮಹಾಸ್ತ್ರದಂತಿದ್ದ ಮುರೆಯೆಂಬ ಶೂದ್ರ ಪುತ್ರಿಯನ್ನು ಸ್ವೀಕರಿಸಿದ್ದನು.	2. ರಾಜನಿಗೆ ಸುನಂದೆಯು ಹಿರಿಯ ರಾಣಿಯು. ಶೀಲ, ಲಾವಣ್ಯ, ಸಂಪತ್ತಿನಿಂದ ಕೂಡಿದ ವೃಷಲಾತ್ಮಜೆಯಾದ ಮುರೆಯೂ ಆತನಿಗೆ ಪ್ರಿಯಳಾಗಿದ್ದಳು.	2. ಅಂತಃಪುರ ಸ್ವಾಮಿನಿಯಾದ ಸುನಂದಾ ದೇವಿಯು ಪಟ್ಟಮಹಿಷಿಯು. ಅತಿ ಪ್ರೇಮಾಸ್ಪದಳಾದ ಮುರಾದೇವಿಯು ಶೂದ್ರಪುತ್ರಿಯಾಗಿದ್ದಳು.
3. ರಾಕ್ಷಸನೆಂಬುವನು ಮಂತ್ರಿಯು.	3. ತೀಕ್ಷ್ಣ ಬುದ್ಧಿಯುಳ್ಳ ರಾಕ್ಷಸನೆಂಬುವನು ಆತನಿಗೆ ಮಂತ್ರಿಯಾಗಿದ್ದನು. ಆ ಮಂತ್ರಿಯು ಕೌಲವ ಶೀಲನು. ಯುದ್ಧದಲ್ಲಿ ಆಸಕ್ತಿಶೂನ್ಯನು. ಅಂತು ನಿಜವಾಗಿಯೂ ರಾಕ್ಷಸನಾಗಿದ್ದನು (ಬೌದ್ಧ ಪಕ್ಷಪಾತಿ).	3. ಬ್ರಾಹ್ಮಣರಾದ ವಕ್ರನಾಸಾದಿಗಳು ಆತನ ಕುಲಾಮಾತ್ಯರು. ಅವರಲ್ಲಿ ರಾಕ್ಷಸನೆಂಬ ಬ್ರಾಹ್ಮಣನು ದಂಡನೀತಿ ಪ್ರವೀಣನೂ ಶೂರನೂ ಆಗಿದ್ದು ನಂದರ ಆದರಕ್ಕೆ ಪಾತ್ರನಾಗಿದ್ದನು.	3. ವಕ್ರನಾಸನೆಂಬವನೇ ಮೊದಲಾದ ಅಷ್ಟ ಮಂತ್ರಿಗಳು. ಅವರಲ್ಲಿ ಸಂಧಿವಿಗ್ರಹಿಯಾದ ಅಮಾತ್ಯರಾಕ್ಷಸನೆಂಬವನು ರಾಯನಿಗೆ ಶುಭವನ್ನೇ ಕೋರುತ್ತಿದ್ದನು. ಅಲ್ಲದೇ ಆ ರಾಯನಿಗೆ ಸಿಂಹಬಲನೇ ಮುಂತಾದ ಅಷ್ಟ ಸೇನಾ ನಾಯಕರಿದ್ದರು.
4. ಅರಸನು ಸಂತತಿಗಾಗಿ ತಪಸ್ಸು ಮಾಡಿದಾಗ್ಯೂ ಪುತ್ರಭಾಗ್ಯ	4. ರಾಜನು ಮಕ್ಕಳಾಗಲಿಲ್ಲವೆಂಬ ಚಿಂತೆಯಲ್ಲಿದ್ದಾಗ ಬ್ರಾಹ್ಮಣಶ್ರೇಷ್ಠ	4. ಒಮ್ಮೆ ಆತನು ಮನೆಗೆ ಬಂದ ತಪೋನಿಷ್ಠನಾದ ಅತಿಥಿಯನ್ನು	4. ರಾಜನು ಮಕ್ಕಳಿಲ್ಲದ ಚಿಂತೆಯಲ್ಲಿದ್ದಾಗ ಸೂರ್ಯನಂತೆ ಮಹಾತೇಜಸ್ವಿಗಳಾದ

ಒರ್ಗದಿದ್ದ ಸಮಯದಲ್ಲಿ ಒಬ್ಬ ತಪಸ್ವಿಯು ಬಂದನು. ಈತನ ಅನುಗ್ರಹದಿಂದ ಪುತ್ರಲಾಭ ವಾಗುವುದೆಂದು ತೀರ್ಮಾನಿಸಿ ರಾಜನು ಪತ್ನಿಯರೊಡಗೂಡಿ ಆತನನ್ನು ಪೂಜಿಸಿದನು.	ನೊಬ್ಬನು ಆ ಪಟ್ಟಣಕ್ಕೆ ಬಂದನು. ಆತನನ್ನು ಅರ್ಘ್ಯ ಪಾದ್ಯಾದಿಗಳಿಂದ ರಾಜನು ಸತ್ಕರಿಸಿದನು.	ಅರ್ಘ್ಯ ಪಾದ್ಯಾದಿಗಳಿಂದಲೂ, ಭಕ್ತಿಯಿಂದಲೂ ಪತ್ನಿಯರೊಡಗೂಡಿ ಪೂಜಿಸಿದನು.	ವೀತಿಹೋತ್ರರೆಂಬ ಮುನಿಶ್ರೇಷ್ಠರು, ಇಬ್ಬರು ಶಿಷ್ಯರಿಂದೊಡಗೂಡಿ ಬಂದರು. ಆಗ ರಾಜನು ಪತ್ನಿಯರಿಂದೊಡಗೂಡಿ ಪಾದಪ್ರಕ್ಷಾಲನಾದಿ ಷೋಡಶೋಪಚಾರಗಳನ್ನು ಮಾಡಿದನು.
5. ಮುನಿಯ ಪಾದೋದಕವನ್ನು ರಾಜನು ಪ್ರೋಕ್ಷಣೆ ಮಾಡಲು ಸುನಂದಾದೇವಿಯ ತಲೆಯ ಮೇಲೆ ಒಂಬತ್ತು, ಮುರೆಯ ತಲೆಯ ಮೇಲೆ ಒಂದು ಬಿಂದುಗಳು ಬಿದ್ದವು. ಮುರೆಯು ಆ ಬಿಂದುವನ್ನು ಸಂತೋಷದಿಂದ ಸ್ವೀಕರಿಸಿದಳು. ಸುನಂದೆಗೆ ಒಂಬತ್ತು ಜನ ಮುರೆಗೆ ಒಬ್ಬ ಪುತ್ರ ಜನಿಸುತ್ತಾನೆಂದು ಹೇಳಿ ಮುನಿಯು ಹೋಗುತ್ತಾನೆ.	5. ಪವಿತ್ರವಾದ ಪಾದೋದಕವನ್ನು ರಾಜನು ಪತ್ನಿಯರಿಬ್ಬರ ಮೇಲೆ ಪ್ರೋಕ್ಷಿಸಲು ಮುರೆಯ ತಲೆಯ ಮೇಲೆ ಒಂದು ಹನಿ ಬಿದ್ದರೆ ಇನ್ನೊಬ್ಬಳ ತಲೆಯ ಮೇಲೆ ಒಂಬತ್ತು ಹನಿಗಳು ಬಿದ್ದವು. ಮುರೆಯು ಆ ಹನಿಯನ್ನು ಅತ್ಯಂತ ಭಕ್ತಿಯಿಂದ ಸ್ವೀಕರಿಸಿದರೆ, ಅತಿ ಗರ್ವಿಷ್ಠೆಯಾದ ಸುನಂದೆಯು ಗೊಣಗುತ್ತಾ ಆ ಹನಿಗಳನ್ನು ಸ್ವೀಕರಿಸಿದಳು.	5. ಆ ಪಾದೋದಕವನ್ನು ರಾಜನು ಪತ್ನಿಯರ ತಲೆಯ ಮೇಲೆ ಪ್ರೋಕ್ಷಿಸಲು ಹಿರಿಯಳ ತಲೆಯ ಮೇಲೆ ಒಂಬತ್ತು, ಬಿಂದುಗಳೂ ಮುರೆಯ ತಲೆಯ ಮೇಲೆ ಒಂದು ಬಿಂದುವೂ ಬಿದ್ದವು. ಮುರೆಯು ಭಕ್ತಿಯಿಂದ ಅದನ್ನು ಸ್ವೀಕರಿಸಿದಳು. ಅದರಿಂದ ಬ್ರಾಹ್ಮಣನು ಬಹಳಷ್ಟು ಸಂತೋಷಪಟ್ಟನು.	5. ಅವರ ಪಾದೋದಕವನ್ನು ತನ್ನುಭಯ ರಾಣಿಯರ ಶಿರದಲ್ಲಿ ಪ್ರೋಕ್ಷಿಸಲು ಸುನಂದಾ ದೇವಿಯ ತಲೆಯಲ್ಲಿ ಒಂಬತ್ತು ಬಿಂದುಗಳು ಕ್ಷಣಕಾಲ ನಿಂತು ಜಾರಿಬಿದ್ದವು. ಮುರಾದೇವಿಯ ಶಿರದಲ್ಲಿ ಒಂದು ಬಿಂದು ಮಾತ್ರ ನಿಶ್ಚಲವಾಗಿ ನಿಂತಿತು. ಮುನಿಯು ಬಿಂದುಗಳ ಲೆಕ್ಕದಂತೆ ಮಕ್ಕಳು ಜನಿಸುವರು ಎನ್ನುವನು. ಮುನಿಗಳು ಇತ್ತ ಬಂದ ಕಾರಣವೇನೆಂದು ರಾಜನು ಕೇಳಲು ಮಹೋದಯ ಪುಣ್ಯಕಾಲ ಸ್ನಾನಕ್ಕಾಗಿ ಪ್ರಯಾಗ ಕ್ಷೇತ್ರಕ್ಕೆ ಹೋಗಿದ್ದು, ಅಲ್ಲಿಂದ ಕಾಶಿಕ್ಷೇತ್ರಕ್ಕೆ ಹೋಗಿ ವಿಶ್ವೇಶ್ವರನ ಸೇವೆ ಮಾಡಿ ಹಿಂದಿರುಗುವಾಗ ಈ ಕಡೆಯಾಗದಲ್ಲಿಯೂ ಧರ್ಮದಿಂದ ರಾಜ್ಯ ಪರಿಪಾಲನ ಮಾಡುವ ನಿನ್ನನ್ನು ಕೇಳಿ ನೋಡಲಪೇಕ್ಷೆಯಿಂದ ಬಂದೆನು — ಎನ್ನುವನು.

6. ಕೆಲವು ಕಾಲಾನಂತರ ಅರಸನ ಈರ್ವರು ಪತ್ನಿಯರೂ ಗರ್ಭಿಣಿಯರಾದರು. ಆಗ ಹಿರಿಯವಳಲ್ಲಿ ಸೋರೆಹಣ್ಣನಂತಿರುವ ಒಂದು ಮಾಂಸದ ಮುದ್ದೆಯು ಜನಿಸಿತು. ಆಗ ರಾಕ್ಷಸನು — 'ಸುನಂದೆಯಲ್ಲಿ ಒಂಬತ್ತು ಮಕ್ಕಳು ಜನಿಸುವರೆಂದು ಹಿಂದೆ ಮುನೀಶ್ವರನಿಂದ ವರವು ದೊರಕಿತ್ತು. ಹೀಗಿರಲು ಮಾಂಸದ ಮುದ್ದೆ ಹುಟ್ಟಿದೆ. ಮಹರ್ಷಿಯ ಮಾತು ಎಂದೂ ಸುಳ್ಳಾಗುವುದಿಲ್ಲ. ಆದಕಾರಣ ಈ ಮಾಂಸದ ಮುದ್ದೆಯನ್ನು ಒಂಬತ್ತು ಭಾಗಮಾಡಿ ತುಪ್ಪದ ಪಾತ್ರೆಯಲ್ಲಿಡುವೆನೆಂದು ಯೋಚಿಸಿ ಅಂತೆಯೇ ಮಾಡಿದನು. ಕೆಲದಿನಗಳ ನಂತರ ಏಕಕಾಲದಲ್ಲಿ ಒಂಬತ್ತು ಗಂಡು ಮಕ್ಕಳು ಜನಿಸಿದರು. (ದುರ್ಯೋಧನಾದಿಗಳಂತೆ). ಆಗಲೇ ಮುರೆಗೆ ಪ್ರತಿಭಾನ್ವಿತನೂ, ಬಹುವಿನೀತನೂ ನೀತಿಶಾಸ್ತ್ರ ನಿಪುಣನೂ ಆದ ಒಬ್ಬ ಮಗನು ಜನಿಸಿದನು.

6. ಧನ್ಯಳಾದ ಮುರೆಯು ಮಹಾವೀರನೂ, ಮಹಿಮಾವಂತನೂ ಆದ ಮೌರ್ಯನೆಂಬ ಮಗನನ್ನು ಹಡೆದಳು. ಸುನಂದೆಯು ದೊಡ್ಡದಾದ ಮಾಂಸದ ಮುದ್ದೆಯನ್ನು ಹಡೆದಳು. ಆಗ ಅಂತರಿಕ್ಷದಲ್ಲಿ ರಾಜನನ್ನು ಕುರಿತು ಅಶರೀರವಾಣಿಯಾಯಿತು — ನವಪುತ್ರರಾಗಿದ್ದಾರೆಂದು. ಆಗ ರಾಕ್ಷಸನು ಗಾಂಧಾರಿಯ ವೃತ್ತಾಂತವನ್ನು ನೆನೆದು ಆ ಪಿಂಡವನ್ನು ಒಂಬತ್ತುಭಾಗಗಳನ್ನಾಗಿ ಮಾಡಿ ಎಣ್ಣೆಯ ಪಾತ್ರೆಯಲ್ಲಿಟ್ಟು ಕಾಪಾಡಿದನು. ಸ್ವಲ್ಪ ಕಾಲಾನಂತರ ಒಂಬತ್ತು ಕುಮಾರರು ಜನಿಸಿದರು.

6. ಮುರೆಯು ಗುಣವಂತನಾದ ಮೌರ್ಯನೆಂಬ ಮಗನನ್ನು ಹಡೆದಳು. ಸುನಂದೆಯು ದೊಡ್ಡದಾದ ಮಾಂಸದ ಮುದ್ದೆಯನ್ನು ಹಡೆದಳು. ಆಗ ರಾಕ್ಷಸನು ಅದನ್ನು ಒಂಬತ್ತು ಭಾಗಗಳನ್ನಾಗಿ ಮಾಡಿ ಎಣ್ಣೆಯ ಪಾತ್ರೆಯಲ್ಲಿಟ್ಟು ಯತ್ನದಿಂದ ಸಾಕಿದನು. ಹೀಗೆ ಹುಟ್ಟಿದ ಒಂಬತ್ತು ಜನ ವೀರರನ್ನು ರಾಕ್ಷಸನು ಬೆಳೆಸಿ ದೊಡ್ಡವರನ್ನಾಗಿ ಮಾಡಿದನು. ನಂದರೆಂದು ಅವರು ತಂದೆಯಿಂದ ಹೆಸರಿಸಲ್ಪಟ್ಟು ಪ್ರಸಿದ್ಧರಾದರು.

6. ಮುರಾದೇವಿಯು ಗರ್ಭಧರಿಸಿ ಪುತ್ರನನ್ನು ಪ್ರಸವಿಸಲು ರಾಜನು ಆ ಶಿಶುವಿಗೆ ಮೌರ್ಯನೆಂದು ನಾಮಕರಣ ಮಾಡಿದನು. ಮತ್ತೆ ಕೆಲವು ಕಾಲದಮೇಲೆ ಸುನಂದಾದೇವಿಯು ಒಂಬತ್ತು ಕುಮಾರರನ್ನು ಹಡೆದಳು. ರಾಜನು ಅವರಿಗೆ ಕ್ರಮವಾಗಿ ನಂದ, ಸುನಂದ, ಉಪನಂದ, ಪ್ರನಂದ, ಲೋಕನಂದ, ಕುಲನಂದ, ಪ್ರಿಯನಂದ, ಮಿತ್ರನಂದ ಮತ್ತು ವಿನಂದನೆಂದು ಹೆಸರಿಟ್ಟನು.

7. ರಾಜನು ಕಾಲಕ್ರಮೇಣ ಹತ್ತು ಜನ ಮಕ್ಕಳಿಗೂ ವಿವಾಹಾದಿಗಳನ್ನು ಮಾಡಿದನು. ಮೌರ್ಯನಿಗೆ ನೂರು ಜನ ಮಕ್ಕಳಾದರು. ಅವರಲ್ಲಿ ಕೊನೆಯವನು ಚಂದ್ರಗುಪ್ತನು. ತುಂಬಾ ಬುದ್ಧಿಶಾಲಿಯು, ದಂಡನೀತಿಯಲ್ಲಿ ಪಂಡಿತನೂ ಆಗಿದ್ದನು. ಮೌರ್ಯನೂ ಅವನ ಮಕ್ಕಳೂ ತಮ್ಮ ಗುಣಗಳಿಂದ ಪ್ರಜೆಗಳನ್ನು ಆಕರ್ಷಿಸಿದ್ದರು. ನವನಂದರು ಮೌರ್ಯರ ಅಭ್ಯುದಯವನ್ನು ಸಹಿಸಲಾರದೆ ಮತ್ಸರಗ್ರಸ್ತರಾದರು. ಮೌರ್ಯನೂ ಮತ್ಸರದಿಂದ ನವನಂದರಲ್ಲಿ ಒಡಕನ್ನುಂಟು ಮಾಡಿದನು. ಆಗ ರಾಕ್ಷಸನು ರಾಜ್ಯವನ್ನು ತನ್ನ ಬುದ್ಧಿಬಲದಿಂದ ಹೇಗೋ ಕಾಪಾಡಿದನು. ಮೌರ್ಯನು ಗೂಢವಾಗಿ ಒಳಗೊಳಗೇ ತೊಂದರೆಯನ್ನುಂಟುಮಾಡುತ್ತಿದ್ದನು.

7. ಎಲ್ಲರೂ ವಿದ್ಯೆ ಕಲಿತು ಧನುರ್ವೇದದಲ್ಲಿ ಪಾರಂಗತರಾಗಿ ಯೌವನದಲ್ಲಿ ಕಾಲಿಟ್ಟರು. ಅರಸನು ನವಪುತ್ರರಲ್ಲಿ ಜ್ಯೇಷ್ಠರಾರೆಂದು ತಿಳಿಯದಾದನು. ಅವನು ಮೌರ್ಯನನ್ನು ಸೇನಾಪತಿಯನ್ನಾಗಿ ಮಾಡಬೇಕೆಂದು ನಿಶ್ಚಯಿಸಿದನು. ಸೇನಾಪತಿತ್ವವನ್ನು ದಾಸ್ಯದ ಸೊಗೆಂದು ಗ್ರಹಿಸಿದ ಮೌರ್ಯನು ನಂದರಲ್ಲಿ ವಿವಿಧ ರೀತಿಯ ಒಳಜಗಳಗಳನ್ನು ತರುತ್ತಾನೆ. ಬುದ್ಧಿಶಾಲಿಯಾದ ರಾಕ್ಷಸನು ಇದನ್ನು ಗ್ರಹಿಸುತ್ತಾನೆ. ನಂದರೂ ತಮ್ಮತಮ್ಮಲ್ಲಿ ಜಗಳಾಡುತ್ತಾರೆ. ಹಾಗಾಗಿ ರಾಕ್ಷಸನ ಸಲಹೆಯಂತೆ ಅವರಲ್ಲಿ ಒಬ್ಬೊಬ್ಬರು ಒಂದೊಂದು ವರ್ಷ ರಾಜರಾಗುತ್ತಾರೆ. ಮೌರ್ಯನು ಸೇನಾಪತಿಯಾಗುತ್ತಾನೆ. ಕಾಲಕ್ರಮದಲ್ಲಿ ಮೌರ್ಯನಿಗೆ ಶೂರರಾದ ನೂರು ಜನ ಮಕ್ಕಳಾದರು. ಇವರಲ್ಲಿ ಎಲ್ಲರಿಗಿಂತ ಕಿರಿಯವನೇ ಚಂದ್ರಗುಪ್ತನು. ರಾಜ್ಯವು ಮೌರ್ಯನ ವಶದಲ್ಲಿದ್ದಂತೆಯೇ ಇದ್ದಿತು.

7. ನಂದರಿಗೆ ರಾಜ್ಯವನ್ನು ಕೊಟ್ಟು ಮಹಾಮತಿಯಾದ ಮೌರ್ಯನನ್ನು ಸೇನಾಪತಿಯನ್ನಾಗಿ ಮಾಡಿ ಅರಸನು ವಿಶ್ರಾಂತಿ ಪಡೆದನು. ಮೌರ್ಯನಿಗೆ ಚಂದ್ರಗುಪ್ತರೇ ಮೊದಲಾದ ಉತ್ತಮರಾದ ನೂರು ಜನ ಮಕ್ಕಳಾದರು. ಮಹಾಬಲಿಷ್ಠರಾದ ಪುತ್ರರಿಂದೊಡಗೂಡಿ ಮೌರ್ಯನು ಆ ನಂದರನ್ನು ಅತಿಯಾಗಿ ಸೇವಿಸುತ್ತಿದ್ದನು.

7. ಅನಂತರದಲ್ಲಿ ಸರ್ವಾರ್ಥಸಿದ್ಧಿಯು ಮೌರ್ಯನಿಗೆ ತಕ್ಕ ಐಶ್ವರ್ಯವನ್ನು ಕೊಡಿಸಿ ಸಿಂಹಾಸನಾರೋಹಣಪೂರ್ವಕವಾಗಿ ಇತರ ಸರ್ವಾಧಿಕಾರವನ್ನು ಕೊಟ್ಟನು. ನವನಂದರು ಪ್ರವರ್ಧಮಾನರಾಗಲು ಅವರಿಗೂ ಯಥೋಚಿತ ರಾಜಕುಲ ಕನ್ಯಾರತ್ನಗಳನ್ನು ಮದುವೆ ಮಾಡಿಸಿದನು. ಆ ಬಳಿಕ ಮೌರ್ಯನಿಗೆ ತನ್ನ ಬಹುಪತ್ನಿಯರಲ್ಲಿ ಚಂದ್ರಗುಪ್ತ ಮೊದಲಾದ ನೂರು ಮಂದಿ ಮಕ್ಕಳು ಜನಿಸಿದರು. ಜ್ಯೇಷ್ಠನಾದ ನಂದನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ... ಎಲ್ಲರೂ ಏಕಮತ್ಯದಿಂದ ಇದ್ದರು. ಮೌರ್ಯನು ನಂದರಲ್ಲಿ ಭೃತ್ಯಭಾವದಿಂದ ಇರುತ್ತಿದ್ದನು.

೮. ಈ ಮೌರ್ಯನು ಗೂಢಶತ್ರುವಾದದ್ದ ರಿಂದ ನವನಂದರೂ ರಾಕ್ಷಸನೂ ಹೇಗಾದ ರೂ ಈತನನ್ನು ನಾಶಗೊಳಿಸಬೇಕೆಂದು ನಿಶ್ಚೈಸಿ ನೆಲಮಾಳಿಗೆಯಲ್ಲಿ ಆಲೋಚನಾ ಮಂದಿರವೊಂದನ್ನು ಮಾಡಿ ಕಪಟದಿಂದ ಮೌರ್ಯನೂ ಆತನ ಮಕ್ಕಳೂ ಅಲ್ಲಿಗೆ ಬರುವಂತೆ ಮಾಡುವರು. ಆ ಕೂಡಲೇ ರಾಜಪುರುಷರು ಆ ನೆಲಮಾಳಿಗೆಯ ಬಾಗಿಲನ್ನು ಮುಚ್ಚುವರು. ಆಗ ಮೌರ್ಯನಿಗೆ ತಾವು ಮೋಸಹೋದ ವಿಚಾರವು ತಿಳಿಯಿ ತು.	೮. ಮೌರ್ಯರ ಸುಶೀಲತೆ, ನೀತಿ ಕೌಶ ಲ್ಯಗಳನ್ನು ರಾಕ್ಷಸನೂ, ನವನಂದರೂ ಸಹಿಸಲಿಲ್ಲ. ಗೂಢವಾದ ಮಾತ್ಸರ್ಯ ದಿಂದ ಮಂತ್ರಾಲೋಚನೆ ಮಾಡಿ ಅವ ರನ್ನು ಗೂಢವಾಗಿ ಕೊಲ್ಲಲು ನಿಶ್ಚ ಯಿಸಿದರು. ದೀರ್ಘಮಾರ್ಗದ ಸುರಂಗ ವಿರುವ ಮಂತ್ರಾಲೋಚನಾ ಮಂಟಪ ವೊಂದನ್ನು ಕಟ್ಟಿ, ಮೌರ್ಯನನ್ನೂ ಆತನ ಮಕ್ಕಳನ್ನೂ ಕರೆಸಿ ನಂದರು ರಾಜಕಾರ್ಯಗಳನ್ನು ಪರ್ಯಾಲೋ ಚಿಸತೊಡಗಿದರು. ಅಂತೆಯೇ ಒಮ್ಮೆ ಮೌರ್ಯನು ತನ್ನ ಮಕ್ಕಳೊಡನೆ ಅದರ ಒಳಹೊಕ್ಕಾಗ ಆ ಸುರಂಗದ ಬಾಗಿಲ ನ್ನು ಮುಚ್ಚಿದರು.	೮. ಆಗ ದುರಾತ್ಮರಾದ ನಂದರು ಅಸೂಯೆಯಿಂದ ಸಪುತ್ರಕನಾದ ಮೌರ್ಯನನ್ನು ನೆಲಮಾಳಿಗೆಯನ್ನು ಪ್ರವೇಶಿ ಸುವಂತೆ ಮಾಡಿ ಕಪಟದಿಂದ ಕೊಲ್ಲಿಸಿದರು.	೮. ನಂದರು ಶೌರ್ಯದಲ್ಲಿ ತಮಗಿಂತ ಹೆಚ್ಚಾಗಿ ನೀತಿಯಲ್ಲಿ ವೃದ್ಧಮಂತ್ರಿಗಳಿಗೆ ಸಮಾನ ರಾದ ಮೌರ್ಯಪುತ್ರರನ್ನು ನೋಡಿ, ಮತ್ಸರಗೊಂಡು, ತಮ್ಮ ಅಧಿಕಾರವನ್ನು ಅಪಹರಿಸಾರು ಎಂಬ ಭಯದಿಂದ ನಿಗ್ರಹಿಸ ಬಯಸಿ, ಅಮಾತ್ಯರಾಕ್ಷಸನನ್ನು ಕರೆಸಿ 'ಏಕಾಂತದಲ್ಲಿ ವಿಷಯವನ್ನು ತಿಳಿಸಿದರು. ಆಗ ರಾಕ್ಷಸನು ಸಾತ್ವಿಕರಾದ ಮೌರ್ಯರನ್ನು ಸಂಹರಿಸಿದರೆ ಅಪಕೀರ್ತಿ ಬರುವುದೆಂದು ತನ್ನ ಅಸಮ್ಮತಿಯನ್ನು ಸೂಚಿಸಿದನು. ಸರ್ವಾ ರ್ಥಸಿದ್ಧಿ ಹಾಗೂ ರಾಕ್ಷಸ — ಇಬ್ಬರೂ ನಗರ ದಿಂದ ದೂರ ಹೋಗಿದ್ದಾಗ ನಂದರು ಕಪಟ ದಿಂದ ಮೌರ್ಯ ಹಾಗೂ ಆತನ ಪುತ್ರರನ್ನು ನೆಲಮಾಳಿಗೆಯಲ್ಲಿ ಇರಿಸಿ ಹೊರಗಿನಿಂದ ಅಗುಳಿಯನ್ನು ಹಾಕಿಸಿದರು.
೯. ಹೇಗಾದರೂ ಸೇಡು ತೀರಿಸಿಕೊಳ್ಳ ಬೇಕೆಂದು ಮೌರ್ಯನು ಹವಣಿಸುತ್ತಿದ್ದಾಗ ಚಂದ್ರಗುಪ್ತನು —' ದೈವವು ನನಗೆ ಅನುಕೂಲವಾಗಿ ನಾನು ಇಲ್ಲಿಂದ ಹೊರಗೆ ಹೋಗುವಂತಾದಲ್ಲಿ ಆ ಶತ್ರುಗಳನ್ನು ನಾಶಮಾಡುತ್ತೇನೆ' ಎಂದನು. ಕೆಲವೇ	೯. ಇದರಿಂದ ಅವರು ಶೋಕತಪ್ತರಾಗಿ ಹೊರಬೀಳುವ ಉಪಾಯವನ್ನು ಕಾಣದೆ ಕಣ್ಣೀರು ಮಿಡಿಯುತ್ತಿರಲು ಕಿರಿಯ ಮಗನಾದ ಚಂದ್ರಗುಪ್ತನು —' ನಾನು ಬದುಕಿ ಹೊರಬಿದ್ದರೆ ಅದರ ಪ್ರತೀಕಾರ ವನ್ನು ಸಾಧಿಸುವೆ' ನೆಂದನು. ಇದನ್ನು	೯. —	೯. ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ ದಿನದಿನಕ್ಕೆ ಒಬ್ಬೊಬ್ಬರಂತೆ ಮೌರ್ಯರು ಸತ್ತುಹೋದರು. ಬದುಕಿದ್ದ ಚಂದ್ರಗುಪ್ತ ನು ಹೊರಗಿನ ದುರ್ಗವನ್ನು ನೋಡಿ 'ಸೇಡ ನ್ನು ತೀರಿಸುವೆ' ನೆಂದನು. ಇದನ್ನು ಕೇಳಿ ರಾಕ್ಷಸನೆಂಬುವಳ್ಳ ಆ ಸ್ಥಳದಿಂದ ತೆಗೆದು ಬೇರೆ ಕಾರಾಗೃಹದಲ್ಲಿ ಇಡುವ ಬಗ್ಗೆ ಅರಸರಲ್ಲಿ

೯

ದಿನಗಳಲ್ಲಿ ಉಳಿದವರು ಸತ್ತುಹೋದರು. ಚಂದ್ರಗುಪ್ತನು ಅಲ್ಲಿಂದ ತಪ್ಪಿಸಿಕೊಂಡು ಹೋಗುವ ಕಾಲವನ್ನೇ ಚಿಂತಿಸುತ್ತಾ ಅಲ್ಲೇ ಇದ್ದನು.	ಕೇಳಿ ಎಲ್ಲರಿಗೂ ಆನಂದವಾಯಿತು. ಕೆಲವೇ ದಿನಗಳಲ್ಲಿ ಉಳಿದವರು ಸತ್ತುಹೋದರು. ಚಂದ್ರಗುಪ್ತನು ಜೀವ ಹಿಡಿದುಕೊಂಡಿದ್ದನು.		ಬಿನ್ನೈಸಿದೆಂದು ಕೇಳುವನು. ಅದಕ್ಕೆ ನಂದರು ಸಮ್ಮತಿಸಿ ಚಂದ್ರಗುಪ್ತನನ್ನು ಬೇರೆ ಕಾರಾಗೃಹದಲ್ಲಿರಿಸುವರು.
10. ಈ ಸಮಯದಲ್ಲಿ ಅನ್ಯದೇಶದ ರಾಜನ ಕಡೆಯಿಂದ ಪುರುಷನೊಬ್ಬನು ಸಿಂಹದಿಂದ ಕೂಡಿದ ಪಂಜರಸಮೇತನಾಗಿ ನಂದರನ್ನು ಸಮೀಕ್ಷಿಸಿ — ' ಈ ದೇಶದಲ್ಲಿ ಯಾರಾದರೂ ಬುದ್ಧಿವಂತನಿದ್ದರೆ ಈ ಪಂಜರವನ್ನು ಒಡೆಯದೇ ಸಿಂಹವನ್ನು ಹೊರಗೆ ತರಲಿ ' ಎಂದನು. ಯಾರಿಗೂ ಉಪಾಯ ಹೊಳೆಯಲಿಲ್ಲ.	10. ಒಮ್ಮೆ ವಂಗದೇಶದ ರಾಜನು ಒಬ್ಬ ಮನುಷ್ಯನನ್ನು ಪಂಜರದಲ್ಲಿಟ್ಟ ಸಿಂಹವನ್ನು ಅಲ್ಲಿಗೆ ಕಳುಹಿಸಿ — ' ಪಂಜರವನ್ನು ಮುರಿಯದೇ ಸಿಂಹವನ್ನು ಹೊರಗೆ ತರಬೇಕೆಂಬ ಪಂಥವನ್ನು ಒಡ್ಡುವನು. ನೆರೆದ ಭೂಪತಿಗಳಿಗೂ, ಮಂತ್ರಿಗಳಿಗೂ ಅದರ ರಹಸ್ಯವು ಹೊಳೆಯಲಿಲ್ಲ.	10. ಆಗ ಸಿಂಹಳದ ರಾಜನು ಜೀವಂತವಿರುವಂತೆ ಕಾಣುವ ಸಿಂಹವನ್ನು ಪಂಜರದಲ್ಲಿಟ್ಟು ಪರೀಕ್ಷಿಸಲೆಂದು ಕಳುಹಿಸಿದನು. ಪಂಜರವನ್ನು ಬಿಡಿಸದೇ ಕರ್ಪೂರದ ಆ ಸಿಂಹವನ್ನು ಹೊರತರಬೇಕೆಂಬುದು ಅವರೊಡ್ಡಿದ ಪಂಥವಾಗಿತ್ತು. ಪಂಜರದ ರಹಸ್ಯವನ್ನು ಭೇದಿಸುವುದು ಯಾರಿಂದಲೂ ಸಾಧ್ಯವಾಗಲಿಲ್ಲ.	10. ಪಾಟಲೀಪುರದ ವರ್ತಮಾನವನ್ನು ಕೇಳಿ ಪರ್ವತರಾಜನ ಮಂತ್ರಿಯಾದ ಶಬರವರ್ಮನು ಒಂದು ಅರಗಿನ ಪಂಜರವನ್ನೂ, ಅದರಲ್ಲಿ ಕಪಟಸಿಂಹವನ್ನೂ ಮಾಡಿಸಿ, ರಕ್ಷಕರನ್ನು ನೇಮಿಸಿ, ಉಪಾಯವನ್ನು ಹೇಳಿ — ಇದರ ಪರೀಕ್ಷೆಯನ್ನು ಯಾರು ಮಾಡುವರೆಂದು ತಿಳಿದು ಬಾರೆಂದು ಪಾಟಲೀಪುರಕ್ಕೆ ಕಳುಹಿಸುವನು.
11. ಆಗ ಮೌರ್ಯಾಭಿಮಾನಿಯಾದ ವೃದ್ಧ ಮಂತ್ರಿಯೊಬ್ಬನು — ' ಮೌರ್ಯರಲ್ಲಿ ಕಿರಿಯನಾದ ಚಂದ್ರಗುಪ್ತನು ಈ ವಿದ್ಯೆಯಲ್ಲಿ ಬಹಳ ನುರಿತವನು. ಈಗ ಆಗಿಹೋದ ವಿಚಾರವನ್ನು ಯೋಚಿಸಿ	11. ಆಗ ಮೌರ್ಯ ಪಕ್ಷಪಾತಿಯಾದ ವಿಶಿಖನೆಂಬ ಸಚಿವನು — ' ಮೌರ್ಯನ ಮಗನಾದ ಚಂದ್ರಗುಪ್ತನು ಇದ್ದಿದ್ದರೆ ಸಿಂಹವನ್ನು ಬಿಡಿಸುತ್ತಿದ್ದನು. ಎಂಥ ಹೋದ ಆ ಚಿಂತೆಯಿಂದ ಈಗೇನು?'	11. ಆಗ ಸುಮತಿಯೆಂಬ ಮಂತ್ರಿಯು — ' ನೀವು ನೋಡಿದ್ದ ಮೌರ್ಯರಲ್ಲಿ ಮೇಧಾವಿಯಾದ ಚಂದ್ರಗುಪ್ತನು ಈ ವಿದ್ಯೆಯಲ್ಲಿ ನಿಪುಣನಿದ್ದನು' ಎಂದಾಗ ಚಂದ್ರ	11. ಆಂಡ ಪಂಜರದಲ್ಲಿಯ ಸಜೀವ ಸಿಂಹವನ್ನು ಹೊರ ತೆಗೆಯುವ ಬಗೆಯು ಯಾರಿಗೂ ಹೊಳೆಯದಾಗ ಊರಿನಲ್ಲಿ ಡಂಗುರ ಸಾರಲಾಯಿತು. ಆಗ ನೆರೆಮನೆಯ ಬಾಗಿಲಲ್ಲಿದ್ದ

ಉಪಯೋಗವೇನು?' ಎನ್ನುವನು. ಆ ಮಾತನ್ನು ನಂದರೂ ರಾಕ್ಷಸನೂ ಕೇಳಿ ಚಂದ್ರಗುಪ್ತನು ಬದುಕಿದ್ದಾನು ಎಂಬ ಆಸೆಯಿಂದ ನೆಲ ಮಾಳಿಗೆಯ ಬಾಗಿಲನ್ನು ತೆರೆಸಿದರು. ನಂದರೂ ಮಂತ್ರಿಗಳೂ ಒಪ್ಪಿಸಿದ ಬಳಿಕ ಚಂದ್ರಗುಪ್ತನು ಹೊರಬಂದು ಸಿಂಹ ಪರೀಕ್ಷೆ ಮಾಡಿ ಯಶಸ್ವಿಯಾಗುವನು. ರಾಜರು ಸಂತುಷ್ಟರಾದರೂ ಮಾತಿನಂತೆ ಸೇನಾಪತಿತ್ವವನ್ನು ಕೊಡದೇ ಭೋಜನಶಾಲೆಯ ಅಧಿಕಾರವನ್ನು ಕೊಟ್ಟರು.

12. ಒಂದು ದಿನ ಚಂದ್ರಗುಪ್ತನು ಬ್ರಾಹ್ಮಣರಿಗಾಗಿ ಕಾಯುತ್ತಿದ್ದಾಗ ತರುಣನೂ, ತೇಜೋವಂತನೂ ಆದ

ಎನ್ನುವನು. ಇದನ್ನು ಕೇಳಿದೊಡನೆಯೇ ನಂದ ನೃಪತಿಗಳು ನೆಲಮಾಳಿಗೆ ಬಳಿ ಹೋಗಿ ಅತ ಬದುಕಿದ್ದುದನ್ನು ನೋಡಿ ಆತನನ್ನು ಸಮಾಧಾನಪಡಿಸಿ ಹಿಂದಿನಂತೆ ಪ್ರೇಮಾದರಗಳಿಂದ ನೋಡಿಕೊಳ್ಳುವುದಾಗಿ ಹೇಳಿ ಹೊರ ಕರೆ ತರುವರು. ಚಂದ್ರಗುಪ್ತನು ಸಿಂಹ ಪರೀಕ್ಷೆಯಲ್ಲಿ ಯಶಸ್ವಿಯಾದನು. ಅವನ ಬಗ್ಗೆ ರಾಕ್ಷಸನಿಗೆ ಚಿಂತೆಯುಂಟಾದರೂ ಕೊನೆಯಲ್ಲಿ ಆತನಿಗೆ ಬ್ರಾಹ್ಮಣರ ಭೋಜನ ಶಾಲೆಯ ಅಧಿಕಾರವನ್ನು ಕೊಡಲಾಯಿತು. ಆತನು ತನ್ನ ಕಾರ್ಯದಲ್ಲಿ ತತ್ಪರನಾಗಿದ್ದನು.

12. ಒಮ್ಮೆ ಚಂದ್ರಗುಪ್ತನು ಪ್ರಚಂಡ ತೇಜಸ್ಸಿನಿಂದ ಬೆಳಗುತ್ತಿದ್ದ ಬ್ರಾಹ್ಮಣ ಶ್ರೇಷ್ಠನೊಬ್ಬನನ್ನು ಕಂಡನು.

ಗುಪ್ತನು ಅದೃಷ್ಟವಶಾತ್ ಹೊರತರಲ್ಪಟ್ಟನು. ಆತನು ರಾಜ ಲಕ್ಷಣಗಳಿಂದ ಕೂಡಿದವನಾಗಿದ್ದನು. ಔದಾರ್ಯ, ಶೌರ್ಯ, ಗಾಂಭೀರ್ಯನಿಧಿಯೂ, ವಿನಯ ಸಮುದ್ರನೂ [illegible] ಆದ ಚಂದ್ರಗುಪ್ತನು ಅನ್ನಸತ್ರಾಧಿಕಾರಕ್ಕೆ ನಿಯುಕ್ತನಾದನು. ಆತನು ಒಳ್ಳೆಯ ಅವಕಾಶಕ್ಕಾಗಿ ಕಾಯುತ್ತಿದ್ದನು.

12. ಒಮ್ಮೆ ಅವನು ಅತಿಕೋಪಿಷ್ಠನಾದ ಎಳೆವಯಸ್ಸಿನ ಬ್ರಾಹ್ಮಣನೊಬ್ಬನನ್ನು ನೋಡಿದನು. ಆತನು ಕಾಲಿಗೆ

ಚಂದ್ರಗುಪ್ತನು 'ಯಾರೂ ದೊರೆಯಲಿಲ್ಲವೇ?' ಎಂದು ಕೇಳಿದನು. ಯಾರೋ ಒಬ್ಬನು ಹಾಗೆ ಕೇಳಿದನೆಂದು ದೂತರು ನಂದರಿಗೆ ತಿಳಿಸಿದಾಗ ಆತನನ್ನೇ ಕರೆಸಿ ಪರೀಕ್ಷಿಸುವಂತೆ ಅವರು ಹೇಳಿದರು. ಅಂತೆಯೇ ಚಂದ್ರಗುಪ್ತನು ಪರೀಕ್ಷಿಸಿ ಅದನ್ನು ಜಡ ಸಿಂಹವೆಂದು ಸಾಧಿಸಿ ತೋರಿಸಿದನು. ಆ ಪರೀಕ್ಷಕನು ಚಂದ್ರಗುಪ್ತನೆಂದು ನಂದರಿಗೆ ತಿಳಿದುದು ಬಳಿಕವೇ. ಆಗ ಅವರಿಗೆ 'ಏಕಕಾಲದಲ್ಲಿ ಸಂತೋಷವೂ, ವ್ಯಸನವೂ ಉಂಟಾಯಿತು'. ಸುಮತಿ, ವಕ್ರನಾಸ ಮೊದಲಾದ ಮಂತ್ರಿಗಳ ಹೇಳಿಕೆಯಂತೆ ನಂದರು ಆತನಿಗೆ ಬ್ರಾಹ್ಮಣ ಭೋಜನದ ಅನ್ನಸತ್ರಾಧಿಕಾರವನ್ನು ಕೊಟ್ಟರು. ಆತನು ತನ್ನ ಕೆಲಸದಲ್ಲಿ ಭಕ್ತಿಯಿಂದ ತೊಡಗಿಕೊಂಡಿದ್ದನು.

12. ಇಂತಹ ಸಮಯದಲ್ಲಿ ಒಂದು ದಿನ ದಂಡ ಕೃಷ್ಣಾಜಿನಗಳನ್ನು ಧರಿಸಿ ಉರಿಯುತ್ತಿರುವ ಅಗ್ನಿಯೋ

ಬ್ರಾಹ್ಮಣನೊಬ್ಬನು ಬಂದನು. ಅವನು ಬರುತ್ತಿದ್ದ ಸಮಯದಲ್ಲಿ ದರ್ಭೆಯ ಅಂಕುರವೊಂದು ಅವನ ಪಾದಕ್ಕೆ ಚುಚ್ಚಿತು. ಆಗ ಅವನು ಅದನ್ನು ಬೇರು ಸಹಿತ ಹೊರಕ್ಕೆಳೆದು ಪುಡಿಮಾಡಿ ನೀರಿನಲ್ಲಿ ಸೇರಿಸಿ ಕುಡಿದನು. ಅದನ್ನು ನೋಡಿ ಚಂದ್ರಗುಪ್ತನು ಆಶ್ಚರ್ಯಪಟ್ಟನು.

ಅವನು ದಾರಿಯಲ್ಲಿದ್ದ ನೊರೆಯ ಹುಲ್ಲಿನ ಗುತ್ತಿ (ಮುಂಜ)ಯನ್ನು ಬೇರು ಸಹಿತ ಕಿತ್ತು, ಬೆಂಕಿಯಲ್ಲಿ ಸುಟ್ಟು ಅದರ ಬೂದಿಯನ್ನು ಕೋಪದೃಷ್ಟಿಯಿಂದ ಕುಡಿಯುತ್ತಿದ್ದನು. ಚಂದ್ರಗುಪ್ತನು ಅದನ್ನು ನೋಡಿದನು.

ತಾಗಿದ ದರ್ಭೆಯನ್ನು ಸಮೂಲವಾಗಿ ಸುಟ್ಟುಹಾಕುವುದರಲ್ಲಿ ತೊಡಗಿದವನಾಗಿದ್ದನು. ವಿಷ್ಣುಶರ್ಮನೆಂಬ ಹೆಸರಿನ ಬಾಲಕನೇ ಆ ದ್ವಿಜೋತ್ತಮನು. ಶುಕನೀತಿ, ದಂಡನೀತಿ, ಜ್ಯೋತಿಶ್ಶಾಸ್ತ್ರಗಳಲ್ಲಿ ಆತ ಪಾಂಡಿತ್ಯವುಳ್ಳವನಾಗಿದ್ದನು. ನೀತಿಶಾಸ್ತ್ರಪ್ರಣೀತನಾದ ಚಣಕನ ಮಗನೂ ಚಾಣಕ್ಯನೆಂದು ಪ್ರಸಿದ್ಧನೂ, ಎಲ್ಲ ಧರ್ಮವನ್ನು ತಿಳಿದ ಶ್ರೋತ್ರಿಯನೂ ಅವನಾಗಿದ್ದನು.

ಎಂಬಂತೆ ಮಹಾ ತೇಜಸ್ವಿಯಾಗಿದ್ದ ಆ ಅನ್ಯನತ್ರ ಮಾರ್ಗವಾಗಿ ನೈಮಿಶಾರಣ್ಯಕ್ಕೆ ಹೋಗುತ್ತಿದ್ದ ಚಾಣಕ್ಯನೆಂಬ ಆ ಬ್ರಾಹ್ಮಣನು ಪಾದಕ್ಕೆ ಮಾರ್ಗದಲ್ಲಿಯ ಗರಿಕೆಯ ಬಳ್ಳಿ ಸುತ್ತಿಕೊಳ್ಳಲು ಮುಂದೆ ನಡೆಯುವ ವೇಗದಿಂದ ಮುಗ್ಗರಿಸಿ ಭೂಮಿಯನ್ನು ಹಿಡಿದ ಅತನು ಮಹಾಕ್ರುದ್ಧನಾಗಿ ಜಡವಾದ ಗರಿಕೆಯ ಹಂಬು ಮಾರ್ಗಕ್ಕೆ ತಡೆಯುಂಟುಮಾಡಿದುದರಿಂದ ಇದರ ಮೂಲೋತ್ಪಾಟನವನ್ನು ಮಾಡಬೇಕೆಂದು ಕಾರ್ಯಾಂತರವನ್ನು ಬಿಟ್ಟು, ತನ್ನ ದಂಡಾಗ್ರದಿಂದಲೇ ಆ ಗರಿಕೆಯ ಬಳ್ಳಿಯನ್ನು ಸಮೂಲವಾಗಿ ಅಗೆದು ಛೇದಿಸಿ ಮತ್ತೆ ತನ್ನ ಮಾರ್ಗವನ್ನು ಹಿಡಿದು ಹೋಗುವುದನ್ನು ಚಂದ್ರಗುಪ್ತನು ನೋಡಿದನು. III

13. ಚಂದ್ರಗುಪ್ತನು ಆ ಬ್ರಾಹ್ಮಣನ ಬಳಿ ಬಂದು ಆತನ ಪರಿಚಯವನ್ನು ಕೇಳಿದಾಗ ತನ್ನ ಹೆಸರು ಚಾಣಕ್ಯನೆಂದೂ ತಾನು ದಕ್ಷಿಣ ದೇಶದವನೆಂದೂ, ತನ್ನ

13. ಚಂದ್ರಗುಪ್ತನು ಅದರ ಕಾರಣವನ್ನು ಕೇಳಿದಾಗ ಆ ನೊರೆಹುಲ್ಲನ್ನು ಬೇರು ಸಹಿತ ಕಿತ್ತೊಗೆದು, ಸುಟ್ಟು, ಬೂದಿಯನ್ನು ಕುಡಿಯದಿದ್ದರೆ ತನ್ನ

13. ಚಂದ್ರಗುಪ್ತನು ಆತನನ್ನು ಸಮೀಪಿಸಿ ತನ್ನ ಇಷ್ಟಸಿದ್ಧಿಗಾಗಿ ಶರಣುಹೋಗಿ ಆತನನ್ನು ಉಪಚರಿಸಿದನು. ಗುಣಾಢ್ಯನಾದ ಚಂದ್ರಗುಪ್ತನಲ್ಲಿ ಆ ಮಹಾನು

13. ಚಂದ್ರಗುಪ್ತನು ಆ ಬ್ರಾಹ್ಮಣನ ಬಳಿ ಬಂದು ಸಾಷ್ಟಾಂಗವಾಗಿ ನಮಸ್ಕರಿಸಿ — ತನ್ನ ಗೃಹದಲ್ಲಿ ಮಧುಪರ್ಕಾದಿಗಳನ್ನು ಸ್ವೀಕರಿಸಬೇಕೆಂದು ಬೇಡಿ

ಕ್ರೋಧವಶನವಾಗಲು ಹಾಗೆಮಾಡಿ
ದುಡಾಗಿಯೂ ಆತ ಹೇಳುತ್ತಾನೆ.
ಮತ್ತೆ ಹತ್ತು ಸಾವಿರ ರಾಜರನ್ನಾದರೂ
ಜಯಿಸುವ ಶಕ್ತಿ ತನ್ನಲ್ಲಿದೆಯೆನ್ನು
ತ್ತಾನೆ. ಭೋಜನಾನಂತರ ತನ್ನ
ಮನೆಗೆ ಬರಬೇಕೆಂದು ಚಂದ್ರಗುಪ್ತನು
ಚಾಣಕ್ಯನಿಗೆ ಆಹ್ವಾನವೀಯುತ್ತಾನೆ.

ಕೋಪಾಗ್ನಿ ತನ್ನನ್ನೇ ಸುಟ್ಟೀತು—
ಎಂದು ಆ ಬ್ರಾಹ್ಮಣನು ಹೇಳಿದನು.
ಪ್ರಬಲರಾದ ರಾಜಾದಿಗಳು ಅಪಕಾರ
ಮಾಡಿದ್ದಾರೆ ನೀವೇನು ಮಾಡುವಿರೆಂದು
ಚಂದ್ರಗುಪ್ತನು ಕೇಳಿದಾಗ —' ತನ್ನ
ಬುದ್ಧಿವೈಭವದಿಂದ ಅವರನ್ನು ನಾಶಮಾಡ
ಬಲ್ಲೆ' ನೆಂದು ಆ ಬ್ರಾಹ್ಮಣನು ಹೇಳು
ವನು. ಅಪ್ರಮೇಯಾತ್ಮರಾದ ತಾವು
ಯಾರೆಂದಾಗ ಆ ಬ್ರಾಹ್ಮಣನೂ ಪ್ರಸ
ನ್ನನಾಗಿ ವಿಷ್ಣುಗುಪ್ತನು ತಾನು. ಚಾಣ
ಕ್ಯ, ಕೌಟಿಲ್ಯ ಎಂಬವೂ ತನ್ನ ನಾಮಾಂ
ತರಗಳೇ ಎಂದ ಆತನು ನಂದರ ಅಗ್ರಭೋ
ಜನದ ಸುದ್ದಿ ಕೇಳಿ ಹೋಗುತ್ತಿರುವುದಾಗಿ
ಹೇಳಿದನು. ಆಗ ಚಂದ್ರಗುಪ್ತನು ಆತನ
ನ್ನು ತನ್ನ ಮನೆಗೆ ಆಹ್ವಾನಿಸಿ ಪೂರ್ವ
ವೃತ್ತಾಂತವನ್ನು ಹೇಳಿದನು.

ಭಾವನು ವಶಪತಿಯಾದನು.
ಚಂದ್ರಗುಪ್ತನು ನಂದರು ಮಾಡಿದ
ಅನ್ಯಾಯವೆಲ್ಲವನ್ನು ಚಾಣಕ್ಯನಿಗೆ
ಹೇಳಿದನು. ಆಗ ಚಾಣಕ್ಯನು ನಂದ
ರಾಜ್ಯವನ್ನು ಆತನಿಗೆ ಕೊಡಿಸುವುದಾಗಿ
ಹೇಳಿದನು.

ಕೊಳ್ಳಲು ಚಾಣಕ್ಯನು ಒಪ್ಪಿಕೊಳ್ಳು
ವನು. ಹಾಗೆ ಬಂದು ಮಯೂರು ನಾ
ಲ್ಕು ದಿನಗಳಿದ್ದಾಗ ಚಾಣಕ್ಯನು ಆತನ
ಬಗ್ಗೆ ಕೇಳುವನು. ಚಂದ್ರಗುಪ್ತನು
ತನ್ನ ದುಃಖದ ಕಥೆಯನ್ನು ಹೇಳಿದಾಗ
ಆತನ ಸೌಜನ್ಯವನ್ನೂ, ಪ್ರಭುತ್ವ
ಲಕ್ಷಣವನ್ನೂ ಕಂಡು ' ದುಷ್ಟರಾದ
ನಂದರಿಗೆ ತನ್ನಲ್ಲಿ ಕೋಪವುಂಟಾಗುವಂತ
ಒಂದು ಕುಚೇಷ್ಟೆಯನ್ನು ಆಚರಿಸುವು
ದಾಗಿ ಹೇಳಿ, ಅದರಿಂದ ನಂದರು ತನ್ನ
ನ್ನು ಕ್ಷಮಿಸದೇ ತನಗೆ ಕೋಪವುಂಟಾ
ಗುವಂತೆ ಮಾಡಿದರೆ ನಿನ್ನ ಕಾರ್ಯಕ್ಕೆ
ಅಭ್ಯುದಯವನ್ನು ಕೊಡುವೆನು' ಎಂದು
ಚಾಣಕ್ಯನು ಹೇಳಿದನು.

14. ಚಾಣಕ್ಯನು ಭೋಜನಶಾಲೆಗೆ
ಹೋಗಿ ಚಿನ್ನದ ಪಾತ್ರೆಯ ಎದುರಿ
ಗಿದ್ದ ವಿದ್ವದಾಸನದಲ್ಲಿ ಕುಳಿತನು.
ಅವನನ್ನು ಕಂಡ ನಂತರ —' ಯಾರಿ

14. ಚಾಣಕ್ಯನು ಭೋಜನಶಾಲೆಯನ್ನು
ಪ್ರವೇಶಿಸಿ ಬ್ರಾಹ್ಮಣೋತ್ತಮರಿಗೆ ವಿಲಾಸ
ಇರಿಸಿದ್ದ ಅಗ್ರಾಸನದಲ್ಲಿ ಊಟಕ್ಕೆ ಕುಳಿ
ತನು. ಅಷ್ಟರಲ್ಲಿ ಒಳಗೆ ಬಂದ ನಂದರು—

14. ಚಾಣಕ್ಯನು ಹಸಿದಿದ್ದುದರಿಂದ
ನಂದರ ಭೋಜನಶಾಲೆಯನ್ನು
ಹೊಕ್ಕು ಅಗ್ರಾಸನದಲ್ಲಿ ಕುಳಿತನು.
ಕಾರ್ಯೋಪಹತಚೇತಸರಾಗಿ, ಸಿಟ್ಟು

14. ಚಾಣಕ್ಯನು ಹರಕು ದೋತ್ರವನ್ನು
ಟ್ಟುಕೊಂಡು ಪಂಜೆ ಬ್ರಾಹ್ಮಣನಂತೆ ಅ
ನ್ನಸತ್ರವ ಹೊಕ್ಕು ಅಲ್ಲಿದ್ದ ರಾಜಾರ್ಹ
ವಾದ ಸುವರ್ಣಪೀಠವನ್ನು ಅಗ್ರಭಾಗದಲ್ಲಿ

ವನು? ಇನ್ನೂ ಮೀಸೆ ಬಾರದ
ಬಾಲಕ? ಮಹಾವಿದ್ವಾಂಸರಿಗೆ ಯೋ
ಗ್ಯವಾದ ಅಗ್ರಾಸನದಲ್ಲಿ ಕುಳಿತಿರುವನಲ್ಲ!
ಎಂದು ಹೇಳಿದರು. ಅಲ್ಲದೇ ಅಹಂಕಾರಿ
ಯಾದ ಈ ಹುಡುಗನನ್ನು ಇಲ್ಲಿಂದ
ತೊಲಗಿಸಿ ಎಂದು ಎಳೆಸಿ ಹಾಕಿದರು.

?—' ಇನ್ನೂ ಮೀಸೆ ಕೂಡಾ ಬಂದಿಲ್ಲ
ಅಗ್ರಾಸನದಲ್ಲಿ ಕುಳಿತಿರುವ ಪೋರನಾರು?
ಈ ಕಪಿಯನ್ನು 'ಒಡಿಸಿರಿ' ಎಂದು ಹೇಳಿ
ದರು. ತಾನು ಚತುರ್ವೇದ ಪಾರಂಗತ,
ಷಡ್ದರ್ಶನ ಪ್ರವೀಣನೆಂಬ ಚಾಣಕ್ಯನ ಮಾ
ತನ್ನು ಅಲಕ್ಷಿಸಿ ಮದೋನ್ಮತ್ತರಾದ ನವ
ನಂದರು ಅವನನ್ನು ಬಲಾತ್ಕಾರದಿಂದ
ತಿಳ್ಳಿಸಿದರು. ಆಗ ಅವನ ಶಿಖೆಯೂ
ಉತ್ತರೀಯವೂ ಜಾರಿಹೋದವು. ಅಷ್ಟ
ರಲ್ಲಿ ಅದ್ವಿತೀಯನಾದ ಚಾಣಕ್ಯನ
ಕೋಪವು ಉಕ್ಕೇರಿತು.

ಗೊಂಡ ನಂದರು ಮಹಾತ್ಮ
ನಾದ ಈತನನ್ನು ಚಿಕ್ಕವನೆಂದು
(ವಟು) ಅವಮಾನಿಸಿ ಆಸನದಿಂದ
ಕೆಳಗಿಳಿಸಿ ಬಿಟ್ಟರು.

ಹಾಕಿಕೊಂಡು ಕುಳಿತನು. ಅದನ್ನು
ನೋಡಿದ ನಂದರು ಮತ್ತರಾಗಿ ದೈವ
ಸಂಕಲ್ಪದಿಂದ ವಿವೇಕಶೂನ್ಯರಾಗಿ ಮಾತಿದೇ
ಕ್ರುದ್ಧರಾಗಿ ಬ್ರಾಹ್ಮಣಾಧಮನೆಂದು
ನಿಂದಿಸಲು ದೂತರು ಚಾಣಕ್ಯನ ಕೈಯ
ನ್ನು ಹಿಡಿದು ಈಚೆಗೆ ಎಳೆಯಲು ಆ ರಭಸ
ಕ್ಕೆ ಆತನ ಜುಟ್ಟು ಬಿಚ್ಚಿಹೋಯಿತು.

15. ಜನ ಸಮೂಹದ ಎದುರಲ್ಲಿ
ಎಳೆಯುತ್ತಿರಲು ಚಾಣಕ್ಯನು ತನ್ನ
ಶಿಖೆಯನ್ನು ಬಿಡಿಸಿಕೊಂಡು ಕೋಪ
ದಿಂದ —' ನಂದರನ್ನು ಬೇರು ಸಹಿತ
ನಿರ್ನಾಮ ಮಾಡಿದ ನಂತರ ನನ್ನ ಈ
ಶಿಖೆಯನ್ನು ಕಟ್ಟುತ್ತೇನೆ' ಎಂದು
ಪ್ರತಿಜ್ಞೆ ಮಾಡಿ ಹೊರಟುಹೋದನು.

15. ಆಗ ಆತನು ಘೋರವಾಗಿ —' ಕ್ಷುದ್ರ
ಸತ್ವರಾದ ಕ್ಷತ್ರಿಯರೇ, ಈ ನಂದರನ್ನೆ
ಲ್ಲಾ ರಾಜ್ಯಚ್ಯುತರನ್ನಾಗಿ ಮಾಡಿ,
ರಾಜ್ಯದ ಪಟ್ಟವನ್ನು ವೃಷಲನೊಬ್ಬನಿಗೆ
ಕಟ್ಟದಲ್ಲದೇ ಈ ಬಿಚ್ಚಿದ ಕೂದಲನ್ನು
ಕಟ್ಟುವುದಿಲ್ಲ' ವೆಂಬ ಘೋರ ಪ್ರತಿಜ್ಞೆ
ಮಾಡಿದನು.

15. ಬೇಡ ಬೇಡವೆಂದು ಎಲ್ಲಾ
ಮಂತ್ರಿಗಳು ಹೇಳುತ್ತಿರಲು
ಅಗ್ರಾಸನದಿಂದ ಚಾಣಕ್ಯನನ್ನು
ಎಳೆಸಿ ಹಾಕಲು ಸಿಟ್ಟಿನಿಂದ ಕುರು
ಡನಾಗಿ ತನ್ನ ಕೈಯಿಂದಲೇ
ಜುಟ್ಟನ್ನು ಬಿಚ್ಚಿಕೊಂಡು
ಚಾಣಕ್ಯನು —' ದರ್ಪಾಂಧರಾದ,
ದುರ್ವರ್ತಿಗಳಾದ, ನನ್ನನ್ನು
ಹೀಗೆ ಅವಮಾನಿಸಿದ ನಂದಾಧಮ

15. ಆಗ ಚಾಣಕ್ಯನು ಮಹಾಕೋಪದಿಂದ
ಜಡೆಗಳನ್ನು ಕಚ್ಚುತ್ತಾ, ಹಲ್ಲುಗಳನ್ನು
ಮಸೆಯುತ್ತಾ —' ನಂದಾಧಮರೇ
ಅಶನಾರ್ಥಿಯಾಗಿ ಬಂದ ಅತಿಥಿಯನ್ನು
ನಿರಾಕರಿಸಿದ ಗೃಹಸ್ಥನ ಆಯುಷ್ಯವನ್ನು
ಮೃತ್ಯುವು ಅಪಹರಿಸುವುದೆಂಬ ಶಾಸ್ತ್ರಾರ್ಥ
ವು ನಿಮ್ಮಲ್ಲಿ ಫಲಿಸುವಂತೆ ಕಾಣುವುದು.
ನನ್ನನ್ನು ಅಪಮಾನ ಪೂರ್ವಕವಾಗಿ
ಎಳೆಸಿಹಾಕಿದಂತೆ ನಿಮ್ಮ ಪ್ರಾಣಾಪಹಾರವನ್ನು,

		ರನ್ನು ಬೇರು ಸಹಿತ ಕಿತ್ತುಹಾಕದೇ ಈ ಜುಟ್ಟನ್ನು ಕಟ್ಟುವುದಿಲ್ಲ' ವೆಂದು ತೀವ್ರವಾದ ಪ್ರತಿಜ್ಞೆಯನ್ನು ಮಾಡಿದನು.	ಮಾಡುವೆನು. ನಿಮ್ಮನ್ನು ಸಂಹರಿಸಿ ಕಾಲಸರ್ಪದಂತೆ ಬಿಚ್ಚಿರುವ ಈ ನನ್ನ ಜುಟ್ಟನ್ನು ಕಟ್ಟುವೆನು' ಎಂದು ಕಠೋರ ಪ್ರತಿಜ್ಞೆಯನ್ನು ಮಾಡಿದನು.
16. ಚಾಣಕ್ಯನು ಅಲ್ಲಿಂದ ಚಂದ್ರಗುಪ್ತನಿದ್ದಲ್ಲಿಗೆ ಹೋಗಿ ತನ್ನ ಪ್ರತಿಜ್ಞೆಯನ್ನು ತಿಳಿಸಿ, ಇಂದುಶರ್ಮನೆಂಬ ತನ್ನ ಸಹಪಾಠಿಯಾಗಿದ್ದ ಬ್ರಾಹ್ಮಣನನ್ನು ಕಂಡು ಎಲ್ಲಾ ವಿಷಯಗಳನ್ನು ಆತನಿಗೆ ತಿಳಿಸಿ ಆತನ ಸಹಾಯವನ್ನು ಕೋರಿ, ತಾನು ಪರ್ವತಕೇಶ್ವರನೆಂಬ ಮ್ಲೇಚ್ಛ ರಾಜನನ್ನು ಸಮೀಪಿಸಿದನು.	16. ಅಲ್ಲಿಂದ ಚಂದ್ರಗುಪ್ತನ ಮನೆಗೆ ಬಂದು ಎಲ್ಲಾ ವಿವರಗಳನ್ನು ಹೇಳಿ ಆತನಿಗೆ ಉಚಿತವಾದ ಸಲಹೆಯನ್ನು ಕೊಟ್ಟು ಅಲ್ಲಿಂದ ಹೊರಟುಬಿಟ್ಟನು. ಮತ್ತೆ ಚಾಣಕ್ಯನು ಇಂದುಶರ್ಮನೆಂಬ ತನ್ನ ಸಹಪಾಠಿಯಲ್ಲಿ ತನಗಾದ ಅವಮಾನವನ್ನು ಅರುಹಿ ಆತನ ಸಹಾಯವನ್ನು ಕೇಳಿದನು ಮತ್ತು ಚಾಣಕ್ಯನು ಅಲ್ಲಿಂದ ಉತ್ತರ ದಿಕ್ಕಿನಲ್ಲಿ ನೂರು ಯೋಜನಗಳಾಚೆ ಇದ್ದ ಪರ್ವತಕನೆಂಬ ಮ್ಲೇಚ್ಛರಾಜನನ್ನು ಸಂಧಿಸಿದನು.	16. ಹೀಗೆ ಹೇಳಿ ನಗರದಿಂದ ಆತನು ಹೊರಟುಹೋದನು. ನಂದರು ಆತನನ್ನು ಸಮಾಧಾನಪಡಿಸಲು ಯತ್ನಿಸಲಿಲ್ಲ. ಅದೇ ಸಂದರ್ಭದಲ್ಲಿ ಚಂದ್ರಗುಪ್ತನೂ ತನ್ನನ್ನು ನಿಗ್ರಹಿಸಿಯಾರು ಎಂದು ಹೆದರಿ ಚಾಣಕ್ಯನನ್ನು ಅನುಸರಿಸಿ ಹೊರಟುಹೋದನು. ಚಾಣಕ್ಯನು ತನ್ನ ಮಿತ್ರನಾದ ಇಂದುಶರ್ಮನನ್ನು ಕ್ಷಪಣಕನನ್ನಾಗಿಸಿ ರಾಕ್ಷಸನ ಬಳಿ ಕಳುಹಿಸಿದನು.	16. ಮತ್ತೆ ಚಂದ್ರಗುಪ್ತನನ್ನು ಕಂಡು ಆತನಿಗೆ ಅಭ್ಯಂತರವನ್ನು ಕೊಟ್ಟು ರಾಜಕಾರ್ಯದ ಮಾಹಿತಿಗಳನ್ನು ಸಂಗ್ರಹಿಸಿ ತನ್ನ ಸಹಾಧ್ಯಾಯಿಯಾಗಿದ್ದ ಇಂದುಶರ್ಮನಲ್ಲಿಗೆ ಹೋಗಿ ಎಲ್ಲವನ್ನೂ ವಿವರವಾಗಿ ತಿಳಿಸಿದನು ಮತ್ತು ತಾನು ಚಂದ್ರಗುಪ್ತ ಸಮೇತನಾಗಿ ಪರ್ವತರಾಜ್ಯವನ್ನು ಪ್ರವೇಶಿಸಿದನು. ಇಂದುಶರ್ಮನು ತನ್ನ ಶಿಷ್ಯರೊಂದಿಗೆ ರಾಕ್ಷಸರೇ ಮೊದಲಾದವರೆಡೆಯಲ್ಲಿ ಇರುತ್ತಿದ್ದನು.
17. ಚಾಣಕ್ಯನು ಪರ್ವತರಾಜನಲ್ಲಿ — 'ನೀನು ಸೈನ್ಯಸಮೇತನಾಗಿ ಬಂದು ನಂದರನ್ನು ನಾಶಗೊಳಿಸಿದ್ದೇ ಆದರೆ ನಿನಗೆ ಅರ್ಧರಾಜ್ಯವನ್ನು ಕೊಡುತ್ತೇನೆ' ಎಂದನು.	17. ತನ್ನ ಬುದ್ಧಿಬಲದಿಂದ ಆತನನ್ನು ನಂಬಿಸಿ ನಂದರನ್ನು ಸಂಹರಿಸಲು ಸಹಾಯ ಮಾಡಿದರೆ ಅರ್ಧ ರಾಜ್ಯವನ್ನು ಕೊಡುವೆನೆಂದನು.	17. ಅಲ್ಲಿಂದ ಹೊರಟ ಚಾಣಕ್ಯನು ಮಹಾಬಲಿಷ್ಠನಾದ ಪರ್ವತೇಂದ್ರನಿಗೆ ನಂದ ರಾಜ್ಯಾರ್ಧದ ಆಮಿಷ ತೋರಿಸಿ ಕುಸುಮಪುರವನ್ನು ಮುತ್ತುವಂತೆ ಮಾಡಿದನು.	17. ಚಾಣಕ್ಯನು ಪರ್ವತರಾಜ್ಯವನ್ನು ಪ್ರವೇಶಿಸಿ ರಾಜನನ್ನು ಕಂಡು ಸಂಕ್ಷಿಪ್ತವಾಗಿ ನಂದ ರಾಜ್ಯದ ಸ್ಥಿತಿ-ಗತಿಗಳನ್ನು ತಿಳಿಸಿ ಸೈನ್ಯಸಮೇತನಾಗಿ ಬಂದು ನಂದ ರಾಜ್ಯವನ್ನು ಗೆದ್ದುಕೊಟ್ಟಲ್ಲಿ ಅರ್ಧ ರಾಜ್ಯ ಕೊಡುವುದಾಗಿ ಹೇಳಿದನು.

104

18. ಪರ್ವತಕೇಶ್ವರನು ಯೋಚನೆ ಮಾಡಿ ಈ ಬ್ರಾಹ್ಮಣನ ಸಹಾಯವಿದ್ದಲ್ಲಿ ನಂದರ ರಾಜ್ಯವೆಲ್ಲವನ್ನು ಆಕ್ರಮಿಸಲು ಸಮರ್ಥನಾಗುವೆನೆಂದು ತೀರ್ಮಾನಿಸಿ, ಸೇನಾ ಸನ್ನಾಹವನ್ನು ಮಾಡುವನು.

---

19. ರಾಕ್ಷಸನು ಚಾಣಕ್ಯನ ಬದ್ಧ ವೈರತ್ವವನ್ನು ಗಮನಿಸಿ ಆತನು ಮಾಟ ಮಾಡುವುದು ಖಂಡಿತವೆಂದು ನಿಶ್ಚಯಿಸಿ ಬ್ರಾಹ್ಮಣರಿಗೂ ಕ್ಷಪಣಕರಿಗೂ ಸ್ವಭಾವ ಸಿದ್ಧವಾದ ವೈರವಿದ್ದೇ ಇದೆ. ಆದ್ದರಿಂದ ಚಾಣಕ್ಯನು ಅಭಿಚಾರವೆಸಗಿದಲ್ಲಿ ಈತನು ಅದಕ್ಕೆ ಪ್ರತೀಕಾರವನ್ನು ಮಾಡುತ್ತಾನೆಂದು ಆಲೋಚಿಸಿ ಆತನ ಸ್ನೇಹವನ್ನು ಬೆಳೆಸುತ್ತಾನೆ. ರಾಕ್ಷಸನ ಸ್ನೇಹವನ್ನು

18. ಪರ್ವತರಾಜನು ತಮ್ಮನಾದ ವೈರೋಧಕ, ಮಗನಾದ ಮಲಯಕೇತು ಮತ್ತು ಆಪ್ತರೊಡನೆ ಮಂತ್ರಾಲೋಚನೆ ಮಾಡಿ — ' ಚಾಣಕ್ಯನು ಶತ್ರುಗಳ ಮರ್ಮಗಳನ್ನೆಲ್ಲಾ ಬಲ್ಲವನಾದ್ದರಿಂದ ನಂದ ರಾಜ್ಯದಲ್ಲಿ ಅರ್ಧವನ್ನು ದೊರಕಿಸಿಕೊಂಡು ಕಾಲಕ್ರಮದಲ್ಲಿ ಸರ್ವರಾಜ್ಯವನ್ನು ಪಡೆಯಬಹುದೆಂದು ಆಲೋಚಿಸಿ ದಕ್ಷಿಣ ದಿಕ್ಕಿಗೆ ದಂಡೆತ್ತಿ ಹೊರಟನು.

---

19. ಇತ್ತ, ರಾಕ್ಷಸನು, ಚಾಣಕ್ಯನ ಪ್ರತಿಜ್ಞೆಯನ್ನು ನೆನೆದು ಅವನು ಅಭಿಚಾರಿಕವನ್ನು ಮಾಡುವನೆಂದು ಬಗೆದು, ಅದರ ಉಪಶಮನಕ್ಕೆ ದಾರಿಕಾಣದೇ ಚಿಂತಿಸುತ್ತಿರುವಾಗ ಮಾಂತ್ರಿಕನಾದ ಕ್ಷಪಣಕನೊಬ್ಬನು ತಿರುಗುತ್ತಿರುವುದನ್ನು ಕೇಳಿ — ಬ್ರಾಹ್ಮಣರೂ ಕ್ಷಪಣಕರೂ ನಿತ್ಯವೈರಿಗಳು. ಹಾಗಾಗಿ ಬ್ರಾಹ್ಮಣನಿಂದೊದಗುವ ಪೀಡೆಗಳನ್ನು ಪರಿಹರಿಸಲು ಈತನೇ ಸರಿಯಾದ

18. ಅಂತೆಯೇ ಅವನು ಅಗಣಿತ ಸೈನ್ಯದೊಡನೆ ಕುಸುಮಪುರವನ್ನು ಮುತ್ತಿದನು.

---

19. ಇಂದುಶರ್ಮನು ಕ್ಷಪಣಕನ ವೇಷದಲ್ಲಿ ರಾಕ್ಷಸನೇ ಮೊದಲಾದವರನ್ನು ಮೋಸಗೊಳಿಸಿದನು.

---

18. ಉಲೂಕನೆಂಬ ವೃದ್ಧಮಂತ್ರಿಯು ನಂದರೊಡನೆ ಯುದ್ಧ ಬೇಡವೆಂದು ಹೇಳಿದರೂ ಪರ್ವತರಾಜನು ಬಾಲಕನಾದ ಶಬರವರ್ಮನೆಂಬ ಮಂತ್ರಿಯ ಮಾತಿನಂತೆ — ರಂಧ್ರವು ಹುಟ್ಟುವ ವೇಳೆಯಲ್ಲಿಯೇ ನಂದನಿಗ್ರಹವು ಉಚಿತವೆಂದೂ, ಗುಣಾಢ್ಯನಾದ ಚಂದ್ರಗುಪ್ತನು ಕೃತಜ್ಞನಾಗಿ ಉಪಕಾರ ಸ್ಮರಣೆಯನ್ನು ಮಾಡಿಕೊಂಡು ಆಜ್ಞಾನುವರ್ತಿಯಾಗಿರುವನೆಂದೂ ಯುದ್ಧಕ್ಕೆ ಹೋಗಲು ನಿಶ್ಚಯಿಸಿ ಸೈನ್ಯವನ್ನು ಹೊರಡಿಸುವನು.

19. ರಾಕ್ಷಸನು ಕ್ಷಪಣಕನನ್ನು ಕರೆಯಿಸಿ ಗ್ರಹಬಲವನ್ನು ನೋಡಲು ಹೇಳಿದಾಗ ಆತನು —' ನಿಮಗೆ ಪರ್ಯವಸಾನದಲ್ಲಿ ಜಯಲಾಭ' ವೆಂದು ಹೇಳಿ ಮತ್ತೆ ಶತ್ರುಗಳ ಅನಿಷ್ಟನಿವೃತ್ತಿಗೋಸ್ಕರ ಸಮೀಪದಲ್ಲಿ ಜಪಶೀಲರಾದ ಬ್ರಾಹ್ಮಣರ ಮುಖದಿಂದ ಶುಭಲಗ್ನದಲ್ಲಿ ಶತ್ರುಪಲಾಯನ ಜಪವನ್ನು ಮಾಡಿಸುವಂತೆ ಸಲಹೆ ನೀಡುತ್ತಾನೆ.

ಸಂಪಾದಿಸಿದ್ದರಿಂದ ಅಲ್ಲಿಯ ಸೇನಾಪತಿಗಳೆಲ್ಲರೂ ಕ್ಷಪಣಕನ ವಶರಾದರು.	ಮನುಷ್ಯನೆಂದು ನಿಶ್ಚಯಿಸಿ ಆತನನ್ನು ಕರೆದು ವಿಪ್ರಕೋಪದ ಕಥೆಯನ್ನು ಅವನಿಗೆ ತಿಳಿಸಿದನು.		
20. ಕ್ಷಪಣಕನು ಒಂದು ಬಾರಿ ದುಷ್ಟಭೂತವನ್ನು ಎಬ್ಬಿಸಿ ಅಮಾತ್ಯಾದಿಗಳಲ್ಲಿ ಭಯ ಹುಟ್ಟಿಸಿ — ಯಾವನೋ ಬ್ರಾಹ್ಮಣ ನಿಮ್ಮ ಮೇಲೆ ಈ ಕೃತ್ಯವೆಸಗಿದ್ದಾನೆ. ನಾನು ಅದನ್ನು ಶಮನ ಮಾಡುತ್ತೇನೆಂದು ಹೇಳಿ ನವಿಲುಗರಿಗಳನ್ನು ತಿರುಗಿಸುವ ಮಾತ್ರದಿಂದಲೇ ಆ ದುಷ್ಟಭೂತವನ್ನು ಶಮನಗೊಳಿಸಿದನು.	20. ಅವನು ಆಲೋಚನೆ ಮಾಡಿದವರಂತೆ ನಟಿಸುತ್ತಾ, ಬ್ರಾಹ್ಮಣನ ಅಭಿಚಾರಕವನ್ನು ತಾನು ನಿವಾರಿಸುವುದಾಗಿ ಹೇಳಿದನು. ಒಮ್ಮೆ ನಂದರಾಜರಿಗೆ ಮಹಾಜ್ವರ ಬರಿಸಿ 'ಇದು ಚಾಣಕ್ಯನ ಮಾಟ' ವೆಂದು ನಂಬಿಕೆ ಹುಟ್ಟಿಸಿ ತನ್ನ ನವಿಲು ಗರಿಯನ್ನು ಅಲ್ಲಾಡಿಸುವುದರಿಂದಲೇ ಅದನ್ನು ನಿವಾರಿಸಿದನು ಮತ್ತು ಮೌರ್ಯನನ್ನು ನಾಡದಿಂದ ಹೊರಹೋಗುವಂತೆ ಮಾಡಿದನು.	20.	20. ಪರರಾಜರ ಬಳಿಯಲ್ಲಿರುವ ಗೂಢ ಮಂತ್ರಿಗಳಿಗೆ ಗುಪ್ತಪತ್ರಗಳನ್ನು ಬರೆಸುವಾಗ ಅಲ್ಲಿಯೇ ಕ್ಷಪಣಕನು [illegible]ನಾಗಿದ್ದುದನ್ನು ಕಂಡು — ಈತನು ವಿರಕ್ತನು. ಈ ಲೌಕಿಕ ವ್ಯವಹಾರದಲ್ಲಿ ಈತನಿಗೆ ಪ್ರಯೋಜನವಿಲ್ಲ. ಅದ್ದರಿಂದ ಈತನು ಇಲ್ಲದ್ದರೂ ಬಾಧಕವಿಲ್ಲವೆಂದು ಯೋಚಿಸಿ ರಾಕ್ಷಸನು [illegible] ತಿಳಿಸಬೇಕಾದ ವಿಚಾರಗಳನ್ನೆಲ್ಲ ಹೇಳಿದನು. ಈ ಎಲ್ಲಾ ವಿಷಯಗಳನ್ನು ಕ್ಷಪಣಕನು ಚಾಣಕ್ಯನಿಗೆ ಕೂಡಲೇ ತಿಳಿಸಿದನು.
21. ನಂದರಾಜ್ಯದ ಮೇಲೆ ಪರ್ವತೇಶ್ವರನು ದಂಡೆತ್ತಿ ಬರುವನೆಂದು ತಿಳಿದಾಗ ಕ್ಷಪಣಕನು ನಂದರ ಎಲ್ಲಾ ಸೇನಾಪತಿಗಳ ಮನೆಗಳಿಗೆ ಹೋಗಿ ಅವರೊಡನೆ —' ನೀವು ಯುದ್ಧಕ್ಕೆ ಹೋದರೆ ಸಾಯುತ್ತೀರಿ, ಹಾಗಾಗಿ ಹೋಗಬೇಡಿರಿ. ಈ ವಿಚಾರವು	21. ಪರ್ವತೇಶ್ವರನು ನಂದರ ಮೇಲೆ ದಂಡೆತ್ತಿ ಬರುವನೆಂದು ಕ್ಷಪಣಕನು ಅರಿತೊಡನೆ ನಂದ ಸೇನಾಪತಿಗಳೆಲ್ಲರನ್ನು ರಹಸ್ಯವಾಗಿ ಭೇಟಿ ಮಾಡಿ —' ಯುದ್ಧಕಾಲದಲ್ಲಿ ದೊಡ್ಡ ಕಾಲ ದೋಷವುಂಟು. ಹೋದಲ್ಲಿ ನಿಸ್ಸಂದೇಹವಾಗಿ ಮೃತ್ಯುವೇ	21.	21. ಚಾಣಕ್ಯನು ಪರ್ವತರಾಜನಿಗೆ ಈ ವಿಚಾರವನ್ನು ತಿಳಿಸಿ ಆಯಾ ರಾಜರುಗಳ ಮೂಲಕ ಆ ಎಂಟು ಜನ ವರ್ತಕರನ್ನು ಕಾವಲಿಟ್ಟು ಹೊರಡಿಸಿದನು ಮತ್ತು [illegible] ಬಲು ಎಚ್ಚರಿಕೆಯಿಂದ ಇದ್ದನು. ಕಾಶಿ ರಾಜನ [illegible]ಳಿಗೆ ನಿಯೋಗಿಯನ್ನು [illegible]

ಗುಟ್ಟಾಗಿರಲಿ — ಎಂದು ರಹಸ್ಯವಾಗಿ ಬೋಧಿಸಿದನು. ಅವರೆಲ್ಲರೂ ಅದನ್ನು ನಂಬಿದರು.	ಬರುವುದು' — ಎಂದು ಎಲ್ಲರನ್ನು ನಂಬಿಸಿದನು. ಸಂಬಳವನ್ನು ನಿಲ್ಲಿಸಿದ್ದರಿಂದ ನಂದರಲ್ಲಿ ಕುಪಿತನಾಗಿದ್ದ ಶಬರರಾಜನನ್ನು ಚಂದ್ರಗುಪ್ತನ ಒಳಹಾಕಿಕೊಂಡನು.		ಆತನ ಮೂಲಕ ಮೋಸದಿಂದ ಪರ್ವತರಾಜನನ್ನು ನಿಗ್ರಹಿಸಲೆಣಿಸಿದ ರಾಕ್ಷಸನ ಕಪಟವನ್ನು ಚಾಣಕ್ಯನು ಅರಿತು ಅದರಿಂದ ನಂದರಿಗೇ ಕೆಡುಕಾಗುವಂತೆ ಮಾಡಿದನು.
22. ವೈಶಾಖ ಮಾಸದ ಹುಣ್ಣಿಮೆಯಂದು ದಿನ ಪರ್ವತೇಶ್ವರ — ಚಾಣಕ್ಯರು ದೊಡ್ಡ ಮ್ಲೇಚ್ಛ ಬಲದೊಂದಿಗೆ ಪಾಟಲೀಪುತ್ರವನ್ನು ಮುತ್ತಿಗೆ ಹಾಕಿದರು.	22. ಬೆಳಗಾಗುತ್ತಲೇ ಮಹಾಸೈನ್ಯದೊಂದಿಗೆ ಚಾಣಕ್ಯ ಮತ್ತು ಪರ್ವತರಾಜರು ಒಂದು ದಿಕ್ಕಿನಿಂದಲೂ ಶಬರರಾಜ ಮತ್ತು ಚಂದ್ರಗುಪ್ತರು ಇನ್ನೊಂದು ದಿಕ್ಕಿನಿಂದಲೂ ಪುಷ್ಪಪುರವನ್ನು ಮುತ್ತಿಗೆ ಹಾಕಿದರು. (ಆಷಾಢ ಮಾಸ ಕೃಷ್ಣ ಪಕ್ಷದ ಮೊದಲನೆಯ ಮಂಗಳವಾರ ಶತ್ರುವು ಪಟ್ಟಣವನ್ನು ಮುತ್ತುವನೆಂದು ಕ್ಷಪಣಕ ಹೇಳಿದ್ದನು).	22.	22. ವರ್ಷಾಕಾಲ ಕಳೆದು ಶರತ್ಕಾಲ ನಡೆಯುವುದರಿಂದ ಇದು ಅರಸುಗಳಿಗೆ ದಂಡಯಾತ್ರಾ ಸಮಯವು — ಎಂದು ಚಾಣಕ್ಯನು ಹೇಳಿ ಪರ್ವತರಾಜನ ಸೈನ್ಯವನ್ನು ಹೊರಡಿಸಿದನು.
23. ರಾಕ್ಷಸನು ಎಲ್ಲಾ ಸೇನಾಪತಿಗಳನ್ನು ಯುದ್ಧಕ್ಕಾಗಿ ನಿಯೋಜಿಸಿದ್ದರೂ ಕ್ಷಪಣಕನ ಮಾತಿನಲ್ಲಿ ವಿಶ್ವಾಸಹೊಂದಿದ್ದ ಅವರ್ಯಾರೂ ಯುದ್ಧಕ್ಕೆ ಹೋಗಲಿಲ್ಲ. ನವನಂದರೂ ರಾಕ್ಷಸನೂ ಕೆಲವುಮಂದಿ	23. ನಂದರು ಸೇನಾಪತಿಗಳನ್ನು ಕರೆಯಿಸತೊಡಗಿದರೂ ಅವರೆಲ್ಲರೂ ಒಂದಿಲ್ಲೊಂದು ನೆವ ಹೇಳುತ್ತಾ ತಡ ಮಾಡತೊಡಗಿದರು. ರಾಕ್ಷಸನು ಚಂದ್ರಗುಪ್ತನೆದುರಾಗಿ ಯುದ್ಧಮಾಡಲು	23. ರಾಕ್ಷಸನ ಶೌರ್ಯ ಮತ್ತು ತಂತ್ರ ವೈಭವಗಳನ್ನು ನಂಬಿದ ನವನಂದರು ಧೈರ್ಯದಿಂದಲೇ ಮುತ್ತಿಗೆಯನ್ನು ಎದುರಿಸಿದರು. ಪರ್ವತೇಶ್ವರನ ಸೈನ್ಯವೆಂಬ ಪ್ರಬಲವಾದ	23. ರಾಕ್ಷಸನು ಮಾಡಿದ ಘೋ[illegible]ಪಾಯವನ್ನು ಭಂಗ ಮಾಡಿದ್ದಲ್ಲದೇ ಚಾಣಕ್ಯನು ಪರ್ವತೇಶ್ವರನ ಸೈನ್ಯವನ್ನು ಗಂಗಾ ಸರಯೂ ನದಿಗಳ ಸಂಗಮಸ್ಥಾನಕ್ಕೆ ತಂದನು. ಮಾಸೋಪವಾಸಿಯು [illegible]

ಸೈನಿಕರೊಂದಿಗೆ ನಗರದಿಂದ ಹೊರಟು ಮ್ಲೇಚ್ಛರೊಂದಿಗೆ ಯುದ್ಧಮಾಡಿದರು. ಆಗ ನವನಂದರು ಹತರಾದರು. ರಾಕ್ಷಸನು ತನ್ನ ಪರಾಕ್ರಮಾತಿಶಯದಿಂದಲೂ ಚಾಣಕ್ಯನ ಉಪೇಕ್ಷೆಯಿಂದಲೂ ಘಾಸಿಯಾಗದೇ ಉಳಿದನು. ಶತ್ರು ಸೈನ್ಯವನ್ನು ದಂಡೋಪಾಯದಿಂದ ಗೆಲ್ಲುವುದು ಅಸಾಧ್ಯವಾದುದರಿಂದ ಬುದ್ಧಿಬಲದಿಂದಲೇ ನಿಧಾನವಾಗಿ ಅವರನ್ನು ಜಯಿಸಬೇಕೆಂದು ರಾಕ್ಷಸನು ನಿರ್ಣಯಿಸಿದನು.

ಬಂದಾಗ ಚಂದ್ರಗುಪ್ತನು — ತನಗೆ ನ್ಯಾಯವಾಗಿ ಬರಬೇಕಾಗಿದ್ದ ರಾಜ್ಯದ ಒಂದಂಶವನ್ನಾದರೂ ಕೊಡಬೇಕೆಂದೂ, ಯುದ್ಧವನ್ನು ತತಕ್ಷಣ ನಿಲ್ಲಿಸಬಹುದಾಗಿಯೂ ಹೇಳಿದನು. ಇದನ್ನು ಕೇಳಿದ ರಾಕ್ಷಸನು —'ಪಾಪಿ, ಯುದ್ಧಮಾಡು, ನಿನ್ನ ದುರ್ನಯವೆಲ್ಲ ನನಗೆ ಗೊತ್ತು' ಎಂದು ರೋಷದಿಂದ ಅಬ್ಬರಿಸಿದನು. ಯುದ್ಧದಲ್ಲಿ ನವನಂದರು ಮೃತ್ಯುವಶರಾದರು. ರಾಕ್ಷಸನು ಇದನ್ನು ಕಂಡು ದುಃಖದಿಂದ ಪಟ್ಟಣವನ್ನು ಸೇರಿದನು.

ಗಾಳಿಯ ಬಲದಿಂದ [illegible] ನೂಕಿದ ಚಾಣಕ್ಯನ ಕ್ರೋಧಾಗ್ನಿಯಲ್ಲಿ ನಂದರೂ, ಅವರ ಸೈನಿಕರೂ ಪತಂಗಗಳಂತೆ ನಾಶಗೊಂಡರು. ಅನೇಕ ಪ್ರಯತ್ನ ಮಾಡಿದರೂ ಜಯಿಸಲಾಗದ ಶತ್ರುಬಲವನ್ನು ನೋಡಿ ರಾಕ್ಷಸನು ಕುಟಿಲೋಪಾಯಗಳಿಂದ ಚಂದ್ರಗುಪ್ತನನ್ನು ಕೊಲ್ಲಲು ನಿಶ್ಚಯಿಸಿದನು.

ನದೀ ತೀರದ 'ಏಕಾಂತಕ್ಕೆ' ನಂದರು ಬರುವಂತೆ 'ಏರ್ಪಾಟು' ಮಾಡಿದನು. ಸಿದ್ಧಾರ್ಥಕನು ಬಾಗಿಲಾಯಾದಿಗಳಿಗೆ ನಂದರಲ್ಲಿ ಉಪೇಕ್ಷೆಯುಂಟಾಗುವಂತೆ ಮಾಡಿದನು. ದೇವತಾಪ್ರಸಾದರ್ಶನದ ನೆಪದಲ್ಲಿ ನಂದರನ್ನು ರಾಕ್ಷಸನಿಂದ ಬೇರ್ಪಡಿಸಿ ಜಪಶಾಲೆಯ ಬಳಿ ಬರುವಂತೆ ಮಾಡಲಾಯಿತು. ಆಗ 'ಏಕಾಂಗಿ'ಗಳಾಗಿ ಹೋರಾಡಿದ ನಂದರು ಯುದ್ಧದಲ್ಲಿ ಮಡಿದರು.

24. ಮತ್ತೆ ರಾಕ್ಷಸನು ಚಂದ್ರಗುಪ್ತ — ಚಾಣಕ್ಯ — ಪರ್ವತರಾಜರೊಂದಿಗೆ ಸಂಧಿ ಮಾಡಿಕೊಂಡನು. ಅವರನ್ನು ಗೆದ್ದು ಸರ್ವಾರ್ಥಸಿದ್ಧಿಯನ್ನು ರಾಜನನ್ನಾಗಿ ಮಾಡುವುದು ಅತನ ಉದ್ದೇಶವಾಗಿತ್ತು. ರಾಕ್ಷಸನು ಪರ್ವತರಾಜನಲ್ಲೂ ಭೇದ ಬಿತ್ತುತ್ತಾನೆ.

24. ರಾಕ್ಷಸನು ಮೌರ್ಯನನ್ನು ವಂಚನೆಯಿಂದ ಕೊಲ್ಲಬಯಸಿ ಅತನ ಬಳಿಗೆ ದೀನನಂತೆ ಬಂದು ಮಂತ್ರಿತ್ವವನ್ನು ಬೇಡಿದನು. ಚಾಣಕ್ಯನಿಗೆ ಪರ್ವತೇಶ್ವರನ ಮೇಲೆ ನಂಬಿಕೆ ಇರಲಿಲ್ಲ. ಆದರೆ ಗುಣಶಾಲಿಯಾದ ರಾಕ್ಷಸನನ್ನು ಅತನು ಮೆಚ್ಚಿಕೊಂಡಿದ್ದನು.

24. ಉಪಾಯದಿಂದ ಶತ್ರುಗಳನ್ನು ಗೆಲ್ಲುವುದಕ್ಕಾಗಿ, ರಾಕ್ಷಸನು ಸರ್ವಾರ್ಥಸಿದ್ಧಿಯನ್ನು ಸುರಂಗಮಾರ್ಗದಿಂದ ಹೊರಡಿಸಿಕೊಂಡು ತಾನೂ ಅವನೊಡನೆ ಪಾರಾದನು. ಅನಂತರ ಚಂದ್ರಗುಪ್ತ—ಪರ್ವತಕರ ವಶವಾಯಿತು.

24. ನಂದ ವೈರಿಯಾದ ಚಂದ್ರಗುಪ್ತನನ್ನು ಉಪಾಯಾಂತರದಿಂದ ಸಂಹರಿಸಿ ವೃದ್ಧನಾದ ಸರ್ವಾರ್ಥಸಿದ್ಧಿ ರಾಜನಿಗೆ ಸ್ವೀಕೃತಪುತ್ರನನ್ನಾದರೂ ಮಾಡಿ ತನ್ನ ಪೌರುಷ, ಸಾಹಸ, ಸ್ವಾಮಿಭಕ್ತಿಗಳು ವ್ಯರ್ಥವಾಗದಂತೆ ಮಾಡಬೇಕೆಂದು ಮಾಡಬೇಕೆಂದು ನಿಶ್ಚೈಸಿ ರಾಕ್ಷಸನು ಪಟ್ಟಣದಿಂದ ಹೊರಗೆ ಹೊರಟುಹೋದನು.

25. ಚಂದ್ರಗುಪ್ತನನ್ನು ರಹಸ್ಯವಾಗಿ ಕೊಲ್ಲಲು ರಾಕ್ಷಸನು ಕ್ಷಪಣಕನನ್ನು ಕೇಳಿದನು. ಆಗ ಆತನು ವಿಷಕನ್ಯೆಯನ್ನು ನಿರ್ಮಿಸಿಕೊಟ್ಟನು. ರಾಕ್ಷಸನು ಆ ಕನ್ಯೆಯೊಂದಿಗೆ ಚಂದ್ರಗುಪ್ತನ ಬಳಿ ಸಮೀಪಿಸಿ ಸ್ವೀಕರಿಸುವಂತೆ ಕೇಳಿದನು. ಆಗ ಚಾಣಕ್ಯನು ಆಕೆಯನ್ನು ಪರ್ವತ ರಾಜನಿಗೆ ಒಪ್ಪಿಸುವಂತೆ ಹೇಳಿದನು. ಅದಕ್ಕೆ ಚಂದ್ರಗುಪ್ತನು ಸಮ್ಮತಿಸಿದನು. ಪರ್ವತಕೇಶ್ವರನಾದರೋ ಆ ಕನ್ಯೆಯೊಂದಿಗೆ ವಿಹರಿಸಲುದ್ಯುಕ್ತನಾಗಿ ಮರಣ ಹೊಂದಿದನು.

26. ಪರ್ವತೇಶ್ವರನು ಮಡಿದ ವಿಚಾರವು ಜನಜನಿತವಾಗಲು ಚಾಣಕ್ಯನು ಕೋಪವನ್ನು ಪ್ರಕಟಿಸುತ್ತಾ — ' ದುರಾತ್ಮನಾದ ರಾಕ್ಷಸನೇ ಮತ್ಸರದಿಂದ ಪರ್ವತರಾಜನನ್ನು ಕೊಂದಿದ್ದಾನೆ. ಆತನನ್ನು ಎಲ್ಲಿದ್ದರೂ ಹಿಡಿದು ತನ್ನಿ ' ಎಂದು ಆಜ್ಞಾಪಿಸಿದನು.

25. ಕ್ಷಪಣಕನು ಘೋರವಾದ ಅಭಿಚಾರ ಕ್ರಿಯೆಯಿಂದ ಸುಂದರಿಯೊಬ್ಬಳನ್ನು ಸೃಷ್ಟಿಸಿ ರಾಕ್ಷಸನಿಗೆ ಕೊಟ್ಟನು. ರಾಕ್ಷಸನು ಅವಳನ್ನು ಗೌಪ್ಯವಾಗಿ ರಕ್ಷಿಸಿಟ್ಟುಕೊಂಡಿದ್ದು ಚಾಣಕ್ಯನ ಬಳಿಗೆ ಹೋಗಿ ಚಂದ್ರಗುಪ್ತನಿಗೆ ಯೋಗ್ಯಳಾದ ಕನ್ಯೆಯು ತನ್ನಲ್ಲಿರುವುದಾಗಿ ತಿಳಿಸಿ ಸ್ವೀಕರಿಸುವಂತೆ ಹೇಳಿದನು. ಅದಕ್ಕೆ ಚಾಣಕ್ಯನು ಸಮ್ಮತಿಸಿ, ಸಮಯ ಬಂದಾಗ ಪರಮ ಮಿತ್ರನಾದ ಪರ್ವತರಾಜನೊಡನೆ ಇವಳ ಸಮಾಗಮಕ್ಕೆ ವ್ಯವಸ್ಥೆಮಾಡಿದನು. ಪಾಪಾತ್ಮನಾದ ಪರ್ವತರಾಜನು ಅವಳಿಂದ ಆಲಿಂಗಿತನಾಗಿ ಮರಣಹೊಂದಿದನು.

26. ಪರ್ವತರಾಜನು ಸತ್ತು ಬಿದ್ದಿರುವುದನ್ನು ಪೌರರು ಚಾಣಕ್ಯನಿಗೆ ತಿಳಿಸಿದಾಗ — ಆತನು ಸಿಟ್ಟನ್ನು ಪ್ರದರ್ಶಿಸುತ್ತಾ ' ರಾಜವಧೆಗೆ ಕಾರಣನಾದ ಆ ದುರಾತ್ಮ ರಾಕ್ಷಸನನ್ನು ಕೊಲ್ಲಿರಿ ' ಎಂದನು.

25. ವಿಜಯದ ಉಪಹಾರವಾಗಿ ಚಂದ್ರಗುಪ್ತನಿಗೆ ವಿಷಕನ್ಯೆಯು ಒಪ್ಪಿಸಲ್ಪಟ್ಟಳು. ಅದರ ಗುಟ್ಟನ್ನು ತಿಳಿದ ಚಾಣಕ್ಯನು ಚಂದ್ರಗುಪ್ತನ ಬದಲಾಗಿ ಪರ್ವತಕನು ಅವಳಿಂದ ಮಡಿಯುವಂತೆ ಮಾಡಿದನು.

26.

25. ರಿಪುನಿಗ್ರಹವು ಸಾಮಾದ್ಯುಪಾಯಗಳಿಂದ ಅಸಾಧ್ಯವೆಂದು ತಿಳಿದ ರಾಕ್ಷಸನು ತಾನು ಸಾಕಿ ಬೆಳೆಸಿದ್ದ ವಿಷಕನ್ಯೆಯನ್ನು ಕ್ಷಪಣಕನ ಮೂಲಕ ಚಂದ್ರಗುಪ್ತನಿಗೆ ಕಳುಹಿಸಿಕೊಟ್ಟನು. ಇದನ್ನು ತಿಳಿದ ಚಾಣಕ್ಯನು ಕ್ಷಪಣಕನನ್ನು ಆ ಕನ್ಯೆಯೊಂದಿಗೆ ಪರ್ವತರಾಜನಲ್ಲಿಗೆ ಕಳುಹಿಸಿದನು. ಕಾಮಾತುರನಾದ ಪರ್ವತರಾಜನು ಅವಳೊಂದಿಗೆ ಸುಖಿಸಿ ಗತಪ್ರಾಣನಾದನು.

26. ಚಂದ್ರಗುಪ್ತನ ದೂತರು ಪರ್ವತರಾಜನು ಕಾಲಾಧೀನನಾದನೆಂಬುದನ್ನು ಚಾಣಕ್ಯನಿಗೆ ತಿಳಿಸಿದಾಗ — ' ತಾವು ಎಷ್ಟು ಜಾಗರೂಕರಿದ್ದಾಗ್ಯೂ ಈ ಪ್ರಮಾದ ಸಂಭವಿಸಿ ರಾಕ್ಷಸನಿಗೆ ಸಂತೋಷ ಲಭಿಸುವಂತಾಯಿತು. ನಮಗೆ ಒಂದು ನೇತ್ರ ಲೋಪವಾದಂತಾಯಿತು ' ಎಂದು ಜನಗಳ ಮುಂದೆ ದುಃಖಿಸಿದನು.

27· ಇತ್ತ ರಾಕ್ಷಸನು ಸರ್ವಾರ್ಥಸಿದ್ಧಿ
ಯನ್ನು ತಪೋವನಕ್ಕೆ ಕಳುಹಿಸಿ
ಚಂದ್ರಗುಪ್ತನನ್ನು ಮೋಸದಿಂದ ಸಂ
ಹರಿಸಲು ದಾರುವರ್ಮನೇ ಮೊದಲಾದ
ಅಪ್ತರನ್ನು ನೇಮಿಸಿದನು ಮತ್ತು ತನ್ನ
ಆಪ್ತ ಗೆಳೆಯನಾದ ರತ್ನಪಡಿ ವ್ಯಾಪಾರಿ
ಚಂದನದಾಸನ ಮನೆಯಲ್ಲಿ ತನ್ನ ಪತ್ನಿ
ಪುತ್ರರನ್ನು ನಿಲ್ಲಿಸಿ ತಾನು ತಪ್ಪಿಸಿ
ಕೊಂಡು ಹೋದನು·

27· ರಾಕ್ಷಸನಿಂದ ಪ್ರಯುಕ್ತರಾದ ಶಿಲ್ಪಿ,
ಮಾವುತ, ವೈದ್ಯ ಮುಂತಾದವರು ಚಂದ್ರ
ಗುಪ್ತನನ್ನು ಕೊಲ್ಲಬೇಕೆಂದು ಹವಣಿಸು
ತ್ತಿದ್ದರು· ಸರ್ವಾರ್ಥಸಿದ್ಧಿಯು ಮುನಿ
ವೇಷದಲ್ಲಿದ್ದು ತನ್ನ ಚಾರರ ಮೂಲಕ
ಚಂದ್ರಗುಪ್ತನಿಗೆ ವಿಷಯುಕ್ತ ಬದರೀಫಲ
ಗಳನ್ನು ಕಳುಹಿಸಿದಾಗ, ಚಾಣಕ್ಯನು ಅದೇ
ಫಲಗಳನ್ನು ಹಿಂದಕ್ಕೆ ಕಳುಹಿಸಿದನು· ಅವ
ನ್ನು ತಿಂದು ಸರ್ವಾರ್ಥಸಿದ್ಧಿಯು ಮೃತ
ನಾದನು· ರಾಜನು ಕೊಲ್ಲಿಸಬಹುದೆಂಬ
ಭಯದಿಂದ ರಾಕ್ಷಸನು ತನ್ನ ಕುಟುಂಬ
ವನ್ನು ಮಿತ್ರನಾದ ಚಂದನದಾಸನ ಮನೆ
ಯಲ್ಲಿರಿಸಿ ನಗರವನ್ನು ಬಿಟ್ಟುಹೊರಟು
ಹೋದನು·

27·

27· ಚಂದ್ರಗುಪ್ತನ ಗುಣಗಾನವನ್ನು
ಕೇಳಲು ಸೈರಿಸದೆ ಸರ್ವಾರ್ಥಸಿದ್ಧಿಯು
ಸುರಂಗಮಾರ್ಗದ ಮೂಲಕ ಕಾಡಿಗೆ
ತೆರಳಿದನು· ರಾಕ್ಷಸನು ಬರ್ಬರಕ, ದಾರು
ವರ್ಮ, ವೈದ್ಯ, ಭವನಪಾಲಕರೇ ಮೊದ
ಲಾದ ಆಪ್ತರಿಂದ ಚಂದ್ರಗುಪ್ತನನ್ನು
ಕೊಲ್ಲಿಸಲೆಳಸಿದನು· ಆದರೆ ಚಾಣಕ್ಯನ
ಎಚ್ಚರಿಕೆಯಿಂದ ಅದಾವುದೂ ಸಫಲವಾಗ
ಲಿಲ್ಲ·

28· ವಿಷಕನ್ಯೆಯಿಂದಾಗಿ ಪರ್ವತಕನು
ಮಡಿದಾಗ ಚಾಣಕ್ಯನು ಭಾಗುರಾಯ
ಣನನ್ನು ಮಲಯಕೇತುವಿದ್ದಲ್ಲಿಗೆ
ಕಳುಹಿಸಿ, ಆತನೊಂದಿಗೆ ಕಪಟಸ್ನೇಹ
ವನ್ನು ಬೆಳೆಸುವಂತೆ ಮಾಡಿ ಆ ಮೂ
ಲಕ ಮಲಯಕೇತುವನ್ನು ಸ್ವದೇಶಕ್ಕೆ
ತೆರಳುವಂತೆ ಮಾಡಿದನು· ಆತನ

28· ಪರ್ವತರಾಜನು ಮೃತಹೊಂದಿದ
ವಿಚಾರವನ್ನು ಕೇಳಿದ ಚಾಣಕ್ಯನು ಭಾಗು
ರಾಯಣನನ್ನು ಕರೆದು — ಪರ್ವತೇಂದ್ರ
ನಾದ ಮಲಯಕೇತುವಿನಲ್ಲಿ ಗೂಢ
ವೃತ್ತಿಯನ್ನು ಬೆಳೆಸುವಂತೆ ಹೇಳಿದನು·
ಭಾಗುರಾಯಣನ ಮಾತನ್ನು ನಂಬಿದ
ಮಲಯಕೇತುವು ತನ್ನ ಪಟ್ಟಣಕ್ಕೆ

28·

28· ಚಾಣಕ್ಯನಿಂದ ನೇಮಿಸಲ್ಪಟ್ಟ ಭಾಗು
ರಾಯಣನೆಂಬ ಸೇನಾಪತಿಯು ಮಲಯ
ಕೇತುವಿನ ಬಳಿ ಬಂದು — ಚಾಣಕ್ಯನೇ
ಪರ್ವತರಾಜನನ್ನು ಕೊಂದನೆಂದು ತಿಳಿಸಿ,
ಇಲ್ಲೇ ಇದ್ದರೆ ಜೀವಕ್ಕೆ ಅಪಾಯವುಂಟೆಂ
ದು ಎಚ್ಚರಿಸಿ ಆತನನ್ನು ತನ್ನ ಪಟ್ಟಣಕ್ಕೆ
ಕಳುಹಿಸಿದನು· ಭಾಗುರಾಯಣನ [illegible]

ಚಿಕ್ಕಪ್ಪನಾದ ವೈರೋಧಕನು ಚಾಣಕ್ಯನ ಭಿರವನೆಂಬ ಮಾತಿನಿಂದ ಅಲ್ಲೇ ಉಳಿದನು.	ಹಿಂದಿರುಗಿದನು.		ಹೀಗೆ ಮರುಳಾದ ಮಲಯಕೇತುವು ಆತನನ್ನೇ ತನ್ನ ಮಂತ್ರಿಯನ್ನಾಗಿ ನೇಮಿಸಿಕೊಂಡನು.
29. ಹೀಗಿರಲು ಮೊದಲೇ 'ಒಡಹೋಗಿದ್ದ ರಾಕ್ಷಸನು ಮಲಯಕೇತುವಿನ ಬಳಿ ಸಾರಿ —' ದುರಾತ್ಮರಾದ ಚಾಣಕ್ಯ — ಚಂದ್ರಗುಪ್ತರನ್ನು ನಾಶಮಾಡಿ ನಿನ್ನನ್ನೇ ರಾಜನಾಗಿ ಮಾಡುವೆನು' ಎಂದು ಮಾತುಕೊಟ್ಟನು.	29. ಪುಷ್ಪಪುರದಿಂದ ಹೊರಬಿದ್ದ ರಾಕ್ಷಸನು ಮೌರ್ಯನ ವಧೋಪಾಯವನ್ನು ಚಿಂತಿಸುತ್ತಿರಲು, ಮಲಯಕೇತುವು ತನ್ನ ರಾಜ್ಯಕ್ಕೆ ಹಿಂದಿರುಗಿದ ವಿಷಯವು ಆತನಿಗೆ ತಿಳಿದಾಗ ಅವನು ಮಲಯಕೇತುವಿದ್ದೆಡೆಗೆ ಬಂದು —' ಆ ಮೌರ್ಯಪಶುವನ್ನು ಕೊಂದು ರಾಜ್ಯವನ್ನೆಲ್ಲಾ ನಿನಗೇ ಕೊಡುವೆ' ನೆಂದು ವಾಗ್ದಾನ ವಿತ್ತನು.	29. ತ್ರಿವೇಣಿ ರಾಕ್ಷಸನೂ ಮಲಯಕೇತುವಿದ್ದೆಡೆಗೆ ತೆರಳಿ, ಚಂದ್ರಗುಪ್ತನನ್ನು ಗೆದ್ದು ಸಮಸ್ತ ನಂದರಾಜ್ಯವನ್ನು ಅವನಿಗೆ ಕೊಡಿಸುವೆನೆಂಬ ಪ್ರೋತ್ಸಾಹ ವಚನದೊಂದಿಗೆ ಅವನೊಂದಿಗೆ ಸಂಧಿ ಮಾಡಿಕೊಂಡನು.	29. ಪಾಟಲೀಪುರದಲ್ಲಿ ತನ್ನ ಕಾರಸ್ಥಾನಗಳೆಲ್ಲಾ ವಿರುದ್ಧ ಫಲ ಕೊಟ್ಟುದನ್ನು ಕೇಳಿ — ಚಂದ್ರಗುಪ್ತ — ಚಾಣಕ್ಯರ ಗರ್ವವನ್ನು ಮುರಿದು, ನಂದ ರಾಜ್ಯವನ್ನು ಮಲಯಕೇತುವಿಗೆ ಕೊಡಿಸುವುದಾಗಿ ನಿಶ್ಚಯಿಸಿದನು. ಹಾಗೆ ಶಾಹುರಿ ನಗರಕ್ಕೆ ಬಂದು ಮಲಯಕೇತುವನ್ನು ಕಂಡು ತನ್ನ ಸಂಕಲ್ಪವನ್ನು ತಿಳಿಸುವನು.
30. ಅದನ್ನೊಪ್ಪಿದ ಮಲಯಕೇತುವು ರಾಕ್ಷಸನನ್ನೇ ತನ್ನ ಮುಖ್ಯಮಂತ್ರಿಯನ್ನಾಗಿ ಮಾಡಿಕೊಂಡನು.	30. ಮಲಯಕೇತುವೂ ಆತನಿಗೇ ಮಂತ್ರಿಪದವಿಯನ್ನಿತ್ತನು.	30. ಹೀಗೆ ರಾಕ್ಷಸನು ಮಲಯಕೇತುವಿನ ಮುಖ್ಯಾಮಾತ್ಯನಾಗಿದ್ದು ವಿಜಯಪ್ರಾಪ್ತಿಗಾಗಿ ಕಾರ್ಯಾಚರಣೆಯನ್ನಾರಂಭಿಸಿದನು.	30. ಅದನ್ನು ಕೇಳಿದ ಮಲಯಕೇತುವು ಅವನಿಗೆ ಸರ್ವಾಧಿಕಾರವನ್ನು ಕೊಟ್ಟನು.

ಈ ಮೇಲಿನ ತೌಲನಿಕ ಅಧ್ಯಯನದಿಂದ ತಿಳಿದುಬರುವುದೇನೆಂದರೆ ಕೆಂಪುನಾರಾಯಣನು ತನ್ನ ಕಾಲಕ್ಕಿಂತ ಮೊದಲ ಕವಿಗಳ ಹೇಳಿಕೆಯನ್ನು ಯಥಾವತ್ತಾಗಿ ಅನುಸರಿಸಿಲ್ಲ. ತನಗೆ ಬೇಕಾದಂತೆ ಬದಲಿಸಿಕೊಂಡಿದ್ದಾನೆ. ಉದಾಹರಣೆಗೆ — ನಂದರನ್ನು ಪರೀಕ್ಷಿಸಲು ಕಪಟಸಿಂಹವನ್ನು ಕಳುಹಿಸಿದ ರಾಜನು

ಅನ್ಯದೇಶದವನೆಂದು ಮಹಾದೇವನು, ವಂಗದೇಶದವನೆಂದು ರವಿನರ್ತಕನು, ಸಿಂಹಳದ ರಾಜನೆಂದು ಢುಂಢಿರಾಜನು ಹೇಳಿದ್ದರೆ (ಮೇಲಿನ ಸಂಖ್ಯೆ 10) ಕೆಂಪುನಾರಾಯಣನು ಪರ್ವತೇಶ್ವರನು — ಎಂದು ಹೇಳಿದ್ದಾನೆ. ಮತ್ತೆ ಚಂದ್ರಗುಪ್ತ ಚಾಣಕ್ಯರು ಪರ್ವತೇಶ್ವರನಲ್ಲಿಗೇ ಸಹಾಯ ಕೇಳಲು ಹೋಗುವವರಾದ್ದರಿಂದ ಇದು ಹೆಚ್ಚು ಔಚಿತ್ಯಪೂರ್ಣವಾಗಿದೆ. ಇಂತಹ ಅನೇಕ ಹೊಸ ಸಂಗತಿಗಳನ್ನು, ಕಥೆಗೆ ಒಪ್ಪುವಂತಹ ಸನ್ನಿವೇಶಗಳನ್ನು 'ಮುದ್ರಾಮಂಜೂಷ' ಕಾರನು ಸ್ವತಂತ್ರವಾಗಿ ಸೃಷ್ಟಿಸಿಕೊಂಡಿದ್ದಾನೆ.

••••••••

ಮುದ್ರಾರಾಕ್ಷಸ ಮತ್ತು ಮುದ್ರಾಮಂಜೂಷ [12]

ಮುದ್ರಾರಾಕ್ಷಸ ನಾಟಕ ಮುದ್ರಾಮಂಜೂಷವು ಗದ್ಯ ಕಥೆ. ನಾಟಕದ ಮೊದಲನೆಯ ಅಂಕ 'ಮುದ್ರಾಲಾಭ'. ಗದ್ಯ ಕಥೆಯ ಹದಿನೆಂಟು ಆಶಯಗಳಲ್ಲಿ 'ರಾಕ್ಷಸನ ಮುದ್ರಿಕಾಗ್ರಹಣವು' ಎಂಬುದು ಹದಿಮೂರನೆಯ ಆಶಯ (ಅಧ್ಯಾಯ). ಅಂದರೆ ನಾಟಕ ಆರಂಭವಾಗುವ ವೇಳೆಗೆ ಗದ್ಯ ಕಥೆಯಲ್ಲಿ ಮೂರನೆಯ ಎರಡು ಭಾಗದ ವಿಸ್ತಾರವಾದ ಕಥೆ ಮುಗಿದಿದೆ. ಇಲ್ಲಿಂದ ಮತ್ತೆ ಕಥೆಯು ನಾಟಕವನ್ನು ಅನುಸರಿಸಿದರೂ ಮೂಲದಲ್ಲಿಲ್ಲದ ಅಂಶಗಳನ್ನು ಜೋಡಿಸಿ, ಮೂಲದಲ್ಲಿ ಹೇಳಿದ ಕಥೆಯನ್ನು ವಿಸ್ತರಿಸಿ ಹೇಳಿ, ಹೊಸ ಪ್ರಸಂಗಗಳನ್ನು ಸೃಷ್ಟಿಮಾಡಿ, ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ವಿಸ್ತಾರವಾಗಿ ಹೇಳಿದ್ದಲ್ಲಿ, ಕಥೆಯ ಮುನ್ನೋಟಕ್ಕೆ ತಕ್ಕಷ್ಟು ಸಂಕ್ಷೇಪ ಮಾಡಿ ಹೇಳಿ ಕೆಂಪುನಾರಾಯಣನು ಕುತೂಹಲವನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ.

ಚಾಣಕ್ಯನ ಗೂಢಚಾರನಾದ ನಿಪುಣಕನು ರಾಕ್ಷಸನ ಮುದ್ರೆಯನ್ನು ಚಾಣಕ್ಯನಿಗೆ ತಂದೊಪ್ಪಿಸುವುದು; ಚಾಣಕ್ಯನು ಸಿದ್ಧಾರ್ಥಕನ ಮೂಲಕ ಕಳುಹಿಸಿದ ಲೇಖನವನ್ನು ಶಕಟದಾಸನು ಪ್ರತಿ ಮಾಡಿಕೊಡುವುದು; ರಾಕ್ಷಸನ ಪತ್ನೀಪುತ್ರರನ್ನು ಒಪ್ಪಿಸದೇ ಇದ್ದುದಕ್ಕಾಗಿ ಚಂದನದಾಸನನ್ನು ಚಾಣಕ್ಯನು ಸೆರೆಮನೆಗೆ ಕಳುಹಿಸಿದನು; ನಂದ ಪಕ್ಷದವರಾಗಿದ್ದ ಭಾಗುರಾಯಣನೇ ಮೊದಲಾದವರನ್ನು ಚಾಣಕ್ಯನು ತನ್ನ ಕಡೆಗೆ ಒಲಿಸಿಕೊಂಡು, ಹೊರಕ್ಕೆ ಅವರು ನಂದ ಪಕ್ಷದವರಂತೆಯೇ ನಟಿಸುತ್ತಿರುವಂತೆ ಗೊತ್ತುಪಡಿಸಿದ್ದು — ಇವು ಮೊದಲನೆಯ ಅಂಕದ ಮುಖ್ಯ ಘಟನೆಗಳು. ಇವುಗಳಲ್ಲಿ ಕೆಂಪು ನಾರಾಯಣನು ಸಾಕಷ್ಟು ಬದಲಾವಣೆಗಳನ್ನು ಮಾಡಿದ್ದಾನೆ. ಇಲ್ಲಿಯ ಗುಪ್ತಚರ (ನಿಪುಣಕನಲ್ಲ) ಮರಾಳಕ. ಆತ ತೋರಿಸುತ್ತಿದ್ದ ಚಿತ್ರಪಟಗಳನ್ನು ನೋಡುವ ಕುತೂಹಲದಿಂದ ಹೊರಬಂದ ಚಿಕ್ಕ ಬಾಲಕನನ್ನು ಒಳಕ್ಕೆ ಎಳೆದೊಯ್ಯುವ ಸ್ತ್ರೀಯು ಗರ್ಭಿಣಿಯೆಂದೂ, ಆಕೆಯ ಕೈಯಲ್ಲಿ ಪುರುಷರು ಧರಿಸತಕ್ಕ ಅಷ್ಟಕೋಣದ ಮೊಹರುಳ್ಳ ಉಂಗುರ ಇತ್ತೆಂದೂ, ಆ ಹುಡುಗ ಅಮಾತ್ಯರಾಕ್ಷಸನನ್ನು ಹೋಲುತ್ತಿದ್ದನೆಂದೂ ಹೇಳಿದನು. ಆಕೆ ರಾಕ್ಷಸ ಪತ್ನಿಯೆಂದೂ, ಆತ ರಾಕ್ಷಸನ ಪುತ್ರನೆಂದೂ ಮರಾಳಕನು ಹೇಳಿದ ಮಾತು ಚಾಣಕ್ಯನಿಗೆ ಒಪ್ಪಿಗೆಯಾಗಿ ಆತ ಒಬ್ಬ ಸೂಲಗಿತ್ತಿಯ ಸಹಾಯದಿಂದ ಆ ಮುದ್ರೆಯುಂಗುರವನ್ನು ವಶಪಡಿಸಿಕೊಳ್ಳುತ್ತಾನೆ. ಸ್ವಾರಸ್ಯಕರವಾಗಿ ಮೂಡಿಬಂದ ಈ ಪ್ರಸಂಗ ಕವಿಕಲ್ಪನೆ. ಸಿದ್ಧಾರ್ಥಕನು ಶಕಟದಾಸನಿಂದ ಪತ್ರದ ಪ್ರತಿ ಮಾಡಿಸಿಕೊಂಡು ಬರುವ ವಿಚಾರವು ನಾಟಕದಲ್ಲಿ ಸರಳವಾಗಿ ನಿರೂಪಿತವಾಗಿದೆ. ಅದೇ 'ಮುದ್ರಾಮಂಜೂಷ'ದಲ್ಲಿ ಸಿದ್ಧಾರ್ಥಕನು ಶಕಟದಾಸನಲ್ಲಿಗೆ ಹೋಗಿ ಅವನಿಗೆ ಅನುಮಾನ ಬರದಂತೆ — ಅದರಲ್ಲಿ ಕೌತುಕವುಂಟೆಂದು ಹೇಳಿ, ಅಕ್ಷರಗಳು ಅಸ್ಪಷ್ಟವಾದುದರಿಂದ ಸ್ಪಷ್ಟವಾಗಿ ಬೇರೆ ಬರೆದುಕೊಡು ಎಂದು ಹೇಳಿ, ಆತ ಅದರ ಪದ್ಧತಿಯ ವಿವರಣೆ ಕೇಳಿದಾಗ ಸ್ವಲ್ಪ ಯೋಚಿಸಿದಂತೆ ಮಾಡಿ, 'ಮರೆತುಹೋಗಿದೆ, ಇನ್ನೊಮ್ಮೆ ತಿಳಿದು ಹೇಳುತ್ತೇನೆ' ಎಂದು ನಂಬಿಸಿ ಆತನಿಂದ ಬರೆಯಿಸಿಕೊಂಡು ಚಾಣಕ್ಯನಲ್ಲಿಗೆ ಬರುತ್ತಾನೆ.

ಇಲ್ಲಿಯ ನಿರೂಪಣೆ ವಿವರವಾಗಿದ್ದು ಆಕರ್ಷಕವಾಗಿದೆ. ಹಾಗೆಯೇ ಚಾಣಕ್ಯನ ಶಿಷ್ಯನಾದ ಶೀಘ್ರಕಾರಿಯು, ರಾಕ್ಷಸನ ಬಂಧುಗಳನ್ನು ತನ್ನ ಮನೆಯಲ್ಲಿಟ್ಟುಕೊಂಡಿದ್ದಾನೆಂಬ ಆರೋಪ ಹೊತ್ತ ಚಂದನದಾಸನನ್ನು ರಾಜಾಸ್ಥಾನಕ್ಕೆ ಕರೆಯಲು ಬಂದಾಗ, ಮುಂದಿನ ಕಾರ್ಯವನ್ನು ಧನಸೇನನಿಗೆ ತಿಳಿಸಲು ಕಾಲಾವಕಾಶ ಬಯಸಿ — 'ಆರ್ಯ ಬ್ರಾಹ್ಮಣನೇ, ದೊಡ್ಡವರನ್ನು [illegible] ಕಾಣುವುದಕ್ಕೆ ಬೇರೆ ಧೌತಾಂಬರಗಳನ್ನುಟ್ಟುಕೊಂಡು ಬರುವೆನೆ'ಂದು ಒಳಹೋಗಿ ಅಮಾತ್ಯನನ ಕುಟುಂಬದವರನ್ನು ಮತ್ತೊಂದು ರಹಸ್ಯ ಸ್ಥಾನದಲ್ಲಿ ಕಾದಿರಿಸಿಕೊಳ್ಳುವಂತೆ ಹೇಳಿ ಹೊರಬರುವುದು ಸತಾರ್ಕಿಕವಾಗಿದೆ. ಯೋಗ್ಯವಾಗಿದೆ. ಈ ಮಾತುಗಳು ನಾಟಕದಲ್ಲಿಲ್ಲ.

ನಾಟಕದಲ್ಲಿ ಎರಡನೆಯ ಅಂಕ 'ರಾಕ್ಷಸ ವಿಚಾರ' ಮುದ್ರಾಮಂಜೂಷದಲ್ಲಿ ಹದಿನಾಲ್ಕನೆಯ ಅಧ್ಯಾಯ 'ಕ್ಷಪಣಕಾಪಮಾನವು' ನಾಟಕದ ಆರಂಭದಲ್ಲಿದ್ದ ಮಲಯಕೇತುವು ತನ್ನ ಆಭರಣಗಳನ್ನು ಅಮಾತ್ಯರಾಕ್ಷಸನಿಗೆ ಕಳುಹಿಸುವ ವಿಚಾರವು ಮುದ್ರಾಮಂಜೂಷದ ಹನ್ನೊಂದನೆಯ ಆಶಯ (ಮಲಯ ಕೇತು ರಾಕ್ಷಸರ ಸಖ್ಯವು) ದಲ್ಲಿ ಹೇಳಿದ್ದರಿಂದ ಇಲ್ಲಿ ಅದನ್ನು ಸಂಗ್ರಹವಾಗಿ ಹೇಳಿದೆ. ಲಕ್ಷ್ಮಿಯ ದೂಷಣೆ ಗದ್ಯದ ಮೂರನೆಯ ಆಶಯ (ಚಂದ್ರಗುಪ್ತ ಚಾಣಕ್ಯನಿಗೆ ಪರ್ವತರಾಜ್ಯ ಪ್ರವೇಶವು) ದಲ್ಲಿ ವಿಸ್ತಾರವಾಗಿ ಹೇಳಿದೆ. ಕುಸುಮಪುರವು ಶತ್ರುಗಳಿಂದ ಮುತ್ತಲ್ಪಟ್ಟಿತು ಎಂಬ ವಿರಾಧಗುಪ್ತನು ನುಡಿದಾಗ ರಾಕ್ಷಸನು ತೋರುವ ವೀರಾವೇಶಯುಕ್ತ ಮಾತು —

ಪ್ರಾಕಾರಂ ಪರಿತಃ ಶರಾಸನಧರೈಃ ಕ್ಷಿಪ್ರಂ ಪರಿಕ್ರಮ್ಯತಾಂ ।
ದ್ವಾರೇಷು ದ್ವಿರದೈಃ ಪ್ರತಿದ್ವಿಪಘಟಾಭೇದಕ್ಷಮೈಃ ಸ್ಥೀಯತಾಂ ॥
ತ್ಯಕ್ತ್ವಾ ಮೃತ್ಯುಭಯಂ ಪ್ರಹರ್ತುಮನಸಃ ಶತ್ರೋರ್ಬಲೇ ದುರ್ಬಲೇ ।
ತೇ ನಿರ್ಯಾಂತು ಮಯಾ ಸಹೈಕಮನಸೋ ಯೇಷಾಂ ಅಭೀಷ್ಟಂ ಯಶಃ ॥ 2
(೨-೧೨)

(ಬಿಲ್ಲುಗಳನ್ನು ಹೊತ್ತ ಸುಭಟರು ಕೋಟೆಯ ಪ್ರಾಕಾರವನ್ನು ಸುತ್ತುವರಿಯಲಿ. ಮಹಾದ್ವಾರಗಳಲ್ಲಿ ಹಗೆಯಾನೆಗಳನ್ನು ಮರ್ದಿಸಬಲ್ಲ ಹೇರಾನೆಗಳು ನಿಲ್ಲಲಿ. ಮೃತ್ಯುಭಯವನ್ನು ಬಿಟ್ಟು ದುರ್ಬಲವಾದ ಶತ್ರುಬಲವನ್ನು ಹೊಡೆಯಲಿಚ್ಛೆಯುಳ್ಳ, ನನ್ನ ಸಹಮನಸ್ಕರಾದ, ಯಶಸ್ಸನ್ನು ಪಡೆಯಲು ಇಚ್ಛಿಸುವವರು ಹೊರಡಲಿ)

ಮುದ್ರಾಮಂಜೂಷದಲ್ಲಿ ಇಲ್ಲಿ ಹೇಳಿಲ್ಲ. 'ಏಕೆಂದರೆ ರಾಕ್ಷಸನ ಯುದ್ಧ ಸಾಹಸದ ವರ್ಣನೆಯೇ ಹಿಂದೆ ಬಂದಿತ್ತು. ಗದ್ಯ ಕಥೆಯಲ್ಲಿ ಚಾಣಕ್ಯನು ಹೇಳಿದ — 'ಗುರುವಿನ ಅಪ್ಪಣೆಯಂತೆ ವೈದಿಕ ಧರ್ಮವನ್ನು ಉದ್ಧರಿಸುವುದು ತನ್ನ ಗುರಿ. ಚಂದ್ರಗುಪ್ತನು ಇದಕ್ಕೆ ನಿಮಿತ್ತಮಾತ್ರ, ನಾಸ್ತಿಕರಾದ ಪರ್ವತರಾಜ, ನಂದರನ್ನು ಕೊಲ್ಲಿಸಿದುದು — ಧರ್ಮರಕ್ಷಣೆಗೆ ಪೂರಕವಾಗಿ ....' ಎಂಬಿತ್ಯಾದಿ ವಿಷಯಗಳು ನಾಟಕದಲ್ಲಿಲ್ಲ.

'ಕಪಟ ಕಲಹ' ಎಂಬುದು ನಾಟಕದ ಮೂರನೆಯ ಅಂಕ. ಮುದ್ರಾಮಂಜೂಷದಲ್ಲಿ 'ಚಾಣಕ್ಯ ಚಂದ್ರಗುಪ್ತರ ಕಪಟ ಕಲಹವು' ಹದಿನೈದನೆಯ ಆಶಯವು. 'ರಾಕ್ಷಸೋದ್ಯೋಗ' ಎಂಬುದು ನಾಟಕದ ನಾಲ್ಕನೆಯ ಅಂಕ. ಮುದ್ರಾಮಂಜೂಷದಲ್ಲಿ 'ಮಲಯಕೇತು ರಾಕ್ಷಸರ ಸಂವಾದ'ವು ಹದಿನಾರನೆಯ ಆಶಯ. ಇವುಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲದೆ ಕಥೆಯು ಒಂದೇ ರೀತಿಯಲ್ಲಿ ಮುಂದುವರಿಯುತ್ತದೆ. ಮುಂದಿನ ಮೂರು ಅಂಕಗಳಾದ 'ಕೂಟಲೇಖ', 'ಕಪಟಪಾಶ' ಮತ್ತು 'ನಿರ್ವಹಣ'ಗಳಿಗಿಂತ ಕೊನೆಯ ಎರಡು ಆಶಯಗಳಲ್ಲಿ ಕೆಂಪುನಾರಾಯಣನು ಹೆಚ್ಚು ಸ್ವಾತಂತ್ರ್ಯ ವಹಿಸಿ ಕಥೆಯನ್ನು ರೋಚಕಗೊಳಿಸಿದ್ದಾನೆ.

ರಾಕ್ಷಸನು ಮಲಯಕೇತುವಿನ ಸೈನ್ಯವನ್ನು ಪಾಟಲೀಪುರದ ಸಮೀಪ ತಂದಾಗ, ತನ್ನ ಮುಂದಿನ ಕಾರ್ಯವನ್ನು ನೆನೆದ ಸಿದ್ಧಾರ್ಥಕನು ಶಕಟದಾಸನ ಬಳಿ ಬಂದು — ತನ್ನ ಪತ್ನಿಯ ತವರುಮನೆ ಸಮೀಪ ಇರುವುದೆಂದೂ ಆ ಕಾರಣಕ್ಕಾಗಿ ಒಡವೆಯ ಪೆಟ್ಟಿಗೆಯನ್ನು ಕೊಡಬೇಕಾಗಿಯೂ ಕೇಳಿಕೊಳ್ಳುತ್ತಾನೆ. ಅಪನಂಬಿಕೆ ಬಾರದಂತೆ ಮಾಡಲು ಆತ ಸೃಷ್ಟಿಸಿಕೊಂಡ ಸಂದರ್ಭವಿದು. ಭಾಗುರಾಯಣನು ಕ್ಷಪಣಕನಲ್ಲಿ ಆತನಿಗೆ ಗೊತ್ತಿದ್ದ ವಿಚಾರ — ರಾಕ್ಷಸನೇ ಪರ್ವತರಾಜನನ್ನು ಕೊಲ್ಲಿಸಿದ್ದನೆಂಬುದನ್ನು ಮಲಯಕೇತುವಿಗೆ ತಿಳಿಸಬೇಕೆಂದು ಹೇಳುತ್ತಾನೆ. ಆಗ ಆತನು ತನಗೆ ಒಪ್ಪಿಗೆಯಿದ್ದೂ ಒಪ್ಪದೇ ತೋರಿಸಿಕೊಳ್ಳದೇ — 'ಅಯ್ಯೋ, ಹಿಂದೆ ರಾಕ್ಷಸನಿಗೆ ನಾನು ಮಿತ್ರನಾಗಿದ್ದು ಈಗ ಶತ್ರುಭಾವವನ್ನಾಚರಿಸುವುದೇ?' ಎನ್ನುತ್ತಾನೆ. ತನಗೆ ಇಷ್ಟವಿಲ್ಲದಿದ್ದರೂ ಸತ್ಯವನ್ನು ಹೇಳಬೇಕಲ್ಲ — ಎಂದು ಚಡಪಡಿಸುವವನಂತೆ ತೋರಿಸಿಕೊಳ್ಳುತ್ತಾ ಆ ವಿಷಯವನ್ನು ಮಲಯಕೇತುವಿಗೆ ಹೇಳುತ್ತಾನೆ. ಅಂತಹ ಮಾತಿನಲ್ಲಿ ಹೆಚ್ಚು ನಂಬಿಕೆ ಹುಟ್ಟುವುದು ಸ್ವಾಭಾವಿಕ. ರಾಕ್ಷಸನು ಚಂದ್ರಗುಪ್ತನಿಗೆ ಮಂತ್ರಿಯಾಗಲು ಒಪ್ಪಿಕೊಂಡ ಮೇಲೆ ತಪಸ್ಸನ್ನಾಚರಿಸಲು ಕಾಡಿಗೆ ಹೊರಟ ಚಾಣಕ್ಯನು ಚಂದ್ರಗುಪ್ತನಿಗೆ ರಾಜನೀತಿಯನ್ನು ಉಪದೇಶಿಸುವನು. ಇದೂ ನಾಟಕದಲ್ಲಿಲ್ಲ. ನಾಟಕದ ಕೊನೆಯಲ್ಲಿ ಚಾಣಕ್ಯನು ತನ್ನ ಜುಟ್ಟನ್ನು ಕಟ್ಟಿಕೊಳ್ಳುತ್ತಾನೆ. ಆದರೆ ಮುದ್ರಾಮಂಜೂಷದಲ್ಲಿ ನಂದರ ಸಂಹಾರವಾದ ತತ್‌ಕ್ಷಣವೇ ಆತನು ಜುಟ್ಟನ್ನು ಕಟ್ಟಿಕೊಂಡಂತೆ ಹೇಳಿದೆ. ಹೀಗೆ ನಾಟಕದಲ್ಲಿಯ ದೋಷವನ್ನು ತಿದ್ದಿಕೊಂಡು, ಸಂದರ್ಭವನ್ನು ತನಗೆ ಬೇಕಾದಂತೆ ಮಾರ್ಪಡು ಮಾಡಿಕೊಂಡು ಕೆಲವನ್ನು ಹೊಸದಾಗಿ ಸೇರಿಸಿಕೊಂಡು ಕೆಂಪುನಾರಾಯಣನು ವಿಶಿಷ್ಟವಾದ ರೀತಿಯಲ್ಲಿ ತನ್ನ ಗದ್ಯ ಕಥೆಯನ್ನು ಹೇಳಿದ್ದಾನೆ.

'ಮುದ್ರಾಮಂಜೂಷಕಾರನು ಕಥೆಗೆ ಮೂಲ ಸಾಮಗ್ರಿಯನ್ನು ಒದಗಿಸಿದ ವಿಶಾಖದತ್ತನನ್ನು ನೆನೆಯದಿರುವುದು ಅವನಲ್ಲಿ ಒಂದು ದೋಷವೆಂದೇ ಹೇಳಬೇಕು' ಎಂದು ಎಚ್.ಎಂ. ಶಂಕರನಾರಾಯಣ ರಾವ (ಕೆಂಪುನಾರಾಯಣ ಕವಿ ಮತ್ತು ಕೃತಿ ಪು.12 ಮತ್ತು 30) ಅಭಿಪ್ರಾಯಪಟ್ಟಿದ್ದಾರೆ. ನಾಟಕದಲ್ಲಿಯ ವಸ್ತುವನ್ನು ಕವಿಯು ಅಳವಡಿಸಿಕೊಂಡಿದ್ದರೂ ಅದು ವಿವೇಚನೆ ಇಲ್ಲದೇ ಅನುಸರಿಸಿದ್ದಲ್ಲ. ಅದು ಸ್ವೀಕರಣ ಚಾತುರ್ಯವಲ್ಲ' ಅಷ್ಟುಮಾತ್ರಕ್ಕೇ ಆತನನ್ನು ದೋಷಿಯನ್ನಾಗಿ ಅವಹೇಳನ ಮಾಡುವುದು ಸರಿಯಲ್ಲ.

ಇವರೇ ಇನ್ನೊಂದೆಡೆ (ಅದೇ ಪು. 37) ಹೇಳಿದ ಮಾತು ಹೀಗಿದೆ: 'ಯಾವ ಮಹಾಕವಿಯೂ ಸಾಮಾನ್ಯವಾಗಿ ತಾನು ಬರೆದಿರುವ ಕಾವ್ಯನಾಟಕಗಳಿಗೆ ಸ್ವಂತವಾಗಿ ವಸ್ತುವನ್ನು ಸೃಷ್ಟಿಮಾಡಿಕೊಂಡಿರುವುದಿಲ್ಲ. ಪ್ರಸಿದ್ಧ ಮೂಲಗಳಿಂದ ತಮ್ಮ ಕೃತಿಗಳಿಗೆ ವಸ್ತುವನ್ನು ಆಯ್ದುಕೊಂಡ ಕವಿಗಳು, ಮೂಲವನ್ನು ಮಾರ್ಪಡಿಸಿ, ಅದರ ಮೇಲೆ ತಮ್ಮ ಪ್ರತಿಭೆಯ ಮುದ್ರೆಯನ್ನೊತ್ತಿ ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ.' ಈ ಮಾತು ಕೆಂಪುನಾರಾಯಣನಿಗೂ ಆತನ ಕೃತಿಗೂ ಚೆನ್ನಾಗಿ ಅನ್ವಯಿಸುತ್ತದೆ.

ಈ ಕೃತಿಯಲ್ಲಿ ಪೂರ್ಣ ಸ್ವಂತಿಕೆಯಿಂದ ಕವಿಯು ಸೇರಿಸಿಕೊಂಡ ಸಂದರ್ಭಗಳು:

1. ಸರ್ವಾರ್ಥಸಿದ್ಧಿಯೂ ಆತನ ಜತೆಯಲ್ಲಿ ರಾಕ್ಷಸನೂ ಪ್ರಯಾಗಕ್ಕೆ ಹೋದದ್ದು. ಹಾಗೆ ಹೋಗಲು ನಂದರು ಪುರಾಣಿಕರ ಮೂಲಕ ಪ್ರೇರೇಪಿಸಿದ್ದು. ಮುರಾದೇವಿಯು ಪ್ರಯಾಗದಲ್ಲಿ ನದಿಯಲ್ಲಿ ಮುಳುಗಿ ಪ್ರಾಣಬಿಟ್ಟದ್ದು.

2. ಲಂಪಾಕಾಧಿಪತಿಯು ಪರ್ವತರಾಜ್ಯದ ಮೇಲೆ ದಂಡೆತ್ತಿ ಬಂದನೆಂದು ಹೇಳಿದ್ದು. ಆ ಯುದ್ಧವನ್ನು ನಿವಾರಿಸಲು ಚಾಣಕ್ಯನು ಪತ್ರದಿಂದಲೇ ಕಾಮರೂಪಾಧಿಪತಿಯನ್ನು ಲಂಪಾಕರಾಜ್ಯದ ಮೇಲೆ ಯುದ್ಧ ಸಾರುವಂತೆ ಮಾಡಿದ್ದು. ಇದರಿಂದ ಪರ್ವತೇಶ್ವರನಿಗೆ ಬಂದಿದ್ದ ಕುತ್ತು ತಪ್ಪಿದ್ದು.

3. ಇಂದುಶರ್ಮನ ಶಿಷ್ಯನಾದ ಮಾಸೋಪವಾಸಿಯ ಮೂಲಕ ಶತ್ರುಪಲಾಯನ ಜಪದ 'ಏರ್ಪಾಡು, ಇದರಿಂದ ನಂದರನ್ನು ರಾಕ್ಷಸನಿಂದ ಬೇರ್ಪಡಿಸಿ ಕೊಲ್ಲುವ ಉಪಾಯ.

4. ನಂದರ ಅಧೀನನಾದ ಕಾಶೀರಾಜನನ್ನು ಭೇದಿಸಲು ಆತನ ಬಳಿ ಚಾಣಕ್ಯನು ಕಮಲಾಪೀಡನೆಂಬ ನಿಯೋಗಿಯನ್ನು ಕಳುಹಿಸುವುದು.

5. ರಾಕ್ಷಸನು ಕ್ಷಪಣಕನನ್ನು ಪರೀಕ್ಷೆ ಮಾಡಲು ಬ್ರಾಹ್ಮಣನನ್ನು ಕಳುಹಿಸಿದ್ದು.

6. ಬುಧ, ಗುರು ಮತ್ತು ಶುಕ್ರವಾರ ಈ ಮೂರು ದಿನ ಯುದ್ಧ ನಡೆಯಿತೆಂದು ಹೇಳಿದ್ದು. ತನಗೆ ಜಯವಾದರೂ ಯುದ್ಧ ಮಧ್ಯದಲ್ಲಿ ರಾಕ್ಷಸನು ಪರ್ವತರಾಜನನ್ನು ಭೇದಿಸಲು ವಿಷ್ಣುದಾಸನೆಂಬ ನಿಯೋಗಿಯನ್ನು ಕಳುಹಿಸಿದ್ದು.

7. ಕಪಟ ಮಲಯಕೇತುವನ್ನು ನಂದರ ಬಳಿಗೆ ಕಳುಹಿಸಿದ್ದು. 'ಜಯವಾಯಿತು, ಪಟ್ಟಣದಲ್ಲಿ ಸಕ್ಕರೆ ಹಂಚಿಸು' ಎಂದು ಚಾಣಕ್ಯನು ಪರ್ವತರಾಜನಿಗೆ ಉಪಾಯವನ್ನು ಹೇಳಿಕೊಟ್ಟದ್ದು.

8. ರಾಕ್ಷಸನ ಮುದ್ರಿಕೆಯನ್ನು ಪಡೆಯಲು ಚಾಣಕ್ಯನು ಸೂಲಗಿತ್ತಿಯನ್ನು ಉಪಯೋಗಿಸಿಕೊಂಡದ್ದು.

9. ಚಂದನದಾಸನಿಗೆ ಶಿಕ್ಷೆ ವಿಧಿಸಿದ ಚಾಣಕ್ಯನು ಭಾಗವಟ್ಟನೆಂಬ ಬಾಲವಟುವಿನೊಡನೆ ವಿನೋದದ ಮಾತನಾಡುವುದು. ಮತ್ತೊಬ್ಬ ಶಿಷ್ಯಶಾರ್ಙ್ಗರವನಲ್ಲಿ — 'ತನ್ನ ಗುರುವಿನ ಅಪ್ಪಣೆಯಂತೆ ವೈದಿಕ ಧರ್ಮವನ್ನು ಉದ್ಧರಿಸುವುದೇ ತನ್ನ ಗುರಿ' ಎನ್ನುವುದು.

10. ತಪಸ್ಸನ್ನಾಚರಿಸಲು ಹೊರಟ ಚಾಣಕ್ಯನು ಚಂದ್ರಗುಪ್ತನಿಗೆ ರಾಜನೀತಿಯನ್ನು ಉಪದೇಶಿಸುವುದು ಮೊದಲಾದವು

ಪಾತ್ರ ಚಿತ್ರಣ

' ಮುದ್ರಾರಾಕ್ಷಸ ' ನಾಟಕದಲ್ಲಿ ವಿಶಾಖದತ್ತನು ಮುಖ್ಯವಾಗಿ ಚಾಣಕ್ಯ — ರಾಕ್ಷಸ ಪಾತ್ರಗಳನ್ನು, ಅದಕ್ಕೆ ಪೂರಕವಾಗಿ ಇತರ ಪಾತ್ರಗಳನ್ನು ಚಿತ್ರಿಸಿದ್ದನು. ಈ ನಾಟಕದ ಕಥೆಗೆ ಹಿನ್ನೆಲೆಯಾಗಿ ಬರುವ ಮೂರರಲ್ಲಿ ಎರಡರಷ್ಟು ಪೂರ್ವಕಥೆಯನ್ನು ಸೇರಿಸಿಕೊಂಡಿರುವ ಕೆಂಪುನಾರಾಯಣನು, ಮೂಲದ ಪಾತ್ರಗಳ ಘನತೆ ಕಡಿಮೆಯಾಗದಂತೆ, ಹಿಂದಿನ ಭಾಗದ ಕಥೆಯಲ್ಲೂ ಪಾತ್ರಗಳಿಗೆ ಜೀವ ತುಂಬಿದ್ದಾನೆ. ನಾಟಕದಲ್ಲಿ ಹೆಸರಿನಿಂದ ಮಾತ್ರ ನಿರ್ದೇಶಿತವಾದ ಪಾತ್ರಗಳೂ ಇಲ್ಲಿ ತಮ್ಮ ಗುಣದೋಷಗಳೊಂದಿಗೆ ಮೂಡಿ ಬಂದಿವೆ. ನಾಟಕದಲ್ಲಿ ಬರುವ ಪಾತ್ರಗಳ ಸಂಖ್ಯೆ ಸುಮಾರು ಮೂವತ್ತು. ಈ ಕೃತಿಯಲ್ಲಿ ಬರುವ ಪಾತ್ರಗಳ ಸಂಖ್ಯೆ ಸುಮಾರು ಇನ್ನೂರು[3]. ಇದರಿಂದ ಕವಿಯು ಹೊಸ ಪಾತ್ರಗಳ ಸೃಷ್ಟಿಗೆ ಎಷ್ಟು ಗಮನ ಕೊಟ್ಟಿದ್ದಾನೆಂದು ತಿಳಿದುಬರುವುದು.

ಕವಿಯು ತನ್ನ ಜೀವನದಲ್ಲಿ ವಿವಿಧ ಅಂತಸ್ತಿನ, ವಿವಿಧ ಸ್ವಭಾವದ ಜನರ ನಿಕಟ ಸಂಪರ್ಕ ಪಡೆದಿದ್ದು, ಈ ಪ್ರತ್ಯಕ್ಷಾನುಭವವೇ ಆತನಿಗೆ ಪಾತ್ರನಿರೂಪಣೆಯಲ್ಲಿ ನೆರವಾಗಿವೆಯೆನ್ನಬಹುದು. ಹಾಗಾಗಿ ಪ್ರತಿಯೊಂದು ಪಾತ್ರದ ಒಳಹೊರಗುಗಳನ್ನು ಕವಿ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಮನಸ್ಸಿನ ತುಡಿತದ ತುಯ್ದಾಟಗಳನ್ನೂ ಅಭಿವ್ಯಕ್ತಿಸಿ ಪಾತ್ರಗಳು ಸಾಕಷ್ಟು ಸಂಕೀರ್ಣವಾಗುವಂತೆ ನೋಡಿಕೊಂಡಿದ್ದಾನೆ. ಮುಮ್ಮಡಿಯವರ ಆಸ್ಥಾನದ ವಾತಾವರಣವು ಆತನಿಗೆ ವಾಸ್ತವಿಕತೆಯ ನೆಲೆಗಟ್ಟನ್ನು ಒದಗಿಸಲು ಪೂರಕವಾಗಿತ್ತು. ಈ ಹಿನ್ನೆಲೆಯಲ್ಲಿ ಈ ಕೃತಿಯಲ್ಲಿ ಬರುವ ಪ್ರಮುಖ ಪಾತ್ರಗಳ ಚಿತ್ರಣಗಳನ್ನು ಗಮನಿಸಲಾಗುವುದು.

ಚಂದ್ರಗುಪ್ತ[4]

ಮುದ್ರಾಮಂಜೂಷದಲ್ಲಿ ಚಂದ್ರಗುಪ್ತನೇ ಕಥಾನಾಯಕನು. ' ಮುದ್ರಾರಾಕ್ಷಸ ' ನಾಟಕದಲ್ಲಿ ಚಂದ್ರಗುಪ್ತನು ಚಾಣಕ್ಯನ ಕೈಗೊಂಬೆಯಂತೆ ಕಾಣಬಹುದು. ಆದರೆ, ಇಲ್ಲಿ ಕವಿ ಬಹು ಎಚ್ಚರದಿಂದಲೇ ಚಂದ್ರಗುಪ್ತನನ್ನು ನಾಯಕನನ್ನಾಗಿಯೇ ಚಿತ್ರಿಸಿದ್ದಾನೆ. ಇಡೀ ಗ್ರಂಥದ ಕಥೆಯು ಚಂದ್ರಗುಪ್ತನ ಅಭ್ಯುದಯವನ್ನು ಕುರಿತದ್ದೇ ಆಗಿದೆ. ಆತನಲ್ಲಿ ನಾಯಕನಲ್ಲಿರಬೇಕಾದ ಸಮಸ್ತ ಗುಣಗಳೂ ಇದ್ದುವು. ಮುರೆಯೆಂಬ ಸಾಮಾನ್ಯ ಸ್ತ್ರೀಯ ಮಗನೆಂಬ ಅಂಶವೊಂದನ್ನು ಬಿಟ್ಟರೆ ಪ್ರಭು ಪದಕ್ಕೆ ಅರ್ಹವಾದ ಸಮಸ್ತ ಗುಣಗಳೂ ಅವನಲ್ಲಿದ್ದುವು.

ಚಂದ್ರಗುಪ್ತನು ಮೌರ್ಯನ ಮಗ. ಚಕ್ರವರ್ತಿ ಸರ್ವಾರ್ಥಸಿದ್ಧಿಯ ಮೊಮ್ಮಗ. ಬಾಲ್ಯದಲ್ಲಿ ತಂದೆಯ ಪೋಷಣೆಯಲ್ಲಿ ವಿದ್ಯೆಯನ್ನು ಪಡೆದು ವಿನಯಾದಿಗುಣಗಳನ್ನು ರೂಢಿಸಿಕೊಂಡು ಶಸ್ತ್ರಾಸ್ತ್ರಗಳಲ್ಲಿ ಪರಿಣತನಾದವನು. ನಂದರ ಮಾತ್ಸರ್ಯಕ್ಕೆ ಒಳಗಾಗಿ ತನ್ನ ತಂದೆ ಮತ್ತು ಸಹೋದರರೊಂದಿಗೆ ನೆಲಮಾಳಿಗೆಗೆ ತಳ್ಳಲ್ಪಟ್ಟವನು. ಆ ಕಾರಾಗೃಹದಲ್ಲಿ ದಿನೇ ದಿನೇ ಹತ್ತೆಂಟು ಜನರು ಮೃತರಾಗಿ

ಕೊನೆಯಲ್ಲಿ ಈತನೊಬ್ಬನೇ ಉಳಿಯುವನು. ಈ ಸಂದರ್ಭವನ್ನೇ ಉಪಯೋಗಿಸಿಕೊಂಡ ಚಂದ್ರಗುಪ್ತನು ಕಾವಲುಭಟರುಗಳನ್ನುದ್ದೇಶಿಸಿ — ' ಈ ಸೆರೆಸಿಕ್ಕವರಲ್ಲಿ ತನ್ನೊಬ್ಬನ ಹೊರತು ಎಲ್ಲರೂ ಮೃತರಾದರು. ತನಗೂ ನಾಲ್ಕು ಮೂರು ದಿನಗಳಲ್ಲಿ ಸಾವು ಬರುವಂತಿದೆ. ತನ್ನೊಬ್ಬನನ್ನಾದರೂ ಈ ಶವಗಂಧಭೂಯಿಷ್ಠವಾದ ಸ್ಥಳದಿಂದ ತೆಗೆದು ಮತ್ತೊಂದು ಕಾರಾಗೃಹದಲ್ಲಿಟ್ಟರೆ ನೆಮ್ಮದಿಯಿಂದ ಪ್ರಾಣಗಳನ್ನು ಬಿಡುವೆನು. ನಿಮಗೆ ಕರುಣವಿದ್ದರೆ ಈ ವಿಷಯಗಳನ್ನು ನಂದರಿಗೆ ತಿಳಿಸಿ' ಎನ್ನುವನು.

ನಮಗೆ ಚಂದ್ರಗುಪ್ತನ ಪ್ರಥಮ ದರ್ಶನವಾಗುವುದು ಈ ಸ್ಥಿತಿಯಲ್ಲಿ. ಇಂತಹ ಘೋರ ಸನ್ನಿವೇಶದಲ್ಲೂ ಆತ ' ನಿಮಗೆ ಕರುಣವಿದ್ದರೆ' ಎಂಬ ವಿನಯದ ಮಾತನ್ನಾಡಿ ಅಲ್ಲಿಂದ ಹೊರಬರುವ ಪ್ರಯತ್ನ ಮಾಡುತ್ತಾನೆ. ಅದಕ್ಕೂ ಅವನು ಕೊಡುವ ಕಾರಣ — ನೆಮ್ಮದಿಯಿಂದ ಪ್ರಾಣ ಬಿಡಲು. ಇಲ್ಲಿಯೇ ಆತನ ಚಾತುರ್ಯ, ಮುಂಜಾಗ್ರತೆ ಕಾಣುವುದು. ನಂದರು ಆತನನ್ನು ಸ್ಥಳಾಂತರಿಸಲು ಆಜ್ಞೆ ಮಾಡುವುದೂ — ಆತ ನಾಲ್ಕು ಮೂರು ದಿನಗಳಲ್ಲಿ ಮೃತನಾದಾನೆಂದೇ.

ಪರ್ವತರಾಜನ ಮಂತ್ರಿ ಶಬರವರ್ಮನು ಕಪಟಶಿಲ್ಪವನ್ನು ರಚಿಸಿ ಪಾಟಲೀಪುರಕ್ಕೆ ಕಳುಹಿಸಿದ್ದನು. ನಂದರು, ಮಂತ್ರಿಗಳು, ಪುರಜನರು — ಯಾರೂ ಆ ಶಿಲ್ಪವನ್ನು ಭೇದಿಸಲು ಅಶಕ್ತರಾದಾಗ ಸೆರೆಮನೆಯಲ್ಲಿದ್ದ ಚಂದ್ರಗುಪ್ತನು ಆ ಕಾರ್ಯದಲ್ಲಿ ಜಯಶೀಲನಾಗಿ ಸುಮತಿಯೆಂಬ ಮಂತ್ರಿಯ ಮಾತಿನಂತೆ ಅನ್ನಸತ್ರಾಧಿಕಾರವನ್ನು ಪಡೆದನು.

ದಾರಿಯಲ್ಲಿ ಸಾಗುತ್ತಿದ್ದ ಚಾಣಕ್ಯನೆಂಬ ಬ್ರಾಹ್ಮಣನು ತನ್ನ ಕಾಲ್ಗೆ ಸಿಕ್ಕಿದ ಗರಿಕೆ ಹುಲ್ಲನ್ನು ಬೇರು ಸಹಿತ ನಾಶಮಾಡುವುದನ್ನು ಕಂಡು ಆತನನ್ನು ಮೊರೆಹೋಗಬೇಕೆಂದು ಚಂದ್ರಗುಪ್ತನು ನಿಶ್ಚಯಿಸುತ್ತಾನೆ. ಇದು ಆತನ ದೂರದೃಷ್ಟಿಗೆ ಸಾಕ್ಷಿಯಾಗಿದೆ.

ಚಂದ್ರಗುಪ್ತನನ್ನು ಪ್ರಥಮ ಸಲ ನೋಡಿದಾಗಿನ ಚಾಣಕ್ಯನ ಅನ್ನಿಸಿಕೆ ಹೀಗಿತ್ತು — ' ಈತನ ಸೌಜನ್ಯವನ್ನು, ಪ್ರಭುತ್ವ ಲಕ್ಷಣಯುಕ್ತವಾದ ಶರೀರವನ್ನು ನೋಡಿದರೆ ಮುಂದೆ ಪ್ರಭುಪದಕ್ಕೆ ಯೋಗ್ಯನಾಗುವಂತೆ ಕಾಣುತ್ತಿದೆ'. ಆ ಸಮಯದಲ್ಲಿಯೇ ಚಂದ್ರಗುಪ್ತನು ಚಾಣಕ್ಯನ ಪಾದಗಳನ್ನು ಹಿಡಿದುಕೊಂಡು — ' ನಿಮ್ಮನ್ನು ಶರಣುಹೊಕ್ಕೆನು. ಕ್ರೂರಕರ್ಮಿಗಳಾದ ಈ ಶತ್ರುಗಳನ್ನು ನಿಮ್ಮ ತೇಜೋಬಲದಿಂದ ನಿಗ್ರಹಿಸಿ ನನ್ನನ್ನು ಉದ್ಧರಿಸಬೇಕು' ಎಂದು ಬೇಡಿಕೊಂಡನು. ಚಾಣಕ್ಯನು ಆಡಿದ ಚೇಷ್ಟೆಗೆ ಬಲಿಯಾದ ನಂದರು ಆತನ ಕೋಪಕ್ಕೆ ಗುರಿಯಾದರು. ಇದು ಚಂದ್ರಗುಪ್ತನಿಗೆ ಅನುಕೂಲವೇ ಆಯಿತು.

ಚಾಣಕ್ಯನು ನಂದನಾಶದ ಸಂಕಲ್ಪದಿಂದ ಈ ಭೂಮಿಯಲ್ಲಿರುವ ಮಂಡಲಾಧಿಪತಿಗಳಲ್ಲಿ ನಂದರಿಗೆ ಶತ್ರುಗಳು ಯಾರು? ಮಿತ್ರರು ಯಾರು? ಎಂದು ಕೇಳಿದಾಗ ಚಂದ್ರಗುಪ್ತನು — ಸ್ವಾಮಿ,

ಅರಸುಗಳು ಹೃದಯದಲ್ಲಿ ನಂದರ ಮೇಲೆ ಮಾತ್ಸರ್ಯಪೂರ್ಣರಾದರೂ ರಾಕ್ಷಸನು ಮಾಡುವ ಉಪಾಯ ಚತುಷ್ಟಯಕ್ಕಾಗಿ ಕೆಲವರು ನಂದರಲ್ಲಿ ಅನುರಕ್ತರಾಗಿ ದಾಸಭಾವದಿಂದಿರುವರು. ಮತ್ತೆ ಕೆಲವರು ರಾಕ್ಷಸನ ಭೀತಿಯಿಂದ ನಂದರಿಗೆ ನಿಯಮವುಳ್ಳವರಾಗಿರುವರು. ರಾಕ್ಷಸನು ನಂದರಲ್ಲಿ ವಿರಕ್ತ ಮಂಡಲಾಧಿಪತಿಗಳನ್ನು ದಂಡಿಸುತ್ತ, ಅನುರಕ್ತರನ್ನು ಆದರಿಸುತ್ತ, ಅವರವರಿಗೆ ಯೋಗ್ಯವಾದ ದೇಶಗಳನ್ನು ಕೊಟ್ಟು ಹೆಚ್ಚಿದುದಕ್ಕೆ ಕಪ್ಪಗಳನ್ನು ಪಡೆದು, ಕಾಲಕಾಲಕ್ಕೆ ಧನವನ್ನು ಅರ್ಜಿಸುತ್ತ ಕೋಶದಲ್ಲಿ ರಾಶಿಗೂಡಿಸುತ್ತಿದ್ದಾನೆ. ಉಳಿದ ಅಧಿಕಾರಿಗಳಿಗೆ ಸಂಬಳ ಹೊರತು ಇತರ ವಿಷಯಜ್ಞಾನಕ್ಕೆ ಲೇಶಮಾತ್ರವೂ ಅವಕಾಶವಿಲ್ಲ. ರಾಕ್ಷಸನು ಅನ್ಯರ ಶ್ರೇಯಸ್ಸನ್ನು ಸಹಿಸುವವನಂತೆ ಕಾಣುವುದಿಲ್ಲ' ಎಂದು ಹೇಳುವನು.

'ನಂದರಿಗೆ ಆಪ್ತ ಮಿತ್ರರಾರು? ಉದಾಸೀನ ಪಕ್ಷದ ಅರಸುಗಳಾರು?' ಎಂಬ ಪ್ರಶ್ನೆಗೆ ಚಂದ್ರ ಗುಪ್ತನು — 'ನಂದರಿಗೆ ಕಾಶೀರಾಜನೂ ಮತ್ಸ್ಯದೇಶಾಧಿಪತಿಯೂ ಮಿತ್ರರು. ಪರ್ವತೇಶ್ವರನು ಉದಾಸೀನ ಪಕ್ಷದವನು. ಆತ ಕಪಟಸಿಂಹವನ್ನು ರಚಿಸಿ ಪಾಟಲೀಪುರಕ್ಕೆ ಕಳುಹಿಸಿದ್ದರಿಂದಲೇ ತನ್ನ ಬಂಧವಿಮೋಚನೆ ಯಾಯಿತು' ಎಂದನು.

ಚಾಣಕ್ಯನು — 'ಪುರದಲ್ಲಿ ನಿಮ್ಮ ತಂದೆಯಾದ ಮೌರ್ಯನಲ್ಲಿ ಅನುರಕ್ತರಾಗಿದ್ದ ಅಧಿಕಾರಿ ಗಳುಂಟೇ? ಇಲ್ಲವೋ?' ಎಂದು ಕೇಳಿದಾಗ — 'ತನ್ನ ತಂದೆಯಾದ ಮೌರ್ಯನು ಮಾಡಿದ ಆದರದಿಂದಲೇ ಬಾಗುರಾಯಣ ಮುಖ್ಯರಾದ ಸೇನಾಪತಿಗಳು ಪ್ರಸಿದ್ಧಿಯನ್ನು ಪಡೆದರು' ಎಂಬ ವಿಚಾರವನ್ನು ಚಂದ್ರಗುಪ್ತನು ತಿಳಿಸುವನು. ಇದರಿಂದ ಚಾಣಕ್ಯನ ಮಡಿಲಿಗೆ ಬರುವುದಕ್ಕಿಂತ ಮೊದಲೇ ಚಂದ್ರಗುಪ್ತನಲ್ಲಿ ರಾಜಕೀಯ ಮುತ್ಸದ್ದಿತನದ ಎಚ್ಚರವಿತ್ತು — ಎಂಬ ಅಂಶ ತಿಳಿದುಬರುವುದು.

ಚಾಣಕ್ಯನ ಅಣತಿಯಂತೆ ಚಂದ್ರಗುಪ್ತನು ರಹಸ್ಯವಾಗಿ ಬಾಗುರಾಯಣಾದಿ ಸೇನಾಪತಿಗಳಲ್ಲಿ ಹೋಗಿ ಅವರ ಕೈಬರಹಗಳ ಸಮ್ಮತಿಪತ್ರಗಳನ್ನು ತಂದು ಚಾಣಕ್ಯನಿಗೆ ಕೊಡುವಲ್ಲಿಯೂ ಆತನ ಕಾರ್ಯ ಕ್ಷಮತೆ, ಚಾತುರ್ಯಗಳು ಎದ್ದುಕಾಣುವುವು.

'ಈ ಪಟ್ಟಣದಲ್ಲಿ ತಾಯಿಯನ್ನೂ ಹೆಂಡತಿಯನ್ನೂ ಬಿಟ್ಟು ಚಾಣಕ್ಯರಿದ್ದೆಡೆಗೆ ಹೋದರೆ ಅವರಿಗೆ ನಂದರಿಂದ ಅಪಾಯವುಂಟಾದೀತೆಂದು ಭಾವಿಸಿ ಗುಪ್ತವಾಗಿರುವಂತೆ ಉಪಾಯವನ್ನು ಹೇಳಿ' ಆತ ಕೋರುತ್ತಾನೆಂಬ ಮಾತಿನಿಂದಲೂ, ಕೊನೆಯಲ್ಲಿ ಪಟ್ಟಾಭಿಷಿಕ್ತನಾಗುವಾಗ 'ಸಪತ್ನೀಕನಾಗಿ' ಎಂದು ಹೇಳಿದ್ದರಿಂದಲೂ — ಈತ ವಿವಾಹಿತನೆಂಬುದು ಸ್ಪಷ್ಟವಾಗುವುದು. ಈತನ ಪತ್ನಿಯ ಹೆಸರೇನೆಂದು ಹೇಳಿಲ್ಲ. ಆದರೆ ಭಾವನೆಂಟನ ಹೆಸರು ಸೌರಂಭನೆಂದು ಹೇಳಿದೆ (ಇದು ಯಾವ ಮೂಲದಲ್ಲಿಯೂ ಇಲ್ಲ!).

ಪರ್ವತರಾಜನಲ್ಲಿಗೆ ಹೋದಾಗ ಚಂದ್ರಗುಪ್ತನನ್ನು ನೋಡಿದ ಪರ್ವತರಾಜನು — 'ಈ ಚಂದ್ರ ಗುಪ್ತನ ರೂಪಲಾವಣ್ಯ ಗಾಂಭೀರ್ಯಾದಿ ಲಕ್ಷಣಗಳನ್ನು ನೋಡಿದರೆ ಪ್ರಭು ಪದಕ್ಕೆ ಯೋಗ್ಯನೆಂದು

ತೋರುತ್ತಿದೆ. ಈತನಿಂದಲೇ ಮೊದಲು ಸಿಂಹಪರೀಕ್ಷೆಯೂ ಆಗಿದ್ದೀತು. ಕೃಶನಾಗಿಯೂ, ಗಾಂಭೀರ್ಯಶಾಲಿಯಾಗಿಯೂ ಇರುವ ಈತನಿಗೆ ಪ್ರಭುಪದವುಂಟಾದರೆ ಇನ್ನೂ ಅಧಿಕವಾಗಿ ಪ್ರಕಾಶಿಸ್ಯಾನು' ಎಂದು ಹೇಳಿಕೊಳ್ಳುವ ಮಾತಿನಲ್ಲಿ ಯಥಾರ್ಥತೆ ಇದೆ.

ಮತ್ತೆ ಯುದ್ಧದ ಸಂದರ್ಭದಲ್ಲಿ ಚಾಣಕ್ಯ — ರಾಕ್ಷಸರ ತಂತ್ರ — ಪ್ರತಿತಂತ್ರವೇ ಎದ್ದು ಕಾಣುವುದು. ನಂದರ ನಾಶವಾದ ಮೇಲೆ ಕಪಟ ಕಲಹದ ಸಂದರ್ಭದಲ್ಲಿ, ವಿಶಾಖದತ್ತನ ನಾಟಕದಲ್ಲಿ ಚಾಣಕ್ಯನು ಈ ಬಗ್ಗೆ ಮೊದಲೇ ಸೂಚನೆ ಕೊಟ್ಟು ಮತ್ತೆ ಕಲಹ ಮಾಡಿದನೆಂದು ಹೇಳಿದ್ದರೆ ಇಲ್ಲಿ ಚಂದ್ರಗುಪ್ತನು ಸಾಂದರ್ಭಿಕವಾಗಿ ಮಾತಿನ ಚಕಮಕಿಯನ್ನು ಎಬ್ಬಿಸುತ್ತಾನೆ. ಆದರೆ ಮನಸ್ಸಿನಲ್ಲಿ, ಮತ್ತೆ ತಾನು 'ಏಕಾಂತದಲ್ಲಿ ಚಾಣಕ್ಯನ ಕ್ಷಮೆ ಕೇಳುವುದಾಗಿ ಅಂದುಕೊಳ್ಳುತ್ತಾನೆ. ಆ ವಾಕ್ಕಲಹದ ತಂತ್ರ ಸಫಲವಾಗಲು ಚಾಣಕ್ಯರಿಗೆ ವಂದಿಸಿ — ' ಬಾಲಕನಾದ ನನ್ನಿಂದ ತಿಳಿಯದೆ ನಡೆಸಲ್ಪಟ್ಟ ವಾಗಪರಾಧಗಳನ್ನು ಕ್ಷಮಿಸಬೇಕು. ಅನುದಿನೋಪಾದಿಯಲ್ಲಿರುವ ನನ್ನನ್ನು ಕೈಹಿಡಿದು ಮೇರುಪರ್ವತದಂತೆ ಮಾಡಿದಿರಿ. ಈ ಕೀರ್ತಿಯು ಆಚಂದ್ರಾರ್ಕವಾಗಿ ಯಜಮಾನರ ಪಾದಕ್ಕೆ ಬಂದಿತು' ಎನ್ನುವನು. ಈ ಮಾತಿನಲ್ಲಿ ಆತನ ವಿನಯ, ಸತ್ಯದ ಪರಿಜ್ಞಾನ, ಕೃತಾರ್ಥತಾ ಭಾವ — ಮುಪ್ಪುರಿಯಾಗಿ ಕೂಡಿ ಬಂದದ್ದು ಕಂಡುಬರುತ್ತದೆ.

ಮೃತ ನಂದ ಪತ್ನಿಯರ ಜತೆ ವ್ಯವಹರಿಸುವಾಗ ಆತ ಅತ್ಯಂತ ಮೃದು ಹೃದಯಿ. ತಾನು ಪಿತೃಭ್ರಾತೃಗಳ ಅಗಲುವಿಕೆಯ ನೋವನ್ನುಂಡವನಾದ್ದರಿಂದ ಇತರರ ನೋವನ್ನು ಅರ್ಥಮಾಡಿಕೊಳ್ಳಬಲ್ಲವನು. ' ಅವರಿಷ್ಟದಂತೆ ನಡೆದುಕೊಳ್ಳಲಿ' ಎಂಬ ಉದಾರತೆ ಅವನದು. ಪಿತಾಮಹನಾದ ಸರ್ವಾರ್ಥಸಿದ್ಧಿಯನ್ನು ಕಂಡು ಗೌರವಾದರ ತೋರಿಸಿ, ಆತನ ಆಶೀರ್ವಾದಗಳನ್ನು ಬೇಡುವಲ್ಲಿಯೂ ಚಂದ್ರಗುಪ್ತನ ಹಿರಿಯರನ್ನು ಗೌರವಿಸುವ ಗುಣ ಎದ್ದುಕಾಣುತ್ತದೆ.

ತನ್ನನ್ನು ನಿಗ್ರಹಿಸುವುದನ್ನೇ ಪ್ರಧಾನ ಉದ್ದೇಶವಾಗಿಟ್ಟುಕೊಂಡಿದ್ದ ರಾಕ್ಷಸನನ್ನು — ತನ್ನ ಗುರುವಿನ ಮಾತಿಗಾಗಿ — ಚಂದ್ರಗುಪ್ತನು ಪ್ರಧಾನಾಮಾತ್ಯನನ್ನಾಗಿ ಸ್ವೀಕರಿಸುತ್ತಾನೆ. ರಾಕ್ಷಸನೂ — ' ಈತನು ಜನ್ಮಾರಭ್ಯ ವಿನಯಾದಿಗುಣ ಸಂಪನ್ನನು. ಈತನಲ್ಲಿ ಪ್ರಭುತ್ವ ಲಕ್ಷಣಗಳನ್ನು ನೋಡಿ, ರಾಜಪದಕ್ಕೆ ಯೋಗ್ಯನೆಂದು ತಿಳಿದಿದ್ದೆನು... ಮತ್ಸರದಿಂದ ಇವನಲ್ಲಿ ವಿಕಲ್ಪವು ತೋರಿತ್ತಲ್ಲದೇ ಅದು ಸಹಜವಲ್ಲ' ವೆಂದುಕೊಳ್ಳುವನು.

ರಾಜ್ಯವು ಸ್ಥಿರವಾಗಿ, ಪಟ್ಟಾಭಿಷೇಕವೂ ಆಗಿ, ರಾಕ್ಷಸನಂತಹ ಅಮಾತ್ಯನನ್ನು ಪಡೆದ ಮೇಲೆ ಚಾಣಕ್ಯನು ನೈಮಿಷಾರಣ್ಯಕ್ಕೆ ಹೊರಟು ನಿಂತಾಗ ಚಂದ್ರಗುಪ್ತನ ಕಣ್ಣಿನಲ್ಲಿ ನೀರು ತುಂಬಿತು. ಕೃತಜ್ಞತಾ ಭಾವದಿಂದ ಆತನ ಹೃದಯ ತುಂಬಿ ಬಂದಿರಬೇಕು. ನಿಜವಾಗಿಯೂ ಆತ ಧೀರೋದಾತ್ತ ನಾಯಕ[5]. ತನ್ನ ಅಭ್ಯುದಯಕ್ಕೆ ಕಾರಣನಾದ ಚಾಣಕ್ಯನ ಪಾದುಕೆಗಳನ್ನು ನಿತ್ಯಪೂಜೆಗೆ ಇಟ್ಟುಕೊಂಡ ನಂತರವೇ ಆತ ಮಹಾಸಿಂಹಾಸನಾರೋಹಣವನ್ನು ಮಾಡುವನು. ಇದು ಆತನ ಶೌರ್ಯ, ಉದಾರತೆಗಳ ಜತೆಗೆ ಇರುವ ಗುರುಭಕ್ತಿ ಹಾಗೂ ಕೃತಜ್ಞತಾಭಾವಕ್ಕೆ ಸಾಕ್ಷಿಯಾಗಿದೆ.

ಚಾಣಕ್ಯ[6]

ಗ್ರಂಥದ ಅವತರಣಿಕೆಯಲ್ಲಿ — ' ದಂಡನೀತಿಶಾಸ್ತ್ರದಲ್ಲಿ ಪ್ರವೀಣನಾದ ಚಾಣಕ್ಯನು ನವನಂದರನ್ನು ಛದ್ಮನೆಯಿಂದ ನಿಗ್ರಹಿಸಿ, ಚಂದ್ರಗುಪ್ತನಿಗೆ ನಂದರಾಜ್ಯಾಧಿಪತ್ಯವನ್ನು ಉಂಟುಮಾಡಿದ ಕಥೆ'ಯನ್ನು ವಿಸ್ತರಿಸಿ ಹೇಳುವುದಾಗಿ ಹೇಳಿದ ಕವಿಯ ಮಾತಿನಲ್ಲಿಯೇ ಇದರ ಪ್ರಧಾನಪಾತ್ರವು ಚಾಣಕ್ಯನೆಂಬುದರ ಅರಿವಾಗುವುದು.

ಚಾಣಕ್ಯನು ರಾಕ್ಷಸನನ್ನು ಪ್ರಥಮ ಸಲ ಭೇಟಿಯಾದಾಗ ತಾನು ಚಣಕಪುತ್ರ ವಿಷ್ಣುಶರ್ಮನೆಂದು ಪರಿಚಯಿಸಿಕೊಳ್ಳುತ್ತಾನೆ. ಇದನ್ನು ಹೊರತುಪಡಿಸಿದರೆ ಆತನ ಹುಟ್ಟಿದೂರು, ವಿದ್ಯಾಭ್ಯಾಸ ಪಡೆದ ಸ್ಥಳ, ಇತರ ಕೌಟುಂಬಿಕ ವಿಚಾರ, ಈ ನಂದ ಯುದ್ಧ ಆಗುವಾಗಿನ ಅವನ ವಯಸ್ಸು — ಇತ್ಯಾದಿಯಾವುದರ ಮಾಹಿತಿಯೂ ಇಲ್ಲಿ ಸಿಗುವುದಿಲ್ಲ. ಆದರೆ ಶುಕ್ರಾಚಾರ್ಯನಿಂದ ಪ್ರಣೀತವಾದ ದಂಡನೀತಿ ಶಾಸ್ತ್ರಾಧ್ಯಯನ ಮಾಡಿದವನು; ದಂಡ ಕೃಷ್ಣಾಜಿನಗಳನ್ನು ಧರಿಸಿದ್ದ ಮಹಾತೇಜಸ್ವಿಯಾದ ಬ್ರಾಹ್ಮಣನೆಂಬುದು ತಿಳಿದುಬರುವುದು (ಆತನ ದೇಹದ ವಿಕಾರದ ಬಗ್ಗೆಯೂ ಪ್ರಸ್ತಾವವಿಲ್ಲ). ಆತ ಮಹಾ ಕೋಪಿಷ್ಠ. ನೃಪವಿಶಾರಣ್ಯಕ್ಕೆ ಹೋಗುವ ದಾರಿಯಲ್ಲಿ ಗರಿಕೆಯ ಬಳ್ಳಿ ಆತನ ಕಾಲಿಗೆ ಸಿಕ್ಕಿ ಎಡವಿಬಿದ್ದಾಗ, ಸಿಟ್ಟುಗೊಂಡು ತನ್ನ ದಂಡಾಗ್ರದಿಂದಲೇ ಅದನ್ನು ಬೇರು ಸಹಿತ ಅಗೆದು ಛೇದಿಸಿ, ಮತ್ತೆ ತನ್ನ ಮಾರ್ಗ ಹಿಡಿದು ಮುಂದೆ ಹೋದನು. ಇದರಿಂದ ನಮಗೆ ಆತನ ಕೋಪದ ಪರಿಚಯವಾಗುವುದು.

ತನ್ನ ಶತ್ರುಗಳಾದ ನಂದರನ್ನು ಸಂಹರಿಸಿ, ಉದ್ಧರಿಸಬೇಕೆಂದು ಚಂದ್ರಗುಪ್ತನು ಕೇಳಿಕೊಂಡಾಗ, ಚಾಣಕ್ಯನು ಅಭಯ ಕೊಡುವ ಮೊದಲು ತನಗೆ ಅಪಕೀರ್ತಿ ಬಾರದಂತೆ ಧರ್ಮವಿರುದ್ಧವಲ್ಲದ ಒಂದು ಚೇಷ್ಟೆಯನ್ನಾಚರಿಸಿ, ನಂದರು ಅದನ್ನು ಹುಯಿಸದೆ ನಿರಾಕರಿಸಿ ತನಗೆ ಕೋಪವುಂಟಾಗುವಂತೆ ಮಾಡಿಕೊಂಡರೆ ಆಗ ಮಾತ್ರ ಚಂದ್ರಗುಪ್ತನ ಕಾರ್ಯಕ್ಕೆ ಅಭಯ ಕೊಡುವುದಾಗಿ ಹೇಳುತ್ತಾನೆ. ನಂದರಲ್ಲಿ ಪ್ರತ್ಯಕ್ಷ ದೋಷವನ್ನು ಕಾಣದ ಹೊರತು ಅವನು ಚಂದ್ರಗುಪ್ತನ ಪಕ್ಷ ವಹಿಸಲಿಲ್ಲ. ಅರ್ಥಾತ ಆತನಿಗೆ ಆಶ್ರಿತಾಭಿಮಾನ ಮಾತ್ರವಲ್ಲ, ಶರಣಾಗತರಿಗೆ ರಕ್ಷಣೆ ಕೊಡುವಾಗಿನ ಧರ್ಮಾಧರ್ಮದ ಎಚ್ಚರವೂ ಆತನಿಗಿತ್ತು.

ಚಾಣಕ್ಯನು ನಟನಾ ಚತುರನೂ ಹೌದು. ನಂದರು ಅನ್ನಸತ್ರಕ್ಕೆ ಬಂದ ಸಂದರ್ಭದಲ್ಲಿ ಆತನು ಹರಕು ಧೋತ್ರವನ್ನುಟ್ಟು, ಪಂಜಿ ಬ್ರಾಹ್ಮಣನಂತೆ ಅಲ್ಲಿದ್ದ ಸುವರ್ಣನಿರ್ಮಿತವಾದ ಪೀಠವನ್ನು ಅಗ್ರಸ್ಥಾನದಲ್ಲಿ ಹಾಕಿಕೊಂಡು ಅದರ ಮೇಲೆ ಕಾಲ ಮೇಲೆ ಕಾಲ ಹಾಕಿಕೊಂಡು ಎಲ್ಲರನ್ನೂ ಲಕ್ಷೀಕರಿಸದಂತೆ ಕುಳಿತಿದ್ದನು. ಇಂತಹವನನ್ನು ಕಂಡಾಗ ನಂದರಿಗೆ ಸಿಟ್ಟು ಬಾರದಿದ್ದೀತೇ? ಅವರು ದೂತರಿಂದ ಎಳೆಸಿಹಾಕಲು ಆ ರಭಸಕ್ಕೆ ಆತನ ಜುಟ್ಟು ಬಿಚ್ಚಿಹೋಗಲು ಚಾಣಕ್ಯನು ನಂದ ವಂಶವನ್ನೇ ಸಮೂಲ ನಾಶ ಮಾಡುವುದಾಗಿ ಕ್ರೂರ ಪ್ರತಿಜ್ಞೆ ಮಾಡುವನು.

ಪ್ರತಿಜ್ಞೆ 'ಏನೋ ಮಾಡಿದ್ದಾಯಿತು. ಅದು ತಪ್ಪೋ ಸರಿಯೋ ಎಂದು ಪುನಃ ಚಿಂತಿಸಿ ತನ್ನನ್ನು ಹೀಗೆ ಸಮರ್ಥಿಸಿಕೊಳ್ಳುತ್ತಾನೆ: 'ತನಗೆ ಅವಮಾನ ಮಾಡಿದ ನಂದರನ್ನು ಉಪೇಕ್ಷಿಸಿದರೆ ನನ್ನ ಪ್ರತಿಜ್ಞೆಗೆ ಭಂಗಬರುವುದು. ನಂದರಿಂದ ಲೋಕಕ್ಕೆ ಕ್ಷೇಮವಾಗದು. ಈ ಚಂದ್ರಗುಪ್ತನು ನ್ಯಾಯದಿಂದ ಪ್ರಜಾ ಪರಿಪಾಲನೆಯನ್ನು ಮಾಡುತ್ತಾ ಯಶೋವಂತನಾದರೆ ಅದಕ್ಕಿಂತ ಬೇರಾವ ಲೋಕಕ್ಷೇಮವೆಂಬುದಿಲ್ಲ. ಲೋಕದಲ್ಲಿ ಖ್ಯಾತದಂಡೆಯೆಂಬುದು ಮುಖ್ಯ ಧರ್ಮವು. ಶರಣಾಗತರಾದವರನ್ನು ರಕ್ಷಿಸುವುದು ಪರಮಧರ್ಮವು. ಗೋವುಗಳನ್ನು, ಪ್ರಜೆಗಳನ್ನು ನಿಗ್ರಹಿಸುವ ಶತ್ರುಗಳನ್ನು ನಿಗ್ರಹಿಸುವಂತೆ ನಂದನಿಗ್ರಹದಿಂದ ದೋಷ ಬರಲಾರದು'. ಇಲ್ಲಿ ಆತ ತನ್ನ ಕಾರ್ಯದ ಪರಿಣಾಮದ ಬಗ್ಗೆಯೂ ಯೋಚಿಸಿದ್ದು ಆತನ ದೂರದೃಷ್ಟಿಗೆ ಸಾಕ್ಷಿಯಾಗಿದೆ.

ಚಂದ್ರಗುಪ್ತನಿಗೆ ಮಾತುಕೊಟ್ಟ ನಂತರ ನಂದರ ನಾಶಕ್ಕೆ ಆತ ಸಮಸ್ತ 'ಏರ್ಪಾಡನ್ನು' ಮಾಡಿದನು. ನಂದರ ಶತ್ರು — ಮಿತ್ರ — ಉದಾಸೀನರು ಯಾರ್ಯಾರೆಂದು ಚಂದ್ರಗುಪ್ತನಿಂದಲೇ ತಿಳಿದನು. ರಾಕ್ಷಸ ಸಮರ್ಥ ಸೇನಾನಿ. ಆತನ ಬಲದಿಂದಲೇ ನಂದರು ಇಷ್ಟು ಶಕ್ತಿಶಾಲಿಗಳಾಗಿದ್ದಾರೆಂದು ತಿಳಿದು, ರಾಕ್ಷಸನಿಂದ ಪ್ರತ್ಯೇಕಿಸಿ ನಂದರನ್ನು ಸಂಹರಿಸಿ ಮತ್ತೆ ರಾಕ್ಷಸನನ್ನು ಸಂಗ್ರಹಿಸಿ ಚಂದ್ರಗುಪ್ತನ ಮಂತ್ರಿಯನ್ನಾಗಿ ಮಾಡಬೇಕೆಂದು ಚಾಣಕ್ಯನು ಮೊದಲೇ ನಿಶ್ಚಯಿಸಿಕೊಂಡನು.

ನಂದರ ಸೇನಾಧಿಕಾರಿಗಳಲ್ಲಿ ಭೇದವನ್ನು ಬಿತ್ತುವುದು ನಂದನಾಶ ಯತ್ನದ ಮೊದಲ ಹೆಜ್ಜೆ. ಅದಕ್ಕಾಗಿ ಚಾಣಕ್ಯನು ಚಂದ್ರಗುಪ್ತನನ್ನೇ ಗುಟ್ಟಾಗಿ ಪಾಟಲೀಪುರಕ್ಕೆ ಕಳುಹಿಸಿ — 'ಚಂದ್ರಗುಪ್ತನ ಕಾರ್ಯಕ್ಕೆ ಅವರೆಲ್ಲರ ಒಪ್ಪಿಗೆಯುಳ್ಳ ಕೈಬರಹದ ಪತ್ರ' ವನ್ನು ಸಂಗ್ರಹಿಸಿಕೊಳ್ಳುತ್ತಾನೆ. ರಾಕ್ಷಸನನ್ನು ಭೇದಿಸಲು ತನ್ನ ಸಹಾಧ್ಯಾಯಿ ಇಂದುಶರ್ಮನನ್ನು ಕ್ಷಪಣಕ ವೇಷದಲ್ಲಿ ಅಲ್ಲಿಗೆ ಹೋಗುವಂತೆ ಕಳುಹಿಸಿ, ತಾನು ಚಂದ್ರಗುಪ್ತನೊಡನೆ ಪರ್ವತರಾಜನ ಸೈನ್ಯದ ಸಹಾಯ ಪಡೆಯಲು ಅಲ್ಲಿಗೆ ಹೋಗುವನು.

ಚಾಣಕ್ಯ ತಪಸ್ವಿ. ಆತನು ತನ್ನ ತಪಃಪ್ರಭಾವದಿಂದಲೇ ನಂದರನ್ನು ಸಂಹರಿಸಬಹುದಿತ್ತಲ್ಲ! ಈ ಯುದ್ಧ ಪ್ರಯತ್ನ ಯಾಕೆ ಎಂಬ ಸಂಶಯ ಮೂಡುವುದು ಸಹಜ. ಪರಲೋಕ ಸಾಧನವಾದ ತಪೋ ವ್ಯಯ ಆತನಿಗೆ ಇಷ್ಟವಿಲ್ಲ. ಹಾಗಾಗಿ ಆತ ತನ್ನ ಪೌರುಷವನ್ನೇ ಉಪಯೋಗಿಸಿ ನಂದವಿನಾಶಕ್ಕೆ ಹೊರಡುತ್ತಾನೆ.

ಲಂಪಾಕಪತಿಯು ಪರ್ವತರಾಜ್ಯದ ಮೇಲೆ ದಂಡೆತ್ತಿ ಬಂದಿದ್ದುದರಿಂದ, ಸ್ವರಾಷ್ಟ್ರ ರಕ್ಷಣೆಯೇ ಮುಖ್ಯ ಕರ್ತವ್ಯವಾದ್ದರಿಂದ, ಪರ್ವತರಾಜನು ನಂದರ ವಿರುದ್ಧ ಯುದ್ಧಕ್ಕೆ ಬರಲು ತನ್ನ ಅಸಹಾಯಕತೆಯನ್ನು ಸೂಚಿಸುತ್ತಾನೆ. ಕೇವಲ ಕಾಗದಾಳ ಮಾಲಕ ಕಾಮರೂಪಾಧಿಪತಿಯನ್ನು ಲಂಪಾಕಾಧಿಪತಿಯ ಮೇಲೆ ಯುದ್ಧಕ್ಕೆ ಎತ್ತಿಕಟ್ಟಿ ಚಾಣಕ್ಯನು ಪರ್ವತರಾಜನಿಗೆ ಬಂದಿದ್ದ ಆಪತ್ತನ್ನು ತೊಲಗಿಸುವನು. ಅಲ್ಲದೇ ಅರ್ಧರಾಜ್ಯದ ಆಶೆ ತೋರಿಸಿ ಪರ್ವತರಾಜನನ್ನು ಸೈನ್ಯ ಸಮೇತ ಪಾಟಲೀಪುರಕ್ಕೆ ಕರೆತರುವನು.

ಚಾಣಕ್ಯನ ಯುಕ್ತಿ, ಸಾಮ, ದಾನ, ಭೇದ ಪ್ರಯೋಗ ಆತನ ತಂತ್ರ. ಪರ್ವತರಾಜನ ಸೈನ್ಯವು ಪಾಟಲೀಪುರದ ಬಳಿ ಬಂದಿದ್ದರೂ — 'ಆಹಾರವನ್ನು ತೋರಿಸಿ ಮಡುಗಳಿಂದ ದೊಡ್ಡ ಮೀನುಗಳನ್ನು ಹೊರಗೆ ತೆಗೆಯುವಂತೆ' ಪರರಾಜರ ಸೈನ್ಯವನ್ನು ದೂರದಲ್ಲಿಯೇ ತೋರಿಸಿ ಉಪಾಯಾಂತರಗಳಿಂದ ನಂದರನ್ನು ನಿಗ್ರಹಿಸುವುದು ಆತನ ಗುರಿ.

ಪರ್ವತರಾಜನೊಡಗೂಡಿ ಚಾಣಕ್ಯನು ಯುದ್ಧಕ್ಕೆ ಬರುವ ಸುದ್ದಿಯನ್ನು ಕೇಳಿ ರಾಕ್ಷಸನೂ ಕಪಟತಂತ್ರಗಳನ್ನು ಹೂಡಬಹುದಷ್ಟೆ. ಅದನ್ನೂ ಊಹಿಸಿದ್ದ ಚಾಣಕ್ಯನು ತನ್ನ ಮಿತ್ರನಾದ ಇಂದುಶರ್ಮನ ಮೂಲಕ ರಾಕ್ಷಸನ ತಂತ್ರಗಳನ್ನು ತಿಳಿದು ಅದಕ್ಕೆ ಪ್ರತೀಕಾರದ ಕ್ರಮ ಕೈಗೊಳ್ಳುತ್ತಾನೆ. ಚಾಣಕ್ಯ ಬೀಸಿದ ಬಲೆಯ ಜಾಲ ರಾಕ್ಷಸನ ಅರಿವಿಗೆ ಬರಲೇ ಇಲ್ಲ.

ಕಾಶೀರಾಜ ನಂದರ ಆಪ್ತ. ಇದನ್ನು ತಿಳಿದಿದ್ದ ಚಾಣಕ್ಯನು ತನ್ನ ನಿಯೋಗಿಯನ್ನು ಅಲ್ಲಿಗೆ ಕಳುಹಿಸಿ, ಉಪಾಯಾಂತರದಿಂದ ಕಾಶೀರಾಜನ ಸಹಾಯ ನಂದರಿಗೆ ತಲುಪದಂತೆ ತಡೆಯುವಲ್ಲಿಯೂ ಯಶಸ್ವಿಯಾಗುತ್ತಾನೆ. ಕಪಟ ಮಲಯಕೇತುವನ್ನು ನಂದರು ನಿಜವೆಂದೇ ಭ್ರಮಿಸುತ್ತಾರೆ.

ಇತ್ತ ಚಾಣಕ್ಯನ ಮಾರ್ಗದರ್ಶನದಂತೆ ಮೌನೋಪವಾಸಿಯು — ಹೇಮಾಂತ್ಯದಲ್ಲಿ ದೇವತಾಪನ್ನ ದರ್ಶನದ ವಿಶೇಷತೆಯನ್ನು ಹೇಳಿ ಪೂರ್ಣಘಟಿಕೆಯ ವೇಳೆಗೆ, ರಾಕ್ಷಸನಿಂದ ಹೊರತುಪಡಿಸಲ್ಪಟ್ಟ ನಂದರು ಬರುವಂತೆ ಮಾಡಿ, 'ಏಕಾಕಿಗಳಾದ ಅವರನ್ನು ಭೇದಿಸಿ ಕೊಲ್ಲಲು ಅಪೂರ್ವವಾದ ಸನ್ನಿವೇಶವನ್ನು ನಿರ್ಮಾಣ ಮಾಡುತ್ತಾನೆ.

ಅಂದೋಳಿಕೆಯಲ್ಲಿ ಕುಳಿತು ಸ್ವತಃ ಯುದ್ಧಭೂಮಿಗೆ ಬಂದಿದ್ದ ಚಾಣಕ್ಯನು ನಂದರನ್ನು ಬಂಧಿಸಿ, ಕಾಲುಗಳಿಗೆ ನೇಣುಗಳನ್ನು ಬೀರಿ ಎಳೆಸಿ ಸಂಹರಿಸುವಂತೆ ಸೇನಾಪತಿಗೆ ಆದೇಶಿಸಿದನು. ತನ್ನ ಪ್ರತಿಜ್ಞೆ ಪೂರ್ಣಗೊಂಡಾಗ ಚಾಣಕ್ಯನು ಗಂಗಾ ಜಲದಲ್ಲಿ ಸ್ನಾನಮಾಡಿ ಬಿಚ್ಚಿದ್ದ ತನ್ನ ಶಿಖೆಯನ್ನು ಬಂಧಿಸಿ ತಾನಿದ್ದೆಡೆಗೆ ಬಂದನು. (ಇಷ್ಟಾದ ನಂತರವೇ ಆತನ ಮನಸ್ಸಿಗೆ ನೆಮ್ಮದಿ).

ಚಾಣಕ್ಯನು ಚಂದ್ರಗುಪ್ತನಿಗೆ ಆಶ್ವಾಸನೆ ಕೊಟ್ಟದ್ದು — ಇಡೀ ನಂದ ಸಾಮ್ರಾಜ್ಯವನ್ನು ಕೊಡಿಸುವೆನೆಂದು. ಅರ್ಧರಾಜ್ಯವನ್ನು ಪರ್ವತರಾಜನಿಗೆ ಕೊಟ್ಟರೆ, ತನ್ನ ಮಾತು ಪೂರ್ಣವಾಗುವುದಿಲ್ಲವಲ್ಲ. ಪುನಃ ಯೋಚಿಸಿದ ಚಾಣಕ್ಯನು ಕೃತಘ್ನನಾದ ಪರ್ವತರಾಜನನ್ನು ಕೊಲ್ಲಿಸುವುದೇ ಉಚಿತವೆಂದು ನಿರ್ಣಯಿಸುತ್ತಾನೆ. ರಾಕ್ಷಸನು ಚಂದ್ರಗುಪ್ತನನ್ನು ಕೊಲ್ಲಲು ಕಳುಹಿಸಿದ್ದ ವಿಷಕನ್ಯೆಯನ್ನು, ಪರ್ವತರಾಜನ ಬಳಿಗೆ ಕಳುಹಿಸಿಕೊಡುತ್ತಾನೆ. ಪರ್ವತರಾಜನು ಮೃತಹೊಂದಲು, ಭಾಗುರಾಯಣನು ಮಲಯಕೇತುವನ್ನು ಆತನ ರಾಜ್ಯಕ್ಕೆ ಕರೆದುಕೊಂಡು ಹೋಗುವಂತೆ ಮಾಡುತ್ತಾನೆ.

ರಾಕ್ಷಸನು ನಗರದ ಹೊರಗಿದ್ದುಕೊಂಡೇ ಚಂದ್ರಗುಪ್ತನನ್ನು ಕೊಲ್ಲಲು ನೇಮಿಸಿದ್ದ ಶಿಲ್ಪಿ, ರಾಜವೈದ್ಯ, ಭವನಪಾಲಕರ ಕಪಟಗಳನ್ನು ಊಹಿಸಿದ ಚಾಣಕ್ಯನು ಆ ತಂತ್ರಗಳಿಗೆ ಅವರೇ ಬಲಿಯಾಗುವಂತೆ ಮಾಡುತ್ತಾನೆ. ಚಂದ್ರಗುಪ್ತನ ರಕ್ಷಣೆಗೆ ಚಾಣಕ್ಯನು ಕಟ್ಟೆಚ್ಚರವಹಿಸಿದ ಕಾರಣ, ಶತ್ರುಗಳ ಯಾವ ತಂತ್ರವೂ ಸಫಲವಾಗಲಿಲ್ಲ.

ಸರ್ವಾರ್ಥಸಿದ್ಧಿಯು ಬದುಕುಳಿದರೆ, ರಾಕ್ಷಸನು ಆತನನ್ನು ಮುಂದಿಟ್ಟುಕೊಂಡು ಪುನ: ನಂದ ಸಾಮ್ರಾಜ್ಯವನ್ನು ಸ್ಥಾಪಿಸುವನೆಂದು ಬಗೆದು ಚಾಣಕ್ಯನು ಕೊಲೆಗಾರರ ಮೂಲಕ ಆತನ ವಧೆ ಮಾಡಿಸುವನು. (ಮಲಯಕೇತುವಿನ ಬಳಿ ಹೋಗಿ, ಅಲ್ಲಿಯ ಸಹಾಯ ಪಡೆದು ಪಾಟಲೀಪುರದ ಮೇಲೆ ದಂಡೆತ್ತಿ ಬರಬಹುದಾಗಿದ್ದ ರಾಕ್ಷಸನನ್ನು ಅಲ್ಲಿಂದ ಹೊರಡಿಸಲು ತನ್ನ ಆಪ್ತರನ್ನು ಮೊದಲೇ ಅಲ್ಲಿ ನೇಮಿಸಿ, ಅದೇ ಸಫಲವಾಗುವಂತೆ ನೋಡಿಕೊಳ್ಳುತ್ತಾನೆ).

ಚುರುಕುಬುದ್ಧಿಯ ತನ್ನ ಗುಪ್ತಚರನು ತಂದುಕೊಟ್ಟದ್ದು ಅಮಾತ್ಯರಾಕ್ಷಸನ ಮುದ್ರೆಯುಂಗುರವನ್ನು ಪಡೆದು, ರಾಕ್ಷಸನ ಆಪ್ತ ರಾಯಸದವನಾದ ಶಕಟದಾಸನ ಕೈಯಿಂದ ಬರೆಯಿಸಿದ ಪತ್ರಕ್ಕೆ ಅದರಿಂದಲೇ ಮುದ್ರೆಯೊತ್ತಿಸಿ, ಅದರಿಂದಲೇ ರಾಕ್ಷಸನ ಪತನವಾಗುವಂತೆ ನೋಡಿಕೊಳ್ಳುತ್ತಾನೆ. ಪರ್ವತೇಶ್ವರನು ಧರಿಸಿದ್ದ ಆಭರಣಗಳನ್ನು ರಾಕ್ಷಸನು ಕೊಂಡುಕೊಳ್ಳುವಂತೆ ಮಾಡಿ, ಅದನ್ನು ಬಹುಮಾನವಾಗಿ ಪಡೆದ ಸಿದ್ಧಾರ್ಥಕನು ಉಕ್ಕಡದಲ್ಲಿ ಅಸಂಬದ್ಧವಾದ ಮಾತುಗಳನ್ನು ಹೇಳುವಂತೆ ಮಾಡಿ ರಾಕ್ಷಸನನ್ನು ಮಲಯಕೇತುವಿನಿಂದ ದೂರ ಸರಿಯುವಂತೆ ಮಾಡಿಸುವನು.

ಗುಪ್ತಚರರಿಂದ ಚಂದನದಾಸನ ಮನೆಯಲ್ಲಿ ರಾಕ್ಷಸನ ಪತ್ನೀಪುತ್ರರಿದ್ದರು — ಎಂಬ ವಿಚಾರ ತಿಳಿದಿದ್ದ ಚಾಣಕ್ಯನು, ಅದೇ ಕಾರಣದಿಂದ ರಾಕ್ಷಸನು ಅನಿವಾರ್ಯವಾಗಿ ತನ್ನ ಬಳಿ ಬರುವಂತೆ ಮಾಡಿದನು. ಮಿತ್ರನ ಜೀವ ರಕ್ಷಣೆಯಾಗಬೇಕಿದ್ದಲ್ಲಿ ಪ್ರಧಾನಾಮಾತ್ಯ ಪಟ್ಟವನ್ನು ಸ್ವೀಕರಿಸಬೇಕೆಂದು ಹೇಳಿ ಆತನನ್ನು ಒಪ್ಪಿಸುವನು. ಇದು ಬೆಂಕಿಯನ್ನು ಸೆರಗಿನಲ್ಲಿ ಕಟ್ಟಿದಂತೆ, ಚಂಡಮಾರುತವನ್ನು ಹಗ್ಗದಲ್ಲಿ ಬಿಗಿದಂತೆ, ಸಿಂಹದ ಮೈದಡವಿದಂತೆ — ಈ ಅಸಮ ಸಾಹಸಕಾರ್ಯವನ್ನು ಮಾಡುವುದರಲ್ಲಿ ಚಾಣಕ್ಯನು ಸಂಪೂರ್ಣ ಜಯಶಾಲಿಯಾದನು.

ಕಪಟಕಲಹದ ಸಂದರ್ಭದಲ್ಲಿ 'ಮೂರ್ಖರು ದೈವವನ್ನು ನಂಬುವರು' ಎಂದು ಹೇಳಿದ್ದರೂ ಆತ ಯುದ್ಧದ ಸಮಯದಲ್ಲಿ ಯಶಸ್ಸಿಗಾಗಿ ದೇವತಾ ಪ್ರಾರ್ಥನೆ ಮಾಡಿದ್ದನು. ವೈಯಕ್ತಿಕವಾಗಿ ಆತ ದೈವಭೀರು, ಧರ್ಮನಿಷ್ಠ. ಆದರೆ ಕರ್ತವ್ಯದ ವಿಷಯದಲ್ಲಿ ಆತ ದೈವವನ್ನೇ ನೆಚ್ಚಿ ಕುಳಿತವನಲ್ಲ. ಇಂದುಶರ್ಮ, ಸಿದ್ಧಾರ್ಥಕ, ಮರಾಳಕರಂತಹ ಕಾರ್ಯಯೋಗಿಗಳ ಸಹಕಾರವು ದೈವಯೋಗದಿಂದಲೇ ಆತನಿಗೆ ಒದಗಿತೆನ್ನಬೇಕು.

ಚಾಣಕ್ಯ ಉಗ್ರ ಪ್ರಕೋಪಿ ಎಂದು ಕಂಡುಬಂದರೂ ಆತನ ಹೃದಯದಲ್ಲಿ ಹಾಸ್ಯಕ್ಕೆ, ಕೋಮಲಭಾವಕ್ಕೆ ಎಡೆಯಿದೆ. ಘಾವದ್ವನೆಂಬ ಬಾಲವಟುವಿನೊಡನೆ ಆತ ವ್ಯವಹರಿಸುವುದನ್ನು ನೋಡಿದರೆ ಆತನ ಅಂತ:ಕರಣದ ಅರಿವಾಗುವುದು.

ಚಾಣಕ್ಯನದು ನಿಸ್ವಾರ್ಥ ಗುಣ. ಅಲಿಪ್ತಭಾವ. ಸಾಮ್ರಾಜ್ಯದ ಮುಖ್ಯಮಂತ್ರಿಯಾಗ ಬಹುದಾಗಿದ್ದರೂ ಅದನ್ನು ತ್ಯಜಿಸಿ ಕಾಡಿಗೆ ತಪಸ್ಸಿಗೆ ಹೋಗುವ ಮನೋಭಾವ. ನಗರದಲ್ಲಿದ್ದಾಗಲೂ ಅಷ್ಟೆ. ಆಶ್ರಮವಾಸ. ಬಿರುಕು ಬಿಟ್ಟ ಗೋಡೆ, ಸಮಿತ್ತನ್ನು ಹೇರಿದ ಛಾವಣಿ, ದರ್ಭೆಯ ಹೊರೆ ಬೆರಣಿಯ ರಾಶಿ — ಇದು ಆತನ ಆಶ್ರಮದ ಚಿತ್ರಣ. ಆತನ ನಿರ್ಲಿಪ್ತ ಮನೋಭಾವವೇ ಆತನ ಇಡೀ ವ್ಯಕ್ತಿತ್ವದ ಮೆರುಗನ್ನು ಹೆಚ್ಚಿಸಿದೆ.

ಮಿತ್ರನ ಪ್ರಾಣರಕ್ಷಣೆಯ ಕೋರಿಕೆಗಾಗಿ ಚಾಣಕ್ಯನ ಬಳಿ ಬಂದು ಪ್ರಥಮ ಸಲ ಆತನನ್ನು ನೋಡಿದ ರಾಕ್ಷಸನು — ' ಈತನನ್ನು ದುರಾತ್ಮನೆಂದು ಹೇಳಬಾರದು; ಸಕಲ ವಿದ್ಯಾನಿವಾಸಭೂತನಾದುದರಿಂದಲೂ, ಮಹಾಭಾಗ್ಯದಂಥ ಕಾಲದಲ್ಲಿಯೂ ವಿರಕ್ತನಾದುದರಿಂದಲೂ ಈತನನ್ನು ಮಹಾತ್ಮನೆನ್ನಬೇಕು. ಈತನ ಸಾಹಸಕ್ಕೆ ಮೆಚ್ಚಿದ್ದರೆ ನನ್ನಲ್ಲಿ ಮಾತ್ಸರ್ಯದೋಷವುಂಟಾದೀತು' ಎಂದು ಯೋಚಿಸುವ ಮಾತಿನಲ್ಲಿ ಯಥಾರ್ಥತೆ ಇದೆ. ಹೌದು. ಚಾಣಕ್ಯ ಮಂತ್ರಗುಣಸಂಪನ್ನಮಹಾತ್ಮನು.

ರಾಕ್ಷಸ[7]

ಗೌಡದೇಶದ ಅರಸು, ಸರ್ವಾರ್ಥಸಿದ್ಧಿಯ ಆಪ್ತಮಂತ್ರಿಗಳಲ್ಲಿ ರಾಕ್ಷಸನು ಪ್ರಮುಖನು. ಸಂಧಿವಿಗ್ರಹಿಯಾದ ಈತನು ಅನಾಯಾಸವಾಗಿ ಪ್ರಜ್ಞಾಬಲದಿಂದ ಸಕಲ ರಾಜ್ಯಭಾರವನ್ನು ನಿರ್ವಹಿಸುತ್ತಿದ್ದನು.

ನಂದರು ಪ್ರಾಪ್ತವಯಸ್ಕರಾಗಲು, ರಾಕ್ಷಸನು ಅವರಿಗೆ ಸಕಲ ಶಸ್ತ್ರ ಶಾಸ್ತ್ರಾಭ್ಯಾಸವನ್ನು ಮಾಡಿಸಿ, ಯಥಾಯೋಗ್ಯ ರಾಜಕುಲ ಕನ್ಯಾರತ್ನಗಳನ್ನು ತಂದು ಮದುವೆ ಮಾಡಿಸಿ, ಜ್ಯೇಷ್ಠ ನಂದನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಆ ನಂದರೂ ರಾಕ್ಷಸನಲ್ಲಿ ವಿಶ್ವಾಸವನ್ನಿಟ್ಟಿದ್ದರು.

ಮೌರ್ಯನೂ ಆತನ ಮಕ್ಕಳೂ ತಮಗಿಂತ ಅಧಿಕರಾದಾರು — ಎಂಬ ಮತ್ಸರದಿಂದ ನಂದರು ಅವರನ್ನು ನಿಗ್ರಹಿಸಬೇಕೆಂದು ನಿಶ್ಚಯಿಸಿ, ಈ ಅಂಶವನ್ನು ರಾಕ್ಷಸನಿಗೆ ತಿಳಿಸಿದರು. ಆಗ ರಾಕ್ಷಸನು — ' ನಿಷ್ಕಾರಣ ಮತ್ಸರದಿಂದ ಈ ಮೌರ್ಯರನ್ನು ಸಂಹರಿಸಿದರೆ ಲೋಕದಲ್ಲಿ ಅಪಖ್ಯಾತಿ — ಉಂಟಾಗಿ ಪ್ರಜೆಗಳೆಲ್ಲರೂ ನಿಮ್ಮಲ್ಲಿ ವಿಶ್ವಾಸವನ್ನು ಬಿಡುವರು. ಇದೇ ಅನರ್ಥಕ್ಕೆ ಕಾರಣವು. ಇದಲ್ಲದೇ ನಿಮಗೆ ದೈವ ಸಹಾಯವು ತಪ್ಪೀತು ....' ಎಂದು ಎಚ್ಚರಿಸುತ್ತಾನೆ.

ಈ ಸಲಹೆಯು ನಂದರಿಗೆ ಸಮ್ಮತವಾಗುವುದಿಲ್ಲ. ರಾಕ್ಷಸನನ್ನು ಹೊರತುಪಡಿಸಿ, ತಾವು ನಿಶ್ಚಯಿಸಿದ ಕಾರ್ಯವನ್ನು ಮಾಡುವುದಾಗಿ ಅವರು ನಿರ್ಣಯಿಸುತ್ತಾರೆ. ಅದನ್ನು ಊಹಿಸಿದ ರಾಕ್ಷಸನು — 'ಈ ನಂದರು ನಿರಪರಾಧಿಗಳಾದ ಮೌರ್ಯರನ್ನು ಸಂಹರಿಸುತ್ತಾರೆ. ಈ ಪುರದಲ್ಲಿ ತಾನಿದ್ದರೆ, ನಂದರಿಗೆ ಅನುಕೂಲನಾದ್ದರಿಂದ ತನಗೂ ಅಪವಾದ ಬರುವ ಸಾಧ್ಯತೆ ಇದೆ. ಹಾಗಾಗಿ ನಿಮಿತ್ತಾಂತರದಿಂದ ಆ ಸಮಯದಲ್ಲಿ ಪುರದಿಂದ ದೂರ ಹೋಗಬೇಕು' ಎಂದು ನಿರ್ಣಯಿಸುತ್ತಾನೆ. ವೃದ್ಧರಾಜನು ಪ್ರಯಾಗಕ್ಕೆ ಹೊರಡಲು, ತಾನೂ ಅವರ ಜತೆ ಹೊರಟು ಹೋಗುತ್ತಾನೆ.

ಪಿತೃಸ್ಥಾನದಲ್ಲಿದ್ದ ರಾಕ್ಷಸನು ನಂದರನ್ನು ಈ ಅಕಾರ್ಯದಿಂದ ವಿಮುಖರಾಗುವಂತೆ ಮನ ಒಲಿಸಬಹುದಿತ್ತು. ತನ್ನ ಮಾತು ಕೇಳದಿದ್ದ ಮೇಲೆ ತನಗೇಕೆ ಅನಗತ್ಯ ನಿಷ್ಠುರ — ಎಂದು ಆತ ಸುಮ್ಮನಾಗಿದ್ದಿರಬೇಕು.

ನಂದರು ಮೌರರನ್ನು ಸಂಹರಿಸಿ, ಅವರ ಮರಣದ ವಾರ್ತೆಯನ್ನು ಪತ್ರ ಮುಖೇನ ಪ್ರಯಾಗದಲ್ಲಿದ್ದ ಸರ್ವಾರ್ಥಸಿದ್ಧಿಗೆ ತಿಳಿಸುತ್ತಾರೆ. ಸರ್ವಾರ್ಥಸಿದ್ಧಿಯಅಣತಿಯಂತೆ ಆ ಪತ್ರವನ್ನೋದಿದ ರಾಕ್ಷಸನು ಮನಸ್ಸಿನಲ್ಲಿಯೇ ಆಶ್ಚರ್ಯಪಟ್ಟು — 'ನಂದರು ನಿಷ್ಕಾರಣ ಮತ್ಸರದಿಂದ ಮೌರ್ಯರನ್ನು ಸಂಹರಿಸಿ ಲೋಕಾಪವಾದಕ್ಕೆ ಪಾತ್ರರಾದರು. ಇನ್ನು ಇವರಿಗೆ ದೈವಬಲ ಒದಗದು. ಹೇಗಿದ್ದರೂ ಈ ವೃದ್ಧ ರಾಜನಿಗೆ ದುಃಖವನ್ನುಂಟುಮಾಡಬಾರದು. ನಾನು ಇದರ ಮೂಲವನ್ನು ಅರಿಯದವನಂತೆ ಈ ರಾಜನನ್ನು ಸಮಾಧಾನಗೊಳಿಸಿ, ಪುರಕ್ಕೆ ಕರೆದುಕೊಂಡು ಹೋಗಬೇಕೆಂದು ನಿಶ್ಚಯಿಸಿ ಅಂತೆಯೇ ಮಾಡಿದನು.

ಸರ್ವಾರ್ಥಸಿದ್ಧಿಗೆ ನಂದರು ಜ್ಞಾತಿ ಮತ್ಸರದಿಂದ ಮೌರ್ಯರನ್ನು ಸಂಹರಿಸಿದರೆಂಬ ವಿಚಾರವು ಪರೋಕ್ಷವಾಗಿ ತಿಳಿದಾಗ ರಾಕ್ಷಸನನ್ನು ಕರೆದು, 'ತಾನು ವಾನಪ್ರಸ್ಥನಾಗಿ ತಪಸ್ಸನ್ನಾಚರಿಸುವೆನು' ಎನ್ನುವನು. ಆಗ ರಾಕ್ಷಸನು —'ಜೀಯ ಆಪತ್ತು ಸಮಯದಲ್ಲಾದರೂ ವಿಮರ್ಶೆಯಿಂದ ಕಾರ್ಯ ಮಾಡಬೇಕು. ನಂದರಲ್ಲಿ ಪ್ರಜೆಗಳಿಗೆ ಅನುರಾಗ ತಪ್ಪಿರುವ ಈ ಸಮಯದಲ್ಲಿ ರಂಧ್ರಾನ್ವೇಷಿಗಳಾದ ಶತ್ರುಗಳು ಮೌರ್ಯರಲ್ಲಿ ಅನುರಕ್ತರಾಗಿದ್ದ ಇಲ್ಲಿಯ ಅಧಿಕಾರಿಗಳಿಗೂ ನಂದರಿಗೂ ಭೇದವನ್ನು ಕಲ್ಪಿಸಿದರೆ ಪ್ರಮಾದ ಬರುವುದು. ಆಗ ನಂದರಿಗೆ ಬಂದ ಅಪಯಶಸ್ಸು ತಮ್ಮ ಪಾದಕ್ಕೇ ಬಂದಂತಲ್ಲವೇ? ಆದ್ದರಿಂದ ತಾವು ತಪೋವನಕ್ಕೆ ಹೋಗಕೂಡದು. ನಂದರಿಗೆ ರಾಜ್ಯ ಸ್ವಾತಂತ್ರ್ಯವುಂಟು. ಆದ್ದರಿಂದ ಅವರು ದಂಡನೆಗೆ ಶಕ್ಯರಲ್ಲ. ಪ್ರಬುದ್ಧರಾದ ಪುತ್ರರನ್ನು ಧಿಕ್ಕರಿಸಿ ಎದುರು ಮಾಡಿಕೊಂಡು, ನಿಮ್ಮಲ್ಲಿರುವ ಭಯ ವಿಶ್ವಾಸವನ್ನು ತಪ್ಪಿಸಿಕೊಳ್ಳಬಾರದು. ಈಗ ನೀವು ಯಾವುದನ್ನೂ ತಿಳಿಯದವರಂತೆ, ತಂದೆ—ಮಕ್ಕಳಿಗೆ ಮನಸ್ತಾಪವೆಂದು ಜನಗಳಿಗೆ ತೋರ್ಪಡಿಸದೆ, ನಂದರಲ್ಲಿ ಅನುರಕ್ತರಾಗಿ ಇರಬೇಕಲ್ಲದೇ, ಬೇರೆ ಯೋಚಿಸಿದರೆ ಹಗೆಗಳಿಗೆ ಹಾಸ್ಯಾಸ್ಪದವಾಗುವುದು' ಎನ್ನುವನು.

ಇದು ಮಂತ್ರಿಗುಚಿತವಾದ ಪ್ರಬುದ್ಧವಾದ ಆಲೋಚನೆ. ತರ್ಕಬದ್ಧ ವಿಚಾರಸರಣಿ — ಹೀಗೆ ರಾಕ್ಷಸನು ಮಾಡುತ್ತಿದ್ದ ರಾಜತಂತ್ರ ವಿಚಾರವನ್ನು ಕೇಳಿಯೇ ಪರರಾಜರ ಹೃದಯಗಳು ತಲ್ಲಣಿಸುತ್ತಿದ್ದುವು.

ಸರ್ವಾರ್ಥಸಿದ್ಧಿಯ ಕಾಲದಲ್ಲಿ ಶತ್ರುನಿಗ್ರಹ, ಕೋಶವೃದ್ಧಿ, ಸುಹೃಲ್ಲಾಭ — ಮೊದಲಾದ ಕಾರ್ಯಗಳಲ್ಲಿ ಯಶಸ್ಸನ್ನು ಪಡೆಯುತ್ತಿದ್ದ ರಾಕ್ಷಸನ ಸೂಕ್ಷ್ಮಮತಿ ಮತ್ತೆ ನಂದರ ಕಾಲದಲ್ಲಿ ಅದೇ ಹೊಳಪನ್ನು ಉಳಿಸಿಕೊಳ್ಳಲು ಸಮರ್ಥವಾಗಲಿಲ್ಲ. ಆದರೆ ಆತ ತನ್ನ ಪ್ರಯತ್ನವನ್ನು ಬಿಟ್ಟು ಬಿಡಲಿಲ್ಲ.

ಪರರಾಯರಿಂದ ನಂದರ ಪರೀಕ್ಷಾರ್ಥವಾಗಿ ಕಳುಹಿಸಲ್ಪಟ್ಟ ಕಪಟ ಶಿಲ್ಪದ ವಿವರವನ್ನು ಉಳಿದ ಮಂತ್ರಿಗಳು ತಿಳಿಯಲು ಅಸಮರ್ಥರಾದರು. ಆಗ ರಾಕ್ಷಸನು — ' ಈ ಪಂಜರದ ಪರೀಕ್ಷೆ ಮಾಡಿ, ಅದರ ರಹಸ್ಯವನ್ನು ನನಗೆ ಹೇಳಲಾಗದಿದ್ದರೆ, ನನ್ನ ಪರೀಕ್ಷಾ ನಂತರ ಮತ್ತೊಬ್ಬ ಪರೀಕ್ಷಿಸಿ ಜಯಶಾಲಿಯಾದರೆ, ಆಗ ಜನರಲ್ಲಿ ತನಗೆ ಅವಮಾನ. ಆದ್ದರಿಂದ ಕೊನೆಯಲ್ಲಿ ನೋಡೋಣ ' ವೆಂದುಕೊಳ್ಳುತ್ತಾನೆ. ಇದರಿಂದ ರಾಕ್ಷಸನ ತೀಕ್ಷ್ಣಮತಿತ್ವದ ಜತೆಗೆ ಪ್ರಜೆಗಳ ಭಾವನೆಗಳ ಬಗ್ಗೆ ಆತನಿಗಿದ್ದ ಎಚ್ಚರದ ಅರಿವಾಗುತ್ತದೆ.

ಚಂದ್ರಗುಪ್ತನಿಂದ ಕಪಟ ಶಿಲ್ಪದ ರಹಸ್ಯವು ಬಯಲಾಗಲು, ಆತನಿಗೆ ಅನ್ನಸತ್ರಾಧಿಕಾರವನ್ನು ಕೊಡಬೇಕೆಂಬ ಮಂತ್ರಿ ಸುಮತಿಯ ಮಾತನ್ನು ರಾಕ್ಷಸನು ಅನುಮೋದಿಸುತ್ತಾನೆ. ಬ್ರಾಹ್ಮಣಾರಾಧನೆಯಲ್ಲಿ ನ್ಯೂನತೆಯುಂಟಾದರೆ ಆ ಶಾಪದಿಂದಲೇ ಚಂದ್ರಗುಪ್ತನು ನಷ್ಟನಾದಾನು ಎಂಬುದು ರಾಕ್ಷಸನ ಅನಿಸಿಕೆ. ಆದರೆ ಸ್ವಬಾಂಧವರನ್ನು ಕಳೆದುಕೊಂಡ ಚಂದ್ರಗುಪ್ತನು ಶತ್ರುಶೇಷ. ಕಾರಣವನ್ನಪೇಕ್ಷಿಸದೇ ಆತನನ್ನು ನಿಗ್ರಹಿಸಬೇಕಾದ್ದು ಮಂತ್ರಿಧರ್ಮವಾಗಿತ್ತು.

ನವನಂದರು ಭೋಜನಗೃಹದಲ್ಲಿ ಚಾಣಕ್ಯನನ್ನು ಅವಮಾನಿಸಿದಾಗ ರಾಕ್ಷಸನು ಅಲ್ಲಿದ್ದಿರಲಿಲ್ಲ. ಆದರೆ ಅವಮಾನಿತನಾದ ಬ್ರಾಹ್ಮಣನು ಕ್ರೂರ ಪ್ರತಿಜ್ಞೆ ಮಾಡಿ ಅಲ್ಲಿಂದ ಹೊರ ಹೊರಟನೆಂದು ತಿಳಿದಾಗ ಆತನನ್ನು ರಾಕ್ಷಸನು ಉಪೇಕ್ಷಿಸಿದ್ದೂ ಸರಿಯಲ್ಲ. ಒಂದೋ ಆತನನ್ನು ಕರೆದು ಗೌರವಿಸಿ, ತಪ್ಪಿಗಾಗಿ ಕ್ಷಮೆ ಕೇಳಬೇಕಾಗಿತ್ತು. ಇಲ್ಲ, ಆಗಲೇ ಆತನನ್ನು ಸೆರೆಯಲ್ಲಿಟ್ಟು ಭವಿಷ್ಯದಲ್ಲಿ ಆತನಿಂದ ಯಾವುದೇ ಕೆಡುಕಾಗದಂತೆ ನೋಡಿಕೊಳ್ಳಬೇಕಾಗಿತ್ತು. ಆದರೆ ಇಲ್ಲಿ ಆದದ್ದೇ ಬೇರೆ. ಅತೃಪ್ತನಾಗಿದ್ದ ಚಂದ್ರಗುಪ್ತನು ಆತನನ್ನು ಸೇರಿಕೊಂಡ. ಅವರಿಬ್ಬರೂ ಕೂಡಿ ಪರ್ವತರಾಜನಲ್ಲಿಗೆ ಹೋದರು. ಇದರಿಂದ ಮೊದಲು ಉದಾಸೀನ ಭಾವದಿಂದಿದ್ದ ಪರ್ವತರಾಜನು ನಂದರ ಮೇಲೆ ದಂಡೆತ್ತಿ ಬರುವಂತಾಯಿತು.

ಅನುಚಿತ ಕಾರ್ಯಾರಂಭ, ಸ್ವಜನರಲ್ಲಿ ವಿರೋಧ, ಬಲಿಷ್ಠರೊಡನೆ ಸ್ಪರ್ಧೆ — ಈ ಮೂರು ದೋಷಗಳಿಂದಾಗಿ ನಂದರು ಶತ್ರುಗಳನ್ನು ಎದುರಿಸುವ ಆಪತ್ತನ್ನು ಬರಮಾಡಿಕೊಳ್ಳಬೇಕಾಯಿತು. ಹೇಗಾದರೂ ನಂದರನ್ನು ರಕ್ಷಿಸಬೇಕೆಂದು ರಾಕ್ಷಸನು ತನ್ನ ಕೈಲಾದ ಪ್ರಯತ್ನ ಮಾಡುತ್ತಾನೆ. ಪರ್ವತ ರಾಜನ ಸೈನ್ಯದಲ್ಲಿ ವರ್ತಕ ವೇಷದಿಂದಿದ್ದ ತನ್ನವರಿಂದ ಪರ್ವತೇಶ್ವರನನ್ನು ಭೇದಿಸಿ ಚಂದ್ರಗುಪ್ತನನ್ನು

ಸಂಹರಿಸಲು ಪ್ರಯತ್ನಿಸುತ್ತಾನೆ. ನಂದರ ಮಿತ್ರಪಕ್ಷದವನಾದ ಕಾಶೀರಾಜನನ್ನು ಪರ್ವತರಾಜನ ಸಹಾಯಕ್ಕೆ ಹೋಗಲು ಪ್ರೇರೇಪಿಸಿ, ಅಲ್ಲಿ ಚಂದ್ರಗುಪ್ತನನ್ನಾಗಲೀ, ಮಲಯಕೇತುವನ್ನಾಗಲೀ ಸೆರೆಹಿಡಿಯುವಂತೆ ಆತನನ್ನು ಹುರಿದುಂಬಿಸುತ್ತಾನೆ. ದೂರದ ಗೌಡ ದೇಶದಲ್ಲಿ ಯುದ್ಧನಿರತರಾದ ಪರ್ವತರಾಜನ ರಾಜಧಾನಿಯನ್ನು ದರ್ಶಾ ದೇಶಾಧಿಪತಿಗಳು ಮುತ್ತುವಂತೆ ಮಾಡುತ್ತಾನೆ; ಯುದ್ಧ ನಡೆಯುತ್ತಿರುವಾಗಲೇ ಚಂದ್ರಗುಪ್ತನನ್ನು ತಮಗೆ ಒಪ್ಪಿಸಿದರೆ, ಅವನು ಕೊಡಲಿದ್ದ ರಾಜ್ಯಾರ್ಧವನ್ನು ನಂದರೇ ಕೊಡುವರೆಂದು ಪರ್ವತರಾಜನಿಗೆ ಆಶೆ ತೋರಿಸುತ್ತಾನೆ; ನಂದರ ದೋಷ ನಿವಾರಣಾರ್ಥ ಜಪ ಶಾಲೆಯನ್ನು ಏರ್ಪಡಿಸಲು ಭಾಗುರಾಯಣನಿಗೆ ಹೇಳುತ್ತಾನೆ.

ರಾಕ್ಷಸನದು ಸಾತ್ವಿಕ ಸ್ವಭಾವ. ಇದು ರಾಜರಲ್ಲಿ ಭಕ್ತಿಯಾಗಿ, ಮಿತ್ರರಲ್ಲಿ ಸ್ನೇಹವಾಗಿ ದೀನರಲ್ಲಿ ದಯೆಯಾಗಿ ಕಾಣಿಸಿಕೊಳ್ಳುತ್ತದೆ. ಒಳ್ಳೆಯದೇ. ಆದರೆ ಅದೇ ದೌರ್ಬಲ್ಯವಾಗಬಾರದಲ್ಲ. ಇಂದುಶರ್ಮನು ಕ್ಷಪಣಕ ವೇಷಧಾರಿಯಾಗಿ ಬಂದು ಆಶ್ರಯ ಕೇಳಿದಾಗ, ಆ ಅಪರಿಚಿತನನ್ನು ತನ್ನ ಅಂತರಂಗದ ಸಲಹೆಗಾರನನ್ನಾಗಿ ಮಾಡಿಕೊಳ್ಳುವುದು ರಾಜತಂತ್ರದ ದೃಷ್ಟಿಯಿಂದ ಎಷ್ಟುಮಾತ್ರಕ್ಕೂ ಸರಿಯಲ್ಲ. ಮಂತ್ರಾಲೋಚನೆಯ ಸಮಯದಲ್ಲಿ ಪಶುಪಕ್ಷಿಗಳೂ ಸಮೀಪದಲ್ಲಿರಬಾರದೆಂಬ ಕಟ್ಟಳೆ ಇರುವಾಗ, ರಾಯಸ ಬರೆಸುವ ಸಂದರ್ಭದಲ್ಲಿ ದಾಕ್ಷಿಣ್ಯಕ್ಕೊಳಗಾಗಿ ಕ್ಷಪಣಕನನ್ನು ಅಲ್ಲಿ ಇರಬಿಟ್ಟದ್ದು ಉಚಿತವಲ್ಲ. ಭಾಗುರಾಯಣನೂ ಅಷ್ಟೇ. ಆರ್ತ್ವಿಜ್ಯಕ್ಕೆ ಕುಲಪರಂಪರಾಪ್ರಾಪ್ತರಾದ ಪುರೋಹಿತರನ್ನು ಬಿಟ್ಟು, ಅಷ್ಟೇ ಪರಿಚಿತನಾದ ಸಿದ್ಧಾರ್ಥಕನ ಮಾತಿನಂತೆ ಮಾನೋಪವಾಸಿಯೆಂಬ ಅಪರಿಚಿತನನ್ನು ನೇಮಿಸಿದ್ದು ಸರಿಯಲ್ಲ. ತನ್ನ ತಂತ್ರ ಬಯಲಾದಾಗ ಕ್ಷಪಣಕನನ್ನು ಪರೀಕ್ಷಿಸಲು ಯಃಕಶ್ಚಿತ್ ಬ್ರಾಹ್ಮಣನನ್ನು ಕಳುಹಿಸುವ ಬದಲು ರಾಕ್ಷಸನು ತಾನೇ ಹೋಗಿ ಪರೀಕ್ಷಿಸಬೇಕಾಗಿತ್ತು. ಆತ ಅದನ್ನೂ ಮಾಡಲಿಲ್ಲ. ಮನುಷ್ಯ ಸಹಜವಾಗಿ ಆತ ತಪ್ಪಿ ಬಿದ್ದರೂ ರಾಕ್ಷಸನು ಯುದ್ಧವೀರ. ಮೊದಲ ದಿನ ರಾತ್ರಿ ಯುದ್ಧದಲ್ಲಿ ಶತ್ರುಗಳು ಬರುವ ಸುದ್ದಿಯನ್ನು ಕೇಳಿ ಆತ ಕವಚವನ್ನು ತೊಟ್ಟು, ಕುದುರೆಯನ್ನೇರಿ, ಭರ್ಜಿಯನ್ನು ಹಿಡಿದು ಮ್ಯೆಗಾವಲಿನವರ ಸಹಿತ ಯುದ್ಧಕ್ಕೆ ತೆರಳಿದನು. ಅಲ್ಲಿ ಶತ್ರುಸೈನಿಕರನ್ನು ಕೊಲ್ಲುತ್ತಾ ಬರಲು, ಅದು ಇಬ್ಭಾಗವಾಗಿ ಹಿಮ್ಮೆಟ್ಟುತ್ತಿದ್ದಿತು. ಆಗ ರಾಕ್ಷಸನು ಉತ್ತರ ದ್ವಾರದಿಂದ ಪ್ರಾಕಾರವನ್ನೇರಿ, ಸುತ್ತುತ್ತಾ ಬರುತ್ತಿರುವ ಶತ್ರುಗಳ ಮೇಲೆ ಫಿರಂಗಿ ಗುಂಡುಗಳ ಮಳೆಗರೆಯುತ್ತ ಕೋಟೆಯ ಸಮೀಪದಲ್ಲಿ ಶತ್ರುಗಳು ಸೇರದಂತೆ ಮಾಡುತ್ತಿದ್ದನು. ಆತನು ನಿಂತಲ್ಲಿ ನಿಲ್ಲದೆ ಪಶ್ಚಿಮ ದ್ವಾರದಿಂದ ಹೊರ ಹೊರಟು ಒಂದೊಂದು ಪ್ರಹಾರಕ್ಕೆ ಶತ್ರುಗಳ ನಾಲ್ಕಾರು ತಲೆ ಹಾರಿಸುತ್ತ, ಕುದುರೆಗಳನ್ನು ಕಡಿಯುತ್ತ, ಆನೆಗಳ ಸೊಂಡಿಲುಗಳನ್ನು ಹರಿಯುತ್ತ, ಶತ್ರುಗಳು ಕೋಟೆ ಗೋಡೆಯನ್ನು ಹಿಡಿಯದಂತೆ ಮೇಲಿನವರಿಗೆ ಸೂಚಿಸುತ್ತಿದ್ದನು. ಅಲ್ಲಿಂದ ದಕ್ಷಿಣ ದಿಕ್ಕಿಗೆ ಬಂದು ಶತ್ರುಗಳ ಮೇಲೆ ಮುತ್ತಿ, ಶೂಲಗಳಿಂದ ಹೊಡೆಯುತ್ತ, ಭರ್ಜಿಗಳಿಂದ ಇರಿಯುತ್ತ, 'ಓಡುವವರನ್ನು ಅಟ್ಟುತ್ತ, ಅಟ್ಟಿಬರುವವರನ್ನು ತಡೆಯುತ್ತ ಬಾಗಿಲ ಬಳಿ ಬಂದು ಸೇನೆಗಳಿಗೆ ಎಚ್ಚರಿಕೆ ಕೊಡುತ್ತಿದ್ದನು. ಮತ್ತೆ ರಥವನ್ನೇರಿ, ಅದನ್ನು ವೇಗವಾಗಿ 'ಓಡಿಸುತ್ತ ' ಹೊಡೆ ಹೊಡೆ' ಎಂದು ಬೊಬ್ಬಿಡುತ್ತ, ನಿಂತಲ್ಲಿ ನಿಲ್ಲದೆ ಶತ್ರುಗಳ ತಲೆಗಳನ್ನು ಬಾಣಗಳಿಂದ ಆಕಾಶಕ್ಕೆ ಹಾರಿಸುತ್ತಿದ್ದನು.

ಇದನ್ನು ಸಹಿಸಲಾರದೆ ಶತ್ರುಗಳು 'ಓಡಿಹೋಗಲು ರಾಕ್ಷಸನು ರಥದಿಂದಿಳಿದು, ಕುದುರೆಯನ್ನೇರಿ ಪುರವನ್ನು ಹೊಕ್ಕು, ಯುದ್ಧದಲ್ಲಿ ಹತರಾದ ತನ್ನ ಕಡೆಯ ಸೈನಿಕರನ್ನು ನೋಡುತ್ತ ಬಂದನು. ನತ್ತ ಆನೆಗಳನ್ನೇ ಆಗಳು ಮಾಡಿಕೊಂಡು ಬಂದ ಶತ್ರುಗಳು ಪ್ರಾಕಾರವನ್ನೇರಿ ಲಗ್ಗೆಹತ್ತಿ ಧ್ವಜವನ್ನು ನೆಟ್ಟು ಜಯಭೇರಿ ಬಾರಿಸಿದಾಗ, ಅದನ್ನು ತಿಳಿದ ರಾಕ್ಷಸನು ಅಲ್ಲಿಗೆ ಬಂದು ಶತ್ರುಗಳನ್ನು ಮುತ್ತಿ, ತನ್ನ ಕೈಗತ್ತಿಯಿಂದ ಅವರ ತಲೆಗಳನ್ನು ಕಡಿದು, ಅವರು ನೆಟ್ಟಿದ್ದ ಧ್ವಜವನ್ನು ಮುರಿದು, ಅವರನ್ನು ಅಟ್ಟಿದನು. ಆಗ ನಿರುಪಾಯರಾದ ಶತ್ರುಸೈನಿಕರು 'ಈತ ಪ್ರತ್ಯಕ್ಷ ರಾಕ್ಷಸನೇ' ಎನ್ನುತ್ತ 'ಓಡಿ ಹೋದರು. ಇಲ್ಲಿ ನಮಗೆ ರಾಕ್ಷಸನ ನಿಜವಾದ ಪೌರುಷ, ಯುದ್ಧೋತ್ಸಾಹದ ದರ್ಶನವಾಗುತ್ತದೆ.

ತನ್ನ ಪಕ್ಷಕ್ಕಾದ ಗೆಲುವಿನಿಂದ ರಾಕ್ಷಸನು ಮರುದಿನ ಸ್ವಲ್ಪ ವಿಶ್ರಮಿಸಿಕೊಳ್ಳುತ್ತೇನೆಂದು ನಿದ್ರಿಸಿದನು. ಅದೇ ಸಮಯದಲ್ಲಿ ನಂದರನ್ನು ಜಪ ಶಾಲೆಗೆ ಕರೆಯಿಸಿ ಕೊಲ್ಲಲು ಶತ್ರುಗಳಿಗೆ ಸುಲಭವಾಯಿತು.

ನಂದರ ವಧೆಯ ವರ್ತಮಾನ ಸಿಕ್ಕಿದಾಗ ರಾಕ್ಷಸನು ಮನೆಗೆ ಬಂದು ಮಂಚದ ಮೇಲೆ ಮುಖ ಅಡಿಯಾಗಿ ಬಿದ್ದು, ಅವರು ಮಾಡಿದ ಆದರಣೆಯನ್ನು ನೆನೆಸುತ್ತ, ತನ್ನ ಬುದ್ಧಿ, ಬಲ, ಸಾಹಸ ಪೌರುಷಗಳೆಲ್ಲ ವ್ಯರ್ಥವಾದವು ಎಂದು ಹಲುಬಿ ಮತ್ತೆ ಪುರದ ಹೊರಗೆ ಹೊರಟುಹೋದನು. ಪರಲೋಕದಲ್ಲಿರುವ ನಂದರಿಗೆ ಸಂತೋಷವನ್ನಾದರೂ ಉಂಟುಮಾಡುವೆಂದು ನಿಶ್ಚಯಿಸುತ್ತ (ಅಮಾತ್ಯನ ನಂದ ನಿಷ್ಠೆ).

ನಂದರ ಮರಣದ ನಂತರವೂ ಆತನ ನಂದನಿಷ್ಠೆ ಕಡಿಮೆಯಾಗಲಿಲ್ಲ. ಆತ ಸರ್ವಾರ್ಥಸಿದ್ಧಿ ರಾಜನನ್ನೇ ಪಟ್ಟದಲ್ಲಿ ಕೂರಿಸಿ ಆತನಿಗೆ ದತ್ತುಪುತ್ರನನ್ನು ಸ್ವೀಕರಿಸುವ ಯೋಚನೆ ಮಾಡುತ್ತಾನೆ. ಕ್ಷಪಣಕನ ಮೂಲಕ ಚಂದ್ರಗುಪ್ತನಿಗೆ ವಿಷಕನ್ಯೆಯ ಸಂಗವುಂಟಾಗಿ ಮರಣ ಸಂಭವಿಸುವಂತೆ ಪ್ರಯತ್ನಿಸುತ್ತಾನೆ. ತನ್ನ ಆಪ್ತರುಗಳಾದ ದಾರುವರ್ಮ, ರಾಜವೈದ್ಯ, ಭವನಪಾಲಕರ ಮೂಲಕ ಚಂದ್ರಗುಪ್ತನನ್ನು ಸಂಹರಿಸುವ ಏರ್ಪಾಡು ಮಾಡುತ್ತಾನೆ. ಸ್ತುತಿಪಾಠಕರ ಮೂಲಕ ಚಂದ್ರಗುಪ್ತ — ಚಾಣಕ್ಯರಲ್ಲಿ ಭೇದವೆಸಗಲು ಪ್ರಯತ್ನಿಸುತ್ತಾನೆ. ಮಲಯಕೇತುವನ್ನು ಆಶ್ರಯಿಸಿ, ಆ ಮೂಲಕ ಪಾಟಲೀಪುರವನ್ನು ಮುತ್ತಿ ಚಂದ್ರಗುಪ್ತನನ್ನು ವಧಿಸುವ ಯೋಜನೆ ಹಾಕಿಕೊಳ್ಳುತ್ತಾನೆ.

ಈ ಸಂದರ್ಭದಲ್ಲೂ ಅಷ್ಟೇ. ಆತ ತನ್ನ ಯೋಜನೆಯನ್ನು ಕ್ಷಪಣಕನಿಗೆ ತಿಳಿಸಿ ಹೇಳುತ್ತಾನೆ. ರಹಸ್ಯ ಕಾಪಾಡಿಕೊಳ್ಳಲಾಗದ ದೌರ್ಬಲ್ಯವೇ ಆತನ ಅವನತಿಗೆ ಕಾರಣವಾಗುತ್ತದೆ. ಇನ್ನು ಅವನ ಅನುಯಾಯಿಗಳೂ ಮೂರ್ಖರು. ಅಸಮರ್ಥರು. ಅವರುಗಳಿಂದ ಅಮಾತ್ಯನ ಕೆಲಸ ಮತ್ತಷ್ಟು ಕೆಟ್ಟಿತೇ ಹೊರತು ಸಾಧನೆಗೆ ಸಹಕಾರಿಯಾಗಲಿಲ್ಲ.

ಸಿದ್ಧಾರ್ಥಕನು ರಾಯಸದ ಶಕಟದಾಸನನ್ನು ಆಪತ್ತಿನಿಂದ ತಪ್ಪಿಸಿ ತಂದದ್ದಕ್ಕಾಗಿ ಆತನನ್ನು ತನ್ನ ಬಳಿ ಉಳಿಸಿಕೊಂಡದ್ದು ಉಚಿತವೇ. ಆಕಸ್ಮಿಕವಾಗಿ ಆತನಿಂದ ತನ್ನ ಪತ್ನಿಯ ಕೈಲಿದ್ದ ಉಂಗುರವು

ಸಿಕ್ಕಿದಾಗ, ಮುಂದಾಲೋಚಿಸದೆ, ಅದನ್ನೇ ತನ್ನ ಮುಂದಿನ ಕಾರ್ಯಗಳಿಗೆ ಮುದ್ರೆಯುಂಗುರವಾಗಿ ಬಳಸಬೇಕೆಂದು ಸೂಚಿಸಿದ್ದು ಸರಿಯಲ್ಲ. ಅದನ್ನು ಮುಚ್ಚುಗೋಲು ಹಾಕಿ, ತನ್ನ ವಶ ಇಟ್ಟುಕೊಂಡು, ಅದರ ದುರುಪಯೋಗವೇನಾದರೂ ಆಗಿದೆಯೇ ಎಂದು ನಿರೀಕ್ಷಿಸಬೇಕಾಗಿತ್ತು. ಮತ್ತೆ, ಎಷ್ಟಾದರೂ ಸಿದ್ಧಾರ್ಥಕನ ಸ್ಥಾನಮಾನ ಸಾಮಾನ್ಯ ಜನದ್ದು. ಮಲಯಕೇತುವು ಅಮಾತ್ಯನಾದ ತನಗೆ ಕೊಟ್ಟಿದ್ದ ಬಹುಮೌಲ್ಯದ ಆಭರಣವನ್ನು ಈತನಿಗೆ ಸಂತೋಷಾರ್ಥವಾಗಿ ಕೊಟ್ಟದ್ದು ಉಚಿತವಲ್ಲ. ಬ್ರಾಹ್ಮಣರು ತಂದಿದ್ದ ಆಭರಣಗಳನ್ನು ಕೊಂಡುಕೊಂಡಾಗ, ಪ್ರಕೃತ ಅವುಗಳ ಪ್ರದರ್ಶನ ಮಾಡಬಾರದಿತ್ತು. ಈ ಎಲ್ಲಾ ಕೃತ್ಯಗಳಿಂದಾಗಿ ರಾಕ್ಷಸನು ತನ್ನ ಪತನವನ್ನು ತಾನೇ ತೋಡಿಕೊಂಡಂತಾಯಿತು.

ಮಲಯಕೇತುವಿನ ಬಳಿಯಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲಾಗದೇ, ಅವಮಾನಿತನಾಗಿ ಪಾಟಲೀಪುರದ ಬಳಿ ಬಂದ ರಾಕ್ಷಸನು ಪಶುಲೋಮನ ಮಾತನ್ನು ಕೇಳಿ ಮಿತ್ರನಾದ ಚಂದನದಾಸನನ್ನು ಉಳಿಸಹೊರಟದ್ದು ಧರ್ಮವೇ. ಆದರೆ ಕಟುಕರ ಮಾತುಕೇಳಿ ಕತ್ತಿ ಬಿಸುಟು, ಚಾಣಕ್ಯನ ಬಳಿ ಹೊರಟು ನಿಂತಾಗ ಆತನ ನಂದನಿಷ್ಠೆ ಕೊನೆಗೊಂಡಂತೆಯೇ ಆಗಿತ್ತು.

ರಾಕ್ಷಸನು ಚಾಣಕ್ಯನನ್ನು ನೋಡಿದಾಗ ಮೊದಲು ಈತನೇ ದುರಾತ್ಮನಾದ ಚಾಣಕ್ಯನಿರಬೇಕೆಂದುಕೊಂಡರೂ ಮತ್ತೆ ಆತನ ಗುಣಗಳಲ್ಲಿ ದೃಷ್ಟಿಯಿರಿಸಿ ಮೆಚ್ಚಿಕೊಂಡು, ಚಂದ್ರಗುಪ್ತನ ಪ್ರಧಾನ ಮಂತ್ರಿತ್ವವನ್ನು ಒಪ್ಪಿಕೊಂಡನು.

ಹೀಗೆ ರಾಕ್ಷಸನದ್ದು ಸಹಜವಾದ ಮಾನವ ಸ್ವಭಾವ. ಗುಣದೋಷಗಳ ಸಮ್ಮಿಶ್ರಣ. ಹಾಗಾದರೆ ಅವನ ವರ್ತನೆಗೆ ಕಾರಣ? ' ವಿಧಿನಿಹಿತಂ ಬುದ್ಧಿರನುಸರತಿ '' ರಾಕ್ಷಸನು ವಿಧಿಯ ಕೈಗೊಂಬೆಯಾಗಿದ್ದ — ಎಂದಷ್ಟೇ ನಾವು ಸಮಾಧಾನಪಟ್ಟುಕೊಳ್ಳಬಹುದು.

ಪರ್ವತರಾಜ

ಗೌಡದೇಶಾಧಿಪತಿಗಳಿಗೆ ಸಮಬಲನಾಗಿದ್ದರೂ ಉದಾಸೀನ ಪಕ್ಷದವನು ಪರ್ವತರಾಜನು. ಶಾಹುರೀನಗರವು ಅವನ ರಾಜಧಾನಿಯು. ವೃದ್ಧ ಉಲೂಕ, ಚುರವರ್ಮನೇ ಮೊದಲಾದವರು ಆತನ ಮಂತ್ರಿಗಳು. ಕಾಶ್ಮೀರಪತಿ, ಮಲಯಪತಿ, ಸಿಂಧುಪತಿ, ಕುಲೂತಪತಿ, ಪಾರಸೀಕಪತಿ, ಕಾಂಬೋಜ, ಚೀಣ, ಹೂಣ ದೇಶಾಧಿಪತಿಗಳು ಈತನ ಸಾಮಂತರು. ಶೇಖರನು ಸೇನಾಪತಿ.

ನಂದರಾಜ್ಯದಲ್ಲಿ ಸ್ವಜನವಿರೋಧವೇ ಮೊದಲಾದ ಛಿದ್ರವುಂಟಾದುದನ್ನು ನೋಡಿ ಈತನು ಅಲ್ಲಿಯ ವಿದ್ಯಮಾನಗಳನ್ನು ತಿಳಿಯಲು ಕಪಟಶಿಲ್ಪವನ್ನು ಕಳುಹಿಸಿಕೊಡುವನು. ಹಾಗೆ ಹೋದ ದೂತರು ಬಂದು ಚಂದ್ರಗುಪ್ತನೆಂಬವನಿಂದ ತಮ್ಮ ರಹಸ್ಯ ಬಯಲಾಯಿತೆಂದು ಹೇಳುವರು. ಮತ್ತೆ ಅದೇ

ಚಂದ್ರಗುಪ್ತನು ಚಾಣಕ್ಯನೆಂಬ ಬ್ರಾಹ್ಮಣನಿಂದೊಡಗೂಡಿ ಬಂದು ಸಹಾಯ ಕೇಳಿದಾಗ ವೃದ್ಧನಾದ ಉಲೂಕನು ನಂದರ ವೈರತ್ವ ಬೀಜವೆಂದರೂ ಜುರವರ್ಮನ ಮಾತಿನಂತೆ ಯುದ್ಧಕ್ಕೆ ಸನ್ನದ್ಧನಾಗುವನು. ಲಂಪಾಕಪತಿಯಿಂದ ಬಂದಿದ್ದ ಯುದ್ಧವನ್ನು ಚಾಣಕ್ಯನು ತಪ್ಪಿಸಿದ್ದರಿಂದ ಆತನಿಗೆ ಪ್ರತ್ಯುಪಕಾರ ಮಾಡಬೇಕಾದುದು ಕರ್ತವ್ಯವಾಗಿದ್ದಾಗ್ಯೂ ಪುತ್ರನಾದ ಮಲಯಕೇತುವನ್ನು ಚಂದ್ರಗುಪ್ತನಲ್ಲಿಗೆ ಕಳುಹಿಸಿ ನಂದರ ಅರ್ಧ ರಾಜ್ಯ ಸಿಗುವುದನ್ನು ಖಚಿತಪಡಿಸಿಕೊಳ್ಳುವನು. ಮತ್ತೆ ಕಾಲಾಂತರದಲ್ಲಿ ಚಂದ್ರಗುಪ್ತನನ್ನು ಸಂಹರಿಸಿ ನಂದರಾಜ್ಯವನ್ನು ಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳುವುದು ಆತನ ಮುಂದಾಲೋಚನೆ.

ಸಾಮಂತ ರಾಜರಿಂದೊಡಗೂಡಿ ಪಾಟಲೀಪುರದ ಬಳಿಯಲ್ಲಿ ಗುಡಾರದಲ್ಲಿದ್ದಾಗ ರಾಕ್ಷಸನು ಪರ್ವತರಾಜನನ್ನು ಭೇದಿಸಲು ತನ್ನ ನಿಯೋಗಿಯನ್ನು ಕಳುಹಿಸುವನು. ಆತನ ಮಾತಿಗೆ ಮರುಳಾದ ಪರ್ವತರಾಜನು ಚಂದ್ರಗುಪ್ತನನ್ನು ರಾಕ್ಷಸನ ವಶ ಕೊಡುವ ಬಗ್ಗೆ ಯೋಚಿಸುವನು. ಚಾಣಕ್ಯನ ಸಮಯಾವಧಾನದಿಂದ ಇದು ತಪ್ಪುವುದು. ನಂದರ ಸಂಹಾರವಾಗಿ ಪಾಟಲೀಪುರವು ವಶವಾದಾಗ ನಗರದಿಂದ ಹೊರಹೋದ ರಾಕ್ಷಸನು ಚಂದ್ರಗುಪ್ತನನ್ನು ಸಂಹರಿಸಲು ವಿಷಕನ್ಯೆಯನ್ನು ಕಳುಹಿಸಿಕೊಡುವನು. ಚಾಣಕ್ಯನು ಚಂದ್ರಗುಪ್ತನನ್ನು ರಕ್ಷಿಸುವ ಸಲುವಾಗಿ ಆಕೆಯನ್ನು ಉಪಾಯದಿಂದ ಪರ್ವತರಾಜನ ಬಳಿ ಕಳುಹಿಸಿಕೊಡುವನು. ಇಂದ್ರಿಯನಿಗ್ರಹವು ರಾಜನಾದವನಿಗೆ ಅವಶ್ಯಕರ್ತವ್ಯವೆಂಬುದನ್ನು ಮರೆತಿದ್ದ ಪರ್ವತರಾಜನು ಪರರಾಜ್ಯದಲ್ಲಿ, ಪರೀಕ್ಷಿಸದೇ ಬಳಿ ಬಂದ ವಿಷಕನ್ಯೆಯನ್ನು ಕೂಡಿ ಮೃತನಾದನು.

ಹೀಗೆ ವೃದ್ಧನಾದ ಮಂತ್ರಿ ಉಲೂಕನ ಮಾತನ್ನೂ ಕೇಳದೆ, ಸ್ವಂತ ವಿವೇಚನಾ ಶಕ್ತಿಯನ್ನೂ ಉಪಯೋಗಿಸದೆ ಪರರಾಜ್ಯದ ಆಸೆಗೆ ಬಲಿಯಾಗಿ ತಾನೇ ಮೃತನಾದನು.

ಇಂದುಶರ್ಮ ಮತ್ತು ಆತನ ಶಿಷ್ಯರು

ಈತನು ಚಾಣಕ್ಯನ ಸಹಾಧ್ಯಾಯಿಯು. ತನ್ನ ಪ್ರತಿಜ್ಞೆಯನ್ನು ಸಫಲಗೊಳಿಸಲು ಚಾಣಕ್ಯನು ಈತನ ನೆರವನ್ನು ಅಪೇಕ್ಷಿಸುತ್ತಾನೆ. ಅದರಂತೆ ಈತನು ತನ್ನ ಶಿಷ್ಯರೊಡಗೂಡಿ ಪಾಟಲೀಪುರಕ್ಕೆ ಬರುತ್ತಾನೆ. ತಾನು ಕ್ಷಪಣಕ ವೇಷ[7a] ಧರಿಸಿಕೊಂಡು ಅಮಾತ್ಯರಾಕ್ಷಸನಲ್ಲಿ ಜ್ಯೋತಿಷ ಮೊದಲಾದ ವಿದ್ಯಾಕೌಶಲಗಳನ್ನು ತೋರಿಸುತ್ತ, ರಾಜಕಾರ್ಯವನ್ನು [illegible] ತಿಳಿಯುತ್ತ ಆವನಿಗೆ ಆಪ್ತನಂತಿದ್ದನು. ಆತನ ಶಿಷ್ಯನಾದ ಸಿದ್ಧಾರ್ಥಕನು ಭಾಗುರಾಯಣ ಶಕಟದಾಸನಲ್ಲಿ ಆಪ್ತವೈದ್ಯನಂತಿದ್ದನು. ಮಾಸೋಪವಾಸಿಯು[7b] ಮುನಿವೇಷವನ್ನು ಧರಿಸಿ ಸರಯೂ ಸಂಗಮದ ಪೂರ್ವದಿಕ್ಕಿನಲ್ಲಿ ಮಾಡಿಸಿರುವ ಶತ್ರುಪಲಾಯನ ಜಪಶಾಲೆಯಲಿ ಅಗ್ನ್ಯಾಜ್ಯವನ್ನು ಕೈಕೊಂಡು ನಾಲ್ಕು ಜನ ಶಿಷ್ಯರೊಡಗೂಡಿ ಜಪಹೋಮಗಳನ್ನು ಮಾಡುತ್ತಿದ್ದನು. ಸಮಿದ್ಧಾರ್ಥಕನು ಸಾಮುದ್ರಿಕ ಲಕ್ಷಣಗಳನ್ನು ಹೇಳುತ್ತ ಭದ್ರಭಟಾದಿಗಳಲ್ಲಿ ತಿರುಗುತ್ತಿದ್ದನು. ಪಶುಲೋಮಕನು ಮಂತ್ರಜ್ಞನಾಗಿ ಸೇನಾಪತಿಗಳ ಬಳಿಯಲ್ಲಿರುತ್ತಿದ್ದನು. ವೇಶಶರ್ಮನೆಂಬವನು ಅಲ್ಲಿಯ ವರ್ತಮಾನಗಳನ್ನು ಚಾಣಕ್ಯನಿಗೆ ತಿಳಿಸಲು ನಿಯುಕ್ತನಾಗಿದ್ದನು. ಹೀಗೆ ನಂದ ಸಂಹಾರಸಾಧನಗಳಾಗಿ ಇವರೆಲ್ಲರೂ

ಕಣ್ಣಲ್ಲಿ ಕಣ್ಣಿಟ್ಟು ಕಾರ್ಯವೆಸಗಿದ್ದರಿಂದಲೇ ಚಾಣಕ್ಯನ ಉಪಾಯವು ಫಲಿಸಿತು.

ರಾಕ್ಷಸನು ತನ್ನ ಭೇದನೀತಿಯು ಅಸಫಲಗೊಂಡಾಗ ಮಿತ್ರನಾದ ಕ್ಷಪಣಕನ ಮೇಲೆ ಅನುಮಾನಗೊಂಡು ಆತನನ್ನು ಪರೀಕ್ಷಿಸಲು ಬ್ರಾಹ್ಮಣನೊಬ್ಬನನ್ನು ಕಳುಹಿಸುತ್ತಾನೆ. ಇದನ್ನು ಮೊದಲೇ ಊಹಿಸಿದ್ದ ಇಂದುಶರ್ಮನು ಆ ಬ್ರಾಹ್ಮಣನನ್ನೇ ಸೋಪಾಟಿಗೆ ಗುರಿಮಾಡುವನು. ಆತನ ಶಿಷ್ಯರೂ ಅಷ್ಟೆ. ಚಾಣಕ್ಯನು ಕೊಟ್ಟ ಪತ್ರವನ್ನು ಶಕಟದಾಸನ ಬಳಿ ಕೊಂಡುಹೋದ ಸಿದ್ಧಾರ್ಥಕನು ಆ ಪತ್ರವನ್ನು ಶಕಟದಾಸನಿಂದ ಪ್ರತಿ ಮಾಡಿಸಿಕೊಂಡು ತರುವಲ್ಲಿ ಉಪಯೋಗಿಸಿದ ಜಾಣ್ಮೆಯು ಸಾಮಾನ್ಯರಿಗೆ ಸಾಧ್ಯವಾಗುವಂತಹದಲ್ಲ. ಮತ್ತೆ ಅವನ ಬಳಿಯಲ್ಲೇ ನಿಂತು ಮುದ್ರೆಯುಂಗುರದ ದುರುಪಯೋಗ ಮಾಡಿ ರಾಕ್ಷಸನ ಮೇಲೆ ಮಲಯಕೇತುವಿಗೆ ಅನುಮಾನ ಬರುವಂತೆಯೇ ಕಾರ್ಯವೆಸಗುತ್ತಾನೆ. ಅದೇ ಸಮಯದಲ್ಲಿ ಪಾಟಲೀಪುರದಿಂದ ಅವಮಾನಿತನಾಗಿ ಹೊರಬಂದ ಕ್ಷಪಣಕ ವೇಷಧಾರಿ ಇಂದುಶರ್ಮನು — ರಾಕ್ಷಸನನ್ನು ಮಲಯಕೇತುವಿನ ಬಳಿಯಿಂದ ಹೊರಡಿಸಿ, ಅವನು ಮತ್ತೆ ಪಾಟಲೀಪುರಾಭಿಮುಖವಾಗುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾನೆ.

ಹೀಗೆ ಚಾಣಕ್ಯನ ಮಂತ್ರಶಕ್ತಿಯ ಆಧಾರಸ್ತಂಭಗಳಾಗಿ ನಿಂತ ಇಂದುಶರ್ಮ ಮತ್ತು ಆತನ ಶಿಷ್ಯರು ತಮ್ಮ ಕಾರ್ಯನಿರ್ವಹಣೆಯ ಚಾಕಚಕ್ಯತೆಯಿಂದ ವಿಜಯದ ಕೀರ್ತಿಯುತರಾಗಿ ಮುಂದೆ ಬಂದಿದ್ದಾರೆ. ಅದೇ ರಾಕ್ಷಸನ ಗೂಢಚಾರರು ಪ್ರತಿ ಹಂತದಲ್ಲಿ ಸೋತರೆ, ಇವರು ಪ್ರತಿ ಹಂತದಲ್ಲಿ ಕಾರ್ಯ ಜಯಶಾಲಿಯಾಗುವಂತೆ ನೋಡಿಕೊಂಡಿದ್ದಾರೆ.

ಸ್ತ್ರೀ ಪಾತ್ರಗಳು

ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದಲ್ಲಿ ಸ್ತ್ರೀಪಾತ್ರಗಳಿಲ್ಲ (ಕೇವಲ ಒಂದು ಸಂದರ್ಭದಲ್ಲಿ ಚಂದನದಾಸನ ಪತ್ನಿಯ ಅಳಲಿನ ಪ್ರಸಂಗ ಹೊರತುಪಡಿಸಿ). ಕೇವಲ ಚಾಣಕ್ಯ — ರಾಕ್ಷಸರ ಬೌದ್ಧಿಕ ಘರ್ಷಣೆಯೇ ಅಲ್ಲಿ ಮುಖ್ಯವಾದ್ದರಿಂದ ಶೃಂಗಾರಕ್ಕೂ ಅಲ್ಲಿ ಅವಕಾಶವಿಲ್ಲ. ಆದರೆ ಮುದ್ರಾಮಂಜೂಷದಲ್ಲಿ ಹಾಗಲ್ಲ. ಇಲ್ಲಿ ಸರ್ವಾರ್ಥಸಿದ್ಧಿಯ ಪಟ್ಟದರಾಣಿ ಸುನಂದಾದೇವಿ, ಪ್ರಿಯಸತಿ ಮುರೆ, ನಂದಪತ್ನಿಯರು, ವಿಷಕನ್ಯೆ, ಚಂದನದಾಸನ ಪತ್ನಿ — ಇವರೆಲ್ಲ ರಕ್ತಮಾಂಸ ತುಂಬಿದ ಜೀವಂತ ಪಾತ್ರಗಳಾಗಿ ಕಂಗೊಳಿಸುತ್ತಾರೆ.

ಮೊದಲ ಅಧ್ಯಾಯದಲ್ಲೇ ಸರ್ವಾರ್ಥಸಿದ್ಧಿಯ ಪಟ್ಟದರಾಣಿ ಸುನಂದಾ ದೇವಿಯ ವರ್ಣನೆಯಿದೆ. ಬಹುಕಾಲದಿಂದ ಮಕ್ಕಳಿಲ್ಲದೇ ಸೊರಗುತ್ತಿದ್ದ ರಾಣಿಯರು ವೀತಹವ್ಯರೆಂಬ ಮುನಿಗಳ ಅನುಗ್ರಹದಿಂದ ಮಕ್ಕಳನ್ನು ಪಡೆದರು. ಮತ್ತೆ ವೃದ್ಧನಾದ ಸರ್ವಾರ್ಥಸಿದ್ಧಿಯು ಅರ್ಧೋದಯ ಕಾಲದಲ್ಲಿ ಪ್ರಯಾಗ ಪುಣ್ಯಕ್ಷೇತ್ರಕ್ಕೆ ಹೊರಟು ನಿಂತಾಗ ಈ ರಾಣಿಯರಿಬ್ಬರೂ ಆತನ ಜತೆಯಲ್ಲಿ ಹೋಗುವರು. ಪುಣ್ಯವಂತೆಯಾದ ಮುರೆ ತನ್ನ ಮಗ, ಮೊಮ್ಮಕ್ಕಳ ಸಾವಿನ ವಾರ್ತೆ ಬರುವುದಕ್ಕಿಂತ ಮೊದಲೇ ಗಂಗಾದೇವಿಯ ಸನ್ನಿಧಿಯಲ್ಲಿ ಪ್ರಾಣತ್ಯಾಗ ಮಾಡುವಳು.

ಸ್ವಜನರಲ್ಲಿನ ಮಾತ್ಸರ್ಯದಿಂದ ನಂದರು ಅಪತ್ತನ್ನು ತಂದುಕೊಂಡು ಯುದ್ಧಸನ್ನದ್ಧರಾದಾಗ ತಾಯಿಯಾದ ಸುನಂದಾದೇವಿಯು ಪುತ್ರವಾತ್ಸಲ್ಯದಿಂದ ಎಚ್ಚರಿಕೆಯ ಮಾತನ್ನಾಡುವಳು. ಅದೇ ಸಂದರ್ಭದಲ್ಲಿ ನಂದ ಪತ್ನಿಯರು ತಮ್ಮ ತಮ್ಮ ಪತಿದೇವರನ್ನು ಕುರಿತು ಅಗಲುವಿಕೆಯ ಮಾತನ್ನಾಡುವರು. ' ವಿಧಿವಿಹಿತಂ ಬುದ್ಧಿರನುಸರತಿ ' ಎಂಬಂತೆ ಯುದ್ಧವಾಗಿ ನಂದರು ಮೃತರಾದಾಗ ನಂದಪತ್ನಿಯರು ಸಹಗಮನ ಮಾಡುವರು. ಪುತ್ರಶೋಕವನ್ನು ಅನುಭವಿಸಬೇಕಾಗಿ ಬಂದರೂ ಮಹಾರಾಣಿ ಸುನಂದಾದೇವಿಯು ಸೊಸೆಯಂದಿರಿಗೆ ಸಮಾಧಾನದ ಮಾತನ್ನು ಹೇಳುವಳು.

ನಂದರ ಮರಣಾನಂತರ ರಾಕ್ಷಸನು ಚಂದ್ರಗುಪ್ತನನ್ನು ಸಂಹರಿಸಲು ವಿಷಕನ್ಯೆ[8]ಯನ್ನು ಕಳುಹಿಸಿಕೊಡುವನು. ಆಕೆಯು ಗುರುಕುಚ ಭಾರಕ್ಕೆ ಬಡನಡು ಬಳುಕುತ್ತ ಸೊಕ್ಕಿ ಸೋಲುತ್ತ ಬೆಡಗನ್ನು ಬೀರುತ್ತ ಬರುತ್ತಿದ್ದಳು. ಚಾಣಕ್ಯನು ಆಕೆಯನ್ನು ಪರ್ವತರಾಜನ ಬಳಿ ಕಳುಹಿಸಿದಾಗ ರಸಿಕಜನ ಚಿತ್ತವನ್ನು ಮೋಹಗೊಳಿಸುತ್ತ, ಚಂದ್ರಗಾವಿಯ ವಸ್ತ್ರದಿಂದ ಮುಸುಗಿಟ್ಟು, ಕುಚಭಾರದಿಂದ ಬಳಕುವ ಬಡ ನಡುವಿನಲ್ಲಿ ವಾಮಹಸ್ತವನ್ನಿಕ್ಕಿಕೊಂಡು ಬಂದಳು. ಅವಳ ಲಾವಣ್ಯ, ರೂಪು, ಸೌಂದರ್ಯ, ಬೆಡಗು, ನೋಟ — ಬೇಟಗಳನ್ನು ಕಂಡ ಪರ್ವತರಾಜನು ಆಕೆಗೆ ಮನಸೋತದ್ದು ಆಶ್ಚರ್ಯವಲ್ಲ. ಬಾಗುರಾಯಣನು ಆಕೆಯನ್ನು ನೀನಾರೆಂದು ವಿಚಾರಿಸಿದಾಗ — ' ತಾನು ರಾಕ್ಷಸನಿಂದ ಪೋಷಿತಳಾದ ವಿಷಕನ್ಯೆ — ಆತನು ಕ್ಷಪಣಕನ ಮೂಲಕ ತನ್ನನ್ನು ಪರ್ವತರಾಜನ ಬಳಿಗೆ ಕಳುಹಿಸಿಕೊಟ್ಟಿದ್ದನು. ಈ ಪರ್ವತರಾಜನು ತನ್ನನ್ನು ಕಂಡು ವಿಚಾರಿಸದೆ ತವಕದಿಂದ ಕೂಡಿ ಮೃತನಾದನು. ತಾನು ಪಾಪಿಷ್ಠಳು' ಎನ್ನುವಳು. ಇದರಿಂದ ಅವಳ ಅಸಹಾಯಕತೆ ತಿಳಿಯುವುದು.

ನಂದರ ಮರಣಾನಂತರ ಸರ್ವಾರ್ಥಸಿದ್ಧಿಯು ಅರಮನೆಯಲ್ಲಿರುವುದಕ್ಕೆ ಬೇಸರಗೊಂಡು ಕಾಡಿಗೆ ಹೋಗುವನು. ಆಗ ಸುನಂದಾದೇವಿಯು ಆತನನ್ನು ಅನುಸರಿಸುವಳು. ಅಲ್ಲಿ ಋಷಿಮುನಿಗಳ ಸಹವಾಸದಲ್ಲಿದ್ದು ನಂತರ ಸರ್ವಾರ್ಥಸಿದ್ಧಿರಾಜನು ಯೋಗಮಾರ್ಗದಿಂದ ಮುಕ್ತಿಹೊಂದಲು ಸುನಂದಾದೇವಿಯು ಸಹಗಮನ ಮಾಡುವಳು.

ಮಿತ್ರಕಾರ್ಯಕ್ಕಾಗಿ ತನ್ನ ಜೀವವನ್ನು ಬಲಿ ಕೊಡಲು ತಯಾರಾಗಿದ್ದ ಚಂದನದಾಸನನ್ನು ಕಟುಕರು ನೇಣುಗಂಬದ ಬಳಿ ಕೊಂಡುಹೋದಾಗ ಆತನ ಪತ್ನಿಯು ಅವನನ್ನು ಅನುಸರಿಸುವಳು. ಪತಿ ವಿಯೋಗದ ದು:ಖದಿಂದ ಅಳುತ್ತಿರುವ ಅವಳನ್ನು ಸಮಾಧಾನ ಮಾಡಿದಷ್ಟು ಅವಳ ದು:ಖವು ಹೆಚ್ಚುವುದು. ಆದರೆ ಕೊನೆಯಲ್ಲಿ ಸ್ವತ: ಅಮಾತ್ಯರಾಕ್ಷಸನು ಅಲ್ಲಿಗೆ ಬರುವುದರಿಂದ ಅವಳ ಮಾಂಗಲ್ಯಭಾಗ್ಯವು ಉಳಿವುದಲ್ಲದೇ ಅವಳ ಪತಿಗೆ ಕೀರ್ತಿಯೂ ಲಭಿಸುವುದು.

ಹೀಗೆ ಇಲ್ಲಿಯ ಪ್ರತಿಯೊಂದು ಸ್ತ್ರೀಪಾತ್ರವೂ ಸ್ವಾಭಾವಿಕವಾಗಿ ಮೂಡಿಬಂದಿದೆ.

ಸರ್ವಾರ್ಥಸಿದ್ಧಿ[9]

ಚಂದ್ರವಂಶದಪರಂಪರಾಪ್ರಾಪ್ತ ಸಿಂಹಾಸನದ ಅಧಿಕಾರಿಯಾಗಿ, ನವಾಬರ್ಯದ ಸಯ್ಕೆಯ ಐಶ್ವರ್ಯಕ್ಕೆ ಒಡೆಯನಾಗಿ, ರಾಕ್ಷಸನಂತಹ ಸಂಧಿವಿಗ್ರಹಿ ಅಮಾತ್ಯನನ್ನು ಪಡೆದು ಪಾಟಲೀಪುರದಲ್ಲಿ ಸುಖದಿಂದ ರಾಜ್ಯಭಾರ ಮಾಡುತ್ತಿದ್ದವನು ಸರ್ವಾರ್ಥಸಿದ್ಧಿಯು. ವೀತಹವ್ಯರೆಂಬ ಮುನಿಯ ವರಬಲದಿಂದ ಮೌರ್ಯ ಹಾಗೂ ನವನಂದರನ್ನು ಪಡೆದವನು. ಜ್ಞಾತಿ ಮತ್ಸರದಿಂದ ನವನಂದರು ಮೌರ್ಯರನ್ನು ಕೊಲ್ಲಿಸಿದ ವಿಚಾರ ಗೊತ್ತಾದಾಗ ರಾಕ್ಷಸನ ಸಲಹೆಯಂತೆ ತಟಸ್ಥನಾಗಿದ್ದವ. ಶತ್ರುಗಳು ಸಮೀಪ ಬಂದಾಗ ನಂದರಿಗೆ ಹಿತವಚನವನ್ನು ನುಡಿದು, ವಿಧಿವಿಹಿತದಂತೆ ಅವರು ಸಾಯಲು ಚಂದ್ರಗುಪ್ತನ ಕ್ರೋಧಾ ಕೈಕೂಳಿಗೆ ಕಾಯದೆ ಪತ್ನಿಯರೊಂದಿಗೆ ವನವನ್ನು ಸೇರಿ ದೇಹತ್ಯಾಗವನ್ನು ಮಾಡುವವನು. ಹೀಗೆ ಮಕ್ಕಳು ಮಾಡಿದ ತಪ್ಪಿನಿಂದಾಗಿ ಅವರ ಸಾವನ್ನು ತಾನು ಕಣ್ಣಾರೆ ಕಾಣಬೇಕಾದುದಲ್ಲದೇ ತಾನೂ ಕಷ್ಟವನ್ನು ಅನುಭವಿಸಬೇಕಾದಂತಹ ದುರಂತ ಸರ್ವಾರ್ಥಸಿದ್ಧಿಯದು.

ಮೌರ್ಯ[10]

ಸರ್ವಾರ್ಥಸಿದ್ಧಿಯ ಹಿರಿಯ ಮಗ. ಸಿಂಹಾಸನಾಧಿಕಾರದ ಹೊರತು ಉಳಿದೆಲ್ಲ ಭೋಗಭಾಗ್ಯವನ್ನು ಪಡೆದಿದ್ದು ಸರ್ವಾಧಿಕಾರಿಯಾಗಿ ಮಂತ್ರಿಸೇನಾಪತಿ ಮೊದಲಾದವರ ಆದರಕ್ಕೆ ಪಾತ್ರನಾಗಿದ್ದನು. ವಿದ್ಯೆಯಿಂದ, ಅನುಭವದಿಂದ, ವೃದ್ಧಸೇವೆಯಿಂದ ಮೂಡಿಬಂದ ಇವನ ರಾಜನೀತಿ ಮೆಚ್ಚತಕ್ಕದ್ದಾಗಿದೆ. ಶತ್ರುನಿಗ್ರಹ, ಮಷ್ಟುರಾದ ಪ್ರಜೆಗಳಿಂದ ಹಣ ಸಂಪಾದನೆ, ನಂದರಲ್ಲಿ ತೋರುತ್ತಿದ್ದ ಸ್ವಾಮಿನಿಷ್ಠೆ ಮೊದಲಾದ ಒಳ್ಳೆಯ ಗುಣಗಳಿದ್ದರೂ ನಂದರ ಮತ್ಸರಕ್ಕೆ ಒಳಗಾಗಬೇಕಾದ ಪ್ರಸಂಗ ಒದಗಿತು. ನಂದರ ಕಪಟ ಪ್ರೇಮವನ್ನು ಸರಳ ಹೃದಯನಾದ ಮೌರ್ಯನು ನಂಬಿ ಮಕ್ಕಳೊಡನೆ ಬೇಟೆಗೆ ಹೋದದ್ದು ಮತ್ತೆ ನೆಲಮಾಳಿಗೆಯಲ್ಲಿ ಬಂದಿಯಾದದ್ದು ಆತನ ದುರದೃಷ್ಟವೆಂದೇ ಹೇಳಬೇಕು. ಚಕ್ರವರ್ತಿಯ ಮಗನಾಗಿ ಹುಟ್ಟಿ ಅನಾಥನಂತೆ ಆತ ಸಾಯಬೇಕಾಯಿತು. ಆದರೆ ಮೌರ್ಯನ ವಿಷಯದಲ್ಲಿ ಭಾಗುರಾಯಣಾದಿಗಳಿಗಿದ್ದ ಕೃತಜ್ಞತೆಯು ಮುಂದೆ ಚಂದ್ರಗುಪ್ತನಿಗೆ ವರವಾಗಿ ಪರಿಣಮಿಸಿತು.

ಮಲಯಕೇತು

ಮಲಯಕೇತುವು ಪರ್ವತರಾಜನ ಮಗನು. ಕಥೆಯ ಉತ್ತರಾರ್ಧದಲ್ಲಿ ಗೌಡದೇಶವನ್ನು ಪಡೆಯಲಿಕ್ಕಾಗಿ ಚಂದ್ರಗುಪ್ತನ ಪ್ರತಿಸ್ಪರ್ಧಿ. ವಿಷಕನ್ಯೆಯಿಂದಾಗಿ ಪರ್ವತರಾಜನು ಮಡಿದಾಗ ಚಂದ್ರಗುಪ್ತನು ಗೆದ್ದಂತಹ ಅರ್ಧರಾಜ್ಯಕ್ಕೆ ಮಲಯಕೇತುವು ಉತ್ತರಾಧಿಕಾರಿಯಾಗುತ್ತಾನೆ. ಈತನೂ ತಂದೆಯಂತೆ ಚಂಚಲ ಮತ್ತು ಬುದ್ಧಿಗೇಡಿ. ಪಾಟಲೀಪುರಾಭಿಮುಖವಾಗಿ ಯುದ್ಧಕ್ಕೆ ಹೊರಟು ನಿಂತಾಗಲೇ — ನಂದರನ್ನು ಜಯಿಸಿದರೆ ತಮಗಾಗುವ ಲಾಭವೇನೆಂದು ತಿಳಿದುಬರಲು ತಂದೆಯ ಆಣತಿಯಂತೆ ಮಲಯಕೇತುವು ಚಾಣಕ್ಯನ

ಬಳಿ ಬರುತ್ತಾನೆ. ಪರ್ವತರಾಜನಿಗೆ ಲಂಪಾಕಾಧಿಪತಿಯ ದೆಸೆಯಿಂದ ಬಂದಿದ್ದ ಯುದ್ಧಕಾರ್ಯವನ್ನು ಚಾಣಕ್ಯನು ಕಾಮರೂಪಾಧಿಪತಿಯಿಂದ ತಪ್ಪಿಸಿದ್ದರಿಂದ ಪ್ರತ್ಯುಪಕಾರ ಮಾಡಬೇಕಾದು ಪರ್ವತರಾಜನ ಕರ್ತವ್ಯವೇ ಆಗಿತ್ತು. ಆದರೂ ಅತ್ಯಾಶೆಯಿಂದ ಮಲಯಕೇತುವು ಬಂದಾಗ ಚಾಣಕ್ಯನು ಆತನನ್ನು ಹೊಗಳಿ, ಪ್ರೋತ್ಸಾಹಿಸಿ ಮೌರ್ಯಪುತ್ರನ ಸ್ವಹಸ್ತಾಕ್ಷರದಿಂದ ಅರ್ಧರಾಜ್ಯ ಕೊಡುವ ಪತ್ರವನ್ನು ಕೊಡುವನು. ಇದು ಚಾಣಕ್ಯನು ಹೂಡಿದ ಕಪಟ ತಂತ್ರವೆಂಬುದನ್ನು ಮಲಯಕೇತುವು ಅರಿಯದೇ ಹೋದನು.

ವಿಷಕನ್ಯೆಯನ್ನು ಕೂಡಿ ತಂದೆ ಸತ್ತ ಹುದ್ದಿಯನ್ನು ತಂದಂತಹ ಭಾಗುರಾಯಣನನ್ನು ತನ್ನ ಅಂತರಂಗದ ಮಿತ್ರನನ್ನಾಗಿ ಮಾಡಿಕೊಳ್ಳುತ್ತಾನೆ. ರಾಕ್ಷಸನು ತನ್ನಲ್ಲಿಗೆ ಬಂದಾಗ ಅವನನ್ನು ಸರ್ವಾಧಿಕಾರದಿಂದ ಗೌರವಿಸುವನು. ಭದ್ರಭಟಾದಿಗಳು ಬಂದಾಗ ಅವರನ್ನು ತನ್ನೆಡೆಗೆ ಸೇರಿಸಿಕೊಳ್ಳುವನು. ಇವೆಲ್ಲ ಆತ ಪೂರ್ವಾಪರ ವಿಮರ್ಶೆ ಇಲ್ಲದೇ ಮಾಡಿದ ಕಾರ್ಯಗಳು. ಇದೆಲ್ಲದರ ಪರಿಣಾಮವಾಗಿ ಕೊನೆಯಲ್ಲಿ ಆತ ಚಂದ್ರಗುಪ್ತನ ಅಧೀನನಾಗುವುದು ಅನಿವಾರ್ಯವಾಯಿತು.

ಇತರ ಪಾತ್ರಗಳು

ಮೇಲೆ ಉಲ್ಲೇಖಿಸಿದ ಪಾತ್ರಗಳಲ್ಲದೆ ಈ ಕೃತಿಯಲ್ಲಿ ಮೂಡಿಬಂದಿರುವ ಇತರ ಸಣ್ಣಪುಟ್ಟ ಪಾತ್ರಗಳೂ ನಮ್ಮ ಗಮನವನ್ನು ಸೆಳೆಯುತ್ತವೆ. ಇವುಗಳಿಗೆ ಸಂಬಂಧಿಸಿದಂತೆ ಎಚ್.ಎಂ. ಶಂಕರನಾರಾಯಣ ರಾವ ಅವರು ಹೇಳಿದ ಈ ಕೆಳಗಿನ ಮಾತುಗಳು ಉಲ್ಲೇಖನೀಯವಾಗಿವೆ[11].

' ಪರ್ವತರಾಜನ ಆಸ್ಥಾನದಲ್ಲಿ ವೃದ್ಧಮಂತ್ರಿಯಾದ ಉಲೂಕನಿಗೆ ಪ್ರತಿಸ್ಪರ್ಧಿಯಾಗಿ, ತನ್ನ ಬುದ್ಧಿಚಾತುರ್ಯದಿಂದ ಪರ್ವತರಾಜನನ್ನು ರಂಜಿಸಿ, ಚಂದ್ರಗುಪ್ತ— ಚಾಣಕ್ಯರ ವಿಷಯದಲ್ಲಿ ಬಲವಾದ ಪಕ್ಷಪಾತವನ್ನು ವಹಿಸಿ, ತನ್ನ ಮಂತ್ರಾಲೋಚನೆ ಪೂರ್ತಿಯಾಗಿ ಫಲಕೊಡುವುದನ್ನು ನೋಡುವುದಕ್ಕೆ ಮುಂಚೆ ಯುದ್ಧದಲ್ಲಿ ಪ್ರಾಣಬಿಟ್ಟ ಹುಡರವರ್ಮ; ತನ್ನ ಲೋಕಾನುಭವದಿಂದ ಪರ್ವತೇಶ್ವರನಿಗೆ ಸರಿಯಾದ ಬುದ್ಧಿಹೇಳಿ, ಅವನು ಕೇಳದಿರಲು ಸುಮ್ಮನಾಗಿ, ತನ್ನ ಕರ್ತವ್ಯ ಮುಗಿಯಿತೆಂಬ ಸಮಾಧಾನಗೊಂಡ ಉಲೂಕ; ಚಾಣಕ್ಯನ ಇಂಗಿತವನ್ನು ಅರಿತು ಅದರಂತೆ ಎಳ್ಳಷ್ಟೂ ಗುರಿತಪ್ಪದೆ, ಕಾಮರೂಪ, ಕಾಶಿರಾಜರ ಬಳಿ ಕಾರ್ಯವನ್ನು ಘಟಿಸಿದ ಕಾರ್ಯಸಾಧನಪಟು ನಿಯೋಗಿ ಕಮಲಾಪೀಡ;[12] ರಾಕ್ಷಸನ ಆದೇಶದಂತೆ ಕ್ಷಪಣಕನನ್ನು ಪರೀಕ್ಷಿಸಹೋಗಿ, ಅವನಿಂದ ಪೆಟ್ಟುತಿಂದು, ನಡೆದ ವಿಷಯವನ್ನು ರಾಕ್ಷಸನಲ್ಲಿ ಮರೆಮಾಚಿ, ರಾಜಕಾರ್ಯವನ್ನು ಕೆಡಿಸಿದ ತಿಳಿಗೇಡಿ ಹೆಸರಿಲ್ಲದ ಬ್ರಾಹ್ಮಣ; ರಾಕ್ಷಸನಿಗೆ ಆಪ್ತನೆನಿಸಿ, ಅವನ ಮನೆವಾರ್ತೆಯವನಾಗಿ, ಸ್ವಾಮಿಗೆ ಕಷ್ಟಕಾಲದಲ್ಲಿ ಸಹಾಯಕನಾಗಿ ಚಾಣಕ್ಯ; ಸಿದ್ಧಾರ್ಥಕರ ವಂಚನೆಗೆ ಗುರಿಯಾಗಿ, ಅವರಿಂದಲೇ ಅವಮಾನ ಹೊಂದಿ, ಕ್ಷಣಕಾಲ ರಾಕ್ಷಸನಿಂದ ನಿಷ್ಠೆಯ ವಿಷಯದಲ್ಲಿ ಸಂಶಯಕ್ಕೊಳಗಾದರೂ, ಕೊನೆಯವರೆಗೂ ಅವನ ಸೇವೆಯಲ್ಲಿ ನಿಂತ ಶಕಟದಾಸ; ದಕ್ಷತೆಯಿಂದ ಕಾರ್ಯವನ್ನು ಸಾಧಿಸಿದ ಹೆಸರಿಲ್ಲದ ಸೂಲಗಿತ್ತಿ; ತನ್ನ ಮುಗ್ಧಪ್ರಶ್ನೆಗಳಿಂದ ಬಗಿಮುಖದ ಚಾಣಕ್ಯನನ್ನು ನಗಿಸಿದ ಬಾಲವಟು

ಭಾಗವುಣ್ಣ; ... ಹಗ್ಗದಿಂದ ನೇಣುಹಾಕಿಕೊಳ್ಳುವವನಂತೆ ನಟಿಸಿ, ಆ ಮೂಲಕ ರಾಕ್ಷಸನನ್ನು ಮೋಸಗೊಳಿಸಿ, ಅವನು ಖಡ್ಗರಹಿತನಾಗಿ ವಧ್ಯಸ್ಥಾನಕ್ಕೆ ಹೋಗುವಂತೆ ಮಾಡಿದ ಪಶುಲೋಮಕ; ರಾಜದ್ರೋಹಕ್ಕೆ ಹೆದರದೆ, ರಾಕ್ಷಸನ ಹೆಂಡತಿ ಮಕ್ಕಳನ್ನು ಕಾಪಾಡಿ, ಚಾಣಕ್ಯನ ಬೆದರಿಕೆಗೆ ಜಗ್ಗದೆ, ಮಿತ್ರಕಾರ್ಯಕ್ಕಾಗಿ ತನ್ನ ಪ್ರಾಣಗಳನ್ನೇ ಪಣವೊಡ್ಡಿ, ಸಂತೋಷದಿಂದ ಶೂಲಾರೋಹಣಕ್ಕೆ ಸಿದ್ಧನಾಗಿ, ಎದೆಗೆಡದೆ ಹೆಂಡತಿ ಮಕ್ಕಳಿಗೆ ಧೈರ್ಯಹೇಳಿ, ರಾಕ್ಷಸನು ಕಾಣಿಸಿಕೊಂಡಾಗ — 'ಅಮಾತ್ಯರೇ, ಇದೇನು ದುಡುಕಿದಿರಿ, ಕಾರ್ಯಘಾತವಾಯಿತು' ಎಂದು ಮರುಗಿ, ವಜ್ರಚಿತ್ತನಾದ ಚಾಣಕ್ಯನಿಂದ ಕಲಿಯುಗದ ಶಿಬಿ ಎಂದು ಪ್ರಶಂಸೆ ಪಡೆದ ಚಂದನದಾಸ — ಇವರೆಲ್ಲ ಈ ಗ್ರಂಥದಲ್ಲಿ ಮೂಡಿಬಂದಿರುವ ಇತರ ಪಾತ್ರಗಳು.

ಇವರೆಲ್ಲ ತಮ್ಮದೇ ಆದ ವ್ಯಕ್ತಿವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿ ತಮ್ಮ ನಡವಳಿಕೆಗಳಿಂದ ವಾಚಕರ ಹೃದಯದಲ್ಲಿ ಚಿರಸ್ಥಾಯಿಗಳಾಗಿ ಉಳಿಯುತ್ತಾರೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಭಾಷೆ — ಶೈಲಿ

ಇಂಗ್ಲಿಷಿನಲ್ಲಿ 'ಸ್ಟೈಲ್ ಈಸ ದಿ ಮ್ಯಾನ' ಎಂಬ ಮಾತೊಂದಿದೆ. ಅಂತೆಯೇ ಸಂಸ್ಕೃತದಲ್ಲಿ 'ಶೀಲಸ್ಯ ಇಯಂ ಶೈಲೀ' ಎನ್ನುತ್ತಾರೆ. ಈ ಮಾತುಗಳು ಯಾವನೇ ಕವಿಯ ಭಾಷಾ ಶೈಲಿಗೂ ಅನ್ವಯಿಸುತ್ತವೆ. 'ಶಬ್ದಗಳ ಆಯ್ಕೆ, ಪದಪುಂಜಗಳ ತಿರುವು, ವಾಕ್ಯರಚನೆ, ಅವುಗಳ ವಿಲಕ್ಷಣ ಲಯ ಮತ್ತು ಏರಿಳಿತ — ಇವೆಲ್ಲ ವಿಚಿತ್ರ ರೀತಿಯಲ್ಲಿ ಲೇಖಕನ ವ್ಯಕ್ತಿತ್ವದಿಂದ ತುಂಬಿರುತ್ತವೆ. ಹೇಳಿದ ವಿಚಾರದಲ್ಲಿ ಅದನ್ನು ವಿಶಿಷ್ಟಗೊಳಿಸಲು ನೆರವಾಗುವಂತಹುದು ಏನೂ ಇರದಿರಬಹುದು. ಆದರೂ ಲೇಖಕ ಅದರಲ್ಲಿ ತನ್ನನ್ನೇ ಇಟ್ಟಿರುತ್ತಾನೆ.' ಎಂದು ಹಡ್ಸನ್ ಹೇಳಿದ್ದಾನೆ[13]. 'ಸಮರಸಭಾವ, ತರ್ಕಬದ್ಧ ಆಲೋಚನೆಗಳಿಗನುಸಾರವಾದ ಉಚಿತ ಪದ ರಚನೆಯೇ ವಾಕ್ಯದ ರಹಸ್ಯ. ಸಂವಹನ ಮತ್ತು ಧಾರಕತ್ವವೇ ಅದರ ಜೀವಾಳ. ಸಂಗತಿ, ಸಾಮರಸ್ಯ ಮತ್ತು ಸಮತೋಲನಗಳು ಅದರ ಗರಿಮಾ ಅಥ ಲಘಿಮಾ ಸ್ವರೂಪವನ್ನೂ ಸಾರ್ಥಕತೆಯನ್ನೂ ನಿರ್ಣಯಿಸುತ್ತವೆ.'[14]. ಈ ಹಿನ್ನೆಲೆಯಲ್ಲಿ ಕೆಂಪುನಾರಾಯಣನ ಭಾಷೆ — ಶೈಲಿಯನ್ನೂ ಗಮನಿಸಬೇಕಾಗಿದೆ.

ಕನ್ನಡ ಗದ್ಯದ ಇತಿಹಾಸದಲ್ಲಿ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧವನ್ನು 'ಸಂಧಿಯುಗ'ದ ಕೊನೆಯ ಭಾಗವೆಂದು ಗುರುತಿಸಲಾಗುತ್ತಿದೆ[15]. ಅದು ಹೊಸಗನ್ನಡವು ತನ್ನದೇ ಆದ ರೂಪವನ್ನು ಪಡೆಯುತ್ತಿದ್ದ ಕಾಲ. ಈ ಹಿಂದೆ ಗಮನಿಸಿದಂತೆ ಆ ಸಮಯದಲ್ಲಿ ಮುಮ್ಮಡಿಯವರು ಸ್ವತಃ ಕನ್ನಡ ಗದ್ಯದಲ್ಲಿ ಕೃತಿರಚನೆ ಮಾಡುತ್ತಿದ್ದರಲ್ಲದೇ ತಮ್ಮ ಆಸ್ಥಾನದಲ್ಲಿಯ ವಿದ್ವಾಂಸರನ್ನು ಗದ್ಯ ರಚನೆ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು. ಸಂಸ್ಕೃತ ಕೃತಿಗಳನ್ನು ಕನ್ನಡ ಗದ್ಯಕ್ಕೆ ತಿರುಗಿಸುವ ಕ್ರಮ ಆರಂಭವಾಗಿತ್ತು. ಸಂಸ್ಕೃತ ನಾಟಕವೊಂದನ್ನು ವಿಸ್ತಾರವಾದ ಕನ್ನಡ ಗದ್ಯದಲ್ಲಿ ತಂದವರಲ್ಲಿ ಕೆಂಪು

ನಾರಾಯಣನೇ ಮೊದಲಿಗನೆಂದು ಕಾಣುತ್ತದೆ[16]. ಈತನ ಭಾಷಾ ಶೈಲಿಯ ಬಗ್ಗೆ ರಂ. ಶ್ರೀ. ಮುಗಳಿಯವರು — " ಮುದ್ರಾಮಂಜೂಷದ ಭಾಷಾಶೈಲಿ 'ಏಕರೂಪವಾಗಿಲ್ಲ. ಸಂಧಿಕಾಲದ ವಿಷಮತೆಯನ್ನು ಒಳಗೊಂಡಿದೆ. ಬಾಣ ಕಾದಂಬರಿ, ಸಂಸ್ಕೃತ ಪ್ರಾಕೃತಕಾವ್ಯ — ಇವುಗಳ ಪ್ರಭಾವದಿಂದ ಅನೇಕ ಭಾಗಗಳು ಉದ್ದಾನುದ್ದವಾಗಿದ್ದು ಸಂಸ್ಕೃತಮಯವಾಗಿವೆ. ಶೈಲಿ ಒಮ್ಮೆ ಪ್ರೌಢವಾದರೆ ಒಮ್ಮೆ ಸರಳವಾಗುತ್ತದೆ. ಹಳಗನ್ನಡ — ಹೊಸಗನ್ನಡ ತೀರ ವಿಚಿತ್ರ ಮಿಶ್ರಣವು ತಲೆದೋರಿದೆ. ಉದಾಹರಣೆ — ' ಅದರ ಪರೀಕ್ಷೆಯಂ ಅವನು ತಿಳಿದು ಹೇಳಿದರೆ ಕಾರಾಗೃಹದಿಂದ ತಾನು ಬಿಡಿಸಲ್ಪಟ್ಟು ವಿಶೇಷ ಸನ್ಮಾನಕ್ಕೆ ಪಾತ್ರನಾಗುವನು' (ಪು. 21) ' ಇದು ಅರಗು ಮೇಣ ಈ ಮುಖ್ಯವಾದ ಸರಿಗಳಿಂ ತೊಡೆಯಲ್ಪಟ್ಟ ಬಟ್ಟೆಗೆ ಸಿಂಹದ ರೋಮಗಳಂ ಹತ್ತಿಸಿ ಅದಂ ಚರ್ಮದಂತೆ ಮಾಡಿ ಹೊರಗಿದ್ದ ಪುರುಷನ ಕೌಶಲ್ಯದಿಂದ ಮಾಂಸವಂ ಕೊಡುವ ರಂಧ್ರಮುಖವಂ ಹಿಡಿದು ಅದರ ಅಸ್ಥಿಸ್ಥಾನಕ್ಕೆ ಕಬ್ಬಿಣದ ಸಲಾಕಿಗಳಂ ಜೋಡಿಸಿ ಬಾಲಕತ್ತುಗಳಿಗೆ ರೋಮಸಹಿತವಾದ ಉಕ್ಕಿನ ತಂತಿಗಳಿಂ ಜತೆಗೊಳಿಸಿ ಅಲ್ಲಲ್ಲಿಗೆ ಬಣ್ಣವಂ ಬರದು ಪೂರೈಸಿದ ಕೃತ್ರಿಮ ಸಿಂಹವಾಗಿರಬಹುದು'. (ಪು.22). ಇಂಥ ದೀರ್ಘ ವಾಕ್ಯಗಳೊಡನೆ ' ನಿಮ್ಮಂ ಶರಣು ಹೊಕ್ಕೆನು' ಎಂಬ ಚಿಕ್ಕ ವಾಕ್ಯಗಳೂ ಬಂದಿವೆ. ಈ ಶೈಲಿಯ ವಿಶಿಷ್ಟರೂಪಕ್ಕೆ ಪ್ರೇರಕವಾದ ತತ್ವಯಾವುದೂ ಇಲ್ಲ. ಹಳಗನ್ನಡವನ್ನು ಹೊಸಗನ್ನಡಕ್ಕೆ ಪರಿವರ್ತಿಸುತ್ತಿರುವಾಗ ತೋರುವ ಸಂಧಿಕಾಲದಲ್ಲಿಯ ಗೊಂದಲವೆಲ್ಲ ಇದರಲ್ಲಿದೆ. ಆದರೂ ಕೆಂಪುನಾರಾಯಣನಲ್ಲಿ ಶಬ್ದಶಕ್ತಿಯಿದೆ. ನವೀನ ದೃಷ್ಟಿಯಿದೆ — ಎಂಬುದನ್ನು ಅರಿತಿರಬೇಕು " ಎಂದಿದ್ದಾರೆ[17].

ಇಲ್ಲಿ ಅವರು ಹೇಳುವ ' ಹಳಗನ್ನಡ — ಹೊಸಗನ್ನಡ ತೀರ ವಿಚಿತ್ರ ಮಿಶ್ರಣವು ತಲೆದೋರಿದೆ' ಎಂದು ಹೇಳುತ್ತಾ ಕೊಟ್ಟ ಉದಾಹರಣೆಯು ' ಮುದ್ರಾಮಂಜೂಷ' ದ ಮುದ್ರಿತ ಪ್ರತಿಯದ್ದು. ಅದನ್ನು ಸಂಪಾದಿಸಿ ಪ್ರಕಟಿಸುವಾಗ ಮೂಲ ಸಂಪಾದಕರು ಹೇಳಿಕೊಂಡಂತೆ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಅದಲ್ಲದೇ, ಆ ಗ್ರಂಥವು ಎಂಟು ಸಲ ಪುನರ್ಮುದ್ರಣ ಕಂಡಿದ್ದು, ಪ್ರತಿ ಸಲ ' ಪರಿಷ್ಕರಿಸಿದ ನೂತನ ಮುದ್ರಣ' ವೆಂಬ ಹೆಸರಿನಲ್ಲಿ ಪ್ರಕಟವಾಗಿದ್ದು, ಆಯಾಕಾಲದ ಸಂಪಾದಕರು, ಶಬ್ದ, ವಾಕ್ಯಗಳ ರಚನಾ ವಿಧಾನವನ್ನೇ ಬದಲಿಸಿದ್ದಾರೆ[17ಎ]. ಹೀಗಾಗಿ ಈಗ ಮುದ್ರಿತ ಪ್ರತಿಯಲ್ಲಿ ಕಾಣುವ ಭಾಷಾ ಶೈಲಿಯಿಂದ ಮೂಲಕವಿಯ ಭಾಷಾಶೈಲಿಯನ್ನು ಗ್ರಹಿಸುವಂತಿಲ್ಲ. ಇಲ್ಲಿ ಉದ್ಧರಿಸಿದ ಪಂಕ್ತಿಗಳು ಮೂಲದಲ್ಲಿ ಹೀಗಿವೆ:

(1) ' ಅವನಿಂದ ಇದು ಪರೀಕ್ಷಿತವಾದರೆ ಕಾರಾಗೃಹದಿಂದ ಅತನು ಮುಕ್ತನಾಗಿ ಬಹುಮಾನಕ್ಕೆ ಪಾತ್ರನಾದಾನು'

(2) ' (ಇದು) ಅರಗುಮೇಣ ಮುಖ್ಯವಾದ ಸರಿಗಳಿಂ ಲಿಪ್ತವಾದ ವಸ್ತ್ರಕ್ಕೆ ಸಿಂಹದ ರೋಮಗಳಂ ಹತ್ತಿಸಿ ಅದಂ ಚರ್ಮದಂತೆ ಮಾಡಿ ಹೊರಗಿದ್ದ ಪುರುಷನ ಕೌಶಲ್ಯದಿಂದ ಮಾಂಸವಂ ಕೊಡುವ ರಂಧ್ರಮುಖದಿಂದ ಅದರ ಅಸ್ಥಿಸ್ಥಾನಕ್ಕೆ ಕಬ್ಬಿಣದ ಶಲಾಕೆಗಳಂ ಜೋಡಿಸಿ ಪುಚ್ಛಕಂಠಗಳಿಗೆ ರೋಮ ಸಹಿತವಾದ ಉಕ್ಕಿನ ತಂತಿಗಳಂ ಜೋಡಿಸಿ ಅಲ್ಲಲ್ಲಿ ಬಣ್ಣಗಳಂ ಬರದುದಿದ್ದೀತು. ಅದರಿಂದ ಕೃತ್ರಿಮಸಿಂಹವೇ ಆಹುದಾದೀತು'

ಮೇಲಿನ ಉದಾಹರಣೆಗಳನ್ನು ತೌಲನಿಕವಾಗಿ ನೋಡೋಣ:

ಮೊದಲ ವಾಕ್ಯದ ಪೂರ್ವಾರ್ಧವು ಮೂಲದಲ್ಲಿ ' ಅವನಿಂದ ಇದು ಪರೀಕ್ಷಿತವಾದರೆ' ಎಂದು ಕರ್ಮಣಿ ಪ್ರಯೋಗದಲ್ಲಿದೆ. ಮುದ್ರಿತ ಪ್ರತಿಯಲ್ಲಿ ' ಅದರ ಪರೀಕ್ಷೆಯಂ ಅವನು ತಿಳಿದುಹೇಳಿದರೆ' ಎಂದು ಕರ್ತೃ ಪ್ರಧಾನವಾಗಿ ಅಧುನಿಕ ಭಾಷೆಗೆ ಒಪ್ಪುವಂತೆ ಹೇಳಿದೆ. ಅದರ ಉತ್ತರಾರ್ಧವು ' ಅತನು ಮುಕ್ತನಾಗಿ ಬಹುಮಾನಕ್ಕೆ ಪಾತ್ರನಾದಾನು' ಎಂದು ಕರ್ತೃವನ್ನು ಪ್ರಥಮ ಪುರುಷ ವಾಚಕವಾಗಿಯೂ ' ಪಾತ್ರನಾದಾನು' ಎಂದು ಕ್ರಿಯೆಯನ್ನು ಸಂಭಾವನಾರ್ಥದಲ್ಲಿಯೂ ಹೇಳಿದೆ. ಇದನ್ನು ಮುದ್ರಿತಪ್ರತಿಯಲ್ಲಿ ' ವಿಶೇಷಸನ್ಮಾನಕ್ಕೆ ಪಾತ್ರನಾಗುವನು' ಎಂದು ನಿಶ್ಚಿತ ಅರ್ಥದಲ್ಲಿ (ಹೊಸಗನ್ನಡದ ರೂಪದಲ್ಲಿ) ಹೇಳಿದೆ. ಅಂತೆಯೇ ಎರಡನೇ ವಾಕ್ಯವೂ ಕೂಡಾ. ಇಲ್ಲಿ ಸಂಸ್ಕೃತದ ' ಪುಚ್ಛಕಂಠ' ಗಳು ' ಬಾಲ ಕತ್ತು' ಗಳಾಗಿವೆ. ' ಕೃತ್ರಿಮಸಿಂಹವೇ ಆಹುದಾದೀತು' ಎಂಬುದು ' ಕೃತ್ರಿಮಸಿಂಹವಾಗಿರಬಹುದು' ಎಂದಾಗಿದೆ. ಇದರ ಸಾರಾಂಶ ಇಷ್ಟೆ: ಕವಿಯು ಹೊಸಗನ್ನಡದ ರೂಪವನ್ನು ತಂದಿಲ್ಲ. ತೀರ ವಿಚಿತ್ರ ಮಿಶ್ರಣವನ್ನು ಮಾಡಿಲ್ಲ. ಮುದ್ರಿತ ಪ್ರತಿಯ ಸಂಪಾದಕರು ಮೂಲಕೃತಿಯ ಭಾಷೆಯನ್ನು ತಿಳಿಯದುದರಿಂದ ಗೊಂದಲವುಂಟಾಗಿದೆ. ' ಕವಿಯ ಶೈಲಿಯ ವಿಶಿಷ್ಟರೂಪಕ್ಕೆ ಪ್ರೇರಕವಾದ ತತ್ವ ಯಾವುದೂ ಇಲ್ಲ' ಎಂಬ ಮಾತೂ ಸರಿಯಲ್ಲವೆಂಬುದು ಮೇಲಿನ ಉದಾಹರಣೆಯಿಂದ ತಿಳಿದುಬರುವುದು.

ದೇ. ಜ. ಗೌ. ರವರು ಹೇಳುವುದು: ' ವ್ಯವಸ್ಥೆಗೆ ಮುಂದಿನ ಸಿದ್ಧತೆಯ ಲಕ್ಷಣಗಳಿವೆ. ಸ್ಪಷ್ಟವೂ ಪರಿಪುಷ್ಟವೂ ಸಮರ್ಥಕವೂ ಆದ ಹೊಸಗನ್ನಡ ಗದ್ಯದ ಮುನ್ಸೂಚನೆಗಳಿವೆ. ಬಾಣ, ಹರ್ಷ, ವಿಶಾಖದತ್ತ, ಭರ್ತೃಹರಿ, ಕಾಮಂದಕಾದಿ ಸಂಸ್ಕೃತ ಗ್ರಂಥಕರ್ತರ ಪ್ರಭಾವದಿಂದ ರೂಪಗೊಂಡ ಅವನ ವ್ಯಕ್ತಿತ್ವದ ಪ್ರತಿಬಿಂಬವನ್ನಿಲ್ಲಿ ಸುಲಭವಾಗಿ ಗುರುತಿಸಬಹುದು. ತನ್ನ ಕೃತಿಯನ್ನು ಕಾವ್ಯದ ಮಟ್ಟಕ್ಕೇರಿಸುವ ಹಂಬಲವೂ ಅವನಲ್ಲಿದೆ. ವರ್ಣನೆಗಳು ಪ್ರಾಪ್ತವಾದಾಗಲೆಲ್ಲ ಅವನ ಭಾಷೆ ಅಲಂಕಾರಿಕವಾಗುತ್ತದೆ. ಸಂಸ್ಕೃತಮಯವಾಗುತ್ತದೆ ... ಇಲ್ಲಿ ಕ್ವಚಿತ್ತಾಗಿ ಬರುವ ಹಳಗನ್ನಡರೂಪಗಳನ್ನು ಗಮನಿಸಬಹುದು. ಕನ್ನಡ ಮತ್ತು ಸಂಸ್ಕೃತ ಪದಗಳು ಸಮ ಸಮನಾಗಿ, ಒಮ್ಮೊಮ್ಮೆ ಸಂಸ್ಕೃತದ್ದೇ ದರ್ಬಾರೆನ್ನುವಂತೆ ಕಂಡರೂ... ಕನ್ನಡತನಕ್ಕೆ ಭಂಗವೊದಗುವುದಿಲ್ಲ. ... ಇಲ್ಲಿಯ ಅಲಂಕಾರಗಳಲ್ಲಿ ರೂಕ್ಷತೆಗಿಂತ ಸಾಮ್ಯತೆಯೇ ಅಧಿಕ... ಸಮಾಸಗಳು ಕವಿಯ ಪಾಂಡಿತ್ಯಸಹಜವಾದ ಚಾಪಲ್ಯಕ್ಕೆ ಸಾಕ್ಷಿಯಾಗಿವೆ. 'ಏಕತಾನತೆಯ ಪರಿಹಾರಕ್ಕೆಂಬಂತೆ ಚಮೂಪೃತನಾ, ವಾಹಿನಿ, ಚತುರಂಗ, ಫೌಜು, ಪತಾಕಿನಿ, ದಂಡು ಮೊದಲಾದ ಸಮಾನಾರ್ಥಕ ಪದಗಳನ್ನು ಧಾರಾಳವಾಗಿ ಬಳಸುತ್ತಾನೆ. ಅದೇನೇ ಇರಲಿ ಗದ್ಯಕಾವ್ಯವೆಂಬ ಪ್ರಕಾರವಿರುವಾಗ ಈ ಶೈಲಿ ಮಾನ್ಯವಾಗುತ್ತದೆ.[18] ಎಂಬ ಈ ಮಾತನ್ನು ಒಪ್ಪಬಹುದಾಗಿದೆ.

ಆದರೆ ಇಲ್ಲಿಯೂ ಅಷ್ಟೇ. ಇವರು ಉದ್ಧರಿಸುವ ಸಪ್ತಮಾಶಯದ ಪ್ರಾರಂಭದಲ್ಲಿ ಬರುವ ವೀರ ಪತ್ನಿಯರ ಮತ್ತು ವರ್ತಕರ ಸಂವಾದ [19] ಮುದ್ರಿತ ಪ್ರತಿಯಲ್ಲಷ್ಟೇ ಇರುವುದು. ಹಸ್ತಪ್ರತಿಯಲ್ಲಿಲ್ಲ.

ಕೆ. ಡಿ. ಕುರ್ತಕೋಟಿಯವರು — ' ಕಂಪುನಾರಾಯಣನದು ಕಾದಂಬರಿಯ ರೂಪ ವಿನ್ಯಾಸವನ್ನು ಸಂಸ್ಕೃತದ ಕಥಾರೂಪದೊಂದಿಗೆ ಜೋಡಿಸುವ ಪ್ರಯತ್ನವಾಗಿದೆ. ಇತಿಹಾಸವನ್ನು ವಸ್ತು

ವಾಗಿಟ್ಟುಕೊಂಡು ಬರೆಯುವುದು ಕೂಡಾ ಆಗಿನ ಕಾಲಕ್ಕೆ ಹೊಸ ಮಾತಾಗಿತ್ತು... ಮೊಟ್ಟಮೊದಲ್ ಅವನು ಆಧುನಿಕ ಜನತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಬರೆದಿದ್ದಾನೆ. ಹಳಗನ್ನಡದ ಬಿಗುವನ್ನು ಕ್ರಮೇಣ ಸಡಿಲಗೊಳಿಸಿಕೊಂಡ ಅವನ ಭಾಷೆ ಈ ಮಾತಿಗೆ ಉದಾಹರಣೆಯಾಗಿದೆ... ಆತನ ದೃಷ್ಟಿಕೋಣ ಹೊಸದಾಗಿದ್ದರೂ ಕನ್ನಡ ಸಾಹಿತ್ಯದ ಮುಖ್ಯ ಪರಂಪರೆಗೆ 'ಏನೂ ಭಂಗಬರದಂತೆ ಅವನು ಕಾವ್ಯಸೃಷ್ಟಿಮಾಡಿದ್ದು ಗಮನಾರ್ಹವಾಗಿದೆ.[20] ಎಂದಿದ್ದಾರೆ.

ಇದೀಗ ಇನ್ನಷ್ಟು ವಿವರಗಳನ್ನು ಗಮನಿಸೋಣ. ಬಿಜ್ಜರುಗಳ ಭಾಷೆಯಿಂದ ಕವಿಯು ಪ್ರಭಾವಿತನಾಗಿದ್ದಾನೆ. ಉತ್ಸಾಹಪೂರಿತನ ಶೈಲಿಯ ಪ್ರಮುಖ ಲಕ್ಷಣವಾಗಿದೆ. ತನ್ನ ಉದ್ದೇಶಗಳಿಗೆ, ವಿಚಾರಧಾರೆಗಳಿಗೆ, ತರ್ಕಕ್ಕೆ, ಸಮರ್ಥನೆಗೆ ಹೊಂದಿಕೆಯಾಗುವ ಭಾಷಾ ಶೈಲಿಯನ್ನೇ ಬಳಸಿದ್ದಾನೆ. ಇವನು ಬಳಸುವ ಅಪೂರ್ವವೆನ್ನಿಸುವ ಶಬ್ದಗಳು, ಗಾದೆಮಾತುಗಳು, ನುಡಿಗಟ್ಟುಗಳು, ಚತುಮಾತಿನ ವಿವಿಧ ವರಸೆಗಳು, ಸಂಬೋಧನೆಗಳು, ಗೂಢಭಾಷೆ, ಕೃತಕರಲು, ನೀತಿವಾಕ್ಯಗಳು — ಇವೆಲ್ಲವೂ ಅವನು ಸಂಸ್ಕೃತ — ಕನ್ನಡ ಎರಡೂ ಭಾಷೆಗಳಿಗೆ ಸಮಾನವಾದ ಸ್ಥಾನಮಾನಗಳನ್ನು ಕೊಡುತ್ತಿದ್ದಾನೆ ಎಂಬುದನ್ನು ಸಾರಿ ಹೇಳುವಂತಿವೆ. ಸಂಸ್ಕೃತ ಶ್ಲೋಕದ ತುಣುಕುಗಳನ್ನು ಆತ ಗಾದೆ ಮಾತಿನಂತೆ ಉಪಯೋಗಿಸಿದ್ದಾನೆ. ಈಗ ಅಂಶಗಳನ್ನು ಒಂದೊಂದಾಗಿ ಪರಿಶೀಲಿಸುವ:—

(1) ವ್ಯಾಕರಣ: ಅ) 1) ಇಲ್ಲಿ ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡದ ರೂಪಗಳು ಯಾದೃಚ್ಛಿಕವಾಗಿ ಬಂದಿವೆ. ಹಳಗನ್ನಡದ ವ್ಯಂಜನಾಂತ ಶಬ್ದಗಳು ಪ್ರತ್ಯಯಗಳು ಇಲ್ಲಿ ಸ್ವರಾಂತವಾಗಿಯೂ ವ್ಯಂಜನಾಂತವಾಗಿಯೂ ಬಂದಿವೆ. ಅಗಳು, ಜಗಳು, ಅಗಳ್, ಜಗಳ್ ...

2) ಪದಾದಿಯ ಪಕಾರವು ಹಕಾರವಾಗಿದೆ. ಉದಾ: ಹಾಗ, ಹೊನ್ನು, ಪಕಾರವಾಗಿ ಉಳಿದದ್ದೂ ಇದೆ. ಉದಾ: ಪವಳ.

3) ಸಬಿಂದುಕಗಳಾದ ಕೆಲವು ಶಬ್ದಗಳು ಅಬಿಂದುಕಗಳಾಗಿವೆ. ಉದಾ: ಬದುಕು, ಬೇಟೆ.

4) ರೇಫಯುಕ್ತ ಸಂಯುಕ್ತಾಕ್ಷರಗಳು ಸಜಾತೀಯವಾಗಿವೆ. ಉದಾ: ಪೆಡ್ಡು, ಕಿಡ್ಡು.

ಆ) ಕ್ರಿಯಾಪದಗಳು 'ಕಂಗೊಳಿಸುತ್ತಿದ್ದುದೂ', 'ವಿನೋದದಿಂದಿರುತಿರ್ದನೂ', ಜನಿಸುತ್ತಿರ್ದರೂ' ಎಂಬ ರೂಪದಲ್ಲಿವೆ.

ಇ) ವಿಭಕ್ತಿ ಪ್ರತ್ಯಯಗಳು ಹಳಗನ್ನಡ — ಹೊಸಗನ್ನಡ ಎರಡೂ ರೂಪದಲ್ಲಿವೆ.

ಉದಾ: ಇಂದ್ರಂಗೆ — ವೃಷಪರ್ವನಿಗೆ
ರಾಯಂಗೆ — ಅರಸಿಗೆ
ಅನಂತರದೊಳ್ — ಅಂತಃಪುರದಲ್ಲಿ
ಮುಖಚಂದ್ರನೊಳು — ಕುಸುಮಗಳಲ್ಲಿ ... ಇತ್ಯಾದಿ.

ಈ) ಸಂಬೋಧನೆ: ಎಲೆ, ಬುದ್ಧೀ, ಶಿಷ್ಯಾ, ಅಯ್ಯಾ, ಸ್ವಾಮಿ, ಹೋಯೀ, ಅಮ್ಮಣ್ಣಿಯವರೇ — ಮೊದಲಾದವು ಸಂಭಾಷಣೆಯನ್ನು ಜೀವಂತವಾಗಿಸಿವೆ.

ಉ) ಅಕ್ಕಟಕ್ಕಟಾ, ಹೋ! ಹೋ! ಹೋ! ಶಿವಶಿವಾ, ಶಾಬಾಸು ಮೊದಲಾದ ಉದ್ಗಾರಸೂಚಕಗಳು ಆಯಾ ಸಂದರ್ಭದ ತೀವ್ರತೆಯನ್ನು ಸಾರಿ ಹೇಳಿವೆ.

ಊ) ಕೃದಂತ, ತದ್ಧಿತಾಂತ, ಗ್ರಾಮ್ಯ, ಸಂಸ್ಕೃತ ಹಾಗೂ ವಿದೇಶೀ ಪದಗಳನ್ನು ಯಥಾನುಕೂಲ ಬಳಸಿದ್ದರಿಂದ ಭಾಷೆಯು ಹೃದಯಂಗಮವಾಗಿದೆ. ಉದಾ: ಬೆತ್ತಲೆ ಕುದುರೆ, ನಾಡಾಡಿಹೆಣ್ಣು, ಪಂಜೆ ಬ್ರಾಹ್ಮಣ, ದಳ್ಳುಗುರು, ಲಕ್ಕೋಟಿ, ಫೌಜು, ಫಿರಂಗಿ, ಕೈಗತ್ತಿ, ಅಟ್ಟುಳಿ, ಭಾರವಾಶಿ, ಕಾಮಾಟ, ನಿತ್ಯಗಟ್ಟೆ, ಇಬ್ಬಡುಕು, ಎತ್ತುವಟ್ಟು, ತಾಟತ್ಲು, ಹೊರಡಬ್ಬು ಮಾಡು, ಯದ್ರಾಂಧ ನಿವೇಶ, ಧವಳೋತ್ಕ್ಷೇಪ, ಮಯೂರಪಿಂಛ, ಪಾರ್ಷ್ಣಿಗ್ರಾಹಿ, ಪ್ರತ್ಯವಾಯ ಇತ್ಯಾದಿ.

ಇವಲ್ಲದೆ, ಕ್ಷಪಣಕನು ಯುದ್ಧಕ್ಕೆ 'ತುಲಾ ಲಗ್ನಕ್ಕಿಂತಲೂ ವೃಶ್ಚಿಕ ಲಗ್ನವು ಉತ್ತಮವು ಲಗ್ನಾಧಿಪತಿಯು ಶತ್ರುಸ್ಥಾನವಂ ನೋಡುತ್ತಿರುವುದರಿಂದ ಶತ್ರುಕ್ಷಯವಾಗುತ್ತದೆ' ಎನಲು ಸಮೀಪದಲ್ಲಿದ್ದ ಸಿದ್ಧಾರ್ಥಕನು ಶತ್ರುಪದಕ್ಕೆ ಪಂಚಮೀ ತತ್ಪುರುಷ ಸಮಾಸವನ್ನು ಮಾಡಬೇಕೆಂದು ತನ್ನ ಮನಸ್ಸಿನಲ್ಲಿ ಅಂದುಕೊಂಡನಂತೆ. ಕವಿಯು ಹೀಗೆ ಹೇಳುವಲ್ಲಿ — 'ಶತ್ರುನಾಶವಲ್ಲ — ಶತ್ರುವಿನ ದೆಸೆಯಿಂದ ನಾಶ' ಎಂದು ವಿಡಂಬಿಸಿದ್ದು ಕವಿಯ ಜಾಣ್ಮೆಗೆ ಸಾಕ್ಷಿಯಾಗಿದೆ.

<u>ಗಾದೆ ಮಾತುಗಳು:</u> ಕವಿಯು ತನ್ನ ಅನಿಸಿಕೆಗಳನ್ನು ಪುಷ್ಟೀಕರಿಸಲು ಅನೇಕ ಗಾದೆ ಮಾತುಗಳನ್ನು ಬಳಸಿದ್ದಾನೆ. ಅವುಗಳನ್ನವನು ಜನ ಸಾಮಾನ್ಯರ ನುಡಿಯಿಂದ ನೇರವಾಗಿ ಎತ್ತಿಕೊಂಡಂತೆ ಕಾಣುತ್ತದೆ. ಆರಂಭಿಸಿದ ಕೆಲಸ ನಿರೀಕ್ಷಿಸಿದ ಫಲ ಕೊಡದಿದ್ದಾಗ ವ್ಯಥೆ ಪಡುವುದು ಮನುಷ್ಯ ಸ್ವಭಾವ. ಹೀಗೆ ವ್ಯಥೆ ಪಡುವುದು ವ್ಯರ್ಥ ಎಂಬುದನ್ನು ಕವಿಯು ವಿಧವಿಧವಾಗಿ ಹೇಳುತ್ತಾನೆ.— 'ಮೀರಿ ಬಂದ ಕಾರ್ಯಕ್ಕೆ ವ್ಯಸನಪಟ್ಟು ಫಲವೇನು?' 'ಮಿಂಚಿಹೋದ ಕಾರ್ಯಕ್ಕೆ ವಿಮರ್ಶೆಯಿಂದ ಫಲವಿಲ್ಲ'. 'ಕಳೆದುಹೋದ ಮಾತಿಗೆ ಕಳವಳಗೊಂಡು ಫಲವೇನು?' ... ಇತ್ಯಾದಿ. ಬಹುಸೈನ್ಯವನ್ನು ಒಟ್ಟುಗೂಡಿಸಬೇಕಾದ ಸಂದರ್ಭದಲ್ಲಿ 'ಹನಿಗೂಡಿ ಹಳ್ಳವಾಗಿ ನದಿಯಾಗುವ ರೀತಿ' ಎಂದೆನ್ನುತ್ತಾನೆ. ಮಿತ್ರ ಚಂದನದಾಸನನ್ನು ಹುಡುಕಿಕೊಂಡು ರಾಕ್ಷಸನು ನಗರಕ್ಕೆ ಬಂದೇ ಬರುತ್ತಾನೆ ಎಂದು ಹೇಳುವ ಸಂದರ್ಭದಲ್ಲಿ 'ಎಳೆಗಂದಿ ಕರುವಿದ್ದೆಡೆಗೆ ಬರುವ' ಉದಾಹರಣೆಯನ್ನು ಕೊಡುತ್ತಾನೆ. ಬಂಧುಗಳಾದರೂ ಕೆಡುಕನ್ನುಂಟುಮಾಡುವವರಾದರೆ ಅವರ ಬಗ್ಗೆ ಜಾಗ್ರತೆಯಿಂದಿರಬೇಕು ಎಂದು ಹೇಳುವಲ್ಲಿ 'ಕೊರಳಿಗೆ ಸುತ್ತಿದ ಹಾವನ್ನು ತನ್ನ ಉದ್ಯಾನದ ಹಾವೆಂದು ಅದರಲ್ಲಿ ವಿಶ್ವಾಸವನ್ನು ಮಾಡಕೂಡದು' ಎನ್ನುತ್ತಾನೆ. ಶತ್ರುವು ಕಡಿಮೆ ಬಲಿಷ್ಠನೋ, ವಯಸ್ಸಿನಲ್ಲಿ ಕಿರಿಯನೋ ಆಗಿದ್ದರೂ ಉಪೇಕ್ಷೆ ಮಾಡಬಾರದು ಎಂಬ ಸಂದರ್ಭದಲ್ಲಿ 'ಹುಲಿಯ ಮರಿಯುಂ ಬೆಕ್ಕಿನಂತಿಹುದೆಂದು ಉಪೇಕ್ಷಿಸಲಾಗದು' ಎನ್ನುತ್ತಾನೆ. ಚಂದ್ರಗುಪ್ತನು ತನ್ನ ನೂರು ಮಂದಿ ಸಹೋದರರನ್ನು ಕಳೆದುಕೊಂಡ ದುಃಖವನ್ನು ಚಾಣಕ್ಯನಲ್ಲಿ ಹೇಳುವ ಸಂದರ್ಭದಲ್ಲಿ 'ಬಹು ಜನ ಹುಟ್ಟಿದರೆ ಬಹು ಕ್ಲೇಶವುಂಟು' ಎಂದೆನ್ನುತ್ತಾನೆ. ಇವೆಲ್ಲ ಕನ್ನಡ ನುಡಿಗಟ್ಟಿನಲ್ಲಿ ಬಂದವುಗಳಾದರೆ ಸಂಸ್ಕೃತದ ವಾಕ್ಯವೇಷ್ಟನಗಳನ್ನು ಕೂಡಾ ಸಹಜವಾಗಿ ಬಳಸಿದ್ದಾನೆ. ಉದಾಹರಣೆ: —

ಪ್ರಯಾಗದಲ್ಲಿದ್ದ ಸರ್ವಾರ್ಥಸಿದ್ಧಿಗೆ ನಂದರು ಮೌರ್ಯರ ಮರಣವಾರ್ತೆಯನ್ನು ತಿಳಿಸುತ್ತಾರೆ. ಸರ್ವಾರ್ಥಸಿದ್ಧಿಯು ದುಃಖಿಸಿದಾಗ ಅಮಾತ್ಯರಾಕ್ಷಸನು ‘ ಕಸ್ಯ ಸೌಖ್ಯಂ ನಿರಂತರಂ? ’ (ಯಾರ ಸೌಖ್ಯವು ನಿರಂತರವಾಗಿರುವುದು?) ಎಂದೆನ್ನುತ್ತಾನೆ. ಚಾಣಕ್ಯ ಚಂದ್ರಗುಪ್ತರು ಪರ್ವತರಾಜನಲ್ಲಿಗೆ ಬಂದು ಸಹಾಯವನ್ನು ಕೇಳಿದಾಗ ಆತನು ಆ ಬಗ್ಗೆ ಯೋಚಿಸುತ್ತಾ ‘ ಜ್ಞಾತಿಶ್ಚೇತ್ ಅನಲೇನ ಕಿಂ? ’ (ಬಂಧುಗಳಿದ್ದರೆ ಮತ್ತೆ ಸುಡಲು ಬೆಂಕಿ ಯಾಕೆ? ’ ಎಂಬ ಮಾತು ಮೌರ್ಯ ನಂದರಲ್ಲಿ ನಿದರ್ಶನಕ್ಕೆ ಬಂದಂತಾಯಿತು — ಎಂದುಕೊಳ್ಳುತ್ತಾನೆ. ಶತ್ರುಸೈನಿಕರು ಪುಷ್ಪ ನಗರದ ಮೇಲೆ ದಂಡೆತ್ತಿ ಬರುತ್ತಿದ್ದಾರೆಂಬ ಸುದ್ದಿಯನ್ನು ಕೇಳಿದ ರಾಕ್ಷಸನು ಸುಮತಿಯೆಂಬ ಮಂತ್ರಿಯಲ್ಲಿ ಅದರ ಸೂಕ್ಷ್ಮಕಾರಣವನ್ನು ಕೇಳುವನು. ಆ ಮಂತ್ರಿಯು ನಂದರಿಂದ ದೋಷತ್ರಯಗಳುಂಟಾದ ಕಾರಣದಿಂದ ಶತ್ರುಗಳು ದಂಡೆತ್ತಿ ಬಂದಿದ್ದಾರೆ ಎನ್ನುವನು. ಆ ಸಂದರ್ಭದಲ್ಲಿ ದೈವಬಲವೇ ಇದಕ್ಕೆಲ್ಲ ಕಾರಣವೆಂದು ಸಮಾಧಾನಪಟ್ಟುಕೊಳ್ಳುತ್ತ ರಾಕ್ಷಸನು ‘ ವಿಧಿವಿಹಿತಂ ಬುದ್ಧಿರನುಸರತಿ ’ ಎನ್ನುವನು. ಚಾಣಕ್ಯನು ತನ್ನ ತಂತ್ರವಿಶೇಷದಿಂದ ನಂದರನ್ನು ರಾಕ್ಷಸನಿಂದ ಬೇರ್ಪಡಿಸಿ ಕೊಲ್ಲಲು ಸಂಚು ಹೂಡಿದ್ದು ಕೊನೆಯ ನಿಮಿಷದಲ್ಲಿ ನಂದರಿಗೆ ಈ ರಹಸ್ಯ ಅರ್ಥವಾದಾಗ ಅವರು ಕಂಗೆಡದೆ ‘ ಗತಂ ನ ಶೋಚಯೇತ ಪ್ರಾಜ್ಞಃ ’ (ಮಿಂಚಿಹೋದ ಕಾರ್ಯಕ್ಕೆ ತಿಳಿವಳಿಕಸ್ಥರು ವ್ಯಥೆಪಡುವುದಿಲ್ಲ) ಎನ್ನುತ್ತಾ ‘ ವಿಪದಿ ಧೈರ್ಯಂ ಅಥ ಅಭ್ಯುದಯೇ ಕ್ಷಮಾ ’(ವಿಪತ್ತಿನ ಸಮಯದಲ್ಲಿ ಧೈರ್ಯವನ್ನು ಅಭ್ಯುದಯದ ಕಾಲದಲ್ಲಿ ಕ್ಷಮಾಗುಣವನ್ನು ಮೆರೆಯಬೇಕು) ಧೈರ್ಯ ತಂದುಕೊಳ್ಳುತ್ತಾರೆ. ಈ ಎಲ್ಲಾ ಸೂಕ್ತಿಗಳು ಸಂದರ್ಭಕ್ಕೆ ಹೊಂದಿಕೊಂಡು ಸ್ವಾಭಾವಿಕವಾಗಿ ಅರ್ಥಸ್ಫುಟವಾಗುವಂತೆ ಮೂಡಿವೆ.

ನೀತಿವಾಕ್ಯಗಳು: ರಾಜನೀತಿಯನ್ನು ಹೇಳುವುದು ಕವಿಯ ಪ್ರಧಾನ ಉದ್ದೇಶವಾದರೂ ಸಂದರ್ಭ ದೊರೆತಾಗಲೆಲ್ಲ ಕವಿಯು ಸುಂದರ ನೀತಿವಾಕ್ಯಗಳನ್ನು ಹೆಣೆದಿದ್ದಾನೆ. ಇದರಿಂದಾಗಿ ನಿರೂಪಣೆಯಲ್ಲಿ ಸೊಗಸು ಬಂದಿದೆ. ಕೆಲವು ನೀತಿವಾಕ್ಯಗಳಂತೂ ಆಗಾಗ ಮಿಂಚುವಂತಿವೆ. ಉದಾಹರಣೆ: ‘ ಆಪತ್ತು ಸಮಯದಲ್ಲಾದರೂ ವಿವೇಕದಿಂದ ಕಾರ್ಯವಂ ಮಾಡಬೇಕು ’, ‘ ಅಕಾಲ ಫಲಪುಷ್ಪವು ನೋಡುವರಿಗೆ ರಮಣೀಯವಾಗಿ ಕಂಡರೂ ಪ್ರಜಾಪೀಡಾಸೂಚಕಗಳಾದ್ದರಿಂದ ಶಿಷ್ಟಗ್ರಾಹ್ಯವಲ್ಲ ’, ‘ ಲೋಕದಲ್ಲಿ ಭೂತದಯೆಯೆಂಬುದು ಮುಖ್ಯಧರ್ಮವು ’, ‘ ವೈದ್ಯರಂ ಪಾಚಕರಂ ಪರೀಕ್ಷಿಸದೆ ಪ್ರಭುವಾದವನು ಪರಿಗ್ರಹಿಸಬಾರದು ’, ‘ ನಿಪುಣರಾದವರು ಅಧರಸ್ಪರ್ಶದಿಂದಲೂ ಮುಖಚೇಷ್ಟೆಯಂ ನೋಡಿ ರಹಸ್ಯಕಾರ್ಯವಂ ಊಹಿಸಬೇಕು ’, ‘ ಇಹದಲ್ಲಿ ಲೌಕಿಕ ಕಾರ್ಯವನ್ನರಿತುಕೊಡೋಣವೆಂಬುದೇ ತ್ಯಾಗವು; ದೇಶ ಕಾಲ ಪಾತ್ರವರಿತು ಕೊಡೋಣವೆಂಬುವದೇ ದಾನವು ’, ‘ ದೈವವೇ ಪ್ರಮಾಣವೆಂಬುದು ಪೌರುಷಹೀನರ ಮಾತು ’ , ‘ ಯಥಾರ್ಥವಾಗಿ ಗುರುಗಳಂ ನಿರಾಕರಿಸಿದವನು ಶ್ರೇಯೋವಂತನಾಗಲಾರ ’ — ಮೊದಲಾದವು ಪ್ರತಿ ಅಧ್ಯಾಯದಲ್ಲೂ ಸಿಗುತ್ತವೆ.

ನ್ಯಾಯಗಳು: ಕವಿಯು ನೀತಿಮಾತುಗಳಂತೆ ಪ್ರಸಿದ್ಧ ನ್ಯಾಯಗಳನ್ನೂ ಉದಾಹರಿಸಿ ತನ್ನ ಹೇಳಿಕೆಗಳನ್ನು ಪುಷ್ಟಿಗೊಳಿಸಿದ್ದಾನೆ. ಉದಾ: ಅ) ಮಾತ್ಸ್ಯನ್ಯಾಯ: ದೊಡ್ಡಮೀನು ಸಣ್ಣ ಮೀನನ್ನು ತಿನ್ನುವುದು.

ಬಲಿಷ್ಠನಾದವನು ದುರ್ಬಲನಾದವನನ್ನು ದಮನಿಸುವುದು. ಇದನ್ನು ಪರ್ವತರಾಜನು ತನ್ನಲ್ಲಿ ಸಹಾಯ ಯಾಚಿಸಿ ಬಂದಂತಹ ಚಂದ್ರಗುಪ್ತ — ಚಾಣಕ್ಯರನ್ನು ಕುರಿತು 'ಈ ನ್ಯಾಯದಂತೆ, ಅರಸುಗಳಿಗೆ ಪರಸ್ಪರ ವೈರವುಂಟಾದರೆ ಪ್ರಬಲನಾದವನು ದುರ್ಬಲನನ್ನು ನಿಗ್ರಹಿಸುವುದು ಲೋಕದಲ್ಲಿ ಇದ್ದುದೇ' ಎಂದು ಹೇಳಿದನು.

ಆ) ತಪ್ತಾಯಸನ್ಯಾಯ: ಕಬ್ಬಿಣವನ್ನು ಕಾದಾಗಲೇ ಕರಗಿಸುವುದು. ಶತ್ರುವು ಅತಂತ್ರನಾಗಿದ್ದಾಗಲೇ ಅವನನ್ನು ದಮನಿಸುವುದು. ನಂದರಲ್ಲಿ 'ಅನುಚಿತಕರ್ಮಾರಂಭ, ಸ್ವಜನ ವಿರೋಧ ಬಲೀಯಸಿ ಸ್ಪರ್ಧಾ' ಎಂಬ ಮೂರು ದೋಷಗಳುಂಟಾದ್ದರಿಂದ ಇದೇ ಸಮಯದಲ್ಲಿ ಛಿದ್ರವುಂಟುಮಾಡಿ ಅವರನ್ನು ಸೋಲಿಸಿ ಬಿಡಬೇಕೆಂದು ಚಾಣಕ್ಯನು ಪರ್ವತರಾಜನಿಗೆ ತಿಳಿಸುವ ಸಂದರ್ಭದಲ್ಲಿ ಈ ನ್ಯಾಯವನ್ನು ಹೇಳಿದೆ.

ಇ) ಸ್ವಾಮಿಭೃತ್ಯನ್ಯಾಯ: ಸ್ವಾಮಿಯು ಬಲಿಷ್ಠನಾಗಿದ್ದಾಗ ಭೃತ್ಯನು ಆತನನ್ನು ಅನುಸರಿಸುವನು. ಭೃತ್ಯನು ಬಲಿಷ್ಠನಾದಲ್ಲಿ ಸ್ವಾಮಿಯನ್ನು ಲಕ್ಷೀಕರಿಸದೆ ಮೀರಿ ನಡೆವನು. ಹೀಗಾದಲ್ಲಿ ರಾಜತಂತ್ರವು ಕೆಡುವುದು. ಚಾಣಕ್ಯನು ಚಂದ್ರಗುಪ್ತನಿಗೆ ಸಹಾಯ ಮಾಡುವುದಾಗಿ ಒಪ್ಪಿಗೆಕೊಟ್ಟ ನಂತರ ನಂದರ ಶತ್ರು, ಮಿತ್ರರ ಬಗ್ಗೆ ವಿಚಾರಿಸುತ್ತಾನೆ. ಆ ಸಂದರ್ಭದಲ್ಲಿ ಚಂದ್ರಗುಪ್ತನು ರಾಕ್ಷಸನು ಮಾಡುವ ಉಪಾಯದಕ್ಷ್ಯಗಳ ಬಗ್ಗೆ ವಿವರಿಸುತ್ತ 'ಉಳಿದ ಅಧಿಕಾರಿಗಳಿಗೆ ಸಂಬಳ ಹೊರತು ಇತರ ವಿಷಯಜ್ಞಾನಕ್ಕೆ ಲೇಶಮಾತ್ರವೂ ಅವಕಾಶವಿಲ್ಲ'ವೆನ್ನುತ್ತಾನೆ. ಆಗ ಚಾಣಕ್ಯನು ರಾಕ್ಷಸನ ಈ ಗುಣವನ್ನು ಮೆಚ್ಚಿಕೊಳ್ಳುತ್ತ 'ಅಮಾತ್ಯನಾದವನಲ್ಲಿ ನಿಗ್ರಹಾನುಗ್ರಹಶಕ್ತಿಯಿಲ್ಲದಿದ್ದಲ್ಲಿ ಸ್ವಾಮಿಭೃತ್ಯನ್ಯಾಯವು ತಪ್ಪಿ' ಅರಾಜಕತೆಯುಂಟಾಗುವುದೆನ್ನುವನು.

ಈ) ಅಜಾಯುದ್ಧ: ವ್ಯರ್ಥ ಕಾಲಕ್ಷೇಪ, ಯುದ್ಧಮಾಡಲು ಅಶಕ್ತಿಯಿಲ್ಲದವರು ಯುದ್ಧಮಾಡುವಂತೆ ತೋರಿಸುತ್ತ ಕಾಲ ಹರಣ ಮಾಡುವುದು. ಪರ್ವತರಾಜನು ಸೈನ್ಯ ಸಮೇತ ಯುದ್ಧಕ್ಕೆ ಬಂದಾಗ, ಚಾಣಕ್ಯನು ಸಿದ್ಧಾರ್ಥಕನ ಮೂಲಕ ಭಾಗುರಾಯಣನನ್ನು ಭೇದಕ್ಕೆ ಒಳಪಡಿಸುವನು. ಆಗ ಭಾಗುರಾಯಣನು ತನ್ನ ದೂತರ ಮೂಲಕ ಭದ್ರಭಟಾದಿ ಸೇನಾಧಿಪತಿಗಳಿಗೆ 'ಅಜಾಯುದ್ಧ'ದಂತೆ ಕಾಲ ಕಳೆಯಲು ತಿಳಿಸುವನು.

ಉ) ಕುಕ್ಕುಟಾಚಾರ: ಅಜಾಗೃತ ಮೈಥುನಕ್ಕೆ ಸಂಬಂಧಿಸಿದಂತೆ ಕವಿ ಈ ಮಾತನ್ನು ಉಪಯೋಗಿಸಿದ್ದಾನೆ. ವಿಷಕನ್ಯೆಯನ್ನು ಕೂಡಿ ಪರ್ವತರಾಜನು ಮೃತಿಹೊಂದಿದ ನಂತರ ಭಾಗುರಾಯಣನು ಆಕೆಯನ್ನು ಕರೆದು ನಡೆದ ಸಂಗತಿಯನ್ನು ವಿಚಾರಿಸಲು ಆಕೆಯು 'ರಾಜನು ಕಾಮಮೋಹಿತನಾಗಿ ವಿಚಾರಿಸದೆ ಸವಕದಿಂ ಕುಕ್ಕುಟಾಚಾರಂಗೆಯ್ದು ಕ್ರೀಡಿಸಿ ಮೃತನಾದನು' ಎನ್ನುತ್ತಾಳೆ.

ಪತ್ರಗಳು, ಕಪಟಲೇಖನಗಳು[20ಎ] ಮತ್ತು ನಿಯೋಗಗಳು: ರಾಜನೀತಿಯಲ್ಲಿ ಪತ್ರಗಳು, ಕಪಟಲೇಖನಗಳು ಮತ್ತು ನಿಯೋಗಗಳು ವಿಶೇಷ ಪಾತ್ರ ವಹಿಸುತ್ತವೆ. ಇದನ್ನು ಚೆನ್ನಾಗಿ ಅರಿತಿದ್ದ ಕವಿಯು ಇಲ್ಲಿ ಕನಿಷ್ಠ ಇಪ್ಪತ್ತು ಪತ್ರಗಳನ್ನು ಬಳಸಿದ್ದಾನೆ. ಸಾಕಷ್ಟು ಕಪಟಲೇಖನಗಳೂ, ನಿಯೋಗಗಳ ಚಮತ್ಕಾರವೂ ಕೆಲಸ ಮಾಡಿವೆ. ಇವುಗಳು ಚಾಣಕ್ಯನ ಕಡೆಯಿಂದ, ರಾಕ್ಷಸನ ಕಡೆಯಿಂದ ಮತ್ತು ಪರ್ವತರಾಜನ ಕಡೆಯಿಂದ — ಹೀಗೆ ಎಲ್ಲರಿಂದಲೂ ಉಪಯೋಗಿಸಲ್ಪಟ್ಟಿದ್ದರೂ ಸಫಲವಾದದ್ದು ಚಾಣಕ್ಯಮಾತ್ರನೆಂದು ಚಿತ್ರಿಸಲಾಗಿದೆ. ಇವೆಲ್ಲ ಕೃತಿಯನ್ನು ರೋಚಕಗೊಳಿಸುವಲ್ಲಿ ಸಹಾಯಕವಾಗಿವೆ.

<u>ಸಂಭಾಷಣೆ:</u> ಯಾವುದೇ ವಿಚಾರವನ್ನು ಮೊದಲು ಮಂತ್ರಿಮಂಡಲದಲ್ಲಿ ಚರ್ಚಿಸಿ, ಅದರ ಫಲಾಫಲಗಳನ್ನು ವಿಮರ್ಶಿಸಿ ಕಾರ್ಯರೂಪಕ್ಕೆ ತರುವುದು ರಾಜನೀತಿಯ ಒಂದು ಪ್ರಮುಖ ಲಕ್ಷಣವಾಗಿದೆ. ಹಾಗಾಗಿ ಇಲ್ಲಿ ನಾಟಕದಷ್ಟು ಸಂಭಾಷಣೆ ಬಂದಿದ್ದು ನಾಟಕೀಯ ವಾತಾವರಣವನ್ನು ಸೃಷ್ಟಿಸಿದೆ. ಪರ್ವತರಾಜ, ಶಬರವರ್ಮ ಮತ್ತು ಉಲೂಕನ ಸಂಭಾಷಣೆ ಮತ್ತೆ ಆತನ ಆಸ್ಥಾನಕ್ಕೆ ಚಾಣಕ್ಯ ಚಂದ್ರಗುಪ್ತರು ಬಂದಾಗ ಪರ್ವತರಾಜನು ಅವರೊಡನೆ ನಡೆಸುವ ಸಂಭಾಷಣೆ, ಯುದ್ಧಕ್ಕೆ ಹೊರಟು ನಿಂತ ನಂದರು ತಮ್ಮ ಪ್ರಿಯ ಪತ್ನಿಯರೊಂದಿಗೆ ನಡೆಸುವ ಮಾತುಕತೆ, ರಾಕ್ಷಸನ ಪತ್ನೀ ಪುತ್ರರಿಗೆ ಆಶ್ರಯ ಕೊಟ್ಟನೆಂಬ ಕಾರಣಕ್ಕಾಗಿ ಬಳೆಗಾರ ಶೆಟ್ಟಿ ಚಂದನದಾಸನನ್ನು ಕರೆಸಿ, ಚಾಣಕ್ಯನು ಆತನೊಡನೆ ನಡೆಸಿದ ಸಂಭಾಷಣೆ — ಇವೆಲ್ಲ ಅಂಥ ಸನ್ನಿವೇಶ ಸಂದರ್ಭಗಳಿಗೆ ಉಚಿತವಾದವುಗಳಾಗಿವೆ.

<u>ಅಲಂಕಾರಗಳು[21]:</u> 'ಮುದ್ರಾಮಂಜೂಷ'ವು ಗದ್ಯಕೃತಿ ಚಮತ್ಕಾರಕ್ಕಾಗಿ ಅಲಂಕಾರಗಳನ್ನು ಬಳಸಬೇಕಾದ ಅನಿವಾರ್ಯತೆ ಇದಕ್ಕಿಲ್ಲ. ಆದರೂ ಕವಿ ರೋಚಕತೆಗಾಗಿ ತನ್ನ ಶೈಲಿಯನ್ನು ವಿವಿಧ ಅಲಂಕಾರಗಳಿಂದ ಬೆಳಗಿಸಿದ್ದಾನೆ. ಉದಾಹರಣೆಗಾಗಿ ಈ ಕೆಳಗಿನವುಗಳನ್ನು ಗಮನಿಸಬಹುದಾಗಿದೆ.

ಅ) <u>ಉಪಮಾ:</u> 'ಪಂಕದಲ್ಲಿ ಬಿದ್ದ ಮಹಾ ಗಜದಂತೆ', 'ಗುಮ್ಮನೆಂದು ಬಾಲಕನಂ ಹೆದರಿಸುವಂತೆ', 'ಕೃತಘ್ನ ರೋಗಿಗೆ ಮಾಡಿದ ಚಿಕಿತ್ಸೆಯಂತೆ' ... ಇತ್ಯಾದಿ. ಇವೆಲ್ಲ ಬಿಡಿ ಬಿಡಿಯಾಗಿ ಬಂದಿವೆ.

ಆ) <u>ಶ್ಲೇಷೋಪಮಾ:</u> ಸರ್ವಾರ್ಥ ಸಿದ್ಧಿರಾಯನು — ಸೂರ್ಯನಂತೆ ಬುಧಾನುಗತನಾಗಿ, ದಶರಥನಂತೆ ಸುಮಿತ್ರೋಪಸೇವಿತನಾಗಿ, ಶ್ರೀಶಂಕರನಂತೆ ಮಹಾಸೇನಾನುಗತನಾಗಿ, ಆದಿಶೇಷನಂತೆ ಭೂಭಾರ ಧಾರಣ ಕುಶಲನಾಗಿ — ಪೃಥ್ವೀ ಸಾಮ್ರಾಜ್ಯವಂಗೈಯುತ್ತಿದ್ದನು.

ಇ) <u>ಉತ್ಪ್ರೇಕ್ಷೆ:</u> ಪಾವನತ್ವವೇ ಮೂರ್ತಿರೂಪಿನಿಂದ ಬಂದಂತೆ ವೀತಿಹವ್ಯರೆಂಬ ಮುನಿಗಳು ಬಂದರು; ನಾನಾ ಬಣ್ಣಗಳಿಂದ ಪ್ರಕಾಶಮಾನವಾದ ಕಾಮನಬಿಲ್ಲಿನ ಮಧ್ಯದಲ್ಲಿ ತೋರುವ ಕುಡಿಮಿಂಚಿನಂತೆ, ನಿಜಾಭರಣದ ಮಣಿಪ್ರಭೆಯ ಸಮೂಹದ ಮಧ್ಯದಲ್ಲಿ ಸಂಚರಿಸುವ ಕನಕ ಪುತ್ಥಳಿಯೋ ಎಂಬಂತೆ (ಸುನಂದಾದೇವಿಯು ಶೋಭಿಸಿದಳು); ಕಮಲಿನೀ ಹೃದಯಾನುರಾಗದಿಂ ಕೆಂಪಡರಿದನಂತೆ ಕಮಲಬಾಂಧವನು ಸಿಂಧೂರವರ್ಣಮಾಗಿ ಪ್ರಾಚೀನಿತಂಬಿನಿಯನ್ನೊಡಗೂಡ ತಣಿಸಿದನಂತೆ ಪಶ್ಚಿಮಾಚಲ ಶಿಖರದಿಂ ಮರೆಯಾದನು.

ಈ) <u>ಪರಿಸಂಖ್ಯಾ:</u> ಸರ್ವಾರ್ಥಸಿದ್ಧಿಯ ಆಳಿತ ಕಾಲದಲ್ಲಿ — ವರ್ಣಸಾಂಕರ್ಯ ಶುದ್ಧಿಗಳು ಕನಕದಲ್ಲಿ, ಮಿತ್ರದ್ವೇಷವೆಂಬುದು ಕುಮುದ ಪಂಕ್ತಿಗಳಲ್ಲಿ, ದಂಡಗ್ರಹಣವೆಂಬುದು ವಾರ್ಧಿಕದಲ್ಲಿ, ಚಾಂಚಲ್ಯವೆಂಬುದು ಧ್ವಜದಲ್ಲಿ, ಬಂಧನಗಳೆಂಬುದು ಕುಸುಮಗಳಲ್ಲಿ, ಜ್ಯೇಷ್ಠಾತಿಕ್ರಮವೆಂಬುದು ಚಂದ್ರನಲ್ಲಿ, ಮಲಿನಾಂಬರತ್ವವು ವರುಷಾಕಾಲದಲ್ಲಿ, ಕಶಾಘಾತಭೀತಿಯೆಂಬುವುದು ಅಶ್ವಗತಿ ಶಿಕ್ಷಾವಿಶೇಷದಲ್ಲಿಯೇ ಉಂಟಾಗಿದ್ದುವು.

ಉ) <u>ಕಾವ್ಯಲಿಂಗ:</u> ಸರ್ವಾರ್ಥಸಿದ್ಧಿಯು — ನೀಲಕಮಲಗಳಂತಿರುವ ಹೆಂಗಳೆಯರ ಕಣ್ಣಿಂಬ ಹೂಗಳಿಂದ ಪೂಜಿಸುವ ಮುಖಚಂದ್ರವುಳ್ಳವನಾಗಿ; ಕುಂಕುಮಧೂಳಿನ ಸಮೂಹದಂತೆ ಮುದಗೊಳಿಸುವ ಹೆಂಗಳೆಯರ ಮಾಣಿಕ್ಯದ ಕಾಂತಿಯಿಂದ ಕುಸುಂಭ ವಸ್ತ್ರದಂತಿರುವ ಶುಭ್ರತೆಯಿಂದ ಶೋಭಿಸುವನಾಗಿ; ಇನ್ನೊಂದು ಸಂದರ್ಭದಲ್ಲಿ ವಿಶೇಷ ಅಪ್ಪುಗೆಯಿಂದ ರಮಣಿಯರ ಮೈಗೆ ಹಚ್ಚಿದ ಬಣ್ಣದಿಂದ ಕೆಂಪೇರಿದ ಹಣೆವುಳ್ಳವನಾಗಿ; ಪ್ರೇಮಪಾಶದಿಂದ ಹಿಡಿಯುವ ಅಂಗನೆಯರ ತುರುಬಿನ ಕುಸುಮ ಧೂಳಿಗಳಿಂದ ಹೊಂಬಣ್ಣದ ಎದೆಭಾಗವುಳ್ಳವನಾಗಿ; ಕಾಮಿನಿಯರ ಕುಚಕಲಶಕ್ಕೆ ಬಳಿದ ಚಂದನರಸದಿಂದ ಬಿಳುಪಾದ ಭುಜದೇಶವುಳ್ಳವನಾಗಿ; ರತಿರಭಸದಿಂದ ಉಂಟಾದ ಶ್ರಮಜಲ ಬಿಂದುಗಳಿಂದ ಕದಡಿರುವ ಕಸ್ತೂರಿ ತಿಲಕವುಳ್ಳವನಾಗಿ ... ಅಭಿಷೇಕ ದೇವತೆಗಳಂತಿರುವ ವಧೂಜನಗಳಿಂದ ಕೂಡಿ ಜಲ ಕೇಳಿಯನ್ನಾಡುವವನಾಗಿದ್ದನು.

ಊ) <u>ಸ್ವಭಾವೋಕ್ತಿ:</u> ಮಹಾಮುನಿಗಳ ಆಶ್ರಮದಲ್ಲಿ — ಜನರ ಭಯವಂ ಬಿಟ್ಟ ಹರಿಣ ಸಮೂಹವು ಪೂರ್ವ ಪರಿಚಯವುಳ್ಳವಂತೆ ಸಮೀಪಕ್ಕೆ ಬರುವವು.

ಋ) <u>ಅತಿಶಯೋಕ್ತಿ:</u> ಸುನಂದಾದೇವಿಯು — ಕಾಲುಗೆಜ್ಜೆಯ ಧ್ವನಿಗಳನ್ನನುಸರಿಸಿ ಬರುವ ಸಾಕಿದ ಹಂಸಪಕ್ಷಿಗಳ ಕಾಲುತಳದ ಹೊಳೆಯುವಿಕೆಯಿಂದ ಕುಂಕುಮ ರಸದ ಕೆಸರಿನಲ್ಲಿ ಮುಳುಗಿದ ರೆಕ್ಕೆಗಳುಳ್ಳವಂತೆ ಮಾಡಿದ ಮನೋಹರವಾದ ವಜ್ರದ ಸರಳಿನಂತೆ ತೋರುವ ಕಾಲಿನ ಉಂಗುರಗಳ ಕಾಂತಿಯಿಂದ (ಆಕೆ ಶೋಭಿಸುತ್ತಿದ್ದಳು).

ಎ) <u>ಪ್ರಶ್ನಾಲಂಕಾರ:</u> ಸಾಭಿಪ್ರಾಯವಾದ ಪ್ರಶ್ನೆಗಳನ್ನು ಮೇಲಿಂದ ಮೇಲೆ ಎಸೆಯುವುದರ ಮೂಲಕ ಕವಿಯು ತನ್ನ ಹೇಳಿಕೆಗಳಲ್ಲಿ ಚುರುಕುತನ ತಂದಿದ್ದಾನೆ. ಉದಾಹರಣೆ: 'ಕಸ್ಯ ಸೌಖ್ಯಂ ನಿರಂತರಂ?', 'ಹೊಟ್ಟೆಗೆ ಇಲ್ಲದವರು ಮತ್ತೇನು ಮಾಡ್ಯಾರು?' 'ಮೀರಿ ಬಂದ ಕಾರ್ಯಕ್ಕೆ ಮಿಡುಕಿ ಫಲವೇನು?', 'ಅಗ್ನಿಯೊಡನೆ ತೃಣಗಳಿಗೆ ಕಲಹವುಂಟೆ?', 'ಆಡಿದ ಮಾತು ಕೂಡಿ ಬಂದರೆ ಮನುಷ್ಯನು ಎಂದಿನಂತೆ ಇರುವನೇ?' 'ಎಷ್ಟಾದರೂ ಜನಗಳಿಗೆ ಸ್ವಾಭಿಮಾನ ತಪ್ಪುವುದುಂಟೇ?' — ಇವೇ ಮೊದಲಾದ ಪ್ರಶ್ನೆಗಳಲ್ಲಿರುವ ಸೌಂದರ್ಯವು ವಿಲಕ್ಷಣವಾದುದು.

ಹೀಗೆ ಕವಿಯು ವಿವಿಧ ರೀತಿಯ ಅಲಂಕಾರಗಳನ್ನು ತಂದು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿದ್ದಾನೆ.

<u>ಸಂಗ್ರಹ ಕೌಶಲ:</u> ಕೆಂಪುನಾರಾಯಣನ ಸಂಗ್ರಹ ಕೌಶಲ ಅಪೂರ್ವವಾದುದು. ಒಂದೇ ಸಂಗತಿಯನ್ನು ಹಲವು ಧಾಟಿಗಳಲ್ಲಿ ಹೇಳಿ 'ಓದುಗರ ಮನಸ್ಸಲ್ಲಿ ಹೊಗಿಸಬೇಕು ಎಂದವನು ಪ್ರಯತ್ನಿಸಿದಂತೆ ಕಾಣುತ್ತದೆ. ಮಹಾಭಾರತ, ರಾಮಾಯಣಾದಿಗಳಲ್ಲಿಯ ಕಥಾ ಪ್ರಸಂಗಗಳನ್ನು ಸಂಗ್ರಹವಾಗಿ ಹೇಳಿ ತನ್ನ ಮಾತುಗಳಿಗೆ ಶಕ್ತಿ ತುಂಬುತ್ತಾನೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಪೂರ್ವಕಥೆಗಳ ಉದಾಹರಣೆಗಳನ್ನು ಕೊಟ್ಟಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. 'ಮುದ್ರಾಮಂಜೂಷ' ದಲ್ಲಿ ಉದಾಹೃತ ಪ್ರಸಂಗಗಳು ಇಂತಿವೆ:

ಅ) 'ಅನ್ಯಂ ಇಂದ್ರಂ ಕರಿಷ್ಯಾಮಿ ಲೋಕಂ ವಾ ಸ್ಯಾದ ಅನಿಂದ್ರಕಂ' ಎಂದು ಪ್ರತಿಜ್ಞೆ ಮಾಡಿದ ವಿಶ್ವಾಮಿತ್ರರಂತೆ:

ರಾಮಾಯಣದಲ್ಲಿಯ ಮಾತಿದು. ತ್ರಿಶಂಕುವನ್ನು ಸ್ವರ್ಗಕ್ಕೆ ಹೋಗಿಸದಿರಲು ವಿಶ್ವಾಮಿತ್ರನು — 'ಬೇರೊಬ್ಬ ಇಂದ್ರನನ್ನು ಸೃಷ್ಟಿಸುತ್ತೇನೆ; ಇಲ್ಲವಾದರೆ ಲೋಕದಲ್ಲಿ ಇಂದ್ರನೇ ಇಲ್ಲದಂತೆ ಮಾಡುತ್ತೇನೆ' ಎನ್ನುವನು (ವಾಲ್ಮೀಕಿ ರಾಮಾಯಣ ಬಾಲಕಾಂಡ ಸರ್ಗ ೫೭-೫೯)[22].

ಪರ್ವತರಾಜನನ್ನು ಕರೆದುಕೊಂಡು ಚಾಣಕ್ಯನು ಪಾಟಲೀಪುರದ ಬಳಿ ಯುದ್ಧಕ್ಕೆ ಬಂದಿದ್ದಾಗ ಯುದ್ಧಮಧ್ಯದಲ್ಲಿ ರಾಕ್ಷಸನು ಭೇದವನ್ನು ಪ್ರಯೋಗಿಸಲು ಪರ್ವತರಾಜನಲ್ಲಿಗೆ ವಿಷ್ಣುದಾಸನೆಂಬ ನಿಯೋಗಿಯನ್ನು ಕಳುಹಿಸುತ್ತಾನೆ. ನಿಯೋಗಿಯ ಸಂಧಿ ಮಾತಿಗೆ ಒಡಂಬಟ್ಟ ಪರ್ವತರಾಜನು ಆ ವಿಚಾರವನ್ನು ಚಾಣಕ್ಯನ ಗಮನಕ್ಕೆ ತರುತ್ತಾನೆ. ಅದನ್ನು ಕೇಳಿದ ಚಾಣಕ್ಯನು — 'ಮಹತ್ತರವಾದ ಅಕಾರ್ಯವನ್ನು ಯೋಜಿಸಿರುವೆ. ತಾನು ವ್ಯಥೆಹೊಂದಿ, ತನ್ನ ಪೌರುಷ ನಷ್ಟವಾಗಿ, ತನ್ನ ತಪಶ್ಶಸ್ತ್ರದ ಮೊನೆಯು ಮುರಿದಾಗ ಮಾತ್ರ ಇಂಥ ಅಕಾರ್ಯ ಸಾಧ್ಯವೆನ್ನುವನು. 'ಹಾಗಲ್ಲದೇ ತಾನು ಜೀವಂತವಾಗಿರುವಾಗಲೇ ಅಂಥ ಅಕಾರ್ಯ ನಡೆಯುವಂತಾದರೆ ನಂದರನ್ನು ಆ ದುಷ್ಟರಿಗೆ ಸಹಾಯ ಮಾಡಿದವರನ್ನೇ ನಾಶಪಡಿಸುವೆನು' ಎಂಬಾಗ ಮಹಾಕೋಪಿಷ್ಠರಾದ ವಿಶ್ವಾಮಿತ್ರರ ಮೇಲಿನ ಮಾತನ್ನು ನೆನಪಿಸಿಕೊಳ್ಳುವನು.

ಆ) 'ಅಸ್ಮಾಭಿ:ಯದನುಷ್ಠೇಯಂ ಗಂಧರ್ವೈ: ತದನುಷ್ಠಿತಂ' ಎಂಬಂತೆ:

ಮಹಾಭಾರತದ ಅರಣ್ಯಪರ್ವದಲ್ಲಿ ಭೀಮಸೇನನು ಆಡಿದ ಮಾತಿದು. ಘೋಷಯಾತ್ರೆಯ ನೆವದಿಂದ ಪಾಂಡವರು ವಾಸ ಮಾಡುತ್ತಿದ್ದ ಅರಣ್ಯದಲ್ಲಿ, ದುರ್ಯೋಧನನು ಸೇನಾಸಮೇತನಾಗಿ ನಿಂತು ತನ್ನ ವೈಭವವನ್ನು ತೋರಿಸುತ್ತಿದ್ದನು. ಆಗ ಪಾಂಡವರಿಗುಂಟಾದ ಮನ:ಕ್ಲೇಶವನ್ನು ಕಂಡು ಇಂದ್ರನು ಚಿತ್ರಸೇನನೆಂಬ ಗಂಧರ್ವನನ್ನು ಅಲ್ಲಿಗೆ ಕಳುಹಿಸುವನು. ಅವನು ಕೌರವನನ್ನು ಅವಮಾನಗೊಳಿಸಿ, ಹಿಂಗಟ್ಟು ಬಿಗಿದು ಇಂದ್ರಲೋಕಕ್ಕೆ ಕರೆದೊಯ್ಯುವನು. ಆಗ ಭಾನುಮತಿಯು ಧರ್ಮರಾಜನಲ್ಲಿಗೆ ಬಂದು ಪತಿದಾನ ಬೇಡುವಳು. ಧರ್ಮರಾಯನು ಈ ವಿಷಯವಾಗಿ ಭೀಮನ ಮುಖ ನೋಡಲು ಭೀಮನು ಮೇಲಿನ ಮಾತನ್ನು ಆಡುವನು (ವನಪರ್ವ ೨೪೨ : ೧೫-೨೧)[23].

ಚಾಣಕ್ಯನು ಪರ್ವತರಾಜ್ಯಕ್ಕೆ ಹೋದ ಸಂದರ್ಭದಲ್ಲಿ ಲಂಪಾಕ ದೇಶದವರು ಪರ್ವತರಾಜ್ಯದ ಮೇಲೆ ದಂಡೆತ್ತಿ ಬರುತ್ತಿದ್ದರು. ಪರ್ವತರಾಜನಿಂದ ಈ ವಿಚಾರವನ್ನು ತಿಳಿದ ಚಾಣಕ್ಯನು ಕಾಮರೂಪಾಧಿಪತಿಯು ಆ ಲಂಪಾಕಪತಿಯ ಮೇಲೆ ಯುದ್ಧಕ್ಕೆ ಹೋಗುವಂತೆ ಮಾಡಿದನು. ಇದನ್ನು ತಿಳಿದ ಪರ್ವತರಾಜನು ವಿಸ್ಮಿತನಾಗಿ ತನ್ನ ಮಂತ್ರಿಯಾದ ಶಬರವರ್ಮನಲ್ಲಿ ತಾವು ಮಾಡಬೇಕಾದ ಕೆಲಸವನ್ನು ಈ ಚಾಣಕ್ಯನೇ ಮಾಡಿದನು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಉದ್ಧರಿಸುವನು.

ಇ) ಉನ್ಮತ್ತನಂತೆ ಬರುತ್ತಿದ್ದ ದೂರ್ವಾಸಮುನಿಯ ಕೋಪದಿಂದ ಸಮಯವಿಶೇಷದಲ್ಲಿ ಇಂದ್ರನೈಶ್ವರ್ಯವು ಅಸುರರ ಪಾಲಾದಂತೆ:

ದುರ್ವಾಸಾ ಒಬ್ಬ ಬ್ರಾಹ್ಮಣ ಮಹರ್ಷಿ. ಉಗ್ರ ಸ್ವಭಾವದವನು. ಕೋಪಿಷ್ಠ. ಈಶ್ವರಾಂಶದಿಂದ ಹುಟ್ಟಿದವನೆಂದು ಪ್ರಸಿದ್ಧಿಪಡೆದವನು. ಒಮ್ಮೆ ಈತ ದೇವಲೋಕಕ್ಕೆ ಹೋಗಿ ಬರುವಾಗ ಒಬ್ಬ ವಿದ್ಯಾಧರಿಯ ಕೈಯಲ್ಲಿದ್ದ ಕಲ್ಪವೃಕ್ಷದ ಹೂವಮಾಲೆಯನ್ನು ಕಂಡು, ಅದರ ಪರಿಮಳದಿಂದ ಮೋಹಭರಿತನಾಗಿ ಆಕೆಯನ್ನು ಬೇಡಿ ಅದನ್ನು ತೆಗೆದುಕೊಂಡು ಉನ್ಮತ್ತನಾಗಿ ಆ ಮಾಲೆಯನ್ನು ತಲೆಗೆ ಸುತ್ತಿಕೊಂಡು ಬರುತ್ತಿದ್ದ. ಇಷ್ಟರಲ್ಲಿ ಐರಾವತದ ಮೇಲೆ ಕುಳಿತು ಶಚಿಯೊಡನೆ ಬರುತ್ತಿದ್ದ ಇಂದ್ರನನ್ನು ಕಂಡು ಆ ಮಾಲೆಯನ್ನು ಆತನ ಮೇಲೆ ಎಸೆದ. ಇಂದ್ರನು ಆ ಮಾಲೆಯನ್ನು ಐರಾವತದ ಕುಂಭ ಸ್ಥಳದ ಮೇಲೆ ಹಾಕಿದ. ಅದರ ಪರಿಮಳದಿಂದ ಐರಾವತ ಮದವೇರಿ ಆ ಮಾಲೆಯನ್ನು ನೆಲದ ಮೇಲೆ ಹಾಕಿಬಿಟ್ಟಿತು. ಇದರಿಂದ ಕ್ರೋಧಾಂಧನಾದ ದುರ್ವಾಸ — 'ಎಲೈ ದುಷ್ಟನೇ, ನಾನಿತ್ತ ಹೂಮಾಲೆಯನ್ನು ನೀನು ಈ ರೀತಿಯಾಗಿ ತಿರಸ್ಕರಿಸಿದೆಯಾಗಿ ನಿನ್ನ ಮೂರುಲೋಕದ ಸಂಪತ್ತು ನಾಶವಾಗಲಿ' ಎಂದು ಶಾಪಕೊಟ್ಟನು (ವಿಷ್ಣುಪುರಾಣ ೧-೯) [24].

ಚಾಣಕ್ಯನು ಭಯಂಕರವಾಗಿ ಪ್ರತಿಜ್ಞೆ ಮಾಡಿ ಹೊರಟುಹೋದ ನಂತರ ಸಭಾಸದರು 'ಬ್ರಾಹ್ಮಣನು ಭಿಕ್ಷುಕನಂತೆ ತೋರುತ್ತಿದ್ದರೂ ಆತನ ತೇಜಸ್ಸು ಉಲ್ಲಂಘಿಸುವುದಕ್ಕೆ ಶಕ್ಯವಾಗುವುದಿಲ್ಲ' ವೆಂದು ಮಾತನಾಡಿಕೊಳ್ಳುವ ಸಂದರ್ಭದಲ್ಲಿ ನಂದರಿಗೆ ಈತನಿಂದ ಕೇಡಾದೀತು ಎಂಬುದಕ್ಕಾಗಿ ಈ ಮಾತನ್ನು ನೆನಪಿಸಿಕೊಳ್ಳುತ್ತಿದ್ದರು.

ಈ) ಕರ್ಣನು ಅರ್ಜುನನ ಸಂಹಾರಕ್ಕೆಂದು ಇಂದ್ರನಿಂದ ಸಂಪಾದಿಸಿದ ಶಕ್ತ್ಯಾಯುಧಕ್ಕೆ ಘಟೋತ್ಕಚನನ್ನು ಗುರಿಮಾಡಿದಂತೆ:

ಭಾರತ ಯುದ್ಧದ ಸಮಯದಲ್ಲಿ ಒಮ್ಮೆ ರಾತ್ರಿ ಯುದ್ಧ ನಡೆಯಿತು. ಆಗ ಘಟೋತ್ಕಚನ ಪ್ರತಾಪ ಹೆಚ್ಚಾಯಿತು. ಆ ಸಂದರ್ಭದಲ್ಲಿ ಕರ್ಣನು — ದುರ್ಯೋಧನನ ಪ್ರಾರ್ಥನೆಯಂತೆ — ಇಂದ್ರನಿಂದ ಪಡೆದಿದ್ದ, ಅರ್ಜುನನನ್ನು ಕೊಲ್ಲುವುದಕ್ಕಾಗಿಯೇ ಮೀಸಲಾಗಿಟ್ಟುಕೊಂಡಿದ್ದ ಶಕ್ತ್ಯಾಯುಧವನ್ನು ಘಟೋತ್ಕಚನ ಮೇಲೆ ಪ್ರಯೋಗಿಸಿ ಆತನನ್ನು ಕೊಂದನು. ಇದು ಕೃಷ್ಣನ ತಂತ್ರವಾಗಿತ್ತು (ದ್ರೋಣಪರ್ವ)[25].

ರಾಕ್ಷಸನು ಚಂದ್ರಗುಪ್ತನನ್ನು ಕೊಲ್ಲಲು ವಿಷಕನ್ಯೆಯನ್ನು ಕಳುಹಿಸುತ್ತಾನೆ. ಆದರೆ ಆಕೆ ಪರ್ವತರಾಜನನ್ನು ಕೂಡಿದ್ದರಿಂದ ಆತ ಸಾಯುತ್ತಾನೆ. ಇದು ಗೊತ್ತಾದ ತತ್‌ಕ್ಷಣ ರಾಕ್ಷಸನು ತಾನು ಮಾಡಿದ ಮಹಾಪ್ರಯತ್ನ ನಷ್ಟವಾದುದಕ್ಕೆ ವ್ಯಥೆ ಪಡುತ್ತಾ ಮಹಾಭಾರತದ ಈ ಘಟನೆಯನ್ನು ನೆನಪಿಸಿಕೊಳ್ಳುತ್ತಾನೆ. ಇಲ್ಲಿ ಚಾಣಕ್ಯ ತಂತ್ರದಿಂದಾಗಿ ಚಂದ್ರಗುಪ್ತನ ರಕ್ಷಣೆಯಾಗಿತ್ತು.

ಉ) ಗಯನೆಂಬ ಗಂಧರ್ವನ ಕಥೆ:

ಗಯನೆಂಬ ಗಂಧರ್ವನು ಮಣಿಪುರದ ಅರಸು. ಶಿವಭಕ್ತ. ಶ್ರೀಕೃಷ್ಣನು ಸೂರ್ಯನಿಗೆ ಕೊಡುತ್ತಿದ್ದ ಅರ್ಘ್ಯದಲ್ಲಿ ಉಗುಳಿ, ಅಪರಾಧಿಯಾಗಿ ಅರ್ಜುನನನ್ನು ಮೊರೆಹೊಕ್ಕು ಬದುಕಿದನು (ಗಯೋಪಾಖ್ಯಾನ)[26].

ರಾಕ್ಷಸನು ಪರ್ವತರಾಜನನ್ನು ಭೇದಿಸಲು ವಿಷ್ಣುದಾಸನೆಂಬ ನಿಯೋಗಿಯನ್ನು ಕಳುಹಿಸಿದಾಗ ಪರ್ವತರಾಜನು ರಾಕ್ಷಸನು ಹೇಳಿ ಕಳುಹಿಸಿದ ಮಾತಿಗೆ ಒಪ್ಪಲು ತಯಾರಾಗುತ್ತಾನೆ. ಇದನ್ನು ತಿಳಿದ ಶೇಖರನೆಂಬ ಇಂಗಿತಜ್ಞನಾದ ಆತನ ಮಂತ್ರಿಯು — 'ಚಂದ್ರಗುಪ್ತನಿಗೆ ತಾನು ಪ್ರಥಮದಲ್ಲಿ ಅಭಯವನ್ನು ಕೊಟ್ಟು ಈಗ ಆ ಶರಣಾಗತನನ್ನು ರಾಕ್ಷಸನಿಗೆ ಒಪ್ಪಿಸಿಕೊಡಬೇಕೆಂದು ಯೋಚಿಸುತ್ತಾನೆ. ಈ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲ. ಈತನ ಕುಬುದ್ಧಿಯಂ ತಪ್ಪಿಸಲು ಗಯನೆಂಬ ಗಂಧರ್ವನ ಕಥೆಯನ್ನು ಹೇಳಿ ನಯ ಭಯಗಳಿಂದ ಬೋಧಿಸೋಣ' ಎಂದು ನಿಶ್ಚಯಿಸುತ್ತಿದ್ದನು. ತಪ್ಪು ಮಾಡಿದ ಗಯನಂತೆ ಪರ್ವತರಾಜನು ಪಡಬಾರದ ಕಷ್ಟಗಳನ್ನು ಎದುರಿಸಬೇಕಾದೀತು — ಎಂಬುದು ಈ ಪ್ರಸಂಗದ ಧ್ವನಿತಾರ್ಥ.

ಊ) ದಕ್ಷ ಪ್ರಜಾಪತಿಯಂ ಸಂಹರಿಸಲು ಕಾಲರುದ್ರನ ಜಟೆಯಿಂ ಪುಟ್ಟಿದ ಖಡ್ಗಧಾರಿಯಾದ ವೀರಭದ್ರನೋ ಎಂಬಂತೆ:

ದಕ್ಷಬ್ರಹ್ಮನು ಬೃಹಸ್ಪತಿಸವವೆಂಬ ಯಜ್ಞವನ್ನು ಆರಂಭಿಸಿ ದೇವತೆಗಳನ್ನೆಲ್ಲ ಕರೆದ. ಶಿವನನ್ನು ಕರೆಯಲಿಲ್ಲ. ದಾಕ್ಷಾಯಿಣಿಯು ಆಮಂತ್ರಣವಿಲ್ಲದೇ ಅಲ್ಲಿಗೆ ಹೋದಾಗ ಅವಮಾನಿತಳಾಗಿ ಹೋಮಕುಂಡಕ್ಕೆ ಹಾರಿ ಸುಟ್ಟುಹೋದಳು. ಈ ಸಮಾಚಾರವನ್ನು ನಾರದರ ಮೂಲಕ ಶಿವನು ಕ್ರೋಧಾಂಧನಾಗಿ ತನ್ನ ಜಟಾಜೂಟದಿಂದ ಒಂದು ಹಿಡಿ ಕೂದಲನ್ನು ಕಿತ್ತು ನೆಲದ ಮೇಲೆ ಎಸೆದ. ಕೂಡಲೇ ಭಯಂಕರಾಕಾರದಿಂದೊಪ್ಪುವ ವೀರಭದ್ರನು ಹುಟ್ಟಿದನು (ಭಾಗವತ ೪; ಸ್ಕಂದ ಪುರಾಣ ೨-೨)[27ಅ].

ಜಪಶಾಲೆಯ ಬಳಿ ಬಂದು ಶತ್ರುಗಳ ಭೇದಕ್ಕೆ ಸಿಲುಕಿದ ನಂದರಲ್ಲಿ ಜ್ಯೇಷ್ಠನಂದನು ವೀರಾವೇಶದಿಂದ ಹೋರಾಡಿದ ಪರಿಯನ್ನು ಹೇಳುವಾಗ ಈ ಉದಾಹರಣೆಯನ್ನು ಕೊಟ್ಟಿದೆ.

ಋ) ನಿವಾತ ಕವಚರೆಂಬ ಅಸುರ ಸಮೂಹವಂ ವಧಿಸಿ ತಂದೆಯಾದ ಸುರಪತಿಯನ್ನು ಕಾಣಬೇಕೆಂಬ ಇಚ್ಛೆಯಿಂದ ಬಂದ ಪಾರ್ಥನ ಕಥೆ:

ನಿವಾತ–ಕವಚರು ದೈತ್ಯರ ಒಂದು ಸಮೂಹ. ಪ್ರಹ್ಲಾದನ ವಂಶದವರು. ಇವರು ಯಾವಾಗಲೂ ಇಂದ್ರನನ್ನು ಪೀಡಿಸುತ್ತಿದ್ದರು. ಹಾಗಾಗಿ ಇಂದ್ರನ ಅಪೇಕ್ಷೆಯಂತೆ ಅರ್ಜುನನು ಇವರೊಂದಿಗೆ ಯುದ್ಧ ಮಾಡಿ ಇವರನ್ನು ಸಂಹರಿಸುತ್ತಾನೆ (ವನಪರ್ವ ೧೬೯-೧೭೨)[28].

ಈ ಅಸುರರ ಪ್ರಸ್ತಾಪವನ್ನು ಕವಿಯು ಎರಡು ಸಲ ಮಾಡಿದ್ದಾನೆ. (1) ಪಾಟಲೀಪುರದ ಮೇಲೆ ದಂಡೆತ್ತಿ ಬರುವ ಸೈನ್ಯದ ಬಗ್ಗೆ ರಾಕ್ಷಸನು ಕೇಳಿದಾಗ ಚಾರರು — ' ಶತ್ರುಸೇನಾ ಮುಂಭಾಗದಲ್ಲಿ ಕಿರಾತಾಧಿಪತಿಯು ··· ಅರ್ಜುನನ ಶರಾಘಾತದಿಂ ಮುರಿದು 'ಓಡಿ ನಷ್ಟರಾಗಿ ಪಿಶಾಚರೂಪಮಂ ತಾಳಿದ ನಿವಾತ ಕವಚರ ಗುಂಪೋ ಎಂಬಂತೆ ಬರುತ್ತಿಹುದು ಎಂಬಲ್ಲಿ ಒಂದು ಸಲ. (2) ಮೊದಲ ದಿನದ ರಾತ್ರಿ ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿದ ರಾಕ್ಷಸನನ್ನು ಹೊಗಳುತ್ತಾ — ' ತನ್ನ ದೇಹಶ್ರಮವನ್ನು ನೋಡದೇ ನಿವಾತಕವಚರೆಂಬ ಅಸುರ ಸಮೂಹವಂ ವಧಿಸಿ ತಂದೆಯಾದ ಸುರಪತಿಯಂ ಕಾಣಬೇಕೆಂಬ ಇಚ್ಛೆಯಿಂದ ಬರುತ್ತಿರುವ ಪಾರ್ಥನಂತೆ' ನಂದರ ಬಳಿ ಬರುತ್ತಿದ್ದನು ಎಂಬಲ್ಲಿ ಎರಡನೆಯ ಸಲ ಬಂದಿದೆ.

ಎ) ಪಾರ್ಥನ ಮನಸ್ಸನ್ನಪಹರಿಸಿದ ಉಲೂಪಿಯಂತೆ.

ನಾಗಕನ್ನಿಕೆಯಾದ ಉಲೂಪಿಯು ಕೌರವ್ಯನೆಂಬ ನಾಗರಾಜನ ಮಗಳು. ಧರ್ಮರಾಯ ಮತ್ತು ದ್ರೌಪದಿಯು 'ಏಕಾಂತದಲ್ಲಿದ್ದಾಗ ನೋಡಿದನೆಂಬ ಕಾರಣಕ್ಕಾಗಿ ಅರ್ಜುನನು ತೀರ್ಥಯಾತ್ರೆಗೆ ಹೋಗಿ ಗಂಗಾ ನದಿಯಲ್ಲಿ ಇವಳನ್ನು ಕಂಡು ಮೋಹಿಸಿ ಮದುವೆಯಾದನು (ಆದಿಪರ್ವ ೨೧೨-೨೬ ದಾಕ್ಷಿಣಾತ್ಯಪಾಠ)[29].

ಚಂದ್ರಗುಪ್ತನನ್ನು ಸಂಹರಿಸಲಿಕ್ಕಾಗಿ ರಾಕ್ಷಸನು ಕಳುಹಿಸಿದ್ದ ವಿಷಕನ್ಯೆಯನ್ನು ರಾಜಸಭೆಯಲ್ಲಿ ಪರಿಚಯಿಸುತ್ತಾ ಕ್ಷಪಣಕನು ಗೂಢಾರ್ಥದಲ್ಲಿ ಈಕೆ ವಿಷಕನ್ಯೆ ಎಂದು ತಿಳಿಸುವನು. ಅದನ್ನು ಅರ್ಥಮಾಡಿಕೊಂಡ ಚಾಣಕ್ಯನು ಆಕೆಯನ್ನು ಪರ್ವತರಾಜನಲ್ಲಿಗೆ ಕಳುಹಿಸಿಕೊಡುವನು.

ಎ) ಪುಲಸ್ತ್ಯಪುತ್ರನ ಕಾರ್ಯಕ್ಕೋಸ್ಗರ ಋಷಿವೇಷಮಂ ಧರಿಸಿ ಆಂಜನೇಯನನ್ನು ವಂಚಿಸಲು ಬಯಸಿದ ಕಾಲನೇಮಿಯ ದುರ್ದೆಶೆ:

ಕಾಲನೇಮಿಯು ರಾವಣನ ಸೋದರ ಮಾವನಾದ ಮಾರೀಚನ ಮಗ. ಹನುಮಂತನು ಲಕ್ಷ್ಮಣನನ್ನು ಬದುಕಿಸಲು ಸಂಜೀವಿನಿ ಲತೆಯನ್ನು ತರಲು ಚಂದ್ರದ್ರೋಣ ಪರ್ವತಕ್ಕೆ ಹೋದಾಗ, ರಾವಣನಿಂದ ಪ್ರೇರಿತನಾದ ಇವನು ಅಲ್ಲಿ ಹನುಮಂತನ ಕಾಲಹರಣ ಮಾಡಲು ತಾಪಸನ ವೇಷದಿಂದ ಕುಳಿತಿದ್ದನು. ಶಾಪಹತನಾದ ಗಂಧರ್ವನಿಂದ ಇವನ ವಿಷಯವನ್ನು ತಿಳಿದು ಹನುಮಂತನು ಇವನನ್ನು ಕೊಂದನು (ಅಧ್ಯಾತ್ಮ ರಾಮಾಯಣ ಯುದ್ಧಕಾಂಡ ೬೭ ನೇ ಸರ್ಗ)[30]

ರಾಕ್ಷಸನು ಪರ್ವತರಾಜನಿಗೂ ಅವನ ಬಳಿಯ ಅರಸುಗಳಿಗೂ ಅಂತ:ಕಲಹವುಂಟಾಗುವಂತೆ ವರ್ತಕರಿಗೆ ಕಾಗದಗಳನ್ನು ಬರೆದಿದ್ದನು. ಅಲ್ಲೇ ಬಳಿಯಲ್ಲಿ ಧ್ಯಾನಾರೂಢನಾಗಿ ಕುಳಿತಿದ್ದ ಇಂದುಶರ್ಮನು ವೇಗಶರ್ಮನ ಮೂಲಕ ಇದನ್ನು ಚಾಣಕ್ಯನಿಗೆ ತಿಳಿಸುವನು. ತನ್ನಿಂದಲೇ ಈ ಕೆಲಸವಾಯಿತೆಂದು ರಾಕ್ಷಸನು ಸಂದೇಹಪಟ್ಟನು. ಆದ್ದರಿಂದ ಎಚ್ಚರಿಕೆಯಿಂದಿರಬೇಕೆಂದು ಯೋಚಿಸುತ್ತಿದ್ದಾಗ ಮೇಲಿನ ನಿದರ್ಶನವನ್ನು

ನೆನಪಿಗೆ ತಂದುಕೊಂಡು ಕಾಲನೇಮಿಯ ದುರ್ದಶೆಯೇ ತನಗೂ ಉಂಟಾದೀತೆಂದು ಜಾಗರೂಕತೆಯಿಂದಿರುತ್ತಿದ್ದನು.

ಐ) ಮಾದ್ರಿಯನ್ನು ಕೂಡಿ ಸತ್ತ ಪಾಂಡುವಿನಂತೆ:

ಸ್ತ್ರೀ ಸಂಪರ್ಕವನ್ನು ಮಾಡಿದಾಗ ಸಾಯುವುದಾಗಿ ಕಿಂದಮ ಮುನಿಯ ಶಾಪವನ್ನು ಹೊತ್ತಿದ್ದ ಪಾಂಡುವು, ತನ್ನ ಹೆಂಡತಿಯರಾದ ಕುಂತಿ ಮತ್ತು ಮಾದ್ರಿಯರೊಡನೆ ಕಾಡಿನಲ್ಲಿದ್ದಾಗ, ಒಮ್ಮೆ ಮಾದ್ರಿಯನ್ನು ಕೂಡಿದಾಗ ಸತ್ತನು (ಆದಿಪರ್ವ ೧೨೪- ೧೨)[31].

ಕ್ಷಪಣಕನು ತಂದಿತ್ತ ಕನ್ಯೆಯನ್ನು ಪರೀಕ್ಷಿಸದೇ, ಕಾಮಾತುರದಿಂದ ಅವಳೊಂದಿಗೆ ಬೆರೆತು ಸತ್ತ ಪರ್ವತರಾಜನ ಬಗ್ಗೆ ಹೇಳುವಾಗ ಈ ಉದಾಹರಣೆಯನ್ನು ಕೊಟ್ಟಿದೆ.

ಒ) ವಿಪತ್ತು ಬಂದ ಕಾಲದಲ್ಲಿ ಅಭಿಮನ್ಯುವು ವಿರೋಧಿಗಳಂ ಸಂಹರಿಸಿ ವೀರಸ್ವರ್ಗ ಪಡೆದ ಕಥೆ:

ಅರ್ಜುನನಿಂದ ಸುಭದ್ರೆಯಲ್ಲಿ ಜನಿಸಿದವ ಅಭಿಮನ್ಯು. ಭಾರತ ಯುದ್ಧದಲ್ಲಿ ಕೃಷ್ಣಾರ್ಜುನರು ಸಂಶಪ್ತಕರೊಡನೆ ಯುದ್ಧ ಮಾಡುತ್ತಿದ್ದಾಗ ಕೌರವ ಸೇನೆಯ ಪದ್ಮವ್ಯೂಹವನ್ನು ಹೊಕ್ಕು ಭಯಂಕರ ಯುದ್ಧ ಮಾಡಿ ಕೌರವರನ್ನು ತತ್ತರಗೊಳಿಸಿದನು. ದುರ್ಯೋಧನನ ಮಗನಿಂದ ಸಂಹೃತನಾದನು (ದ್ರೋಣಪರ್ವ ಅಧ್ಯಾಯ ೩೮ ರಿಂದ ೪೦)[32].

ಶತ್ರುಗಳ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡ ಸಂದರು ಮೀರಿಹೋದ ಕಾರ್ಯಕ್ಕೆ ಮಿಡುಕಿ ಫಲವಿಲ್ಲ. ಅಭಿಮನ್ಯುವಿನಂತೆ ನಾವು ಹೋರಾಡಿ ವೀರ ಸ್ವರ್ಗವನ್ನು ಪಡೆಯೋಣವೆನ್ನುತ್ತಾರೆ.

ಓ) ವಿಶ್ವಾಮಿತ್ರನು ರಾಮಲಕ್ಷ್ಮಣರಿಂದ ಸುಬಾಹು ಮಾರೀಚರನ್ನು ಕೊಲ್ಲಿಸಿದ್ದು:

ಸುಬಾಹು — ಮಾರೀಚರು ರಾಕ್ಷಸರು. ತಾಟಕೆಯ ಮಕ್ಕಳಲ್ಲಿ ಸುಬಾಹು ಅಣ್ಣ, ಮಾರೀಚ ತಮ್ಮ. ವಿಶ್ವಾಮಿತ್ರನು ಸಿದ್ಧಾಶ್ರಮದಲ್ಲಿ ಯಾಗ ಮಾಡುತ್ತಿದ್ದಾಗ, ಮಾರೀಚನು ಆತನ ಯಾಗವನ್ನು ಹೊಲಸು ಮಾಡತೊಡಗಿದ್ದನು. ಆಗ ರಾಮನು ವಾಯವ್ಯಾಸ್ತ್ರವನ್ನು ಬಿಟ್ಟು ಆತನನ್ನು ಸಮುದ್ರದ ಆಚೆಗೆ ಎಸೆದನು. ಸುಬಾಹು ರಾಮನ ಆಗ್ನೇಯಾಸ್ತ್ರದಿಂದ ಸತ್ತನು (ರಾಮಾ.ಬಾ.ಕಾಂ. ಅಧ್ಯಾಯ ೩೦)[33].

ಔ) ಶುದ್ಧಕ್ಷತ್ರಿಯನಾಗಿದ್ದರೂ ದುರಾತ್ಮಕನಾದ ವೇಣರಾಯ:

ಅಂಗದೇಶಾಧಿಪತಿಯಾದ ಅಂಗನೆಂಬ ರಾಜನಿಂದ ಮೃತ್ಯುವಿನ ಮಾನಸಪುತ್ರಿಯಾದ ಸುನೀಥೆಯೆಂಬವಳಲ್ಲಿ ಹುಟ್ಟಿದವನು ವೇಣರಾಯ. ಇವನು ಕೇವಲ ನಾಸ್ತಿಕನಾಗಿದ್ದುದರಿಂದ ಪ್ರಜೆಗಳೆಲ್ಲರೂ ಸೇರಿ ಇವನನ್ನು ಕೊಂದರು (ಶಾಂತಿಪರ್ವ ೫೯:೯೩)[34] (ವಾಮನಪುರಾಣ ಅಧ್ಯಾಯ ೪೭) (ವಿಷ್ಣುಪುರಾಣ ೧-೧೩) (ಮತ್ಸ್ಯಪುರಾಣ ೮.೧೦).

ಚಾಣಕ್ಯನು ತಾನು ನಂದರನ್ನು ಸಂಹರಿಸಿದರೆ ಕ್ಷತ್ರಿಯ ಕುಲವು ನಾಶವಾಗುವುದೆಂದು ಯೋಚಿಸುವಾಗ, ಹಿಂದೆ ದುರಾತ್ಮಕನಾದ ವೇಣರಾಜನನ್ನು, ಆತನು ಶುದ್ಧಕ್ಷತ್ರಿಯನಾಗಿದ್ದರೂ ಋಷಿಗಳು ನಾಶಮಾಡಿದ್ದನ್ನು ನೆನಪಿಸಿಕೊಂಡು — ನಂದರನ್ನು ಸಂಹರಿಸುವುದು ಒಳ್ಳೆಯದು ಎಂದು ನಿರ್ಣಯವನ್ನು ಕೈಗೊಳ್ಳುತ್ತಾನೆ.

ಕ) ವೈಖಾನಸ ವೇಷದಿಂ ವಾತಾಶನರಂ ವಂಚನೆಗೊಳಿಸುವ ವಾತಾಪಿ ಇಲ್ವಲರು:

ಮಣಿಮತೀ ನಗರದ ನಿವಾಸಿಗಳಾದ ದೈತ್ಯ ಸಹೋದರರು. ಇಲ್ವಲ ಅಣ್ಣ. ವಾತಾಪಿ ತಮ್ಮ. ಇಲ್ವಲನು ಮಾಯೆಯಿಂದ ತನ್ನ ತಮ್ಮನಾದ ವಾತಾಪಿಯನ್ನು ಆಡು ಅಥವಾ ಕುರಿಯನ್ನಾಗಿ ಮಾಡುತ್ತಿದ್ದ. ಇಲ್ವಲನು ಆ ಕುರಿ ಅಥವಾ ಆಡನ್ನು ಕಡಿದು ಮಾಂಸ ಮಾಡಿ ಯಾವುದಾದರೂ ಬ್ರಾಹ್ಮಣನಿಗೆ ತಿನ್ನಿಸುತ್ತಿದ್ದ. ಇಲ್ವಲನಲ್ಲಿ ಸತ್ತ ಪ್ರಾಣಿಯನ್ನು ಕರೆದು ಬದುಕಿಸುವ ಶಕ್ತಿಯಿತ್ತು. ಅವನು ವಾತಾಪಿಯನ್ನು ಕರೆಯುತ್ತಿದ್ದ. ಆಗ ಆ ಬಲಿಷ್ಠನಾದ ದೈತ್ಯನು ಬ್ರಾಹ್ಮಣನ ಹೊಟ್ಟೆಯನ್ನು ಸೀಳಿಕೊಂಡು ನಗುತ್ತಾ ಹೊರ ಬರುತ್ತಿದ್ದ (ಆದರೆ ಅಗಸ್ತ್ಯರು ಆತನನ್ನು ಜೀರ್ಣಿಸಿಕೊಂಡುಬಿಟ್ಟರು). (ವನಪರ್ವ ೯೬:2-೧೨)[35].

ಶತ್ರುಪಲಾಯನ ಜಪಶಾಲೆಗೆ ನಂದರನ್ನು ಕರೆತರಲು ಹೊರಟ ಮೌನೋಪವಾಸಿಯ ಶಿಷ್ಯರು ಕಾಪಟ್ಯವನ್ನು ಅಭಿನಯಿಸಿ ಹೋಗುತ್ತಿದ್ದರು ಎಂಬಲ್ಲಿ ಈ ಉದಾಹರಣೆಯನ್ನು ಕೊಟ್ಟಿದೆ.

ಖ) ಶಾಪರೂಪದಿಂದ ಪುರೂರವನನ್ನು ಮೋಹಗೊಳಿಸಲು ಭೂಲೋಕಕ್ಕೆ ಬಂದ ಊರ್ವಶಿಯಂತೆ:

ಒಮ್ಮೆ ಇಂದ್ರಸಭೆಯಲ್ಲಿ ಭರತಮುನಿಯು 'ಏರ್ಪಡಿಸಿದ 'ಲಕ್ಷ್ಮೀಸ್ವಯಂವರ' ನಾಟಕದಲ್ಲಿ ಊರ್ವಶಿಯು ಲಕ್ಷ್ಮಿಯ ಪಾತ್ರವನ್ನು ವಹಿಸಿದ್ದಳು. 'ನೀನು ಯಾರನ್ನು ವರಿಸುವೆ?' ಎಂದು ಕೇಳಿದ ಪ್ರಶ್ನೆಗೆ ಊರ್ವಶಿಯು 'ಪುರುಷೋತ್ತಮ' ಎನ್ನುವುದಕ್ಕೆ ಬದಲಾಗಿ ಪುರೂರವನ ಹೆಸರನ್ನು ಹೇಳುವಳು. ಕೋಪಗೊಂಡ ಭರತಮುನಿಯು ಇವಳನ್ನು ಭೂಲೋಕಕ್ಕೆ ಹೋಗುವಂತೆ ಶಪಿಸಿದನು. ಅದರಂತೆ ಆಕೆ ಭೂಲೋಕಕ್ಕೆ ಬಂದು ಪುರೂರವನನ್ನು ಮದುವೆಯಾದಳು (ಆದಿಪರ್ವ ೭೫:೨೪-೨೫)[36].

ಚಂದ್ರಗುಪ್ತನನ್ನು ಸಂಹರಿಸಲು ರಾಕ್ಷಸನು ಕ್ಷಪಣಕನ ಮೂಲಕ ವಿಷಕನ್ಯೆಯನ್ನು ಕಳುಹಿಸಿ ಕೊಟ್ಟಾಗ — ಚಾಣಕ್ಯನು ಆ ಕನ್ಯೆಯ ಸೌಂದರ್ಯವನ್ನು ನೋಡಿ ಕ್ಷಪಣಕನ ವೇಷ ಧರಿಸಿ ಬಂದ ತನ್ನ ಮಿತ್ರನಾದ ಇಂದುಶರ್ಮನಲ್ಲಿ ಊರ್ವಶಿಯಂತಿರುವ ಈಕೆ ಯಾರೆಂದು ಪ್ರಶ್ನಿಸಿ ಅವಳ ಪೂರ್ವೋತ್ತರ ಕೇಳುತ್ತಾನೆ.

ಗ) ಶಿಬಿಯ ಕಥೆ:

ಶಿಬಿಯು ಚಂದ್ರವಂಶದ ದೊರೆ. ಮೊರೆಹೊಕ್ಕವರನ್ನು ಕಾಪಾಡುವುದು ಅವನ ವ್ರತವಾಗಿತ್ತು. ಒಮ್ಮೆ ಇಂದ್ರಾಗ್ನಿಗಳು ಇವನನ್ನು ಪರೀಕ್ಷಿಸಲು ಗಿಡುಗ — ಪಾರಿವಾಳಗಳ ರೂಪವನ್ನು ತಳೆದು ಬಂದರು.

ಪಾರಿವಾಳ ಶಿಬಿ ಮಹಾರಾಜನ ಮೊರೆಹೊಕ್ಕಿತು. ಗಿಡುಗ ತನ್ನ ಆಹಾರವನ್ನು ಬಿಟ್ಟುಕೊಡುವಂತೆ ಕೇಳಿತು. ಆಗ ರಾಜನು ಗಿಡುಗನಿಗೆ ತನ್ನ ದೇಹದಿಂದ ಪಾರಿವಾಳದ ತೂಕದ ಮಾಂಸವನ್ನು ತೆಗೆದುಕೊಳ್ಳುವಂತೆ ಹೇಳಿದನು. ಇದನ್ನು ಮೆಚ್ಚಿದ ಇಂದ್ರಾದಿಗಳು ಇವನಿಗೆ ಅನೇಕ ವರಗಳನ್ನು ಕೊಟ್ಟರು (ವನಪರ್ವ ೧೯೭=೨೬-೩೮)[37].

ರಾಕ್ಷಸನ ಮಿತ್ರನಾದ ಚಂದನದಾಸನಲ್ಲಿ ಆತನ ಪತ್ನೀ ಪುತ್ರರಿದ್ದರು. ಗೂಢಚಾರರ ಮೂಲಕ ಈ ವಿಷಯವನ್ನು ತಿಳಿದ ಚಾಣಕ್ಯನು ರಾಕ್ಷಸನ ಪತ್ನೀಪುತ್ರರನ್ನು ತನ್ನ ವಶಕ್ಕೆ ಒಪ್ಪಿಸುವಂತೆ ಚಂದನದಾಸನಿಗೆ ಆದೇಶಿಸುವನು. ಅದಕ್ಕೆ ಆತ ಒಪ್ಪದಿದ್ದಾಗ ಮರಣದಂಡನೆಯ ಶಿಕ್ಷೆ ವಿಧಿಸುವನು. ಇದನ್ನು ತಿಳಿದ ರಾಕ್ಷಸನು ಅವನನ್ನು ಬದುಕಿಸಲು ತಾನೇ ಚಾಣಕ್ಯನಲ್ಲಿಗೆ ಬರುವನು. ಸ್ಥಿರ ಮನಸ್ಸಿನಿಂದ ತನ್ನ ಮಿತ್ರನಿಗಾಗಿ ಜೀವವನ್ನೇ ಕೊಡಲು ತಯಾರಾದ ಬಳೆಗಾರಶೆಟ್ಟಿ ಚಂದನದಾಸನನ್ನು ಚಾಣಕ್ಯನು ಶಿಬಿ ಚಕ್ರವರ್ತಿಗೆ ಹೋಲಿಸಿ ಸನ್ಮಾನಿಸುವನು.

ಥ) ಸರ್ಪ ಯಾಗದಲ್ಲಿ ಶರಣಾಗತನಾದ ತಕ್ಷಕನನ್ನು ತ್ಯಜಿಸಿ ದೇವೇಂದ್ರನು ಕ್ಷೇಮಿಯಾದಂತೆ:

ತಕ್ಷಕನು ಪರೀಕ್ಷಿತ ಮಹಾರಾಜನನ್ನು ಕಚ್ಚಿಕೊಂದನು. ಇದರಿಂದ ಕೋಪಗೊಂಡ ಜನಮೇಜಯನು ಸರ್ಪ ಯಾಗವನ್ನು ಮಾಡಿದನು. ತಕ್ಷಕನು ಇಂದ್ರನ ಮೊರೆಹೊಕ್ಕನು. ಆ ಸಮಯದಲ್ಲಿ ಇಂದ್ರಮಿತ್ರನಾದ ತಕ್ಷಕನಿಂದ ಈತನ ರಕ್ಷಣೆಯಾಯಿತು (ಆದಿಪರ್ವ ೫೮.೨೮) (ದೇವಿ ಭಾಗವತ ನವಮ ಸ್ಕಂಧ)[38].

ಯುದ್ಧಮಧ್ಯದಲ್ಲಿ ರಾಕ್ಷಸನು ಪರ್ವತರಾಜನನ್ನು ಭೇದಿಸಲು ನಿಯೋಗಿಯನ್ನು ಪರ್ವತ ರಾಜನ ಬಳಿ ಕಳುಹಿಸುತ್ತಾನೆ. ಆ ನಿಯೋಗಿಯ ಮಾತಿಗೆ ಒಪ್ಪಿ ಪರ್ವತರಾಜನು ಚಂದ್ರಗುಪ್ತನನ್ನು ರಾಕ್ಷಸನ ವಶ ಕೊಡುವ ವಿಚಾರವಾಗಿ ಚುರವರ್ಮನಲ್ಲಿ ಪ್ರಸ್ತಾಪಿಸುತ್ತಾನೆ. ಆಗ ಆತ ಮೇಲಿನ ಉದಾಹರಣೆಯನ್ನು ಕೊಟ್ಟು ಶರಣಾಗತರನ್ನು ಬಿಟ್ಟುಕೊಡುವುದು ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದು ಹೇಳುತ್ತಾನೆ (ಆದರೆ, ಮಹಾಭಾರತದಲ್ಲಾಗಲೀ, ದೇವಿ ಭಾಗವತದಲ್ಲಾಗಲೀ, ದೇವೇಂದ್ರನು ತಕ್ಷಕನನ್ನು ತ್ಯಜಿಸಿ ಕ್ಷೇಮಿಯಾದ ಬಗ್ಗೆ ಪ್ರಸ್ತಾಪ ಕಾಣಸಿಗುವುದಿಲ್ಲ).

ದ) ಹೈಹಯರೆಂಬ ದುಷ್ಟ ಕ್ಷತ್ರಿಯರನ್ನು ಭೃಗುವಂಶದ 'ಔರ್ವ ಋಷಿಯು ತನ್ನ ದೃಷ್ಟಿಯಿಂದಲೇ ನಾಶಮಾಡಿದ್ದು:

ಹೈಹಯ — ಕ್ಷತ್ರಿಯರ ಒಂದು ಕುಲ. ಹೈಹಯ ರಾಜನಾದ ಕಾರ್ತವೀರ್ಯಾರ್ಜುನನು ಜಮದಗ್ನಿಯನ್ನು ಕೊಂದುದರಿಂದ ಕ್ರೋಧಭರಿತನಾದ ಪರಶುರಾಮನು ಮಾಹಿಷ್ಮತಿಗೆ ಹೋಗಿ ಅವನ ಸಾವಿರ ತೋಳುಗಳನ್ನು ಮುರಿದು ಅವನ ಸೈನ್ಯವನ್ನು ಧ್ವಂಸಗೊಳಿಸಿದನು (ಸಭಾಪರ್ವ ೨೮.೨೯ ದಾಕ್ಷಿಣಾತ್ಯಪಾಠ)[39] (ಬ್ರಹ್ಮಾಂಡ ಪುರಾಣ ಅಧ್ಯಾಯ ೮೨)

ಅಶನಾರ್ಥಿಯಾಗಿ ಬಂದ ತನ್ನನ್ನು ಅವಮಾನಿಸಿದ ನಂದರನ್ನು ಕೊಲ್ಲುವುದಾಗಿ ಚಾಣಕ್ಯನು ಪ್ರತಿಜ್ಞೆ ಮಾಡುವಾಗ ಪರಶುರಾಮನು ದುಷ್ಟ ಕ್ಷತ್ರಿಯರನ್ನು ಸಂಹರಿಸಿದ್ದನ್ನು ನೆನಪು ಮಾಡಿಕೊಳ್ಳುವನು. ಪರ್ವತರಾಜನಲ್ಲಿ ತಾನು ಮಾಡಿದ ಶಪಥದ ವಿಚಾರವನ್ನು ಹೇಳುವಾಗಲೂ ಸಹ ಪರಶುರಾಮನಂತೆ ತಾನು ಹುಂಕಾರ ಮಾತ್ರದಿಂದಲೇ ನವನಂದರನ್ನು ನಾಶ ಮಾಡುವುದಾಗಿ ಹೇಳುವನು.

<u>ಅಷ್ಟದಶ ವರ್ಣನೆಗಳು:</u> 'ಮುದ್ರಾಮಂಜೂಷ' ದಲ್ಲಿ ಅಷ್ಟಾದಶ ವರ್ಣನೆಗಳು ಬಂದಿವೆ. ಮುದ್ರಿತ ಪ್ರತಿಯ ಸಂಪಾದಕರು ಅತಿಯಾದ ವಿವರಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಅವುಗಳನ್ನು ಕೈಬಿಟ್ಟಿದ್ದರು. ಆ ಮುದ್ರಿತ ಪ್ರತಿಯನ್ನೇ ನೋಡಿದ ಶ್ರೀ ಎಚ್.ಎಂ. ಶಂಕರನಾರಾಯಣ ರಾವ್ ಅವರು — 'ಕೆಂಪು ನಾರಾಯಣನು ಅಷ್ಟಾದಶ ವರ್ಣನೆಗಳಿಂದ ಕೂಡಿದ ಮಹಾಕಾವ್ಯವನ್ನು ರಚಿಸಲು ಹೊರಟವನಲ್ಲ.' ಎಂದಿದ್ದಾರೆ[40]. ಡಾ: ಶ್ರೀಕಂಠ ಕೂಡಿಗೆಯವರು "ಪೂರ್ವಕವಿಗಳ ರೀತಿಯಲ್ಲಿ ಹದಿನೆಂಟು 'ಆಶಯ' ಗಳ ಅಧ್ಯಾಯ ವಿಂಗಡಣೆ ಇದ್ದರೂ ಅಷ್ಟಾದಶ ವರ್ಣನೆಯ ಸಾಹಸ ಮಾಡಿಲ್ಲ "[41] ಎಂದಿದ್ದಾರೆ. ಆದರೆ ಈ ಅಭಿಪ್ರಾಯಗಳು ಸರಿಯಲ್ಲ. 'ಗದ್ಯಕಾವ್ಯಗಳು ಚಮತ್ಕಾರದಿಂದ ತುಂಬಿ, ಅಂಗಾಂಗಗಳಲ್ಲಿ ಆಭರಣಗಳು ನಿಬಿಡವಾಗಿ ತುಂಬಿರುವ ಪ್ರತಿಮೆಯಂತೆ, ಚಿಗುರು ಊರುವುದಕ್ಕೂ ಸ್ಥಳವಿಲ್ಲದ ಹಾಗೆ ಸಣ್ಣ ಕೆತ್ತನೆಯ ಕೆಲಸ ಮಾಡಿದ ಕಟ್ಟಡದ ಹಾಗೆ ಇರಬೇಕೆಂದು ಗದ್ಯ ಲೇಖಕರು ಯೋಚಿಸಿದ್ದಂತೆ ತೋರುತ್ತದೆ[42]. ಎಂಬ ಎ.ಆರ್. ಕೃಷ್ಣ ಶಾಸ್ತ್ರಿಗಳ ಮಾತು ಕೆಂಪುನಾರಾಯಣನಿಗೂ ಅನ್ವಯವಾಗುತ್ತದೆ. ಇದನ್ನು ಸಾರ್ಥಕಪಡಿಸಲು ಆತ ಅಷ್ಟಾದಶ ವರ್ಣನೆಗಳನ್ನು ತಂದಿದ್ದಾನೆ, ಉದಾಹರಣೆಗಾಗಿ ಈ ಕೆಳಗಿನವುಗಳನ್ನು ಗಮನಿಸ ಬಹುದು:—

<u>1. ನಗರವರ್ಣನೆ:</u> ಮಹಾಕಾವ್ಯದ ಲಕ್ಷಣದಂತೆ ಕವಿಯು ಅವತರಣಿಕೆಯನ್ನು ಹೇಳಿ ಮತ್ತೆ ಗೌಡ ದೇಶದ ರಾಜಧಾನಿಯಾದ ಪಾಟಲೀಪುರವನ್ನು ಹೀಗೆ ದೀರ್ಘವಾಗಿ ವರ್ಣಿಸಿದ್ದಾನೆ.

ಶ್ರೀಮತ್ ಕೈಲಾಸವಾಸಿಯಾಗಿ ನಿಖಿಳ ಸುರಾಸುರ ಮಕುಟಮಣಿ ಕಿರಣ ನೀರಾಜಿತ ಪಾದಾರವಿಂದದಿಂ ಶೋಭಿಸುವ ಶ್ರೀ ಗಿರಿಜಾಕಾಂತನ ಶಿರೋಭೂಷಣ ಚಂದ್ರ ಚಂದ್ರಿಕಾ ನಿಸ್ಸೃತ ಸುಧಾಸಾರ ಸೀಕರನಿಕರಗಳಂತೆ 1 ಕ್ಷೀರಾಂಬುಧಿಯ ಯಶೋರಾಶಿಗಳೇ ಯೆಂಬಂತೆ 1 ನಾರಾಯಣನಾಭೀ ಪುಂಡರೀಕ ಮೃಣಾಳ ವಲಯ ಸಂತಾನಗಳೋ ಯೆಂಬಂತೆ 1 ಧವಳ ಗುಣಾಕರವಾಗಿ ನೆನೆದವರಂ ತನ್ನಂತೆ ಮಾಡುತ ಪರಮ ಪಾವನಂಗಳಾದ 1 ತರಂಗ ಮಾಲಾಶ್ಲೇಷದಿಂ ರುಚಿರ ಧವಳೋತ್ಕ್ಷೇಪಣದಿಂ ತೋರುವ ಜಟಾಮಂಡಲದಿಂದುದ್ಭವಿಸಿ 1 ಭೂಮಂಡಲವನ್ನಲಂಕರಿಸುತ್ತ ನೀಲಾಂಬರ ಶೋಭಿತನಾದ ಬಲದೇವನ ತನುಚ್ಛವಿಯಂತೆ 1 ಕಾಳಿಂದೀ ಕಲ್ಲೋಲಂಗಳಿಂ ಕೂಡಿ ಲೋಕಹಿತಾರ್ಥವಾಗಿ ಪ್ರಯಾಗ ಕಾಶೀಕ್ಷೇತ್ರಂಗಳಂ ಪವಿತ್ರಮಂಗೆಯ್ದು ಗೌಡ ದೇಶಾಭಿಮುಖವಾಗಿ ಪ್ರವಹಿಸುತ್ತಿರುವ ಗಂಗಾನದಿಯೆಂಬ ಅಗಳಿನಿಂದಲೂ 1 ಮಂದರ ಶಿಖರಗಳಂತೆ ಅತ್ಯುನ್ನತಂಗಳಾದ ಕೊತ್ತಲಂಗಳಿಂ ಕೂಡಿ ಶೋಭಿಸುತ್ತಿರುವ ಕೋಟೆಯಿಂದಲೂ 1 ಸಮುದ್ರದಂತೆ ಸಕಲ ರತ್ನಾವಾಸಭೂತ

ವಾದ ಅಂಗಡಿಬೀದಿಗಳಿಂದಲೂ 1 ಪೂರ್ವಾಚಲ ಶಿಖರಗಳಂತೆ ಅಂತರಿಕ್ಷವಂ ಚುಂಬಿಸುವ ಪ್ರಾಸಾದ ಚಿತ್ರಶಾಲಾ ಪಂಙ್ತಿಗಳಿಂದಲೂ 1 ಕನಕ ರತ್ನ ಚಿತ್ರತಮವಾದ ರಾಜಭವನದಿಂದಲೂ 1 ಮಯೂರಪಿಂಛ ಪಿಶಂಗ ವರ್ಣಗಳಾದ ಮರಕತ ಮಣಿಖಚಿತ ಜಗುಲಿಗಳಿಂದಲೂ 1 ಉಪವನ ಕುಸುಮಧೂಳಿಧೂಸರಿತ ರಾಜ ಮಾರ್ಗಗಳಿಂ 1 ಹಂಸ ಕಾರಂಡ ವಿಶ್ರುತ ರಮಣೀಯವಾದ ಕಮಲ ಕುವಲಯ ಕಲ್ಹಾರ ನಿಕರ ನಿಬಿಡಮಾಗಿ ಮಧುರೋದಕ ಮುಳ್ಳ ಸ್ಫಟಿಕ ಸರೋವರಗಳಿಂ 1 ಕಾಮಿನೀಜನ ತನುಕಾಂತಿ ಭೂಷಣ ಮಣಿ ಪ್ರಭೆಗಳಿಂ 1 ಇಂದ್ರ ಚಾಪ ತೋರಣಾಲಂಕೃತವಾದಂತೆ 1 ಕಂಗೊಳಿಸುವ ಹರ್ಮ್ಯಸ್ಥಳಗಳಿಂ 1 ಅನೇಕ ಶುಕಶಾರಿಕಾ ನಿನದಯುತ ಮಧುಕರ ಝೇಂಕಾರ ಗೀತಾನುಸಾರಮಾದ ಮಯೂರ ತಾಂಡವಾವಲೋಕನ ಪ್ರಮುದಿತ ಗಾಢ ನಿತಂಬಿನೀ ಚರಣಾಲಕ್ತಕ ರಸರಂಜಿತಮಾಗಿ ಬಹು ಕುಸುಮ ನಿಕರಾಕೀರ್ಣವಾದುದರಿಂ ಚಿತ್ರವರ್ಣಾಸ್ತರಗಳಂತೆ ರಂಜಿಸುವ ಲತಾಗೃಹಭೂಭಾಗಗಳಿಂ ಶೋಭಿಸುವ ಪ್ರಮದಾವನಗಳಿಂದಲೂ 1 ಬಹು ಪನ್ನಗ ಕುಲ ಭೂಷಣ ಮಾದ ಮಂದರ ಗುಹೆಗಳಂತೆ 1 ಶತ್ರು ಭಯಂಕರಮಾದ ಆಯುಧಶಾಲೆಗಳಿಂ 1 ಬಹುಕನಕರತ್ನ ರಾಶಿಗಳಿಂ ರಂಜಿತಮಾದ ಮೇರುತಪದೇಶದಂತಿಪ್ಪ ಕೋಶ ಗೃಹಗಳಿಂ 1 ಸಮಯಮಂ ನಿರೀಕ್ಷಿಸುತ ಸಾಧುವಿನೀತರಾದ ಸಾಮಂತ ನರಪತಿ ಮಕರವತ್ರ ನರಪತಿ ಕಿರೀಟ ಪ್ರಭಾಚಿತ್ರಿತಮಾದ ರಾಜಾಸ್ಥಾನ ಮಂಟಪದಿಂ ಸಕಲ ವೇದ ವೇದಾಂಗ ತತ್ತ್ವರಹಸ್ಯಾನುಲೋಕನ ನಿರ್ಮಲಮತಿಯುತರಾದ ಭೂಸುರಸ್ತೋಮದಿಂ ನಿರಂತರಾಕಾಶ್ರಿತ ನೇತು ಕೂಪಾರಾಮ ಪ್ರಸಾದ ಸೌಧ ಪ್ರತಿಷ್ಠಾ ಖ್ಯಾತರಾದ ಸುಕೃತಿಜನಗಳಿಂ 1 ಸವಿಲಾಸಾವಲೋಕನ ಮದನ ಶರಪ್ರಹಾರ ವಿಹ್ವಲ ವಿಟಜನ ಸಹಸ್ರ ಪರಿವೃತ ವರಾಂಗನಾ ನಿಕುರುಂಬದಿಂ 1 ವಂದಿಮಾಗಧ ಗೀಯ ಮಾನ ಬಹುವಿಧ ಬಿರುದ ಪ್ರಬಂಧ ಘೋಷಾಕರ್ಣನ ಪ್ರಮುದಿತ ನರಪತಿ ಸಹಸ್ರಾತಪತ್ರ ಛಾಯೆಗಳಿಂದತಿ ಶೀತಳಮಾದ ಗುಹಾರಾಜಗೃಹದ್ವಾರ ಭೂಭಾಗದಿಂ ಶೋಭಿಸುತ ಪ್ರಬುದ್ಧ ಸರ್ವಲೋಕಯುತವಾದುದರಿಂ ಪ್ರಭಾತ ಸಮಯದಂತೆ 1 ಕ್ರತುಶತ ಧೂಮಮಹೋತವಾದುದರಿಂ ಸುರಾಧಿಪಮೂರ್ತಿಯಂತೆ ಬಹುಜೀವನಾ ಧಾರವಾದುದರಿಂದ ವರುಣಾಲಯದಂತೆ 1 ಭೋಗವತಿಯಂತೆ ಪ್ರಮುದಿತ ಭುಜಂಗ ನಿಕರಯುತಮಾಗಿ ಮೇರು ಶಿಖರದೇಶದಂತೆ ಬಹುದೇವತಾಯತನ ಶೋಭಿತಮಾಗಿ ಸಮುದ್ರಮಥನ ಸಮಯದಂತೆ ತೂರ್ಯ ಮಹಾಘೋಷಪೂರಿತಮಾಗಿ ರಾಜ್ಯಾಭಿಷೇಕ ಸಮಯದಂತೆ 1 ಕನಕಕಲಶ ಸಹಸ್ರ ಶೋಭಿತವಾಗಿ ಹರಿಕಥೆಯಂತೆ 1 ಅನೇಕ ಬಾಲಾಕ್ರೀಡಾ ರಮಣೀಯವಾಗಿ ನಂದನವನ ಲಕ್ಷ್ಮಿಯಂತೆ 1 ಅವಿಚ್ಛಿನ್ನ ಸಂತಾನ ಸಂಪತ ಸಮೃದ್ಧಮಾಗಿ ಗಗನಾಭೋಗದಂತೆ ದ್ವಿಜರಾಜ ಸುರಸರಿತ್ಸಜ್ಜನ ನಿಕರ ಸಮೇತವಾಗಿ ಅವಿಚ್ಛಿನ್ನ ಮದೋದಕ ಧಾರೆಗಳಿಂ ವರ್ಷಿಸುವ ಕರಿಘಟೆಗಳೆಂಬ ಮೇಘಮಂಡಲದಿಂ ಕನಕಪ್ರಭೆಯಂತೆ ಶೋಭಿಸುವ ವಾರವಿಲಾಸಿನೀ ತನುಲತೆಗಳೆಂಬ ಮಿಂಚುಗಳಿಂ ಬಹುಸಾಹಸಿಗಳಾದ ಅಶ್ವಾರೂಢ ನರಪತಿ ಸಹಸ್ರ ಮಣಿಶೇಖರ ಪ್ರಭಾನಿಕರಗಳೆಂಬ ಇಂದ್ರಚಾಪಗಳಿಂ ಸಮಯೋತಿಪಾತ ಶಂಕಾಯುತರಾಗಿ ರಥದಿಂದಿಳಿದು ಬರುವ ರಥಿಕಸಮೃದ್ಧ ಸಂಕ್ಷೋಭೆಯಿಂ ಜಗುಳುತಿರುವ ಮುಕ್ತಾಹಾರ ಮಣಿನಿಕರಗಳೆಂಬ ವರುಷಬಿಂದುಗಳಿಂದ ವರುಷಾಕಾಲವೆಂದದಿಂ ತೋರುವ ಪಾಟಲೀಪುರವೆಂಬ ರಾಜಧಾನಿಯು ಗೌಡದೇಶಗಳಲ್ಲಿ ಕಂಗೊಳಿಸುತ್ತಿದ್ದುದು.

2. ಸ್ತ್ರೀ ವರ್ಣನೆ: ಸರ್ವಾರ್ಥಸಿದ್ಧಿರಾಯನ ಪತ್ನಿಯಾದ ಸುನಂದಾದೇವಿಯ ವರ್ಣನೆ ಹೀಗಿದೆ:

ನಾನಾವರ್ಣಗಳಿಂ ಭಾಸಮಾನವಾದ ಇಂದ್ರಚಾಪದ ಮಧ್ಯದಲ್ಲಿ ತೋರುವ ಕುಡಿಮಿಂಚಂತೆ ನಿಜಾಭರಣ ಮಣಿಪ್ರಭಾ ಪಟಲ ಮಧ್ಯದಲ್ಲಿ ಸಂಚರಿಸುತ್ತಿರುವ ಕನಕಪುತ್ಥಳಿಯೋ ಎಂಬಂತೆ ನೂಪುರ ಧ್ವನಿಯನನುಸರಿಸಿ ಬರುವ ಗೃಹಹಂಸೆಗಳಿಂ ನಿಜಚರಣತಳಪ್ರಭೆಯಿಂ ಕುಂಕುಮರಸ ಪಂಕಮಗ್ನ ಪಕ್ಷಿಗಳುಳ್ಳವಂತೆ ಮಾಡುತ ಸುರುಚಿರ ವಜ್ರ ಶಲಾಕೆಗಳಂತೆ ತೋರುವ ಚರಣ ನಖಕಾಂತಿಯಿಂ ಶೋಭಿಸುತ್ತ ಅತಿಧವಳಚಂದ್ರಿಕಾ ನಿಕರದಿಂ ಶೋಭಿಸುವ ಶರತ್ಕಾಲ ದಿವಸಲಕ್ಷ್ಮಿಯಂತೆ ಬಹು ಸುವರ್ಣ ಬಿಂದುಗಳಿಂ ಚಿತ್ರಿತವಾಗಿ ಅತಿಶುಭ್ರಮಾದ ಕೌಶೇಯ ವಸ್ತ್ರಾನ್ವಿತಳಾಗಿ ಅತಿ ಗುರು ನಿತಂಬ ಜಘನ ಭಾಗಗಳಲ್ಲಿ [redacted] ಮಂಜೂರದಿಂಧಕ ಕಲಾಪದಂತೆಸೆವ ಕಾಂಚೀಧಾಮ ಮರಕತ ಮಣಿನಿಕರ ಕಿರಣಗಳಿಂ ದೂರ್ವಾಂಕುರ ಬುದ್ಧಿಯಿಂ ಜಿಹ್ವಾಪಲ್ಲವದಿಂ ಪ್ರಸರಿಸುತಿಪ್ಪ ಗೃಹಹರಿಣಶಿಶುಗಳಿಂ ಗತಿನಿರೋಧ ಕುಪಿತ ಚಾಮರಗ್ರಾಹಿಣಿ ಕರಾತ ಚಾಮರ ಯುಗ್ಮದಿಂ ವಿಜಿತ (ವೀಜಿತ?)ಳಾಗಿ ಲೋಕವಿಜಯ ಖ್ಯಾತನಾದ ಕುಸುಮಶರನಿಂ ಲಿಖಿತವಾದ ವಿಜಯ ವರ್ಣಾವಳಿ ಪಂಕ್ತಿಯಂತೆ ತೋರುವ ರೋಮರಾಜಿಯಿಂ ಮಧುಕರ ನಿಕರಯುತವಾದ ಮಾಲತೀಲತೆಯಂತೆ ಕಂಗೊಳಿಸುತ್ತ ವಲಯ ವಜ್ರಮಣಿಕಿರಣ ನಿಕರವೆಂಬ ಪಂಜರ ಮಧ್ಯದಲ್ಲಿ ಶೋಭಿಸುವ ಶುಕಾಲಾಪವನಾಲಿಸುತ ಮದನ ರಾಜ್ಯಾಭಿಷೇಕ ಕನಕ ಕಲಶಗಳಂತೆ ಒಪ್ಪುವ ಕುಚಭಾಗದಿ ಹೊಳೆ ಹೊಳೆವ ಮುಕ್ತಾಹಾರ ಕಾಂತಿಯಿಂ ತಾರಾನಿಕರಗಳಿಂ ಸುತ್ತಿದ ಮೇರು ಶಿಖರ ವನಲಕ್ಷ್ಮಿಯಂತೆ ಒಪ್ಪುತ ಪೂರ್ಣಚಂದ್ರ ಚಂದ್ರಿಕಾನಿಕರದಂತಿಪ್ಪ ಮುಗುಳುನಗೆಯಿಂ ಸಜ್ಜನನೇತ್ರ ಕುವಲಯಗಳಂ ಸಂತೋಷಪಡಿಸುತ್ತಾ ಲಾವಣ್ಯಸಮುದ್ರ ಮಧ್ಯದುದ್ಭವಿಸಿದ ಪವಳದ ಚಿಗುರಂತೆ ರಂಜಿಸುವ ಅಧರ ಕಾಂತಿಯಿಂ 1 ಕೆಂಪಡರಿದ ಮುತ್ತಿನ ಚಿಪ್ಪಿನಂತೆ ಶೋಭಿಸುವ ಕಪೋಲಗಳಿಂ ಸೌಂದರ್ಯ ಲಕ್ಷ್ಮೀನಿವಾಸವಾದ ಕಮಲಗಳಂತೆಸೆವ ನೇತ್ರಕಾಂತಿಯಿಂ ಭುವನದೇಶವಂ ನೀಲೋತ್ಪಲ ಮಾಲಾಲಂಕೃತಗಳಂತೆ ಮಾಡುತ ಸಕಲಪುಷ್ಪ ಮಧು ಪಾನವಂ ಗೈದ ಮಧುಕರನೊಡನೆ ವಿರೋಧವಂ ತ್ಯಜಿಸಿದ ಚಿಕುರಬಂಧನಯೋಜನೆ ಮುನಿದಿಹ ಚಂಪಕಾ ಕುಟ್ಮಲವಂ ವಿಡಂಬಿಸುವ ರೋಹಿಣೀ ನಕ್ಷತ್ರದಂತೆಸೆವ ನಾಸಾಮೌಕ್ತಿಕದಿಂ ಶೋಭಿಸುತ ಕರ್ಣಾವತಂಸ ನೀಲೋತ್ಪಲ ಕುಸುಮ ನಿಷ್ಯಂದ ಮಕರಂದ ಬಿಂದುಗಳ ಹೋಲುವ ಮಣಿಖಚಿತ ತಾಟಂಕಯುಗ್ಮದಿಂ ಸಕಲ ಲೋಕ ಸುಖಕರವಾದ ಬಾಲರವಿಬಿಂಬ ಶೋಭಿತವಾದ ದಿವಸಲಕ್ಷ್ಮಿಯಂತೆ ಕುಂಕುಮ ತಿಲಕಯುಕ್ತವಾದ ಫಾಲದೇಶದಿಂ ನಿಜಪ್ರಭಾಪುಂಜದಿಂ 1 ಕೌಶೇಯವಿತಾನ ನಿಕರವುಂ ಕೌಸುಂಭ ವಸ್ತ್ರವಿತಾನದಂತೆ ರಜಿಸುವ ಪದ್ಮರಾಗ ಶಿರೋಭೂಷಣದಿಂ ರಂಜಿಸುತ ಈ ಶರತ್ಕಾಲ ಲಕ್ಷ್ಮಿಯಂತೆ ವಿಕಸಿತಾಬ್ಜದಿಂದ ಲೋಚನೆಯಾಗಿ 1 ವರ್ಷಾಕಾಲ ಶ್ರೀಯಂತೆ ಘನಕೇಶಪಾಶ ಶೋಭಿತೆಯಾಗಿ ಧನಾಧಿಪ ಲಕ್ಷ್ಮಿಯಂತೆ ಅಳಕೋದ್ಭಾಸಿನಿಯಾಗಿ 1 ಮೂರ್ತಿಮತಿಯಾದ ವಿಲಾಸವೈಖರಿಯಂತೆ ಕಂಗೊಳಿಸುತಿಹ ಲಾವಣ್ಯಲಕ್ಷ್ಮಿಯಂತೆ ರುಚಿರಾಪಾಂಗವಂ ಪಡೆದಿಹ ಶೃಂಗಾರ ರೀತಿಯೋ ಎಂಬಂತೆ ನಾರೀರತ್ನವಾದ ಸುರತಾಧಿರಾಜ್ಯದೇವತೆಯೆಂಬಂತೆ ಜಗನ್ಮೋಹಿನಿಯಾದ ಸುನಂದಾದೇವಿಯು (ಬರುತ್ತಿದ್ದಳು).

3· ಚಂದ್ರೋದಯ ವರ್ಣನೆ: ಕಮಲಿನೀ ಹೃದಯಾನುರಾಗದಿಂ ಕೆಂಪಡರಿದನಂತೆ ಕಮಲಬಾಂಧವನು ಸಿಂಧೂರವರ್ಣವಾಗಿ ಪ್ರಾಚೀನಿತಂಬಿನಿಯನ್ನಾಲಿಂಗಿಸಿದನಂತೆ ಪಶ್ಚಿಮಾಚಲ ಶಿಖರದಿಂ ಮರೆಯಾಗುತ್ತಿರಲು — ರವಿವಿರಹದಿಂದ ರಾಜೀವಪಂಕ್ತಿಯು ಹರಿತವರ್ಣವಾದುದಂ ನೋಡಿ ಪರಿಹಾಸಗೊಳ್ಳುವಂತೆ ಕುಮುದನಿಕರಂಗಳು ವಿಕಸಿತವಾಗುತ್ತಿರಲು — ಕುಸುಮಶರದಿಂ ದಹ್ಯಮಾನ ಚಕ್ರವಾಕ ಹೃದಯೇಂಧನ ಧೂಮರಾಜಿಯೆಂಬಂತೆ ತಿಮಿರನಿಕರಂಗಳು ಜಗವಂ ಮುಚ್ಚುತ್ತಿರಲು — ಶಶಿಕರ ಸಿಂಹನಕರ ವಿಶೀರ್ಯಮಾಣ ತಿಮಿರಗಜಕುಂಭಸಂಗಳಿತೋತ್ಪನ್ನ ಮುಕ್ತಾಫಲನಿಕರವೆಂಬಂತೆ ತಾರಾನಿವಹವು ಗಗನವನ್ನಲಂಕರಿಸುತ್ತಿರಲು ಪ್ರಿಯದರ್ಶನ ಮುದಿತ ದಿಶಾವನಿತಾ ಮುಗುಳುನಗೆಯ ಛಂದದಿಂ ಕಂಗೊಳಿಪ ಬೆಳದಿಂಗಳಿಂ ಗಗನಾಭೋಗವು ಮಂದಾಕಿನೀ ಫೇನಪುಂಜದಿಂ ಶೋಭಿತವಾದಂತಿರಲು ಪಾತಾಳತಳದಿಂ ಭೂಭಾಗವನ್ನೊಡೆದು ಬರುವ ಮಹಾಶೇಷನ ಮಧ್ಯಶಿರೋರತ್ನದಂತೆ ಚಂದ್ರನುದ್ಭವಿಸಲು ಪ್ರಣಯ ಕುಪಿತ ರೋಹಿಣೀ ಚರಣಾಲಕ್ತಕರಸಾಂಕನಾದಂತೆ ಚಂದ್ರನು ರಂಜಿಸುತ್ತಿರಲು ಶಶಿಕರ ಸುಧಾರಸದಿಂ ಭಾವಿಸಿದಂತೆ ಗಂಗಾಜಲಗಳಿಂ ತಳಿತವಾದಂತೆ ಜಗವೆಲ್ಲವು ಬೆಳಗುತ ಕಂಗೊಳಿಸುತ ಶ್ವೇತದ್ವೀಪವಾಸ ಸುಖವನನುಭವಿಸುತ್ತಿರಲು — ಕಮಲವನ ಲಕ್ಷ್ಮೀನಿಕರದಂತೆ ಅಭಿಸಾರಿಕಾಂಗನೆಯರು ನೀಲಾಂಶುಕ ಪರಿವೃತರಾಗಿ ಅಲ್ಲಲ್ಲಿ ಪಲಾಯನಂಗೈಯುತ್ತಿರಲು — ಮದನ ರಾಜ್ಯಾಭಿಷೇಕ ಸಮಯದಲ್ಲಿತ್ತಿದ ಮುತ್ತಿನ ಸತ್ತಿಗೆಯಂತೆ ಕುಮುದಬಾಂಧವ ಕಂಗೊಳಿಸಿದನು·

4· ಸೂರ್ಯೋದಯ ವರ್ಣನೆ : ತರುಣ ತಮಾಲ ಕದಳಿಕಾ ನಿಕರಗಳಿಂ ವಿರಳ ಜಲಧಿಜಲ ಕಲ್ಲೋಲ ಶೀಕರಗಳಿಂ ಶೀತಳವಾದ ಪಶ್ಚಿಮಾಚಲ ವನವೀಥಿಯಂ ಚಂದ್ರನಾಶ್ರಯಿಸುತ್ತಿರಲು ಚಂದ್ರಗುಪ್ತನ ಹೃದಯ ದುಃಖಾಂಧಕಾರದಂತೆ ಅಂಧಕಾರವು ಮೆಲ್ಲಮೆಲ್ಲನೆ ತೊಲಗುತ್ತಿರಲು ಭಾಮಿನೀ ಪುರುಷಾಂಗನಬಂಧದಂತೆ ಪುಷ್ಪವೃಂತನಿಕರವು ವೃಕ್ಷಗಳ ದೆಸೆಯಿಂದ ಜಾರುತ್ತಿರಲು ಅನವರತ ಶರಾಸನಾಕರ್ಷಣ ಶ್ರಮವಿಹ್ವಲ ಮದನ ನಿಶ್ವಾಸಗಳಂತೆ ಪ್ರಾತಃಕಾಲ ತಂಗಾಳಿಗಳಲ್ಲಲ್ಲಿ ಬೀಸುತ್ತಿರಲು ಸ್ವಯಂವರಿಣಿ ನಯನ ಸರೋಜಗಳಂತೆ ವಿಕಚಸರೋಜ ನಿಕರಗಳಲ್ಲಿ ರಕ್ತಿಮ ಪಸರಿಸುತ್ತಿರಲು ಪ್ರಾಚೀವನಿತೆಯುಂ ಕೂಡಿ ಕುಂಕುಮಜಲಕೇಳಿಯಂನಾಡಿ ಬಂದವನಂತೆ ರಾಜೀವಬಾಂಧವನರುಣದ್ಯುತಿಯಿಂ ರಂಜಿಸಿದನು·

5· ಉದ್ಯಾನವನದ ವರ್ಣನೆ: ಚಾಣಕ್ಯನು ಚಂದ್ರಗುಪ್ತನೊಡಗೂಡಿ ಪರ್ವತರಾಜನಲ್ಲಿಗೆ ಬಂದಾಗ ಅತ ಕಂಡ ಉದ್ಯಾನದ ವರ್ಣನೆ ಇದು: ಚಂಚರೀಕಾರವಯುತ ಮನೋಹರವಾಗಿ ಕಮಲಕಲ್ಹಾರಗಳಿಂ ಶೋಭಿಸುತ ಪುರಲಕ್ಷ್ಮೀವಿಲಾಸದರ್ಪಣವೋಯೆಂಬಂತೆ ನಿರ್ಮಲ ಮಧುರೋದಕಪೂರಿತವಾದ ಸರೋವರಗಳಿಂ ಶೋಭಿಸುತ ತಾರಾನಿಕರದಿಂದೊಪ್ಪುವ ಗಗನಾಭೋಗದಂತೆ ಪುಷ್ಪಗುಚ್ಛಫಲಭಾರಗಳಿಂ ಬಗ್ಗಿ ಪಲ್ಲವಾಂಬರಗಳಿಂ ವನಲಕ್ಷ್ಮಿಗೆ ಪುಷ್ಪೋತ್ಸವವಂ ನಡೆಸುವಂತೆ ಕಂಗೊಳಿಸುತ ವಿವಿಧ ಕುಸುಮ ಮಕರಂದ ಮತ್ತ ಮಧುಕರ ಝೇಂಕಾರಯುತ ಶುಕಶಾರಿಕಾನಿನಾದದಿಂ ನಂದನವನ ಸಂಪತ್ತನ್ನನುಕರಿಸುವ ಪ್ರಮದವನದೊಳ್ ...

<u>6. ಋಷ್ಯಾಶ್ರಮ ವರ್ಣನೆ:</u> ಸರ್ವಾರ್ಥಸಿದ್ಧಿಯು ನೈಮಿಷಾರಣ್ಯಕ್ಕೆ ತೆರಳಿದಾಗ ಕಂಡ ದೃಶ್ಯ ಇಂತಿದೆ: ಆರಾಯನು ನೈಮಿಷಾರಣ್ಯವಂ ಕುರಿತು ತೆರಳುತ ಗಂಗಾನದಿಯಂ ಸುತ್ತುವರಿದು ಅತಿನೀಲಮಯವಾಗಿ ಸೂರ್ಯಪ್ರಭೆಗೆ ಅವಕಾಶವಾಗದ ನಿಶಾನಮಯದಂತೆ ಕಂಗೊಳಿಸುವ ಆಶ್ರಮವಂ ದೂರದಿಂದಲೇ ನೋಡಿ ತನ್ನ ಪತ್ನಿಯಾದ ಸುನಂದಾದೇವಿಯಂ ಕುರಿತು—ಎಲ್ಲೆ ರಾಣಿಯೇ ಇದಕೋ ಮಹಾಮುನಿಗಳ ಆಶ್ರಮವು ಕಾಣುತಲಿದೆ. ಜನರ ಭಯವಂ ಬಿಟ್ಟು ಹರಿಣ ಸಮೂಹವು ಮಾರ್ಗ ಮರಿದಯವುಳ್ಳವಂತೆ ಸಮೀಪಕ್ಕೆ ಬರುವವು. ನದಿಯಿಂದ ಆಶ್ರಮವಂ ಹೊಂದಿದ ಋಷಿಗಳ ವಲ್ಕಲಾಂಚಲಗಳಿಂ ನಿಸೃತವಾದ ಜಲಧಾರೆಗಳಿಂದಾರ್ದ್ರತಮಾದ ಮಾರ್ಗವು — ಇದೇ ಆಶ್ರಮವೆಂದು ತೋರಿಸುವಂತೆ ಕಂಗೊಳಿಸುವುದು. ಬಹುಕುಸುಮಫಲ ಸಮೃದ್ಧವಾದ ತಮಾಲ ಕೃತಮಾಲ ತಾಲ ಹಿಂತಾಲ ವಕುಲ, ಪುಂನಾಗ ಚಂಪಕ ಸಾಲ ಲೋಧ್ರ ಲವಂಗ ಚಂದನ ಪೂಗ ನಾರಿಕೇಳ ಕರ್ಕಂಧು, ಕಪಿಥ (ತ್ಥ) ಪ್ರಿಯಾಳ (ಪ್ರಿಯಂಗು) ಪನಸ ಕದಳೀ ದಾಡಿಮ ಮುಖ್ಯವಾದ ವೃಕ್ಷಸಮೂಹವು ಸಮ್ರವಾದ ಶಿಖಾಗ್ರಗಳಿಂ ಧ್ವಾಂತಮನಾಕ್ರಮಿಸಿ ಅಜಗರ ವೃತ್ತಿಯನವಲಂಬಿಸಿ ಶಯನವಂ ಮಾಡಿಯಿರುವ ಪರಮಹಂಸರ ವದನಗಳಿಗೆ ಫಲಗಳಂ ವರ್ಷಿಸುತ ಪಲ್ಲವಾಂಚಲಗಳಿಂ ಪುಷ್ಪನಿಕರವನ್ನರ್ಷಿಸುವಂತೆ ಪೂರ್ಣ್ಯದ ಶುಕಪಿಕಶಾರಿಕ ಮಧುಕರ ರವ ಕೋಲಾಹಲಗಳಿಂ ತಮ್ಮ ಜಡಜನ್ಮವಂ ಪರಿಹರಿಸಬೇಕೆಂದು ಬೇಡಿಕೊಂಬ ಮುಮುಕ್ಷುಗಳಂತೆ ಕಂಗೊಳಿಸುವವು ಅಯಿದು ಮುಂದೆ ತೆರಳುತ ಇದಕೋ ವೇದಗಳೇ ತೇಜೋಮಯ ಮೂರ್ತಿಗಳಾಗಿ ಸಂಚರಿಪಂತೆ ಅವಿಚ್ಛಿನ್ನಾಧ್ಯಯನದಿಂ ಮುಖರಿತರಾಗಿ ಫಲಪುಷ್ಪ ಸಮಿತ್ಕುಶಗಳಂ ಪಿಡಿದು ಅನುಸರಿಸಿ ಬರುವ ಹರಿಣಶಿಶುಗಳಿಂ ಕೂಡಿ ತೆರಳುತಲಿರುವ ಋಷಿಪುತ್ರನಿಕರವು ನೇತ್ರಜಾಡ್ಯವಂ ಪರಿಹರಿಸುವುದು. ಕ್ರತುಶಾಲೆಯಿಂದ ವಿರತವಾಗಿ ಹೊರಹೊಮ್ಮುತ್ತ ಆಜ್ಯಾಹುತಿಪರಿಮಳದಿಂ ಕೂಡಿದ ಹೋಮಧೂಮಪಂಕ್ತಿಗಳು ಅಂತರಿಕ್ಷವನ್ನಡರಿ ಸ್ವರ್ಗಮಾರ್ಗಸೋಪಾನ ಪರಂಪರೆಯೋ ಎಂಬಂತೆ ನೋಡುವವರ ದುರಿತವಂ ಪರಿಹರಿಸುವುದು. ಮತ್ತೊಂದು ಎಡೆಯೊಳು ಅಮೃತಚರುಗಂಧವಂ ದೂರದಿಂದಾಘ್ರಾಣಿಸುತ ಅರ್ಧಪಕ್ವ ಪುರೋಡಾಶ ಪರಿಮಳದಿಂ ಪ್ರಮುದಿತರಾದ ಅತಿಥಿ ವರ್ಗಂಗಳು ಗುಂಪುಗುಂಪಾಗಿ ಪರ್ಣಶಾಲೆಗಳಂ ಪ್ರವೇಶಿಸುವರು. ಮತ್ತೊಂದು ಕಡೆಯಲ್ಲಿ ಋಷಿಪಟುಗಳಿಗೆ ತಮ್ಮ ಶೃಂಗಗಳಿಂ ಕೆದಕಿ ಕಂದಮೂಲಗಳಂ ಕೊಡುವ ಹರಿಣಗಳಂ ಹೇಳಿದಂತೆ ಜಲಗಳಂ ಗ್ರಹಿಸಿ ಪುಷ್ಕರಾಗ್ರದಿಂ ಪುಷ್ಪಲತೆಗಳಿಗೆ ಸೇಚನವಂ ಗೈವ ಕರಿಕಲಭಗಳಂ ಋಷಿ ಕುಮಾರರಿಂ ಪ್ರಾರ್ಥಿತವಾಗಿ ವೃಕ್ಷಮೂಲಂಗಳಿಗೆ ತಮ್ಮ ಮುಖದಿಂದಗೆಯಂ ಮಾಡುವ ವನವರಾಹಗಳಂ ಪರಿಚಿತರಾದ ಋಷಿ ಸಂಘದ ಹೋಮಾಗ್ನಿಗಳಂ ತಮ್ಮ ಪಕ್ಷ ಮಾರುತಗಳಿಂ ಪ್ರಜ್ವಲನ ಗೈವ ಮಯೂರನಿಕರಗಳಿಂ ಅವಿರತ ಶ್ರವಣ ಗೃಹೀತ ವಷಟ್ಕಾರ ರವಮನೋಹರವಾದ ಶುಕಕುಲಗಳಂ ಅನೇಕ ಶಾರಿಕೋದ್ಘುಷ್ಯಮಾಣ ರಥಂತರ ಸಾಮವಂ ಕಲಿಯಲಪೇಕ್ಷಿಸಿರುವ ಪಕ್ಷಿವಿಶೇಷಗಳಂ ವ್ಯಾಘ್ರೀ ಜಿಹ್ವಾಪಲ್ಲವದಿಂ ನೆಕ್ಕುವ ಋಷಿ ಶಾಬಕಗಳಂ ಮಹಾಮುನಿ ಸಾನಿಧ್ಯದಿಂ ಸ್ವಾಭಾವಿಕ ವೈರವಂ ಬಿಟ್ಟು ಇಂದೀವರದಂತೆ ತೋರುತಲಿರುವ ಮಯೂರಾರ್ಭಕಗಳಂ ದರ್ವಾ ಸಮೂಹಭ್ರಾಂತಿಯಿಂದ ಹೋಗುವ ಪನ್ನಗಗಳಂ ವ್ಯಾಘ್ರಶಿಶುಗಳೊಡನಾಡುವ ಗೋವತ್ಸಗಳಂ ಮೃಣಾಲಮೂಲವೆಂದು ಕೇಸರಿಯು ಪುಚ್ಛವಂ ಸೆಳೆವ ಕರಿಕಲಭಗಳಂ ನೋಡಿ ಸುಮ್ಮನಿರುವ ಸಿಂಹಕದಂಬಗಳಂ ಮತ್ತೊಂದೆಡೆಯೊಳು ಕಾಣುತ

ಸಹಾಯವಿಲ್ಲದೆ ತೂಗುತಲಿರುವ ವನದೇವತೆಯರ್ಗೆ ಯೋಗ್ಯ ಛಾಪ ದೋಲಾಲತೆಗಳಂ ಕಮಲೀವಾಲ ಸಮೂಹ ದಂತೆ ಅತಿಧವಳವಾಗಿ ಭೂಮಿಯಲ್ಲಿ ಮಂಡಲಾಕಾರವಾಗಿ ಬೀಳುವ ಮುನಿಜಟಾಭಾರದಲ್ಲಿ ಗೂಡುಗಳಂ ಕಟ್ಟಿ ವಿಹರಿಪ ಚಿಟ್ಟಭಂಡಯುಗ್ಮಗಳಂ ಮಂದೆಯೊಳು ಶಿಷ್ಯರಿಂ ಸಮರ್ಪಿಸುವ ನೀವಾರದಿಂ ಪ್ರಾಣವಂ ಧರಿಸಿರುವ ದಂತೋಲೂಖಲರ ವತ್ಸಗಳ ಕುಮಾರಿಯರ್ಗಳಿಂ ಬೀಳುವ ಕ್ಷೀರಫೇನಂಗಳಿಂ ಜೀವಿಸುವ ಫೇನಪರಂ ಎಂದಿಗೂ ಚಲನದೆ ಭೂಮಿಯಂತಿಪ್ಪ ಸಮಾಧಿನಿಷ್ಠರಾದ ಮಹಾಮುನಿಗಳಂ ಈ ಮಹಾತ್ಮರಿಂದಲೇ ಭೂಮಿಯು ಚಲಿಸದೆಯಿರುವದು. ವಾಯುವು ಮಿತವಾಗಿ ಬೀಸುವದು. ಸಮುದ್ರವು ಮೇರೆ ತಪ್ಪಲಾರದು. ಕಾಲಚಕ್ರವು ನಿಲ್ಲದೆ ತಿರುಗುತಲಿರುವದು. ಧರ್ಮಗಳಿಗಾಶ್ರಯವಾಗಿಯಿರುವ ಯಿವರೇ ಕರುಣಾರಸಕ್ಕೂ ಸಾಗರರೂ. ಸಂಸಾರಾಂಬುಧಿಗೆ ಸಂತರಣ ಸೇತುಗಳು. ಉಪಶಾಂತಿ ವೃಕ್ಷಕ್ಕೆ ಮೂಲಭೂತರು. ಲೋಭಾರ್ಣವಕ್ಕೆ ಬಡಬಾನಲರು. ಶಾಸ್ತ್ರರತ್ನಕ್ಕೆ ನಿಕಷೋಪಲರು. ಮಹಾಮುನಿ ಚರಣಾರವಿಂದ ಸಂಪರ್ಕದಿಂದೀ ಆಶ್ರಮವು ಕಲಿಕಲ್ಮಷದಿಂದೆಂದಿಗೂ ಲಿಪ್ತವಾಗದು. ಅನೃತವುಂ ಉಚ್ಚರಿಸೋದು. ಮದಮತ್ಸರಗಳು ಹೆಚ್ಚೆಯುಸೂರದು. ಕಾಮವಿಲಾಸವು ಕಣ್ದೆರೆದು ನೋಡದು. ಕಮಲಯೋನಿಯಂತೆ ತ್ರಿಭುವನವಂದಿತವಾಗಿ ವಿಷ್ಣುವಿನವತಾರದಂತೆ ಪ್ರಕಟಿತ ಹರಿವರಾಹರೂಪವುಳ್ಳದಾಗಿ ಸಾಂಖ್ಯದಂತೆ ಕಪಿಲಾಧಿಷ್ಠಿತವಾಗಿ, ಉಪಶಾಂತರಿಗೆ ವಾಸಯೋಗ್ಯವಾದ ಬ್ರಹ್ಮಲೋಕವೇ ಆಶ್ರಮರೂಪವಂ ಧರಿಸಿಯಿರುವಂತೆ ಕಂಗೊಳಿಸುವ ಈ ನೈಮಿಷ ಕ್ಷೇತ್ರದಲ್ಲಿ ಮಾಲಿನ್ಯವೆಂಬುವದು ಹೋಮವಾಗ್ನಿ ಧೂಮರೇಖೆಯಲ್ಲಿ ಮುಖರಾಗವು ಶುಕಗಳಲ್ಲಿ ತೀಕ್ಷ್ಣತೆಯು ದರ್ಭಾಗ್ರದಲ್ಲಿ ಚಾಂಚಲ್ಯವು ಕದಳೀವನದಲ್ಲಿ ನೇತ್ರರಾಗವು ಕೋಗಿಲೆಗಳಲ್ಲಿ ಕಂಠಗ್ರಹಣವೆಂಬುವದು ಕಮಂಡಲುಗಳಲ್ಲಿ ಸ್ತನಸ್ಪರ್ಶವು ಗೋದೋಹನದಲ್ಲಿ ಪಕ್ಷಪಾತವು ವನಕುಕ್ಕುಟಗಳಲ್ಲಿ ಭ್ರಾಂತಿಯೆಂಬುವದು ಅಗ್ನಿಪ್ರದಕ್ಷಿಣೆಯಲ್ಲಿ ರಾವಣನು ರಾಗವು ರಾಮಾಯಣದಲ್ಲಿ ಶಕುನಿವಧೆಯು ಮಹಾಭಾರತದಲ್ಲಿ ದ್ವಿಜಪತನವು ವೃಕ್ಷಗಳಲ್ಲಿ ಗೀತವ್ಯಸನವು ಹರಿಣಗಳಲ್ಲಿ ಶ್ರೀಫಲಾಭಿಲಾಷೆಯು ಕಪಿಗಳಲ್ಲಿ ಭೋಗಾಭಿಲಾಷೆಯು ಭುಜಂಗಗಳಲ್ಲಿ ನೃತ್ಯ ಕ್ರಮವು ಮಯೂರಗಳಲ್ಲಿ ಅಧೋಗತಿಯು ವೃಕ್ಷಮೂಲಗಳಲ್ಲಿಯೇ ಯಿರುವದು. ಮತ್ತೊಂದು ಕಡೆಯೊಳು ವಾಪೀಹಂಸಗಳಿಂ ಭುಂಜಿಪ ನೀವಾರಬಲಿಯಂ ಮಂದೆಯೊಳು ವಾಚಿಸುವ ಶ್ರಾದ್ಧಕಲ್ಪಗಳಂ ಪಠಿಸುವ ಉಪನಿಷತ್ತುಗಳಂ ಘೋಷಿಸುವ ಶತರುದ್ರೀಯಂಗಳಂ ಜಪಿಸುವ ಮಹಾಮಂತ್ರಗಳಂ ಉಚ್ಚರಿಸುವ ಸಾಮಗಾನಗಳಂ ಕಥನಗೈವ ದಿವ್ಯಕಥೆಗಳಂ ಸ್ತುತಿಸುವ ಹರಿಹರ ಪಿತಾಮಹ ಸ್ತೋತ್ರಗಳಂ ಶ್ರವಣಗೈವರಾಗು — ಉಪದೇಶಿಸುವ ಸಾಂಖ್ಯರಹಸ್ಯವಂ ಪ್ರಕಟಂಗೈವ ಯೋಗಸಾಧನೆಗಳಂ ವ್ಯವಹರಿಸುವ ನಾನಾ ಶಾಸ್ತ್ರಾರ್ಥಗಳಂ ನಿಷೇಧಿಸುವ ಪಾಷಂಡಮತ ಪ್ರಕ್ರಿಯೆಗಳಂ ಸಿದ್ಧಾಂತಗೈವ ವೇದಮಾರ್ಗಗಳಂ ಅರಿಸುವರಾಗು. ಈ ಪರಿಯಲ್ಲಿ ಧರ್ಮ ಸಂಸ್ಥಾಪಕರಾದ ಮಹಾಮುನಿಗಳಿಗೆ ವಾಸಯೋಗ್ಯವಾದ ಈ ಆಶ್ರಮದಲ್ಲಿ ವಾಸವಂ ಮಾಡುತಲಿರುವ ಜನಗಳಿಗೆ ಲಭ್ಯವಾಗುವ ಆನಂದಾಂಬುಧಿಯ ಲೇಶವನ್ನಾದರೂ ಹೋಲಲಾರದು ನಂಮ ಸಾಮ್ರಾಜ್ಯಸುಖವು. ಅದರಿಂ ಕೈವಲ್ಯ ಕರಗತವಾಗುವದು. ಸಾಲೋಕ್ಯಾದಿಮುಕ್ತಿಗಳು ಅವರು ಅನುಗ್ರಹಿಸಿದವರಿಗುಂಟಾಗುವದು. ಬಹುಜನ್ಮ ಸುಕೃತದಿಂ ಈ ಆಶ್ರಮವು ನಮಗೆ ಗೋಚರವಾಯಿತಲ್ಲದೆ ಮಹಾಕೀಕಟಾರಣ್ಯವಾಗಿ ಕಾಣಿಸುವದು. ಇಂದು ನಮ್ಮ ಜನ್ಮ ಸಫಲವಾಯಿತು — ಎಂದು ಹೇಳುತ ಆ ರಾಯನು ಅಲ್ಲಿಯ ಮುನಿ ಸಂಘಕ್ಕೆ

ನಮಸ್ಕರಿಸುತ ಸಶರೀರನಾಗಿ ಸ್ವರ್ಗವನ್ನೈದಿದವನಂತೆ ಆನಂದಭರಿತನಾಗಿ ಅಡಿಯಿಡುತಲಿದ್ದನು.

7. ಸಂಭೋಗ ಶೃಂಗಾರ: ಸರ್ವಾರ್ಥಸಿದ್ಧರಾಯನು ತನ್ನ ಅಂತಃಪುರದಲ್ಲಿ ಪಟ್ಟಮಹಿಷಿಯಾದ ಸುನಂದಾದೇವಿಯೊಡನೆ ಅತಿ ಪ್ರೇಮಾಸ್ಪದಳಾದ ಶೂದ್ರಪುತ್ರಿಯಾದ ಮುರಾದೇವಿ ಮುಖ್ಯರಾದ ಸ್ತ್ರೀಯರೊಡಗೂಡಿ ವಿವಿಧ ಕ್ರೀಡಾ ವಿಲಾಸವಿನೋದದಿಂದಿರುತಿದ್ದನು ಎಂಬಲ್ಲಿ ಮತ್ತು ಪರ್ವತರಾಜನು ತನ್ನಲ್ಲಿಗೆ ಬಂದ ವಿಷಕನ್ಯೆಯನ್ನು ಸ್ವೀಕರಿಸಿಕೂಡಿದನು ಎಂಬಲ್ಲಿ ಸಂಭೋಗ ಶೃಂಗಾರದ ಸುಂದರ ಚಿತ್ರಣವಿದೆ [43].

8. ವಿಪ್ರಲಂಭ ಶೃಂಗಾರ: ಗಂಗಾನದಿಯಲ್ಲಿ ಮುರಾದೇವಿಯು ಆತ್ಮಾರ್ಪಣ ಮಾಡಿಕೊಳ್ಳಲು ಮತ್ತು ನಂದರು ಯುದ್ಧಕ್ಕೆ ಹೊರಟು ಪತ್ನಿಯರಲ್ಲಿ ಬಂದು ಹೇಳಿ ಹೊರಟಾಗ ಅವರ ಅಳಲಿನ ಪ್ರಸಂಗದಲ್ಲಿ ವಿಯೋಗ ಶೃಂಗಾರದ ವರ್ಣನೆಯಿದೆ [43].

9. ಯಾತ್ರ: ಪಾಟಲೀಪುರದ ಮೇಲೆ ದಂಡೆತ್ತಿ ಹೊರಟ ಪರ್ವತರಾಜನು ಅವನ ಬಳಿಯಿರುವ ಸಾಮಂತ ಅರಸರು, ಅವರ ಯುದ್ಧೋತ್ಸಾಹದ ವರ್ಣನೆ ಇಲ್ಲಿದೆ [44].

10. ದೂತ: ಯುದ್ಧದಲ್ಲಿ ಪ್ರಮುಖಪಾತ್ರ ವಹಿಸುವ ನಿಯೋಗಿಗಳು ಪರರಾಷ್ಟ್ರಗಳಿಗೆ ಹೋಗಿ ತಮ್ಮ ಕಾರ್ಯನಿರ್ವಹಿಸುವುದನ್ನು ಇಲ್ಲಿ ವರ್ಣಿಸಲಾಗಿದೆ. ಪರ್ವತರಾಜನ ಕಡೆಯಿಂದ ಕಾಮರೂಪ ಹಾಗೂ ಕಾಶೀ ನರೇಶನಲ್ಲಿಗೆ ಹೋಗುವ ಕಮಲಾಪೀಡ, ಯುದ್ಧಮಧ್ಯದಲ್ಲಿ ಪರ್ವತೇಶ್ವರನ ಬಳಿ ರಾಕ್ಷಸನ ಕಡೆಯಿಂದ ಬರುವ ವಿಷ್ಣುದಾಸನೆಂಬ ನಿಯೋಗಿ, ರಾಕ್ಷಸನ ಭೇದೋಪಾಯವನ್ನು ಭಂಗಮಾಡಲು ಕಾಡಿಗೆಯನ್ನು ಹಣೆಯಲ್ಲಿಟ್ಟುಕೊಂಡು, ಚೂರ್ಣವನ್ನು ಕದಡಿ ಕುಡಿದು ದಿವ್ಯಾಶ್ವವನ್ನು 'ಏರಿ ಚಾಣಕ್ಯನ ಬಳಿ ಸಾರುವ ಇಂದುಶರ್ಮನ ಶಿಷ್ಯನಾದ ವೇಶಶರ್ಮ ಇವರೆಲ್ಲರ ವರ್ಣನೆ ಚೇತೋಹಾರಿಯಾಗಿದೆ. ಪರರಾಜರುಗಳ ಬಳಿ ಹೋದ ದೂತರು ತಮ್ಮ ಕಾರ್ಯವನ್ನು ಸಾಧಿಸಲು ಮಾಡುವ ಉಪಾಯ , ಅವರುಗಳಿಗೆ ಪರರಾಜರುಗಳು ನೀಡುವ ಸತ್ಕಾರಗಳ ವರ್ಣನೆಗಳೂ ಇಲ್ಲಿವೆ.

11. ನಾಯಕಾಭ್ಯುದಯ: ಶರಣಾಗತನಾಗಿ ಬಂದ ಚಂದ್ರಗುಪ್ತನಿಗೆ ಚಾಣಕ್ಯನು ಅಭಯವನ್ನು ಕೊಟ್ಟ ಮೇಲೆ ಕೊನೆಯಲ್ಲಿ ಚಂದ್ರಗುಪ್ತನ ಪಟ್ಟಾಭಿಷೇಕದ ವರೆಗೂ ನಾಯಕನ ಅಭ್ಯುದಯದ ವರ್ಣನೆಯೇ ಇದೆ.

12. ಮಂತ್ರ: ಸಾಮ, ದಾನ, ಭೇದ, ದಂಡಗಳ ಔಚಿತ್ಯವರ್ಣನೆಗಳ ವಿವರ ಇದೆ.
ವಿವಾಹ, ಕುಮಾರ ಜನನ, ವನವಿಹಾರ (ಬೇಟೆ)ಗಳ ಪ್ರಸ್ತಾವ ಬಂದಿದ್ದರೂ ಇದು ಯುದ್ಧಕಾವ್ಯವಾದ್ದರಿಂದ ಕವಿಯು ಅವುಗಳನ್ನು ವಿಸ್ತರಿಸುವ ಗೋಜಿಗೆ ಹೋಗಿಲ್ಲ.

ಸಮುದ್ರ, ಜಲಕ್ರೀಡೆ, ಪರ್ವತಗಳ ವರ್ಣನೆ ಬಂದಿಲ್ಲ. ' ಬಂದಷ್ಟು ಅಂಗಗಳಲ್ಲಿರುವ ಚಮತ್ಕಾರವೇ ರಸಿಕರನ್ನು ಮೆಚ್ಚಿಸುವಂತಿರುವುದಾದರೆ ಮೇಲೆ ಹೇಳಿದ ಅಂಗಗಳಲ್ಲಿ ಕೆಲವು ಕಡಿಮೆಯಾಗಿದ್ದರೂ ದೋಷವಿಲ್ಲ. [45] ಎಂಬ ದಂಡಿಯ ಮಾತನ್ನು ಕವಿ ಗಮನದಲ್ಲಿಟ್ಟುಕೊಂಡಿದ್ದಿರಬಹುದು.

•••••••••••••

ರಸ ನಿರೂಪಣೆ

ಕವಿಯು ಗ್ರಂಥವನ್ನು ಆನುಪೂರ್ವೀತವಾಗಿ ಕಾವ್ಯಸರಣಿಯುಕ್ತವಾಗಿ ಹೇಳುತ್ತಿರುವುದರಿಂದ ಇದರಲ್ಲಿ ನವರಸಗಳನ್ನು ಯಥೋಚಿತವಾಗಿ ಅಳವಡಿಸಿದ್ದಾನೆ. ಇದು ವೀರಕಾವ್ಯ. ಇಲ್ಲಿ ವೀರರಸವೇ ಪ್ರಧಾನ. ರೌದ್ರ, ಬೀಭತ್ಸ, ಭಯಾನಕ, ಅದ್ಭುತ ಮತ್ತು ಕರುಣ ರಸಗಳು ಇದಕ್ಕೆ ಪೂರಕವಾಗಿ ಬಂದಿವೆ. ಶೃಂಗಾರ, ಹಾಸ್ಯ ಮತ್ತು ಶಾಂತ ರಸಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ಇದೀಗ ಇವುಗಳನ್ನು ಒಂದೊಂದಾಗಿ ಗಮನಿಸಲಾಗುವುದು.

<u>ವೀರರಸ:</u> ಉತ್ಸಾಹವು ಇದರ ಸ್ಥಾಯಿಭಾವವು. ಇಲ್ಲಿ ನಮಗೆ ' ರಣವೀರ '[46]ದ ಹಲವು ಚಿತ್ರಗಳು ಕಾಣಸಿಗುತ್ತವೆ.

1. ನಂದರ ವಿರುದ್ಧ ಯುದ್ಧಕ್ಕೆ ಬಂದಲ್ಲಿ ಅರ್ಧ ರಾಜ್ಯವನ್ನೇ ಕೊಡುವುದಾಗಿ ಚಾಣಕ್ಯನು ಪರ್ವತರಾಜನಿಗೆ ಆಸೆ ತೋರಿಸುತ್ತಾನೆ. ಆಗ ಪರ್ವತರಾಜನು ಉತ್ಸಾಹದಿಂದ ಪಾಟಲೀಪುರಾಭಿಮುಖವಾಗಿ ಹೊರಡುವನು.

ಮಂತ್ರಿ ಶಬರವರ್ಮನ ಪ್ರೋತ್ಸಾಹಕ ಮಾತುಗಳು, ಸಾಮಂತರಾದ ವಿವಿಧ ದೇಶಾಧಿಪತಿಗಳಿಂದ ಧನ, ಕನಕ, ರತ್ನರೂಪವಾದ ಕಾಣಿಕೆಗಳನ್ನು ಪಡೆಯುವುದು, ಸೇನಾಪ್ರಯಾಣ ಸೂಚಕವಾದ ಭೇರಿ, ನಿಸ್ಸಾಳ, ಕಹಳಾದಿ ವಾದ್ಯ ಧ್ವನಿಗಳಾಗುವುದು — ಇವೆಲ್ಲ ವಿಭಾವಗಳು. ತಾನು ಪ್ರಯಾಣ ಸನ್ನದ್ಧನಾಗುವುದು, ಇಷ್ಟದೇವರಿಗೆ ನಮಸ್ಕರಿಸುವುದು, ವಿಪ್ರರಿಗೆ ಬಹುಧನ ರತ್ನಗಳನ್ನು ಯಾತ್ರಾದಾನ ಕೊಡುವುದು, ತನ್ನ ಅಂತಃಪುರದ ಸ್ತ್ರೀ ಜನರನ್ನು ಒಡಂಬಡಿಸಿ ಹೊರಡುವುದು — ಇವು ಅನುಭಾವಗಳು. ಸೇನಾ ಸಮೇತರಾಗಿ ಪಾರ್ಶ್ವಗಳಲ್ಲಿ ತೆರಳುತ್ತಿರುವ ಮಲಯಕೇತು ಚಂದ್ರಗುಪ್ತರಿಂದೊಡಗೂಡಿದ ಪರ್ವತೇಶ್ವರನಲ್ಲಿ ಆತನ ಬಲದ ಕಾರಣದಿಂದುಂಟಾದ ' ಧೃತಿ ' ಸಂಚಾರೀ ಭಾವವು ಕಾಣುವುದು. ಆತ ಹೊರಡಿಸಿದ ಭೇರೀ ಶಬ್ದ, ತನ್ನ ಸೇನಾನಾಯಕರುಗಳಿಗೆ ಕೊಡುವ ಉಪದೇಶಗಳಲ್ಲಿ ' ಉಗ್ರತೆ ', ' ಮತಿ ' ಗಳನ್ನು ಕಾಣಬಹುದು. ಆತನ ಕುಲ, ಶಕ್ತಿ, ಐಶ್ವರ್ಯಗಳಿಂದ ಬಂದ ಮದ, ಇನ್ನೊಬ್ಬರ ಬಗೆಗಿನ ತಿರಸ್ಕಾರವೂ ಆತನಲ್ಲಿ ಕಾಣುವುದು. ಇವು ' ಗರ್ವ ' ಸಂಚಾರೀ ಭಾವದ ಲಕ್ಷಣಗಳಾಗಿವೆ.

ಹೀಗೆ ಇಲ್ಲಿ ಸ್ಥಾಯಿಯಾದ ಉತ್ಸಾಹವು ವಿಭಾವ, ಅನುಭಾವ, ಸಂಚಾರಿಭಾವಗಳೊಡಗೂಡಿ ವೀರರಸವಾಗಿದೆ.

2. ನಂತರ ಮಂತ್ರಿಯಾದ ಅಮಾತ್ಯರಾಕ್ಷಸನು ಯುದ್ಧವೀರ. ಶತ್ರುಗಳು ಬರುವ ಸುದ್ದಿಯನ್ನು ಕೇಳಿ ಆತನು ಕವಚವನ್ನು ತೊಟ್ಟು, ಕುದುರೆಯನ್ನೇರಿ, ಭರ್ಜಿಯನ್ನು ಹಿಡಿದು ಯುದ್ಧಕ್ಕೆ ತೆರಳಿದನು. ಅಲ್ಲಿ ಉತ್ತರ ದ್ವಾರದಿಂದ ಪ್ರಾಕಾರವನ್ನೇರಿ, ಸುತ್ತುತ್ತಾ ಬರುತ್ತಿರುವ ಶತ್ರುಗಳ ಮೇಲೆ ಫಿರಂಗಿ ಗುಂಡುಗಳ ಮಳೆಗರೆದನು. ನಿಂತಲ್ಲಿ ನಿಲ್ಲದೇ ಪಶ್ಚಿಮದ್ವಾರದಿಂದ ಹೊಯ್ಹೊರಟು ಒಂದೊಂದು ಹೊಡೆತಕ್ಕೆ ಶತ್ರುಗಳ ನಾಲ್ಕಾರು ತಲೆ ಹಾರಿಸುತ್ತ ಕುದುರೆಗಳನ್ನು ಕಡಿಯುತ್ತ, ಆನೆಗಳ ಸೊಂಡಿಲುಗಳನ್ನು ಹರಿಯುತ್ತ, ಶತ್ರುಗಳು ಕೋಟೆ ಗೋಡೆಯನ್ನು ಹಿಡಿಯದಂತೆ ತಡೆಯುತ್ತಿದ್ದನು. ಅಲ್ಲಿಂದ ದಕ್ಷಿಣ ದಿಕ್ಕಿಗೆ ಬಂದು ಶತ್ರುಗಳ ಮೇಲೆ ಮುತ್ತಿ ಶೂಲಗಳಿಂದ ಹೊಡೆಯುತ್ತ, ಭರ್ಜಿಗಳಿಂದ ಇರಿಯುತ್ತ, 'ಓಡುವವರನ್ನು ಅಟ್ಟುತ್ತ, ಅಟ್ಟಿಬರುವವರನ್ನು ತಡೆಯುತ್ತ, ಬಾಗಿಲ ಬಳಿ ಬಂದು ಸೇನೆಗೆ ಎಚ್ಚರಿಕೆ ಕೊಡುತ್ತಿದ್ದನು. ಮತ್ತೆ ರಥವನ್ನೇರಿ, ಅದನ್ನು ವೇಗವಾಗಿ 'ಓಡಿಸುತ್ತ ' ಹೊಡೆ ಹೊಡೆ' ಎಂದು ಬೊಬ್ಬಿಡುತ್ತ ನಿಂತಲ್ಲಿ ನಿಲ್ಲದೆ ಶತ್ರುಗಳ ತಲೆಗಳನ್ನು ಬಾಣಗಳಿಂದ ಆಕಾಶಕ್ಕೆ ಹಾರಿಸುತ್ತಿದ್ದನು. ಶತ್ರುಗಳು ಪ್ರಾಕಾರವನ್ನೇರಿ ಧ್ವಜವನ್ನು ಮುತ್ತಿ, ತನ್ನ ಕೈಗತ್ತಿಯಿಂದ ಅವರ ತಲೆಗಳನ್ನು ಕಡಿದು, ಅವರು ನೆಟ್ಟಿದ್ದ ಧ್ವಜಗಳನ್ನು ಮುರಿದು, ಅವರನ್ನು ಅಟ್ಟಿದನು. ನಿರುಪಾಯರಾದ ಶತ್ರು ಸೈನಿಕರು ' ಈತ ಪ್ರತ್ಯಕ್ಷ ರಾಕ್ಷಸನೇ ಹೌದು' ಎನ್ನುತ್ತಾ 'ಓಡಿಹೋದರು.

ಶತ್ರುಗಳು ಪಾಟಲೀಪುತ್ರಾಭಿಮುಖರಾಗಿ ಬರುತ್ತಿದ್ದಾರೆಂದು ಬೇಹುಗಾರರಿಂದ ತಿಳಿದ ರಾಕ್ಷಸನು ಭಾಗುರಾಯಣಾದಿ ಸೇನಾಪತಿಗಳನ್ನು ಕರೆದು, ಅವರವರು ನಿರ್ವಹಿಸತಕ್ಕ ಕೆಲಸಗಳನ್ನು ಹೇಳಿದ್ದು, ಬೊಕ್ಕಸದಿಂದ ಅನರ್ಘ್ಯ ಮುಕ್ತಾಹಾರ, ತುರಾಯಿ, ವಜ್ರದ ಕಡಗ, ರತ್ನಬಾಹುರಿ, ವಜ್ರದುಂಗುರಗಳನ್ನು ತರಿಸಿ ಅವುಗಳಿಂದ ಸೇನಾಪತಿಗಳನ್ನು ತಾನೇ ಅಲಂಕರಿಸಿದ್ದು, ದಿವ್ಯದುಕೂಲ, ಗಂಧಮಾಲ್ಯಗಳನ್ನು ಧರಿಸಿ ಕರ್ಪೂರ ವೀಳೆಯಗಳನ್ನು ಕೊಟ್ಟು ಸನ್ಮಾನಿಸಿದ್ದು — ಇವೆಲ್ಲ ವಿಭಾವಗಳು.

ತಾನು ಕವಚ ತೊಟ್ಟು, ಕುದುರೆಯೇರಿ, ಭರ್ಜಿ ಹಿಡಿದು ಯುದ್ಧಕ್ಕೆ ತೆರಳಿದ್ದು, ಶತ್ರುಗಳ ತಲೆಹಾರಿಸಿದ್ದು, ಕುದುರೆಗಳನ್ನು ಕಡಿದದ್ದು, ಆನೆಗಳ ಸೊಂಡಿಲುಗಳನ್ನು ಹರಿದದ್ದು, ಶೂಲದಿಂದ ಹೊಡೆದದ್ದು, ಭರ್ಜಿಗಳಿಂದ ಇರಿದದ್ದು, ' ಹೊಡೆಹೊಡೆ' ಎಂದು ಬೊಬ್ಬಿಟ್ಟದ್ದು, ಶತ್ರುಗಳ ತಲೆಗಳನ್ನು ಕಡಿದದ್ದು, ಅವರು ನೆಟ್ಟಿದ್ದ ಧ್ವಜಗಳನ್ನು ಮುರಿದದ್ದು ಇವೆಲ್ಲ ಅನುಭಾವಗಳು.

ಧೃತಿ, ಮತಿ, ಗರ್ವ, ರಭಸ, ಉಗ್ರತೆ, ಅಮರ್ಷ, ಸ್ಮೃತಿ, ರೋಮಾಂಚ — ಇವು ಇಲ್ಲಿಯ ವ್ಯಭಿಚಾರಿ ಭಾವಗಳು. ಹೀಗೆ ಆತನ ಉತ್ಸಾಹ ವೀರರಸವಾಗಿ ಹೊರಹೊಮ್ಮಿದೆ.

3. ಮೊದಲು ತಿಳಿಗೇಡಿಗಳಾಗಿ ಜ್ಞಾತಿ ಮತ್ಸರದಿಂದ ಮೌರ್ಯರನ್ನು ಸಂಹರಿಸಿದರೂ ಮತ್ತೆ ಶತ್ರುಗಳ ಕಪಟಕ್ಕೆ ತಾವು ಒಳಗಾದೆವೆಂದು ತಿಳಿದಾಗ ನಂದರು ಹೇಡಿಗಳಾಗಿ 'ಓಡಿಹೋಗುವ ಪ್ರಯತ್ನ ಮಾಡಲಿಲ್ಲ. ಬದಲಾಗಿ ಯುದ್ಧೋತ್ಸಾಹವನ್ನೇ ತೋರಿದರು.

ಶೇಖರನು ಹೇಳಿದ ಸಂಕೇತ ಪ್ರಕಾರಕ್ಕೆ ಪರ್ವತರಾಜನ ಸೇನೆಯೆಲ್ಲವೂ ಯುದ್ಧಸನ್ನದ್ಧವಾಗಿ ನಂದರ ಸುತ್ತ ನಿಂತಿರಲು, ಜ್ಯೇಷ್ಠ ನಂದನು ತಮ್ಮ ಕುದುರೆಗಳು ಹತವಾದದ್ದನ್ನು ನೋಡಿ ಅದರ ಆಸೆಯನ್ನು ಬಿಟ್ಟು ತನ್ನ ಕೈಖಡ್ಗವನ್ನು ಝಳಪಿಸುತ್ತ ಕಪಟ ಮಲಯಕೇತುವಿನ ಶಿರಸ್ಸನ್ನು ಛೇದಿಸಿದನು. ಅಲ್ಲಿಂದ ಹಾರಿ ಪರ ಸೈನ್ಯವನ್ನು ಹೊಕ್ಕು ನಿಂತಲ್ಲಿ ನಿಲ್ಲದೇ ಹಾರಾಡುತ್ತಾ ಒಂದೊಂದು ಖಡ್ಗ ಪ್ರಹಾರದಿಂದ ಎಂಟು ಹತ್ತು ಅರಿಭಟರ ಶಿರಸ್ಸುಗಳನ್ನು ಕತ್ತರಿಸುತ್ತ ಪ್ರಳಯಕಾಲ ಭೈರವನೋ, ಖಡ್ಗಧಾರಿಯಾದ ವೀರಭದ್ರನೋ ಎಂಬಂತೆ ಶತ್ರುಗಳನ್ನು ಸಂಹರಿಸುತ್ತ ಬಂದನು. ಹೀಗೆ ತಮ್ಮಂದಿರಾದ ಎಂಟು ಜನ ನಂದರೂ ಒಬ್ಬರಿಗಿಂತೊಬ್ಬರು ಅಧಿಕ ಸಾಹಸವನ್ನು ತೋರಿಸುತ್ತ ನಿಜ ಖಡ್ಗ ಹರೆಳಿಂದ ಶತ್ರುಸೇನೆಯ ಗಜತುರಗ ರಥಿಕ ಪದಾತಿಗಳನ್ನು ಸಂಹರಿಸುತ್ತ ಅಷ್ಟದಿಕ್ಕುಗಳಲ್ಲಿ ಎಂಟು ಜನ — ಆಕಾಶಮಾರ್ಗದಲ್ಲಿ ಒಬ್ಬ — ಈ ಪ್ರಕಾರ ಸುತ್ತುತ್ತ, ಹಾರುತ್ತ, ಕಡಿಯುತ್ತ, ಕೂಗುತ್ತಾ ಪರಬಲವನ್ನು ಸಂಹರಿಸುತ್ತಿರಲು ಉಳಿದ ಶತ್ರುಸೈನಿಕರು 'ಓಡಿಹೋಗುತ್ತಿದ್ದರು.

ಇಲ್ಲಿ ನಂದರ ಪರಾಕ್ರಮವೇ ವಿಭಾವ. ಅವರು ತೋರಿದ ಧೈರ್ಯ ಶೌರ್ಯಗಳು, ಸುತ್ತುವ, ಹಾರುವ, ಕಡಿಯುವ, ಕೂಗುವಾಗಿನ ಚಲನವಲನಗಳೇ ಅನುಭಾವ. ಧೃತಿ, ಮತಿ, ಗರ್ವ, ರಭಸ, ಉಗ್ರತೆ, ಅಮರ್ಷ, ಸ್ಮೃತಿ, ರೋಮಾಂಚಗಳೆಲ್ಲ ವ್ಯಭಿಚಾರಿ ಭಾವಗಳು.

4. ನಂದರನ್ನು ರಾಕ್ಷಸನಿಂದ ದೂರಮಾಡಿ, ಜಪಶಾಲೆಯ ಬಳಿಯ ಯುದ್ಧದಲ್ಲಿ ಕೊಲ್ಲುವ ಸಂದರ್ಭದಲ್ಲಿ ಚಾಣಕ್ಯನೂ ರಣವೀರನಾಗಿ ಮೆರೆಯುತ್ತಾನೆ. ಆ ಚಿತ್ರಣ ಇಲ್ಲಿದೆ:

ಯುದ್ಧದಲ್ಲಿ ಆರು ಜನ ನಂದರು ಮಡಿದಿರಲು ಅಲ್ಲಿಗೆ ಬಂದ ಚಾಣಕ್ಯನು ಸೇನಾಪತಿಯಾದ ಶೇಖರನನ್ನುದ್ದೇಶಿಸಿ — ' ಅಯ್ಯಾ, ಸೇನಾಪತಿಯೇ, ಇವರೊಡನೆ ಎಷ್ಟು ಹೊತ್ತು ವಿನೋದ ಯುದ್ಧವು? ಬಲು ಬೇಗನೆ ಪಾಶಗಳನ್ನು ಬೀಸಿ, ಉಳಿದಿರುವ ಮೂರು ಮಂದಿ ನಂದರನ್ನು ಹಿಡಿದು ಬಂಧಿಸಿ, ಕಾಲುಗಳಿಗೆ ನೇಣುಗಳನ್ನು ಬೀರಿ, ಎಳಸಿ ಸಂಹರಿಸುವವನಾಗು' ಎಂದು ಆಜ್ಞಾಪಿಸಿದನು. ಅದರಂತೆಯೇ ಆತನು ನಂದರನ್ನು ಹಿಡಿದು ಬಂಧಿಸಿ ಪ್ರಹರಿಸುತ್ತಿದ್ದನು. ಆಗ ನಂದರು ' ಇದು ಧರ್ಮವೇ?' ಎಂದು ಪ್ರಶ್ನಿಸಲು ಚಂದ್ರಗುಪ್ತ ಚಾಣಕ್ಯರಿಬ್ಬರು, ಹಿಂದಿನ ಅವರ ಕುಕರ್ಮಗಳನ್ನು ನೆನಪಿಸುತ್ತಾ ಮೂದಲಿಕೆಯ ಮಾತನ್ನಾಡುವರು. ಆ ನಂದರನ್ನು ಸಂಹರಿಸಿದ ಶೇಖರನು ಅವರ ಶಿರಸ್ಸನ್ನು ತಂದು ಚಾಣಕ್ಯನಿಗೆ ತೋರಿಸುವನು. ಇದನ್ನು ನೋಡುತ್ತಿದ್ದ ಪರ್ವತರಾಜನು ಚಾಣಕ್ಯನ ಸಾಹಸಕ್ಕೆ ಭಯಪಟ್ಟನು.

ನವನಂದರನ್ನು ಕೊಲ್ಲಬೇಕೆಂಬ ಚಾಣಕ್ಯನ ದೃಢನಿಶ್ಚಯದ ಉತ್ಸಾಹವೇ ಇಲ್ಲಿನ ಸ್ಥಾಯೀಭಾವ. ಪಾಶಗಳನ್ನು ಬೀಸುವುದು, ಹಿಡಿದು ಬಂಧಿಸುವುದು, ಸಂಹರಿಸುವುದು ವಿಭಾವ. ಮೂದಲಿಕೆಯ ಮಾತನ್ನಾಡುವಾಗಿನ ಹಾವಭಾವವೇ ಅನುಭಾವ.

ರೋಮಾಂಚ, ಸ್ಮೃತಿ, ಅಮರ್ಷ, ಉಗ್ರತೆ, ಗರ್ವ — ಇಲ್ಲಿಯ ವ್ಯಭಿಚಾರೀ ಭಾವಗಳು.

5. ನಂದರನ್ನು ಸಂಹರಿಸಿಯಾದ ಮೇಲೆ ತಮ್ಮ ತಮ್ಮ ಪಡೆಗಳಲ್ಲಿ ಅರಿವಿಜಯ — ಸೂಚಕೋತ್ಸವಗಳಾಗಲಿ — ಎಂದು ಸೇನಾಪತಿಯಾದ ಶೇಖರನು ಹೇಳಲು —

ಆ ಸಮಯದಲ್ಲಿ ಉತ್ಸಾಹಿಗಳಾದ ವೀರ ಭಟರ ಸಿಂಹನಾದಗಳೂ
ಜಯಭೇರಿಶಬ್ದಗಳೂ ಫಿರಂಗಿಯ ಧ್ವನಿಗಳೂ ಭೂಮ್ಯಂತರಿಕ್ಷಗಳಂ
ಮುದ್ರಿಸುತ್ತಿರಲು ಪರ್ವತರಾಜನ ಸೇನಾಜನರು ಒಬ್ಬರೊಬ್ಬರನ್ನಾಲಿಂಗಿಸುತ್ತ
ಬಾಹುಗಳಂ ತಟ್ಟುತ್ತ ನೀನು ಶೂರನೆಂದು ಸ್ತುತಿಸುತ್ತ ನಾಟ್ಯಂಗಳನ್ನ
ವಲೋಕಿಸುತ್ತ ಸಕ್ಕರೆಗಳಂ ಬೀರಿಸುತ್ತ ಗಂಧಮಾಲಿಕೆಗಳಿಂದಲಂಕರಿಸುತ್ತ
ವಿವಿಧಪಾನಂಗಳಂ ಸೇವಿಸುತ್ತ ಸಂತೋಷದಲ್ಲಿರುತ್ತಿದ್ದರು.

ನಂದರ ನಾಶವಾಗಿರಲು ಉಂಟಾದ ಜಯಭೇರೀಶಬ್ದ, ಫಿರಂಗಿಯ ಧ್ವನಿ, ವೀರಭಟರ ಅರ್ಭಟಗಳೇ ಇಲ್ಲಿ ವಿಭಾವಗಳು. ಒಬ್ಬರನ್ನೊಬ್ಬರು ಆಲಿಂಗಿಸುವುದು, ಬಾಹುಗಳನ್ನು ತಟ್ಟುವುದು, ಇನ್ನೊಬ್ಬರನ್ನು ಸ್ತುತಿಸುವುದು, ನಾಟ್ಯಗಳನ್ನು ಅವಲೋಕಿಸುವುದು, ಸಕ್ಕರೆಯನ್ನು ಬೀರಿಸುವುದು, ಗಂಧಮಾಲಿಕೆಗಳಿಂದ ಇನ್ನೊಬ್ಬರನ್ನು ಅಲಂಕರಿಸುವುದು, ವಿವಿಧ ಪಾನಗಳನ್ನು ಸೇವಿಸುವುದು — ಇವೆಲ್ಲ ಅನುಭಾವಗಳು. ರೋಮಾಂಚ, ಗರ್ವ ಮೊದಲಾದವು ವ್ಯಭಿಚಾರೀಭಾವಗಳು.

••••••

<u>ರೌದ್ರರಸ:</u> ಕ್ರೋಧವು ರೌದ್ರಕ್ಕೆ ಸ್ಥಾಯೀಭಾವವು. ಇಲ್ಲಿ ನಾವು ಚಾಣಕ್ಯನ ಕ್ರೋಧದ ಹಲವು ಮುಖಗಳನ್ನು ಕಾಣುತ್ತೇವೆ.

(1) ಬ್ರಾಹ್ಮಣರ ಭೋಜನ ಪಂಕ್ತಿಯಲ್ಲಿ ಚಾಣಕ್ಯನು ಅಗ್ರಭಾಗದಲ್ಲಿ ಕುಳಿತಿರಲು, ಅದನ್ನು ನೋಡಿದ ನಂದರು, ವಿಮರ್ಶೆಯನ್ನೂ ಮಾಡದೇ ದೂತರಿಂದ ಆತನನ್ನು ಎಳೆಯಿಸಿಹಾಕಲು, ಆತನ ಜುಟ್ಟು ಬಿಚ್ಚಿಹೋಗುವುದು.

ಆಗ ಚಾಣಕ್ಯನು ಮಹಾಕೋಪದಿಂದೆದ್ದು ಕಣ್ಣುಗಳಂ ಕೆಂಪುಮಾಡುತ್ತ
ಹುಬ್ಬುಗಳಂ ಗಂಟಿಕ್ಕಿಕೊಂಡು ಪೀಠವನ್ನೊದೆದು ಕ್ರುದ್ಧನಾದ
ಮೃತ್ಯುವಿನಂತೆ ತುಟಿಗಳಂ ಕಡಿಯುತ್ತ ಹಲ್ಲುಗಳಂ ಮಸೆಯುತ್ತ

ಪಾದಗಳಂ ನಡುಗಿಸುತ್ತ, ಮೋರೆಯ ಮುಸುಗುಟ್ಟುತ್ತ ...
ನಂತರಂ ಬರಬರನೆ ನೋಡುತ್ತ, ಕ್ರೂರ ಪ್ರತಿಜ್ಞೆಯಂ ಮಾಡಿದನು.

ಇಲ್ಲಿ ನಂದರು ಚಾಣಕ್ಯನಿಗೆ ಮಾಡಿದ ಅವಮಾನ, ಆಡಿದ ಬಿರುಸು ಮಾತು, ಆತನನ್ನು ಪೀಠದಿಂದ ಎಳೆಸಿಹಾಕಿದ್ದು ಇವೆಲ್ಲ ವಿಭಾವಗಳು. ಇದಕ್ಕೆ ಪ್ರತಿಯಾಗಿ ಚಾಣಕ್ಯನು ಕಣ್ಣುಗಳನ್ನು ಕೆಂಪು ಮಾಡಿದ್ದು, ಹುಬ್ಬುಗಳನ್ನು ಗಂಟಿಕ್ಕಿಕೊಂಡಿದ್ದು, ಪೀಠವನ್ನೊದ್ದುದು, ತುಟಿಗಳನ್ನು ಕಚ್ಚಿದುದು, ಹಲ್ಲುಗಳನ್ನು ಮಸೆದುದು, ಪಾದಗಳನ್ನು ನಡುಗಿಸಿದ್ದುದು, ಮೋರೆಯು ಮುಸುಗುಟ್ಟಿದುದು, ಬರಬರನೇ ನೋಡಿದುದು ಕ್ರೂರ ಪ್ರತಿಜ್ಞೆ ಮಾಡಿದುದು — ಇವೆಲ್ಲ ಅನುಭಾವಗಳು.

ನಂದರ ದುಷ್ಕೃತ್ಯಕ್ಕಾಗಿ ಚಾಣಕ್ಯನ ಮನಸ್ಸಿನಲ್ಲಿ ಪ್ರತಿಕ್ರಿಯಾರೂಪವಾಗಿ ಮೂಡಿದ ಉಗ್ರತೆ, ಅಮರ್ಷ, ಸ್ಮೃತಿ, ಚಪಲತೆ, ಅಸೂಯೆಗಳು ಸಂಚಾರೀಭಾವಗಳು.

ಹೀಗೆ ಇಲ್ಲಿ ಶ್ರುತಿಕಟುವಾದ ಪರುಷವರ್ಣವಿನ್ಯಾಸ, ಸಂಯುಕ್ತಾಕ್ಷರಗಳ ದೀರ್ಘ ನಡೆ ಇವುಗಳಿಂದ ರೌದ್ರವು ಚೆನ್ನಾಗಿ ಪ್ರತೀತವಾಗಿದೆ.

(2) ರಾಕ್ಷಸನ ಭೇದತಂತ್ರಕ್ಕೆ ಒಳಗಾದ ಪರ್ವತರಾಜನು — 'ಚಂದ್ರಗುಪ್ತನನ್ನು ಶತ್ರುಗಳಿಗೆ ಒಪ್ಪಿಸುವುದೋ 'ಏನು?' ಎಂದು ಭಾವವಾಗಿ ಕೇಳಿದುದಕ್ಕೆ ಚಾಣಕ್ಯನು ಹಸಿದ ಹೆಬ್ಬುಲಿಯಂತೆಯೂ ಹೆಡೆಮೆಟ್ಟಿದ ಉರಗನಂತೆಯೂ ಅತಿಕೋಪಾತುರನಾಗಿ ನವನಂದರನ್ನೂ ಆ ದುಷ್ಟರಿಗೆ ಸಹಾಯವಾದವರನ್ನೂ

ಹೂಂಕಾರಮಾತ್ರದಿಂದಲೇ ಭಸ್ಮೀಭೂತರಾಗಿ ಮಾಡುವೆನು ಎನ್ನುತ್ತಿರಲು
ಅವನ ಮುಖದಲ್ಲಿ ಪ್ರಳಯಕಾಲದ ಅಗ್ನಿ ಯಮ ರುದ್ರರ ಮೂರು
ತೇಜಸ್ಸು 'ಏಕೀಭವಿಸಿದಂತೆ ಪ್ರಕಾಶಿಸುತ್ತಿದ್ದಿತು.

ಪರ್ವತರಾಜನ ಮಾತು ಇಲ್ಲಿಯ ವಿಭಾವ, ಚಾಣಕ್ಯನಕೋಪದ ಪ್ರದರ್ಶನ, ಹೂಂಕಾರ, ಭಸ್ಮೀಭೂತರನ್ನಾಗಿ ಮಾಡಿಬಿಡುವೆನು — ಎನ್ನುವ ಮಾತು ಇವೆಲ್ಲ ಅನುಭಾವ, ಅವನ ಮುಖದಲ್ಲಿ 'ಏಕೀಭವಿಸಿದ ಅಗ್ನಿ, ಯಮ, ರುದ್ರರ ತೇಜಸ್ಸು — ಸಂಚಾರೀ ಭಾವವನ್ನು ವ್ಯಕ್ತಪಡಿಸುತ್ತದೆ. ಇಲ್ಲಿಯ ಉಪಮೆಗಳು ರೌದ್ರರಸವನ್ನು ಪೋಷಿಸುತ್ತವೆ.

(3) ಪರ್ವತರಾಜನ ಸೈನ್ಯದಲ್ಲೆಲ್ಲ ನವನಂದರು ಸಂಚರಿಸುತ್ತ, ಇಡೀ ಸೈನ್ಯವೇ ನಂದಮಯವಾಗಿ ಕಾಣುತ್ತಿದೆಯೆಂಬ ವರ್ತಮಾನವನ್ನು ಕೇಳಿದ ಚಾಣಕ್ಯನು

ಕ್ರುದ್ಧನಾಗಿ ಅತಿವೇಗದಿಂದ ತನ್ನ ಉತ್ತರೀಯವನ್ನು ನಡುವಿಗೆ
ಕಟ್ಟಿ ಯಜ್ಞೋಪವೀತಮಂ ಕಿವಿಗೆ ಸುತ್ತಿ, ದಂಡಮಂ ಪಿಡಿದು,

ಇನ್ನೂ ನಂದಾಧಮರು ಹತರಾಗದಿದ್ದ ಬಳಿಕ ಎಲ್ಲರೂ ಹೇಡಿಗಳು —
ನಾನೇ ಹೋಗಿ ಸಂಹರಿಸುವೆಂದು ಓಡಿ ಬರುತ್ತಿದ್ದನು.

ನವನಂದರ ಪೌರುಷ, ಅವರ ಹೊಗಳುವಿಕೆಯ ವರ್ತಮಾನವೇ ಇಲ್ಲಿನ ವಿಭಾವ. ಕ್ರುದ್ಧನಾಗುವುದು, ಉತ್ತರೀಯವನ್ನು ನಡುವಿಗೆ ಕಟ್ಟುವುದು, ಯಜ್ಞೋಪವೀತವನ್ನು ಕಿವಿಗೆ ಸುತ್ತುವುದು, ಕೈಯಲ್ಲಿ ದಂಡವನ್ನು ಹಿಡಿಯುವುದು, ನಂದರನ್ನು ಹೇಡಿಗಳೆಂದು ಜರೆಯುವುದು, ಅವರನ್ನು ಸಂಹರಿಸಲು ಓಡುವುದು — ಇವು ಅನುಭಾವಗಳು. ಉಗ್ರತೆ, ಅಸೂಯೆ, ಮದ, ಅಮರ್ಷ, ಆವೇಗ, ಆವೇಶ — ಇವೆಲ್ಲ ಸಂಚಾರಿಭಾವಗಳು.

(4) ಚಾಣಕ್ಯನ ಕ್ರೋಧ ಶತ್ರುಗಳ ವಿರುದ್ಧ ಮಾತ್ರವಲ್ಲ. ದಾರಿಯಲ್ಲಿ ಹೋಗುವಾಗ ಪಾದಕ್ಕೆ ಸುತ್ತಿಕೊಂಡ ಗರಿಕೆಯ ಬಳ್ಳಿಯ ವಿರುದ್ಧವೂ ಅವನ ರೌದ್ರಾವತಾರವನ್ನು ನಾವು ಕಾಣುತ್ತೇವೆ.

> ನೈಮಿಶಾರಣ್ಯಮಾರ್ಗಮಂ ಹಿಡಿದು ಹೋಗುತ್ತಿದ್ದ ಚಾಣಕ್ಯನ ಪಾದಕ್ಕೆ ಮಾರ್ಗದಲ್ಲಿರುವ ಗರಿಕೆಯ ಬಳ್ಳಿ ಸುತ್ತಿಕೊಳ್ಳಲು ಮುಂದೆ ನಡೆಯುವ ವೇಗದಿಂದ ಮುಗ್ಗರಿಸಿ ಭೂಮಿಯಂ ಹಿಡಿದ ಆತನು ಮಹಾಕ್ರುದ್ಧನಾಗಿ ಜಡವಾದ ಗರಿಕೆಯ ಹುಲು ಮಾರ್ಗನಿರೋಧಮಂ ಮಾಡಿದುದರಿಂದ ಇದರ ಮೂಲೋತ್ಪಾಟನಮಂ ಮಾಡಬೇಕೆಂದು ಕಾರ್ಯಾಂತರಮಂ ಬಿಟ್ಟು ತನ್ನ ದಂಡಾಗ್ರದಿಂದಲೇ ಆ ಗರಿಕೆಯ ಬಳ್ಳಿಯನ್ನು ಸಮೂಲವಾಗಿ ಅಗೆದು ಛೇದಿಸಿ ತನ್ನ ಮಾರ್ಗವನ್ನು ಹಿಡಿದುಹೋಗುತ್ತಿದ್ದನು.

ಇಲ್ಲಿ ಚಾಣಕ್ಯನು ನಡೆದುಹೋಗುತ್ತಿದ್ದಾಗ ಆ ಗರಿಕೆಯ ಬಳ್ಳಿ ಕಾಲಿಗೆ ಸುತ್ತಿಕೊಂಡು ದಾರಿಗೆ ತಡೆಯುಂಟುಮಾಡಿದ್ದೇ — ವಿಭಾವ; ಆತ ತನ್ನ ದಂಡಾಗ್ರದಿಂದ ಅದನ್ನು ಬೇರು ಸಹಿತ ಕಿತ್ತುದು ಅನುಭಾವ. ಈ ಸಿಟ್ಟಿನ ಜತೆಯಲ್ಲಿ ಮನಸ್ಸಿನಲ್ಲಿ ಹುಟ್ಟಿಕೊಂಡ ಭಾವಗಳು ಸಂಚಾರಿಗಳು.

(5) ಚಾಣಕ್ಯನು ಮಾತ್ರ ಇಲ್ಲಿ ಕೋಪೋದ್ದೀಪಿತನಾದುದಲ್ಲ. ಅನ್ಯತ್ರ ಒಂದೆರಡು ಉದಾಹರಣೆಗಳು ಸಿಗುತ್ತವೆ. ಲಂಪಾಕಾಧಿಪತಿಯು ಪರ್ವತರಾಜ್ಯದ ವಿರುದ್ಧ ದಂಡೆತ್ತಿ ಯುದ್ಧಕ್ಕೆ ಹೊರಟಿದ್ದನು. ಅದೇ ಸಮಯದಲ್ಲಿ ಪರ್ವತರಾಜನ ಸಹಾಯವನ್ನು ಯಾಚಿಸಿ ಬಂದಿದ್ದ ಚಾಣಕ್ಯನು ಇದನ್ನು ತಿಳಿದು ಕಾಮರೂಪಾಧಿಪತಿಗೆ ಕಪಟ ಪತ್ರವೊಂದನ್ನು ಕಳುಹಿಸುವನು. ಈ ಪತ್ರದಲ್ಲಿಯ ಒಕ್ಕಣೆಯನ್ನು ಓದಿ ಕಾಮರೂಪಾಧಿಪತಿಯು 'ಕಲ್ಲಿಟ್ಟು ಕೆಣಕಿದ ವ್ಯಾಘ್ರದಂತೆ ಕೋಪೋದ್ದೀಪಿತನಾಗಿ ಘುಡುಘುಡಿಸಿದನು'.

ಇಲ್ಲಿ ಲಂಪಾಕಪತಿಯ ಆಸ್ಥಾನದಲ್ಲಿ ಕಾಮರೂಪಾಧಿಪತಿಯ ಪೂರ್ವಜರ ಬಗ್ಗೆ ಕೀಳು

ಮಾತನಾಡಿದರೆಂಬುದು — ವಿಭಾವ, ಸಿಟ್ಟಿನಿಂದ ಘುಡುಘುಡಿಸುವುದು — ಅನುಭಾವ. ಸಿಟ್ಟಿನ ಪ್ರದರ್ಶನದಲ್ಲಿಯ ಉಗ್ರತೆ, ಸ್ಮೃತಿ, ಚಪಲತೆ ಅಸೂಯೆ ಇತ್ಯಾದಿಗಳು ಸಂಚಾರೀಭಾವಗಳು.

ಬೀಭತ್ಸ ರಸ: ಜುಗುಪ್ಸೆಯು ಇದರ ಸ್ಥಾಯೀಭಾವವು. ಇಲ್ಲಿ ಉದ್ವೇಗ ಬಲು ಹೆಚ್ಚು. 'ಮುದ್ರಾಮಂಜೂಷ' ದಲ್ಲಿ ನಮಗೆ 'ಕ್ಷೋಭಜ ಬೀಭತ್ಸ' [47] ದ ದರ್ಶನವಾಗುವುದು.

1. ಮೌರ್ಯರು ತಮಗಿಂತ ಅಧಿಕರಾದಾರು ಎಂದು ಭಾವಿಸಿದ ನಂದರು ಅವರನ್ನು ನೆಲಮಾಳಿಗೆಯಲ್ಲಿ ಕುಳ್ಳಿರಿಸಿ, ಅದರ ಬಾಗಿಲನ್ನು ಮುಚ್ಚಿಸಿದರು. ಅಲ್ಲಿನ ದೂತರು ಮೌರ್ಯರಿಗೆ ಅನ್ನನೀರನ್ನು ಕೊಟ್ಟೂಕೊಡದಂತೆ ಮಾಡುತ್ತ ಬಂದುದರಿಂದ ಅವರು ಹಸಿವು, ಬಾಯಾರಿಕೆಗಳಿಂದ ಪೀಡಿತರಾಗಿ ಕೃಶರಾಗಿ, ದಿನದಿನಕ್ಕೆ ಎಂಬು ಹತ್ತು ಜನದ ಮೇರೆಗೆ ಸತ್ತುಹೋದರು. ಶವಗಂಧಭೂಯಿಷ್ಠವಾದ ಆ ಸ್ಥಳವು ಬದುಕುಳಿದಿದ್ದ ಚಂದ್ರಗುಪ್ತನಿಗೆ ಜುಗುಪ್ಸೆಯನ್ನು ಹುಟ್ಟಿಸುತ್ತಿತ್ತು.

ಪ್ರತಿನಿತ್ಯ ಆತ ನೋಡುತ್ತಿದ್ದ ತನ್ನವರ ಸಾವು, ಅವರ ಆಕ್ರಂದನವೇ ವಿಭಾವ, ಸಾಯುವಾಗಲಾದರೂ ನೆಮ್ಮದಿಯಿಂದ ಪ್ರಾಣಗಳನ್ನು ಬಿಡುವೆನೆಂದು ಆತನು ದೂತರಲ್ಲಿ ಹೇಳುವ ಮಾತು — ಅನುಭಾವ. ಉದ್ವೇಗ, ಆವೇಗ, ಭಯ ದುಃಖಗಳಿಂದ ಕೂಡಿದ 'ಮೋಹ' ವು ಸಂಚಾರಿಗಳು.

2. ಎರಡೂ ಕಡೆಯ ಸೈನಿಕರು ಪರಸ್ಪರ ಪ್ರಹರಿಸುತ್ತ ಯುದ್ಧವನ್ನು ಮಾಡುತ್ತಿರಲು ಯುದ್ಧಭೂಮಿಯು —

> ಗಾಯವಡೆದ ಆನೆಗಳ ಸೊಂಡಿಲುಗಳಿಂದಲೂ, ಭಗ್ನವಾದ ಸೂತಬೃಂದಗಳಿಂದಲೂ ಛೇದಿಸಲ್ಪಟ್ಟ ಪದಾತಿಗಳ ಅವಯವಗಳಿಂದಲೂ, ಸಂಹೃತರಾದ ರಥಿಕರ ಕಂಠದೇಶಗಳಿಂದಲೂ, ಛಿನ್ನರಾದ ಗಜಾರೂಢರ ಮಸ್ತಕಗಳ ದೆಸೆಯಿಂದಲೂ ಗತಪ್ರಾಣರಾದ ತುರಗಸಾರಥಿಗಳ ಮುಖಕುಹರಗಳಿಂದಲೂ ಹೊರಟು ಬ್ಯಾಗಿಬರುವ ರಕ್ತನದಿಗಳ ಪ್ರವಾಹಗಳು ನೇರೆಹೆಚ್ಚಿ ಬರುತ್ತಿರಲು ಭಯಭ್ರಾಂತರಾಗಿ 'ಓಡಿಹೋಗುವ ಜನರು ಆ ರಕ್ತ ತರಂಗಿಣಿಗಳಂ ದಾಟಲಾರದೆ ಮುಳುಗಿ ತೇಲಿ ಕಬಂಧಗಳನ್ನವಲಂಬಿಸಿ ದಾಟುತ್ತಿರಲು ರಣಭೂಮಿಯು ಅತಿಭಯಂಕರವಾಗಿ ತೋರುತ್ತಿದ್ದಿತು.

ಗಾಯಗೊಂಡ ಆನೆಗಳ ಸೊಂಡಿಲುಗಳನ್ನು, ಮನುಷ್ಯರ ಅವಯವಗಳನ್ನು, ಅವುಗಳಿಂದ ಹೊರಟು ಬಂದ ರಕ್ತನದಿಗಳ ಪ್ರವಾಹವನ್ನು ನೋಡುವುದು — ವಿಭಾವ. ಭಯಭ್ರಾಂತರಾಗುವುದು, ಕಬಂಧಗಳನ್ನೇ ಅವಲಂಬಿಸಿ ದಾಟಲು ಪ್ರಯತ್ನಿಸುವುದು ಅನುಭಾವ. ಇಲ್ಲಿ ಆವೇಗ, ಆರ್ತಿ (ಗ್ಲಾನಿ), ಶಂಕಾ ಮೊದಲಾದುವು ಸಂಚಾರಿಭಾವಗಳು.

3. ಚಾಣಕ್ಯನು ನೇಮಿಸಿದ ವೇಳೆಗೆ ಶೇಖರನು ತನ್ನ ಭಟರಿಗೆ ಆಜ್ಞಾಪಿಸಿದಾಗ ಅವರು —

ಯುದ್ಧದಲ್ಲಿ ಸಂಹೃತರಾದ ನಂದರ ಶಿರೋಭೂಷಣ ಸಮೇತನಾದ ರುಂಡಗಳಂ ತೆಗೆದುಕೊಂಡು ಚಾಣಕ್ಯನ ಮುಂದೆ ತಂದಿಟ್ಟು. ಇವು ನಂದರ ಒಂಬತ್ತು ಶಿರಸ್ಸುಗಳು — ಎಂದು ಹೇಳಲು ಕಸ್ತೂರಿಯ ತಿಲಕಗಳಿಂದಲೂ ಕಂಠದಲ್ಲಿ ಲೇಪಿಸಿದ ಅನುಲೇಪನಗಳಿಂದಲೂ ರತ್ನ ಖಚಿತವಾದ ಶಿರೋಭೂಷಣಗಳಿಂದಲೂ ಶೋಭಿಸುತ್ತ ಔಡುಗಳಂ ಕಚ್ಚಿ ಅರೆಗಣ್ಣಂ ಮುಚ್ಚಿ ನಿದ್ರೆಯಂ ಮಾಡುತ್ತಿರುವವರಂತೆ ಇರುವ ಶಿರಸ್ಸುಗಳಂ (ಚಾಣಕ್ಯನು) ನೋಡಿದನು.

ಇಲ್ಲಿ ನಂದರ ದೇಹದಿಂದ ಬೇರೆಯಾದ ಶಿರಸ್ಸುಗಳು, ಅವುಗಳ ಸ್ಥಿತಿಯೇ ವಿಭಾವ, ಅವರ ದುರ್ದಶೆಯನ್ನು ಕಂಡು ಮರುಕಪಡುವ ಚಾಣಕ್ಯನ ವರ್ತನೆಯೇ (ವಿವರವಾಗಿದೆ) ಅನುಭಾವ, ಉದ್ವೇಗ — ಆವೇಗಗಳೇ ಸಂಚಾರೀ ಭಾವಗಳು.

<u>ಭಯಾನಕ ರಸ:</u> ಭಯವು ಇದರ ಸ್ಥಾಯೀಭಾವವು. ವೀರರ ಕೋಪವನ್ನು ನೋಡಿದಾಗ ಸಾಮಾನ್ಯ ಜನರಲ್ಲಿ ಭಯ ಹುಟ್ಟುವುದು ಸಹಜ.

1. ಚಾಣಕ್ಯ ಪ್ರತಿಜ್ಞೆ ಮಾಡಿದ ನಂತರ ಅಲ್ಲಿದ್ದ ಸಭಾ ಜನರು ಭೀತರಾದ ಪ್ರಸಂಗ ಇಂತಿದೆ:

ನಂದರು ದೂತರು ಪೀಠದಿಂದ ಎಳೆಸಿಹಾಕಿದ್ದರಿಂದ ಚಾಣಕ್ಯನ ಜುಟ್ಟು ಬಿಚ್ಚಿಹೋಗಲು ಆತನು —

ಕೆರಳಿದ ಕೋಪವಂ ಮನದಲ್ಲಿ ಅಡಗಿಸಿ ಸಂಚರಂ ಬಡಬರನೆ ನೋಡುತ್ತ — 'ಎಲೈ ನಂದಾಧಮರುಗಳಿರಾ, ಅಶನಾರ್ಥಿಯಾಗಿ ಬಂದ ಅತಿಥಿಯಂ ನಿರಾಕರಿಸಿದ ಗೃಹಸ್ಥನ ಆಯುಷ್ಯವಂ ಮೃತ್ಯುವು ಅಪಹರಿಸುವುದೆಂದು ಹೇಳುವ ಶಾಸ್ತ್ರಾರ್ಥವನಿಮ್ಮಲ್ಲೇ ಫಲಿಸುವಂತೆ ತೋರುತ್ತದೆ. ನಿರಪರಾಧಿಯಾಗಿ ಭೋಜನಪಂಕ್ತಿಯಲ್ಲಿ ಕುಳಿತಿದ್ದ ನನ್ನನ್ನು ಬ್ರಾಹ್ಮಣಾಧಮನೆಂದೂ ತುಚ್ಛನೆಂದೂ ಮಹಾಪುರುಷವಾಕ್ಯದಿಂದ ಎಲ್ಲರೂ ನೋಡುವಂತೆ ಅಪಮಾನಪೂರ್ವಕವಾಗಿ ನನ್ನನ್ನು ಹೊರ ಎಳೆಸಿದವರಾದಿರೋ ... (ಜಾಗ) ನಿಮ್ಮಂ ಸಂಹರಿಸಿ ಕಾಲಸರ್ಪದಂತೆ ಬಿಚ್ಚಿರುವ ಈ ನನ್ನ ಜುಟ್ಟಂ ಕಟ್ಟುವೆನು ... ಯೆಂದು ಕ್ರೂರ ಪ್ರತಿಜ್ಞೆಯಂ ಮಾಡಿ ಎಲ್ಲರೂ ನೋಡುವಂತೆ ಚಾಣಕ್ಯನು ಅಲ್ಲಿಂದ ಎದ್ದುಹೋಗುತ್ತಿರಲು ಆಗ ಮಹೋತ್ಪಾತಗಳಾದ ಭೂಕಂಪವೂ ಧೂಮಕೇತುಗಳೂ ಉದ್ಭವಿಸುತ್ತಿರಲು ಅದಂ ನೋಡಿ ಸಭಾಜನರು ಮಹಾಭೀತರಾದರು. ಆಗ ಶತ್ರುಗಳ ಮೇಲೆ ಪೊಸೆಯಂ

ತಿರುಗುವ ವೀರನಂತೆ ಚಾಣಕ್ಯನು ತನ್ನ ಜುಟ್ಟಂ ಕೈಯಿಂದ ನೇವರಿಸುತ್ತ ತೆರಳಿದನು.

ಇಲ್ಲಿ ಚಾಣಕ್ಯನ ಪ್ರತಿಜ್ಞೆ ಅತ ತನ್ನ ಜುಟ್ಟನ್ನು ನೇವರಿಸಿದ್ದು ಭೂಕಂಪ, ಧೂಮಕೇತುಗಳ ಉದ್ಭವ — ಇವೆಲ್ಲ ವಿಭಾವಗಳು. ಅಲ್ಲಿನ ಸಭಾಜನರು ಪರಸ್ಪರ ಮಾತನಾಡಿಕೊಂಡದ್ದು ಅನುಭಾವ. ಸ್ತಂಭನ, ಗದ್ಗದ, ದೈನ್ಯ, ಆವೇಗ, ಚಡಪಡಿಸುವಿಕೆ, ಹೆದರಿಕೆ — ಇವು ಸಂಚಾರಿಭಾವಗಳು.

2. ಯುದ್ಧದ ಸಂದರ್ಭದಲ್ಲಿ:

ರಾಕ್ಷಸನು ಧನುರ್ಧಾರಿಯಾಗಿ ಶತ್ರುಗಳನ್ನು ಸಂಹರಿಸಿಕೊಂಡು ಬರಲು — ಶತ್ರುಗಳ ಚತುರಂಗಬಲವು ಭೂಮಿಯಲ್ಲಿ ಉರುಳಿ ರಕ್ತವನ್ನು ಸ್ರವಿಸುತ್ತ, ಪ್ರಾಕಾರದ ಸುತ್ತಲೂ ಅತಿ ರೌದ್ರವಾಗಿ ತೋರುತ್ತಿರಲು ರಾಕ್ಷಸನ ಶರವತಿಗೆ ತರಹರಿಸಲಾರದೆ ಪರಸೈನ್ಯವು ಪಲಾಯನಗೈದಿತು.

ಇಲ್ಲಿ ರಾಕ್ಷಸನ ಕೋಪ, ಶೌರ್ಯ, ಸಾಹಸವೇ ವಿಭಾವ. ಶತ್ರುಗಳ ಚತುರಂಗ ಬಲವು ಭೂಮಿಯಲ್ಲಿ ಉರುಳುವುದು, ರಕ್ತವನ್ನು ಸ್ರವಿಸುವುದು ಇತ್ಯಾದಿ ಅನುಭಾವ. ಶತ್ರು ಸೈನಿಕರ ಸ್ತಂಭನ, ಗದ್ಗದ, ರೋಮಾಂಚ, ನಡುಕ, ವೈವರ್ಣ್ಯ, ಹೆದರಿಕೆ, ಆವೇಗ ಇತ್ಯಾದಿ ಸಂಚಾರಿಭಾವಗಳು.

●●●●●

<u>ಅದ್ಭುತ:</u> • ಆಶ್ಚರ್ಯವು ಇದರ ಸ್ಥಾಯೀಭಾವವು. ಘಟನೆಗಳಲ್ಲಿಯ ಕೌತುಕ, ವಿಸ್ಮಯವು ಇದಕ್ಕೆ ಕಾರಣವಾಗುವುದು.

1. ಸರ್ವಾರ್ಥಸಿದ್ಧಿ ರಾಜನು ತನ್ನ ಪತ್ನಿಯರಾದ ಸುನಂದಾದೇವಿ ಮತ್ತು ಮುರಾದೇವಿಯರೊಂದಿಗೆ ಪ್ರಯಾಗ ಸ್ನಾನಕ್ಕೆ ಹೋಗಿದ್ದನು. ಅಲ್ಲಿ:

ಮುರಾದೇವಿ ಮಾಡುತ್ತಿರುವ ಪೂಜಾಭಕ್ತಿಗಳಿಗೆ ಸುಪ್ರೀತಳಾದ ಭಾಗೀರಥೀ ದೇವಿಯು ನಿತ್ಯದಲ್ಲಿಯೂ ಆ ಮುರಾದೇವಿಯ ಸ್ವಪ್ನದಲ್ಲಿ ಸುವಾಸಿನೀರೂಪದಿಂದ ಬಂದು ನನ್ನ ಮನೆಗೆ ಬಾರೆಂದು ಮುರಾದೇವಿಯನ್ನು ಕರೆಯುತ್ತಿರಲು — ಒಂದು ದಿನ ತ್ರಿವೇಣಿಯಲ್ಲಿ ಸ್ನಾನವನ್ನು ಮಾಡಿ ಭಾಗೀರಥಿಯನ್ನು ಪೂಜಿಸಿ ನನ್ನನ್ನು ಕೃತಾರ್ಥಳನ್ನಾಗಿ ಮಾಡೆಂದು ಪ್ರಾರ್ಥಿಸಲು ಅವಳ ಮನೋನಿಶ್ಚಯಕ್ಕೆ ಪ್ರಸನ್ನಳಾದ ಗಂಗಾದೇವಿಯು ಎಲ್ಲರೂ ನೋಡುವಂತೆ ತನ್ನ ದಿವ್ಯಹಸ್ತದಿಂದ ಆ ಮುರಾದೇವಿಯ ಹಸ್ತವನ್ನು ಹಿಡಿದು ಕರೆದುಕೊಂಡು ಅದೃಶ್ಯವಾಗಲು ಆ ಆಶ್ಚರ್ಯವನ್ನು ಅಲ್ಲಿದ್ದ ಜನರು ನೋಡಿ ಸರ್ವಾರ್ಥಸಿದ್ಧಿಗೆ ತಿಳಿಸಿದರು.

ಇಲ್ಲಿ ಗಂಗಾದೇವಿಯು ತನ್ನ ದಿವ್ಯಹಸ್ತದಿಂದ ಆ ಮುರಾದೇವಿಯ ಕೈಹಿಡಿದುಕೊಂಡು ಅದೃಶ್ಯವಾದದ್ದು — ವಿಭಾವ. ಅಲ್ಲಿದ್ದ ಜನರು ಕಣ್ಣರಳಿಸಿನೋಡಿದ್ದು ಅನುಭಾವ. ಆಗ ಅವರಿಗಾದ ರೋಮಾಂಚ ಸಂಭ್ರಮ ಸಂಚಾರಿಗಳು.

2. ರಾಕ್ಷಸನ ಭೇದೋಪಾಯದಿಂದ ಚಾಣಕ್ಯನ ತಂತ್ರವು ಫಲಿಸುವುದಿಲ್ಲವೆಂದು ತಿಳಿದ ಇಂದುಶರ್ಮನು ತನ್ನ ಶಿಷ್ಯನಾದ ವೇಗಶರ್ಮನಲ್ಲಿ ಹೀಗೆ ಹೇಳುತ್ತಾನೆ:

> ಈ ಮಂಟಪದ ಸಮೀಪದಲ್ಲಿ ಯಾರದೋ ದಿವ್ಯಾಶ್ವವು ಅಣಿಮಾಡಿ ಕಟ್ಟಿದೆ. ಈಗಲೇ ಈ ಕಾಡಿಗೆಯಂ ಅದರ ಹಣೆಯಲ್ಲಿಟ್ಟು ನೀನೂ ಹಾಗೇ ಇಟ್ಟುಕೊಂಡು ಅದರ ಮೇಲೆ ಕುಳಿತರೆ ನೀನು ಪ್ರಾಣಮಾತ್ರಕ್ಕೆ ಗೋಚರನಾಗುವುದಿಲ್ಲ. ಈ ಚೂರ್ಣವಂ ನೀರಿನಲ್ಲಿ ಕದಡಿ ಕುಡಿದರೆ ಒಂದು ಮಾಸ ಪರಿಯಂತರವೂ ಹಸಿವು ಬಾಯಾರಿಕೆ ನಿದ್ರೆ ದಣಿವು ಸಹ ಆಗುವುದಿಲ್ಲ. ಅಶ್ವಕ್ಕೂ ಇದೇ ರೀತಿಯಂ ಮಾಡಿ ರಾಜಮಾರ್ಗವಂ ಬಿಟ್ಟು ಸಮೀಪವಾದ ಅರಣ್ಯಪಥವಂ ಹಿಡಿದುಹೋಗಿ ಕಾಡಿಗೆಯಂ ತೊಳೆದುಕೊಂಡು ಈ ಕಾಗದವಂ ಚಾಣಕ್ಯರಿಗೆ ಕೊಡು.

ಇಲ್ಲಿ ಅತಿ ಲೌಕಿಕ ವಸ್ತುಗಳಾದ ಕಾಡಿಗೆ ಹಾಗೂ ಚೂರ್ಣಗಳ ಉಪಯೋಗವೇ ವಿಭಾವ. ಅದನ್ನು ಧರಿಸಿದ ವೇಗಶರ್ಮನು ಸಾಧಿಸಿದ ಕಾರ್ಯದಿಂದ ಆಶ್ಚರ್ಯವುಂಟಾಗುವುದು ಸಹಜ.

<u>ಕರುಣರಸ:</u> ಶೋಕವು ಇದರ ಸ್ಥಾಯೀಭಾವವು. ಇಷ್ಟಜನರ ವಧೆಯನ್ನು ನೋಡುವುದಾಗಲೀ, ಕೇಳುವುದಾಗಲೀ ಇದಕ್ಕೆ ಕಾರಣವಾಗುವುದು.

1) ಮೌರ್ಯರು ಮೃತರಾದರು ಎಂದು ನಂದರು ಬರೆದುಕಳುಹಿಸಿದ್ದ ಕಾಗದದ ಒಕ್ಕಣೆಯನ್ನು ರಾಕ್ಷಸನು 'ಓದಿಹೇಳಲು —

> ಅದಂ ಕೇಳಿದ ಮಾತ್ರದಲ್ಲೇ ರಾಯನು ಮೂರ್ಛಾಗತನಾಗಿ ಬೀಳಲು ಕೂಡಲೇ ಸುನಂದಾದೇವಿಯು ಬಂದು ಶೈತ್ಯೋಪಚಾರದಿಂದ ಸಮಾಧಾನಗೊಳಿಸಿದ ಮೇಲೆ ಚೇತರಿಸಿಕೊಂಡು...
> ನಾನು ನಿರ್ಭಾಗ್ಯನಾದುದರಿಂದ ಈ ಪುತ್ರಶೋಕಕ್ಕೆ ಒಳಗಾದೆನು. ಹಾ ! ಮೌರ್ಯನೇ !!! ನಿನಗೆ ಪುತ್ರಸಮೇತವಾಗಿ ಇಂಥ ದುರ್ಮರಣವು ಪ್ರಾಪ್ತವಾಯಿತೆ ! ಎಂದು ಬಹಳವಾಗಿ ಪ್ರಲಾಪಿಸಿದನು.

ಇಲ್ಲಿ ಮೌರ್ಯ ಮತ್ತು ಅವನ ಮಕ್ಕಳ ಸಾವಿನ ಸುದ್ದಿಯೇ ವಿಭಾವವು. ಸರ್ವಾರ್ಥಸಿದ್ಧಿಯು 'ಹಾ ಮೌರ್ಯನೇ' ಎಂದೆಲ್ಲ ಪ್ರಲಾಪಿಸುವುದು ಅನುಭಾವವು. ಮೂರ್ಛೆ, ಕಣ್ಣೀರು ಮೊದಲಾದವು ಸಂಚಾರೀ ಭಾವಗಳು.

2. ನಂದರು ಸಂಹೃತರಾದ ವಿಚಾರವನ್ನು ದೂತರು ರಾಕ್ಷಸನಿಗೆ ತಿಳಿಸಿದಾಗ ಅವನು ಅಲ್ಲಿಗೆ ಬಂದು ಸೂರೆಹೋದ ಗೂಡಾರವನ್ನೂ ಉರುಳಿರುವ ಹೆಣಗಳನ್ನೂ, ಬೇಯುತ್ತಿರುವ ಜಪಶಾಲೆಯನ್ನೂ ಕಂಡು —

> ಹಾ! ಹಾ! ನಂದರು ಸಂಹೃತರಾದುದು ಸತ್ಯವೇ ಸರಿ. ಅವರು
> ಜೀವಂತವಾಗಿದ್ದರೆ ಅವರ ತುರಗಾಭರಣಗಳೂ, ಅವರಿಗೆ ಹಿಡಿಯುವ
> ಛತ್ರಗಳೂ ಶತ್ರುಗಳ ಪಾಲಾಗುವುದುಂಟೇ? ಹಾ ದೈವವೇ !
> 'ಏನು ವಿಪತ್ತಂ ತಂದುಬಿಟ್ಟೆ? ಹಾ! ನಂದ ಭೂಪತಿಗಳಿರಾ,
> ಎಂದಿಗೂ ನಿಮ್ಮನ್ನಗಲದೆ ಸಮ್ಮಾನಿತನಾಗಿದ್ದುಂ ನಿಮ್ಮ ಆಪತ್ಸಮ
> ಯಕ್ಕೆ ಒದಗದಿದ್ದ ನನ್ನ ಜನ್ಮವುಂ ಸುಡಬೇಡವೇ? ಇನ್ನು
> ಯಾರನ್ನು ಅರಸುಗಳಿರಾ ಹಿಂದು ಕರೆದೇನು? ನಿಮ್ಮಂ ಬಿಟ್ಟು
> ನಾನಿದ್ದುಂ ಫಲವೇನು? ... ಎಂದು ಹೇಳುತ್ತ ರೋಷದಿಂ
> ಖಡ್ಗವುಂ ಝಳಪಿಸಿ ತುರಗವುಂ ಹಾರಿಸುತ್ತ ಹೋಗುತ್ತಿದ್ದನು.

ಇಲ್ಲಿ ನಂದರ ಸಾವಿನ ಸುದ್ದಿ, ತಾನೇ ಪ್ರತ್ಯಕ್ಷ ಕಂಡ ಸೂರೆಹೋದ ಗೂಡಾರ, ಉರುಳಿಬಿದ್ದ ಹೆಣಗಳ ರಾಶಿ, ಬೇಯುತ್ತಿರುವ ಜಪಶಾಲೆ — ಇವೆಲ್ಲ ವಿಭಾವಗಳು. ರಾಕ್ಷಸನು ನಂದರನ್ನು ಸಂಬೋಧಿಸಿ ರೋದಿಸುವುದೇ ಅನುಭಾವ. ಗ್ಲಾನಿ, ಆವೇಗ, ಉನ್ಮಾದ, ಕಣ್ಣೀರು ಮೊದಲಾದವು ಸಂಚಾರಿಗಳು.

3. ನಂದರೆಲ್ಲರೂ ಸಂಹೃತರಾದರೆಂಬ ವಾರ್ತೆಯು ಜನಜನಿತವಾಗಿ ವೃದ್ಧನಾದ ಸರ್ವಾರ್ಥಸಿದ್ಧಿಗೂ ಅಂತಃಪುರದ ರಾಣಿವಾಸದವರಿಗೂ ತಿಳಿಯಿತು. ಆಗ —

> ಆತನು (ಸರ್ವಾರ್ಥಸಿದ್ಧಿಯು) ತಾನು ಕುಳಿತಿದ್ದ ಪೀಠದಿಂ ನೆಲಕ್ಕೆ ಬಿದ್ದು
> ಮೂರ್ಛಾಗತನಾಗಲು ಅದೆಲ್ಲವಂ ನೋಡಿದ ಅಂತಃಪುರಸ್ತ್ರೀಯರ
> ರೋದನ ಧ್ವನಿಯು ಪುರಸೂರೆಹೋದಂತೆ ಕೇಳಿಸುತ್ತಿತ್ತು. ಆಗ
> ಪುತ್ರಕ್ಲೇಶದಿಂ ಪ್ರಾಣಗಳಂ ತೆಜಸದಂತೆ ವೃದ್ಧರಾಜನಿಗೆ ಸಮಾಧಾನವಂ
> ಹೇಳುವೆನೆಂದು ಬಾಗುರಾಯಣಂ ಬಂದು ಅಲ್ಲಿ ಗವಾಕ್ಷಗಳಿಂದೀಡಾಡಿ ಎಡ
> ಲ್ಪಟ್ಟಿರುವ ನಂದಪತ್ನಿಯರ ಆಭರಣರಾಶಿಗಳಂ ದಾಟುತ್ತ ಕಿತ್ತುಬಿಸುಟಿರುವ
> ಪುಷ್ಪಮಾಲಿಕೆಗಳಂ ಬಳಸಿ ಬರುತ್ತ ಕಾಡಿಗೆಯಿಂ ಕಪ್ಪಾಗಿ ಬರುವ ಬಾಷ್ಪೋ
> ದಕ ಪ್ರವಾಹವನ್ನತಿಕ್ರಮಿಸಿ ನಡೆಯುತ್ತ ಪೀಠದಿಂ ಬಿದ್ದು ಮೂರ್ಛಿತನಾಗಿರುವ
> ವೃದ್ಧನಾಜನನ್ನು ಶೀತಜಲಗಳಿಂದಲೂ ಬೀಸಣಿಗೆಯ ಗಾಳಿಗಳಿಂದಲೂ ಎಚ್ಚರಮಂ
> ಮಾಡಿ ತನ್ನ ಬುದ್ಧಿಗೆ ಗೋಚರವಾದ ಮೇರೆಗೆ ಪ್ರಕೃತೋಚಿತವಾಗಿ ದುಃಖ
> ಶಾಮಕವಾದ ವಾಕ್ಯಗಳಮಂ ಹೇಳಿ ... ಪತಿವಿಯೋಗದಿಂದ ಪ್ರಲಾಪಿಸುತ್ತಿರುವ
> ನಂದಪತ್ನಿಯರ ಬಳಿ ಬಂದನು.

ಇಲ್ಲಿಯೂ ನಂದರ ಸಾವಿನ ಸುದ್ದಿಯೇ ವಿಭಾವವು. ಸರ್ವಾರ್ಥಸಿದ್ಧಿಯು ಪೀಠದಿಂದ ಬಿದ್ದು ಮೂರ್ಛಿತನಾಗುವುದು, ಪುರಸೂರೆಹೋದಂತೆ ಅಂತಃಪುರ ಸ್ತ್ರೀಯರು ರೋದಿಸುವುದು, ನಂದಪತ್ನಿಯರು ತಾವು ಧರಿಸಿದ್ದ ಆಭರಣಗಳನ್ನು ಎಸೆದಾಡುವುದು, ಮುಡಿದಿದ್ದ ಹೂಗಳನ್ನು ಕಿತ್ತು ಬಿಸುಡುವುದು, ಪ್ರಲಾಪಿಸುವುದು — ಇವೆಲ್ಲ ಅನುಭಾವಗಳು.

ಚಿಂತೆ, ಗ್ಲಾನಿ, ಆವೇಗ, ಭಯ, ಉನ್ಮಾದ, ತ್ರಾಸ, ಆಲಸ್ಯ, ಮೈನಡುಕ ಮತ್ತು ಕಣ್ಣೀರಿಗಾಗಿ ದನಿ ಒಡೆಯುವುದು ಇವೆಲ್ಲ ಸಂಚಾರಿಗಳು.

4. ಸಿದ್ಧಾರ್ಥಕನು ಚಾಣಕ್ಯನ ಸಂಕೇತದಂತೆ ಚಂದನದಾಸನನ್ನು ಹಿಡಿದು ವಧ್ಯಸ್ಥಾನಕ್ಕೆ ಕರೆದೊಯ್ಯುತ್ತಿರಲು, ಆಗ ಪತಿಯನ್ನಗಲದೆ ಇರುತ್ತಿದ್ದ ಆತನ ಪತ್ನಿಯು ಪುತ್ರ ಸಮೇತಳಾಗಿ ರೋದನವಂ ಮಾಡುತ್ತ, ಆತನ ಹಿಂಗಡೆಯಲ್ಲಿಯೇ ಬರುತ್ತಿದ್ದು — 'ಹಾ! ನಾಥನೆ! ಇನ್ನು ನಿನ್ನನ್ನಗಲಿ ಯಾವ ಪುರುಷಾರ್ಥಕ್ಕೆ ಪ್ರಾಣಧಾರಣವಂ ಮಾಡಿಕೊಂಡಿರಲಿ? ನಾನೂ ಸಂಗಡಲೇ ಬರುವೆ' ನೆಂದು ಪಾದದ ಮೇಲೆ ಬಿದ್ದು ಹಂಬಲಿಸುತ್ತಿದ್ದಳು. ಅದಕ್ಕೆ, ಚಂದನದಾಸನು — 'ಲೋಕವ್ಯವಹಾರವನ್ನು ತಿಳಿಯದ ಬಾಲಕನನ್ನು ರಕ್ಷಿಸಿಕೊಂಡು ಪ್ರಾಣಧಾರಣ ಮಾಡಿಕೊಂಡಿರುವವಳಾಗು' ಎನಲು ಆ ಸತಿಯು 'ಹಾ! ಕಾಂತನೆ! ಪ್ರವಾಸವಂ ಮಾಡುವವರ ಪತ್ನಿಯರುಗಳು ಕೆಲವು ಕಾಲಾನಂತರದಲ್ಲಿಯಾದರೂ ಪತಿ — ಮುಖಾವಲೋಕನಾಭಿಲಾಷೆಯಿಂದ ಪ್ರಾಣಧಾರಣೆಯಂ ಮಾಡಿಕೊಂಡಿರುವರು. ಲೋಕಾಂತರವನ್ನೆಯ್ದುವ ನಿನ್ನನ್ನಗಲಿ ಅನಾಥಳಾಗಿ ಜೀವಿಸಿಕೊಂಡು ನಾನಿರುವುದಕ್ಕಿಂತಲೂ ನಿನ್ನಂ ಬೆಂಬಿಡದೆ ತೆರಳುವುದು ಶ್ರೇಯಸ್ಕರವು. ಸೃಷ್ಟಿಸಿದ ದೈವವೇ ಈ ಬಾಲಕನಂ ರಕ್ಷಿಸುವುದು. ಸತ್ಯವು ಪ್ರಾಮಾಣಿಕವಾದರೆ ನಮ್ಮಿರ್ವರಿಗೂ ಅದೇ ಸದ್ಗತಿಯಂ ಕೊಡುವುದು' ಎಂದು ಹೇಳಿದಳು.

ಅಂತೆಯೇ ಪುತ್ರನು ಚಂದನದಾಸನ ಚರಣಗಳ ಮೇಲೆ ಬಿದ್ದು ಹೊರಳುತ್ತ — 'ಎನ್ನಂ ಹೆತ್ತವನೇ, ಇನ್ನು ಯಾರನ್ನು ಅಪ್ಪಾಜಿಯವರೇ ಎಂದು ಭಾವಿಸಿ ಕರೆಯಲಿ? ಯಾರಿಗೆ ನಮಸ್ಕರಿಸಲಿ? ನಿಮ್ಮ ವಿಯೋಗವನ್ನೆಂತು ಸಹಿಸಲಿ? ನಾನು ಜೀವಿಸುವ ತೆರನಾವುದು?' ಎಂದು ಗೋಳಾಡಿದನು.

ಆ ಸಮಯದಲ್ಲಿ ಕಟುಕರು ಇವರನ್ನು ನೋಡಿ — 'ಇನ್ನು ಯಾರೂ ಇಲ್ಲಿರಕೂಡದು. ಹೋಗಿರಿ, ಹೋಗಿರಿ' ಎಂದು ಗರ್ಜಿಸಲು ಆ ಸತಿಯು ಉರಸ್ತಾಡನವಂ ಮಾಡುತ್ತ ಭೂಮಿಯಲ್ಲಿ ಬಿದ್ದು ಹೊರಳಾಡುತ್ತಿದ್ದಳು.

ಇಲ್ಲಿ ಚಂದನದಾಸನನ್ನು ವಧಸ್ಥಾನಕ್ಕೆ ಕರೆದುಕೊಂಡು ಬರುತ್ತಿರುವ ಹೃದಯವಿದ್ರಾವಕ ಪ್ರಸಂಗವೇ ವಿಭಾವವು. ಆತನ ಪತ್ನಿ — ಪುತ್ರರು ರೋದಿಸುವುದು, ಕಾಲ್ ಬೀಳುವುದು, ಗೋಳಾಡುವುದು, ಎದೆ ಬಡಿದುಕೊಳ್ಳುವುದು — ಇವೇ ಅನುಭಾವಗಳು. ಭಯ, ವಿಷಾದ, ಉನ್ಮಾದ, ಮೈನಡುಕ — ಮೊದಲಾದವು ಸಂಚಾರಿಭಾವಗಳು.

ಶೃಂಗಾರ ರಸ: ರತಿ (ಆಕರ್ಷಣ) ಇದರ ಸ್ಥಾಯೀಭಾವ. ಇದರಲ್ಲಿ ಎರಡು ಅವಸ್ಥೆಗಳು.
(ಅ) ಸಂಭೋಗ ಶೃಂಗಾರ (ಆ) ವಿಪ್ರಲಂಭ ಶೃಂಗಾರ.

(ಅ) ಸಂಭೋಗ ಶೃಂಗಾರ: ಅನುಕೂಲರಾದ ಪ್ರೇಮಿಗಳು ಪರಸ್ಪರ ದರ್ಶನ, ಸ್ಪರ್ಶನ ಮುಂತಾದವುಗಳಿಂದ ಭೋಗಿಸುವುದು ಸಂಭೋಗ[48]. ಅದು ಸಂತೋಷದಿಂದ ಕೂಡಿರುವಂಥದು.

1. ಸರ್ವಾರ್ಥಸಿದ್ಧಿರಾಯನು ಭೋಗಾಸಕ್ತನಾಗಿ ಸುನಂದಾದೇವಿ ಮತ್ತು ಪ್ರೇಮಾಸ್ಪದಳಾದ ಮುರಾದೇವಿ ಮುಖ್ಯರಾದ ಸ್ತ್ರೀಯರೊಡಗೂಡಿ ವಿವಿಧ ಕ್ರೀಡಾ ವಿಲಾಸವಿನೋದದಿಂದಿದ್ದ ಬಗೆ—

> ಪ್ರಿಯದರ್ಶನ ಮುದಿತ ಕಾಮಿನೀಜನದ ಮುಖಚಂದ್ರನೊಳು ಚಂದ್ರಿಕೆ
> ಗಳಂತೆ ಶೋಭಿಸುವ ಮುಗುಳುನಗೆಗಳೆಂಬ ಅಮೃತಧಾರಾಸೇಚನೆಯಿಂದ
> ಧವಳಿತ ಶರೀರವುಳ್ಳವನಾಗಿ; ಕಂನೈದಲೆಗಳಂತೆಸೆವ ಅಂಗನಾನೇತ್ರ
> ಕುಸುಮಗಳಿಂದ ಪೂಜಿಸುವ ಮುಖಚಂದ್ರವುಳ್ಳವನಾಗಿ; ಕುಂಕುಮ
> ಧೂಳಿನಿಕರದಂತೆ ರಂಜಿಸುವ ಭಾಮಿನೀ ಪದ್ಮರಾಗಾಭರಣ ಕಾಂತಿಯಿಂ
> ಕುಸುಂಭ ವಸ್ತ್ರದಂತಿಪ್ಪ ಧವಳಾಂಶುಕ ಶೋಭಿತನಾಗಿ ಚಂಪಕಮಾಲಿಕಾ
> ಸದೃಶವಾದ ಸೀಮಂತಿನೀ ಬಾಹುಪಾಶಗಳಿಂದ ಬಂಧಿಸುವವನಾಗಿ;
> ಮತ್ತೊಂದು ಸಮಯದಲ್ಲಿ ಬಂಧವಿಶೇಷಗಳಿಂ ರಮಣೀಜನ ಚರಣಾಲಕ್ತಕ
> ರಸದಿಂ ಕೆಂಪಡರಿದ ಲಲಾಟದೇಶಮುಳ್ಳವನಾಗಿ; ಸಮಯವಿಶೇಷದಲ್ಲಿ,
> ಪ್ರೇಮವಶದಿಂ ಪಿಡಿಯುವ ಅಂಗನಾ ಜನ ಧಮ್ಮಿಲ್ಲ ಕುಸುಮಧೂಳಿಗಳಿಂ
> ಹೊಂಬಣ್ಣವಾದ ವಕ್ಷಸ್ಥಳಮುಳ್ಳವನಾಗಿ; ಸಮಯವಿಶೇಷದಲ್ಲಿ ಕಾಮಿನೀ
> ಕುಚ ಕಲಶ ಚಂದನ ರಸದಿಂ ಧವಳವಾದ ಭುಜದೇಶಮುಳ್ಳವನಾಗಿ; ರತಿರಭಸ
> ಜನಿತ ಶ್ರಮಜಲಬಿಂದುಗಳಿಂ ಕದಡಿರುವ ಕಸ್ತೂರಿ ತಿಲಕಮುಳ್ಳವನಾಗಿ;
> ಸಮಯಾಂತರದಲ್ಲಿ ಬಹುಪರಿಮಳವಾಸಿತಮಾದ ಕುಂಕುಮಜಲಗಳಿಂ
> ಪೂರಿತಮಾದ ಹೇಮಶೃಂಗಗಳಂ ಪಿಡಿದು ಅಭಿಷೇಕದೇವತೆಗಳಂತಿಪ್ಪ ವಧೂ
> ಜನಗಳಿಂ ಕೂಡಿ ಜಲಕೇಳಿಯನಾಡುತ; ಮತ್ತೊಂದು ವೇಳೆಯಲ್ಲಿ
> ಕನಕರತ್ನಖಚಿತಮಾದ ಗವಾಕ್ಷಗಳಿಂ ಶೋಭಿಸುವ ಕಾಲಾಗರುಧೂಮಧೂಪಿತ
> ಮೇಲುಗಟ್ಟುಗಳಿಂದಲೂ, ಚಿತ್ರವರ್ಣಮಾದ ಹಾಸಿಕೆಗಳಿಂ ಮೆರೆಸಿದ
> ಶ್ವೇತಪರ್ಯಂಕಗತ ಹಂಸತೂಲಿಕಾ ತಲ್ಪದಲ್ಲಿ ಕುಳಿತು ವಿವಿಧ ಕುಸುಮ
> ಮಾಲಿಕಾಸಕ್ತ ಮಧುಕರ ರವ ಮನೋಹರವಾದ ಅಂತಃಪುರ ಸುಂದರೀ
> ಸಂಗೀತವನ್ನು ಅಪ್ರಮಿತ ವಿದ್ವಜ್ಜನರೊಡನೆ ಕೂಡಿ ನೋಡುತ್ತಿದ್ದನು.

ಸಂಭೋಗದಲ್ಲಿಯ 'ನಾಯಕ' 49ನ ಎಲ್ಲ ಲಕ್ಷಣಗಳನ್ನೂ ಇಲ್ಲಿ ಅಳವಡಿಸಲಾಗಿದೆ. ಮಾನಿನಿಯರ ಮುಗುಳುನಗೆ, ಅವರ ಕುಡಿನೋಟ, ಬಾಹುಪಾಶ, ಅವರು ಹಿಡಿದ ಪರಿಮಳ ದ್ರವ್ಯಗಳು, ಚಿತ್ರವರ್ಣದ ಹಾಸಿಗೆ, ಮೇಲ್ಕಟ್ಟು, ಶ್ವೇತ ಪರ್ಯಂಕಗತ ಹಂಸತೂಲಿಕಾ ತಲ್ಪ — ಇವೆಲ್ಲ ವಿಭಾವಗಳು. ಇದಕ್ಕೆ ಪ್ರತಿಕ್ರಿಯಾ ರೂಪವಾಗಿ ಮಧುರವಾದ ಅಂಗವಿನ್ಯಾಸಗಳಿಂದ ಪ್ರಕಟವಾದ ಹರ್ಷವಿಶೇಷವೇ ಅನುಭಾವ (ಮುಗುಳ್ನಗೆ, ಮಧುರ ವದನ, ಕಟಾಕ್ಷ ದೃಷ್ಟಿ, ಸಂಗೀತವನ್ನು ಆಲಿಸುವುದು — ಇತ್ಯಾದಿ) ಹಾವ, ಭಾವ, ಲೀಲಾ, ವಿಲಾಸ, ಶೋಭಾ, ಕಾಂತಿ, ಲಲಿತ ಮೊದಲಾದವು ಸಂಚಾರಿಗಳು.

2. ನವಯೌವನಶಾಲಿಯಾಗಿ ಸುಂದರಾಂಗಿಯಾದ ವಿಷಕನ್ಯೆಯನ್ನು ಪರ್ವತರಾಜನ ಬಳಿಗೆ ಕರೆತಂದ ಕ್ಷಪಣಕನು — ಅಪರ್ಯುಷಿತ ಯೌವನಶಾಲಿನಿಯಾದ ಈ ಸುಂದರಿಯನ್ನು ಪರಿಗ್ರಹಿಸಿ ರಾಕ್ಷಸನನ್ನು ಅನುಗ್ರಹಿಸಬೇಕೆಂದು ಬೇಡಿಕೊಳ್ಳಲು —

> (ಪರ್ವತರಾಜನು) ಆ ಕನ್ಯೆಯಂ ನೋಡಿ ಕಾಮಪರವಶನಾಗಿ
> ತವಕಪಡುತ ಸ್ವೇದಬಿಂದುಗಳಿಂ ವ್ಯಾಪಿಸಿದ ದೇಹನಡುಕವುಳ್ಳವನಾಗಿ...
> ಲಜ್ಜೆಯಂ ಬಿಟ್ಟು ಕಾತರದಿಂದೆದ್ದು ಆ ಕನ್ಯೆಯನಾಲಿಂಗಿಸುವುದಕ್ಕೆ
> ಯತ್ನವಂ ಮಾಡಿದನು. (ಮತ್ತೆ) ಅವಳಂ ಚುಂಬಿಸುತ ತಕ್ಕೈಸಿ
> ಕೊಂಡು ತನ್ನ ಶಯನಗೃಹದ ಮಂಚಕ್ಕೆ ಸೆಳದು ಮನದ ತವಕ
> ಹೆಚ್ಚಿ ಬರುತ್ತಿರಲು ನನ್ನ ಗಿಣಿಯೇ ನಾರೀಮಣಿಯೇ ಯೆಂದು
> ಆಲಿಂಗಿಸಿ ಚುಂಬಿಸಿ ಮನದಣಿಯುವಂತೆ ಕ್ರೀಡಿಸಿದನು.

ಇಲ್ಲಿ ವಿಷಕನ್ಯೆಯು ಅಪರ್ಯುಷಿತ ನವಯೌವನ, ಸುಂದರಾಂಗಗಳೇ ವಿಭಾವಗಳು. ಪರ್ವತರಾಜನು ಕಾಮಪರವಶನಾಗುವುದು, ಆತನ ದೇಹದಲ್ಲಿ ನಡುಕವುಂಟಾಗುವುದು, ಬೆವರುವುದು, ಅವಳನ್ನು ಆಲಿಂಗಿಸುವುದು, ಚುಂಬಿಸುವುದು — ಇವೇ ಅನುಭಾವಗಳು.

ಲೀಲಾ, ವಿಲಾಸ ಸ್ವೇದ ಮೊದಲಾದವು ಸಂಚಾರಿಗಳು.

ಆ) ವಿಪ್ರಲಂಭ ಶೃಂಗಾರ: ಇದರಲ್ಲಿ ಮನಸ್ಸು ವಿರಹದ ನಂತರದ ಮಿಲನವನ್ನು ಬಯಸುವುದು.

1. ಶತ್ರುಸೈನ್ಯವು ಪಾಟಲೀಪುರದ ಬಳಿ ಬಂದಿದ್ದು ಯುದ್ಧ ನಿಶ್ಚಿತವಾಗಲು ನಂದರು ತಮ್ಮ ತಮ್ಮ ಪತ್ನಿಯರ ಬಳಿ ಬಂದು ಮರುದಿನ ಬೆಳಗ್ಗೆ ತಮಗೆ ಜಯಪ್ರಯಾಣವೆಂದು ತಿಳಿಸಿದರು.

> ಆ ಮಾತಂ ಕೇಳಿ ಆ ಸ್ತ್ರೀಯರು ಮುಂದೆ ಉಂಟಾಗುವ ಶೋಕಬಾಷ್ಪ
> ಸಮುದ್ರವನ್ನಿದಿರುಗೊಂಡು ಕಾತರಲೆಳಸಿ ಹೊರಡುವ ನದಿಗಳೋ
> ಯೆಂಬಂತೆ ಧಾರಾಳವಾಗಿ ಹೊರಹೊಮ್ಮುವ ಕಂಬನಿಗಳಂ ಬಿಡುತ್ತ —
> ಯಲೈ ಪ್ರಾಣಕಾಂತನೇ ನೀನು ತೆರಳಿದ ಬಳಿಕ ನಿಮಿಷವು ಆಗಲದೇ

ಕೂಡಿದ್ದ ನಿನ್ನಂ ಬಿಟ್ಟು ನಮ್ಮ ಪ್ರಾಣಗಳೆಂತು ನಿಲ್ಲುವವು ಯೆಂದು ಒಬ್ಬ ಸ್ತ್ರೀಯು — ಯಲೈ ಜೀವಿತೇಶನೇ, ನಿನ್ನ ಮುಖಚಂದ್ರ ದರ್ಶನದಿಂ ಸುಖಿಸುವ ನಮ್ಮ ಮನಃಕುವಲಯಗಳಂ ಬಾಡುವಂತೆ ಮಾಡಿ ನೀನೆಲ್ಲಿಗೆ ತೆರಳುವೆಯೆಂದು ಮತ್ತೊಬ್ಬಳು, ಯಲೈ ಪ್ರಿಯನೇ, ಸುಧಾಸಾರದಂತತಿಮಧುರವಾದ ತ್ವದೀಯಾಧರ ಪಾನದಿಂದಲೇ ಜೀವಿಸುವ — ನಮ್ಮನ್ನಗಲಿ ಹೊರಡುವುದುಚಿತವೇ ಯೆಂದು ಒಬ್ಬ ಕನ್ನೆಯು, ಯಲೈ ನರಸನೇ ನಾನು ನೂತನಾಭರಣವನಲಂಕರಿಸಿ, ಕುಸುಮವಂ ಮುಡಿಯುವುದರಲ್ಲಿಯೇ ಬರುವದಾದರೆ ಹೋಗಿ ಬರಬಹುದೆಂದು ಒಬ್ಬ ಬಾಲೆಯು, ಯಲೈ ಅರಸೇ, ನಾನು ದಂವಿಲ್ಲವಂ ರಚಿಸಿ, ನೂತನ ಪುಷ್ಪದಿಂದಲಂಕೃತಳಾಗುವಲ್ಲಿಯೇ ಬಾರದಿದ್ದರೆ ನಿಂನಂ ನಂಬುವಳಲ್ಲವೆಂದು ಒಬ್ಬ ಹಸುಳೆಯು, ಯಲೈ ಕಾಂತನೇ ನಾಳೆ ನನಗೆ ಋತುಸ್ನಾನವೆಂದು ತಿಳಿದು ಪ್ರಸ್ಥಾನವಂ ಮಾಡುವುದು ಶಾಸ್ತ್ರವಿರುದ್ಧವಾದುದರಿಂದ ಪುನಹಾ ನಾಳೆಯೇ ಬರುವುದಾದರೆ ನಿನ್ನ ಮನಸ್ಸು ಬಂದಂತಾಗಲಿಯೆಂದು ದುಃಖಪಡುತ್ತ, ದೂತಿಯ ಮುಖದಿಂದ ಹೇಳಿ ಕಳುಹಿಸುತ್ತಿರುವಳೊಬ್ಬ ಭಾಮಿನಿಯು, ಯಲೈ ರಮಣನೇ, ಮೊದಲಿನಂತೆ ಯಿಲ್ಲದ ಪ್ರಮಾಣಮಂ ಹೇಳಿ ಆ ಪ್ರೀತಿಪಾತ್ರಳ ಗೃಹವಂ ಸೇರಲೆಣಿಸಿ ಈ ಕಪಟವಂ ಮಾಡುವುದು ಸಾಕು ಯಿದೇನು ಛಂದವೆಂದು ಒಬ್ಬ ಸುಂದರಿಯು, ಯಲೈ ಇನಿಯನೇ, ನನ್ನ ಮನ ಪರೀಕ್ಷೆಯಂ ಮಾಡಲೆಣಿಸಿ ಪ್ರಮಾಣವೆಂದು ವಂಚನೆಯೋ ಅಲ್ಲದಿದ್ದರೆ ಆ ಸುಂದರಿಯ ಬಿನ್ನಣಕ್ಕೆ ಬೆರಗಾದೆಯೋ ಯೆಂದು ಒಬ್ಬ ರಮಣಿಯು, ಯಲೈ ವಲ್ಲಭನೇ ಬಹುಕಾಲದಿಂದ ಶತ್ರುಗಳೆಂಬವರು ಈ ಪುರಸಮೀಪಕ್ಕೆ ಬಂದುದಿಲ್ಲ. ಮತ್ತೆ ಈಗಿನ ರಾಜಕಾರ್ಯವು ಬಹುಶ್ರಮಸಾಧ್ಯವೆಂದು ತೋರುತಂಧ. ಶತ್ರುಗಳ ಮೇಲೆ ಶೌರ್ಯವಂ ತೋರಿಸಿ ಹಿಮ್ಮೆಟ್ಟದೇ ಖ್ಯಾತಿಯಂ ಸಂಪಾದಿಸುವುದು ಕ್ಷಾತ್ರಧರ್ಮವು. ಅದೃಷ್ಟವಿದ್ದರೆ ಪುನ ದರ್ಶನವು. ಅಲ್ಲದಿದ್ದರೆ ನೀವು ಯಿದ್ದಲ್ಲಿಗೆ ನಾವು ಬರತಕ್ಕವರು ಯೆಂದು ಹೇಳುತ್ತಿರುವ ಪತ್ನಿಯರಂ ಒಡಂಬಡಿಸುತ್ತ ಆ ರಾತ್ರಿಯಂ ಕಳೆಯುತ್ತಿದ್ದರು.

ಇಲ್ಲ ನಂದರು ಯುದ್ಧ ಸನ್ನದ್ಧರಾಗಿ ಹೊರಟು ನಿಂತಾಗಿನ ದೃಶ್ಯ ನಿಶ್ಚಯವೇ ವಿಭಾವ. ನಂದಪತ್ನಿಯರು ಕಂಬನಿದುಂಬುವುದು, ವಿವಿಧ ರೀತಿಯಲ್ಲಿ ಪ್ರಲಪಿಸುವುದು, ಹಿಂದಿನ ಘಟನೆಗಳನ್ನುನೆನಪಿಸಿ ಕೊಳ್ಳುವುದು, ದೂತಿಯ ಮುಖದಿಂದ ಹೇಳಿ ಕಳುಹಿಸುವುದು, ಬೇರೊಬ್ಬ ಸುಂದರಿಯ ಬಿನ್ನಾಣಕ್ಕೆ

ಮರುಳಾದೆಯೋ — ಎಂದು ಅಣಕಿಸುವುದು — ಮೊದಲಾದವು ಅನುಭಾವಗಳು. ಅಸೂಯೆ, ಶ್ರಮ, ಚಿಂತೆ, ಔತ್ಸುಕ್ಯ, ಉನ್ಮಾದ, ಜಾಡ್ಯ ಮೊದಲಾದವು ಸಂಚಾರಿಗಳು.

ಇಲ್ಲಿ ವಿರಹ ಅನುಭವಿಸುತ್ತಿರುವ ನಂದಪತ್ನಿಯರ ಅವಸ್ಥೆಯನ್ನು 'ಪ್ರೋಷ್ಯತ್ಪತಿಕಾ' ಎಂದು ರಸಮಂಜರೀ, ರಸರತ್ನಹಾರ, ಭಾಷಾಭೂಷಣಗಳಲ್ಲಿ ಹೇಳಿದೆ [50]. ಇದು ಶತ್ರುರಾಜರಿಂದ ಉಂಟಾದ ವಿಪ್ಲವದಿಂದ ಒದಗಿಬಂದ ವಿಪತ್ತಾಗಿದೆ. ಇದನ್ನು 'ಸಂಭ್ರಮಜ' [51] ಎಂದು ಕರೆಯುತ್ತಾರೆ.

ooooooooo

<u>ಹಾಸ್ಯರಸ:</u> ಹಾಸ್ಯವು ಇದರ ಸ್ಥಾಯೀಭಾವವು. ತನ್ನ ಅಥವಾ ಪರರ ಹಾಸ್ಯದ ಉತ್ಕರ್ಷದಿಂದ ಸಂತೋಷ ಕೊಡುವಂಥದ್ದಾದ್ದರಿಂದ ಇದರಲ್ಲಿ ಆತ್ಮಸ್ಥ ಮತ್ತು ಪರಸ್ಥ ಎಂದು ಎರಡು ವಿಧ [52].

ಈ ಗ್ರಂಥದಲ್ಲಿ ನಮಗೆ ಎರಡೂ ವಿಧದ ಹಾಸ್ಯಗಳ ವಿವರ ಸಿಗುವುದು.

<u>1. ಆತ್ಮಸ್ಥ:</u> ಶತ್ರುಪಲಾಯನದ ಜಪದ ಆರ್ತ್ವಿಜ್ಯಕ್ಕೆ ಬಂದ ಮೌನೋಪವಾಸಿಯ ಚಿತ್ರ:

ನೆಲದಲ್ಲಿ ಜೋಲುವ ಜಟಾಭಾರದಿಂದ ನ್ಯಗ್ರೋಧ ವೃಕ್ಷದಂತೆ
ತೋರುತ್ತ ಕೋಮಲ ದರ್ಭೆಗಳಿಂದ ರಚಿಸಿದ ಪವಿತ್ರಪಂಚಕದಿಂ
ಯುಕ್ತವಾದ ಅಂಗುಲೀ ಸೂಗ್ರಗಳಿಂ ಸುತ್ತುತ್ತಿರುವ ಹವಳದ
ಜಪಮಾಲೆಯಿಂದಲೂ ಭ್ರೂಮಧ್ಯದಲ್ಲಿ ವಕ್ರಾಕಾರವೇ ಮೂರ್ತೀ
ಭವಿಸಿ ಬಂದಂತೆ ತ್ರಿಪುಂಡ್ರ ಭಸ್ಮಾಂಕಿತವಾದ ಫಾಲದೇಶಗಳಿಂದಲೂ
ಕಕ್ಷಾಂತಯೋಗದಂಡಗಳಿಂದಲೂ ಚರಣಾಸಕ್ತ ಪಾದುಕಾಗ್ರವಂ
ಸೋಂಕುವ ಕೃಷ್ಣಾಜಿನೋತ್ತರೀಯದಿಂದಲೂ ಮಾನುಷ
ಯೋಗಿ ವೇಷವಂ ಧರಿಸಿ ಮಂತ್ರವಂ ಜಪಿಸುವ ಮಾರೀಚನೋ
ಎಂಬಂತೆ ಮುನಿರೂಪವನ್ನಳವಡಿಸಿ ಜನಗಳಿಗೆ ಮಹಾಯೋಗೀಶ್ವರನೇ
ಇವನು ಎಂಬ ಹಾಗೆ ತೋರುತ್ತ ಶಿಷ್ಯರ ಕರಕಲಶ ಗೋಮಯೋ
ದಕಗಳಿಂ ಶುದ್ಧವಾಗುವ ಮಾರ್ಗದಲ್ಲಿ ಬರುತ್ತಿದ್ದನು.

ಆತನ ಶಿಷ್ಯರು:

ಕೂರ್ಚಸಮೇತವಾದ ಉದಕಪಾತ್ರೆಗಳಂ ಹಿಡಿದು ಕುಶಾಸ್ತರಣ
ಪವಿತ್ರಗಳಿಂದಲಂಕೃತರಾಗಿ ದೂರ್ವಾಸ್ತಂಭದಲ್ಲಿ ಉದ್ಭವಿಸಿ ಚರಿಸುತ್ತಿ
ರುವ ಮಲ್ಕೀಕಗಳೋ ಎಂಬಂತೆ ಭೂಮಿಯಲ್ಲಿ ಕುಶ ಶಕಲಗಳ
ನ್ನಿರಿಸಿ ಕೂರ್ಚೆಯಿಂ ಪ್ರೋಕ್ಷಿಸಿ ಪಾದಗಳನ್ನಿಡುತ್ತಾ...

ಸ್ಪರ್ಶಿಸಿದರೆ ಚಿವುಟ್ಟುವ ಕುಳೀರಕನಂತೆ ಹಿಂದಕ್ಕೆ ಸಾರುತ್ತಿದ್ದರು.

ಶತ್ರುಸೈನಿಕರು ಜಪಶಾಲೆಯನ್ನು ಸುಡಲು:

ಮಾನೋಪವಾಸಿಯು ಜಡೆಗಳಂ ಜೋಲಾಡಿಸುತ್ತ, ಕೃಷ್ಣಾಜಿನವನ್ನು
ಹಾಕುತ್ತ, ಭೀತಿಪಟ್ಟವನಂತೆ ನಂದರಂ ಅವಹೇಳನ ಮಾಡುತ್ತ...
ಮರ್ಮಸ್ಪೃಕ್ಕಾದ ವಾಕ್ಯವಂ ಹೇಳುತ್ತ ಹೊರಟುಹೋದನು.

ಇಲ್ಲಿ ನಂದರ ಕುಕೃತ್ಯವೇ ವಿಭಾವ. ಮಾನೋಪವಾಸಿ ಮತ್ತು ಆತನ ಶಿಷ್ಯರ ವಿಕೃತ ವೇಷ, ಅಲಂಕಾರ, ನಿರ್ಲಜ್ಜತೆ ಕುಹಕ — ಕುಚೇಷ್ಟೆಗಳೇ ಅನುಭಾವಗಳು. ಅಣಕಿನ ಅನುಕರಣ ಸಂಚಾರಿ.

2. ಪರಸ್ಥ: ಅ) ಶತ್ರುಸೇನೆ ಬರುವ ಸುಮಾಲವನ್ನು ನಿಶ್ಚಯವಾಗಿ ತಿಳಿಯದೇ ಪಾಟಲೀಪುರದ ವೈದಿಕ ಸಂಘದವರು ಮಾತನಾಡಿಕೊಳ್ಳುತ್ತಿದ್ದ ಬಗೆ ಇದಕ್ಕೆ ಒಳ್ಳೆಯ ಉದಾಹರಣೆಯಾಗಿದೆ:

ಪರ್ವತರಾಜನೆಂಬುವನು ಗಯಾಶ್ರಾದ್ಧವಂ ಮಾಡಿ ಕಾಶೀಯಾತ್ರಾರ್ಥವಾಗಿ
ಈ ಮಾರ್ಗದಲ್ಲಿ ಬರುತ್ತಿದ್ದಾನಂತೆ. ಆತನು ಬಹಳ ವಿತರಣಶಾಲಿಯಂತೆ.
ನಾವೆಲ್ಲರೂ ಅವನ ಸಂಗಡ ಹೋದರೆ ಘೃತ ಸೂಪ ಭಕ್ಷ್ಯ ದಧಿ ಮಧು
ಕ್ಷೀರ ಶಾಕ ಪಾಕ ವ್ಯಂಜನಾದಿಗಳಂ ಯುಕ್ತವಾದ ಮೃಷ್ಟಾನ್ನ ಭೋಜನವು
ಬಹು ದಕ್ಷಿಣೆಗಳೂ ದೊರಕುವವು. 'ಎನ್ನೆ ಮಲ್ಲಭಟ್ಟರೇ, ಎಲೈ
ಬಂಡಿಭಟ್ಟರೇ, ನಾವೂ ಹೊರಡೋಣವೇ? ಎಂದೂ 'ಓಯಿ ಕಿಟ್ಟಂ
ಭಟ್ಟಲೂ ಪಾಪಾಶಾಸ್ತ್ರುಲೂ ಮನಹೆಣ್ಣಿಗಾನಿಕಿ ವಿವಾಹ ಶ್ರಾದ್ಧಂ
ಕಾವಲಸಿಯುನ್ನದಿ ಇದೇ ಸಮಯಮು ನಡವಂಡೋಯಿ ಎಂದೂ ಹವೇ
ಕುಪ್ಪಶಾಸ್ತ್ರಿಗಳೇ ಇವನಾರೋ 'ಓರ್ವ ರಾಜಾವರಾನಾಂ. ಬಹುವಾಯ
ಕುಡುಕಾರಾನಾಂ ಅಣ್ಣಾ ಪಾಧ್ಯಾರಯುಂ ಕೂಟ್ಟಿಕೊಂಡ ನೀಂಗಳಂ
ವಂದೀರಾನಾಲ ಉಂಗಳುಕ್ಕುಂ ಕುಡುಪ್ಪಿಟ ಕುಡುಕ್ಕುರೇನ ವರದಾನಾಲ
ವರ್ಲಾಂ ಎಂದೂ ಕರ್ಣಾಟಕಾಂಧ್ರ ದ್ರಾವಿಡ ವೈದಿಕರು ಮಾತನಾಡಿ
ಕೊಳ್ಳುತ್ತಿದ್ದರು.

ಇಲ್ಲಿ ಪರ್ವತರಾಜನ ನೇನಾಗಮನವೇ ವಿಭಾವ. ಅಪ್ರಾಸಂಗಿಕತೆ ಮತ್ತು ಅಸಂಬದ್ಧ ಮಾತುಗಳೇ ಅನುಭಾವ. ಅಶಿಬುರುಕತನ, ಅಸೂಯೆ ಸಂಚಾರಿಗಳು.

ಆ) ಕ್ಷಪಣಕನನ್ನು ಪರೀಕ್ಷಿಸಲು ರಾಕ್ಷಸನಿಂದ ನಿಯುಕ್ತನಾದ ಬ್ರಾಹ್ಮಣನು, ಪರೀಕ್ಷಿಸಲು ಹೋಗಿ, ಅಸಫಲನಾಗಿ ತಾನೇ ಲಜ್ಜಿತನಾಗಬೇಕಾದ ಪ್ರಸಂಗದಲ್ಲಿಯೂ ಹಾಸ್ಯವಿದೆ. ಕ್ಷಪಣಕನ ಸಾಮಯಿಕ ಎಚ್ಚರವೇ ವಿಭಾವ. ಬ್ರಾಹ್ಮಣನ ಅಪ್ರಾಸಂಗಿಕತೆ, ವಿವಸ್ತ್ರನಾಗಿ ಕರ್ಪಟವನ್ನು ಹಿಡಿದು, ದೈತ್ಯವಂದನೆ

ಮಾಡಬೇಕಾದ್ದು — ಇತ್ಯಾದಿ ಅನುಭಾವ. ನಾಚಿಕೆ ಮೊದಲಾದವು ಸಂಚಾರಿ.

ಇ) ಚಾಣಕ್ಯನು ವಟುವಾದ ಶಾರ್ಙ್ಗರವನೊಡನೆ ನಡೆಸಿದ ಸಂಭಾಷಣೆಯಲ್ಲಿಯೂ ಹಾಸ್ಯವಿದೆ.

●●●●●

<u>ಶಾಂತರಸ:</u>[53] ಇದರ ಸ್ಥಾಯೀಭಾವವು ಶಮ. ನಿರ್ವೇದ. ಸುಖದು:ಖ, ರಾಗ — ದ್ವೇಷಗಳಲ್ಲಿ ಯಾವುದೂ ಇಲ್ಲದಿರುವ ಸ್ಥಿತಿ. ದೇವಾನುಗ್ರಹವೇ ವಿಭಾವ. ಯಮ ನಿಯಮಾದಿಗಳು ಅನುಭಾವ. ಸಂಸಾರದ ಅಸಾರತೆ ವೈರಾಗ್ಯವನ್ನು ಕಲ್ಪಿಸುತ್ತದೆ. ಆದುದರಿಂದ ಸಂಸಾರವನ್ನು ಕುರಿತ ಜುಗುಪ್ಸೆಯೇ ಮುಖ್ಯ ಸಂಚಾರೀ ಭಾವ.

(1) ಪಟ್ಟಾಭಿಷಿಕ್ತನಾದ ಚಂದ್ರಗುಪ್ತನನ್ನು ವೈತಾಳಿಕರು — ' ನಂದಕುಲ ವನ ದಾವಾನಲನೇ ಜಯ' ಮೊದಲಾಗಿ ಹೊಗಳುತ್ತಿರಲು ಅದನ್ನು ಕೇಳಿದ ಸರ್ವಾರ್ಥಸಿದ್ಧಿ ಮಹಾರಾಜನು ಮನದಲ್ಲಿ ವ್ಯಾಕುಲಗೊಂಡು — ದೀನನಾಗಿ ಪರುಷವಾಕ್ಯಗಳನ್ನು ಕೇಳುತ್ತ ಇಲ್ಲಿರುವುದಕ್ಕಿಂತ, ತಪೋವನದಲ್ಲಿ ವಾಸ ಮಾಡುವುದು ಉಚಿತವೆಂದು ಭಾವಿಸಿ ಹಾಗೆ ತೆರಳುವನು. ಸತಿ ಸಾಧ್ವೀಮಣಿಯಾದ ಸುನಂದಾದೇವಿಯು ಆತನನ್ನು ಅನುಸರಿಸುವಳು.

ಇಲ್ಲಿ ತಪೋವನದ ಪ್ರಶಾಂತ, ಸ್ನೇಹಮಯ ವಾತಾವರಣವೇ ವಿಭಾವ. ಗುರುಪಾದಗಳಿಗೆ ವಂದಿಸುವುದು, ಕಂದಮೂಲಗಳನ್ನು ಸೇವಿಸುವುದು, ಜ್ಞಾನಯೋಗ ರಹಸ್ಯಗಳನ್ನು ಕೇಳುವುದು, ಶಾಸ್ತ್ರಗಳನ್ನು ನಿರೋಧಿಸಿ ನಿಶ್ಚಲಚಿತ್ತದಿಂದ ಯೋಗಾರೂಢನಾಗುವುದು — ಇವೆಲ್ಲ ಅನುಭಾವಗಳು. ಸಂಸಾರದಲ್ಲಿ ಜುಗುಪ್ಸೆ, ಮೋಕ್ಷಾಪೇಕ್ಷೆ — ಇವು ಸಂಚಾರಿಗಳು. ಹೀಗೆ ಇಲ್ಲಿ ಶಾಂತರಸದ ಭಾವವು ಒಡಮೂಡಿದೆ.

(2) ನಂದರ ಸಾಮ್ರಾಜ್ಯವನ್ನು ಉರುಳಿಸಿದವನಾದರೂ ಪರ್ಣಕುಟಿಯಲ್ಲಿ ವಾಸಿಸುವ ಚಾಣಕ್ಯನು ಚಂದ್ರಗುಪ್ತನ ಪಟ್ಟಾಭಿಷೇಕ ಮಹೋತ್ಸವವಾದ ಕೂಡಲೇ ತಪಸ್ಸಿಗೆ ಹೊರಟು ನಿಂತಾಗಿನ ಸ್ಥಿತಿಯ ವರ್ಣನೆಯೂ ನಿರ್ವೇದಭಾವವನ್ನು ಉದ್ದೀಪಿಸುವಂತಹದೇ ಆಗಿದೆ.

ಸರ್ವಾರ್ಥಸಿದ್ಧಿಯದು ಮುದಿವಯಸ್ಸಿನಲ್ಲಿ ಮಕ್ಕಳನ್ನು ಕಳೆದುಕೊಂಡು, ಚಂದ್ರಗುಪ್ತನ ಹಂಗಿನಲ್ಲಿರುವಂತಹ ಸ್ಥಿತಿಯಲ್ಲಿನ ವೈರಾಗ್ಯವಾದರೆ, ಚಾಣಕ್ಯನದು ಮಹಾಮಂತ್ರಿಯ ಪದವಿಯನ್ನು ತ್ಯಜಿಸಿ, ತಪಸ್ಸಿಗೆ ಹೊರಟಂತಹ ಸಂದರ್ಭದ ವೈರಾಗ್ಯವು — ಮೇಲ್ಪಟ್ಟದ್ದು ಎಂದು ಹೇಳಬಹುದಾಗಿದೆ.

ಅಂತೂ ಈ ಕಾವ್ಯದಲ್ಲಿ ಕವಿಯು ನವರಸಗಳನ್ನು ಸಂದರ್ಭೋಚಿತವಾಗಿ ಅಳವಡಿಸಿಕೊಂಡಿದ್ದಾನೆಂಬುದನ್ನು ಮನಗಾಣಬಹುದಾಗಿದೆ.

ಛಂದಸ್ಸು

'ಮುದ್ರಾಮಂಜೂಷ' ದ ಮುದ್ರಿತ ಪ್ರತಿಯಲ್ಲಿ ಸುಮಾರು ಮೂವತ್ತರಷ್ಟು ಸಂಸ್ಕೃತ ಶ್ಲೋಕಗಳಿವೆ. ಅವುಗಳನ್ನು ಮೂಲ ಕೃತಿಕಾರ ಬರೆದಿಲ್ಲ ಅಥವಾ ಸಂಗ್ರಹಿಸಿ ಸೇರಿಸಿಲ್ಲ. ಮುದ್ರಿತ ಪ್ರತಿಯ ಸಂಪಾದಕರೇ ಆ ಕೆಲಸವನ್ನು ಮಾಡಿದ್ದಾರೆ. (ವಿವರಗಳನ್ನು ಎರಡನೇ ಅಧ್ಯಾಯದಲ್ಲಿ ಹೇಳಿದೆ). ಆದರೆ ಮೂಲಕೃತಿಯ ಆರಂಭದಲ್ಲಿ ಕವಿಯು ರಚಿಸಿದ

ಮಹಃಪಾಯಾನ ಮಹೀಶೂರ ಕೃಷ್ಣರಾಜೇಪ್ಸಿತಾರ್ಥದಂ ।
ಮಹಾಬಲಾದ್ರಿನಿಲಯಂ ಮಹೇಶಾರ್ಧಾಂಗ ರೂಪಿಣ: ॥

ಎಂಬ ತನ್ನ ಆಶ್ರಯದಾತನನ್ನು ಹೊಗಳುವ ಶ್ಲೋಕವಿದೆ. ಮತ್ತೆ ಕಥಾಭಾಗದಲ್ಲಿ ಗಾದೆ ಮಾತುಗಳಂತೆ ಉಪಯೋಗಿಸಲಾದ ಶ್ಲೋಕವೇಷ್ಟನ (ತುಣುಕು) ಗಳನ್ನು ಹೊರತುಪಡಿಸಿದರೆ ಶ್ಲೋಕಗಳಾಗಲೀ, ಕನ್ನಡ ಪದ್ಯಗಳಾಗಲೀ ಇಲ್ಲ. ಮತ್ತೆ ಕೊನೆಯಲ್ಲಿ ಒಂದು ಶ್ಲೋಕವೂ ಎರಡು ಆರ್ಯಾವೃತ್ತಗಳೂ ಇವೆ. ಇವುಗಳಲ್ಲಿ ಶ್ಲೋಕವು ಹೀಗಿದೆ:

ಚಿರಂಜೀವತು ಚಾಮೇಂದ್ರ ತನೂಜ: ಕೃಷ್ಣಭೂಮಿಪ: ।
ಯತ್ಕೃಪಾಕ್ಷಾಂಕುರಸ್ತೋಮ: ಕವಿಕಲ್ಪದ್ರುಮಾಯತೇ ॥

ಇದರಲ್ಲಿ ಕವಿಗಳಿಗೆ ಕಲ್ಪವೃಕ್ಷದಂತಿರುವ ತನ್ನ ಆಶ್ರಯದಾತನು ಬಹುಕಾಲ ಬದುಕಲಿ ಎಂಬ ಹಾರೈಕೆ ಇದೆ.

ಮತ್ತಿನ ಆರ್ಯಾವೃತ್ತದಲ್ಲಿ ಕೃತಿರಚನೆಯನ್ನು ಮಾಡಿದ ಕಾಲವನ್ನು ಹೇಳಿದೆ. ಕೊನೆಯ ಆರ್ಯಾವೃತ್ತವು ಹೀಗಿದೆ:

ಪರಗುಣಶೀಕರ ಮುದಧಿಂ ಕೃತ್ವಾ ತತ್ರೈವ ಖೇಲದ್ಭ್ಯ: ।
ಅಜ್ಞಾತ ಮತ್ಸರೇಭ್ಯ: ಸದ್ಭ್ಯಸ್ತೇಭ್ಯೋ ನಮೋಸ್ತು ವಿದ್ವದ್ಭ್ಯ: ॥

(ಇತರರ ಗುಣದ ಒಂದು ಹನಿಯನ್ನು ಸಮುದ್ರವನ್ನಾಗಿ ಮಾಡಿ ಅದರಲ್ಲಿ 'ಓಲಾಡುವ ಸಜ್ಜನರಾದ ಅಸೂಯೆಯನ್ನೇ ಅರಿಯದ ವಿದ್ವಾಂಸರಿಗೆ ನಮಸ್ಕಾರವು).

ಈ ಆರ್ಯೆಯನ್ನು ಆತ ರಾಮಚಂದ್ರನೆಂಬ ಕವಿ ಬರೆದ ' ರಸ ಕವಿ ಕುಲಾನಂದ' ವೆಂಬ ಭಾಣ (ದಶರೂಪಗಳಲ್ಲಿ ಒಂದು ಪ್ರಕಾರ)ದಿಂದ ಆಯ್ದುಕೊಂಡಿದ್ದಾನೆ [54].

ಹೀಗೆ ಆತ ಸ್ವತ: ಸಂಸ್ಕೃತದ ಶ್ಲೋಕಗಳನ್ನು, ಆರ್ಯೆಗಳನ್ನು ರಚಿಸಬಲ್ಲಷ್ಟು ಸಮರ್ಥನೂ ಆಗಿದ್ದಾನೆಂಬುದು ತಿಳಿದುಬರುತ್ತದೆ.

<u>ಮಹಾಕಾವ್ಯವಾಗಿ ಮುದ್ರಾಮಂಜೂಷ:</u> ವಿದ್ಯಾಸಂಪನ್ನನಾದ ಕವಿಯು ರಾಜಾಸ್ಥಾನದಲ್ಲಿ ಇದ್ದು ಪಂಡಿತರ ಮೆಚ್ಚುಗೆ ಗಳಿಸಲು ಮಹಾಕಾವ್ಯದ ಎಲ್ಲಾ ಲಕ್ಷಣಗಳನ್ನು ತನ್ನ ಕೃತಿಯಲ್ಲಿ ಅಳವಡಿಸಿದ್ದಾನೆ. ಭಾರತೀಯ ಕಾವ್ಯ ವಿಮರ್ಶಕರ ಪ್ರಕಾರ ಮಹಾಕಾವ್ಯವು ಗದ್ಯ, ಪದ್ಯ ಅಥವಾ ಚಂಪೂ ರೂಪದಲ್ಲಿ ಇರಬಹುದು [55]. 'ಮುದ್ರಾಮಂಜೂಷ' ವು ಕನ್ನಡ ಗದ್ಯರೂಪದಲ್ಲಿದೆ. ಇಲ್ಲಿ ಕಥಾವಸ್ತುವನ್ನು ಹದಿನೆಂಟು ಆಶಯ (ಅಧ್ಯಾಯ)ಗಳಲ್ಲಿ ವಿಂಗಡಿಸಿ ಹೇಳಿದೆ. ಇದರ ವಸ್ತು — ಭಾರತದ ಮೊದಲ ಸಾಮ್ರಾಜ್ಯವನ್ನು ಸ್ಥಾಪಿಸಿದ ಚಂದ್ರಗುಪ್ತ ಮೌರ್ಯನ ಕುರಿತಾದ್ದು. ಇಲ್ಲಿ ಆತ ಧೀರೋದಾತ್ತ ನಾಯಕ. ಸರ್ವಾರ್ಥಸಿದ್ಧಿಯ ಮೊಮ್ಮಗನಾಗಿಯೂ, ಅನೇಕ ಕಷ್ಟಗಳನ್ನು ಸಹಿಸಬೇಕಾಗಿ ಬಂದರೂ ಮತ್ತೆ ನಂದ ಸಾಮ್ರಾಜ್ಯವನ್ನು ಪಡೆಯುವ ಸಾಹಸಪೂರ್ಣವಾದ ಕ್ರಿಯೆಯಲ್ಲಿ ತೊಡಗುವವನು. ಇಲ್ಲಿ ಉಪಯೋಗಿಸಿದ ಭಾಷೆ ಸಂದರ್ಭೋಚಿತವಾಗಿದೆ. ಅರ್ಥ ಗೌರವದಿಂದ ಕೂಡಿದೆ. ಅಲಂಕಾರಗಳೂ ಅಷ್ಟಾದಶ ವರ್ಣನೆಗಳೂ ಇವೆ. ರಾಜ್ಯಪ್ರಾಪ್ತಿಯಂತಹ ಉಚಿತ ಅರ್ಥಕ್ಕೆ ಪ್ರಾಧಾನ್ಯವಿದೆ. ಲೋಕಸ್ವಭಾವದ ಚಿತ್ರಣವೂ ರಸಗಳ ಪ್ರತಿಪಾದನೆಯೂ ಸಮರ್ಪಕವಾಗಿ ಬಂದಿವೆ [56]. ಆರಂಭದಲ್ಲಿ 'ಅವತರಣಿಕೆ' ಯ ಹೆಸರಿನಲ್ಲಿ ಕಥಾವಸ್ತುವಿನ ನಿರ್ದೇಶವಿದೆ. ಹಾಗಾಗಿ ಇದು ಎಲ್ಲ ರೀತಿಯಿಂದಲೂ ಮಹಾಕಾವ್ಯವೆನ್ನಿಸಿಕೊಳ್ಳಲು ಅರ್ಹವಾಗಿದೆ.

ಅಡಿಟಿಪ್ಪಣಿಗಳು

1. 'ಇಲ್ಲಿಯ ಪೂರ್ವಕಥೆಯನ್ನು ಕೆಂಪುನಾರಾಯಣನು ವಿಶಾಖದತ್ತನ ಮುದ್ರಾರಾಕ್ಷಸ ನಾಟಕಕ್ಕೆ ಟೀಕೆಯನ್ನು ಬರೆದ ಢುಂಢಿರಾಜನ ಉಪೋದ್ಘಾತದಿಂದ ಎತ್ತಿಕೊಂಡು ಯುಕ್ತ ಮಾರ್ಪಾಟುಗಳೊಂದಿಗೆ ವಿಸ್ತರಿಸಿರುವನು' ಎಂದು ಭೀಮರಾವ ಚಿಟಗುಪ್ಪಿಯವರು ಅಭಿಪ್ರಾಯ ಪಟ್ಟಿದ್ದಾರೆ.

1.ಎ) ವಾಗ್ಭೂಷಣ ಪತ್ರಿಕೆಯ ಸಂಪುಟ 31 ಸಂಚಿಕೆ 5 (ಮೇ 1927)ರಲ್ಲಿ ಶೇಷ ಭೀ. ಪಾರಿಶವಾಡ, ಬೆಂಗಳೂರು ಇವರ 'ಮುದ್ರಾರಾಕ್ಷಸ — ಮುದ್ರಾಮಂಜೂಷಗಳ ಅಲ್ಪ ಪರಿಚಯ' ಎಂಬ ಲೇಖನವೂ, ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ಆಂಗೀರಸ ಸಂಪುಟ ಆಶ್ವಯುಜ ಸಂಚಿಕೆ (ಅಕ್ಟೋಬರ 1932) ಯಲ್ಲಿ 'ಮುದ್ರಾರಾಕ್ಷಸ — ಮುದ್ರಾಮಂಜೂಷ' ಎಂಬ ಲೇಖನವೂ ಪ್ರಕಟವಾಗಿವೆ.

2. ತೆಲಂಗ ಕೆ.ಟಿ.(ಸಂ) 1918. 'ಮುದ್ರಾರಾಕ್ಷಸಂ' ಮುಂಬಯಿ ಪು.125.

3. ವಿವರಗಳಿಗೆ ನೋಡಿ: ಅನುಬಂಧದಲ್ಲಿ ನಾಮಾನುಕ್ರಮಣಿಕೆ.

4. ಚಂದ್ರಗುಪ್ತನಿಗೆ ಆ ಹೆಸರು ಯಾಕೆ ಬಂದಿತೆಂಬುದಕ್ಕೆ ಜೈನ, ಬೌದ್ಧ ಪಾಠಾಂತರಗಳಲ್ಲಿ ವಿಧವಿಧವಾದ ಕಾರಣಗಳನ್ನು ಹೇಳಿದ್ದರೂ ಈ ಕೃತಿಯಲ್ಲಿ ಅವುಗಳಿಗಿಂತ ಭಿನ್ನವಾಗಿ — 'ಮೊದಲು ಪೌರ್ಣಿಮೆಯ ಚಂದ್ರೋದಯವಾದ ಸಮಯದಲ್ಲಿ ಜನಿಸಿದವನಾದ್ದರಿಂದ ತಂದೆಯು ಚಂದ್ರಗುಪ್ತನೆಂದು ನಾಮಕರಣವಂಗೈದನು' ಎಂದು ಹೇಳಿದೆ.

5. ಯಾವನು ದುಃಖ ಇಲ್ಲವೇ ಸಂಕಟದಲ್ಲಿ ಸಿಕ್ಕು ಕೊನೆಗೆ ಅಭ್ಯುದಯವನ್ನು ಹೊಂದುತ್ತಾನೋ ಅವನೇ ನಾಯಕನು. ಉದ್ಧೃತ 'ನಾಟ್ಯಶಾಸ್ತ್ರ' ಪು. 498.

6. ಮುದ್ರಾಮಂಜೂಷದಲ್ಲಿ ಚಾಣಕ್ಯನನ್ನು ಎಲ್ಲೂ ಕೌಟಿಲ್ಯನೆಂದು ಕರೆದಿಲ್ಲ. ಆತನ ಇನ್ನೊಂದು ಪ್ರಸಿದ್ಧ ಹೆಸರಾದ 'ವಿಷ್ಣುಗುಪ್ತ' ನೆಂದೂ ಕರೆದಿಲ್ಲ. ಆತ, ತನ್ನನ್ನು ರಾಕ್ಷಸನಿಗೆ ಪರಿಚಯ ಮಾಡಿಕೊಳ್ಳುವಾಗ 'ವಿಷ್ಣುಶರ್ಮ' ನೆಂದುಕೊಂಡಿದ್ದಾನೆ. ಪ್ರಸಿದ್ಧವಾದ ವಿಷ್ಣುಗುಪ್ತನೆಂಬ ಹೆಸರಿದ್ದುದನ್ನು ಗಮನಿಸಿದ್ದಿರಬಹುದಾದ ನಮ್ಮ ಕವಿಯು ಬ್ರಾಹ್ಮಣನ ಹೆಸರು 'ಶರ್ಮ' ಎಂಬ ಉಪನಾಮದಿಂದ ಮುಕ್ತಾಯವಾಗುವುದೆಂಬ ಪ್ರಾಚೀನ ಪರಂಪರೆಯನ್ನು ತಿಳಿದವನಾದ್ದರಿಂದ ವಿಷ್ಣುಶರ್ಮ' ನೆಂದು ತಿದ್ದಿಕೊಂಡಿದ್ದಾನೆ. ಇದು ಆತನಲ್ಲಿದ್ದ ತಾರ್ಕಿಕ ಜಾಗೃತೆಗೆ ಉದಾಹರಣೆಯಾಗಿದೆ. ಆದರೆ ಈ ಹಿಂದಿನ ಪ್ರಾಚೀನ ಗ್ರಂಥಗಳಲ್ಲಿ ಆತನನ್ನು ವಿಷ್ಣುಗುಪ್ತನೆಂದೇ ಕರೆದದ್ದು ಕಂಡುಬರುತ್ತದೆ. ಅಮರಕೋಶದ ತ್ರಿಕಾಂಡಶೇಷ ಬ್ರಹ್ಮವರ್ಗದಲ್ಲಿ.

'ವಿಷ್ಣುಗುಪ್ತಸ್ತು ಕೌಟಿಲ್ಯ: ಚಾಣಕ್ಯೋ ದ್ರಮಿಳೋಂಗುಲ:'

ಎಂದು ಆತನ ಪರ್ಯಾಯ ಹೆಸರುಗಳನ್ನು ಹೇಳಿದೆ (ಉದ್ಧೃತ: ನಾರಾಯಣಚಂದ್ರ ಬಂದ್ಯೋಪಾಧ್ಯಾಯರ 'ಕೌಟಿಲ್ಯ' ಪು.1 ಅಡಿಟಿಪ್ಪಣಿ).

ಆಧುನಿಕ ಕನ್ನಡಸಾಹಿತ್ಯದಲ್ಲಿ ಜಿ.ಪಿ. ರಾಜರತ್ನಂ ರವರು ತಮ್ಮ 'ಅಶೋಕ ಮೌರ್ಯ' ಕೃತಿಯಲ್ಲಿ ಚಂದ್ರಗುಪ್ತನಿಗೆ ಪಂಚನದ ಪ್ರಾಂತದಲ್ಲಿ ಚಾಣಕ್ಯನ ಪರಿಚಯವಾಯಿತೆಂದು ಹೇಳುವಾಗ ಆತನನ್ನು 'ವಿಷ್ಣುಶರ್ಮ' ನೆಂದು ಹೆಸರಿಸಿದ್ದಾರೆ.

7. ಕೆಂಪುನಾರಾಯಣನು ರಾಕ್ಷಸನನ್ನು ಬ್ರಾಹ್ಮಣನೆನ್ನುತ್ತಾನೆ. ಬ್ರಾಹ್ಮಣರಲ್ಲಿ ಅಂತಹ ಹೆಸರು ವಾಡಿಕೆಯಲ್ಲಿಲ್ಲದಿದ್ದರೂ ಅದರ ಜಿಜ್ಞಾಸೆಗೆ ಆತ ಹೋಗುವುದಿಲ್ಲ. ಆದರೆ ಅನಂತಭಟ್ಟನೆಂಬವನು ಬರೆದ 'ಮುದ್ರಾರಾಕ್ಷಸ ಪೂರ್ವ ಸಂಕಥಾನಕ' ಎಂಬ ಕೃತಿಯಲ್ಲಿ 'ಸುಬುದ್ಧಿಶರ್ಮನೆಂಬ ಬ್ರಾಹ್ಮಣನು ನಂದರ ಮಂತ್ರಿಯಾದ ಮೇಲೆ ತನ್ನ ಶೌರ್ಯದಿಂದಾಗಿ ರಾಕ್ಷಸನೆಂದು ಪ್ರಸಿದ್ಧನಾದನು' ಎಂದು ಹೇಳಿದೆ. ರವಿನರ್ತಕನು ಆ ಹೆಸರನ್ನು ಗಮನದಲ್ಲಿಟ್ಟುಕೊಂಡು ಬೌದ್ಧಪಕ್ಷಪಾತಿಯೆಂಬಂತೆ — ಯುದ್ಧದಲ್ಲಿ ಆಸಕ್ತಿಯಿಲ್ಲದವನು — ಎಂದು ಚಿತ್ರಿಸಿದ್ದಾನೆ (ಈ ಸಂಗತಿಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರವಾಗಿ ಹೇಳಿದೆ).

7.ಎ) 'ಮುದ್ರಾರಾಕ್ಷಸ' ನಾಟಕದಲ್ಲಿಯ ಕ್ಷಪಣಕನು ಜೈನಧರ್ಮೀಯನೆಂದು ಕೆ. ಭುಜಬಲಿಶಾಸ್ತ್ರಿಗಳವರು (ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ಅಕ್ಟೋಬರ 1933) ಸಾಧಾರವಾಗಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಆದರೆ 'ಮುದ್ರಾಮಂಜೂಷ' ದ ಕ್ಷಪಣಕನು ಬೌದ್ಧ ಧರ್ಮೀಯನು. ಈ ವಿಷಯದಲ್ಲಿ ಸಂದೇಹವೇ ಇಲ್ಲ.

7.ಬಿ) ಬೇಡೂರಿನ ಬ್ರಾಹ್ಮಣರು ಜಿನಪೂಜೆಗಾಗಿ ಅಷ್ಟೋಪವಾಸಿ ಮುನಿಗಳ ಕೈಯಲ್ಲಿ ದಾನವನ್ನು ಕೊಟ್ಟ ಸಂಗತಿಯನ್ನು ಚಿದಾನಂದಮೂರ್ತಿಯವರು ಉಲ್ಲೇಖಿಸಿದ್ದಾರೆ. (ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. 433).

8. ಸಂಸ್ಕೃತ ಸಾಹಿತ್ಯದಲ್ಲಿ ವಿಷಕನ್ಯೆ ಬಗ್ಗೆ ಅನೇಕ ಪ್ರಸ್ತಾಪಗಳು ಬಂದಿವೆ. ಅವಳ ಉಸಿರಿನಿಂದ, ಸಂಸರ್ಗದಿಂದ ವ್ಯಕ್ತಿಗಳು ಸಾಯುತ್ತಾರೆ ಎಂದು ಪ್ರತೀತಿ. ಜ್ಯೋತಿಷಶಾಸ್ತ್ರಗಳ ಹೇಳಿಕೆಯಂತೆ — ಕೆಲವು ಗ್ರಹಗಳು ನಿಶ್ಚಿತ ಸ್ಥಾನದಲ್ಲಿರುವ ಸ್ಥಿತಿಯಲ್ಲಿ ಹುಟ್ಟಿದವರು ವಿಷಕನ್ಯೆಯರಾಗುತ್ತಾರೆ. ಆಯುರ್ವೇದ ಗ್ರಂಥಗಳೂ ವಿಷಕನ್ಯೆಯರ ಬಗ್ಗೆ ಹೇಳಿ ಆಸ್ಥಾನ ವೈದ್ಯರು ರಾಜರುಗಳನ್ನು ವಿಷಕನ್ಯೆಯಿಂದ ಪಾರುಮಾಡಬೇಕು — ಎಂದು ಹೇಳಿವೆ (ಉದ್ಧೃತ: ಮಹಾದೇವನ ಮುದ್ರಾರಾಕ್ಷಸ ನಾಟಕ ಕಥಾ. ಪು 10).

9. ಪುರಾಣಗಳಲ್ಲಿ ಮಹಾಪದ್ಮನೆಂದು, ಬೃಹತ್ಕಥೆಯಲ್ಲಿ ಧನನಂದನೆಂದೂ ಗೌಡದೇಶದ ದೊರೆಯ ಹೆಸರನ್ನು ಹೇಳಿದ್ದರೆ, 'ಮುದ್ರಾರಾಕ್ಷಸ' ನಾಟಕದಲ್ಲಿ ಆತನ ಹೆಸರನ್ನು 'ಸರ್ವಾರ್ಥಸಿದ್ಧಿ' ಯೆಂದು ಹೇಳಿದೆ. ಆ ಹೆಸರಿನಿಂದಲೇ ಆತ ಬೌದ್ಧಪಕ್ಷಪಾತಿಯಾಗಿದ್ದನೆಂದು ಕಾಣುತ್ತದೆಂದು ಕೆಲವರ ಅಭಿಪ್ರಾಯ. ಆದರೆ ಮುದ್ರಾಮಂಜೂಷದಲ್ಲಿ ಆತನು ಚಂದ್ರವಂಶ ಪರಂಪರಾ ಪ್ರಾಪ್ತವಾದ ಸಿಂಹಾಸನವುಳ್ಳವನೆಂದು ಹೇಳಿದೆ. ಹೀಗೆ ಮತ್ತೆಲ್ಲಿಯೂ ಹೇಳಿಲ್ಲ.

10. ಮಹಾದೇವ ರಬಿನರ್ತಕರು —'ಮೌರ್ಯನಿಗೆ ರಾಜ್ಯ ದೊರಕದುದಕ್ಕಾಗಿ ಅಸಮಾಧಾನವಿತ್ತೆಂದೂ, ಅದಕ್ಕಾಗಿ ಆತ ನಂದರಲ್ಲಿ ಭೇದವನ್ನು ಎಸಗುತ್ತಿದ್ದನು' ಎಂದು ಹೇಳಿದ್ದಾರೆ. ಇಲ್ಲಿ ಮೌರ್ಯನು ಸರ್ವಾಧಿಕಾರಿಯಾಗಿದ್ದು, ಎಲ್ಲರಿಗೂ ಬೇಕಾದವನಾಗಿ ವಾಚಕರ ಸಹಾನುಭೂತಿಯನ್ನು ಗಳಿಸುವಲ್ಲಿ ಸಫಲನಾಗುತ್ತಾನೆ.

11. 'ಕೆಂಪುನಾರಾಯಣ: ಕವಿ ಮತ್ತು ಕೃತಿ' ಪು. 119 — 121.

12. ಈ ಹೆಸರನ್ನು ಬಳಸಿಕೊಳ್ಳಲು ಕವಿಯು ಬಾಣ ಕಾದಂಬರಿಯಿಂದ ಪ್ರಭಾವಿತನಾಗಿದ್ದಿರಬಹುದು.

13. ಉದ್ಧೃತ: ಸಿ.ಪಿ.ಕೆ. 1976 'ನಾಗವರ್ಮನ ಕರ್ಣಾಟಕ ಕಾದಂಬರಿ' ಮೈಸೂರು ಪು. 241.

14. ಜವರೇ ಗೌಡ ದೇ. 1978. 'ಗದ್ಯಶ್ರೀ' ಮೈಸೂರು ಪು.75.

15. ವಿವರಗಳಿಗೆ ಅದೇ ಪು. 175.

16. ಮುಮ್ಮಡಿಯವರು ಮಾಳವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ ಕಥೆ, ಉತ್ತರರಾಮ ಚರಿತೆ ಕಥೆ ಮೊದಲಾದವುಗಳನ್ನು ಕನ್ನಡ ಗದ್ಯಕ್ಕೆ ತಂದಿದ್ದರೂ ಅವುಗಳ ರಚನೆಯ ಕಾಲ ಇದಕ್ಕಿಂತ ನಂತರದ್ದೇ ಆಗಿದೆ. ವಿವರಗಳಿಗೆ: ಶ್ರೀನಿವಾಸ ಹಾವನೂರ. 1974 ಹೊಸಗನ್ನಡದ ಅರುಣೋದಯ. ಮೈಸೂರು. ಪು 173 — 181.

17. ಕನ್ನಡ ಸಾಹಿತ್ಯ ಚರಿತ್ರೆ, 1971. ಪು 358.

17.ಎ) ನೋಡಿ: 'ಮುದ್ರಾಮಂಜೂಷ: ಹಸ್ತಪ್ರತಿ ಮತ್ತು ಮುದ್ರಿತ ಪ್ರತಿಗಳ ಪರಸ್ಪರ ಸಂಬಂಧ' ಸಂಪ್ರಬಂಧದಲ್ಲಿ ಇದನ್ನು ವಿಸ್ತಾರವಾಗಿ ವಿವೇಚಿಸಲಾಗಿದೆ.

18. 'ಗದ್ಯಶ್ರೀ' ಪು. 234.

19. ಅದೇ — ಪುಟ 235.

20. 'ಯುಗಧರ್ಮ ಮತ್ತು ಸಾಹಿತ್ಯದರ್ಶನ' ಪು.14.

20.ಎ) ಕ್ರಿ.ಶ. 17, 18ನೇ ಶತಮಾನದ ಕಾಲದಲ್ಲಿ ಹೀಗೆ ಕಪಟ ಪತ್ರ ಬರೆದು ಪ್ರಚಾರ ಮಾಡುವ ಕ್ರಮ ರೂಢಿಯಲ್ಲಿತ್ತು. ಉದಾ: (ಕ್ರಿ.ಶ. 1758ರಲ್ಲಿ) ದಿವಾನ ಖಂಡೇರಾಯನು ದೊರೆಗಳವರು ಅರಿಯುವಂತೆ — ' ಗಡಿಗಳಿಗೆ ನವಾಬ (ಹೈದರ ಅಲಿ) ನು 'ಓಡಿ ಬಂದಿದ್ದಾನೆ. ಅವನನ್ನು ಯಾರು ಹಿಡಿದುಕೊಡುತ್ತಾರೋ ಅವರಿಗೆ ಬಹಳ ಸನ್ಮಾನಗಳನ್ನು ಮಾಡಿಸುವೆವು' ಎಂದು ದೊರೆಗಳವರ ಅಪ್ಪಣೆಯಾಗಿದೆ ಎಂಬುದಾಗಿ ಪಿತೂರಿ ಕಾಗದಗಳನ್ನು ಬರೆಸಿದ್ದನು. ಇದನ್ನು ಅರಿತ ಹೈದರ ಅಲಿಯು — ' ಖಂಡೇರಾಯನನ್ನು ಯಾರು ಹಿಡಿದುಕೊಡುತ್ತಾರೋ ಅವರಿಗೆ ಬಹಳ ಇನಾಮುಗಳನ್ನು ಕೊಡಿಸುವೆವು' ಎಂದು ಶ್ರೀರಂಗಪಟ್ಟಣದಲ್ಲಿರುವ ಮುಖ್ಯಾಧಿಕಾರಿಗಳಿಂದ ಬಂದಂತೆ ಪಿತೂರಿ ಕಾಗದವನ್ನು ಬರೆದು ಅದು ಖಂಡೇರಾಯನ ದಂಡಿನ ಜನರ ಕೈಗೆ ಸಿಕ್ಕುವಹಾಗೆ ಮಾಡಿದ್ದನು (ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ 1 ಪು 193 — 94.

21. ಇಲ್ಲಿರುವ ಅಲಂಕಾರಗಳನ್ನು ಗುರುತಿಸುವಲ್ಲಿ ಶ್ರೀ ರಾಜಗೋಪಾಲ ಆಚಾರ್ಯರು ಮಾರ್ಗದರ್ಶನ ನೀಡಿ ಸಹಕರಿಸಿದ್ದಾರೆ. ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

22. ಪುರಾಣಿಕ ಎನಸೈಕ್ಲೋಪೀಡಿಯಾ (ಇಂ.) ಪು. 795.

23. ಮಹಾಭಾರತ ಕೀ ನಾಮಾನುಕ್ರಮಣಿಕಾ.(ಹಿಂದಿ) ಪು. 230.

24. ಪುರಾಣನಾಮ ಚೂಡಾಮಣಿ. ಪು. 316 — 17.

25. ಕ್ರಮಸಂಖ್ಯೆ 22 ಪುಟ. 392.

26. ಕ್ರಮಸಂಖ್ಯೆ 35 ಪುಟ 180 — 81.

27. ಕ್ರ.ಸಂ.35 ಪು. 295.

28. ಕ್ರ.ಸಂ.22 ಪು. 372.

29. ಕ್ರ.ಸಂ.23 ಪು. 45.

30. ಕ್ರ.ಸಂ.22 ಪು. 373.

31. ಕ್ರ.ಸಂ.35 ಪು. 403.

32. ಕ್ರ.ಸಂ.35 ಪು. 17.

33. ಕ್ರ.ಸಂ.35 ಪು. 654.

34. ಕ್ರ.ಸಂ.23 ಪು. 328.

35. ಕ್ರ.ಸಂ.22 ಪು. 5

36. ಕ್ರ.ಸಂ. 2೩ ಪು.45

37. ಕ್ರ.ಸಂ. ೩೪ ಪು.584 — 85.

38. ಕ್ರ.ಸಂ. ೨೨ ಪು.95

39. ಕ್ರ.ಸಂ. ೩೪ ಪು. 103 — 04.

40. ಕೆಂಪುನಾರಾಯಣ: ಕವಿ ಮತ್ತು ಕೃತಿ. ಪುಟ 123.

41. ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು ಪುಟ 56.

42. ಉದ್ಧೃತ: 'ಒ.ಎಲ್. ನಾಗಭೂಷಣ ಸ್ವಾಮಿ. ವಿಮರ್ಶೆಯ ಪರಿಭಾಷೆ: ಪುಟ 143.

43. ರಸನಿರೂಪಣೆಯ ಸಂದರ್ಭದಲ್ಲಿ ವಿವರವಾಗಿ ಹೇಳಿದೆ.

44. 'ಸಮರಚಿತ್ರಣ' ಭಾಗದಲ್ಲಿ ವಿವರವಾಗಿ ಹೇಳಲಿದೆ.

45. ಕೃಷ್ಣಮೂರ್ತಿ ಕೆ. ಕನ್ನಡ ಕಾವ್ಯಾದರ್ಶ. ಮೈಸೂರು ಪು.

46. ವೀರದಲ್ಲಿ ಮೂರು ವಿಧ. ಉಳಿದವು ದಯಾವೀರ ಮತ್ತು ದಾನವೀರ.
ಸುಬ್ಬಣ್ಣ ಕೆ.ವಿ. (ಅನು) 1992. 'ದಶರೂಪಕ' ಹೆಗ್ಗೋಡು ಪು. 258.

47. ಬೀಭತ್ಸದಲ್ಲಿ ಮೂರು ವಿಧ. ಉದ್ವೇಗೀ ಮತ್ತು ಶುದ್ಧ — ಇವು ಉಳಿದೆರಡು ವಿಧಗಳು.
ದಶರೂಪಕ ಪುಟ 260.

48. ದಶರೂಪಕ ಪುಟ 256.

49. 'ರಮಯಂತೀತ ಚಾಟುಕೃತ ಕಾಂತ: ಕಲಾಕ್ರೀಡಾದಿಭಿಶ್ಚತಾಮ'. ದಶರೂಪಕ ಪು. 257.

50. ಯಾವಳ ಪ್ರಿಯನು ಪ್ರಯಾಣ ಸನ್ನದ್ಧನಾಗಿರುವನೋ ಅವಳು 'ಪ್ರೋಷ್ಯತ್ಪತಿಕಾ' (ಅಪ್ಪಣ)
ಉದ್ಧೃತ ದಶರೂಪಕ. ಪುಟ 103.

51. ಅದೇ ಪುಟ 255.

52. ನಾಟ್ಯಶಾಸ್ತ್ರ ಪುಟ 61.

53. ಸಂಸ್ಕೃತದ ಮೊದಮೊದಲ ಲಾಕ್ಷಣಿಕರು ಎಂಟೆ (ರಸಗಳನ್ನು ಪ್ರತಿಪಾದಿಸಿದ್ದರು. ಶಾಂತರಸವು ಮೊದಲು ತಲೆಯೆತ್ತಿರುವುದು ಉದ್ಭಟನ 'ಕಾವ್ಯಾಲಂಕಾರ ಸಾರಸಂಗ್ರಹ' ದಲ್ಲಿ. ಆನಂದ ವರ್ಧನನು 'ಧ್ವನ್ಯಾಲೋಕ' ದಲ್ಲಿ ಶಾಂತರಸಕ್ಕೆ ಹೆಚ್ಚಿನ ಮಹತ್ವಕೊಟ್ಟನು. ಅಭಿನವ ಗುಪ್ತನು ಇದಕ್ಕೆ ಎಲ್ಲಾ ರಸಗಳಿಗಿಂತ ಹಿರಿಯ ಸ್ಥಾನವನ್ನು ಕೊಟ್ಟನು. ಹೀಗೆ ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಶಾಂತರಸವು ಸುಪ್ರತಿಷ್ಠಿತವಾಯಿತು. ಕನ್ನಡದ ಅಲಂಕಾರಿಕರೆಲ್ಲರೂ ಶಾಂತರಸವನ್ನು ಅಂಗೀಕರಿಸಿದ್ದಾರೆ

'ಕವಿರಾಜಮಾರ್ಗ'ವು (ಕ್ರಿ.ಶ.ಸು.850) ದಂಡಿಯ ಕಾವ್ಯಾದರ್ಶವನ್ನೇ ಮುಖ್ಯವಾಗಿ ಅನುಸರಿಸಿದ್ದರೂ, ಈ ವಿಚಾರದಲ್ಲಿ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗುತ್ತದೆ (ಭಾರತೀಯ ಕಾವ್ಯಮೀಮಾಂಸೆ. ಪು. 321 – 327).

54. ಈ ವಿಷಯವನ್ನು ನನಗೆ ತಿಳಿಸಿದವರು ಶತಾವಧಾನಿ ಶ್ರೀ ಆರ್. ಗಣೇಶ ರವರು.

55. ನಾಗಭೂಷಣಸ್ವಾಮಿ 'ಓ.ಎಲ್. 1983 'ವಿಮರ್ಶೆಯ ಪರಿಭಾಷೆ' ಪು. 84.

56. ಇವುಗಳನ್ನು ಆಯಾ ಶೀರ್ಷಿಕೆಗಳ ಅಡಿಯಲ್ಲಿ ವಿವರವಾಗಿ ತಿಳಿಸಿದೆ.

•••••••••••••

ಅಧ್ಯಾಯ ಐದು

ಅಧ್ಯಾಯ ಐದು

ಮುದ್ರಾಮಂಜೂಷ: ವಿವಿಧ ಶಾಸ್ತ್ರಗಳ ಅಧ್ಯಯನ

ಭಾರತೀಯ ಜ್ಞಾನ ಹಾಗೂ ಸಂಸ್ಕೃತಿಯ ವಿಭಿನ್ನ ಶಾಖೆಗಳನ್ನು ಶಾಸ್ತ್ರಗಳೆಂದು ಪರಿಗಣಿಸುತ್ತಾರೆ. ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ — ಇವುಗಳಿಗಾಗಿ ಧರ್ಮಶಾಸ್ತ್ರ, ಅರ್ಥಶಾಸ್ತ್ರ, ಕಾಮಶಾಸ್ತ್ರ ಮತ್ತು ಮೋಕ್ಷ ಶಾಸ್ತ್ರಗಳು ಆಳವಾದ ವಿಚಾರಗಳನ್ನೊಳಗೊಂಡು ರೂಪಿಸಲ್ಪಟ್ಟಿವೆ. ಇವುಗಳಲ್ಲಿ ಅರ್ಥಶಾಸ್ತ್ರದ ಮೂಲ ತತ್ತ್ವಗಳು ಋಗ್ವೇದದ ಕಾಲದಲ್ಲೇ ಸ್ಪಷ್ಟವಾಗಿ ಗೋಚರಿಸುತ್ತದೆ.

ಅರ್ಥಶಾಸ್ತ್ರದ ಇತಿಹಾಸ:

ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ವಿದ್ಯೆಗಳ ಸಂಖ್ಯೆ ಎಷ್ಟು ಎಂಬ ವಿಷಯದಲ್ಲಿ ಸ್ವಾರಸ್ಯಕರವಾದ ಚರ್ಚೆ ನಡೆಯುತ್ತಾ ಬಂದಿತ್ತು. ಯಾಜ್ಞವಲ್ಕ್ಯಸ್ಮೃತಿಯಲ್ಲಿ ಹದಿನಾಲ್ಕು ವಿದ್ಯೆ[1]ಗಳ ಉಲ್ಲೇಖವಿದೆ. ಮನುವೂ ಇಷ್ಟೇ ವಿದ್ಯೆಯನ್ನು ಒಪ್ಪುತ್ತಾನೆ. ವಿಷ್ಣುಪುರಾಣದಲ್ಲಿ ಈ ಮೇಲಿನವುಗಳೊಂದಿಗೆ ಆಯುರ್ವೇದ, ಧನುರ್ವೇದ, ಸಂಗೀತಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನು ಸೇರಿಸಿ ಒಟ್ಟು ವಿದ್ಯೆಗಳು ಹದಿನೆಂಟು ಎಂದು ಹೇಳಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿಯೂ ಇಷ್ಟೇ ಸಂಖ್ಯೆಗಳ ಉಲ್ಲೇಖವಿದೆ. ಅರ್ಥಶಾಸ್ತ್ರದ ಹೇಳಿಕೆಯಂತೆ ಕೌಟಿಲ್ಯನು — ಆನ್ವೀಕ್ಷಿಕೀ, ತ್ರಯೀ, ವಾರ್ತಾ ಮತ್ತು ದಂಡಗಳೆಂಬ ನಾಲ್ಕು ವಿದ್ಯೆಗಳನ್ನು ಹೇಳುತ್ತಾನೆ. ಮಹಾಭಾರತ ಮತ್ತು ಕಾಮಂದಕನೀತಿಸಾರದಲ್ಲಿ ಇದೇ ಅಭಿಪ್ರಾಯವಿದೆ. ಬೃಹಸ್ಪತೀಯ ಸಂಪ್ರದಾಯದಂತೆ ವಿದ್ಯೆಗಳು ಕೇವಲ ಎರಡು — ವಾರ್ತಾ ಮತ್ತು ದಂಡನೀತಿ[2]. ಆದರೆ ಶುಕ್ರಾಚಾರ್ಯರ ಅಭಿಪ್ರಾಯದಂತೆ ವಿದ್ಯೆಯು ಒಂದೇ, ಅದುವೇ ದಂಡನೀತಿ. ಈ ಸಂಪ್ರದಾಯದ ಹೇಳಿಕೆಯಂತೆ — ' ದಂಡನೀತಿಯಿಲ್ಲದೇ ಯಾವುದೇ ವಿದ್ಯೆಯು ಸುರಕ್ಷಿತವಾಗಿರುವುದು ಸಾಧ್ಯವಿಲ್ಲ. ಆದ್ದರಿಂದ ಎಲ್ಲ ವಿದ್ಯೆಗಳಿಗಿಂತ ಇದು ಮೇಲು. ಇದು ಸ್ವಯಂ ಪೂರ್ಣ. ಉಳಿದವು ಅಪೂರ್ಣ ಅಥವಾ ಆಂಶಿಕವಾದವು'. ಛಾಂದೋಗ್ಯ ಉಪನಿಷತ್ತಿನಲ್ಲಿ ಪ್ರಯೋಗಿಸಿದ ''ಏಕಾಯನ' ಶಬ್ದದ ವ್ಯಾಖ್ಯಾನ ಮಾಡುತ್ತಾ ಶಂಕರಾಚಾರ್ಯರು ''ಏಕಾಯನಂ — ನೀತಿಶಾಸ್ತ್ರಂ' ಎಂದಿದ್ದಾರೆ. ಇದು ಕೂಡಾ ನೀತಿ ವಿದ್ಯೆಯು ಎಲ್ಲಾ ವಿದ್ಯೆಗಳಿಗಿಂತ ಶ್ರೇಷ್ಠವಾದದ್ದೆಂದು ಸಾಧಿಸಿ ತೋರಿಸುತ್ತದೆ. ಆದ್ದರಿಂದಲೇ ಮಹಾಭಾರತಾದಿ ಗ್ರಂಥಗಳಲ್ಲಿ ಈ ನೀತಿವಿದ್ಯೆಯನ್ನು ಬಹಳಷ್ಟು ಸಲ ಹೊಗಳಲಾಗಿದೆ.

ಅನುಚಿತ ಮಾರ್ಗದಿಂದ ಯಾವುದೇ ವ್ಯಕ್ತಿಯನ್ನು ಉಚಿತ ಮಾರ್ಗದಲ್ಲಿ ತರುವ ಕ್ರಿಯೆಯೇ ' ನೀತಿಯು'. ಇದಕ್ಕೆ ಅಧಿಕಾರಿಯು ರಾಜನು. ಆದ್ದರಿಂದಲೇ ಇವನ್ನು ರಾಜನೀತಿ ಎನ್ನುವುದು.

ಜನರು ದುರಾಚಾರಿಗಳಾದಾಗ ' ಮಾತ್ಸ್ಯನ್ಯಾಯ ' ವನ್ನು ತಪ್ಪಿಸಲು ರಾಜನ ಅವಶ್ಯಕತೆಯುಂಟಾಗಿರಬೇಕು. ರಾಜನು ದಂಡಪ್ರಯೋಗ ನೈಪುಣ್ಯದಿಂದ ಜನರನ್ನು ಸನ್ಮಾರ್ಗ ಪ್ರವೃತ್ತರಾಗುವಂತೆ ಮಾಡುತ್ತಿದ್ದಿರಬೇಕು. ಅದುವೇ ಕಾಲಾಂತರದಲ್ಲಿ ' ರಾಜನೀತಿ ' ಯಾಗಿ ಬೆಳೆದುಬಂದು ರಾಜಧರ್ಮ (ಕರ್ತವ್ಯ) ವೇ ರಾಜನೀತಿಯಾಗಿರಬೇಕು. ಇದಕ್ಕೆ ಸಂಬಂಧಿಸಿದಂತೆ ಮಹಾಭಾರತದಲ್ಲಿ ಹೀಗೊಂದು ಉಲ್ಲೇಖ[3]ವಿದೆ. " ಧರ್ಮವಿಪ್ಲವದಿಂದಾಗಿ ಜನರಲ್ಲಿ ಅನಾಚಾರವು ಹೆಚ್ಚಾಯಿತು. ಕಷ್ಟಕ್ಕೊಳಗಾದ ದೇವತೆಗಳು ಬ್ರಹ್ಮನ ಬಳಿ ಹೋಗಿ — ಧರ್ಮವನ್ನು ಉದ್ಧಾರ ಮಾಡಬೇಕೆಂದು ಮೊರೆಯಿಟ್ಟರು. ಆಗ ಬ್ರಹ್ಮನು ಒಂದು ಲಕ್ಷ ಅಧ್ಯಾಯಗಳುಳ್ಳ ಒಂದು ಶಾಸ್ತ್ರವನ್ನು ರಚಿಸಿದನು. ಅದರಲ್ಲಿ ಎಲ್ಲಾ ಪುರುಷಾರ್ಥಗಳನ್ನು ಮತ್ತು ದಂಡನೀತಿಯನ್ನು ಸೇರಿಸಲಾಗಿತ್ತು. ಈ ಶಾಸ್ತ್ರದ ಹೆಸರೇ ನೀತಿಶಾಸ್ತ್ರ ಅಥವಾ ದಂಡನೀತಿ ".

ಮಹಾಭಾರತದ ಇನ್ನೊಂದು ಕಡೆಯಲ್ಲಿ[4] — ' ನೀತಿಶಾಸ್ತ್ರವು ಸ್ವಾಯಂಭುವ ಮನುವಿನಿಂದ ಪ್ರಚಾರಕ್ಕೆ ಬಂದಿತೆಂತಲೂ, ಇದೇ ಮಾನವಶಾಸ್ತ್ರದ ಆಧಾರದ ಮೇಲೆ ಉಶನಾ ಮತ್ತು ಬೃಹಸ್ಪತಿಗಳು ತಮ್ಮ ತಮ್ಮ ಶಾಸ್ತ್ರಗಳನ್ನು ರಚಿಸಿದರೆಂದೂ 'ಉಲ್ಲೇಖವಿದೆ.

' ಶುಕ್ರನೀತಿಸಾರ '[5]ದ ಹೇಳಿಕೆಯಂತೆ ಬ್ರಹ್ಮಪ್ರಣೀತ ' ನೀತಿಶಾಸ್ತ್ರ ' ದಲ್ಲಿ ಒಂದು ಕೋಟಿ ಶ್ಲೋಕಗಳಿದ್ದುವು. ಪ್ರಜೆಗಳ ಜೀವನದ ಅಲ್ಪಾವಧಿಯನ್ನು ಗಮನಿಸಿ ಶಿವನು ಆ ನೀತಿಶಾಸ್ತ್ರವನ್ನು ಹತ್ತು ಸಾವಿರ ಅಧ್ಯಾಯಕ್ಕಿಳಿಸಿದನು. ಇದುವೇ ' ವೈಶಾಲಾಕ್ಷ ನೀತಿಶಾಸ್ತ್ರ ' ವೆಂದಾಯಿತು. ಪುನ: ಇಂದ್ರನು ಇದನ್ನು ಐದು ಸಾವಿರ ಅಧ್ಯಾಯಕ್ಕಿಳಿಸಿದನು. ಅದರ ಹೆಸರು ' ಬಾಹುದಂತಕ ' ಶಾಸ್ತ್ರವು. ಅನಂತರ ಬೃಹಸ್ಪತಿಯು ಇದನ್ನು ಮೂರು ಸಾವಿರಕ್ಕೂ, ಶುಕ್ರಾಚಾರ್ಯನು ಒಂದು ಸಾವಿರ ಅಧ್ಯಾಯಕ್ಕೂ ಇಳಿಸಿದರೆಂದು ಹೇಳಿದೆ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ — ಮಾನವ, ಬಾರ್ಹಸ್ಪತ್ಯ, ಔಶನಸ, ಪಾರಾಶರ ಮತ್ತು ಅಂಭೀಯರುಗಳೆಂಬ ಐದು ಸಂಪ್ರದಾಯಗಳ ಉಲ್ಲೇಖವಿದೆ. ಅಲ್ಲದೇ, ಭಾರದ್ವಾಜ, ವಿಶಾಲಾಕ್ಷ, ಪಿಶುನ, ಪಿಶುನಪುತ್ರ, ಕೌಣಪದಂತ, ವಾತವ್ಯಾಧಿ, ಬಾಹುದಂತೀಪುತ್ರ, ಕಾತ್ಯಾಯನ, ಕಣಿಂಕ, ದೀರ್ಘಚಾರಾಯಣ, ಘೋಟಮುಖ, ಕಿಂಜಲ್ಕ ಮೊದಲಾದ ಆಚಾರ್ಯರ ಹೆಸರುಗಳಿವೆ [5ಎ].

ಕಾಮಂದಕೀಯ ನೀತಿಸಾರ[6]ದ ಉಪಾಧ್ಯಾಯ ನಿರಪೇಕ್ಷಾ ವ್ಯಾಖ್ಯಾನದಲ್ಲಿ ಯಾವುದೋ ಗ್ರಂಥವನ್ನು ಉದ್ಧರಿಸಿ — ' ಬ್ರಹ್ಮನು ಒಂದು ಲಕ್ಷ ಅಧ್ಯಾಯಗಳಲ್ಲಿ ಸಮೃದ್ಧವಾದ ಒಂದು ಶಾಸ್ತ್ರದ ರಚನೆ ಮಾಡಿದನು. ಅನಂತರ ನಾರದ, ಇಂದ್ರ, ಬೃಹಸ್ಪತಿ, ಶುಕ್ರ, ಭಾರದ್ವಾಜ, ಭೀಷ್ಮ, ಪಾರಾಶರ, ಮನುವೇ ಮೊದಲಾದವರು ಅದನ್ನು ಸಂಕ್ಷಿಪ್ತಗೊಳಿಸಿದರು. ಕೊನೆಯಲ್ಲಿ ಪುನ: ವಿಷ್ಣುಗುಪ್ತ (ಕೌಟಿಲ್ಯ) ನು ರಾಜರುಗಳ ಉಪಯೋಗಕ್ಕಾಗಿ ದೇಶಕಾಲಕ್ಕನುಗುಣವಾಗಿ ಅದನ್ನು ಸಂಕ್ಷೇಪಗೊಳಿಸಿದನು ' ಎಂದು ಹೇಳಿದೆ.

ಕಾಮಸೂತ್ರ[7]ದ ಹೇಳಿಕೆಯಂತೆ ಬ್ರಹ್ಮನು ಒಂದು ಲಕ್ಷ ಅಧ್ಯಾಯಗಳಲ್ಲಿ ವಿಭಕ್ತವಾದ ಒಂದು ಶಾಸ್ತ್ರವನ್ನು ರಚಿಸಿದನು. ಆ ಶಾಸ್ತ್ರದಲ್ಲಿಯ ಅರ್ಥಶಾಸ್ತ್ರವನ್ನು ಬೃಹಸ್ಪತಿಯು ಸಂಘಟಿಸಿದನು. 'ನೀತಿಪ್ರಕಾಶಿಕಾ'[8]ದಲ್ಲಿ ಬ್ರಹ್ಮ, ಮಹೇಶ್ವರ, ಇಂದ್ರ, ಪ್ರಾಚೇತಸಮನು, ಬೃಹಸ್ಪತಿ, ಶುಕ್ರ, ಭಾರದ್ವಾಜ, ವೇದವ್ಯಾಸ ಹಾಗೂ ಗೌರಶಿರಾ — ಇವರುಗಳನ್ನು ರಾಜಶಾಸ್ತ್ರ ನಿರ್ಮಾತೃಗಳೆಂದು ಹೇಳಿದೆ.

'ದಶಕುಮಾರ ಚರಿತ್ರ'[9]ದಲ್ಲಿ ಶುಕ್ರ, ಅಂಗೀರಸ (ಬೃಹಸ್ಪತಿ), ವಿಶಾಲಾಕ್ಷ, ಬಾಹುದಂತೀ ಪುತ್ರ, ಪರಾಶರ ಮೊದಲಾದವರ ಹೆಸರುಗಳನ್ನು ಹೇಳಿದ್ದರೆ 'ಬುದ್ಧಚರಿತ'[10]ದಲ್ಲಿ 'ಭೃಗು, ಅಂಗೀರಸ, ಶುಕ್ರ ಹಾಗೂ ಬೃಹಸ್ಪತಿಗಳು ಈ ಶಾಸ್ತ್ರವನ್ನು ನಿರ್ಮಿಸಿದರು' ಎಂದು ಹೇಳಿದೆ.

ಮೇಲೆ ಹೇಳಿದ ಆಚಾರ್ಯರುಗಳು ರಾಜನೀತಿ ವಿಷಯದ ಗ್ರಂಥವನ್ನು ಬರೆದಿರಬಹುದಾಗಿದ್ದರೂ ಆ ಎಲ್ಲಾ ಆಚಾರ್ಯರ ಸದ್ವಿಷಯಕ ಗ್ರಂಥಗಳು ಈಗ ಲಭ್ಯವಿಲ್ಲ. ಕೆಲವು ಆಚಾರ್ಯರು ಧರ್ಮಶಾಸ್ತ್ರ ಗ್ರಂಥಗಳನ್ನು ರಚಿಸಿದ್ದು ಅವುಗಳಲ್ಲಿ ಅರ್ಥಶಾಸ್ತ್ರವನ್ನು ಚರ್ಚಿಸಿರುವ ಸಾಧ್ಯತೆಯಿದೆ. ಕೌಟಿಲ್ಯನು ಉಲ್ಲೇಖಿಸಿದ ಪಿಶುನ, ಪಿಶುನಪುತ್ರ, ಕೌಣಪದಂತ ಹಾಗೂ ವಾತವ್ಯಾಧಿ ಇವರ ಗ್ರಂಥಗಳಿದ್ದುವೆಂದು ಹೇಳುವುದು ಕಷ್ಟವಾಗಿದೆ. ಅರ್ಥಶಾಸ್ತ್ರದ ಮೇಲೆ 'ನಯಚಂದ್ರಿಕಾ' ವ್ಯಾಖ್ಯಾನವನ್ನು ಬರೆದ ಮಾಧವಯಜ್ವನು ಹೇಳಿದಂತೆ — ಪಿಶುನನನ್ನು ನಾರದನ, ಕೌಣಪದಂತನನ್ನು ಭೀಷ್ಮನ ಮತ್ತು ವಾತವ್ಯಾಧಿಯನ್ನು ಉದ್ಧವನ ಪರ್ಯಾಯ ಹೆಸರೆಂದು ಒಪ್ಪುವುದಾದರೆ ಸಮಸ್ಯೆಗೆ ಸ್ವಲ್ಪಮಟ್ಟಿನ ಪರಿಹಾರ ಸಿಕ್ಕಂತಾಗುವುದು.

ಮೇಲೆ ಹೇಳಿದ ಆಚಾರ್ಯರುಗಳ ಗ್ರಂಥಗಳಲ್ಲಿ — 1) ಕೌಟಿಲ್ಯನ ಅರ್ಥಶಾಸ್ತ್ರ 2) ಶುಕ್ರನೀತಿ ಸಾರ 3) ಚಾಣಕ್ಯಸೂತ್ರಗಳು ಮತ್ತು 4) ಬಾರ್ಹಸ್ಪತ್ಯ ಸೂತ್ರಗಳೆಂಬ ನಾಲ್ಕು ಉಪಲಬ್ಧವಿವೆ. ಇವುಗಳಲ್ಲಿ ಕೊನೆಯ ಎರಡರ ಈಗ ಸಿಗುವ ರೂಪವು ಕ್ರಿ.ಶ. ಒಂಬತ್ತು ಅಥವಾ ಹತ್ತನೆಯ ಶತಮಾನದಷ್ಟು ಮಾತ್ರ ಹಿಂದಿನವಾಗಿವೆ.

ಈ ಗ್ರಂಥಗಳಲ್ಲದೇ ಕಾಮಂದಕನ 'ನೀತಿಸಾರ' (ಕ್ರಿ.ಶ. 4ನೇ ಶತಮಾನ, ದ್ವಿತೀಯ ಸಂಕಲನ ಕ್ರಿ.ಶ. 17ನೆಯ ಶತಮಾನ), ವೈಶಂಪಾಯನ ನಿರ್ಮಿತ 'ನೀತಿಪ್ರಕಾಶಿಕಾ' ಭೋಜನ 'ಯುಕ್ತಿಕಲ್ಪತರು', ಸೋಮದೇವನ 'ನೀತಿವಾಕ್ಯಾಮೃತ', ಲಕ್ಷ್ಮೀಧರನ 'ಕೃತ್ಯಕಲ್ಪತರು'ವಿನ ರಾಜನೀತಿಕಾಂಡ, ಚಂಡೇಶ್ವರನ 'ರಾಜನೀತಿ ರತ್ನಾಕರ' ಮಿತ್ರಮಿಶ್ರನ 'ರಾಜನೀತಿ ಪ್ರಕಾಶ', ನೀಲಕಂಠನ 'ನೀತಿಮಯೂಖ', 'ಅನಂತದೇವನ 'ರಾಜಧರ್ಮಕೌಸ್ತುಭ' ಮೊದಲಾದವು ರಾಜನೀತಿ ಶಾಸ್ತ್ರದ ಪ್ರಮುಖ ಗ್ರಂಥಗಳಾಗಿವೆ.

ಪುರಾಣಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಅಗ್ನಿಪುರಾಣ (ಅಧ್ಯಾಯ ೨೧೮-೨೪೨) ಗರುಡಪುರಾಣ (ಅಧ್ಯಾಯ ೧೦೮-೧೧೫), ಮತ್ಸ್ಯಪುರಾಣ (ಅಧ್ಯಾಯ ೨೧೫-೨೪೩), ಮಾರ್ಕಂಡೇಯ ಪುರಾಣ (ಅಧ್ಯಾಯ ೨೪), ಕಾಲಿಕಾ ಪುರಾಣ (ಅಧ್ಯಾಯ ೮೭) ಮೊದಲಾದವು ನೋಡತಕ್ಕವುಗಳಾಗಿವೆ.

ಸ್ಮೃತಿಗಳಲ್ಲಿ ಮನುಸ್ಮೃತಿ (೭-೯ ಅಧ್ಯಾಯಗಳು), ಬೃಹತ ಪಾರಾಶರ ಸ್ಮೃತಿ (ಅಧ್ಯಾಯ ೧೦), ಬುದ್ಧಹಾರೀತ ಸ್ಮೃತಿ (ಅಧ್ಯಾಯ ೭) ಮೊದಲಾದವುಗಳಲ್ಲಿ ಈ ವಿಷಯವಿದೆ.

ಮಹಾಭಾರತದಲ್ಲಿ ವನಪರ್ವ (ಅಧ್ಯಾಯ ೧೫೦), ಸಭಾಪರ್ವ (ಅಧ್ಯಾಯ ೫), ಉದ್ಯೋಗಪರ್ವ (ಅಧ್ಯಾಯ ೩೩-೩೪), ಶಾಂತಿಪರ್ವ (ಅಧ್ಯಾಯ ೧-೧೩೦) ಹಾಗೂ ಆಶ್ರಮವಾಸಿಕ ಪರ್ವ (ಅಧ್ಯಾಯ ೫-೭)ಗಳಲ್ಲಿಯೂ ರಾಜನೀತಿಗೆ ಸಂಬಂಧಿಸಿದ ವಿಚಾರಗಳಿವೆ.

ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ 'ರಾಜನೀತಿಶಾಸ್ತ್ರ' ಕ್ಕೆ ವಿಸ್ತೃತವೂ ಸುದೀರ್ಘವೂ ಆದ ಇತಿಹಾಸವಿದೆ.

ಅರ್ಥಶಾಸ್ತ್ರದ ಸಂಕ್ಷಿಪ್ತ ಪರಿಚಯ

ಇದರಲ್ಲಿ ಹದಿನೈದು ಅಧಿಕರಣಗಳಿದ್ದು ಅವುಗಳ ವಿವರ ಇಂತಿದೆ:—

1. <u>ವಿದ್ಯಾ ಸಮುದ್ದೇಶ:</u> ಆನ್ವೀಕ್ಷಿಕೀ ಸ್ಥಾಪನಾ: ಇದರಲ್ಲಿ ಇಪ್ಪತ್ತೊಂದು ಅಧ್ಯಾಯಗಳಿವೆ. ರಾಜನ ಪೋಷಣೆ ಮತ್ತು ಆತನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವಿಷಯಗಳು ಇಲ್ಲಿವೆ.

2. <u>ಅಧ್ಯಕ್ಷ ಪ್ರಚಾರ:</u> ಈ ಅಧಿಕರಣದಲ್ಲಿ ಮೂವತ್ತಾರು ಅಧ್ಯಾಯಗಳಿವೆ. ಇದರಲ್ಲಿ ಜನಪದ, ಭೂಮಿ, ದುರ್ಗಗಳು ವಿವಿಧ ಅಧಿಕಾರಿಗಳು. ಅವರ ನೇಮಕ, ಕರ್ತವ್ಯ — ಇವುಗಳ ಬಗ್ಗೆ ಮಾಹಿತಿಗಳಿವೆ.

3. <u>ಧರ್ಮಸ್ಥೀಯಂ:</u> ಇದರಲ್ಲಿ ಇಪ್ಪತ್ತು ಅಧ್ಯಾಯಗಳಿದ್ದು ಕಾನೂನಿನ ವಿವೇಚನೆ ಇದೆ. ವಿವಾಹ, ದಾಯ, ವಾಸ್ತುಕ, ಋಣದಾನ, ದ್ಯೂತ ಮೊದಲಾದವುಗಳಲ್ಲಿ ಸಮಸ್ಯೆ ಬಂದಾಗ ಹೇಗೆ ಪರಿಹರಿಸಬೇಕೆಂಬುದು ಇಲ್ಲಿನ ವಿಷಯವಾಗಿದೆ.

4. <u>ಕಂಟಕಶೋಧನಂ:</u> ಇಲ್ಲಿ ಹದಿಮೂರು ಅಧ್ಯಾಯಗಳಿವೆ. ಬಡಗಿ, ಕಮ್ಮಾರ ಮೊದಲಾದ ಉದ್ಯೋಗಿಗಳು, ತೂಕ — ಅಳತೆಗಳಲ್ಲಿ ಹೆಚ್ಚುಕಡಿಮೆ ಮಾಡುವ ವರ್ತಕರು, ದೈವಿಕ ಭಯಗಳನ್ನು ತೋರಿಸಿ ಜನರನ್ನು ಪೀಡಿಸುವವರು — ಮೊದಲಾದ ಕೆಟ್ಟ ಕೆಲಸ ಮಾಡುವವರನ್ನು ಕಠಿಣ ಶಿಕ್ಷೆಗಳಿಂದ ಮತ್ತು ಪೋಲೀಸು ಕಾರ್ಯಗಳಿಂದ ಹೇಗೆ ಅಣಗಿಸಬಹುದೆಂದು ಇಲ್ಲಿ ಹೇಳಿದೆ.

5. <u>ಯೋಗವೃತ್ತ:</u> ಈ ಅಧಿಕರಣದಲ್ಲಿ ಆರು ಅಧ್ಯಾಯಗಳಿವೆ. ಇದರಲ್ಲಿ ಗೂಢಚಾರರು ಮಾಡಬೇಕಾದ

ಕೆಲಸ, ತೀಕ್ಷ್ಣಾದಿಗಳಿಂದ ಯಾರಿಗೂ ತಿಳಿಯದಂತೆ ನಾಶ ಮಾಡುವುದು, ಮಂತ್ರಿಯೇ ಮೊದಲಾದವರು ರಾಜನ ವಿಷಯದಲ್ಲಿ ನಡೆದುಕೊಳ್ಳಬೇಕಾದ ರೀತಿ — ಮೊದಲಾದ ವಿಚಾರಗಳಿವೆ.

6. ಮಂಡಲ ಯೋನಿ: ಇದರಲ್ಲಿ ಎರಡು ಅಧ್ಯಾಯಗಳಿವೆ. ರಾಜನೀತಿಯ 'ಏಳು ಮೂಲ ಸೂತ್ರಗಳು ಇಲ್ಲಿ ವಿವರಿಸಲ್ಪಟ್ಟಿವೆ. ರಾಜ, ಮಂತ್ರಿ, ಭೂಮಿ, ಕೋಟೆ, ಕೋಶ, ಸೇನೆ ಮತ್ತು ಮಿತ್ರರು — ಇವೇ ಸಪ್ತಾಂಗ ಪ್ರಕೃತಿಗಳು. ಇವುಗಳ ಬಗ್ಗೆ ಮತ್ತು ಇನ್ನೊಂದು ರಾಜ್ಯದ ಸಂಬಂಧದ ಕುರಿತು ಇಲ್ಲಿ ವಿವರಣೆ ಇದೆ.

7. ಷಾಡ್ಗುಣ್ಯಂ: ಈ ಅಧಿಕರಣದಲ್ಲಿ ಹದಿನೆಂಟು ಅಧ್ಯಾಯಗಳಿದ್ದು ಶಾಂತಿ, ಯುದ್ಧ ತಾಟಸ್ಥ್ಯ, ವಿಜಯ ಯಾತ್ರೆಗೆ ಸನ್ನಾಹ, ಒಪ್ಪಂದ, ಅನಿಶ್ಚಿತ ವರ್ತನೆಯೆಂಬ ಆರು ರಾಜ್ಯಕಾರ್ಯಗಳಿಗೆ ಇರಬಹುದಾದ ಕಾರಣಗಳ ವಿವರಣೆ ಇದೆ.

8. ವ್ಯಸನಾಧಿಕಾರಂ: ಇದರಲ್ಲಿ ಐದು ಅಧ್ಯಾಯಗಳಿವೆ. ರಾಜನು ಬೇಟೆ, ದ್ಯೂತ, ಸ್ತ್ರೀ ಮತ್ತು ಮದ್ಯಗಳಿಗೆ ಬಲಿ ಬೀಳುವುದರಿಂದ ಉಂಟಾಗಬಹುದಾದ ಅಪಾಯಗಳನ್ನು ಮತ್ತು ಬೆಂಕಿ, ನೀರು ಅಥವಾ ಇತರ ವಿಷಯಗಳು ತರಬಹುದಾದ ತೊಂದರೆಗಳನ್ನು ಕ್ರೋಢೀಕರಿಸಿದೆ.

9. ಅಭಿಯಾಸ್ಯತ್ಕರ್ಮ: ಇದರಲ್ಲಿ 'ಏಳು ಅಧ್ಯಾಯಗಳಿದ್ದು ಶತ್ರುವಿನ ಮೇಲೆ ದಂಡೆತ್ತಿಕೊಂಡು ಹೋಗುವುದಕ್ಕಿಂತ ಮೊದಲು ವಿಜಿಗೀಷುವು ವಿಚಾರ ಮಾಡಬೇಕಾದ ವಿಷಯಗಳನ್ನು ಇಲ್ಲಿ ಹೇಳಿದೆ.

10. ಸಾಂಗ್ರಾಮಿಕ: ಈ ಅಧಿಕರಣದಲ್ಲಿ ಆರು ಅಧ್ಯಾಯಗಳಿವೆ. ಇದರ ಮುಖ್ಯ ವಿಷಯ ಸಂಗ್ರಾಮಕ್ಕೆ ಸಂಬಂಧಪಟ್ಟದ್ದಾಗಿದೆ. ಸೈನ್ಯ ಶಿಬಿರ, ಕಪಟ ಯುದ್ಧ, ಯುದ್ಧಭೂಮಿಯ ಲಕ್ಷಣ ಮತ್ತು ವ್ಯೂಹಗಳಿವೆ ರಚಿಸಬೇಕಾದ ಪ್ರತಿವ್ಯೂಹಗಳು — ಇವುಗಳ ಬಗ್ಗೆ ಮಾಹಿತಿ ಇಲ್ಲಿದೆ.

11. ಸಂಘವೃತ್ತ: ಇದರಲ್ಲಿ ಒಂದೇ ಅಧ್ಯಾಯವಿರುವುದು. ಶತ್ರುಸೈನ್ಯದ ಅಧಿಕಾರಿ ವರ್ಗದಲ್ಲಿರುವ ಐಕ್ಯತೆಯನ್ನು ನಾಶಮಾಡಲು ಅವರಲ್ಲಿ ರಾಜನು ಕಲಹದ ಬೀಜಾರೋಪಣವನ್ನು ಹೇಗೆ ಮಾಡಬೇಕೆಂಬುದನ್ನು ಇಲ್ಲಿ ವಿವರಿಸಿದೆ. ಸ್ತ್ರೀಯರನ್ನೂ ಈ ಕಾರ್ಯದಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ.

12. ಅಬಲೀಯಸಂ: ಈ ಅಧಿಕರಣದಲ್ಲಿ ಐದು ಅಧ್ಯಾಯಗಳಿವೆ. ದುರ್ಬಲನಾಗಿರುವವನು ಅಬಲೀಯನು. ಪ್ರಬಲನಾದ ಶತ್ರುವು ಸಂಧಿಯನ್ನು ಇಚ್ಛಿಸದಿರುವಾಗ ಆ ದುರ್ಬಲನು ಮಾಡಬೇಕಾದ ಕಾರ್ಯಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

13. <u>ದುರ್ಗಲಂಭೋಪಾಯ:</u> ಇದರಲ್ಲಿಯೂ ಐದು ಅಧ್ಯಾಯಗಳಿವೆ. ಭೇದೋಪಾಯಗಳ ಮೂಲಕ, ಗೂಢಚಾರರ ಮೂಲಕ, ಮುತ್ತಿಗೆ ಹಾಕುವುದರ ಮೂಲಕ — ಹೀಗೆ ಶತ್ರುದುರ್ಗವನ್ನು ಜಯಿಸುವ ಉಪಾಯವನ್ನು ಇಲ್ಲಿ ಹೇಳಿದೆ.

14. <u>ಔಪನಿಷದಿಕ:</u> ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಶತ್ರು ಜಯೋಪಾಯ ರಹಸ್ಯವನ್ನು ಪ್ರತಿಪಾದಿಸುವ ಅಧಿಕರಣವಿದು. ತನ್ನನ್ನೇ ಕಾಣದಂತೆ ಮಾಡಲು, ಕತ್ತಲೆಯಲ್ಲಿ ನೋಡಲು, ದೀರ್ಘ ಕಾಲ ಉಪವಾಸವಿರಲು, ಬೆಂಕಿಯಲ್ಲಿ ಅಪಾಯವುಂಟಾಗದಂತೆ ನಡೆಯಲು ಬೇಕಾದ ಔಷಧ, ಮಂತ್ರರಹಸ್ಯಗಳನ್ನು ಇಲ್ಲಿ ಹೇಳಿದೆ.

15. <u>ತಂತ್ರಯುಕ್ತಿ:</u> ಇದರಲ್ಲಿ ಒಂದೇ ಅಧ್ಯಾಯವಿರುವುದು. ಈ ಅರ್ಥಶಾಸ್ತ್ರದಲ್ಲಿ ವ್ಯಾಖ್ಯಾನೋಪಯೋಗಿಯಾಗಿ ಸ್ವೀಕರಿಸಿದ ನ್ಯಾಯಗಳನ್ನು ಇಲ್ಲಿ ವಿವರಿಸಿದೆ.

ಹೀಗೆ ಇದು ಸಾಕಷ್ಟು ಲಕ್ಷ ವಿಚಾರಗಳಿಂದ ಕೂಡಿದ ಶಾಸ್ತ್ರ ಗ್ರಂಥವಾಗಿದೆ. ಈ ಗ್ರಂಥದ ಪರಿಪೂರ್ಣತೆಯಿಂದಾಗಿ ಹಿಂದಿನ ಅರ್ಥಶಾಸ್ತ್ರಗ್ರಂಥಗಳು ಪ್ರಚಾರವನ್ನು ಕಳೆದುಕೊಳ್ಳುವಂತಾಯಿತು. ಇದರಲ್ಲಿ ಭಾರತೀಯರ ಆಧ್ಯಾತ್ಮಿಕ ಜೀವನಕ್ಕೆ ಸರಿ ವ್ಯತಿರಿಕ್ತವಾದ ಲೌಕಿಕ ಜೀವನದ ಕುರಿತು ವಿವರವಾದ ಜ್ಞಾನವನ್ನೊದಗಿಸುತ್ತದೆ.

<u>ಕನ್ನಡದಲ್ಲಿ ಅರ್ಥಶಾಸ್ತ್ರ ಗ್ರಂಥಗಳು</u>

ಕಳೆದ ಶತಮಾನದವರೆಗೂ ಕನ್ನಡ ಸಾಹಿತ್ಯವು ಧರ್ಮದ ಪಾತ್ರದಲ್ಲಿಯೇ ಹರಿದುಬಂದುದರಿಂದ ಇಲ್ಲಿಯ ಕವಿಗಳು ಲೌಕಿಕವಿಜ್ಞಾನವಾದ ರಾಜನೀತಿ ಶಾಸ್ತ್ರಕ್ಕೆ ವಿಶೇಷ ಪ್ರಾಧಾನ್ಯ ಕೊಟ್ಟಂತೆ ಕಾಣುವುದಿಲ್ಲ. ಮೈಸೂರಿನ ಚಿಕ್ಕದೇವರಾಜ ಒಡೆಯರ (೧೬೭೨-೧೭೦೪) ರ ಆಶ್ರಿತ ಕವಿಯಾಗಿದ್ದ ಲಕ್ಷ್ಮೀಪತಿ ಪಂಡಿತ (ಚಿಕ್ಕುಪಾಧ್ಯಾಯ?)ನ ‘ ಕಾಮಂದಕೀಯ ನೀತಿಸಾರವ್ಯಾಖ್ಯಾಟೀಕೆ’ ಎಂಬ ಗ್ರಂಥವೊಂದು ಲಭ್ಯವಿದೆ. ಕವಿಚರಿತಕಾರರು ಈ ಗ್ರಂಥದ ವಿಷಯವಾಗಿ — ‘ ಇದು ಸಂಸ್ಕೃತ ಕಾಮಂದಕ ನೀತಿಗೆ ಗದ್ಯರೂಪವಾದ ಕನ್ನಡ ಟೀಕೆ. ಅಶ್ವಾಸ 8. ಈ ಟೀಕೆಗೆ ಉಪಾಧ್ಯಾಯನಿರಪೇಕ್ಷ ಎಂದು ಹೆಸರು’ — ಎಂದಿದ್ದಾರೆ. ಈ ಕೃತಿಯನ್ನು ಕ್ರಿ.ಶ. 1956ರಲ್ಲಿ ಗೌರ್ನಮೆಂಟ ‘ಓರಿಯಂಟಲ ಮ್ಯಾನುಸ್ಕ್ರಿಪ್ಟ ಲೈಬ್ರರಿ ಮದ್ರಾಸ ರವರು ಮುದ್ರಿಸಿ ಪ್ರಕಟಿಸಿದ್ದು ಅದರ ಸಂಪಾದಕರಾದ ವಿ. ಹನುಮಂತಾಚಾರ ರವರು ‘ ಶ್ರೀ ನರಸಿಂಹಾಚಾರ್ಯರ ಬರಹದಿಂದ ಸಂಸ್ಕೃತದ ಕಾಮಂದಕನೀತಿಗೆ ಕನ್ನಡ ಟೀಕೆಯು ಉಪಾಧ್ಯಾಯನಿರಪೇಕ್ಷಾ ಎಂಬ ವ್ಯಾಖ್ಯಾನವಾಗಿರುವುದು ಎಂದು ಅರ್ಥವಾಗುವುದು. ಅದು ಸಾಧುವೆಂದು ತೋರುವುದಿಲ್ಲ. ‘ಏಕೆಂದರೆ ಈ ಕನ್ನಡ ವಚನವು ಕಾಮಂದಕ ನೀತಿಯ ಸಂಸ್ಕೃತ ಶ್ಲೋಕಗಳ ವಿವರಣೆಯಲ್ಲ. ಸಂಸ್ಕೃತದಲ್ಲಿ

ಬರೆದಿರುವ ಕಾಮಂದಕನೀತಿಯ ಗದ್ಯರೂಪವಾದ ವ್ಯಾಖ್ಯಾನದ ಕನ್ನಡ ಟೀಕೆಯಾಗಿರುವುದು. ಆದುದರಿಂದ ಕಾಮಂದಕನೀತಿಗೆ ಕಾಮಂದಕನೀತಿಸಾರವೆಂದೂ, ಅದರ ಉಪಾಧ್ಯಾಯ ನಿರಪೇಕ್ಷಾ ಎಂಬ ವ್ಯಾಖ್ಯಾನಕ್ಕೆ ಕಾಮಂದಕನೀತಿಸಾರ ದೀಪಿಕೆಯೆಂದೂ ಹೆಸರು. ಈಗ ಕನ್ನಡದಲ್ಲಿರುವುದು ಈ ವ್ಯಾಖ್ಯಾಟೀಕೆಯ ಅನುವಾದವೆಂದು ಗ್ರಹಿಸಬೇಕು[13] – ಎಂದಿದ್ದಾರೆ. ಮೂಲಕೃತಿಯಲ್ಲಿ ಇಪ್ಪತ್ತು ಸರ್ಗಗಳಿದ್ದು ಈ ವ್ಯಾಖ್ಯಾಟೀಕೆಯಲ್ಲಿ ಮೊದಲ ಎಂಟು ಸರ್ಗಗಳು ಮಾತ್ರ ಇವೆ.

ಪಶುಪಕ್ಷಿಗಳ ಮೂಲಕ ರಾಜಕುಮಾರರಿಗೆ ರಾಜನೀತಿಯನ್ನು ಹೇಳುವ ಕಥೆ ಪಂಚತಂತ್ರದಲ್ಲಿದೆ. ಇದನ್ನು ಹೊರತುಪಡಿಸಿದರೆ[13ಎ] ಕನ್ನಡದಲ್ಲಿ ಈ ಶತಮಾನದ ಆರಂಭದ ವರೆಗೆ ರಾಜನೀತಿಶಾಸ್ತ್ರದ ಸ್ವತಂತ್ರ ಕೃತಿಗಳಾಗಲೀ, ಅನುವಾದಗಳಾಗಲೀ ಇದ್ದಂತಿಲ್ಲ. ಸಂಸ್ಕೃತದ ಇತರ ಕೃತಿಗಳು ಉದಾಹರಣೆಗೆ 'ಮುದ್ರಾರಾಕ್ಷಸ' ನಾಟಕವು ಕ್ರಿ.ಶ. 1827 ರಷ್ಟು ಹಿಂದೆಯೇ ಇಂಗ್ಲಿಷ ಭಾಷೆಗೆ ಭಾಷಾಂತರಗೊಂಡಿದ್ದರೂ[14], 'ಅರ್ಥಶಾಸ್ತ್ರ' ದ ಹಸ್ತಪ್ರತಿಗಳು ಈ ಶತಮಾನದ ಮೊದಲ ದಶಕದವರೆಗೂ ಸಿಗದಿದ್ದುದೂ ಇದಕ್ಕೆ ಒಂದು ಕಾರಣವಾಗಿದ್ದಿರಬಹುದು. ಆದರೆ 'ಮುದ್ರಾಮಂಜೂಷ' ದಲ್ಲಿ ಅರ್ಥಶಾಸ್ತ್ರವನ್ನು ಅಳವಡಿಸಿರುವುದನ್ನು ನೋಡಿದಾಗ ಮೈಸೂರಿನ ಒಡೆಯರ ಆಸ್ಥಾನದಲ್ಲಿ 'ಅರ್ಥಶಾಸ್ತ್ರ' ದ ಅಧ್ಯಯನ, ಅಧ್ಯಾಪನ ಚೆನ್ನಾಗಿ ನಡೆಯುತ್ತಿತ್ತೆಂದು ತಿಳಿದುಬರುವುದು.

ಕ್ರಿ.ಶ. 1905ರಲ್ಲಿ ತಂಜಾವೂರು ಜಿಲ್ಲೆಯ ನಿವಾಸಿಯೊಬ್ಬನು ಸರ್ವಪ್ರಥಮವಾಗಿ 'ಕೌಟಿಲ್ಯ ಅರ್ಥಶಾಸ್ತ್ರ' ದ ಒಂದು ಪ್ರತಿಯನ್ನು ಮೈಸೂರಿನ 'ಓರಿಯಂಟಲ ಲೈಬ್ರರಿಗೆ ತಂದುಕೊಟ್ಟರು. ಆ ಲೈಬ್ರರಿಗೆ ತತ್ಕಾಲೀನ ಅಧ್ಯಕ್ಷರಾಗಿದ್ದ ಆರ. ಶಾಮಾಶಾಸ್ತ್ರಿಗಳು ಕ್ರಿ.ಶ. 1908ರಲ್ಲಿ ಮೊದಲು ಮುದ್ರಿಸಿ ಪ್ರಕಟಿಸಿದರು. ಮತ್ತೆ ಕ್ರಿ.ಶ. 1915ರಲ್ಲಿ ತಮಗೆ ದೊರೆತ ಭಟ್ಟಸ್ವಾಮಿಯ ಆಂಶಿಕ ಟೀಕೆಯೊಂದಿಗೆ ಇಂಗ್ಲಿಷ ಅನುವಾದವನ್ನು ಪ್ರಕಟಿಸಿದರು. ಇದೇ ಸರಿಸುಮಾರಿನಲ್ಲಿ ತ್ರಿವೆಂದ್ರಂ ಸಂಸ್ಕೃತ ಗ್ರಂಥಮಾಲೆಯಲ್ಲಿ ತ. ಗಣಪತಿ ಶಾಸ್ತ್ರಿಗಳಿಂದ ವ್ಯಾಖ್ಯಾನದೊಂದಿಗೆ ಪ್ರಕಟಿಸಲ್ಪಟ್ಟಿತು. ಇವುಗಳನ್ನು ಆಧರಿಸಿ ದೇಶೀಯ ಭಾಷೆಗಳಲ್ಲಿ 'ಅರ್ಥಶಾಸ್ತ್ರ' ದ ಅನುವಾದಗಳಾಗತೊಡಗಿದವು. ಕ್ರಿ.ಶ. 1972ರಲ್ಲಿ ಪೆರಡಾಲ ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಕೆ. ಕೃಷ್ಣ ಭಟ್ಟರವರು ಮಾಡಿದ ಅನುವಾದವನ್ನು 'ಕೌಟಿಲ್ಯನ ಅರ್ಥಶಾಸ್ತ್ರ' ಎಂಬ ಹೆಸರಿನಲ್ಲಿ ಸಮಾಜ ಪುಸ್ತಕಾಲಯ, ಧಾರವಾಡ – ಇವರು ಪ್ರಕಟಿಸಿದ್ದಾರೆ.

ಮುದ್ರಾಮಂಜೂಷದಲ್ಲಿ ಅರ್ಥಶಾಸ್ತ್ರ

ಮುದ್ರಾಮಂಜೂಷವು ಒಂದು ಯುದ್ಧಕಾವ್ಯ. ಆದ್ದರಿಂದ ಯುದ್ಧ ಸನ್ನಿವೇಶ ಇಲ್ಲದಿದ್ದಾಗ ರಾಜನು ಪ್ರಜೆಗಳನ್ನು ಹೇಗೆ ಕಾಣಬೇಕು? ತೆರಿಗೆಗಳನ್ನು ಹೇಗೆ ವಿಧಿಸಬೇಕು? ಕಳ್ಳಕಾಕರ ಭಯವನ್ನು ಹೇಗೆ ನಿವಾರಿಸಬೇಕು? — ಮೊದಲಾದ ಪ್ರಜೆಗಳ ಸೌಖ್ಯಚಿಂತನೆಯ ವಿಚಾರವು ಇದರಲ್ಲಿ ವಿಶೇಷವಾಗಿಲ್ಲ (ಅದನ್ನು ಹೇಳಬೇಕೆಂಬುದು ಕವಿಯ ಉದ್ದೇಶವೂ ಆಗಿರಲಿಲ್ಲ). ಯುದ್ಧಕ್ಕೆ ಸಂಬಂಧಪಟ್ಟ ವಿಚಾರಗಳು ಮಾತ್ರ ಇಲ್ಲಿ ಹೇಳಲ್ಪಟ್ಟಂತೆ, ಇಲ್ಲಿಯ ಪಾತ್ರಗಳೇ ಅದನ್ನು ಅನುಸರಿಸಿ ನಡೆವಂತೆ ಪ್ರತಿಪಾದಿಸಲ್ಪಟ್ಟಿವೆ. ಇದನ್ನು ಕವಿಯು ಪರಂಪರೆಯಿಂದ ಬಂದ ಆಚಾರ ವಿಚಾರಗಳೊಂದಿಗೆ ಜೀವಂತವಾಗಿ ಕಾಣುವಂತೆ ಹೇಳಿದ್ದಾನೆ.

ಇದೀಗ ಅರ್ಥಶಾಸ್ತ್ರದ ಕೆಲವು ಪಾರಿಭಾಷಿಕ ಶಬ್ದಗಳನ್ನು ಮೂಲದಲ್ಲಿದ್ದ ಅರ್ಥ ಸಹಿತ ವಿವರಿಸಿ, ಮುದ್ರಾಮಂಜೂಷದಲ್ಲಿ ಅದನ್ನು ಎಲ್ಲಿ, ಹೇಗೆ ಅಳವಡಿಸಲಾಗಿದೆ ಎಂಬುದನ್ನು ನೋಡಲಾಗುವುದು.

ಅಮಾತ್ಯ (ಕರ್ಮಸಚಿವ): ಕಾರ್ಯವನ್ನು ನಿರ್ವಹಿಸುವ ಸಾಮರ್ಥ್ಯದಿಂದಲೂ, ಪ್ರಜ್ಞೆ, ಶಾಸ್ತ್ರ ಸಂಸ್ಕಾರ, ಶೌರ್ಯಾದಿಗಳ ತಾರತಮ್ಯದಿಂದಲೂ ಯೋಗ್ಯತೆವುಳ್ಳವನನ್ನು ನಿರ್ಣಯಿಸಿ ಅಮಾತ್ಯನನ್ನಾಗಿ ನೇಮಿಸಿಕೊಳ್ಳಬೇಕು[15].

ಮುದ್ರಾಮಂಜೂಷದಲ್ಲಿ ನವನಂದರ ಮಂತ್ರಿ ಅಮಾತ್ಯರಾಕ್ಷಸ — ಇದಕ್ಕೊಳ್ಳೆಯ ಉದಾಹರಣೆ.

ಅಪಸರ್ಪ ಪ್ರಣಿಧಿ: ಗೂಢಚಾರರು ಅಪಸರ್ಪರು. ಅವರನ್ನು ಶತ್ರುರಾಜ್ಯದಲ್ಲಿ ಕೆಲಸ ಮಾಡುವಂತೆ ನೇಮಿಸುವುದು. ಇವರನ್ನು ಅಮಾತ್ಯಾಬಡಿಕಾ ಎನ್ನುವರು [16].

ಚಾಣಕ್ಯನು ನಂದರಾಜ್ಯಕ್ಕೆ ಕಳುಹಿಸಿದ ಇಂದುಶರ್ಮ ಮತ್ತು ಆತನ ಶಿಷ್ಯರು ಅಪಸರ್ಪ ಪ್ರಣಿಧಿಗಳು.

ಅವಮರ್ದ: ಶತ್ರುವಿನ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳುವುದು[17].

ನಂದರನ್ನು ಸಂಹರಿಸಿದ ಅನಂತರ ಪರ್ವತರಾಜನ ಸೇನಾಪತಿಯಾದ ಶೇಖರನು ಪಾಟಲೀಪುರ ನಗರವನ್ನು ವಶಪಡಿಸಿಕೊಳ್ಳುವನು.

ಉದಾಸ್ಥಿತ: ಬುದ್ಧಿಶಾಲಿಯಾದ ಮತ್ತು ಸತ್ವಶಾಲಿಯಾದ ಸನ್ಯಾಸ ವೇಷಧಾರಿಯು. (ಬೌದ್ಧ ಶೈವಾದಿ ವ್ರತಗಳಿಂದ ಚ್ಯುತರಾದವರೂ ಉದಾಸ್ಥಿತರೇ)[18].

ಕ್ಷಪಣಕ ಜೀವಸಿದ್ಧಿಯ ವೇಷ ಹಾಕಿ ಇಂದು ಶರ್ಮನು ಅಮಾತ್ಯ ರಾಕ್ಷಸನನ್ನು ಹೇಗೆ ವಂಚಿಸಿದನು.

<u>ಉದಾಸೀನ:</u> ಅರಿ, ವಿಜಿಗೀಷು, ಮಧ್ಯಮ ಪ್ರಕೃತಿಗಳಿಂದ ಹೊರಗಿರುವವನು ಮತ್ತು ಮಧ್ಯಮನಿಗಿಂತಲೂ ಕೋಶದಂಡಾದಿಗಳಿಂದ ಬಲಿಷ್ಠನಾಗಿದ್ದು ಅವರು ಮೂವರು ಒಟ್ಟುಸೇರಿದರೂ, ಸೇರದಿದ್ದರೂ — ಅನುಗ್ರಹಿಸುವುದಕ್ಕೂ, ಬೇರೆ ಬೇರೆಯಾಗಿರುವಾಗ ನಿಗ್ರಹಿಸುವುದಕ್ಕೂ ಶಕ್ತನಾದವನು[19].

ಚಾಣಕ್ಯನು ಚಂದ್ರಗುಪ್ತನಿಗೆ ಅಭಯವನ್ನು ಕೊಟ್ಟು, ನಂದರ ಶತ್ರು, ಮಿತ್ರ ಉದಾಸೀನ ಪಕ್ಷದವರಾರೆಂದು ಕೇಳಿದಾಗ ಚಂದ್ರಗುಪ್ತನು ' ಕಾಶ್ಮೀರಪತಿ, ಮಲಯಪತಿ, ಸಿಂಧುಪತಿ, ಕುಲೂತಪತಿ, ಪಾರಶೀಕಪತಿ, ಕಾಂಭೋಜ ಚೀಣ ಹೂಣ ದೇಶಾಧಿಪತಿಗಳಿಗೆ ನಿಯಾಮಕನಾಗಿರುವ ಪರ್ವತದೇಶಾಧಿಪತಿಯಾದ ಪರ್ವತೇಶ್ವರನು ನಂದರಿಗೆ ಉದಾಸೀನ ಪಕ್ಷದವನು' ಎನ್ನುವನು. ಇದರಿಂದ ಅತ ಬಲಿಷ್ಠ ಎಂದು ಗೊತ್ತಾಗುವುದು.

<u>ಉಪಜಾಪ:</u> ಶತ್ರುವಿನ ಗ್ರಾಮ, ನಗರಾದಿಗಳನ್ನು ಸ್ವಾಧೀನಪಡಿಸಲು ಅಪೇಕ್ಷಿಸುವ ವಿಜಿಗೀಷುವು ತನಗೆ ಸರ್ವಜ್ಞತ್ವವೂ ದೈವಸಾಕ್ಷಾತ್ಕಾರವೂ ಉಂಟೆಂದು ಪ್ರಸಿದ್ಧಪಡಿಸಿ ಶತ್ರುಗಳಿಗೆ ಭಯವನ್ನು, ತನ್ನವರಿಗೆ ಉತ್ಸಾಹವನ್ನೂ ಉಂಟು ಮಾಡುವುದು — ಉಪಜಾಪ[20].

ಚಾಣಕ್ಯನು ಜೀವಸಿದ್ಧಿಯ ಮೂಲಕ ನಂದರನ್ನು ರಾಕ್ಷಸನಿಂದ ಹೊರತುಪಡಿಸಿದ್ದು, ಸಿದ್ಧಾರ್ಥಕನ ಮೂಲಕ ಭಾಗುರಾಯಣಾದಿಗಳ ಮೇಲೆ ಚಂದ್ರಗುಪ್ತನಿಗೆ ವಿಶೇಷ ಅನುಗ್ರಹವುಂಟೆಂದು ಹೇಳಿ ಕಳುಹಿಸಿದ್ದು — ಇದಕ್ಕೆ ಉದಾಹರಣೆಯಾಗಿದೆ.

<u>ಉಪಾಯ:</u> ಸಾಮ, ದಾನ, ಭೇದ ಮತ್ತು ದಂಡಗಳೆಂದು ನಾಲ್ಕು ವಿಧ[21]. ಯಾವ ಯತ್ನದಿಂದ ಕಾರ್ಯಸಿದ್ಧಿಯಾಗುವುದೋ ಅದು ಉಪಾಯ (ಯದಲ್ಪ ಪ್ರಯತ್ನಾತ್ ಕಾರ್ಯಸಿದ್ಧಿರ್ಭವತಿ — ಸ ಉಪಾಯ: — ಚಾಣಕ್ಯಸೂತ್ರ 92). ತನ್ನ ರಾಜ್ಯದಲ್ಲಿ ಕಂದಕ, ಪ್ರಾಕಾರಾದಿಗಳಿಂದ ಕೂಡಿದ ದುರ್ಗ ನಿರ್ಮಾಣಾದಿಗಳ, ಪರ ರಾಜ್ಯದಲ್ಲಿ ಸಂಧಿವಿಗ್ರಹಾದಿ ನಿಮಿತ್ತದಿಂದ ದೂತರನ್ನು ಕಳುಹಿಸುವುದೇ ಮೊದಲಾದ ಕಾರ್ಯಗಳು.

ಯುದ್ಧ ಆರಂಭವಾಗುವಾಗ ಚಾಣಕ್ಯ ಹಾಗೂ ರಾಕ್ಷಸ — ಇಬ್ಬರ ಕಡೆಯಿಂದಲೂ ಸಾಕಷ್ಟು ಉಪಾಯಗಳನ್ನು ಮಾಡಲಾಗಿತ್ತು. ಚಾಣಕ್ಯನು ದಂಡೋಪಾಯಕ್ಕಿಂತ ಭೇದೋಪಾಯವನ್ನು ಪ್ರಯೋಗಿಸಿ ಕಾರ್ಯ ಸಾಧಿಸಿಕೊಳ್ಳಬೇಕೆಂದು ಮೊದಲೇ ಹೇಳಿದ್ದನು.

<u>ಉಪಾಂಶುದಂಡ</u> (ರಹಸ್ಯವಧೆ) (ತೂಷ್ಣೀಂದಂಡ): ರಾಜ್ಯಕ್ಕೆ ಹಾನಿಯನ್ನುಂಟುಮಾಡುವವರನ್ನು — ಎಲ್ಲರೆದುರಿಗೆ ಪ್ರತಿಷೇಧಿಸುವುದಕ್ಕೆ ಸಾಧ್ಯವಿಲ್ಲದಿರುವವರನ್ನು — ರಾಜ್ಯಕ್ಷೇಮವನ್ನು ಬಯಸುವವನು ಉಪಾಂಶುದಂಡದಿಂದ ಶಿಕ್ಷಿಸಬೇಕು[22].

ಸಿದ್ಧಾರ್ಥಕನ ಮಾತನ್ನು ನಂಬಿದ ಮಲಯಕೇತುವು ಚಿತ್ರವರ್ಮಾದಿಗಳನ್ನು ಶೇಖರನ ಮೂಲಕ ಹೇಗೆ ಕೊಲ್ಲಿಸುತ್ತಾನೆ.

<u>ಔಪನಿಷದಿಕ:</u> ಔಷಧಮಂತ್ರ ರಹಸ್ಯವು ಅರ್ಥಶಾಸ್ತ್ರದ ಹದಿನಾಲ್ಕನೇ ಅಧಿಕರಣದಲ್ಲಿ ವಿವರಿಸಲ್ಪಟ್ಟಿದೆ.

ಶಿರೀಷ, ಅತ್ತಿ, ಮತ್ತು ಶಮೀಗಳನ್ನು ಸೇರಿಸಿ ತುಪ್ಪದಲ್ಲಿ ಅರೆದು ಮಾಡಿದ ಚೂರ್ಣವು ಹದಿನೈದು ದಿವಸ ಹಸಿವೆಯಿಲ್ಲದಂತೆ ಮಾಡುತ್ತದೆ.[23] ನಿಂಬೆಹಣ್ಣು, ಹಂದಿಯ ಕಣ್ಣು, ಕಾಲಶಾರಿವಾ ಎಂಬ ಔಷಧಿ ಇವುಗಳಿಂದ ತಯಾರಿಸಿದ ಅಂಜನವನ್ನು ಕಣ್ಣಿಗೆ ಹಚ್ಚಿಕೊಂಡರೆ ರಾತ್ರಿ ಕಣ್ಣು ಕಾಣಿಸುವುದು[24].

ರಾಕ್ಷಸನು ಪರ್ವತರಾಜನ ಸೈನ್ಯದಲ್ಲಿ ವರ್ತಕರಾಗಿದ್ದ ತನ್ನ ಕಡೆಯವರಿಗೆ ಲೇಖನಗಳನ್ನು ಬರೆಸಿಕೊಟ್ಟಿದ್ದನ್ನು ಕಣ್ಣಾರೆ ಕಂಡ ಕ್ಷಪಣಕ ವೇಷಧಾರಿಯಾದ ಇಂದುಶರ್ಮನು — ರಾಕ್ಷಸನ ಭೇದೋಪಾಯವು ಸಿದ್ಧಿಸಿದರೆ ಚಾಣಕ್ಯರ ಸಂಕಲ್ಪವು ನಿಷ್ಫಲವಾದೀತು. ಹಾಗಾಗಿ ಅದಕ್ಕಿಂತ ಮೊದಲಾಗಿ ತಾನು ಈ ವರ್ತಮಾನವನ್ನು ತಿಳಿಸಬೇಕೆಂದು ನಿಶ್ಚಯಿಸಿ, ತನ್ನ ಶಿಷ್ಯನಾದ ಮೇಗಶರ್ಮನನ್ನು ಚಾಣಕ್ಯನ ಬಳಿಗೆ ಕಳುಹಿಸುವನು. ಹಾಗೆ ಕಳುಹಿಸುವಾಗ — ಪ್ರಾಣಮಾತ್ರಕ್ಕೆ ಗೋಚರನಾಗದಿರಲು ಕಾಡಿಗೆಯನ್ನೂ, ಹಸಿವು ಬಾಯಾರಿಕೆ ನಿದ್ರೆ ದಣಿವು ಸಹ ಆಗದಿರಲು ನೀರಿನಲ್ಲಿ ಕದಡಿ ಕುಡಿಯಲು ಚೂರ್ಣವನ್ನೂ ಕೊಡುವನು. ಇವು ಔಷಧಮಂತ್ರ ರಹಸ್ಯದವುಗಳು.

<u>ಕೃತ್ಯರು:</u> ಕಾರಣಾಂತರದಿಂದ — ಲೋಭದಿಂದ, ರಾಜನಲ್ಲಿ ಸಿಟ್ಟುಗೊಂಡದ್ದರಿಂದ, ಹೆದರಿಕೆಯಿಂದ ಅಥವಾ ಅವಮಾನಹೊಂದಿದ್ದರಿಂದ ಶತ್ರುಗಳ ಭೇದೋಪಾಯಕ್ಕೆ ಸುಲಭದಲ್ಲಿ ಬಲಿಯಾಗುವವರು ಕೃತ್ಯರು. ಅಂತಹವರನ್ನು ಶತ್ರುಗಳ ಗೂಢಚಾರರ ಭೇದೋಪಾಯಕ್ಕೆ ಬಲಿಯಾಗದಂತೆ ರಕ್ಷಿಸಬೇಕು[25].

ಚಾಣಕ್ಯನು ಭಾಗುರಾಯಣಾದಿಗಳನ್ನು ಭೇದೋಪಾಯಕ್ಕೆ ಬಲಿಯಾಗುವಂತೆ ಮಾಡಿದನು. ರಾಕ್ಷಸನಿಗೆ ಅದನ್ನು ತಡೆಯಲಾಗಲಿಲ್ಲ. ಅದೇ ರಾಕ್ಷಸನು ಪರ್ವತರಾಜ್ಯದಲ್ಲಿ ವ್ಯಾಪಾರಿಗಳಂತಿದ್ದ ತನ್ನ ಕಡೆಯವರಿಂದ ಪರ್ವತರಾಜನ ಸಾಮಂತರನ್ನು ಭೇದಕ್ಕೆ ಒಳಪಡಿಸಲು ಬಯಸಿದ್ದನು. ಆದರೆ ಇಂದುಶರ್ಮನು ಈ ತಂತ್ರವನ್ನು ಮೊದಲೇ ಚಾಣಕ್ಯನಿಗೆ ತಿಳಿಸಿದ್ದರಿಂದ ರಾಕ್ಷಸನ ಭೇದೋಪಾಯ ಫಲಿಸಲಿಲ್ಲ.

<u>ಕೂಟಯುದ್ಧ:</u> ಸೈನ್ಯವು ಸ್ವಲ್ಪವಾದರೂ ಕೂಡ ದೊಡ್ಡ ಸೈನ್ಯವೆಂಬ ಭ್ರಾಂತಿಯನ್ನು ಹುಟ್ಟಿಸಿ ಹೆದರಿಸುವುದು, ದುರ್ಗಾದಿಗಳನ್ನು ಸುಡುವುದು, ಊಟ ಮಾಡುವುದು, ಪ್ರಮಾದ ವ್ಯಸನಕಾಲಗಳಲ್ಲಿ ಪೀಡಿಸುವುದು ಮೊದಲಾದವು ಕೂಟಯುದ್ಧದ ಲಕ್ಷಣಗಳು[26].

ಪರ್ವತರಾಜನ ಸೈನ್ಯವನ್ನು ಪಾಟಲೀಪುರದ ಹೊರಗಡೆ ತಂದು ನಿಲ್ಲಿಸಿ ಅವರಿಗೂ ಕಾಶೀ ನರೇಶನಿಗೂ ಯುದ್ಧವಾಯಿತೆಂಬಂತೆ ಭ್ರಮೆ ಹುಟ್ಟಿಸಿ, ನಂದರ ಕಡೆಯ ಸೈನಿಕರು ಆ ಕಡೆ ಬರದಂತೆ ಮಾಡಿ, ಶತ್ರುಫಲಾಯನ ಜಪಶಾಲೆಯನ್ನು ಸುಟ್ಟು ನಂದರನ್ನು ಸಂಹರಿಸಿದ್ದು ಕೂಟ ಯುದ್ಧದ ಲಕ್ಷಣವಾಗಿದೆ.

ಕೋಶಾಭಿಸಂವರಣ: ಕ್ಲಿಷ್ಟವಾದದ್ದಕ್ಕಿಂತ ಹೆಚ್ಚಾಗಿ ಸುವರ್ಣ ಮತ್ತು ಧಾನ್ಯಾದಿರೂಪವಾದ ಕೋಶದ ಸಂಗ್ರಹ ಮಾಡುವುದು ಕೋಶಾಭಿಸಂವರಣವು. ಅಲ್ಪಕೋಶವುಳ್ಳ ರಾಜನು ತನ್ನ ಕೋಶವನ್ನು ಧನಸಂಗ್ರಹದಿಂದ ಸಮೃದ್ಧವನ್ನಾಗಿ ಮಾಡಬೇಕು. ಕೃಷಿಕನಿಗೆ ಧಾನ್ಯ, ಪಶು, ಹಿರಣ್ಯಗಳನ್ನು ಕೊಟ್ಟು ಸಹಾಯ ಮಾಡಬೇಕು [26ಎ].

ಮಲಯಕೇತುವು ರಾಕ್ಷಸನನ್ನು ತನ್ನ ಮಂತ್ರಿಯನ್ನಾಗಿ ಮಾಡಿಕೊಂಡಾಗ ರಾಕ್ಷಸನು ಪರ್ವತರಾಜ್ಯದಲ್ಲಿ ಪೂರ್ವದಿಂದ ನಡೆದುಬಂದ ಆಯಕಟ್ಟುಗಳನ್ನು ಚೆನ್ನಾಗಿ ವಿಚಾರಿಸಿ ತಿಳಿದು ಆ ದೇಶ ಮರ್ಯಾದಾನುಗುಣವಾಗಿಯೇ ಒಕ್ಕಲಿಗೆ ಸುಖವೂ ರಾಜಭಂಡಾರಕ್ಕೆ ಆದಾಯವೂ ಆಗುವಂತೆ ಕಟ್ಟುಕಟ್ಟಳೆಗಳನ್ನು ಬರೆಯಿಸಿ ಗಡಿಗಳ ಅಧಿಕಾರಿಗಳೆಲ್ಲರೂ ಆ ರೀತಿಯಲ್ಲಿ ನಡೆದುಕೊಳ್ಳುವಂತೆ ನೇಮಿಸಿದನು. ಇದರಿಂದ ಸಂತುಷ್ಟರಾದ ನಿವಾಸಿಗಳೆಲ್ಲರೂ ಅದೇ ಮೇರೆಗೆ ಹಣಗಳನ್ನು ಕೊಡಲು ಮೊದಲಿಗಿಂತ ಇಮ್ಮಡಿಯಾಗಿ ಪ್ರಜಾದ್ರವ್ಯಗಳು ರಾಜಕೋಶಕ್ಕೆ ಬರುತ್ತಿರಲು ಅಧಿಕಾರಿಗಳೆಲ್ಲರು ರಾಕ್ಷಸನು ಮಾಡುವ ರಾಜತಂತ್ರವಿಚಾರ ಕೌಶಲ್ಯವನ್ನು ಶ್ಲಾಘಿಸುತ್ತಿದ್ದರು.

ಕೌಶಿಕ: ಸರ್ಪವನ್ನು ಹಿಡಿದು ಅವುಗಳ ಆಟವನ್ನು ತೋರಿಸಿ ಜೀವಿಸುವವನು. ಮಾತೃಬಾಂಧವರಲ್ಲಿ ರಾಜಕುಮಾರನಿದ್ದರೆ ಅವರು ಅದನ್ನೇ ಭಂಡವಾಳವನ್ನಾಗಿಸಿಕೊಳ್ಳುವರು ಎಂಬ ಸಂದರ್ಭದಲ್ಲಿ ಇದನ್ನು ಹೇಳಿದೆ.

ಮಲಯಕೇತುವಿನ ಬಳಿಯಿದ್ದ ರಾಕ್ಷಸನು ಪಾಟಲೀಪುರದ ವೃತ್ತಾಂತವನ್ನು ತಿಳಿದುಕೊಂಡು ಬರಲು ನೇಮಿಸಿದ್ದ ದಾತ್ತ್ಯಾಹಕನೆಂಬ ಗೂಢಚಾರನು ಹಾವಾಡಿಗನ ವೇಷವನ್ನು ಹಾಕಿಕೊಂಡು ನಾಗಸ್ವರ ಧ್ವನಿಯಿಂದ ತಲೆಯನ್ನು ತೂಗುತ್ತಿರುವ ಸರ್ಪಗಳನ್ನಾಡಿಸುತ್ತ ಪ್ರತಿ ಗೃಹಗಳನ್ನು ಹೊಕ್ಕುಬರುತ್ತಿದ್ದನು.

ಕ್ರೋಧ: ಕ್ರೋಧದಿಂದ ಎಲ್ಲರಿಂದಲೂ ದ್ವೇಷ್ಯನಾಗಿಯೂ, ಶತ್ರುಗಳನ್ನು ಸಂಪಾದಿಸುವವನಾಗಿಯೂ ದುಃಖ ಸಂಬಂಧವುಳ್ಳವನಾಗಿಯೂ ಆಗುತ್ತಾನೆ. ಕಾಮದಿಂದ ಪರಿಭವವೂ, ದ್ರವ್ಯನಾಶವೂ, ಜಾರಚೋರರು, ಜೂಜುಚೋರರು, ಬೇಟೆಗಾರರು, ಗಾಯಕ, ವಾದಕರು — ಮೊದಲಾದ ಅನರ್ಥವನ್ನುಂಟುಮಾಡುವವರೊಡನೆ ಸಂಬಂಧವುಂಟಾಗುತ್ತದೆ. ಆದ್ದರಿಂದ ಅನರ್ಥಹೇತುವಾದ ಕ್ರೋಧವು ದೋಷವಲ್ಲದೇ ಗುಣವಲ್ಲ[28].

ಮುದ್ರಾಮಂಜೂಷದಲ್ಲಿ ಇದಕ್ಕಿಂತ ವಿಸ್ತಾರವಾಗಿ ಕೋಪದ ವಿವರಣೆಯಿದ್ದು, ವಿಚಾರಯೋಗ್ಯವಾಗಿದೆ. ಚಾಣಕ್ಯನು ಪರ್ವತರಾಯನಲ್ಲಿಗೆ ಬಂದು ತಾನು ಚಂದ್ರಗುಪ್ತನನ್ನು ಪರೀಕ್ಷಿಸಿದ್ದನ್ನು ನಂದರ ಮೇಲೆ ಕೋಪಗೊಂಡಿದ್ದಾಗಿಯೂ ಹೇಳುವಾಗ ಅದಕ್ಕೆ ಕಾರಣವನ್ನು ಹೀಗೆ ತಿಳಿಸುತ್ತಾನೆ:

‘ ಲೋಕದಲ್ಲಿ ಕೋಪವೆಂಬುದು ಲೌಕಿಕ ವ್ಯವಹಾರಕ್ಕೆ ಸಾಧನವೇ ಹೊರತು ನಿರರ್ಥಕವಲ್ಲ. ಕೋಪವಿಲ್ಲದವನು ಹೆಣ್ಣುಕುರಿಯಂತೆ— ಲೋಕದ ಜನಕ್ಕೆ ಸುಲಭನಾದಾನು. ರಾಜನು ಕೋಪಿಷ್ಠನಾಗಿದ್ದಲ್ಲಿ ಪ್ರಜೆಗಳು ರಾಜಾಜ್ಞೆಯಂ ಮೀರಿದರೆ ಪ್ರಭುವಿನ ಕೋಪಕ್ಕೆ ಪಾತ್ರರಾಗಿ ದಂಡನೆಗೆ ಯೋಗ್ಯರಾದೇವೆಂಬ

ಭೀತಿಯಿಂದ ತಗ್ಗಿ ನಡೆಯುವರು. ಹಾಗೆ ಮನೆಯ ಯಜಮಾನನು ಕೋಪಿಷ್ಠನಾಗಿದ್ದರೆ ಪತ್ನೀ ಪುತ್ರರು ಭಯದಿಂದ ನ್ಯಾಯವಾಗಿ ನಡೆದುಕೊಳ್ಳುವರು. ತಪೋಧನರಿಗೆ ಕೋಪವು ವಿಘ್ನಕಾರಿಯಲ್ಲವೇ? ಎಂದರೆ ಕೋಪವು ಎರಡು ತೆರನಾಗಿರುವುದು. ಅದರಲ್ಲಿ ವಿಮರ್ಶಾಪೂರ್ವಕವಾಗಿ ಮಾಡಿದ ಕೋಪವು ಯಶಸ್ಕರವು. ಕೋಪಪೂರ್ವಕವಾಗಿ ಮಾಡಿದ ವಿಮರ್ಶೆಯು ಹಾನಿಕರವು. ಕೋಪಪೂರ್ವಕವಾದ ವಿಮರ್ಶೆಯುಳ್ಳವನು ಪ್ರಭುಪದಕ್ಕೆ ಯೋಗ್ಯನಲ್ಲ. ಅವನಿಗೆ ಹಾನಿಯುಂಟಾಗುವುದು ಯಥಾರ್ಥವು. ಬ್ರಾಹ್ಮಣನು ಕೋಪದಿಂದಾಗತಕ್ಕ ಪ್ರಯೋಜನವುಂ ತಪೋವ್ಯಯದಿಂ ಮಾಡಿಕೊಂಡರೆ ಆ ಕೋಪವು ಪರಲೋಕವಿಘ್ನವಾಗುವುದು. ಪೌರುಷದಿಂ ಮಾಡಿಕೊಂಡರೆ ಆ ಕೋಪವು ಸದ್ಗತಿಗೆ ವಿಘ್ನವಲ್ಲವು.

ಇಲ್ಲಿ ನಂದರು ಅಕಾರಣವಾಗಿ ಚಾಣಕ್ಯನ ಮೇಲೆ ತೋರಿಸಿದ ಕೋಪವು ಅವರ ನಾಶಕ್ಕೆ ಕಾರಣವಾಯಿತು. ಪ್ರಜ್ಞಾಪೂರ್ವಕವಾಗಿ ಚಾಣಕ್ಯನು ಮಾಡಿದ ಕೋಪವು ಯಶಸ್ಕರವಾಯಿತು. ಹೀಗೆ ಹೇಳಿರುವುದರಿಂದ ಕವಿಯು ಅರ್ಥಶಾಸ್ತ್ರವನ್ನು ಯಥೋಚಿತವಾಗಿ ಉಪಯೋಗಿಸಿಕೊಂಡಿದ್ದಾನೆ. ತನಗೆ ಒಪ್ಪಿಗೆಯಾಗದಿದ್ದಲ್ಲಿ ಅದನ್ನು ಮೀರಿ ಹೇಳುವ ಸ್ವಾತಂತ್ರ್ಯ ವಹಿಸಿದ್ದಾನೆಂಬುದು ತಿಳಿದುಬರುತ್ತದೆ.

<u>ಗುಣಗಳು</u> (ಷಾಡ್ಗುಣ್ಯಗಳು): ಸಂಧಿ, ವಿಗ್ರಹ, ಆಸನ, ಯಾನ, ಸಂಶ್ರಯ ಮತ್ತು ದ್ವೈಧೀಭಾವ — ಇವು ಆರು ಗುಣಗಳು[29] .

ಇಲ್ಲಿ ಚಂದ್ರಗುಪ್ತನು ಮೊದಲು ಪರ್ವತರಾಜನಲ್ಲಿ ಅರ್ಧರಾಜ್ಯವನ್ನು ಕೊಡುವುದಾಗಿ ಹೇಳಿ ಸಂಧಿಮಾಡಿಕೊಳ್ಳುತ್ತಾನೆ. ಅವರಿಬ್ಬರೂ ಸೇರಿ 'ವಿಗ್ರಹ' ನಂದರನ್ನು ಸೋಲಿಸಲು ನಿಶ್ಚಯಿಸುತ್ತಾರೆ. ಶಕ್ತಿ, ದೇಶ, ಕಾಲಾದಿಗಳು ಅತಿಶಯವಾಗಿ ಕೂಡಿದ್ದರಿಂದಲೇ ಪರ್ವತರಾಜನು 'ಯಾನ' ಹೊರಡುತ್ತಾನೆ. ಚಂದ್ರಗುಪ್ತನು ಪರ್ವತರಾಜನನ್ನು ಸೇರಿ ತನ್ನ ಶಕ್ತಿಯನ್ನು ಹೆಚ್ಚು ಮಾಡಿಕೊಂಡದ್ದೇ ಸಂಶ್ರಯ. ರಾಕ್ಷಸನು ಯುದ್ಧಮಧ್ಯದಲ್ಲಿ ಪರ್ವತರಾಜನೊಡನೆ ಸಂಧಿಮಾಡಿಕೊಂಡು ತನ್ಮೂಲಕ ಚಂದ್ರಗುಪ್ತನಿಗೆ ದ್ರೋಹ ಮಾಡಬೇಕೆಂದು ಬಯಸಿದ್ದು ದ್ವೈಧೀಭಾವ.

<u>ತಾಪಸ:</u> ಭಿಕ್ಷು, ಕ್ಷಪಣಕ ಮೊದಲಾದವರು ತಾಪಸ ವೇಷಧಾರಿಗಳಾದ ಗೂಢಚಾರರೆನಿಸುವರು. ಅವರು ನಗರದ ಹೊರ ವಲಯದಲ್ಲಿ ತಮ್ಮ ವಂಗಡದ ಅನೇಕ ಶಿಷ್ಯ ಸಮೇತರಾಗಿ ವಾಸಿಸುವರು[29ಎ]

ಶಿಷ್ಯಸಮೇತನಾಗಿ ಪಾಟಲೀಪುರದ ಹೊರಗೆ ನದೀ ದಂಡೆಯಲ್ಲಿ ಕಾಣಿಸಿಕೊಂಡ ಮಾಸೋಪವಾಸಿಯು ಇದಕ್ಕೆ ಒಳ್ಳೆಯ ಉದಾಹರಣೆ.

<u>ದೂತರು:</u> ನಿಸೃಷ್ಟಾರ್ಥ, ಪರಿಮಿತಾರ್ಥ ಮತ್ತು ಶಾಸನಹರರೆಂದು ದೂತರಲ್ಲಿ ಮೂರು ವಿಧ. ಅವರನ್ನು ಸಂದೇಶದೊಡನೆ ಶತ್ರುಗಳಲ್ಲಿಗೆ ಕಳುಹಿಸಿಕೊಡುವುದು ದೂತ ಪ್ರಣಿಧಿ [30].

ಚಾಣಕ್ಯನು ಕಮಲಾಪೀಡನೆಂಬ ಹೆಸರಿನ ನಿಯೋಗಿಯನ್ನು ಮೊದಲು ಕಾಮರೂಪದೇಶದ ರಾಜಧಾನಿಯಾದ ಪ್ರಾಗ್ಜ್ಯೋತಿಷಪುರಕ್ಕೂ ಮತ್ತೆ ಕಾಶೀರಾಜನಲ್ಲಿಗೂ ಕಳುಹಿಸುತ್ತಾನೆ. ಯುದ್ಧಮಧ್ಯದಲ್ಲಿ ರಾಕ್ಷಸನು ವಿಷ್ಣುದಾಸನೆಂಬ ನಿಯೋಗಿಯನ್ನು ಪರ್ವತರಾಜನಲ್ಲಿಗೆ ಕಳುಹಿಸುತ್ತಾನೆ. ಇವರಿಬ್ಬರೂ ದೂತಪ್ರಣಿಧಿಯಲ್ಲಿ ಹೇಳಿದ ನಿಸೃಷ್ಟಾರ್ಥದೂತನ ಎಲ್ಲಾ ಲಕ್ಷಣಗಳನ್ನು ಹೊಂದಿದವರಾಗಿದ್ದರು.

ನಕ್ಷತ್ರಾನುಕೂಲತೆ: ಅವಶ್ಯ ಮಾಡಬೇಕಾದ ಕಾರ್ಯದಲ್ಲಿಯೂ ಕೂಡ ನಕ್ಷತ್ರಾನುಕೂಲತೆಯನ್ನು ಕೇಳುವ ಬುದ್ಧಿಹೀನನಿಗೆ ಅರ್ಥಲಾಭವುಂಟಾಗುವುದಿಲ್ಲ. ಸಾಧ್ಯವಾಗಿರುವ ಫಲಕ್ಕೆ ಧನಾದಿ ಅರ್ಥವೇ ನಕ್ಷತ್ರ ಸಿದ್ಧಿ ಸಾಧನವಾಗುತ್ತದೆ. ತಾರಕೆಗಳು ಫಲ ಸಾಧಕವಾಗುವುದಿಲ್ಲ [30ಎ].

ಚಾಣಕ್ಯನು ಯಾವತ್ತೂ ಮುಹೂರ್ತ ನಕ್ಷತ್ರಕ್ಕಾಗಿ ಕಾದವನಲ್ಲ. ಅದೇ ರಾಕ್ಷಸನು ಅಪರಿಚಿತನಾದ ಬೌದ್ಧ ಭಿಕ್ಷುವಿನಲ್ಲಿ ಯುದ್ಧಕ್ಕೆ ಮುಹೂರ್ತ ಕೇಳಿ ನೋಡುತ್ತಾನೆ. ಮತ್ತೆ ನಂದನಾಶ ಆದ ನಂತರ ಆತ ಮಲಯಕೇತುವಿನ ಬಳಿ ಹೋದಾಗಲೂ ಪುನಃ ಅದೇ ಕ್ಷಪಣಕನಲ್ಲಿ ಯುದ್ಧಕ್ಕೆ ಮುಹೂರ್ತ ಕೇಳುತ್ತಾನೆ.

ಪಶ್ಚಾತ್ಕೋಪ: ವಿಜಿಗೀಷುವು ಮುಂದಿನ ಲಾಭವನ್ನಪೇಕ್ಷಿಸಿ ಯಾತ್ರೆ ಕೈಗೊಂಡಾಗ ಹಿಂದಿನಿಂದ ಪಾರ್ಷ್ಣಿಗ್ರಾಹಿ, ಆಟವಿಕ, ದೂಷ್ಯಾದಿಗಳಿಂದುಂಟಾಗುವ ಅನರ್ಥವು. ಅಧಿಕವಾದ ಮುಂದಿನ ಲಾಭಕ್ಕಿಂತ ಅಲ್ಪವಾದ ಪಶ್ಚಾತ್ಕೋಪವು ಗುರುತರವಾದದ್ದು. ಪಶ್ಚಾತ್ಕೋಪವನ್ನು ದೂಷ್ಯರಾಗಿರುವ ಅಮಿತ್ರರು ಮತ್ತು ಆಟವಿಕರು ಹಿಂದಿನಿಂದಲೂ ಬದಿಗಳಿಂದಲೂ ಹೆಚ್ಚಿಸುತ್ತಾರೆ [31].

ಪರ್ವತರಾಜನು ಪಾಟಲೀಪುರಾಭಿಮುಖವಾಗಿ ಯುದ್ಧಕ್ಕೆ ಬಂದಾಗ, ಅತ್ತ ರಾಕ್ಷಸನು ದಶಾರ್ಣ ಶೂರಸೇನಾಧಿಪತಿಗಳನ್ನು ಪ್ರೋತ್ಸಾಹಿಸಿ ಪರ್ವತರಾಜ್ಯದ ರಾಜಧಾನಿಯಾದ ಶಾಕಲೀ ನಗರವನ್ನು ಮುತ್ತುವಂತೆ ಮಾಡುತ್ತಾನೆ. ಆಗ ಪುರರಕ್ಷಕನಾದ ಅಂಗಾರವರ್ಮನು (ಶೂನ್ಯಪಾಲಕ) ನಗರವನ್ನು ತನ್ನಿಂದ ರಕ್ಷಿಸಿಕೊಳ್ಳಲಾಗುತ್ತಿಲ್ಲವೆಂದು ಪತ್ರ ಬರೆದು ತಿಳಿಸುತ್ತಾನೆ. ಇದು ಪರ್ವತರಾಜನಿಗುಂಟಾದ ಪಶ್ಚಾತ್ಕೋಪವು.

ಪ್ರಕೃತಿಗಳು (ಸಪ್ತಾಂಗಗಳು): ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ದಂಡ ಮತ್ತು ಮಿತ್ರ — ಇವು ಪ್ರಕೃತಿಗಳು [32].

ಇವುಗಳ ವಿವರಗಳು ಸಾಂದರ್ಭಿಕವಾಗಿ ಮುದ್ರಾಮಂಜೂಷದಲ್ಲಿ ಬಂದಿವೆ.

ಪಾರ್ಷ್ಣಿಗ್ರಾಹಿ: ವಿಜಿಗೀಷುವು ಶತ್ರುವಿನೊಡನೆ ಯುದ್ಧದಲ್ಲಿ ವ್ಯಾಪೃತನಾಗಿರುವಾಗ ಹಿಂದಿನಿಂದ ಬಂದು ಆಕ್ರಮಿಸುವವರು ಪಾರ್ಷ್ಣಿಗ್ರಾಹಿಗಳು[33]. ಆತನು ಶತ್ರುವಿನ ಮಿತ್ರನು.

ಚಾಣಕ್ಯನು ಪರ್ವತರಾಜನಲ್ಲಿಗೆ ಬಂದು ಸಹಾಯವನ್ನು ಕೇಳಿದಾಗ — ' ತನಗೂ ನಂದರಿಗೂ ಯಾವ ರೀತಿಯ ದ್ವೇಷ ಮಾತ್ಸರ್ಯಗಳಿಲ್ಲ. ರಾಕ್ಷಸನು ಮಿತ್ರನೇ ಆಗಿದ್ದಾನೆ. ಇಂತಹ ಸಂದರ್ಭದಲ್ಲಿ ತಾನು ಅನುಚಿತವಾಗಿ ನಂದರ ವಿರುದ್ಧ ಯುದ್ಧಕ್ಕೆ ಬಂದರೆ, ಪಾರ್ಷ್ಣಿಗ್ರಾಹಿಗಳಾದ ಶತ್ರುಗಳಿಂದ ತನಗೆ ಹಾನಿಯುಂಟಾಗಲಿಕ್ಕಿಲ್ಲವೇ? ' ಎಂದು ಕೇಳುತ್ತಾನೆ. ಮತ್ತೆ, ಚಾಣಕ್ಯನ ಮಾತಿಗೆ ಮರುಳಾಗಿ ಹೋಗಿ ಸಾವನ್ನು ತಂದುಕೊಳ್ಳುತ್ತಾನೆ.

ಬುದ್ಧಿಗುಣಗಳು: ಶುಶ್ರೂಷಾ, ಶ್ರವಣ, ಗ್ರಹಣ, ಧಾರಣ, ವಿಜ್ಞಾನ, ಊಹ, ಅಪೋಹ ಮತ್ತು ತತ್ತ್ವಾಭಿನಿವೇಶಗಳೆಂಬ ಎಂಟು ಗುಣಗಳು. ಈ ಗುಣಗಳಿಂದ ಕೂಡಿರುವವನನ್ನು ವಿದ್ಯಾಭ್ಯಾಸವು ಸಂಸ್ಕೃತನನ್ನಾಗಿ ಮಾಡುತ್ತದೆ, ಇತರರನ್ನಲ್ಲ[34].

ರಾಕ್ಷಸನು ವಿದ್ಯಾನಿಪುಣರಿಂದ ನಂದರಿಗೆ ಈ ರೀತಿಯ ಶಿಕ್ಷಣವನ್ನು ಕೊಡಿಸಿದ್ದನು.

ಮಂತ್ರಾಲೋಚನ (ಮಂತ್ರಾಧಿಕಾರ): ರಾಜನು ಮಾಡಬೇಕಾದ ಕಾರ್ಯಗಳನ್ನು ಹೇಗೆ ಮಾಡಬೇಕೆಂದು ಆಲೋಚಿಸುವುದೇ ಮಂತ್ರವು. ಮೊದಲು ಚೆನ್ನಾಗಿ ವಿಮರ್ಶಿಸಿ ಅನಂತರ ಕಾರ್ಯವನ್ನು ಕೈಗೊಂಡರೆ ಕರ್ಮವು ಸಮೃದ್ಧವಾಗಿ ಫಲವನ್ನು ಕೊಡುತ್ತದೆ. ಎಲ್ಲಾ ಕಡೆಗಳಿಂದಲೂ ಮುಚ್ಚಲ್ಪಟ್ಟದ್ದಾಗಿಯೂ, ಒಳಗಿನವರ ಮಾತು ಹೊರಗೆ ಕೇಳಿಸದಂತೆಯೂ ಪಕ್ಷಿಗಳಿಗೂ ಕೂಡಾ ಇಣುಕಿ ನೋಡಲು ಸಾಧ್ಯವಿಲ್ಲದ ರಹಸ್ಯವಾದ ಸ್ಥಳವು ಮಂತ್ರಾಲೋಚನೆಗೆ ಯೋಗ್ಯವು. ಶುಕಶಾರಿಕಾದಿ ಪಕ್ಷಿಗಳಿಂದಲೂ ನಾಯಿಯೇ ಮೊದಲಾದ ತಿರ್ಯಕ ಜಂತುಗಳಿಂದಲೂ ಮಂತ್ರವು ಬಹಿರಂಗವಾದದ್ದು ಪ್ರಸಿದ್ಧವಾಗಿದೆ. ಆದ್ದರಿಂದ ಮಂತ್ರಾಲೋಚನೆಯ ಸ್ಥಳಕ್ಕೆ ರಾಜನಿಂದ ಆ ಕಾರ್ಯದಲ್ಲಿ ಅನಿಯುಕ್ತನಾದವನು ಪ್ರವೇಶಿಸಬಾರದು[34ಎ].

ಪರ್ವತರಾಜನು ಶಬರವರ್ಮರೇ ಮೊದಲಾದ ತನ್ನ ಮಂತ್ರಿಗಳೊಂದಿಗೆ ದೀರ್ಘವಾದ ಮಂತ್ರಾಲೋಚನೆ ಗುಪ್ತವಾಗಿ ನಡೆಸಿದ್ದರೂ ವೃದ್ಧನಾದ ಉಲೂಕನೆಂಬ ಮಂತ್ರಿಯ ಮಾತನ್ನು ಕೇಳದೇ ಕೇಡನ್ನು ತಂದುಕೊಂಡನು. ರಾಕ್ಷಸನು ರಾಜಶಾಸನಲೇಖಕರುಗಳನ್ನು ಕರೆಯಿಸಿ ಬರೆದು ಕಳುಹಿಸತಕ್ಕ ರಾಜಕಾರ್ಯ ಏನು ಬರೆಯುವರಾಗಿರಿ ಎನಲು ಅದೇ ಸಮಯದಲ್ಲಿ ಆತನನ್ನು ಆಶ್ರಯಿಸಿದ್ದ ಕ್ಷಪಣಕ ಜೀವಸಿದ್ಧಿಯು ಅಲ್ಲಿಗೆ ಬಂದು ಸಮೀಪದಲ್ಲಿ ಕುಳಿತದ್ದನ್ನು ನೋಡಿ — ಅವನನ್ನು ಆಚೆಗೆ ಹೋಗು ಎಂಬುವುದಕ್ಕೆ ದಾಕ್ಷಿಣ್ಯಪಟ್ಟು ಈತನು ವಿರಕ್ತನು. ನಮ್ಮ ಆದರಣೆಯಿಂದ ನಮ್ಮವರಲ್ಲೇ ಹೊರತು ಅನ್ಯರಲ್ಲಿ ಈತನಿಗೆ ಮೌನವು. ಈ ಲೌಕಿಕ ವ್ಯವಹಾರದಲ್ಲಿ ಈತನಿಗೆ ಪ್ರಯೋಜನವಿಲ್ಲ. ಆದುದರಿಂದ ಈತನು ಇದ್ದರೂ ಬಾಧಕವಿಲ್ಲ ಎಂದು ನಿಶ್ಚಯಿಸಿದುದರಿಂದ ಆತನ ಭೇದೋಪಾಯವು ಫಲಿಸಿದೆ ನಂದನಾಶಕ್ಕೆ ಅದೂ ಒಂದು ಕಾರಣವಾಯಿತು.

ಯಾತವ್ಯ: ಯಾರ ಮೇಲೆ ಶತ್ರುಗಳು ದಂಡೆತ್ತಿಕೊಂಡು ಬಂದಿದ್ದಾರೋ ಅವನು ಯಾತವ್ಯನು. ಯಾತವ್ಯನೆಡೆಯನ್ನು ಹೊಂದಿದ ವಿಜಿಗೀಷುವು ಇತರರು ಮಾಡಿಕೊಂಡ ಸಂಧಿಯನ್ನು ಕೆಡಿಸುವ ಇಚ್ಛೆಯುಳ್ಳ

ವನಾಗಿದ್ದಲ್ಲಿ ಸಾಮವಾಯಿಕರಲ್ಲಿ ಒಬ್ಬರೊಡನೆ ಅವರು ನಿರ್ಣಯಿಸಿಕೊಂಡ ಲಾಭದ ಇಮ್ಮಡಿ ಕೊಡುವ ಶರ್ತದಿಂದ ಸಂಧಿಯನ್ನು ಯಾಚಿಸಬೇಕು[35].

ಪರ್ವತರಾಜನು ಪಾಟಲೀಪುರದ ಮೇಲೆ ದಂಡೆತ್ತಿಬಂದಿದ್ದು ಎರಡು ದಿನಗಳ ಯುದ್ಧದಲ್ಲಿ ಸಮಯುದ್ಧ ಹಾಗೂ ರಾಕ್ಷಸನಿಗೇ ಗೆಲುವುಂಟಾದಾಗಲೂ ಯಾತವ್ಯನಾದ ರಾಕ್ಷಸನು ವಿಷ್ಣುಶರ್ಮನೆಂಬ ನಿಯೋಗಿಯಲ್ಲಿ — ಚಾಣಕ್ಯನು ಹೇಳಿದ ಶರ್ತಕ್ಕೆ ತಾನೇ ಬದ್ಧನೆಂದೂ ತಮ್ಮ ಮಿತ್ರತ್ವವನ್ನು ದೃಢಪಡಿಸಿಕೊಳ್ಳಬೇಕೆಂದೂ' ಹೇಳಿಕಳಿಸುತ್ತಾನೆ. ಆದರೆ ಚಾಣಕ್ಯನ ಕಟ್ಟೆಚ್ಚರದಿಂದಾಗಿ ಈ ಸಂಧಿಯು ಫಲಕಾರಿಯಾಗುವುದಿಲ್ಲ.

<u>ಯಾತ್ರಾಕಾಲ:</u> ಮಾರ್ಗಶೀರ್ಷ ಮಾಸದಲ್ಲಿ ಕೈಗೊಳ್ಳುವ ದಂಡಯಾತ್ರೆಯನ್ನು ದೀರ್ಘಕಾಲ ಬೆಳೆಸಿದರೆ ದೋಷವುಂಟಾಗುವುದಿಲ್ಲ[36].

ಮುದ್ರಾಮಂಜೂಷಕಾರನು — 'ವರ್ಷಾಕಾಲ ಕಳೆದು ಶರತ್ಕಾಲ ನಡೆಯುವುದರಿಂದ ಇದು ಅರಸುಗಳಿಗೆ ದಂಡಯಾತ್ರಾ ಸಮಯವು' ಎನ್ನುತ್ತಾನೆ. ದೀರ್ಘಕಾಲ ಬೆಳೆಸಬೇಕಾಗಬಹುದಾದ ಯುದ್ಧಕ್ಕೆ ಮಾರ್ಗಶೀರ್ಷಕ್ಕಿಂತ ಶರತ್ಕಾಲದ ಆಶ್ವೀಜ, ಕಾರ್ತಿಕಗಳಲ್ಲಿ ಹೊರಟರೆ ಮತ್ತು ಎರಡು ತಿಂಗಳು ಹೆಚ್ಚು ಕಾಲ ಸಿಗುವುದರಿಂದ ಇದೇ ಉಚಿತವಾಗಿದೆ.

<u>ಯೋಗಾತಿಸಂಧಾನ:</u> ದೇವಾಲಯ (ಅರಮನೆ) ವನ್ನು ಪ್ರವೇಶಿಸಿದ ರಾಜನ ಮೇಲೆ ಗುಪ್ತವಾದ ಗೋಡೆ ಮತ್ತು ಕಲ್ಲುಗಳಿಗೆ ಆಧಾರವಾದ ಯಂತ್ರವನ್ನು ಬಿಚ್ಚಿ ಗೋಡೆಯನ್ನೋ ಕಲ್ಲನ್ನೋ ಬೀಳಿಸುವುದು[37].

ಪರ್ವತರಾಜನ ಅವಸಾನಾನಂತರ ಚಾಣಕ್ಯನು ಆತನ ತಮ್ಮನಾದ ವೈರೋಚನನನ್ನು ಕರೆದು ಅರ್ಧರಾಜ್ಯವನ್ನು ಕೊಡುವುದಾಗಿ ಹೇಳಿ ನಂಬಿಸಿ, ಆತನಿಗೆ ಚಂದ್ರಗುಪ್ತನ ಆಭರಣಗಳನ್ನು ರತ್ನ ಖಚಿತವಾದ ಕವಚವನ್ನು ತೊಡಿಸಿ ದಿವ್ಯದುಕೂಲಗಳನ್ನು ಹೊದಿಸಿ ರಾಜದ್ವಾರದೆಡೆಗೆ ಕರೆದುಕೊಂಡು ಬರುತ್ತಿರಲು ದಾರುವರ್ಮನು ಬಡಿಯಲು ನಡಿಸಿದ ಮಹಾಭಾರದ ತೋರಣವು ವೈರೋಚನನ ಶಿರಸ್ಸಿನ ಮೇಲೆ ಬಿದ್ದು ಆತನು ಮೃತನಾದನು. ಇದು ಯೋಗಾತಿಸಂಧಾನವು.

<u>ಯೋಗಾವಾಮನ:</u> ಕಪಟೋಪಾಯದಿಂದ ಶತ್ರುವು ದುರ್ಗದಿಂದ ಹೊರಗೆ ಬರುವಂತೆ ಮಾಡುವುದಕ್ಕೆ ಯೋಗವಾಮನವೆಂದು ಹೆಸರು. ಸಿದ್ಧವೇಷಧಾರಿಯಾಗಿ ಮಾಯಾ ವಿದ್ಯೆಗಳಿಂದ ರಾಜನನ್ನು ಮೋಹನಗೊಳಿಸಿ ರಾಜನನ್ನು ಹೊರಕ್ಕೆ ಬರುವಂತೆ ಮಾಡಿ ನಾಶ ಮಾಡಬೇಕು[38].

ಚಾಣಕ್ಯನ ಆದೇಶದಂತೆ ಮಾಸೋಪವಾಸಿ ಮತ್ತು ಆತನ ಶಿಷ್ಯರು ಸರಯೂ ಸಂಗಮದ ಪೂರ್ವದಿಕ್ಕಿನಲ್ಲಿ ಮಾಡಿಸಿರುವ ಶತ್ರುಪಲಾಯನ ಜಪಶಾಲೆಗೆ — ಹೋಮದ ಪೂರ್ಣಾಹುತಿಯ ಸಮಯದಲ್ಲಾಗುವ ಭಗವಂತನ ಹಸ್ತದರ್ಶನಕ್ಕೆ ನಂದರು ಬರುವಂತೆ ನಿಶ್ಚಯ ಮಾಡಿ, ಜಪಶಾಲೆಯ ಸುತ್ತಲೂ

ಶೂದ್ರಾದಿಗಳ ದರ್ಶನವಾಗಬಾರದೆಂಬ ಕಾರಣ ಹೇಳಿ ವೈಗ್ಯಾವರಣವರನ್ನೂ ದೂರ ಇಡಿಸಿ, ಹಾಗೆ ಬಂದಾಗ ಪರ್ವತರಾಜನ ಸೇನಾಪತಿಗಳಿಂದ ಅವರನ್ನು ಸಂಹರಿಸಲು ಅನುಕೂಲ ಮಾಡಿಕೊಟ್ಟರು.

<u>ಲಬ್ಧಪ್ರಶಮನ:</u> ವಿಜಿಗೀಷುವು ತಾನು ಜಯಿಸಿದ ಶತ್ರುದುರ್ಗಾದಿಗಳಲ್ಲಿ ಶಾಂತಿಸ್ಥಾಪಿಸುವುದು ಲಬ್ಧಪ್ರಶಮನ. ಹೊಸದಾಗಿ ಸಂಪಾದಿಸಿದ ರಾಜ್ಯದಲ್ಲಿ ರಾಜನು ತನ್ನ ಗುಣಗಳಿಂದ ಶತ್ರುವಿನ ದೋಷಗಳನ್ನೂ, ತನ್ನ ಗುಣಾತಿಶಯದಿಂದ ಶತ್ರುವಿನ ಗುಣಗಳನ್ನೂ ಪ್ರಜೆಗಳು ಮರೆಯುವಂತೆ ಮಾಡಬೇಕು. ತಾನು ಜಯಿಸಿದ ದೇಶದಲ್ಲಿ ಅಲ್ಲಿನ ಜನರು ಪೂಜಿಸುವ ದೇವತೆಯನ್ನು ಪೂಜಿಸಬೇಕು. ಜನರು ಆಚರಿಸುವ ಸಮಾಜ, ಉತ್ಸವ, ವಿಹಾರಗಳಲ್ಲಿ ಭಾಗವಹಿಸಬೇಕು[39].

ಚಂದ್ರಗುಪ್ತ — ಚಾಣಕ್ಯರು ಪಾಟಲೀಪುರವನ್ನು ವಶಪಡಿಸಿಕೊಂಡ ಮೇಲೆ, ನಗರದ ಮುಖ್ಯ ಅಧಿಕಾರಿಗಳನ್ನು ಕರೆಯಿಸಿ, ಅವರು ಬಂದ ಮೇಲೆ ಉಚಿತಪ್ರಕಾರದಿಂದ ಕುಶಲವನ್ನು ಕೇಳಿ ಕುಳ್ಳಿರಿಸಿ, ಅವರೆಲ್ಲರಿಗೂ ವೀಳೆಯವನ್ನು ಕೊಡಿಸಿ ಮೊದಲಿನ ಮೇರೆಗೆ ನಿಮ್ಮ ನಿಮ್ಮ ಅಧಿಕಾರಗಳಲ್ಲಿ ಎಚ್ಚರಿಕೆಯಿಂದಿರುವುದೆಂದು ನೇಮಿಸಿದನು. ನಂದಪಕ್ಷೀಯರನ್ನು ತನ್ನ ಅಮಾತ್ಯಗಳಂತೆ ಸಲಹುದಾಗಿ ಮಾತುಕೊಟ್ಟನು. ಹೀಗೆ ಜನರ ಮನಸ್ಸಿಗೆ ಕ್ಷೋಭೆಯಾಗದಂತೆ ನಡೆದುಕೊಂಡನು.

<u>ವಾಕ್ಪಾರುಷ್ಯ:</u> ಮಾತಿನಿಂದ ನಿಂದಿಸುವುದು, ಹೆದರಿಸುವುದು ಮೊದಲಾದವು. — ಇದರಲ್ಲಿ ಮೂರು ವಿಧ. (ಅ) ಉಪವಾದ (ಆ) ಕುತ್ಸನ (ಇ) ಅಭಿಭರ್ತ್ಸನ. ಅಂಗವೈಕಲ್ಯಗಳನ್ನು ಹೇಳಿ ನಿಂದಿಸುವುದು ಉಪವಾದವು.[40]

ನಂದರು ಪೂರ್ವಾಪರ ಚಿಂತನೆ ಮಾಡದೇ ಚಾಣಕ್ಯನನ್ನು — 'ಬ್ರಾಹ್ಮಣಾಧಮ, ತುಚ್ಛ' ನೆಂದು ಬೈದುದರಿಂದಲೇ ದೋಷವುಂಟಾಗಿ ಅವರ ಸರ್ವನಾಶಕ್ಕೆ ಕಾರಣವಾಯಿತು.

<u>ವಿಜಿಗೀಷು:</u> ಆತ್ಮಗುಣಗಳಿಂದಲೂ, ಅಮಾತ್ಯಾದಿ ಪ್ರಕೃತಿ ಸಂಪತ್ತಿನಿಂದಲೂ ಕೂಡಿದ್ದು ಸಾಮದಾನಾದ್ಯುಪಾಯಗಳಿಂದ ಶತ್ರುವನ್ನು ಜಯಿಸಲಿಚ್ಛಿಸುವವನು[41].

ಪರ್ವತರಾಜನ ಸ್ನೇಹವನ್ನು ಸಂಪಾದಿಸಿದ ನಂತರ ಚಂದ್ರಗುಪ್ತನು ವಿಜಿಗೀಷುವು.

<u>ವಿಷಪರೀಕ್ಷೆ:</u> ಶುಕ, ಶಾರಿಕೆ ಮತ್ತು ಭೃಂಗರಾಜ ಪಕ್ಷಿಗಳು ಸರ್ಪವಿಷದ ಸಂದೇಹವಿರುವಲ್ಲಿ ಕೂಗುತ್ತದೆ. ಕ್ರೌಂಚಪಕ್ಷಿಯು ವಿಷದ ಸಮೀಪದಲ್ಲಿ ವಿಹ್ವಲವನ್ನು ಹೊಂದುತ್ತದೆ. ಜೀವಂ ಜೀವಕವು ಸಂತೋಷವನ್ನು ಕಳೆದುಕೊಳ್ಳುತ್ತದೆ. ಕೋಗಿಲೆಯು ಸತ್ತುಹೋಗುತ್ತದೆ. ಚಕೋರದ ಕಣ್ಣು ಬಣ್ಣಗುಂದುತ್ತದೆ[42]. ಅನ್ನವು ವಿಷಯುಕ್ತವಾಗಿದ್ದರೆ ಅಗ್ನಿಯ ಜ್ವಾಲೆಯೂ ಹೊಗೆಯೂ ನೀಲವಾಗಿಯೂ ಚಟಚಟ ಶಬ್ದವೂ ಉಂಟಾಗುತ್ತದೆ... ಆದ್ದರಿಂದ ರಾಜನ ಸಮೀಪದಲ್ಲಿ ಯಾವಾಗಲೂ ವಿಷವಿದ್ಯೆಯನ್ನೂ ವೈದ್ಯಶಾಸ್ತ್ರವನ್ನೂ ತಿಳಿದವರಿರಬೇಕು[43].

ಚಂದ್ರಗುಪ್ತನನ್ನು ಸಂಹರಿಸಬೇಕೆಂದು ಕ್ಷಪಣಕನ ಮೂಲಕ ರಾಕ್ಷಸನು ವಿಷಕನ್ಯೆಯನ್ನು ಕಳುಹಿಸಿಕೊಟ್ಟಾಗ, ಆ ಕನ್ಯೆಯನ್ನು ಪರೀಕ್ಷಿಸಬೇಕೆಂದು ಚಾಣಕ್ಯನು ಅವಳ ಬಳಿಗೆ ಗಿಣಿಗಳ ಪಂಜರಗಳನ್ನೂ ಪಾರಾವತಚಕೋರ ಪಕ್ಷಿಗಳನ್ನೂ ತಂದು ಇರಿಸಲು ಆಗ ಗಿಳಿಗಳು ಕೂ ಎಂದು ಅರಚಿದವು. ಪಾರಿವಾಳ ಚಕೋರ ಪಕ್ಷಿಗಳು ಪಕ್ಷಿಗಳನ್ನೊದರುತ್ತ ಬರಬರನೆ ಕಣ್ಣುಗಳನ್ನು ತಿರುಗಿಸುತ್ತ ಮೃತವಾದವು. ರಾಜವೈದ್ಯನು ವಿಷಯುಕ್ತ ಚೂರ್ಣವನ್ನು ಚಂದ್ರಗುಪ್ತನಿಗೆ ಕೊಡಲು ಚಾಣಕ್ಯನು ವಿಷಭುಂಜನಿಯೆಂಬ ಶಾರೆಯಿಂದ ನಿರ್ಮಿಸಿದ ಬಟ್ಟಲಿನಲ್ಲಿ ಹಾಕಲು ಆ ಪುಡಿಯು ವಿವರ್ಣವಾಗಿ ನೊರೆಗಟ್ಟಿ ಕುದಿದು ನುಚ್ಚಿತು. ಹೀಗೆ ಚಾಣಕ್ಯನು ವಿಷವಿದ್ಯೆ ತಿಳಿದದ್ದರಿಂದ ಚಂದ್ರಗುಪ್ತನನ್ನು ರಕ್ಷಿಸಿದನು. ಅದೇ ಪರ್ವತರಾಜನು ವಿಷಕನ್ಯೆಯನ್ನು ಆಲಿಂಗಿಸಿ ಮೃತನಾದನು.

<u>ಸತ್ರಿ:</u> (ಅ) ಸ್ತ್ರೀ ಪುರುಷರ ಲಕ್ಷಣ ಶಾಸ್ತ್ರ, ನಿಮಿತ್ತಾದಿ ಶಾಸ್ತ್ರಗಳನ್ನು ತಿಳಿದವರಂತೆ ನಟಿಸುತ್ತಾ, ಅಲ್ಲಲ್ಲಿ ಸಂಚರಿಸಿ ವರ್ತಮಾನ ಸಂಗ್ರಹ ಮಾಡುವ ಗೂಢಚಾರರು[44].

ಚಾಣಕ್ಯನಿಂದ ನೇಮಿಸಲ್ಪಟ್ಟದ್ದ ಮರಾಳ(ಕ) ನೆಂಬವನು ಇದಕ್ಕೆ ಒಳ್ಳೆಯ ಉದಾಹರಣೆ. ಅತನು ಚಿತ್ರಪಟವನ್ನು ತೆಗೆದುಕೊಂಡು ತದನುಗುಣ ವೇಷವನ್ನು ಧರಿಸಿ ತಾಳಲಯಗಳಿಂದ ಗಾನವನ್ನು ಮಾಡುತ್ತ, ಅಲ್ಲಲ್ಲಿ ಗುಂಪು ಕೂಡಿ ನೋಡುವುದಕ್ಕಾಗಿ ಬಂದ ಜನಕ್ಕೆ ತನ್ನ ಚಿತ್ರಪಟನ್ನು ತೋರಿಸಿ ಇದು ಸ್ವರ್ಗವು: ಸುಕೃತಿಗಳಿಗೆ ಪ್ರಾಪ್ಯಸ್ಥಾನವು. ಇದಕ್ಕೆ ನಿಯಾಮಕನು ಧರ್ಮಮಾರ್ಗಿಯು. ಇದು ನರಕವು : ಈ ನರಕಸ್ಥಾನದಲ್ಲಿ ಪಾಪಿಗಳಂ ದಂಡಿಸುವ ಭಟರುಗಳಿರುವರು. ಇದಕ್ಕೆ ನಿಯಾಮಕನು ಯಮಮಾರ್ಗಿಯು. ಇದು ಸತ್ಯವು. ಆದುದರಿಂದ ನೀವೆಲ್ಲರೂ ಧರ್ಮವನ್ನಾಚರಿಸಿ ಸದ್ಗತಿಗೆ ಪಾತ್ರರಾಗಿರಿ. ಪಾಪವನ್ನಾಚರಿಸಬೇಡಿರಿ ಎಂದು ಅಲ್ಲಲ್ಲಿ ಹೇಳುತ್ತ, ಪ್ರತಿ ಗೃಹಗಳನ್ನು ಹೊಕ್ಕು ಗೀತವನ್ನು ಹಾಡಿ ಯಾಚಿಸುತ್ತ, ಅಲ್ಲಿ ನಡೆದ ವಿದ್ಯಮಾನಗಳನ್ನು ಚೆನ್ನಾಗಿ ನೋಡಿ ತಿಳಿದುಕೊಳ್ಳುತ್ತಿದ್ದನು.

(ಅ) ಪರಿವ್ರಾಜಕೆಯರು, ಶಾಕ್ಯಭಿಕ್ಷುಕಿಯರು ಮತ್ತು ಶೂದ್ರಸ್ತ್ರೀಯರು ಕೂಡಾ ಬುದ್ಧಿಶಾಲಿಗಳಾಗಿದ್ದು ಅಲ್ಲಲ್ಲಿ ಸಂಚರಿಸುತ್ತಾ ರಾಜಕಾರ್ಯವನ್ನು ನಿರ್ವಹಿಸುವುದರಿಂದ ಇವರಿಗೂ ಸತ್ರಿಗಳೆಂದು ಹೆಸರು[45].

ಮರಾಳಕನು ಹೇಳಿದ ಮಾತಿನಿಂದ ರಾಕ್ಷಸನ ಪತ್ನಿಯ ಕೈಯಲ್ಲಿ ರಾಕ್ಷಸನ ಮುದ್ರೆಯುಂಗುರವಿರುವುದೆಂದು ತಿಳಿದ ಚಾಣಕ್ಯನು ಅದನ್ನು ಸಂಪಾದಿಸಲು ಸಿದ್ಧಾರ್ಥಕನ ಮೂಲಕ ಹೇಳಿದ ಕೆಲಸವನ್ನು ನಿರ್ವಹಿಸುವುದರಲ್ಲಿ ನಿಪುಣೆಯಾದ 'ಒರ್ವ ಸೂಲಗಿತ್ತಿಯು ಚಂದನದಾಸನ ಗೃಹವನ್ನು ಸೇರಿ ಹೆರಿಗೆಯ ಸಮಯದಲ್ಲಿ ಉಂಗುರವನ್ನು ಬದಲಾಯಿಸಿ ತರುವಂತೆ ಮಾಡುತ್ತಾನೆ. ಮಂತ್ರಸಾನಿಯಾದ ● ಸೂಲಗಿತ್ತಿಯು ಸತ್ರಿ ವರ್ಗಕ್ಕೆ ಸೇರಿದವಳು.

ಸ್ಕಂಧಾವಾರ: ಯುದ್ಧಭೂಮಿಯ ಸಮೀಪದಲ್ಲಿ ಏರ್ಪಡಿಸಿದ ಸೈನ್ಯದ ವಾಸ ಸ್ಥಳ, ವಾಸ್ತುವಿದ್ಯಾ ವಿಚಕ್ಷಣರಿಂದ ಹೊಗಳಲ್ಪಟ್ಟ ಪ್ರದೇಶದಲ್ಲಿ ಸೇನಾಪತಿ, ಸ್ಥಪತಿ, ಮೌಹೂರ್ತಿಕರು ಸೇರಿ ಸ್ಕಂಧಾವಾರವನ್ನು ರಚಿಸಬೇಕು. ಅದರಲ್ಲಿ ನಾಲ್ಕು ಬಾಗಿಲುಗಳು, ಆರು ಮಾರ್ಗಗಳು ಮತ್ತು ಒಂಬತ್ತು ಸನ್ನಿವೇಶಗಳಿರಬೇಕು. ಶತ್ರುಗಳ ಆಕ್ರಮಣದ ಭಯವಿರುವಾಗ ಕಂದಕವನ್ನಗೆದು ಕೋಟೆಯನ್ನೂ, ಕೋಟೆದ್ವಾರವನ್ನೂ ಅಟ್ಟಾಲಕವನ್ನೂ ಏರ್ಪಡಿಸಬೇಕು[46].

ಪರ್ವತರಾಜನ ಸೈನ್ಯವು ಪಾಟಲೀಪುತ್ರಾಭಿಮುಖವಾಗಿ ಬರುತ್ತಿದೆ ಎಂಬ ಸುದ್ದಿ ಸಿಕ್ಕಿದಾಗ ನಂದರು — ಗಂಗಾ ಸರಯೂ ಸಂಗಮದ ಉತ್ತರ ಭಾಗದಲ್ಲಿ ತಗ್ಗಾಗಿ ಇರುವ ಸ್ಥಳವನ್ನು ನೋಡಿ ಅಲ್ಲಿ ರಾಜಭವನದಂತೆ ರಾಜಯೋಗ್ಯವಾದ ಗೃಹಾಗಾರವನ್ನು ಹಾಕಿ ಅದರ ಸುತ್ತಲೂ ತೀಕ್ಷ್ಣವಾದ ಶೂಲಗಳನ್ನು ನೆಡಿಸಿ··· ಮಹಾಗಂಭೀರವಾದ ಅಗಳನ್ನು ತೋಡಿಸಿ ಅದಕ್ಕೆ ನದೀ ಜಲವು ಬರುವಂತೆ ಮಾಡಿ ಸಿದ್ಧವಾಗಿ ಇದ್ದರು.

ಈ ಮೇಲಿನ ಅಧ್ಯಯನದಿಂದ ಮುದ್ರಾಮಂಜೂಷಕಾರನಿಗೆ ಅರ್ಥಶಾಸ್ತ್ರದ ಮೇಲೆ ಅಧಿಕಾರವಾಣಿಯಿಂದ ಹೇಳಬಲ್ಲಷ್ಟು ಅನುಭವವಿದ್ದು ಅದನ್ನು ಆತ ಈ ಕೃತಿಯಲ್ಲಿ ಚೆನ್ನಾಗಿ ಅಳವಡಿಸಿಕೊಂಡಿದ್ದಾನೆ, ಹಾಗಾಗಿ ಇದೊಂದು ರಾಜನೀತಿಯ ವಿಶ್ವಕೋಶವೇ ಆಗಿದೆ ಎಂದು ತಿಳಿದುಬರುವುದು.

ಮುದ್ರಾಮಂಜೂಷ ಮತ್ತು ಶುಕ್ರನೀತಿ

ರಾಜನೀತಿಶಾಸ್ತ್ರಕಾರರಲ್ಲಿ ಶುಕ್ರಾಚಾರ್ಯರಿಗೆ ಮಹತ್ವದ ಸ್ಥಾನವಿದೆಯೆಂಬುದನ್ನು ಈ ಹಿಂದೆ ಗಮನಿಸಿದ್ದೇವೆ. ಐತಿಹಾಸಿಕ ದೃಷ್ಟಿಯಿಂದ ಶುಕ್ರಾಚಾರ್ಯರು ಕೌಟಿಲ್ಯನಿಗಿಂತ ಹಿಂದಿನವರು. ಹಾಗಾಗಿ ಕೌಟಿಲ್ಯನೂ ತನ್ನ ಅರ್ಥಶಾಸ್ತ್ರದಲ್ಲಿ ಶುಕ್ರಾಚಾರ್ಯರ ಮತವನ್ನು ಉದ್ಧರಿಸಿದ್ದುಂಟು. ಈಗ ಉಪಲಬ್ಧವಿರುವ ಶುಕ್ರನೀತಿಯು ಹಿಂದಿನ ಔಶನಸ ಸಿದ್ಧಾಂತಕ್ಕಿಂತ ಭಿನ್ನವಾದುದು ; ಇದು ಗುಪ್ತರಕಾಲ ಅಥವಾ ಅನಂತರ ಸಂಕಲಿತವಾದದ್ದು[47] ಎಂಬ ಅಭಿಪ್ರಾಯವೂ ಇದೆ. ಇದರಲ್ಲಿಯ ಐದು ಅಧ್ಯಾಯಗಳಲ್ಲಿ ರಾಜನೀತಿಯ ವಿವರವಾದ ಚಿಂತನೆಯಿದೆ.

ಅರ್ಥಶಾಸ್ತ್ರದಲ್ಲಿ ರಾಜನಿಗೆ ಇರಬೇಕಾದ ಮಂತ್ರಿಗಳ ಸಂಖ್ಯೆಯ ಬಗ್ಗೆ ಚರ್ಚಿಸುವಾಗ ನಾಲ್ಕು, ಆರು ಅಥವಾ ಅನುಕೂಲಕ್ಕೆ, ಸಂದರ್ಭಕ್ಕೆ ತಕ್ಕಷ್ಟು ಎಂದು ಹೇಳಿದ್ದರೆ ಇದರಲ್ಲಿ ಮಂತ್ರಿಗಳ ಸಂಖ್ಯೆ ಖಚಿತವಾಗಿ ಎಂಟು ಇರಬೇಕೆಂದು ಹೇಳಿದೆ [48]. ಅವರನ್ನು ಸುಮಂತ್ರ, ಪಂಡಿತ, ಮಂತ್ರಿ, ಪ್ರಧಾನ, ಸಚಿವ, ಅಮಾತ್ಯ, ಪ್ರಾಡ್ವಿವಾಕ ಮತ್ತು ಪ್ರತಿನಿಧಿಗಳೆಂದು ಹೆಸರಿಸಬೇಕೆಂದೂ, ವೇತನದ ದೃಷ್ಟಿಯಿಂದ ಇವರೆಲ್ಲರೂ ಸಮಾನರೆಂದೂ ಹೇಳಿದೆ.

ಮುದ್ರಾಮಂಜೂಷದಲ್ಲಿ ಸರ್ವಾರ್ಥಸಿದ್ಧಿಗೆ ಇದ್ದ ಮಂತ್ರಿಗಳ ಸಂಖ್ಯೆ ಎಂಟು ಎಂದು ಹೇಳಿದೆ. ಅಷ್ಟೇ ಅಲ್ಲ, ಸೇನಾಪತಿಗಳು ಎಂಟು, ಪರ್ವತೇಶ್ವರನಿಗಿದ್ದ ಕಂಚುಕಗಳು ಎಂಟು... ಹೀಗೆ ಹೇಳುವಾಗ ಆತ 'ಅರ್ಥಶಾಸ್ತ್ರ'ದ ಬದಲಾಗಿ 'ಶುಕ್ರನೀತಿ'ಯನ್ನು ಅನುಸರಿಸುತ್ತಿದ್ದಾನೆ ಎಂದು ಹೇಳಬಹುದಾಗಿದೆ.

ಇಲ್ಲಿಯ ಪ್ರಮುಖಪಾತ್ರವಾದ ಚಾಣಕ್ಯನು — ನಂದರು ತನಗೆ ಅಪಮಾನ ಮಾಡಿದಾಗ — 'ಭೃಗುನಂದನನಾದ ಶುಕ್ರಾಚಾರ್ಯನಿಂದ ಪ್ರಣೀತವಾದ ದಂಡನೀತಿ ಶಾಸ್ತ್ರಾಧ್ಯಯನದಿಂದ ನಾನು ಅವರಿಗೆ ಧರ್ಮಪುತ್ರನಾದುದು ಸತ್ಯವಾದರೆ ಭೃಗು ಕುಲೋತ್ಪನ್ನನಾದ ಪರಶುರಾಮನು ದುಷ್ಟ ಕ್ಷತ್ರಿಯರನ್ನು ಬಹುವಾಗಿ ಸಂಹರಿಸಿ ವಿಶ್ರಮಿಸಿಕೊಂಡಂತೆ ದುಷ್ಟ ಕ್ಷತ್ರಿಯರಾದ ನಿಮ್ಮನ್ನು ಸಂಹರಿಸಿ ತನ್ನ ಜುಟ್ಟನ್ನು ಕಟ್ಟುವೆನೆಂದು' ಶಪಥ ಮಾಡಿದ್ದನು. ಆತನ ಪ್ರಮುಖ ಶಿಷ್ಯನಾದ ಶಾರ್ಙ್ಗರವನು 'ಶುಕ್ರಾಚಾರ್ಯರೇ ಅವತರಿಸಿ ಬಂದಿದ್ದೀರಿ' ಎಂದು ಚಾಣಕ್ಯನಲ್ಲಿ ಹೇಳುವನು. ಆದ್ದರಿಂದ ಇದು ಶುಕ್ರಾಚಾರ್ಯ ಪ್ರಣೀತ ದಂಡನೀತಿಯನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಗ್ರಂಥವೂ ಹೌದೆಂದು ಹೇಳಬಹುದಾಗಿದೆ.

ಮುದ್ರಾಮಂಜೂಷ ಮತ್ತು ಕಾಮಂದಕನೀತಿಸಾರ

ಕಾಮಂದಕ ನೀತಿಸಾರವೂ ರಾಜನೀತಿಯನ್ನು ತಿಳಿಸುವ ಸಂಸ್ಕೃತ ಗ್ರಂಥವಾಗಿದೆ. ಇದರಲ್ಲಿ ಇಪ್ಪತ್ತು ಸರ್ಗಗಳಿದ್ದು 'ಇಂದ್ರಿಯ ಜಯ ಪ್ರಕರಣವು' ಎಂಬ ಮೊದಲ ಸರ್ಗದಲ್ಲಿ ಈ ಶ್ಲೋಕಗಳಿವೆ:

ಯಸ್ಯಾಭಿಚಾರ ವಜ್ರೇಣ ವಜ್ರಜ್ವಲನ ತೇಜಸ: ।
ಪಪಾತ ಮೂಲತ: ಶ್ರೀಮಾನ ಸುಪರ್ವಾ ನಂದಪರ್ವತ: ॥
ಏಕಾಕೀಮಂತ್ರ ಶಕ್ತ್ಯಾಯ: ಶಕ್ತ್ಯಾಶಕ್ತಿಧರೋಪಮ: ।
ಆಜಹಾರ ನೃಚಂದ್ರಾಯ ಚಂದ್ರಗುಪ್ತಾಯ ಮೇದಿನೀಂ ।
ನೀತಿಶಾಸ್ತ್ರಾಮೃತಂ ಶ್ರೀಮಾನ ಅರ್ಥಶಾಸ್ತ್ರಮಹೋದಧೇ: ।
ಯಂ ಉದ್ದಧ್ರೇ ನಮಸ್ತಸ್ಮೈ ವಿಷ್ಣುಗುಪ್ತಾಯವೇಧಸೇ ॥
ದರ್ಶನಾತ ತಸ್ಯ ಸುದೃಶೋ ವಿದ್ಯಾನಾಂ ಪಾರದೃಶ್ವನ: ।
ರಾಜವಿದ್ಯಾಪ್ರಿಯತಯಾ ಸಂಕ್ಷಿಪ್ತ ಗ್ರಂಥಮರ್ಥವತ ॥[49]

ಇದರಿಂದ, ದರ್ಪಿಷ್ಠರೂ ಅಧರ್ಮಿಗಳೂ ಆದ ನಂದರಾಜರನ್ನು ನಾಶ ಮಾಡಿ ಚಂದ್ರಗುಪ್ತನನ್ನು ರಾಜ್ಯದಲ್ಲಿ ಸ್ಥಾಪಿಸಿದ ವಿಷ್ಣುಗುಪ್ತನು ರಾಜರ ಅರ್ಥಸಿದ್ಧಿಗಾಗಿ ಅರ್ಥಶಾಸ್ತ್ರವನ್ನು ಹೇಳಿರುವನೆಂದು ತಿಳಿದುಬರುವುದು. ತಾನು ಆ ವಿಷ್ಣುಗುಪ್ತನು ಹೇಳಿರುವುದನ್ನು ಇಲ್ಲಿ ಸಂಗ್ರಹಿಸಿ ಬರೆಯುವೆನೆಂದು ಆತ ಹೇಳಿದ್ದಾನೆ[50]. ಈ ಗ್ರಂಥಕ್ಕೆ 'ಉಪಾಧ್ಯಾಯ ನಿರಪೇಕ್ಷಾ' ಎಂಬ ಸಂಸ್ಕೃತ ವ್ಯಾಖ್ಯಾನವಿರುವುದು (ಇದರ ಕನ್ನಡ ಟೀಕೆಯು

ಬಗ್ಗೆ ಈ ಹಿಂದೆ ಪ್ರಸ್ತಾಪಿಸಿದೆ). ಇದರಲ್ಲಿ ಅಲ್ಲಲ್ಲಿ ಕೌಟಿಲ್ಯ, ವಿಷ್ಣುಗುಪ್ತ, ಚಾಣಕ್ಯ, ಅನ್ಯದ್ಗುರು: (ತನ್ನಗುರು) — ಎಂದು ಬರೆದಿರುವುದನ್ನು ನೋಡಿದರೆ ಇದು ವಿಷ್ಣುಗುಪ್ತನ 'ಅರ್ಥಶಾಸ್ತ್ರ' ದ ಸಂಗ್ರಹವೆಂದು ಕಾಣುವುದೆಂದು ಶ್ರೀ ವಿ. ಹನುಮಂತಾಚಾರ ರವರು ಅಭಿಪ್ರಾಯ ಪಟ್ಟಿದ್ದಾರೆ[51]. ಆದ್ದರಿಂದ ಮುದ್ರಾಮಂಜೂಷಕಾರನು 'ಅರ್ಥಶಾಸ್ತ್ರ' ವನ್ನು ಅನುಸರಿಸಿದ್ದರಿಂದ 'ಕಾಮಂದಕನೀತಿಸಾರ' ವನ್ನು ಅನುಸರಿಸಿದಂತಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಶುಕ್ರಾಚಾರ್ಯ, ಚಾಣಕ್ಯ, ಕಾಮಂದಕ — ಇವರೆಲ್ಲರ ರಾಜನೀತಿ ವಿಷಯಕ ಗ್ರಂಥಗಳನ್ನು ಅಧ್ಯಯನ ಮಾಡಿದ್ದ ಕೆಂಪುನಾರಾಯಣನು, ಅವುಗಳನ್ನೆಲ್ಲ ಅಳವಡಿಸಿ ತನ್ನ ವಿನೂತನ ಕೃತಿಯನ್ನು ರಚಿಸಿದ್ದಾನೆನ್ನಬಹುದು.

<u>ವೈದ್ಯಶಾಸ್ತ್ರ ವಿಚಾರ:</u> 'ಮುದ್ರಾಮಂಜೂಷ' ದಲ್ಲಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಹೇಳಿಕೆಗಳನ್ನು ಹೇಳಲಾಗಿದೆ. ಇದೀಗ ಕವಿಯ ವಂಶದವರಲ್ಲಿ 'ಬಾಹಟ' ವೇ ಮೊದಲಾದ ವೈದ್ಯಗ್ರಂಥಗಳು ದೊರಕಿದ್ದು, ಅವೆಲ್ಲ ಕವಿಯ ಕಾಲದವೇ ಎಂದು ನಿಶ್ಚಿತವಾಗಿರುವುದರಿಂದ ಕವಿಗೆ ವೈದ್ಯಶಾಸ್ತ್ರದ ಪರಿಚಯ ಇತ್ತೆಂದು ಧಾರಾಳವಾಗಿ ಹೇಳಬಹುದಾಗಿದೆ. 'ತಂದೆ ಕೈಗೊಂಡ ವೃತ್ತಿಯನ್ನು ಬಾಲ್ಯದಿಂದಲೂ ನೋಡುತ್ತ ಬಂದಿರುವ ಮಕ್ಕಳು ತಾವೇ ತಾವಾಗಿ ಆ ವೃತ್ತಿಯನ್ನು ಕಲಿತುಕೊಳ್ಳುವುದು ಸ್ವಾಭಾವಿಕ. ವೈದ್ಯವಿದ್ಯೆಯಲ್ಲಂತೂ ಇದು ತೀರ ಸಹಜ. ಇದಕ್ಕೆ ಶಾಸನಾಧಾರಗಳೂ ಸಿಗುತ್ತವೆ.'[52] ಎಂದು ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಈ ಕವಿಯ ಮಗ ಆಸ್ಥಾನ ವೈದ್ಯರಾಗಿದ್ದ ವಿಚಾರವನ್ನು ಹಿಂದೆ ಗಮನಿಸಿದ್ದೇವೆ. ಈ ಕಾರಣದಿಂದಲೂ ಕವಿಗೆ ಆಯುರ್ವೇದ ಶಾಸ್ತ್ರ ಗ್ರಂಥಗಳ ನಿಕಟ ಪರಿಚಯ ಇತ್ತೆಂದು ಹೇಳಬಹುದಾಗಿದೆ.

ಈ ಗ್ರಂಥದಲ್ಲಿ ಉದ್ಧರಿಸಿ ಹೇಳಿದ ವೈದ್ಯಶಾಸ್ತ್ರ ವಿಚಾರ:

<u>1. ವಿಷ:</u> (ಅ) ಮಧು ಘೃತಗಳು ಸಮನಾಗಿ ಸೇವಿಸಿದರೆ ವಿಷವಾಗಿ ಪರಿಣಮಿಸುವುದು[53].

ನಂದನಿರ್ಯಾಣದ ನಂತರ ರಾಕ್ಷಸನು ಪರ್ವತರಾಜನಲ್ಲಿಗೆ ಹೋಗಿ ಆತನನ್ನು ಆಶ್ರಯಿಸಿದನೆಂಬ ವಿಚಾರವನ್ನು ತಿಳಿದಾಗ — ಅವರ ಆ ಸಂಬಂಧವು ಮಧು ಘೃತಗಳು ಸಮನಾಗಿ ಬೆರೆತಂತಾಯಿತು — ಎಂದು ಚಾಣಕ್ಯನು ಯೋಚಿಸುವನು. ಇದರಿಂದ ಚಂದ್ರಗುಪ್ತನು ತನ್ನ ರಾಜ್ಯವನ್ನು ಕಳೆದುಕೊಳ್ಳುವ ಪ್ರಸಂಗ ಬರಬಹುದು. ಹಾಗಾಗಲು ಬಿಡಬಾರದು ಎಂದು ನಿಶ್ಚಯಿಸಿ ಆಗ ಪರ್ವತರಾಜನನ್ನು ವಿಷಕನ್ಯೆಯ ಮೂಲಕ ಕೊಲ್ಲಲು ಚಾಣಕ್ಯನು ನಿರ್ಧರಿಸುತ್ತಾನೆ.

ಅ) 'ವಿಷದುಂಬನಿ' — ಎಂಬ ಶಿಲೆಯಿಂದ ನಿರ್ಮಿಸಿದ ಬಟ್ಟಲಲ್ಲಿ ಚೂರ್ಣವನ್ನು[53a] ಹಾಕಿ ಜಲವನ್ನು ಬಿಡಲು ಆ ಪುಡಿಯು ಶಿಲಾ ಸ್ಪರ್ಶದಿಂದ ವಿವರ್ಣವಾಗಿ ನೊರೆಗಟ್ಟಿ ಕುದಿದು ಸುತ್ತುತ್ತಿರಲು ಆ ಬಟ್ಟಲನ್ನು ತಲೆ ಕೆಳಗಾಗುವಂತೆ ಮಗುಚಿ ನೋಡಿದಾಗ ಒಂದು ಚೂರಾದರೂ ಕೆಳಗೆ ಬೀಳುವುದಿಲ್ಲ.

ವೈದ್ಯನೊಬ್ಬನು ಬಂದು ಅಹೋರಾತ್ರಿ ಚಂದ್ರಗುಪ್ತ ಚಾಣಕ್ಯರ ಬಳಿಯಲ್ಲಿ ಇರುತ್ತಿರಲು ಆತನನ್ನು ಪರೀಕ್ಷಿಸಲು ಚಾಣಕ್ಯನು ಚಂದ್ರಗುಪ್ತನ ಶರೀರದಲ್ಲಿ ಉಷ್ಣವು ಹೆಗ್ಗಳವಾಗಿ ಜ್ವರಬಂದಂತಾಗಿದೆ — ಪರೀಕ್ಷಿಸಬೇಕಾಗಿದೆ ಎನಲು ಆ ವೈದ್ಯನು ಯೋಗಚೂರ್ಣವನ್ನು ತೆರೆಯಲು ಅದನ್ನು ಚಾಣಕ್ಯನು 'ವಿಷದುಂಬನಿ' ಯಿಂದ ಪರೀಕ್ಷಿಸಿ, ಅದರಿಂದಲೇ ಆ ವೈದ್ಯನು ಮೃತನಾಗುವಂತೆ ಮಾಡುವನು.

ಇ) ವಿಷ ಸಂಪರ್ಕ ಪದಾರ್ಥ ಪರೀಕ್ಷೆ: ಚಂದ್ರಗುಪ್ತನನ್ನು ಕೊಲ್ಲುವ ಉದ್ದೇಶದಿಂದ ರಾಕ್ಷಸನು ವಿಷಕನ್ಯೆಯನ್ನು ಕಳುಹಿಸಿದ್ದನು. ಕ್ಷಪಣಕನು ಆಡಿದ ಮಾತಿನಿಂದ ಆಕೆಯು ವಿಷಕನ್ಯೆಯೆಂದು ತಿಳಿದ ಚಾಣಕ್ಯನು ಗಿಳಿ, ಪಾರಾವಾತ, ಚಕೋರ ಪಕ್ಷಿಗಳನ್ನು ಅವಳಿದ್ದೆಡೆಗೆ ತರಿಸುವನು. ಆ ಕನ್ಯೆಯನ್ನು ನೋಡಿದ ಗಿಳಿಗಳು 'ಕೋ!' ಎಂದು ಅರಚಿಕೊಂಡವು. ಪಾರಾವಾತ, ಚಕೋರ ಪಕ್ಷಿಗಳು — ತಮ್ಮ ಪಕ್ಕಗಳನ್ನೊದರುತ್ತ ಬರಬರನೆ ತಮ್ಮ ಕಣ್ಣುಗಳನ್ನು ತಿರುಗಿಸುತ್ತ ಆಗಲೇ ಮೃತವಾದವು.

ಈ) ವಿಷಕನ್ಯೆ: ವಿಷಕನ್ಯೆ ನಿರ್ಮಾಣದ ಬಗ್ಗೆ ಜ್ಯೋತಿಷ ಗ್ರಂಥಗಳು — ನಿರ್ದಿಷ್ಟ ಗ್ರಹಗಳು ನಿರ್ದಿಷ್ಟ ಸ್ಥಾನದಲ್ಲಿದ್ದಾಗ ಹುಟ್ಟಿದ ಕನ್ಯೆಯರು ವಿಷಕನ್ಯೆಯರಾಗುವರು — ಎಂದು ಹೇಳಿದ್ದರೆ ಇಲ್ಲಿ ಹೀಗೆ ಹೇಳಿದೆ : 'ಸಮುದ್ರದಲ್ಲಿ ಉದ್ಭವಿಸಿದ ವಿಷಮತ್ಸ್ಯಾಹಾರದಿಂದಲೇ ಜೀವಿಸುತ್ತಿರುವ ತಾಯಿತಂದೆಗಳ ಗರ್ಭದಲ್ಲಿ ಜನಿಸಿದ ಒಂದು ಹೆಣ್ಣು ಶಿಶುವಿಗೆ ಜರಣಾದಿ ಸಂಸ್ಕಾರದಿಂದ ಪಾದರಸವುಂ ಸ್ಪರ್ಶವೇಧಿಯುಂ ಮಾಡಿ ಬಾಲ್ಯಾರಭ್ಯ ಆ ಶಿಶುವಿಗೆ ವಯೋನುಗುಣವಾಗಿ ವಿಷಸೇವನೆಯಂ ಮಾಡಿಸಿ ಹನ್ನೆರಡು ವರುಷಗಳ ವಯಸ್ಸಾದ ಮೇಲೆ ಆ ಬಾಲೆಯ ಅಂಗ ಸ್ಪರ್ಶವಾದರೆ ವಿಷದೋಷದಿಂದ ಪ್ರಾಣಿಗಳು ಆಗಲೇ ಹತವಾಗುವವು'.

2. ಜ್ವರ: ಅ) 'ಜ್ವರವಿದ್ದವನಿಗೆ ಅಪಥ್ಯ ಸೇವನೆಯಿಂದ ನಾಭಿಯಲ್ಲಿ ಕುಟಿಲವಿದ್ದರೆ ಅದು ಜಾಗ್ರದಲ್ಲಿ ತೋರುವುದು'.

ನಂದನಾಶದ ನಂತರ ರಾಕ್ಷಸನ ಮನಸ್ಸಿನ ದ್ವೇಷವು ಕೆಲವೇ ದಿನಗಳಲ್ಲಿ ಪ್ರಕಟವಾಗುವುದು — ಎಂಬ ಸಂದರ್ಭದಲ್ಲಿ ಚಾಣಕ್ಯನು ಈ ಮೇಲಿನ ಉದಾಹರಣೆಯನ್ನು ಕೊಡುವನು.

ಆ) 'ಜ್ವರ ಬಂದವನಿಗೆ ದೋಷ ಸಾಂಕರ್ಯವೂ ಸನ್ನಿಪಾತವೂ ಅಪಥ್ಯ ಸೇವನೆಯೂ ಉಂಟಾದರೆ ಮಹೌಷಧಿಗಳಿಂದಾದರೂ ಆ ವ್ಯಾಧಿಯು ಅಸಾಧ್ಯವಾಗುವುದು'.

ನಂದರ ಸೇನಾಪತಿಗಳಲ್ಲಿ ಭೇದವನ್ನುಂಟುಮಾಡುವ ಉದ್ದೇಶದಿಂದ ಯುದ್ಧಮಧ್ಯದಲ್ಲಿ ಬಾಗುರಾಯಣನ ಬಳಿ ಬಂದ ಸಿದ್ಧಾರ್ಥಕನು — ನಂದರ ಸೋಲು ನಿಶ್ಚಿತ, ನೀನು ಯುದ್ಧ ಮಾಡದೇ ಹಾಗೆ ಸುಮ್ಮನಿರುವುದು ವಾಸಿ — ಎಂದು ಹೇಳುವ ಸಂದರ್ಭದಲ್ಲಿ ನಂದರ ದೋಷಗಳನ್ನು ದೇಹದಲ್ಲಿಯ ದೋಷಗಳಿಗೆ ಹೋಲಿಸಿ ಹೀಗೆ ಹೇಳುತ್ತಾನೆ.

ಇ) ' ಶರೀರದಲ್ಲಿ ಉಷ್ಣವು ಹೆಚ್ಚಳವಾಗಿ ಜ್ವರ ಬಂದಂತಾಗಿ ಅನ್ನದ ಅರೋಚಕತೆಯಿಂದ ಕಂಗೆಟ್ಟ ರೋಗಿಯ ಹಸ್ತವನ್ನು ಹಿಡಿದು ನಾಡಿಯ ಗತಿಗಳನ್ನು ನೋಡಿ ಒಳ್ಳೆಯ ಔಷಧವನ್ನು ಪ್ರಯೋಗಿಸಿ ಆರೋಗ್ಯವಾಗುವಂತೆ ಮಾಡಬೇಕು'.

ತಮ್ಮಲ್ಲಿಗೆ ಬಂದ ರಾಕ್ಷಸನ ಕಡೆಯ ವೈದ್ಯನನ್ನು ಪರೀಕ್ಷಿಸಲಿಕ್ಕಾಗಿ ಚಾಣಕ್ಯನು ವೈದ್ಯನಲ್ಲಿ ಹೀಗೆ ಹೇಳುತ್ತಾನೆ:

3. ಪಿತ್ತಾಧಿಕ್ಯ: ' ಪಿತ್ತಾಧಿಕ್ಯದಿಂದ ಅಗ್ನಿದೀಪನವು ತಪ್ಪಿ ಅರುಚಿಯುಂಟಾದದ್ದು ತಿಳಿದಾಗ, ಇದಕ್ಕಾಗಿ ವಿಶೇಷ ಪ್ರಬಲ ಮಾತ್ರೆಗಳನ್ನು ಪ್ರಯೋಗಿಸಕೂಡದು. ಕಲ್ಕವುಂ ಕೊಟ್ಟು ಸಮಾಧಾನ ಮಾಡಬೇಕು.

ಚಂದ್ರಗುಪ್ತನನ್ನು ಕೊಲ್ಲಬೇಕೆಂದು ಬಂದಿದ್ದ ರಾಕ್ಷಸನ ಕಡೆಯ ವೈದ್ಯನು ಚಾಣಕ್ಯನಿಗೆ ತನ್ನಲ್ಲಿ ವಿಶ್ವಾಸ ಹುಟ್ಟಬೇಕೆಂಬ ಉದ್ದೇಶದಿಂದ ಹೇಳಿದ ಮಾತಿದು.

4. ಸಾಂಕರ್ಯದೋಷ[53ಎ]: ' ಉಭಯ ಸೇನೆಗಳು ಒಂದೇ ಕಡೆ ನಿಂತರೆ ಕ್ಷಾಮವೂ ಕ್ಷುದ್ರ ರೋಗೋಪದ್ರವವೂ ತಟ್ಟುವ ಸಾಧ್ಯತೆಯಿದ್ದು ಇದರಿಂದ ಪ್ರಜಾಕ್ಷೋಭೆಯುಂಟಾಗಿ ಪ್ರಕೃತಿಗಳಿಗೆ ಕೇಡು ಸಂಭವಿಸುವುದು. ಇದರಿಂದ ಅರಸುಗಳಿಗೆ ಹಾನಿಯು'

ನಂದರನ್ನು ಸಂಹರಿಸಿಯಾದ ನಂತರ ಪರ್ವತರಾಜನ ಸೇನೆಯು ಪಾಟಲೀಪುರದ ಬಳಿಯಿರುವುದು ಉಚಿತವಲ್ಲವೆಂದು ಯೋಚಿಸಿದ ಚಾಣಕ್ಯನು ಸೇನಾಪತಿಯಾದ ಶೇಖರನನ್ನು ಕರೆದು ಚತುರಂಗ ಬಲವು ಅವರವರ ದೇಶಕ್ಕೆ ತೆರಳಲು ಸೂಚನೆ ನೀಡುವಾಗ ಮೇಲಿನಂತೆ ಹೇಳುತ್ತಾನೆ.

5. ಮರಣಾಸನ್ನ ಸ್ಥಿತಿ: ' ಶ್ಲೇಷ್ಮ ರಭಸದಿಂದ ಶುಷ್ಕವಾಗುತ್ತಿರುವ ಗಂಟಲಿಗೆ ಆಪ್ಯಾಯಮಾನವಾಗುವಂತೆ ಶೀತಲಗಳಾದ ಜಲ ಬಿಂದುಗಳನ್ನು ಬಿಡಬೇಕು'.

ತಂದೆಯಾದ ಪರ್ವತರಾಜನು ಸಾಯುವ ಸಂದರ್ಭದಲ್ಲಿ ಪುತ್ರನಾದ ತನಗೆ — ಆತನ ಕೊನೆ ಕಾಲದಲ್ಲಿ ತೀರ್ಥೋದಕವನ್ನು ಕೊಡುವ ಭಾಗ್ಯವೂ ಇಲ್ಲವಾಯಿತಲ್ಲ — ಎಂದು ಮಲಯಕೇತುವು ರೋದಿಸುವ ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ.

ಇತರ: ' ದೇಹದಲ್ಲಿ ಅಡಗಿರುವ ಸಾಂಗಿಕ ವ್ರಣವು ಸಮಯಾಂತರದಲ್ಲಿ ಪ್ರಕೋಪಿಸುವುದು. ಆದಾನ ಪ್ರದಾನವನ್ನರಿತು ಮಾಡುವ ಚಿಕಿತ್ಸೆಯಿಂದ ಆರೋಗ್ಯವುಂಟಾಗುವುದು'. ' ದೇಹದಲ್ಲಿ ಹುಟ್ಟಿದ ರೋಗವು ಅಪಥ್ಯ ಸೇವಾ ಸಮಯದಲ್ಲಿ ವೃದ್ಧಿಯನ್ನು ತಾಳಿ ಶರೀರವನ್ನು ನಾಶ ಮಾಡುವುದು' — ಇವೇ ಮೊದಲಾದ ಹೇಳಿಕೆಗಳಿಂದ ಕವಿಯು ವೈದ್ಯಶಾಸ್ತ್ರವನ್ನು ಚೆನ್ನಾಗಿ ಅರಿತಿದ್ದನೆಂದು ತಿಳಿದುಬರುವುದು.

ಜ್ಯೋತಿಶ್ಶಾಸ್ತ್ರ ವಿಚಾರವು: ಕವಿಯು ಜ್ಯೋತಿಶ್ಶಾಸ್ತ್ರದ ಹಲವು ಪಾರಿಭಾಷಿಕ ಶಬ್ದಗಳನ್ನು ಬಳಸಿದ್ದಾನೆ. ಕೆಲವೊಮ್ಮೆ ಶ್ಲೇಷೆಯಿಂದ ಅನ್ಯಾರ್ಥವನ್ನು ಧ್ವನಿಸುವುದು ಅವನ ಉದ್ದೇಶವಾದರೂ ಜ್ಯೋತಿಶ್ಶಾಸ್ತ್ರದಲ್ಲಿ ಆತ ಪಾರಂಗತನೆಂಬುದಂತೂ ಸತ್ಯ.

1. ಪರ್ವತರಾಜನಲ್ಲಿಗೆ ಚಾಣಕ್ಯನು ಚಂದ್ರಗುಪ್ತನೊಡಗೂಡಿ ಬಂದಾಗ ಅಲ್ಲಿಯ ದ್ವಾರಪಾಲಕರು — ' ಚಂದ್ರಾಂಗಾರಕಯುತಿಯಂತೆ' ಬಂದರೆಂದು ಬಣ್ಣಿಸುತ್ತಾರೆ. ' ಬೃಹಜ್ಜಾತಕ' ಮತ್ತು ' ಜಾತಕಾಭರಣ' ಗಳೆಂಬ ಜ್ಯೋತಿಷ ಗ್ರಂಥಗಳ ಹೇಳಿಕೆಗಳಂತೆ ಇದು ಕುಟಿಲಯೋಗವಾಗುವುದು.

ಪರ್ವತರಾಜನು ಅವರಿಬ್ಬರು ಬಂದುದನ್ನು ' ಸೂರ್ಯ ಚಂದ್ರಯೋಗದಂತಾಯಿತು' ಎನ್ನುತ್ತಾನೆ. ಈ ಯೋಗವು ಕೂಡ ಕೂಟಕ್ರಿಯೆಯಲ್ಲಿ ವಿಚಕ್ಷಣತೆಗೆ ಪ್ರಸಿದ್ಧವಾಗಿರುವುದು.

ಭವಿಷ್ಯದಲ್ಲಿ ಪರ್ವತರಾಜನಿಗೆ ಆದದ್ದೂ ಹಾಗೆಯೇ. ಮೇಲ್ನೋಟಕ್ಕೆ ಗ್ರಹಗಳಿಬ್ಬರ ಯೋಗ, 'ಏನೋ ಒಳ್ಳೆಯದನ್ನು ಸೂಚಿಸುವುದೆಂದು ಕಂಡುಬಂದರೂ ಕವಿಯ ಹೇಳಿಕೆ ಭವಿಷ್ಯವನ್ನು ಸೂಚಿಸುವುದೂ ಆಗಿದೆ.

2. ಅಮಾತ್ಯ ರಾಕ್ಷಸನಿಗೆ ಜ್ಯೋತಿಷದಲ್ಲಿ ವಿಶೇಷ ಆಸಕ್ತಿ. ತನ್ನನ್ನು ಹೊಸದಾಗಿ ಆಶ್ರಯಿಸಿದ ಕ್ಷಪಣಕನನ್ನು ಶತ್ರುಗಳ ಆಗಮನದ ಬಗ್ಗೆ ಪ್ರಶ್ನೆಯನ್ನು ಹೇಳಬೇಕು — ಎನ್ನುತ್ತಾನೆ. ಆಗ ಆತನು — ಈ ಲಗ್ನಕ್ಕೆ ಶತ್ರುಸ್ಥಾನದ ಗ್ರಹವನ್ನು ಶತ್ರುಗ್ರಹವು ನೋಡುವುದರಿಂದ ನಿಮ್ಮ ಮೇಲೆ ದಂಡೆತ್ತಿ ಬರುವ ಶತ್ರುವು ಜೀವವಂತನಾಗಿ ಹಿಂದಿರುಗಿ ಹೋಗಲಾರನು. ನಿಮಗೆ ಕಾರ್ಯಾವಸಾನದಲ್ಲಿ ಜಯಲಾಭವುಂಟು. ಬುಧಾದಿ ಪಂಚಗ್ರಹಗಳು ಲಗ್ನಕ್ಕೆ ಭೇದಫಲ ಪ್ರದಾಯಕಗಳಾದುದರಿಂದ ಶತ್ರುವಿಗೆ ಸಹಾಯರಾಗಿ ಬಂದವರು ಭೇದಕ್ಕೆ ಒಳಗಾದಾರು. ಆಗ ದಂಡೋಪಾಯಾಚರಣೆಯಿಂದ ಶತ್ರು ಸಂಹೃತನಾದಾನು' ಎನ್ನುವನು. ಮತ್ತೆ ಶುಭಲಗ್ನದಲ್ಲಿ ಶತ್ರುಪಲಾಯನ ಜಾಪಾರಂಭವಾಗುವಂತೆ ಮಾಡಿಸಿದರೆ ಅನಿಷ್ಟ ನಿವೃತ್ತಿಯಾಗುವುದು' ಎನ್ನುವನು.

ಇಲ್ಲಿ ಶತ್ರುಸ್ಥಾನ, ಗ್ರಹ, ಬುಧಾದಿ ಪಂಚಗ್ರಹಗಳು, ಜಯಲಾಭ — ಮೊದಲಾದವು ಜ್ಯೋತಿಷದ ಪಾರಿಭಾಷಿಕ ಶಬ್ದಗಳೇ. ಪರ್ವತರಾಜ ಜೀವಂತವಾಗಿ ಹೋಗುವುದಿಲ್ಲ. ಕೊನೆಯಲ್ಲಿ ನಿಮಗೆ ಅಮಾತ್ಯ ಪದವಿ ಸಿಗುತ್ತದೆ. ಬುಧಾದಿ ಪಂಚಗ್ರಹಗಳು (ಚಾಣಕ್ಯರೇ ಮೊದಲಾದವರು) ಭೇದವನ್ನಾಚರಿಸುವುದರಿಂದ ಚಿತ್ರವರ್ಮಾದಿಗಳು ಭೇದಕ್ಕೆ ಒಳಗಾಗುವರು. ದಂಡೋಪಾಯದಿಂದ ನಂದರು ಸಾಯುವರು —

ಎಂದು ಶ್ಲೇಷೆಯಿಂದ ಆತನು ಹೇಳುವ ಮಾತಿದು.

3. ಯುದ್ಧಕ್ಕೆ ಹೊರಟು ನಿಂತಾಗ ರಾಕ್ಷಸನು — 'ಯುದ್ಧಕ್ಕೆ ತುಲಾ ಲಗ್ನ ನಿಶ್ಚಯವಾಗಿದೆ. ಲಗ್ನಬಲವೆಂತಿರುವುದು?' ಎಂದು ಪ್ರಶ್ನಿಸುವನು. ಅದಕ್ಕೆ ಉತ್ತರವಾಗಿ ಜೀವಸಿದ್ಧಿಯು — 'ಅಮಾತ್ಯರೇ, ವೃಶ್ಚಿಕ ಲಗ್ನವು ಅದಕ್ಕಿಂತಲೂ ಉತ್ತಮವು. ಲಗ್ನಾಧಿಪತಿಯು ಶತ್ರುಸ್ಥಾನವಂ ನೋಡುತ್ತಿರುವುದರಿಂದ ಶತ್ರುಕ್ಷಯವಾಗುತ್ತದೆ' ಎನ್ನುವನು.

ಇಲ್ಲಿಯೂ ಅಷ್ಟೇ. ತುಲಾ ಲಗ್ನ ಅಂದರೆ ತಕ್ಕಡಿ. ಯಾವ ಕಡೆ ಜಯ ಲಭಿಸುವುದೆಂದು ಹೇಳುವುದು ಕಷ್ಟ. ಅದೇ ವೃಶ್ಚಿಕವೆಂದರೆ ಚೇಳು. ಶತ್ರುವಿನಿಂದ ಕಡಿಸಿಕೊಂಡು ಲಗ್ನಾಧಿಪತಿಯು ಅಂದರೆ ನಂದರ — ನಾಶವಾಗುವುದೆಂದು ಆತ ವಿಡಂಬಿಸಿ ಹೇಳುತ್ತಾನೆ.

4. ಯುದ್ಧಕ್ಕೆ ಹೊರಡಲು ಮುಹೂರ್ತ: ಪರ್ವತರಾಜನು ತನ್ನ ಮಂತ್ರಿಯಾದ ಶಬರವರ್ಮನಿಗೆ — 'ಬುಧವಾರ ದಿವಸ ಸೇನೆಯು ಹೊರಗಿ ಶರಾವತಿ ನದಿ ತೀರದಲ್ಲಿ ಇಳಿಯುವಂತೆ ನೇಮಿಸುತ್ತಾನೆ. ಹೊನ್ನ ಗಟ್ಟದಲ್ಲಿದ್ದ ಮದಗಜ ಸೇನೆಯನ್ನು ಕುಲೂತಪತಿಯ ಸೈನಿಕರು ಅಪಹರಿಸಿದ್ದು ಬುಧವಾರವೇ. ನಂದರು ರಾಕ್ಷಸನ ಸಮೇತವಾಗಿ ಪುರದಿಂದ ಯುದ್ಧೋನ್ಮುಖರಾಗಿ ಹೊರಟು ಬಂದದ್ದು ಬುಧವಾರ. ಚಂದ್ರಗುಪ್ತನಿಗೆ ರಾಜ್ಯಾಭಿಷೇಕಕ್ಕೆ ನಿಶ್ಚಿತವಾದ ದಿನವೂ ಬುಧವಾರ. — ಹೀಗೆ ಇಲ್ಲಿ ಯುದ್ಧಾರಂಭ, ಮತ್ತು ಪಟ್ಟಾಭಿಷೇಕಕ್ಕೆ ಬುಧವಾರ[54] ವನ್ನು ಪ್ರಶಸ್ತ ದಿನವಾಗಿ ಬಹಳ ಸಲ ಹೇಳಿದೆ.

5. 'ಅಶ್ವಿನೀ ನಕ್ಷತ್ರ ಕಳೆದು ಬರುವ ಸಮಯವಾದ್ದರಿಂದ ಬೇಗನೇ ಕನ್ಯೆಯನ್ನು ಕರೆದುಕೊಂಡು ಹೋಗಿ ರಾಜನ ಶಯನಗೃಹಕ್ಕೆ ಒಪ್ಪಿಸು' ಎಂದು ಚಾಣಕ್ಯನು ಜೀವಸಿದ್ಧಿಯಲ್ಲಿ ಹೇಳುವನು.

ಯಾವುದೇ ಒಳ್ಳೆಯ ಕಾರ್ಯಕ್ಕೆ ಭರಣಿ, ಕೃತ್ತಿಕಾ ನಕ್ಷತ್ರಗಳು ಒಳ್ಳೆಯದಲ್ಲವೆಂಬ ನಂಬಿಕೆಯಿರುವುದರಿಂದ ಅಶ್ವಿನೀ ನಕ್ಷತ್ರ ಕಳೆದುಹೋಗುವದಕ್ಕಿಂತ ಮುಂಚೆಯೇ ಈ ಕೆಲಸ ಆಗಿಹೋಗಲಿ ಎಂಬ ಭಾವ ಇಲ್ಲಿ ಇದ್ದಂತಿರುವುದು.

ಜ್ಯೋತಿಶ್ಶಾಸ್ತ್ರಕ್ಕೂ ನಂಬಿಕೆಗೂ ಹತ್ತಿರದ ಸಂಬಂಧವಿರುವುದು ಸ್ವಾಭಾವಿಕ. ಆ ಕಾಲದಲ್ಲಿದ್ದ ಇನ್ನಷ್ಟು ನಂಬಿಕೆಗಳನ್ನು ಸಮಕಾಲೀನ ವಿಚಾರದಲ್ಲಿ ತಿಳಿಸಲಾಗುವುದು.

ಶಾಲಿಹೋತ್ರ (ಪಶುವೈದ್ಯ ವಿಜ್ಞಾನ): ಈ ಕೃತಿಯಲ್ಲಿ ಪಶುವೈದ್ಯ ವಿಜ್ಞಾನಕ್ಕೆ ಸಂಬಂಧಪಟ್ಟ ಹಲವು ಹೇಳಿಕೆಗಳಿವೆ.

ಪರ್ವತರಾಜನು, ಚಾಣಕ್ಯನು ಚಂದ್ರಗುಪ್ತನನ್ನು ಪಕ್ಷೀಕರಿಸಿದ ಸಂದರ್ಭವನ್ನು ವಿಚಾರಿಸುತ್ತಾ,

ನಂದರ ಮೇಲೆ ಸಿಟ್ಟುಗೊಂಡದ್ದು ಸರಿಯೇ? ಎಂದು ಕೇಳಿದಾಗ ಚಾಣಕ್ಯನು — ' ಕೋಪವಿಲ್ಲದವನು ಹೆಣ್ಣುಕುರಿಯಂತೆ ಲೋಕದ ಜನಕ್ಕೆ ಸುಲಭನಾದಾನು' ಎನ್ನುವನು. ಎಲ್ಲಾ ಜಾತಿಯ ಪ್ರಾಣಿಗಳಲ್ಲಿ ಹೆಣ್ಣು, ಮೈಥುನಾಪೇಕ್ಷಿಯಾಗಿ ಬರುವ ಗಂಡಿಗೆ ಮೊದಲು ತನ್ನ ಪ್ರತಿಭಟನೆಯನ್ನು ತೋರಿಸಿ, ಮತ್ತೆ ಒಪ್ಪುವುದಾದರೆ ಹೆಣ್ಣು ಕುರಿ ಮಾತ್ರ ಹಾಗೆ ಮಾಡದೆ ಗಂಡಿಗೆ ಒಪ್ಪಿಗೆ ಕೊಡುವುದಂತೆ. ಅದಕ್ಕಾಗಿ ಇಲ್ಲಿ ಸಿಟ್ಟಿಲ್ಲದ ಮನುಷ್ಯರನ್ನು ಹೆಣ್ಣು ಕುರಿಗೆ ಹೋಲಿಸಿದೆ.

ನಂದರೊಂದಿಗೆ ವ್ಯರ್ಥವಾಗಿ ವೈರ ಕಟ್ಟಿಕೊಳ್ಳುವ ಈ ಯುದ್ಧ ಬೇಡವೆಂದು ವೃದ್ಧನಾದ ಮಂತ್ರಿ ಉಲೂಕನು ಪರ್ವತರಾಜನಿಗೆ ಹೇಳುವ ಸಂದರ್ಭದಲ್ಲಿ — ' ಕಾರ್ಯಾರ್ಥಿಗಳಾದವರು ತಮ್ಮ ಕಾರ್ಯಕ್ಕೋಸ್ಕರವಾಗಿ ಪರರಿಗೆ ವಿಶೇಷ ಲಾಭವನ್ನುಂಟು ಮಾಡುವೆವೆಂದು ಹೇಳಿ ಕಾರ್ಯವಾದ ಬಳಿಕ ಅಜಯುದ್ಧದಂತೆ ಆಚರಿಸುವುದುಂಟು' ಎನ್ನುವನು. ಇಲ್ಲಿ ಅಜಯುದ್ಧವೆಂದರೆ ವ್ಯರ್ಥ ಕಾಲಕ್ಷೇಪ.

ರಾಕ್ಷಸನಿಂದ ಹೊರಡುಬ್ಬ ಮಾಡಿ ನಂದರೊಂದಿಗೆ ಶಬರನು ಯುದ್ಧ ಮಾಡುತ್ತಿರುವಾಗ ಅವರು ಇನ್ನೂ ಸತ್ತಿಲ್ಲವೆಂಬ ಸುದ್ದಿ ಕೇಳಿದ ಚಾಣಕ್ಯನು ' ಹಸಿದ ಹೆಬ್ಬುಲಿಯಂತೆ, ಹೆಪೂರ್ಜದ ಉರಗದಂತೆ' ಅತಿ ಕೋಪಾತುರನಾದನು.

ನಂದರಿಂದ ಬೇರ್ಪಡಿಸಿದ ರಾಕ್ಷಸನನ್ನು ಚಂದ್ರಗುಪ್ತನ ಮಂತ್ರಿಯನ್ನಾಗಿ ಮಾಡಬೇಕೆಂಬ ತನ್ನ ವಿಚಾರವನ್ನು ತಿಳಿಸುವಾಗ ಚಾಣಕ್ಯನು ' ಅರಣ್ಯದಲ್ಲಿರುವ ಗಜವನ್ನು ದಾಪಿದಾನೆಗಳಿಂದ ವಂಚನೆಯಿಂ ಹಿಡಿತಂದು ಪಟ್ಟದಾನೆಯಂ ಮಾಡುವಂತೆ' ಕಾರ್ಯಾಚರಿಸುವೆನೆನ್ನುವನು.

ಚಂದ್ರಗುಪ್ತ ಚಾಣಕ್ಯರು ಕಪಟ ಕಲಹವನ್ನಾಡಲು ಸಿಟ್ಟುಗೊಂಡಂತೆ ಚಾಣಕ್ಯನು ರಾಜಸಭೆಯಿಂದ ಹೊರಟುಹೋಗುವನು. ಆಗ ಚಂದ್ರಗುಪ್ತನು ಅವಸರದವನಂ ಕರೆದು — ' ವೈತಾಳಿಕನೇ, ಚಾಣಕ್ಯನನ್ನು ಮಂತ್ರಿ ಪದದಿಂದ ತೆಗೆಯಲಾಗಿದೆ. ಆದುದರಿಂದ ಇನ್ನು ಅಧಿಕಾರಿಗಳು ಆತನನ್ನು ಕಾಣಿಸಿಕೊಳ್ಳುವ ಕೆಲಸವಿಲ್ಲೆಂದು ಸಾರಿಸತಕ್ಕದ್ದು' ಎನ್ನುವನು. ಆಗ ಆ ವೈತಾಳಿಕನು —' ಅಶಿಕ್ಷಿತವಾದ ಗಜವು ಮಾವುತನಂ ನಿರಾಕರಿಸಿದರೆ ಅದು ಅವನ ದೋಷವಲ್ಲದೆ ಗಜನಿಷ್ಠದೋಷವೆಂತಲ್ಲವೋ — ಅದೇ ರೀತಿ ಅರಸನಾದವನು 'ಮಂತ್ರಿಯಂ ನಿರಾಕರಿಸುವುದು ಸಚಿವಗತ ದೋಷವಲ್ಲದೆ ಪ್ರಭುನಿಷ್ಠ ದೋಷವಲ್ಲ' ವೆಂದು ಯೋಚಿಸುವನು.

ಇಲ್ಲಿ ಮಾವುತನಾದವನು ಅಶಿಕ್ಷಿತ ಗಜಕ್ಕೆ ಸರಿಯಾದ ಶಿಕ್ಷಣ ಕೊಡಬೇಕು. ಇಲ್ಲವಾದರೆ ಅದು ಆತನ ತಪ್ಪಾಗುವುದು — ಎಂಬ ಅಭಿಪ್ರಾಯವಿದೆ.

ಈ ಮೇಲಿನ ಉದಾಹರಣೆಗಳಲ್ಲದೇ ಇನ್ನೂ ಕೆಲವು ಮಾದರಿಗಳು ಇಂತಿವೆ:

' ಕಶಾಘಾತ ಭೀತಿಯು ಅಶ್ವಶಿಕ್ಷೆಯಲ್ಲೀ ಇದ್ದವು'. ' ಪುರಜನರು ತುರಗಖುರರವದಿಂದ

ಬಧಿರೀಕೃತರಾಗುತ್ತಿದ್ದರು. 'ಗಜ ಘಟಾಗಂಡ ಮಂಡಲ ನಿಸ್ಸೃತ ಮದಧಾರೆಯಿಂದ ರಾಜಮಾರ್ಗಗಳು ಪಂಕಿಲವಾಗಿದ್ದುವು', 'ಗಜಸಿಂಹವೈರ', 'ಕಲ್ಲಿಟ್ಟು ಕೆಣಕಿದ ವ್ಯಾಘ್ರನಂತೆ ಕೋಪೋದ್ದೀಪಿತನಾಗುವುದು', 'ಮದಗಜಗಳೊಡನೆ ಸೆಣಸಬೇಕೆಂಬ ಕತ್ತೆ ಕಿರುಬನಂತೆ' (ವ್ಯರ್ಥ ಪ್ರಯತ್ನ ಮಾಡುವುದು), 'ಆಹಾರವಂ ತೋರಿಸಿ ಮಡುವುಗಳ ದೆಸೆಯಿಂದ ಮಹಾಮತ್ಸ್ಯಗಳಿಂ ಹೊರ ತೆಗೆಯುವಂತೆ' (ನಂದರನ್ನು ರಾಕ್ಷಸನಿಂದ ಬೇರ್ಪಡಿಸುವುದು), 'ಸ್ಪರ್ಶಿಸಿದರೆ ಹಿಮ್ಮೆಟ್ಟುವ ಕುಳೀರಕಗಳಂತೆ' (ಮಾಸೋಪವಾಸಿಯ ಶಿಷ್ಯರು ಹಾಗೆ ಕಾಣಿಸಿಕೊಳ್ಳುತ್ತಿದ್ದರು), 'ಹೆಣ್ಣಾನೆಯ ನಿಮಿತ್ತವಾಗಿ ಕಾದಾಡುವ ಪುನ್ನಾಗಗಳಂತೆ' (ರಾಜ್ಯಲಕ್ಷ್ಮಿಗಾಗಿ ಹೋರಾಡುವ ಚಾಣಕ್ಯ ರಾಕ್ಷಸರು), 'ನಾಯಿಗಳ ಹಿಂಡಿನಲ್ಲಿ ಸಿಕ್ಕಿ ಹಲ್ಲು ಕಿರಿಯುವ ವಾನರನಂತೆ' (ತನ್ನ ಸ್ಥಿತಿಯೆಂದು ಪರ್ವತರಾಜನು ವ್ಯಥೆ ಪಡುವುದು).

ಈ ಮೇಲಿನ ಉದಾಹರಣೆಗಳೆಲ್ಲ ಜನ ಜೀವನಕ್ಕೆ ಹತ್ತಿರದವುಗಳಾದರೂ 'ಶಾಲಿಹೋತ್ರ' ಶಾಸ್ತ್ರಾಧ್ಯಯನದಿಂದಲೇ ಒಡಮೂಡಿದ ಉಕ್ತಿಗಳಾಗಿವೆ.

<u>ಯೋಗಶಾಸ್ತ್ರ:</u> ಚಂದ್ರಗುಪ್ತನ ರಾಜ್ಯದಲ್ಲಿ ಇರುವುದಕ್ಕೆ ಇಚ್ಛಿಸದ ಸರ್ವಾರ್ಥ ಸಿದ್ಧಿಯು ಋಷ್ಯಾಶ್ರಮಗಳಿರುವ ಪುಣ್ಯಾರಣ್ಯವನ್ನು ಸೇರುವನು. ಅಲ್ಲಿ ಗಂಗಾ ನದೀ ತೀರದಲ್ಲಿ ಋಷಿ ಮುನಿಗಳೊಂದಿಗೆ ಕೆಲವು ಕಾಲ ಕಳೆದು ಮತ್ತೆ ರಾಜಯೋಗದಿಂದ ಸಾಯುವ ವಿವರ ಇಂತಿದೆ:

ಗಂಗಾ ತೀರದಲ್ಲಿ ಲತಾಗೃಹದಲ್ಲಿ ದರ್ಭಾಸನವನ್ನು ಹಾಕಿ ಕುಳಿತು, ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ, ಶುದ್ಧಸ್ನಾನಗಳನ್ನು ಮಾಡಿ, ತನ್ನ ಗುರುಗಳು ಉಪದೇಶಿಸಿದ ಯೋಗ ರಹಸ್ಯವನ್ನು ನೆನೆದು, ಮನಸ್ಸಿನಲ್ಲಿ ಆಚಾರ್ಯ ಚರಣಗಳಿಗಭಿವಂದಿಸಿ, ಸ್ಥಿರಾಸನಮಂ ಬಲಿದು, ಶ್ವಾಸವಂ ನಿರೋಧಿಸಿ, ನಿಶ್ಚಲ ಚಿತ್ತದಿಂದ ಯೋಗಾರೂಢನಾಗಿ ಸುಷುಮ್ನಾ ಮಾರ್ಗದಿಂದ ಧ್ಯಾನಧಾರಣವಂ ಮಾಡಿ ನಿರ್ವಿಕಲ್ಪ ಬ್ರಹ್ಮದಲ್ಲಿ ಚಿತ್ತವೇಕರಸವಾಗಿ ಪ್ರಾಣವಾಯುವು ತನ್ನ ನಾಡೀಪಥದಿಂದ ಊರ್ಧ್ವಕ್ಕೆ ನಡೆದು ನೆತ್ತಿಯಂ ಭೇದಿಸಿಕೊಂಡು ಬ್ರಹ್ಮದಲ್ಲಿ ಲೀನವಾಗಲು ಪುನಃ ಭವಕ್ಕೆ ಬಾರದಂತೆ ಮುಕ್ತಿಯಂ ಹೊಂದಿದನು.

ಕಣ್ಣಿಗೆ ಕಟ್ಟುವಂತೆ ಇಂತಹ ವರ್ಣನೆಯನ್ನು ಮಾಡಬೇಕಾದರೆ ಆತ ಈ ಶಾಸ್ತ್ರದಲ್ಲಿ ನಿಷ್ಣಾತನೆಂದೇ ಹೇಳಬಹುದಾಗಿದೆ.

<u>ಶಿಲ್ಪಶಾಸ್ತ್ರ:</u> ಹಿಂದಿನ ಕಾಲದಲ್ಲಿ ಉಳಿದ ಶಾಸ್ತ್ರಗಳಂತೆ ಶಿಲ್ಪಶಾಸ್ತ್ರದ ಅಧ್ಯಯನವೂ ರಾಜ, ಮಂತ್ರಿ, ಆಸ್ಥಾನಿಕರಿಗೆ ಅವಶ್ಯವಾಗಿತ್ತು. ಒಬ್ಬ ರಾಜನ, ಮಂತ್ರಿಯ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ನೆರೆಹೊರೆಯ ರಾಜರು ಕಪಟ ಶಿಲ್ಪ ಮಾಡಿ ಕಳುಹಿಸಿ ಪರೀಕ್ಷಿಸುವ ಪದ್ಧತಿಯೂ ಇದ್ದಿತ್ತು. ನಮ್ಮ ಕವಿಯು ಈ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಹೀಗೆ ವಿವರಣೆಗಳನ್ನು ಕೊಡುವನು.

1. ತಮ್ಮಿಂದ ಅಧಿಕರಾದಾರು ಎಂಬ ಕಾರಣಕ್ಕಾಗಿ ನಂದರು ಮೌರ್ಯರನ್ನು ಸಂಹರಿಸಿದರೂ ದೂರದ ಪ್ರಯಾಗ

ದಲ್ಲಿದ್ದ ಸರ್ವಾರ್ಥಸಿದ್ಧಿಗೆ ಬರೆದ ಪತ್ರದ ವಿವರ ಹೀಗಿದೆ:—

ಮೌರ್ಯಪುತ್ರರು ಒಬ್ಬರೊಬ್ಬರು ಬಡಿದಾಡುತ್ತ, ಹೊಣಗಾಡುತ್ತಾ, ಪಾಕಶಾಲೆಯಲ್ಲಿದ್ದ ಜೀರ್ಣವಾದ ಸ್ತಂಭಗಳಿಗೆ ಬೇರೆ ಕಂಬಗಳನ್ನು ಕೊಡುವುದಕ್ಕೆ ನಿಲ್ಲಿಸಿದ್ದ ಸನ್ನೇ ಮರಗಳಿಗೆ ಬಂಧಿಸಿದ್ದ ಹಗ್ಗಗಳನ್ನು ಹರಿದು ಆ ಮರಗಳಿಗೆ ಕೈಯನ್ನು ನೀಡಲು ಅವು ಸಡಿಲ ಬೀಳುವಷ್ಟರಲ್ಲಿಯೇ ಭಾರವಾಸಿಯಾದ ಮೇಲಿನಂತಸ್ತು ಮುರಿದು ಮೇಲೆ ಬಿದ್ದುದರಿಂದ ಚಂದ್ರಗುಪ್ತನೊಬ್ಬನ ಹೊರತು ಮಿಕ್ಕವರೆಲ್ಲರೂ ಸತ್ತು ಹೋದರು.

2. ರಾಕ್ಷಸನಿಂದ ಮೊದಲು ನೇಮಿಸಲ್ಪಟ್ಟಿದ್ದ ದಾರುವರ್ಮನೆಂಬ ಶಿಲ್ಪಿಯು ರಾಜದ್ವಾರದಲ್ಲಿ ದೇವತಾ ವಿಮಾನದಂತೆ ಕೃತ್ರಿಮ ಶಿಲ್ಪವಂ ರಚಿಸಿ ಜನಕ್ಕೆ ತಿಳಿಯದಂತೆ ನೀರಾಜಿಯ ಮೇಲುಕಟ್ಟುಗಳನ್ನು ಕಟ್ಟಿ ವಿಚಿತ್ರ ತೋರಣ, ಕುರುಜ , ಮುತ್ತಿನ ಕುಚ್ಚುಗಳಿಂದ ಅಲಂಕರಿಸಿ, ನೋಡುವವರಿಗೆ ವಿಸ್ಮಯಕರವಾಗಿರುವಂತೆ ವಾದ್ಯಗಳನ್ನು ಬಾಜಿಸುವ ಸೂತ್ರದ ಬೊಂಬೆಗಳ[55] ಸಾಲುಗಳಂ ನಿಲ್ಲಿಸಿದ್ದನು.

3. ನಂದರಲ್ಲಿ ಛಿದ್ರವುಂಟಾದ ಸಮಯದಲ್ಲಿ ಪರ್ವತರಾಜನ ಮಂತ್ರಿಯಾದ ಶಬರವರ್ಮನು ಕಪಟಸಿಂಹವನ್ನು ಪಂಜರದಲ್ಲಿಟ್ಟು — ಪರೀಕ್ಷಿಸಲು ಪಾಟಲೀಪುರಕ್ಕೆ ಕಳುಹಿಸುತ್ತಾನೆ. ಅದನ್ನು ನೋಡಿದ ಚಂದ್ರಗುಪ್ತನು — ಈ ಪಂಜರವು ಅಖಂಡವಾದುದರಿಂದ ಇದರೊಳಗೆ ಜೀವಸಿಂಹವು ಹೋಗಲು ಶಕ್ಯವಿಲ್ಲ. ಇದು ಅರಗು ಮೇಣ ಮುಖ್ಯವಾದ ಸರಿಗೆಗಳಿಂದ ತೊಡೆಯಲ್ಪಟ್ಟ ಬಟ್ಟೆಗೆ ಸಿಂಹದ ರೋಮಗಳನ್ನು ಹತ್ತಿಸಿ ಅದನ್ನು ಚರ್ಮದಂತೆ ಮಾಡಿದ್ದಿರಬೇಕು. ಅದರ ಅಸ್ಥಿಸ್ಥಾನಕ್ಕೆ ಕಬ್ಬಿಣದ ಸಲಾಕೆಗಳನ್ನು ಜೋಡಿಸಿ, ಬಾಲ, ಕತ್ತುಗಳಿಗೆ ರೋಮ ಸಹಿತವಾದ ಉಕ್ಕಿನ ತಂತಿಗಳನ್ನು ಜೊತೆಗೂಡಿಸಿ ಅಲ್ಲಲ್ಲಿಗೆ ಬಣ್ಣವನ್ನು ಬರೆದು ಪೂರೈಸಿದ ಕೃತ್ರಿಮ ಸಿಂಹವಾಗಿರಬೇಕೆಂದು' ಹೇಳಿ ಈ ಶಿಲ್ಪೋಪಾಯ ಪರೀಕ್ಷೆಯಲ್ಲಿ ಉತ್ತೀರ್ಣನಾಗುವನು.

ಈ ಮೇಲಿನ ವಿವರಣೆಗಳಿಂದ ನಮ್ಮ ಕವಿಗೆ ಶಿಲ್ಪಶಾಸ್ತ್ರ[56]ದ ಗಾಢವಾದ ಪರಿಚಯವಿತ್ತೆಂದು ತಿಳಿಯಬಹುದಾಗಿದೆ. ಅಲ್ಲದೇ ಕವಿಯ ಜೀವಿತಕಾಲದಲ್ಲಿ ಮುಮ್ಮಡಿಯವರು ಅತ್ಯುನ್ನತವಾಗಿಯೂ, ಚಿತ್ರವಿಚಿತ್ರವಾಗಿಯೂ, ಅನೇಕ ಕಂಬಗಳಿಂದಲೂ, ಕನ್ನಡಿಗಳಿಂದಲೂ ಬಗೆಬಗೆಯಾದ ಕುಚ್ಚುಗಳಿಂದಲೂ ಚಿನ್ನದ ಕಲಶಗಳಿಂದಲೂ ಅಲಂಕೃತವಾಗಿರುವ ಒಂದು ಆನೆ ಮೊದಲಾಗಿ ಎಂಟು ಆನೆಗಳನ್ನು ಕಟ್ಟತಕ್ಕ ಗಜರಥ, ಸುವರ್ಣದಪಂಚಕಲಶಗಳಿಂದ ಅಲಂಕೃತವಾಗಿ ಒಂದು ಕುದುರೆಯಿಂದ ಎಂಟು ಕುದುರೆಗಳವರೆಗೂ ಕಟ್ಟತಕ್ಕ ನಾನಾವಿಧವಾದ ಅಶ್ವರಥಗಳು, ಪುಷ್ಪರಥ — ಮೊದಲಾದ ಅನೇಕ ರಥಗಳನ್ನು ಮಾಡಿಸಿದ್ದರು — ಸಮಸ್ತ ಜನಗಳೂ ಆಶ್ಚರ್ಯಪಡುವಂತಹ ಕೀಲು ಹುಲಿ, ಕೀಲು ಕುದುರೆ ಮುಂತಾದ ಚಮತ್ಕಾರವಾದ ಶಿಲ್ಪಗಳನ್ನು ಮಾಡಿಸುವ ಕ್ರಮವೂ ಆಗ ಪ್ರಚಾರದಲ್ಲಿತ್ತು[57]. ಇದರಿಂದ ಕವಿಯು ನಿಶ್ಚಿತವಾಗಿ — ಪ್ರಭಾವಿತನಾಗಿದ್ದಿರಬಹುದು. ಆದ್ದರಿಂದಲೇ ಆತ ಅವಶ್ಯಕವಿದ್ದಲ್ಲಿ ತನ್ನ ಶಿಲ್ಪಶಾಸ್ತ್ರಜ್ಞಾನವನ್ನು ಬಳಸಿಕೊಂಡು ಕೃತಿಯನ್ನು ರೋಚಕಗೊಳಿಸಿದ್ದಾನೆ.

ಅಡಿಟಿಪ್ಪಣಿಗಳು

1. ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರ, ಶಿಕ್ಷಾ, ಕಲ್ಪ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಋಕ್, ಯಜುಸ, ಸಾಮ ಮತ್ತು ಅಥರ್ವವೇದಗಳು (೧-೨)

2. ರಾಜನೀತಿ, ರಾಜಧರ್ಮ, ಅರ್ಥಶಾಸ್ತ್ರ, ನೀತಿಶಾಸ್ತ್ರ, ರಾಜವಿದ್ಯೆ, ನೀತಿವಿದ್ಯೆ, ರಾಜಶಾಸ್ತ್ರ, ಶಾಸನವಿಜ್ಞಾನ — ಮೊದಲಾದವು ಇದರ ಪರ್ಯಾಯ ನಾಮಗಳು.

3. ಶಾಂತಿಪರ್ವ (೫೯-೬೯)

4. ಶಾಂತಿಪರ್ವ (೨೨೬·೨೮ ರಿಂದ ೪೬)

5. ಶುಕ್ರನೀತಿಸಾರ (1-೨,೨)

5ಎ. ಮುದ್ರಾರಾಕ್ಷಸದ ಅವತರಣಿಕೆಯಲ್ಲಿ ಕವಿಯು 'ಕಾಮಂದಕಾದಿ ಮುನಿಗಳಿಂದ ಹೇಳಲ್ಪಟ್ಟ ದಂಡನೀತಿ ಶಾಸ್ತ್ರಪ್ರಯೋಗದಲ್ಲಿ ಪ್ರವೀಣನಾದ ಚಾಣಕ್ಯ' ನೆಂದಿದ್ದಾನೆ. ಈ ಮಾತನ್ನು ಆಕ್ಷೇಪಿಸುತ್ತಾ ಶ್ರೀ ಎಸ್.ಎಂ. ಶಂಕರನಾರಾಯಣ ರಾವ್ ಅವರು — 'ಕಾಮಂದಕ ದಂಡನೀತಿಯಲ್ಲಿ ಚಾಣಕ್ಯನು ಪ್ರವೀಣನಾಗಿದ್ದನೆಂದು ಹೇಳಿರುವುದು ವಸ್ತುಸ್ಥಿತಿಗೆ ವಿರೋಧವಾಗಿದೆ. 'ಏಕೆಂದರೆ ಚಾಣಕ್ಯ ಮೊದಲು, ಅನಂತರ ಕಾಮಂದಕ. ತನ್ನ ನೀತಿಸಾರದ ಪ್ರಾರಂಭದಲ್ಲಿ ಕಾಮಂದಕನು ಚಾಣಕ್ಯನನ್ನು ಸ್ತೋತ್ರ ಮಾಡಿದ್ದಾನೆ. ಕವಿ ಇಲ್ಲಿ ಎಡವಿರುವುದು ಸುಸ್ಪಷ್ಟವಾಗಿದೆ (ಕೆಂಪುನಾರಾಯಣ: ಕವಿ ಮತ್ತು ಕೃತಿ ಪು. 29 – 30) ಎಂದಿದ್ದಾರೆ.

ಇವರ ಈ ಹೇಳಿಕೆ ಸಾಧುವಲ್ಲ. 'ಏಕೆಂದರೆ ಚಾಣಕ್ಯನಿಗಿಂತ ಮೊದಲು ಕಾಮಂದಕನೆಂಬ ಪ್ರಾಚೀನ ಮುನಿಯು ಇದ್ದಿದ್ದ. ಆತ ಅಂಗರಿಷ್ಟನಿಗೆ ರಾಜಧರ್ಮವನ್ನು ಉಪದೇಶ ಮಾಡಿದ್ದನೆಂದು ಮಹಾಭಾರತದಲ್ಲಿ (ಶಾಂತಿಪರ್ವ 123 ರಲ್ಲಿ 15 — 25) ಹೇಳಿದೆ. ಚಾಣಕ್ಯನು ಮಹಾಭಾರತದ ಅನಂತರದ ಕಾಲದವನಾದ್ದರಿಂದ ಆತನು ಕಾಮಂದಕ ಮುನಿಯ ನೀತಿಶಾಸ್ತ್ರದಲ್ಲಿ ಪ್ರವೀಣನಾಗಿದ್ದನೆಂದು ಹೇಳಿದ್ದರಲ್ಲಿ ಎಡವುವ ಪ್ರಸಂಗವಿಲ್ಲ. ಚಾಣಕ್ಯನ ಕಾಲಾನಂತರ ಮತ್ತೊಬ್ಬ ಕಾಮಂದಕನು ಚಾಣಕ್ಯನನ್ನೇ ತನ್ನ ಗುರುವನ್ನಾಗಿ ಸ್ವೀಕರಿಸಿದ್ದು (ವಿವರ ಮುಂದೆ ಇದೆ) ಹೌದಾದರೂ ಪ್ರಾಚೀನ ಕಾಲದ ಕಾಮಂದಕ ಋಷಿಯ ಅಸ್ತಿತ್ವಕ್ಕೆ ಇದರಿಂದೇನೂ ಕುಂದುಂಟಾಗುವುದಿಲ್ಲ.

6. ಆನಂದಾಶ್ರಮ ಸಂಸ್ಕೃತ ಗ್ರಂಥಾವಲಿ ಪು.8.

7. ಕಾಮಸೂತ್ರ ೧/೧-೫ ರಿಂದ 2

8. ಉದ್ಧೃತ 'ಹಿಸ್ಟರಿ ಆಫ್ ಧರ್ಮಶಾಸ್ತ್ರ' ಭಾಗ ೨ ಪು.4.

9. ದ.ಕು. ಚರಿತೆ, ಉ. ಪೀಠಿಕೆ ಪು 0 — 8.

10. ಬುದ್ಧಚರಿತ ೧-೪೬

11. ಈ ಲೇಖನವನ್ನು ಸಂಸ್ಕೃತದಲ್ಲಿಯ 'ಶುಕ್ರನೀತಿ' ಗ್ರಂಥಕ್ಕೆ ಶ್ರೀ ನಾರಾಯಣಮಿಶ್ರ ಎಂಬುವರು ಬರೆದ ಪೀಠಿಕೆಯನ್ನು ಆಧರಿಸಿ ತಯಾರಿಸಲಾಗಿದೆ.

12. ನರಸಿಂಹಾಚಾರ್ಯ ಆರ್. ಕವಿಚರಿತ್ರೆ ಸಂ.೨ ಪು. 484.

13. ಹನುಮಂತಾಚಾರ್ ವಿ (ಸಂ) 1956. ಕಾಮಂದಕೀಯ ನೀತಿಸಾರ ವ್ಯಾಖ್ಯಾಟೀಕೆ. ಮದ್ರಾಸ ಪು-7

13ಎ. ಮಲೆಯಾಳ ಗದ್ಯದಲ್ಲಿ 'ಭಾಷಾಕೌಟಲೀಯಂ' ಸುಮಾರು 12ನೇ ಶತಮಾನದಲ್ಲೇ ರಚಿತವಾಗಿದ್ದರೂ ಸಮೃದ್ಧ ಪ್ರಾಚೀನ ಸಾಹಿತ್ಯವಿರುವ ಕನ್ನಡದಲ್ಲಿ ತದ್ವಿಷಯಕ ಗ್ರಂಥಗಳಿಲ್ಲದಿರುವುದು ಆಶ್ಚರ್ಯದ ಸಂಗತಿಯಾಗಿದೆ (ಭಾಷ ಕೌಟಲೀಯಂ — ವಿವರಕ್ಕೆ ಶೇಷಗಿರಿ ರಾವ ಎಚ.ಎಸ. 1990. 'ಭಾರತೀಯ ಸಾಹಿತ್ಯ ಸಮೀಕ್ಷೆ ಭಾಗ ೨ ಪು 951).

14. ಗಣಪತಿ ಮೊಳೆಯಾರ (ಅನು.) 1971. 'ಮುದ್ರಾರಾಕ್ಷಸ' ಮಂಗಳೂರು ಪು viii)

15. 'ಅಭಿಜನಪ್ರಜ್ಞಾ ಶೌಚ ಶೌರ್ಯಾನುರಾಗಯುಕ್ತಾನಮಾತ್ಯಾನ್ ಕುರ್ವೀತ' ಕೌಟಿಲೀಯಂ ಅರ್ಥಶಾಸ್ತ್ರಂ ೧-೧೦ ಪು.14.

16. 'ಶತ್ರುಣಾ ಮೈತ್ರೀಂ ಕೃತ್ವಾ ಅಮಾತ್ಯಾನ್ ಅವಕ್ಷಿಪೇತ' ಅದೇ ೧೨-೨ ಪು 400

17. 'ಶಾಸನಮುದ್ರಾಹಸ್ತಾಃಪ್ರವಿಶ್ಯ ದುರ್ಗಂ ಗ್ರಾಹಯೇಯುಃ' ಅದೇ ೧೨-೫ ಪು 407.

18. 'ಪ್ರವ್ರಜ್ಯಾಪ್ರತ್ಯವಸಿತಃ ಪ್ರಜ್ಞಾಶೌಚಯುಕ್ತಃ ಉದಾಸ್ಥಿತಃ' ಅದೇ ೧-೧೧ ಪು 18.

19. 'ಅರಿವಿಜಿಗೀಷು ಮಧ್ಯಾನಾಂ ಬಹಿಃ ಪ್ರಕೃತಿಭ್ಯೋ ಬಲವತ್ತರಃ ಸಂಹತಾಸಂಹತಾನಾಂ ಅರಿವಿಜಿಗೀಷು ಮಧ್ಯಮಾನಾಂ ಅನುಗ್ರಹೇ ಸಮರ್ಥೋನಿಗ್ರಹೇ ಚಾಸಂಹತಾನಾಂ — ಉದಾಸೀನಃ' ಅದೇ ೬-೨ ಪು 261.

20. 'ವಿಜಿಗೀಷುಃ ಪರಗ್ರಾಮಂ ಅವಾಪ್ತುಕಾಮಃ ಸರ್ವಜ್ಞದೈವ ಸಂಯೋಗಖ್ಯಾಪನಾಭ್ಯಾಂ ಸ್ವಪಕ್ಷಂ ಉದ್ಧರ್ಷಯೇತ । ಪರಪಕ್ಷಂ ಚೋದ್ವೇಜಯೇತ' ಅದೇ ೧೩-೧ ಪು 394.

21. 'ಉಪಾಯಾಸ್ಸಾಮೋಪಪ್ರದಾನ ಭೇದ ದಂಡಾಃ' ಅದೇ ೨-೧೦ ಪು 74.

22. 'ರಾಜ್ಯೋಪಘಾತಿನಸ್ತು ವಲ್ಲಭಾಸ್ಸಂಹಿತಾ ವಾ ಯೇ ಮುಖ್ಯಾಃ ಪ್ರಕಾಶ ಮಶಕ್ಯಾಃ ಪ್ರತಿಷೇದ್ಧುಂ ದೂಷ್ಯಾಃತೇಷು ಧರ್ಮರುಚಿಃ ಉಪಾಂಶುದಂಡಂ ಪ್ರಯುಂಜೀತ' ಅದೇ ಪು 237.

23· 'ಶಿರೀಷೋದುಂಬರ ಶಮೀಪರ್ಣಂ ಸರ್ಪಿಷಾ ಯುಕ್ತಾರ್ಧಮಾಸಿಕಃ ಕ್ಷುದ್ಯೋಗಃ·'
ಅದೇ ೧೪-೨ ಪು 414·

24· ''ಏಕಾಮ್ಲಕಂ ವರಾಹಾಕ್ಷಿ ಖದ್ಯೋತಃ ಕಾಲಶಾರಿವಾ ।
'ಏತೇನಾಭ್ಯಕ್ತನಯನಃ ರಾತ್ರೌ ರೂಪಾಣಿ ಪಶ್ಯತಿ ॥
ಅದೇ ೧೪-೨ ಪು 418·

25· 'ಗೂಢಪುರುಷಪ್ರಣಿಧಿಃ ಕೃತಮಹಾಮಾತ್ಯಾ··ಪಸರ್ಪಃ ಪೌರಜಾನಪದಾನ ಅಪಸರ್ಪಯೇತ·'
ಅದೇ ೧-೧೨ ಪು 22·

26· 'ವಿಭೀಷಣಂ ಅವಸ್ಕಂದಃ ಪ್ರಮಾದ ವ್ಯಸನಾರ್ದನಮ ।
'ಏಕತ್ರ ತ್ಯಾಗಘಾತ ಚ ಕೂಟಯುದ್ಧಸ್ಯ ಮಾತೃಕಾ ॥
ಅದೇ ೭-೬ ಪು 283·

26ಎ· 'ಕೋಶಮ ಅಕೋಶಃ ಪ್ರತ್ಯುತ್ಪನ್ನಾರ್ಥ ಕೃಚ್ಛ್ರಂ ಸಂಗೃಹ್ಣೀಯಾತ ।
ಧಾನ್ಯ ಪಶುಹಿರಣ್ಯಾದಿ ನಿವಿಶಮಾನಾಂಯು ದದ್ಯಾತ ।" ಅದೇ ಪು 242·

27· 'ತೇನ ಹಿ ಧ್ವಜೀನ ಅದಿತಿ ಕೌಶಿಕವತ ಅನ ಮಾತ್ಯಬಾಂಧವಾಃ ಭಕ್ಷೇರನ·'
ಅದೇ ೧-೧೭ ಪು 33·

28· 'ದ್ವೇಷ್ಯತಾ ಶತ್ರುವೇದನಂ ದುಃಖಸಂಗಿತಶ್ಚ ಕೋಪಃ । ಪರಿಭವೋ ದ್ರವ್ಯನಾಶಃ ಪಾಟಚ್ಚರ ದ್ಯೂತಕಾರ ಲುಬ್ಧಕ ಗಾಯಕ ವಾದಕೈಶ್ಚ ಅನರ್ಥ್ಯೈಃ ಸಂಯೋಗಃ ಕಾಮಃ । ತಯೋಃ ಪರಿಭವಾತ ದ್ವೇಷ್ಯತಾ ಗರೀಯಸಿ··· ತಸ್ಮಾತ ಕೋಪೋ ಗರೀಯಾನ·
ಅದೇ ೮-೨ ಪು 327–28·

29· 'ಸಂಧಿವಿಗ್ರಹ ಆಸನ ಯಾನ ಸಂಶ್ರಯ ದ್ವೈಧೀಭಾವಾಃ ಷಾಡ್ಗುಣ್ಯಮ·'
ಅದೇ ೭-೧ ಪು 263·

29ಎ· ಮುಂಡೋ ಜಟಿಲೋ ವಾ ವೃತ್ತಿಕಾಮಃ ತಾಪಸವ್ಯಂಜನಃ । ಸನಗರಾಭ್ಯಾಶೇ ಪ್ರಭೂತಮುಂಡ ಜಟಿಲಾಂತೇವಾಸೀ ····' ಅದೇ ೧-೧೧ ಪು 19·

30· 'ಅಮಾತ್ಯ ಸಂಪದೋಪೇತಃ ನಿಸೃಷ್ಟಾರ್ಥಃ । ಪಾದಗುಣಹೀನಃ ಪರಿಮಿತಾರ್ಥಃ । ಅರ್ಧಗುಣ ಹೀನಃ ಶಾಸನಹರಃ ಉದ್ಧೃತಮಂತ್ರೋದಯಾತ ಪ್ರಣಿಧಿಃ ಅದೇ ಪು 30·

30ಎ· 'ನಕ್ಷತ್ರಂ ಅತಿಪೃಚ್ಛಂತಂ ಬಾಲಮ ಅರ್ಥೋಽತಿವರ್ತತೇ ಅರ್ಥೋಹಿ ಅರ್ಥಸ್ಯ ನಕ್ಷತ್ರಂ ಕಿಂ ಕರಿಷ್ಯಂತಿ ತಾರಕಾಃ । ಅದೇ ೯-೪ ಪು 351·

31. " ಅಲ್ಪಃ ಪಶ್ಚಾತ ಕೋಪಃ ಮಹಾನ ಪುರಸ್ತಾತ ಲಾಭಃ ಇತಿ । ಅಲ್ಪಃ ಪಶ್ಚಾತ ಕೋಪಃ ಗರೀಯಾನ ಅಲ್ಪಂ ಪಶ್ಚಾತಕೋಪಂ ಪ್ರಯಾತಸ್ಯ ದೂಷ್ಯಾಮಿತ್ರಾಟವಿಕಾ ಹಿ ಸರ್ವತಃ ಸಮೇಧಯಂತಿ. ಪ್ರಕೃತಿ ಕೋಪಃ ವಾ ಲಬ್ಧಮಪಿ ಚ ಮಹಾಂತಂ ಪುರಸ್ತಾತ ಲಾಭಮ ॥ "
ಅದೇ ೯-೩ ಪು 364.

32. ' ಸ್ವಾಮ್ಯಮಾತ್ಯ ಜನಪದದುರ್ಗಕೋಶದಂಡಮಿತ್ರಾಣಿ ಪ್ರಕೃತಯಃ '
ಅದೇ ೬-೧ ಪು 257.

33. ' ಸಂಹತ್ಯಾರಿ ವಿಜಿಗೀಷೋಃ ಅರಮಿತ್ರಯೋಃ ಪರಾಭಿಯೋಗಿನಃ ಪಾರ್ಷ್ಣಿಗ್ರಾಹ್ಯತಯಾ:ಯಶ್ಶಕ್ತಿ ಸಂಪನ್ನಸ್ಯ ಪಾರ್ಷ್ಣಿಂ ಗೃಹ್ಣಾತಿ ಸಃ । ಅದೇ ೭-೧೩ ಪು 301.

34. ' ಶುಶ್ರೂಷಾಶ್ರವಣ ಗ್ರಹಣಧಾರಣ ವಿಜ್ಞಾನೋಹಾಪೋಹ ತತ್ತ್ವಾಭಿನಿವಿಷ್ಟಬುದ್ಧಿಂ ವಿದ್ಯಾ ವಿನಯತಿ ನೇತರಮ. ಅದೇ ೧-೫ ಪು 10.

34ಎ. ' ಮಂತ್ರಪೂರ್ವಾಸ್ಸರ್ವಾರಂಭಾಃ 1. ಕೃತ ಸ್ವಪಕ್ಷ ಪರಪಕ್ಷೋಪಗ್ರಹಃ ಕಾರ್ಯಾರಂಭಾನ ಚಿಂತಯೇತ । ತದುದ್ದೇಶಃ ಸಂವೃತಃ ಕಥಾನಾಮ ಅನಿಸ್ರಾವೀ ಪಕ್ಷಿಭಿಃ ಅಪಿ ಅನಾಲೋಕ್ಯಂ ಅಸ್ಯಾತ ಶ್ರೂಯತೇ ಹಿ ಶುಕಶಾರಿಕಾಭಿಃ ಮಂತ್ರೋಭಿನ್ನಃ ಶ್ವಭಿಃ ಅನ್ಯೈಶ್ಚ ತಿರ್ಯಕಯೋನಿಭಿಃ ತಸ್ಮಾತ ಮಂತ್ರೋದ್ದೇಶಮ ಅನಾಯುಕ್ತಃ ನೋಪಗಚ್ಛೇತ । ಅದೇ ೧-೧೫ ಪು 26.

35. ' ಯಾತವ್ಯಃ ಹಿ ಯಾಸ್ಯಮಾನಃ ಸಂಧಿಕಾರಣಮ ಆದಾತುಕಾಮಃ ವಿಹಂತುಕಾಮಃ ವಾ ಸಾಮವಾಯಿಕಾನಾಂ ಅನ್ಯತಮಂ ಲಾಭದ್ವೈಗುಣ್ಯೇನ ಪಣೇತ । ಅದೇ ೭-೮ ಪು 286.

36. ' ಮಾರ್ಗಶೀರ್ಷೀಂ ತೈಷೀಂ ಚಾಂತರೇಣ ದೀರ್ಘಕಾಲಾಂ ಯಾತ್ರಾಂ ಯಾಯಾತ.
ಅದೇ ೯-೧ ಪು 341.

37. ' ದೇವತಾಗೃಹ ಪ್ರವಿಷ್ಟಸ್ಯೋಪರಿ ಯಂತ್ರಮೋಕ್ಷಣೇನ ಗೂಢಭಿತ್ತಿಂ ಶಿಲಾಂ ವಾ ಪಾತಯೇತ.
ಅದೇ ೧೨-೫ ಪು 391.

38. ' ಸಿದ್ಧವ್ಯಂಜನೋ ವಾ ರಾಜಾನಂ ಜಂಭಕವಿದ್ಯಾಭಿಃ ಪ್ರಲೋಭಯೇತ.
ಅದೇ ೧೩-೨ ಪು 397.

39. ' ನವಂ ಅವಾಪ್ಯ ಲಂಭಂ ಪರದೋಷಾನ ಸ್ವಗುಣೈಃ ಛಾದಯೇತ. ಗುಣಾನ ದ್ವಿಗುಣೇನ ಸ್ವಧರ್ಮಕರ್ಮಾನುಗ್ರಹ ಪರಿಹಾರ ದಾನಮಾನ ಕರ್ಮಭಿಃ ಚ ಪ್ರಕೃತಿಪ್ರಿಯ ಹಿತಾನ್ಯನುವರ್ತೇತ... ದೇಶದೈವತ ಸಮಾಜೋತ್ಸವ ವಿಹಾರೇಷು ಚ ಭಕ್ತಿಂ ಅನುವರ್ತೇತ. ಅದೇ ೧೩-೫ ಪು.408–09.

40. ' ವಾಕ್ಪಾರುಷ್ಯಂ ಉಪವಾದಃ ಕುತ್ಸನಮ ಅಭಿಭರ್ತ್ಸನಮ ಇತಿ. ಶರೀರ ಪ್ರಕೃತಿ ಶ್ರುತ ವೃತ್ತಿ ಜನಪದಾನಾಂ ಶರೀರೋಪವಾದೇನ. ಅದೇ.೩-೧೮ ಪು.193.

41. ' ರಾಜಾ ಅತ್ಮದ್ರವ್ಯ ಪ್ರಕೃತಿ ಸಂಪನ್ನ: ನಯಸ್ಯಾಧಿಷ್ಠಾನಂ ವಿಜಿಗೀಷು'
ಅದೇ ೬-೨ ಪು 260.

42. ' ಶುಕಶ್ಶಾರಿಕಾ ಭೃಂಗರಾಜೋ ವಾ ನರ್ವವಿಷಶಂಕಾಂಯಾಂ ಕ್ರೋಶತಿ । ಕ್ರೌಂಚೋವಿಷಾಭ್ಯಾಶೇ
ಮಾದ್ಯತಿ ಗ್ಲಾಯತಿ ಜೀವಂಜೀವಕ: । ಮ್ರಿಯತೇ ಮತ್ತ ಕೋಕಿಲ: । ಚಕೋರಸ್ಯಾಕ್ಷಿಣೀ
ವಿರಜ್ಯೇತೆ । ಅದೇ ೧-೨೦ ಪು 40.

43. ' ಅಗ್ನೇ: ಜ್ವಾಲಾಧೂಮನೀಲತಾ ಶಬ್ದಸ್ಫೋಟನಂ ಚ ವಿಷಯುಕ್ತಸ್ಯ...
ತಸ್ಮಾತ್ ಅಸ್ಯಚ ಅಂಗರಕ್ಷಕ: ಭಿಷಜಶ್ಚ ಆಸನ್ನಾಸ್ಸ್ಯು:। ಅದೇ ೧-೨೧ ಪು 43.

44. ' ಜಂಭಕ ವಿದ್ಯಾಂ ಮಾಯಾಗತಮ ಅಶ್ವಮೇಧವರ್ಜ ನಿಮಿತ್ತ ಮಂತ್ರಚಕ್ರಂ ಇತ್ಯಧೀಯಾನಾ:
ನತ್ರಿಣ: ಸಂಸರ್ಗ ವಿದ್ಯಾಶ್ಚ. ಅದೇ ೧-೧೨ ಪು 20.

45. ' ನಟನರ್ತಕ ಗಾಯನ ವಾದಕ ವಾಕ ಜೀವನ ಕುಶೀಲವಾ: ಸ್ತ್ರಿಯ: ಅಭ್ಯಂತರಂ
ಚಾರಂ ವಿದ್ಯು:। ತಂ ಭಿಕ್ಷುಕ್ಯ: ಸಂಸ್ಥಾಸು ಅರ್ಪಯೇಯು: ಅದೇ ೧-೧೨ ಪು 21.

46. ' ವಾಸ್ತುಕ ಪ್ರಶಸ್ತ ವಾಸ್ತುನಿ ನಾಯಕ ವರ್ಧಕಿ ಮೌಹೂರ್ತಿಕಾ: ಸ್ಕಂಧಾವಾರಂ... ಭೂಮಿ
'ಶೇನವಾ ಚತುರ್ದ್ವಾರಂ ಷಟ್ಪಥಂ ನವಸಂಸ್ಥಾನಂ ಮಾಪಯೇಯು: । ಖಾತವ ಪ್ರಸಾಲದ್ವಾರ
ಅಟ್ಟಾಲಕ ಸಂಪನ್ನಂ ಭಯೇ ಸ್ಥಾನೇ ಚ । ಅದೇ ೧೦-೧ ಪು 363.

47. ಉದ್ಧೃತ: ನಾರಾಯಣ ಮಿಶ್ರ: ' ಶುಕ್ರನೀತಿ'. ಪ್ರಸ್ತಾವನೆ ಪು 42.

48. ' ಅಷ್ಟಪ್ರಕೃತಿಭಿ: ಯುಕ್ತ: ನೃಪ: ಕೈಶ್ಚಿತ ಸ್ಮೃತ: ಸದಾ', ಅದೇ ೨.೨೪ ಪು 67.

49. ಕಾಮಂದಕೀಯ ನೀತಿಸಾರ: ಪುಣೆ ಪು.5 ರಿಂದ 8

50. ' ಯತ್ರಿಂಶತ ಉಪದೇಶ್ಯಾಮ: ರಾಜವಿದ್ಯಾವಿದಾಂ ಮತಮ್' ಅದೇ ಪು. 9.

51. ಕಾಮಂದಕೀಯ ನೀತಿಸಾರ ವ್ಯಾಖ್ಯಾಟೀಕೆ. 1956. ಪು 8.

52. ' ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪು 235.

53. ಚರಕ ಸಂಹಿತಾ ಸೂತ್ರಸ್ಥಾನ. ಅ.26ನೇ ಆತ್ರೇಯ ಭದ್ರಕಾಪ್ಯೀಯ ಅಧ್ಯಾಯದಲ್ಲಿ —
ದೇಶ, ಕಾಲ, ಅಗ್ನಿ, ಮಾತ್ರಾ, ಸಾತ್ಮ್ಯ, ದೋಷ, ಸಂಸ್ಕಾರ, ವೀರ್ಯ, ಕೋಷ್ಠ,
ಅವಸ್ಥಾ, ಕ್ರಮ, ಪರಿಹಾರ, ಉಪಚಾರ, ಪಾಕ, ಸಂಯೋಗ, ಹೃದಯ, ಸಂಪತ್, ವಿಧಿ —
ಗಳೆಂಬ 18 ವಿಧದ ವಿರುದ್ಧ ಆಹಾರಗಳ ಬಗ್ಗೆ ವಿವರಿಸುವಾಗ ಮಾತ್ರಾವಿರುದ್ಧದ ಬಗ್ಗೆ ವಿವರಿಸುತ್ತ
ಹೀಗೆ ಹೇಳಿದೆ:

' ಮಧುಸರ್ಪಿ: ಸಮಧೃತಂ ಮಾತ್ರಯಾ ಸದ್ವಿರುಧ್ಯತೇ'

ಮಧುಘೃತಗಳು ಸಮಪ್ರಮಾಣದಲ್ಲಿ ಸೇರಿದರೆ ವಿರುದ್ಧವಾಗುತ್ತದೆ. ಇದು ಅಹಿತಕರ — ಎಂದು.
— ಈ ವಿಚಾರವನ್ನು ನನಗೆ ತಿಳಿಸಿದವರು ಡಾ: ವಿದ್ಯಾಸರಸ್ವತಿಯವರು.

53ಎ. ಇಮ್ಮಡಿ ರಾಜ ಒಡೆಯರು (ಕ್ರಿ.ಶ. 1637–38) ದೊರೆತನ ಮಾಡುತ್ತಿದ್ದ ಕಾಲದಲ್ಲಿ ದಳವಾಯಿ ವಿಕ್ರಮರಾಯನು ವೈದ್ಯನಿಂದ ವಿಷಪೂರ್ಣ ಪ್ರಯೋಗವನ್ನು ಮಾಡಿಸಿ ಕೊಲ್ಲಿಸಿದನು (ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ 1 ಪು 68).

ಕ್ರಿ.ಶ. 1818ರಲ್ಲಿ ಮೈಸೂರಿನಲ್ಲಿ ಮೈಲಿಬೇನೆ ಮತ್ತು ಕಾಲರಾ ಹರಡಿತ್ತು (ವಿವರಗಳಿಗೆ: ಕರ್ನಾಟಕ — ವಿಷಯ ವಿಶ್ವಕೋಶ. ಪು 1197), ಕ್ರಿ.ಶ. 1817ರಲ್ಲಿ ಹೋಳ್ಕರ್ ರಾಜರ ಮೇಲೆ ಘೋರ ಯುದ್ಧ ನಡೆದಾಗ ಹಿಂದೆ ಎಂದೆಂದಿಗೂ ಅರಿಯದ ಕಾಲರಾ ಎಂಬ ಮಾರಿಕಾಜಾಡ್ಯವು ಸಂಪ್ರಾಪ್ತವಾಗಿ ಮೈಸೂರಿಗೆ ವ್ಯಾಪಿಸಿ ಜನರಿಗೆ ಕಷ್ಟನಷ್ಟ ಸಂಭವಿಸಿದವು (ನೋಡಿ: ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ ೨ ಪು 51).

54. ಈ ಬಗ್ಗೆ ಜ್ಯೋತಿಷಶಾಸ್ತ್ರ ಗ್ರಂಥಗಳು 'ಏನು ಹೇಳುತ್ತವೆಂದು ವಿಚಾರಿಸಲು ನಾನು ಮಾಧವ ಜೋಯಿಸರೆಂಬ ಮಲೆಯಾಳಿ ಜ್ಯೋತಿಷ ವಿದ್ವಾಂಸರನ್ನು ಸಂಪರ್ಕಿಸಿದಾಗ ಅವರು ಹೇಳಿದ್ದು:

ಕಾಲದೀಪಿಕಾ, ಮುಹೂರ್ತ ಚಿಂತಾಮಣಿ, ಮುಹೂರ್ತ ಪದವಿಗಳಲ್ಲಿ ಈ ಬಗ್ಗೆ 'ಏನೂ ಹೇಳಿಲ್ಲ. 'ಪ್ರಶ್ನಮಾರ್ಗ'ದಲ್ಲಿ ಯುದ್ಧ ಪ್ರಶ್ನೆಗಳಲ್ಲಿ ಉತ್ತರಿಸುವುದಕ್ಕೆ. ಜಯಾಪಜಯಗಳ ಗ್ರಹಸ್ಥಿತಿಯನ್ನು ಸೂಚಿಸುವ ಒಂದು ಭಾಗವಿದೆ. ಬುಧವಾರವೇ ಯುದ್ಧ ಆರಂಭಿಸುವ ಬಗ್ಗೆ ಅದರಲ್ಲೂ 'ಏನೂ ಹೇಳಿಲ್ಲ.

ಕುಜ — ಯುದ್ಧಾಭಿಮಾನಿ ಗ್ರಹ — ನೇತಾರ ಅಂದರೆ ಸೇನಾಪತಿ. ವರ್ಣಾಶ್ರಮದಲ್ಲೂ ಆತ ಕ್ಷತ್ರಿಯ. ಆದರೆ ಬುಧನು ವೈಶ್ಯ ಗ್ರಹ. ಹೀಗಾಗಿ ಬುಧವಾರವನ್ನು ಯುದ್ಧಾರಂಭಕ್ಕೆ ಯಾಕೆ ಹೇಳುತ್ತಾರೆಂದು ಶಾಸ್ತ್ರೀಯವಾಗಿ ಹೇಳಲು ಸಾಧ್ಯವಿಲ್ಲ'.

ಬಹುಶ: ಆ ಕಾಲದ ಸಂಪ್ರದಾಯದಲ್ಲಿ ಬುಧವಾರ ಯುದ್ಧ ಪ್ರಯಾಣವನ್ನು ಆರಂಭಿಸುತ್ತಿದ್ದಿರಬೇಕು. ಅದಕ್ಕಾಗಿಯೇ ಕವಿಯು ಪುನ: ಪುನ: ಬುಧವಾರವನ್ನೇ ಅದಕ್ಕಾಗಿ ಹೇಳುತ್ತಿದ್ದಿರಬೇಕು.

55. ಈಗ ಇಂತಹ ವಾದ್ಯಗಳನ್ನು ಬಾರಿಸುವ ಸೂತ್ರದ ಬೊಂಬೆಗಳ ಸಾಲನ್ನು ಮೈಸೂರಿನ ಜಗನ್ಮೋಹನ ಅರಮನೆ ಚಿತ್ರಶಾಲೆಯಲ್ಲಿ ಕಾಣಬಹುದು.

56. 'ಸಮರಾಯ ಸೂತ್ರ', 'ಲಲಿತ ವಿಸ್ತರ', 'ಸಮರಾಂಗಣ ಸೂತ್ರಧಾರ' — ಮೊದಲಾದ ಗ್ರಂಥಗಳಲ್ಲಿ ಶಿಲ್ಪಶಾಸ್ತ್ರದ ಬಗ್ಗೆ ಇಂತಹ ವಿವರಗಳು ಸಿಗುತ್ತವೆ ಎಂದು ಶಿಲ್ಪಶಾಸ್ತ್ರತಜ್ಞರಾದ ಮುನಿಯಂಗಳ ಶ್ರೀಕೃಷ್ಣ ಭಟ್ಟರವರು ತಿಳಿಸಿದ್ದಾರೆ.

57. ರಾಮಕೃಷ್ಣ ರಾವ್ ಬಿ. 1916. ಶ್ರೀ ಮನ್ಮಹಾರಾಜರವರ ವಂಶಾವಳಿ. ಭಾಗ ೧ ಪು 173.

ಅಧ್ಯಾಯ ಆರು

ಮುದ್ರಾಮಂಜೂಷ: ಸಾಮಾಜಿಕ ಅಧ್ಯಯನ 218 — 251

ಸಮಕಾಲೀನ ನಂಬಿಕೆಗಳು — ಸಂಪ್ರದಾಯಗಳು — ಆಚರಣೆಗಳು — ಶಕುನಗಳು — ಸಾಮಾಜಿಕ ಪದ್ಧತಿಗಳು — ಸಹಗಮನ — (ವೈಸಣಾರು ಒಡೆಯರ ಕಾಲದಲ್ಲಿ ಕದಂಬ ಕುಟುಂಬದಲ್ಲಿ) — ಶೂಲಕ್ಕೇರಿಸುವಾಗಿನ ಪದ್ಧತಿ — ಪಟ್ಟಾಭಿಷೇಕದ ಸಂಭ್ರಮ — ಚಾವಡಿಗಳು — ಗೊಲ್ಲರು — ಕಳ್ಳಬಂಟರು — ಕಾಮಾಟದವರು — ಕಟ್ಟು ಕರಣಿಕರು — ಆಡುವ ಮಾತುಗಳು — ವ್ಯಕ್ತಿನಾಮಗಳು — ಸ್ಥಳ ನಾಮಗಳು — ಮುನವಳ್ಳಿ ಕಣಿವೆ — ಹೊನ್ನಗಟ್ಟ — ಸುಂದರ ಗಢ — ಕಾಶಪ್ರಸ್ಥ — ಇತ್ಯಾದಿ· ತೂಗುಸೇತುವೆ — ಜಲದುರ್ಗ — ನದಿಗಳು — ಇತರ ■ ವಿಚಾರಗಳು — ಸಮಕಾಲೀನ ಮತಧರ್ಮ ವಿಚಾರ — ಬ್ರಾಹ್ಮಣಧರ್ಮ — ಬೌದ್ಧಧರ್ಮ·

ಸಮರ ಚಿತ್ರಣ — ಪ್ರಸ್ತಾವನೆ — ಸೇನಾಬಲ — ಸೇನಾಬಲದ ವಿಂಗಡಣೆ — ಚತುರಂಗಬಲ — ಒಂಟೆ — ದೋಣಿ — ಸಮರಸಿಬ್ಬಂದಿ — ರಾಯಸದವರು — ರಾಯಭಾರಿಗಳಾಗಿ ನಿಯೋಗಿಗಳು — ಗುಪ್ತಚಾರರು — ಉಡುಗೆ-ತೊಡುಗೆ —

ಆಯುಧಗಳು: — ಖಡ್ಗ — ಬಿಲ್ಲುಬಾಣಗಳು — ಈಟಿ — ಶೂಲ — ಪ್ರಾಸ — ಪರಿಘ — ತೋಮರ — ಮುಸಲ — ದಂಡ — ಚಕ್ರ — ಪಾಶ — ನಿಷಂಗ — ಫಿರಂಗಿ — ಸಂರಕ್ಷಕ ಸಾಧನಗಳು : ಕವಚ — ಖೇಡಯ — ಕೋಟೆಹತ್ತಲು ಸಾಧನಗಳು — ದಂಡಯಾತ್ರೆಯಲ್ಲಿ ಪಾಳೆಯ — ಯುದ್ಧ ಆರಂಭವಾಗಲು ಕಾರಣವಾಗಬಹುದಾದ ಸನ್ನಿವೇಶಗಳು — ಯುದ್ಧ ಮುನ್ಸೂಚನೆ — ಯುದ್ಧ ಮುನ್ಸಾಪದನೆ — ಯುದ್ಧ ಆರಂಭವಾದ ಮೇಲೆ — ಯುದ್ಧ ಆಗುತ್ತಿರುವಾಗ — ವಿಜಯೋತ್ಸವ ಆಚರಣೆ.

ಅಧ್ಯಾಯ ಆರು

ಮುದ್ರಾಮಂಜೂಷ: ಸಾಮಾಜಿಕ ಅಧ್ಯಯನ

ಇತಿಹಾಸಕಾರರು ಒಂದು ಕಾಲಘಟ್ಟದ ಇತಿಹಾಸವನ್ನು ಬರೆಯುವಾಗ ಆ ಕಾಲದ ಶಾಸನಗಳನ್ನು ವಿದೇಶೀ ಪ್ರವಾಸಿಗಳ ಬರಹಗಳನ್ನು ಹೆಚ್ಚಾಗಿ ಅವಲಂಬಿಸುತ್ತಿದ್ದರು. ಸಾಹಿತ್ಯ ಕೃತಿಗಳಲ್ಲಿ ಸಮಕಾಲೀನ ಚರಿತ್ರೆಯ ವಿವರಗಳು ದೊರೆಯುವವಾದರೂ, ಅವುಗಳಲ್ಲಿ ಕವಿಗಳು ತಮ್ಮ ಆಶ್ರಯದಾತರ ಪ್ರಶಂಸೆ ಮಾಡಿ ಚಾರಿತ್ರಿಕ ವರ್ಣದ ಲೇಪ ಕೊಡುವ ಸಾಧ್ಯತೆಯಿದೆಯೆಂಬ ಕಾರಣದಿಂದ ಅವುಗಳನ್ನು ಸಂದೇಹದ ದೃಷ್ಟಿಯಿಂದಲೇ ನೋಡುತ್ತಿದ್ದರು. ಆದರೆ ಸಾಹಿತ್ಯ ಕೃತಿಗಳನ್ನು ಶಾಸ್ತ್ರೀಯವಾದ ಸಂಶೋಧನ ದೃಷ್ಟಿಯಿಂದ ಪರೀಕ್ಷಿಸಿದರೆ ಮೇಲ್ಕಾಣಿಸಿದ ಮೂಲಗಳಲ್ಲಿ ಸಿಗದಂತಹ ಚಾರಿತ್ರಿಕ ಘಟನೆಗಳ ವಿಷಯ ಬಾಹುಳ್ಯ ಸಾಹಿತ್ಯದಲ್ಲಿ ಸಿಗುವುದು ಕಂಡುಬರುತ್ತದೆ[1]. 'The Great Poet, in writing himself, writer his time' ಎಂಬ ಟಿ.ಎಸ್. ಎಲಿಯಟನ ಮಾತು ಇದನ್ನೇ ಸಮರ್ಥಿಸುತ್ತದೆ[2].

ಈ ಹಿಂದೆ (ಅಧ್ಯಾಯ ಎರಡರಲ್ಲಿ) ಗಮನಿಸಿದ್ದಂತೆ, ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಕನ್ನಡ ನಾಡಿನ ರಾಜಕೀಯ ಪರಿಸ್ಥಿತಿಯು ತೀರ ಹದಗೆಟ್ಟಿತ್ತು. ಕ್ರಿ.ಶ. 1799ರಲ್ಲಿ ಟಿಪ್ಪು ಸುಲ್ತಾನನು ಯುದ್ಧದಲ್ಲಿ ಮಡಿದಿದ್ದನು. 1818ರ ಸುಮಾರಿಗೆ ಪೇಶ್ವೆಯರ ಆಳ್ವಿಕೆ ಕೊನೆಗೊಂಡಿತ್ತು. 1831ರಲ್ಲಿ ಮೈಸೂರು ಮತ್ತು ಕೊಡಗಿನ ಪ್ರಾಂತಗಳ ಸಹ ಬ್ರಿಟಿಷರ ವಶವಾದವು.

ಈ ರಾಜಕೀಯ ದುರವಸ್ಥೆಯು ಮುಮ್ಮಡಿಯವರಂತಹ ಅಭಿಜಾತ ಕವಿಗಳನ್ನು ಸಾಹಿತ್ಯಕ ಕಾಳಜಿಯಾಗಿ ಕಾಡದೇ ಇದ್ದಾಗ, ಕೆಂಪುನಾರಾಯಣನು 'ಮುದ್ರಾಮಂಜೂಷ' ದಲ್ಲಿ ಸಮಕಾಲೀನ ಸಾಮಾಜಿಕ ವಿಚಾರಗಳಿಗೆ ಪ್ರತಿಸ್ಪಂದಿಸಿದ್ದು ವೈಶಿಷ್ಟ್ಯಪೂರ್ಣವಾಗಿದೆ. ಪುರಾಣ ಪ್ರಪಂಚದಲ್ಲಿ ಮುಳುಗಿದ್ದುಕೊಂಡೂ ಆತ ಸಮಕಾಲೀನ ಬದುಕಿನತ್ತ ದೃಷ್ಟಿಹರಿಸಿದ್ದಾನೆ. ಆತ ಗತಕಾಲದ ಬದುಕಿನಲ್ಲಿ ವರ್ತಮಾನವನ್ನು ಅಧ್ಯಯನ ಮಾಡಿದ್ದಾನೆ. ಸಮಕಾಲೀನ ಸಂಪ್ರದಾಯವನ್ನು ಪ್ರಾಚೀನ ಕಾಲದ ಸಂಗತಿಯ ನಿರೂಪಣೆಗೆ ಬಳಸಿಕೊಂಡಿದ್ದಾನೆ.

ಈ ಕವಿಯು ಆಯ್ಕೆಮಾಡಿಕೊಂಡದ್ದು — ಆತನೇ ಹೇಳಿಕೊಂಡಂತೆ — ಪುರಾಣದ 'ಚಂದ್ರಗುಪ್ತ — ಚಾಣಕ್ಯ' ರ ಕಥೆಯನ್ನು. ಆದರೆ ಆತ ಅದನ್ನು ಯಥಾವತ್ತಾಗಿ ಅನುಸರಿಸದೆ ತನ್ನ 'ಪ್ರಾದೇಶಿಕ, ಸಾಂಸ್ಕೃತಿಕ, ವ್ಯಕ್ತಿವಿಶಿಷ್ಟ ಪ್ರತಿಭೆ' ಯ ಮೂಲಕ ಪುನರವ್ಯಾಖ್ಯಾನಿಸಿದ್ದಾನೆ. ಕವಿಗೆ ತನ್ನ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ ಆವರಣದ ಧ್ವನಿಯನ್ನು ಮೂಡಿಸಲು ಇದೊಂದು ಒಳ್ಳೆಯ ಮಾಧ್ಯಮವೆನಿಸಿತು[3].

ಹಿಂದಿನ ಕಾಲದಿಂದಲೂ ನಡೆದು ಬಂದಂತಹ — ಸಾಧುಸಂತರ ಬಗೆಗಿನ ಗೌರವ, ತೀರ್ಥಯಾತ್ರೆ ಮೋಕ್ಷದಾಯಕವೆಂಬ ಭಾವನೆ, ನಾಕ — ನರಕಗಳ ಕಲ್ಪನೆ, ಶಕುನಗಳಲ್ಲಿ ನಂಬಿಕೆ — ಮೊದಲಾದ ಸಾಂಪ್ರದಾಯಿಕ ಧಾರ್ಮಿಕ ನಂಬಿಕೆಗಳು ಪೂರ್ವದ ಮರ್ಯಾದೆಗಳೊಂದಿಗೆ ಆಚಾರದಲ್ಲಿದ್ದುದು ಈ ಕೃತಿಯಲ್ಲಿ ಕಂಡುಬರುತ್ತದೆ[4].

ನಂಬಿಕೆಗಳು : ಸಂಪ್ರದಾಯಗಳು : ಆಚರಣೆಗಳು

" ಶ್ರದ್ಧಾಮೂಲವಾಗಿದ್ದು, ಪುನರಾವರ್ತನೆ ಮತ್ತು ಸಾಮುದಾಯಿಕ ವೀಕ್ಷಣೆಯಿಂದ ಸಾಂಪ್ರದಾಯಿಕವಾಗಿ ಒಪ್ಪಿತವಾಗಿರುವ, ಭೂತ ವರ್ತಮಾನ ಭವಿಷ್ಯತ್ಕಾಲಗಳಿಗೆ ಸಂಬಂಧಿಸಿದಂತೆ ಕಾರ್ಯ ಕಾರಣ ಸಂಬಂಧವನ್ನು ಸೂಚಿಸುವ ಕಲ್ಪನೆಯನ್ನು ' ನಂಬಿಕೆ ' ಎಂದು ಕರೆಯಬಹುದು. ನಂಬಿಕೆಯಂತೆ ಸಮುದಾಯವಿಡೀ ನಡೆಯುವುದರಿಂದ ಸಂಪ್ರದಾಯ ರೂಪುಗೊಳ್ಳುತ್ತದೆ. ಒಂದು ವರ್ಗ ಪರಂಪರಾಗತವಾಗಿ ಒಪ್ಪಿರುವ ಮಾನವನ ಕ್ರಿಯಾವಿನ್ಯಾಸವನ್ನು ' ಸಂಪ್ರದಾಯ ' ವೆಂದು ಕರೆಯಬಹುದಾಗಿದೆ. ಇದನ್ನು ಹೇಗೆ ಮಾಡಬೇಕು ಎಂಬುದನ್ನು ತಿಳಿಸುವ ಕ್ರಿಯಾವಿಧಾನವು ' ಆಚರಣೆ ' ಎನಿಸುವುದು. ಇವೆಲ್ಲಕ್ಕೂ ನಂಬಿಕೆಯೇ ಮೂಲದ್ರವ್ಯ "[5]. ಈ ಹಿನ್ನೆಲೆಯಲ್ಲಿ ಕಂಪನಾರಾಯಣನು ಉಲ್ಲೇಖಿಸಿರುವ ನಂಬಿಕೆಗಳು, ಆಚರಣೆಗಳು ಮುಂತಾದ ಸಂಗತಿಗಳನ್ನು ಪರಿಶೀಲಿಸಿದೆ.

ವೀತಹವ್ಯರೆಂಬ ಮುನಿಗಳು ರಾಜಾಸ್ಥಾನಕ್ಕೆ ಬಂದಾಗ — ಅವರನ್ನು ಉಪಚರಿಸುವುದರಿಂದ ತನ್ನ ಇಷ್ಟಾರ್ಥಸಿದ್ಧಿಯಾಗುವುದೆಂದು ಸರ್ವಾರ್ಥಸಿದ್ಧಿಯು ತಿಳಿಯುವುದು, ಪುರಾಣಿಕನು ಅರ್ಧೋದಯ ಕಾಲದಲ್ಲಿ ಪ್ರಯಾಗ ತೀರ್ಥಯಾತ್ರೆಯ ಮಹತ್ವವನ್ನು ತಿಳಿಸಿದಾಗ ರಾಯನಿಗೆ ಆ ಪುಣ್ಯಕ್ಷೇತ್ರಕ್ಕೆ ಹೋಗಬೇಕೆಂಬ ಮನಸ್ಸಾಗುವುದು, ಮಾಸೋಪವಾಸಿಯಿಂದ ಶತ್ರುಪಲಾಯನ ಜಪ[6] ಮಾಡಿಸಿದರೆ ಶತ್ರುಗಳ ನಾಶವಾಗುವುದೆಂದು ನಂದರು ಆ ಕಾರ್ಯಮಗ್ನರಾಗುವುದು, ಬಾಗುರಾಯಣಾದಿಗಳನ್ನು ಭೇದಿಸಲು ಚಾಣಕ್ಯನು — ಕೇಶವದಾಸನೆಂಬ ವರ್ತಕನಿಗೆ ದೇವಸ್ಥಾನವನ್ನು ಕಟ್ಟಿಸಲು ಕೊಟ್ಟ ಹಣವು[7] ಮೌರ್ಯನ ಸಾವಿನಲ್ಲೇ ನಿಂತಿತೆಂದು ಹೇಳಿಸುವುದು, ಗೂಢಚಾರನಾದ ಮರಾಳಕನು ಪ್ರತಿ ಮನೆಯ ಎದುರಿಗೆ ನಿಂತು ಸ್ವರ್ಗ ನರಕಗಳ ಭಾವಚಿತ್ರಗಳನ್ನು ತೋರಿಸುತ್ತಾ ಜನರು ಸತ್ಕರ್ಮಗಳನ್ನು ಆಚರಿಸಬೇಕೆಂದು ಪ್ರೇರೇಪಿಸುವುದು ಅಂತರಿಕ್ಷದಲ್ಲಿ ಸೋಪಾನ ಪಂಕ್ತಿಯು ಕಾಣಿಸಿ ಅದರಲ್ಲಿ ಸುವರ್ಣ ವೃಕ್ಷ ಸಮೂಹವು ಗೋಚರವಾಗಲು ಅದನ್ನು ನೋಡಿ ಸರ್ವಾರ್ಥಸಿದ್ಧಿಯು ತನಗೆ ಆಯುಃಕಲೆಯು ತೀರಿತೆಂದು ತಿಳಿಯುವುದು — ಮೊದಲಾದವು ಆ ಕಾಲದ ಜನರ ನಂಬಿಕೆಗಳನ್ನು ನಮ್ಮ ಮುಂದಿಡುತ್ತವೆ.

ಆಚರಣೆಗಳು: ಅರಸನು ಬೆಳಿಗ್ಗೆದ್ದು ವಿಪ್ರಂಯುಗ್ಮಧೇನು ದರ್ಶನವನ್ನು ಮಾಡಿ ಸ್ನಾನಾದಿಗಳನ್ನು ನೆರವೇರಿಸಿ ಅಲಂಕೃತನಾಗುವುದು, ಪ್ರಾತಃಕಾಲ, ಮಧ್ಯಾಹ್ನಗಳಲ್ಲಿ ಶಂಖ, ಭೇರಿ ಮೊದಲಾದ ವಾದ್ಯಧ್ವನಿ ಮಾಡಿಸುವುದು, ರಾಜಪುರೋಹಿತರು, ವಿಪ್ರರು ಅರಸನನ್ನು ಕಂಡಾಗ 'ಶ್ರೇಯೋಸ್ತು' ಎಂದು ಹರಸುವುದು, ಬಂಧುಗಳು ಮೃತರಾದಾಗ ಜ್ಞಾತಿ ಸೂತಕ ಸ್ನಾನದಿಂದ ಪರಿಶುದ್ಧರಾಗುವುದು, ಯುದ್ಧಕ್ಕೆ ಹೊರಡುವಾಗ ಶುಭಲಗ್ನದಲ್ಲಿ ವಿಪ್ರರಿಗೆ ಬಹುಧನ ರತ್ನಗಳನ್ನು ಯಾತ್ರಾದಾನವಾಗಿ ಕೊಡುವುದು, ಪರ ರಾಜರಲ್ಲಿಗೆ ನಿಯೋಗಿಗಳನ್ನು — ವಸ್ತ್ರವಾಹನ ಮಂಗಳ ದ್ರವ್ಯಗಳನ್ನು ಕೊಟ್ಟು ಉಚಿತ ಪರಿವಾರದೊಂದಿಗೆ ಕಳುಹಿಸುವುದು — ಮೊದಲಾದವು ಪರಂಪರೆಯಿಂದ ಬಂದ ಆಚರಣೆಗಳೇ ಆಗಿವೆ.

ಶಕುನಗಳು: ಸಮಕಾಲೀನ ಜನಜೀವನದಲ್ಲಿ ನಂಬಿದ್ದ ಈ ಕೆಳಗಿನ ಶಕುನಗಳನ್ನು ಕಥೆಯು ಜರಗಿದ ಕಾಲಕ್ಕೆ ಹೊಂದಿಸಿ ಬಳಸಿಕೊಳ್ಳಲಾಗಿದೆ:

ಅ) ಚಾಣಕ್ಯನು ಕ್ರೂರ ಪ್ರತಿಜ್ಞೆಯನ್ನು ಮಾಡಿ ಎದ್ದುಹೋದಾಗ ಮಹೋತ್ಪಾತಗಳಾದ ಭೂಕಂಪವೂ ಧೂಮಕೇತುಗಳೂ ಉದ್ಭವಿಸಿದುವಂತೆ. ಇದರಿಂದ ನವನಂದರಿಗೆ ಮಹಾವಿಪತ್ತುಂಟಾಗುತ್ತದೆ — ಎಂದು ಜನರಾಡಿಕೊಂಡರಂತೆ.

ಆ) ಚಂದ್ರಗುಪ್ತ — ಚಾಣಕ್ಯರು ಪರ್ವತರಾಜನಲ್ಲಿಗೆ ಬಂದು ಸಹಾಯ ಯಾಚಿಸಿದಾಗ, ಇದರಿಂದ ತಮಗ್ ನಂದನಿಗ್ರಹವು ಸುಲಭವಾಗುವಂತೆ ತೋರುತ್ತಿದೆಯೆಂದು ಪರ್ವತರಾಜನು ಯೋಚಿಸುತ್ತಿದ್ದಾಗ ಮಧ್ಯಾಹ್ನ ಸೂಚಕವಾದ ಶಂಖಭೇರೀ ಮೊದಲಾದ ವಾದ್ಯಧ್ವನಿಗಳು ಭೋರಿಡಲು — ಈ ಕಾರ್ಯಕ್ಕೆ ಈ ವಾದ್ಯಧ್ವನಿಗಳು ಶುಭಸೂಚಕಗಳೆಂದು ಆತ ನಿಶ್ಚಯಿಸಿಕೊಂಡನಂತೆ (ಅದರೆ ಅದು ಶುಭಸೂಚಕವಾಗಿ ಪರಿಣಮಿಸಿದ್ದು ಚಂದ್ರಗುಪ್ತ—ಚಾಣಕ್ಯರಿಗೆ).

ಇ) ನಂದರು ಪುರದ್ವಾರ ದೇಶವನ್ನು ಬಿಟ್ಟು ಯುದ್ಧಕ್ಕಾಗಿ ದಾಟಿ ಬರುತ್ತಿದ್ದಾಗ ತತ್ಕಾಲದಲ್ಲಿ ಅವರ ವಾಮನೇತ್ರಗಳು ಅದುರಿದವಂತೆ. ಹಂಗಹದ್ದುಗಳು ಅವರ ರಥ ಧ್ವಜಪತಾಕಾಗ್ರವನ್ನು ಅಡರಿದವಂತೆ. ಅದನ್ನು ನೋಡಿದ ಜನರು ಇದೇನೋ ದುರ್ನಿಮಿತ್ತಗಳಾಗುತ್ತಿವೆಯೆಂದು ಚಿಂತಿಸುತ್ತಿದ್ದರಂತೆ.

ಈ) ರಾಕ್ಷಸನು ಹಾವುಗಳ ಸಹಿತನಾದ ಹಾವಾಡಿಗನನ್ನು ನೋಡಬೇಕೆಂಬ ಸಮಯದಲ್ಲಿ — ತನ್ನ ಎಡಗಣ್ಣು ಹಾರುವುದನ್ನು ತಿಳಿದು ಸರ್ಪದರ್ಶನಕ್ಕಿಂತ ಅಪಶಕುನವಾಗಿ ವಾಮನೇತ್ರವು ಅದುರುತ್ತಿದೆ — ಎಂದು ಚಿಂತಿಸಿದನಂತೆ.

ಉ) ತನ್ನ ಕಾರ್ಯದಲ್ಲಿ ಸಾಧಕ ಬಾಧಕಗಳನ್ನು ಲಾಭಾಲಾಭಗಳನ್ನು ಪರಿಭಾವಿಸುತ್ತಿದ್ದಾಗ ರಾಕ್ಷಸನ ವಾಮಭುಜವು ಅದುರಲು — ಯಾಕೋ ಅಪಶಕುನವಾಗುತ್ತಿದೆ. ಆದರೂ ಹಿಡಿದ ಕಾರ್ಯವನ್ನು ಸಾಧಿಸಬೇಕು — ಎಂದುಕೊಂಡನಂತೆ.

ಊ) ಎರಡನೇ ಸಲವು ಯುದ್ಧಮುಹೂರ್ತಕ್ಕೆ ಲಗ್ನ ಕೇಳಹೋರಟ ರಾಕ್ಷಸನಿಗೆ ಕ್ಷಪಣಕದರ್ಶನವಾಗಿ — ಇದೂ ಅಪಶಕುನವೆಂದುಕೊಂಡು ಅತನನ್ನು ಸೌಮ್ಯವೇಷದಿಂದ ಬರಲು ಹೇಳಿ ಕಳುಹಿಸುತ್ತಾನೆ.

ಸಾಮಾಜಿಕ ಪದ್ಧತಿಗಳು: ಈಗ ಲುಪ್ತವಾಗಿರುವ ಅಥವಾ ಅಪರೂಪವಾಗಿರುವ ಕೆಲವು ಸಾಮಾಜಿಕ ಪದ್ಧತಿಗಳ ವಿವರ ಇಲ್ಲಿ ಸಿಗುತ್ತದೆ.

1. ಸಹಗಮನ: ಪ್ರಾಚೀನ ಜನಾಂಗಗಳು ಈ ಲೋಕದಂತಹ ಇನ್ನೊಂದು ಲೋಕವಿದೆಯೆಂದು ಬಹು ದೃಢವಾಗಿ ನಂಬಿದ್ದರು. ವ್ಯಕ್ತಿ ಮಡಿದಾಗ ಅವನು ಆ ಪರಲೋಕಕ್ಕೆ ಹೋಗುವನೆಂದೂ ಅಲ್ಲಿಯ ಅವನ ಭೋಗಕ್ಕೆ ಇಲ್ಲಿಂದ ಅವನಿಗಿಷ್ಟವಾದ ವಸ್ತುಗಳನ್ನು ಕಳುಹಿಸಬೇಕೆಂದೂ ಭಾವಿಸಿದ್ದರು. ಬಹುಶ: ಸಹಗಮನ ಪದ್ಧತಿಗೆ ಇದೇ ಮೂಲವಿರಬಹುದೆಂದು ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ [8]. ಅರ್ಥಶಾಸ್ತ್ರದಲ್ಲಿ ಸತಿಯಾದುದರ ಉಲ್ಲೇಖವಿಲ್ಲ. ಕೌಟಿಲ್ಯನು ಆ ಬಗ್ಗೆ ಏನೂ ಹೇಳುವುದಿಲ್ಲ ಮಾತ್ರವಲ್ಲ, ಒಂದೆಡೆಯಲ್ಲಿ ಗಂಡನು ಸತ್ತಿದ್ದರೆ ಮರುಮದುವೆಯಾಗಬಹುದೆಂದೂ ಇನ್ನೊಂದೆಡೆಯಲ್ಲಿ ಗಂಡ ಸತ್ತಿದ್ದರೆ 'ಏಳು ತಿಂಗಳುಗಳ ಕಾಲ ಕಾಯ್ದು ನಂತರ ಮದುವೆಯಾಗಬೇಕೆಂದೂ ಹೇಳುತ್ತಾನೆ [9]. ಆದರೆ ಅದೇ ಮೌರ್ಯರ ಕಾಲದ ಸರಿ ಸುಮಾರಿಗೆ ಸತಿ ಪದ್ಧತಿ ಆರಂಭವಾಗಿತ್ತೆಂದು ಚಿದಾನಂದ ಮೂರ್ತಿಯವರು ಶಾಸನಾಧಾರದಿಂದ ತೋರಿಸಿಕೊಟ್ಟಿದ್ದಾರೆ [10]. ಅಂತೂ ನಂದ — ಚಂದ್ರಗುಪ್ತರ ಕಾಲದಲ್ಲಿ ವೀರಪತ್ನಿಯರು ಸಹಗಮನ ಮಾಡಿದರೆಂದರೆ ಅನುಚಿತವಾಗಲಾರದು. ಆದರೆ ಮುದ್ರಾಮಂಜೂಷದಲ್ಲಿ ಕೊಟ್ಟ ಸತಿ ಪದ್ಧತಿಯ ವಿವರಣೆ ಕವಿಯು ತಾನು ಕಣ್ಣಾರೆ ಕಂಡ ಇಂತಹ ಘಟನೆಗಳನ್ನು ಕುರಿತದ್ದೇ ಆಗಿದೆ.

ಪ್ರಾಚೀನ ಕಾಲದ ಕನ್ನಡ ಕಾವ್ಯಗಳೂ ಹಲವು ಸತಿ ಸಂಗತಿಗಳನ್ನು ನಿರೂಪಿಸಿವೆ. ವಿಕ್ರಮಾರ್ಜುನ ವಿಜಯ, ಕರ್ಣಾಟಕ ಕಾದಂಬರಿ, ಅಜಿತಪುರಾಣ, ಅನಂತನಾಥ ಪುರಾಣ, ಕರ್ಣಾಟಕ ಭಾರತ ಕಥಾಮಂಜರಿ, ತೊರವೆ ರಾಮಾಯಣ, ಮೋಹನ ತರಂಗಿಣಿ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ರಾಮನಾಥ ಚರಿತೆ, ಸಿರುಮಣನಾಯಕನ ಸಾಂಗತ್ಯ — ಇವೇ ಮೊದಲಾದ ಕಾವ್ಯಗಳು ಕರ್ಣಾಟಕದಲ್ಲಿಯ ಸತಿಪದ್ಧತಿಯ ಮೇಲೆ ಬೆಳಕನ್ನು ಚೆಲ್ಲುತ್ತವೆ.[10ಎ].

ಮೈಸೂರು ಒಡೆಯರ ಕಾಲದಲ್ಲಿ ಸಹಗಮನ: ಮೈಸೂರಿನ ಶ್ರೀಮನ್ಮಹಾರಾಜರ ವಂಶದಲ್ಲಿ ಹತ್ತನೆಯ ಆಳ್ವಿಕೆಯವರಾದ ಚಾಮರಾಜ ಒಡೆಯರವರು ಸ್ವರ್ಗಸ್ಥರಾದಾಗ (ಕ್ರಿ.ಶ. 1637) ಇವರ ಪತ್ನಿಯರೆಲ್ಲರೂ ಸಹಗಮನ ಮಾಡಿದ್ದರು[11]. ಇದೀಗ ಲಭ್ಯವಿರುವ ದಾಖಲೆಗಳ ಪ್ರಕಾರ ಇದುವೇ ಈ ವಂಶದಲ್ಲಿಯ ಪ್ರಥಮ ಸಹಗಮನವಾಗಿದೆ. ಮತ್ತೆ ರಣಧೀರ ಕಂಠೀರವ ನರಸರಾಜ ಒಡೆಯರ, ದೊಡ್ಡ ದೇವರಾಜ ಒಡೆಯರ, ಚಾಮರಾಜ ಒಡೆಯರ — ಮೊದಲಾದವರು ಮೃತರಾದಾಗ ಕೂಡಾ ರಾಣಿಯರು ಸಹಗಮನ ಮಾಡಿದ್ದರು. ಆದರೆ ಈ ರಾಜರ ಆಳ್ವಿಕೆಯ ಮಧ್ಯದಲ್ಲಿ ಆಳಿದ ಚಿಕ್ಕದೇವರಾಜ ಒಡೆಯರು, ಕಂಠೀರವ ಮಹಾರಾಜ ಒಡೆಯರು, ದೊಡ್ಡ ಕೃಷ್ಣರಾಜ ಒಡೆಯರು ಮೃತರಾದಾಗ ರಾಣಿಯರು ಸಹಗಮನ ಮಾಡಿರಲಿಲ್ಲ. ಇದರಿಂದ ಹತ್ತೊಂಬತ್ತನೆಯ ಶತಮಾನದಲ್ಲಿ ಅರಮನೆಯಲ್ಲಿ ಸಹಗಮನವು ಐಚ್ಛಿಕವಾಗಿತ್ತೆಂದು ತಿಳಿದುಬರುವುದು.

ಆದರೆ ಬ್ರಾಹ್ಮಣ ಸಮಾಜದಲ್ಲಿ ಅದು ಮುಂದುವರಿದಿದ್ದು ಈ ಕವಿಯ ಹುಟ್ಟೂರಾದ ತಿರುಮಕೂಡಲು ನರಸೀಪುರದಲ್ಲಿದ್ದ ಇದೇ ಶಾಸ್ತ್ರಿಗಳ ಮನೆತನದಲ್ಲಿ ನಡೆದ ಸತಿಘಟನೆಯ ಉಲ್ಲೇಖ ಸಿಗುವುದು.

ತಿರುಮಕೂಡಲು ನರಸೀಪುರದ ಅಮಿಲರಿಗೆ ದಿವಾನ ಪೂರ್ಣಯ್ಯ ಬರೆದ ಒಂದು 'ಓಲೆಯಲ್ಲಿ — 'ಶಾಸ್ತ್ರಿಗಳು ಶ್ರೋತ್ರೀಯರಾಗಿ ಬಾಳಿದ ಹಿರಿಯರು. ಅವರ ಹೆಂಡತಿ ಹಾಗೆ ಹಟ ಹಿಡಿಯುವುದು ಸರಿಯಲ್ಲ ಎಂದು ಈ ಎಲ್ಲ ಬಗೆಯಲೂ ತಿಳಿಯಹೇಳುವುದು. ಆಕೆ ಎಷ್ಟುಮಾತ್ರಕ್ಕೂ ಒಪ್ಪದಿದ್ದಲ್ಲಿ ಸಹಗಮನಕ್ಕೆ ಒಪ್ಪಿಗೆ ಕೊಡುವುದು' ಎಂದು ಉತ್ತರ ಬರೆದಿದ್ದಾರೆ [12].

ಈ ಘಟನೆಯು ತಾ.24—3—1805ರಲ್ಲಿ ಜರಗಿದ್ದು 1938ರ ಮೈಸೂರು ಆರ್ಕಿಯಾಲಜಿಕಲ ರಿಪೋರ್ಟ್, ಟಿ. ನರಸೀಪುರ ಇದರಲ್ಲಿ ದಾಖಲಾಗಿದೆ [13]. ಇದಲ್ಲದೆ ಕ್ರಿ.ಶ. 1826, ಜೂನ 9 ರಂದು ಬೆಂಗಳೂರಿನಲ್ಲಿ ಸತಿ ಘಟನೆ ನಡೆದುದೊಂದರ ವಿವರವು ಮಿಶನರಿ ಟಿಪ್ಪಣಿಗಳಿಂದ ತಿಳಿದುಬರುತ್ತದೆ. ಅಂದರೆ ಕ್ರಿ.ಶ. 1829ರ ಸಹಗಮನ ನಿಷೇಧ ಕಾನೂನು ಜಾರಿಗೆ ಬರುವ ತನಕವೂ ಕನ್ನಡ ನಾಡಿನಲ್ಲಿ ಪತಿ ತೀರಿಕೊಂಡಾಗ ಸಹಗಮನ ಮಾಡುತ್ತಿದ್ದರು ಎಂಬ ವಿಚಾರ ತಿಳಿದುಬರುತ್ತದೆ.

ಇದೀಗ ನಂದಪತ್ನಿಯರು ಮಾಡಿಕೊಂಡರೆಂದು ಹೇಳಲಾದ 'ಸಹಗಮನ' ದಲ್ಲಿ ಆ ಕಾಲದಲ್ಲಿದ್ದ ಸತಿಯ ವಿಧಿ ವಿಧಾನವು ತಿಳಿದುಬರುವುದು.

ನಂದ ನಿತಂಬಿನಿಯರು ಜ್ಞಾನಿಗಳಾದ ಭೂಸುರಸ್ತೋಮಕ್ಕೆ ಮಹಾದಾನ ಪ್ರತಿನಿಧಿಯಾದ ದ್ರವ್ಯಗಳನ್ನು ಭಗವದರ್ಪಣವೆಂದು ಕೊಟ್ಟು ಸಾಲಂಕಾರ ಗೋಲಕ್ಷಗಳನ್ನು ದಾನ ಮಾಡಿ ಮತ್ತು ಬ್ರಹ್ಮವಿದ್ಯಾ ಪ್ರದಂಪತಿಗಳಿಗಲಂಕರಿಸಿ ಅವರಿಗೆ ಬಾಗಿನಗಳನ್ನು ಕೊಟ್ಟು ಪುರೋಹಿತರು ಮಾಡುವ ತತ್ಕಾಲೋಚಿತ ಕರ್ಮವಾದುದನ್ನು ನೋಡಿ ದ್ವಿಜರನುಮತಿಯನ್ನು ಕೈಕೊಂಡು ಗಂಗಾದೇವಿಯನ್ನು ಪೂಜಿಸಿ, ಪ್ರಾರ್ಥಿಸಿ ದೇವತೆಗಳಿಗಭಿವಂದಿಸಿ ಪತಿಗಳ ಶಿರಸ್ಸುಗಳನ್ನು ತೆಗೆದುಕೊಂಡು ಅಗಿಲು ಚಂದನ ಮೊದಲಾದ ಸುಗಂಧ ದ್ರವ್ಯಗಳಿಂದ ರಚಿಸಿರುವ ಚಿತೆಗಳನ್ನು ಆರೋಹಣಗೆಯ್ದು ಪತಿಮೂರ್ಧಗಳನ್ನಾಲಿಂಗಿಸಿದವರಾಗಿ ಶಿವಶಿವಾ! ಮುಕುಂದನೇ! ಎಂದು ಅಚಲಚಿತ್ತದಿಂದ ಹರಿಹರ ಸ್ಮರಣೆಯನ್ನು ಮಾಡುತ್ತಿರಲು, ಆಗ ಬೆಂಕಿಯು ಪ್ರಜ್ವಲಿಸುತ್ತ ಆವರಿಸಿ ಬರುತ್ತಿರಲು ನಂದಪತ್ನಿಯರೆಲ್ಲರೂ ತಮ್ಮ ತನುಗಳನ್ನೊಪ್ಪಿಸಿದರು.

ಈ ರೀತಿಯಾಗಿ ಅವರು ಸ್ವಇಚ್ಛೆಯಿಂದಲೇ ಸಹಗಮನ ಮಾಡುತ್ತಿದ್ದರೆಂಬ ಚಿತ್ರಣವು ನಮಗೆ ದೊರೆಯುತ್ತವೆ. ಆದರೆ ಇದನ್ನು ಪ್ರಶ್ನಿಸುವ, ನಿಷೇಧಿಸಬೇಕೆಂಬ ಅಭಿಪ್ರಾಯವೂ ಆಗ ವ್ಯಕ್ತವಾಗುತ್ತಿತ್ತೆಂದು ಕಾಣುತ್ತದೆ. ಒಂದೆಡೆ ನಂದಪತ್ನಿಯರು ಬಂಗಾರದ ಸ್ತ್ರೀಯರಿಗೆ — 'ಸಹಗಮನವೆಂಬುದು ಧರ್ಮಪತ್ನಿಯರಿಗೇ ಯೋಗ್ಯವು. ಅನ್ಯರಿಗೆ ದುರ್ಮರಣ ದೋಷಕ್ಕೆ ಕಾರಣವಲ್ಲದೆ ಸದ್ಗತಿದಾಯಕವಲ್ಲವು' ಎಂದು ಹೇಳಿದರೆ ಇನ್ನೊಂದೆಡೆ ರಾಕ್ಷಸನು ಮಲಯಕೇತುವಿನಲ್ಲಿಂದ ಭ್ರಮನಿರಸನಗೊಂಡು ಹೊರಟು ನಿಂತಾಗ —

'ಪ್ರಾಣವಂ ತೊರೆದುಕೊಳ್ಳೋಣ ಎಂದರೆ ಅದು ಮೂರ್ಖ ಸ್ತ್ರೀಯರುಗಳು ಮಾತ್ರ ಆದರಿಸುವ ದುಷ್ಕೃತ್ಯವು' ಎನ್ನುವನು. ಇದರಿಂದ ಆತ್ಮಹತ್ಯೆ ಬಗ್ಗೆ ಆ ಕಾಲದಲ್ಲಿ ವಿಶೇಷ ಪ್ರೋತ್ಸಾಹವಿರಲಿಲ್ಲ. ಅದು ದುರ್ಮರಣದ ದೋಷಕ್ಕೆ ಕಾರಣವಾಗುವುದೆಂಬ ಅಭಿಪ್ರಾಯವೂ ಪ್ರಚಾರದಲ್ಲಿತ್ತೆಂದು ತಿಳಿದುಬರುವುದು.

2. ಶೂಲಕ್ಕೇರಿಸುವಾಗಿನ ಪದ್ಧತಿ: ಮರಣದಂಡನೆಗೆ ಗುರಿಯಾದವರನ್ನು — ಹಿಡಿದು ಕೊರಳಿಗೆ ಎಕ್ಕದ ಹೂವಿನ [14]ಮಾಲೆಯನ್ನು ಹಾಕಿಸಿ ಪರುಷವಾದ್ಯದ ಧ್ವನಿಯಿಂದ ಕೂಡಿ ಸಾರಿಕೊಂಡು ರಾಜಬೀದಿವಿಡಿದು ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಶೂಲಕ್ಕೇರಿಸಲಿದ್ದ ವ್ಯಕ್ತಿಯು ಅಲಂಕರಿಸಿದ್ದ ಭೂಷಣಗಳು ಘಾತುಕರಿಗೆ [15] ಸಲ್ಲತಕ್ಕವುಗಳಾಗಿದ್ದುವು. ಶೂಲಕ್ಕೆ ಹಾಕುವಾಗ ಅಲ್ಲಿ ಯಾರೂ ಇರಬಾರದೆಂಬ ನಿಯಮವಿತ್ತು.

ಮುದ್ರಾಮಂಜೂಷದಲ್ಲಿ ರಾಕ್ಷಸನ ಪತ್ನೀಪುತ್ರರಿಗೆ ಆಶ್ರಯವಿತ್ತು. ರಾಜಾಪರಾಧ ಮಾಡಿದನೆಂದು ಆರೋಪ ಹೊರಿಸಿ ಬಳೆಗಾರ ಶೆಟ್ಟಿ ಚಂದನದಾಸನನ್ನು ವಧ್ಯಸ್ಥಾನಕ್ಕೆ ಕೊಂಡುಹೋಗುವಾಗ ಮೇಲೆ ಹೇಳಿದಂತೆ ವರ್ಣಿಸಲಾಗಿದೆ.

3. ಪಟ್ಟಾಭಿಷೇಕದ ಸಂಭ್ರಮ: ಮಹಾರಾಜನ ಸಿಂಹಾಸನಾರೋಹಣ ಸಂದರ್ಭದಲ್ಲಿ ಕಾರಾಗೃಹದಲ್ಲಿದ್ದ ಜನರ ನೆರೆ ಸಂಕೋಲೆಗಳನ್ನು ಬಿಡಿಸಿ ಮನಬಂದಂತೆ ಹೋಗಲಿಕ್ಕೆ ಬಿಡುತ್ತಿದ್ದರು.

4. ಚಾವಡಿಗಳು: ಈ ಸಂಪ್ರಬಂಧದ ಒಂದನೆಯ ಅಧ್ಯಾಯದಲ್ಲಿ ಹೇಳಲಾದ ಹದಿನೆಂಟು ಚಾವಡಿಗಳಲ್ಲಿ ಸುಂಕದ ಚಾವಡಿ, ಬೇಹಿನ ಚಾವಡಿ ಮೊದಲಾದವುಗಳ ಪ್ರಸ್ತಾವ ಮುದ್ರಾಮಂಜೂಷದಲ್ಲಿ ಬರುತ್ತವೆ.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿಯೇ ಗಡಿಯೊಂದಕ್ಕೆ ಇಂತಿಷ್ಟು ಜನ ಕೆಲಸಗಾರರೆಂದು ನಿರ್ಣಯ ಮಾಡಿ ಚಾವಡಿಯ ಕಾವಲುಗಾರರು 2 ಜನ ಎಂದು ಕಾವಲು ಕಟ್ಟಳೆ ನಡೆವಂತೆ ಮಾಡಿದ್ದು [16] ಅದೇ ಪದ್ಧತಿಯು ಮುಮ್ಮಡಿಯವರ ಕಾಲದಲ್ಲಿಯೂ ನಡೆದು ಬರುತ್ತಿದ್ದಿತು.

5. ಗೊಲ್ಲರು, ಕಳ್ಳ ಬಂಟರು, ಕಾಮಾಟದವರು, ಕಟ್ಟುಕರಣಿಕರು — ಈ ಹುದ್ದೆಗಳವರ ಪ್ರಸ್ತಾವವೂ ನಮ್ಮ ಕೃತಿಯಲ್ಲಿದೆ. ಇವೆಲ್ಲ ಕವಿಯ ಕಾಲದಲ್ಲಿದ್ದ ಹುದ್ದೆಗಳೇ. ಹದಿನೆಂಟು ಚಾವಡಿಗಳ ಪೈಕಿ ಸಮ್ಮುಖದ ಚಾವಡಿಯಲ್ಲಿ ಒಳ ಬೊಕ್ಕಸದ ಅಧಿಕಾರಿಯಾಗಿ ಗೊಲ್ಲನನ್ನು ನೇಮಿಸುತ್ತಿದ್ದರು. ಅರಮನೆಯ ನಿಬಂಧನೆಯನ್ನು ಮೀರಿ ನಡೆವ ಜನರಿಗೆ ಶಿಕ್ಷೆ ಮಾಡುವಂತೆ ನೇಮಿಸುತ್ತಿದ್ದ ಜನರಲ್ಲಿ ಕಳ್ಳ ಬಂಟರೂ ಇರುತ್ತಿದ್ದರು. ದೊಡ್ಡ ಗ್ರಾಮ ಮತ್ತು ಸಣ್ಣ ಗ್ರಾಮಗಳಿಗೆ ಗುರಿಕಾರರು ಕಟ್ಟುಕರಣಿಕರು, ಕಾಮಾಟರು ಮತ್ತಿತರರು ಇರುತ್ತಿದ್ದರು [16ಎ].

ಸಮಕಾಲೀನ ಭಾಷೆ: ಪರ್ವತರಾಜನು ಚಾಣಕ್ಯ ಚಂದ್ರಗುಪ್ತರೊಡಗೂಡಿ ಪಾಟಲೀಪುರದ ಮೇಲೆ ದಂಡೆತ್ತಿ ಬಂದಾಗ ಅಲ್ಲಿನ ಬ್ರಾಹ್ಮಣರು ಕರ್ಣಾಟಕಾಂಧ್ರ ದ್ರಾವಿಡ ಭಾಷೆಗಳಲ್ಲಿ ಮಾತನಾಡಿಕೊಂಡರೆಂದು ಕವಿಯು ಹೇಳಿದ್ದಾನೆ. ಇದು ದೂರದ ಗೌಡ ದೇಶದ ಬದಲು ಶ್ರೀರಂಗ ಪಟ್ಟಣದ ಅರಮನೆಯ ವಾತಾವರಣವನ್ನೇ ನೆನಪಿಗೆ ತರುತ್ತದೆ [17]. ನಂದರ ಯುದ್ಧಕಾಲದಲ್ಲಿ ಅಲ್ಲದಿದ್ದರೂ ಟಿಪ್ಪುವಿನ ಪತನದ ಕಾಲದಲ್ಲಿ ಕವಿಯು ಕಣ್ಣಾರೆ ಕಂಡಿದ್ದಿರಬಹುದಾದ ತನ್ನ ಸುತ್ತಮುತ್ತಲಿನವರ ಭಯ, ಭೀತಿಗಳನ್ನು ಇಲ್ಲಿ ಹಿಡಿದಿಟ್ಟಿದ್ದಾನೆ.

ವ್ಯಕ್ತಿನಾಮಗಳು: ಮುದ್ರಾಮಂಜೂಷದಲ್ಲಿ ಬರುವ ಪಾತ್ರಗಳ ಸಂಖ್ಯೆ ಸುಮಾರು ಇನ್ನೂರು. ಚಾಣಕ್ಯ — ಚಂದ್ರಗುಪ್ತ ಮೊದಲಾದ ಮುಖ್ಯಪಾತ್ರಗಳು ಐತಿಹಾಸಿಕವಾದರೂ ಚಿಕ್ಕಪುಟ್ಟ ಪಾತ್ರಗಳ ರಚನೆಯಲ್ಲಿ ಕವಿಯು ಸ್ವಾತಂತ್ರ್ಯ ವಹಿಸಿ ಸಮಕಾಲೀನ ಹೆಸರುಗಳನ್ನು ನಮ್ಮ ಮುಂದಿಡುತ್ತಾನೆ. ಉದಾ: ಭದ್ರಭಟಾದಿ ಸೈನಿಕರು ಚಂದ್ರಗುಪ್ತನ ಮೇಲೆ ಸಿಟ್ಟುಗೊಂಡು ಹೊರಟು ಹೋಗಲು ಚಾಣಕ್ಯನು ಅವರ ಕೈಕೆಳಗಿನ ಸರದಾರರಿಗೆ ಹೇಳಿ ಕಳುಹಿಸುತ್ತಾನೆ. ಆಗ ಬಂದವರು — ಲಕ್ಷ್ಮಣೋಜಿ, ವಿಜಯಸಿಂಧು, ಯಶವಂತರಾವ, ತುಳಜಾಖಂಡು, ಫತ್ತೆ ಬಹಾದೂರ, ಮುಕುಂದಸ್ವಾಮಿ, ಹಿಮ್ಮತಖಾನ, ಸಿಂಧೂಕಾಕರ, ಮಹತಾಪ ಜಂಗ, ಕಿಶೋರ ಘೋರ್ಪಡೆ, ರಾಮಾಜಿಪಾಧ್ಯಾರ, ಷಂಷೇರ ಬಾಬು, ಅಲ್ಲೀನಬಾಬು ಮೊದಲಾದವರು.

ವಸ್ತುತಃ ಇವು ಕ್ರಿ.ಶ. 1818ರಲ್ಲಿ ಪೇಶ್ವೆಯವರ ಆಳ್ವಿಕೆ ಕೊನೆಗೊಂಡಾಗ [17ಎ] ಅಲ್ಲಿಂದ ಮೈಸೂರಿನ ಮುಮ್ಮಡಿಯವರ ಆಸ್ಥಾನಕ್ಕೆ ಬಂದವರ ಹೆಸರುಗಳಾಗಿರಬೇಕು. ಆ ಹೆಸರುಗಳನ್ನು ಇಲ್ಲಿ ಕವಿ ಸಾಂದರ್ಭಿಕವಾಗಿ ಉಪಯೋಗಿಸಿಕೊಂಡಿದ್ದಾನೆ.

‘ಕಾಶಪ್ರಸ್ಥದಲ್ಲಿ ನಮ್ಮ ಅಶ್ವಗಳು ಬಹಳ ನಷ್ಟವಾದುದರಿಂದ ರಾಮಸಿಂಹನೆಂಬ ನಮ್ಮ ಕಡೆಯ ಸರದಾರನು ನಿರ್ವಹಿಸಲಾರದೆ ಗತಿಪ್ರಾಣನಾದನು” ಎಂಬ ವಿಚಾರವು ಯುದ್ಧಾರಂಭದಲ್ಲಿ ಬರುವುದು.

‘ಹೈದರನಾಮಾ’ದಲ್ಲಿ — ಪ್ರಾಕು ಕಲ್ಲೀಕೋಟೆ ಕಡೆ ಹಣದ ವರಾತದ ಬಗ್ಗೆ ಹೋಗಿ ಯುದ್ಧ ಚರಿಶಿಂಗು ಜಮಾದಾರನು ಅಲ್ಲಿನ ಹಣ ವಸೂಲು ಮಾಡದೆ ಅವನಾಶಿ ಬಳಿ ಬಂದು ಉಳಿದವಾಗಿ ಹೈದರಖಾನರು ತಮ್ಮ ಭಾವಮೈದುನನನ್ನು ಅಲ್ಲಿಗೆ ಕಳುಹಿಸಿದರು” ಎಂದಿದೆ [17ಬ].

ಸ್ಥಳ ನಾಮಗಳು: ಮುನವಳ್ಳಿ ಕಣಿವೆ, ಹೊನ್ನಗಟ್ಟ, ಸುಂದರಗಢ, ಶೃಂಗಾರಪಾಳ್ಯ, ಕಾಶಪ್ರಸ್ಥ, ಕ್ರೌಂಚಪ್ರಸ್ಥ, ಸುರಭಿವಾಪಿ ಚಂಪಕವತಿ — ಮೊದಲಾದ ಸ್ಥಳಗಳ ಹೆಸರುಗಳು ಈ ಕೃತಿಯಲ್ಲಿ ಬರುವುದಿದ್ದು ಅವುಗಳನ್ನು ಒಂದೊಂದಾಗಿ ಗಮನಿಸಬಹುದಾಗಿದೆ. ಮುನವಳ್ಳಿ ಕಣಿವೆ: ದುರ್ಗವನ್ನು ಹಿಡಿಯಬೇಕೆಂದು ಬಂದ ಶತ್ರುಸೇನೆಯು ಮುನವಳ್ಳೀ ಕಣಿವೆಯ ಹಳ್ಳದಲ್ಲಿ ಗುಂಪುಕೂಡಿ ನಿಂತಿದ್ದಾಗ, ನೆಲಸುರಂಗಕ್ಕೆ ಅಗ್ನಿಯನ್ನು ಮುಟ್ಟಿಸಲು — ಆ ಭೂಮಿಯು ಹಾರಿ ಅದರ ಘಾತದಿಂದ ಎಂಟು ಸಾವಿರ ಜನರು ಹತರಾಗಿ ಉಳಿದವರು ಹಿಂದಕ್ಕೆ ‘ಓಡಿದರಂತೆ. ಮತ್ತೆ ಯುದ್ಧಾಂತ್ಯದಲ್ಲಿ ಭವನಪಾಲಕನೆಂಬವನು ಮುನವಳ್ಳಿಯ

ತೋಟದಲ್ಲಿ ಜೀತಗಾರನಂತೆ ವೇಷವಂ ಧರಿಸಿ ಆಳುಗಳ ಸಂಗಡ ಗಿಡಗಳಿಗೆ ನೀರನ್ನು ಎರೆಯುತ್ತಿದ್ದನಂತೆ.

ಕವಿಯು ಇಲ್ಲಿ ಮಳವಳ್ಳಿಯನ್ನು ಕುರಿತಾಗಿ ಹೇಳುತ್ತಿರುವಂತಿದೆ. ಈ ಮಳವಳ್ಳಿಯು ಕವಿಯ ಹುಟ್ಟೂರಾದ ತಿರುಮಕೂಡಲು ನರಸೀಪುರದ ಈಶಾನ್ಯ ದಿಕ್ಕಿನಲ್ಲಿ ಕಾವೇರಿ ನದಿಯ ಮತ್ತೊಂದು ದಂಡೆಯಲ್ಲಿ ತಾಗಿಕೊಂಡಿದೆ. ಹಿಂದೆ ಇಲ್ಲಿ ದೊಡ್ಡ ಕೋಟೆ ಹಾಗೂ ಸುರಂಗ ಇದ್ದಿತ್ತು. ಈ ಪಟ್ಟಣವನ್ನು ಹೈದರ ತನ್ನ ಮಗ ಟಿಪ್ಪುವಿಗೆ ಜಹಗೀರಿಯಾಗಿ ಕೊಟ್ಟಿದ್ದ. ಕ್ರಿ.ಶ. 1799ರಲ್ಲಿ ಬ್ರಿಟಿಷರು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದ ಸಂದರ್ಭದಲ್ಲಿ ಮಳವಳ್ಳಿಯ ಬಳಿ ಜನರಲ ಹ್ಯಾರಿಸ ಮತ್ತು ಟಿಪ್ಪು ಸುಲ್ತಾನರ ನಡುವೆ ಘೋರ ಯುದ್ಧ ನಡೆಯಿತು. ಅನಂತರ ಟಿಪ್ಪುಸುಲ್ತಾನನು ಈ ಸ್ಥಳ ಬ್ರಿಟಿಷರ ಉಪಯೋಗಕ್ಕೆ ಬೀಳಬಾರದೆಂಬ ಉದ್ದೇಶದಿಂದ ಈ ಊರನ್ನು ಹಾಳುಗೆಡವಿದ್ದನು [18].

ಹೊನ್ನಗಟ್ಟ: ಕವಿಯು ಕನಕಗಿರಿಯನ್ನು ಕನ್ನಡಕ್ಕೆ ಅನುವಾದಿಸಿ ಹೀಗೆ ಕರೆಯುತ್ತಿದ್ದಾನೆಂದೆನಿಸುತ್ತಿದೆ. ಇದು ಕವಿಯ ಸಮಕಾಲೀನನಾದ ದೇವಚಂದ್ರ (1770– 84) (ರಾಜಾವಳೀ ಕಥಾಸಾರ ಬರೆದವನು) ನ ಹುಟ್ಟೂರು. ಈಗ ಇದನ್ನು ಮಲೆಯೂರು ಎಂದು ಸಹ ಕರೆಯುತ್ತಾರೆ. ಈ ಕನಕಗಿರಿ ಒಂದು ಐತಿಹಾಸಿದ ಸ್ಥಳವಾಗಿದ್ದು ಇದರ ಮೇಲೆ ಒಮ್ಮೆ ಟಿಪ್ಪುವಿನ ದಾಳಿಯೂ ಆದಂತೆ, ಅಲ್ಲದೇ ಅಲ್ಲಿಯ ನಾಯಕರು ಮರಾಠರನ್ನು ಎದುರಿಸಿದಂತೆ ದಾಖಲೆಗಳಿವೆ [19].

ಯುದ್ಧ ಆರಂಭವಾಗುವದಕ್ಕಿಂತ ಮೊದಲು ' ಹೊನ್ನಗಟ್ಟದಲ್ಲಿದ್ದ ಮದ್ಗಜ ಸಮೂಹವನ್ನು ರಾತ್ರಿ ಹೊತ್ತಿನಲ್ಲಿ ಶತ್ರುಗಳು ಮಾವುತರನ್ನು ಛೇದಿಸಿ ಹಿಡಿದುಕೊಂಡು ಹೋದರು' — ಎಂಬ ಮಾತನ್ನು ಗಮನಿಸಿದರೆ ಇದು ಒಡೆಯರ ರಾಜ್ಯದ ಸರಹದ್ದಿನಲ್ಲಿದ್ದಿರಬಹುದಾದ ಗ್ರಾಮವಾಗಿದೆ.

ಸುಂದರಗಢ: ಕವಿಯು ತನ್ನ ಸುತ್ತಮುತ್ತಲಿನ ಊರುಗಳ ಹೆಸರನ್ನು ಹೇಳುವಾಗ ಸ್ವಲ್ಪ ಬದಲಾಯಿಸಿ, ಅಂದರೆ ಕನ್ನಡದಿಂದ ಸಂಸ್ಕೃತಕ್ಕೆ, ಹಾಗೇ ಸಂಸ್ಕೃತದಿಂದ ಕನ್ನಡಕ್ಕೆ ತಿರುಗಿಸಿ ಹೇಳುತ್ತಿದ್ದಾನೆಂದೆನ್ನಿಸುತ್ತದೆ. ಇದನ್ನು ಒಪ್ಪಬಹುದಾದರೆ ಚೆನ್ನಪಟ್ಟಣವನ್ನು ಅತ ಸುಂದರಗಢವೆಂದು ಹೇಳಿ ಅನೇಕ ಸಲ ಇಲ್ಲಿಯ ಘಟನೆಗಳನ್ನು ಹೇಳಿದ್ದಾನೆ.

ಚೆನ್ನಪಟ್ಟಣವು ಮೈಸೂರು — ಬೆಂಗಳೂರು ರಾಜರಸ್ತೆಯಲ್ಲಿದೆ. ಕ್ರಿ.ಶ. 1630 ರಿಂದಲೇ ಇದು ಮೈಸೂರು ಒಡೆಯರ ಸ್ವಾಧೀನವಿದ್ದಿತ್ತು. ಇಲ್ಲಿ ಪುರಾತನವಾದ ಕೋಟೆ (ಗಢ)ಯೂ ಇತ್ತು. ಸುಂದರ ತಾಣವಾದ ಈ ಊರು ವ್ಯಾಸತೀರ್ಥರ ಕಾಲದಲ್ಲಿ ಚಂದಪಟ್ಟಣವೆಂಬ ಹೆಸರಾಯಿತೆಂದೂ ಅನಂತರ ಅದೇ ಚನ್ನಪಟ್ಟಣ ಎಂದಾಯಿತೆಂದೂ ಹೇಳಲಾಗಿದೆ. 19ನೇ ಶತಮಾನದ ಆದಿಭಾಗದಲ್ಲಿ ಚನ್ನಪಟ್ಟಣದ ಫೌಜದಾರರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಭಾವ ಮೈದನ ತಿಮ್ಮಪ್ಪ ರಾಜನು ತನ್ನ ಹೆಸರಿನಲ್ಲಿ ಇಲ್ಲಿ ಒಂದು ಅರಮನೆ ಕಟ್ಟಿಸಿದ್ದನು [20]. ಪೂರ್ಣಯ್ಯನವರೂ ಚೆನ್ನಪಟ್ಟಣದ ಕೋಟೆಗೂ ಆ ಕಾಲದಲ್ಲಿ ಅವಶ್ಯಕವಾಗಿ ಕಂಡುಬಂದ ರೀತಿಯಲ್ಲಿ ಕಾಮಗಾರಿಗಳನ್ನು ನಡೆಸಿದ್ದರು [21].

ಈ ಕೃತಿಯಲ್ಲಿ ಬರುವ 'ಮಾರ್ಗಮಧ್ಯದಲ್ಲಿ ಸುಂದರಗಾಥವೆಂಬ ದುರ್ಗಮಂ ಶತ್ರುಸೇನೆಯು ಆಕ್ರಮಿಸುವುದಕ್ಕೆ ಬರುತ್ತಿರಲು ಆ ದುರ್ಗದ ಮೇಲಣ ಫಿರಂಗಿ ಶಬ್ದಗಳು ಭೂಮಿ ಇಬ್ಭಾಗವಾಗುವಂತೆ ಬಹಳವಾಗಿ ಕೇಳುತ್ತಿದ್ದುವು' 'ಅಲ್ಲಿಯ ದುರ್ಗಪಾಲನಾದ ಶಿವವರ್ಮನು ರಾಜಸಂಬಂಧಿ' ಎಂಬ ಮಾತುಗಳು ಮೇಲಿನ ಹೇಳಿಕೆಗೆ ಪೂರಕವಾಗಿವೆ.

ಶೃಂಗಾರಪಾಳ್ಯ: ರಣಧೀರ ಕಂಠೀರವ ನರಸರಾಜ ಒಡೆಯರ ಕಾಲದಿಂದಲೇ ಶೃಂಗಾರ ತೋಟವನ್ನು ನಿರ್ಮಿಸಿದ ಬಗ್ಗೆ ದಾಖಲೆಗಳು ಸಿಗುತ್ತವೆ[22]. ಮುಮ್ಮಡಿಯವರೂ ನಂಜನಗೂಡಿನಲ್ಲಿ ಮತ್ತು ಚಾಮರಾಜನಗರಗಳಲ್ಲಿ ಅರಮನೆಯ ಹಿಂದುಗಡೆ ಶೃಂಗಾರ ತೋಟವನ್ನು ನಿರ್ಮಿಸಿದ್ದರು[23]. ಬಹುಶಃ ಈ ತೋಟವಿದ್ದ ಸ್ಥಳವನ್ನು ಪಾಳ್ಯವೆಂದು ಕರೆದು ರಾಜಬೀಜೋತ್ಪನ್ನರನ್ನು ಅಲ್ಲಿಯ ಅಧಿಕಾರಿಗಳಾಗಿ ನೇಮಿಸುತ್ತಿದ್ದ ಕ್ರಮವು ಆಚರಣೆಯಲ್ಲಿದ್ದಿತೆಂದು ಕಾಣುತ್ತದೆ.

ನಮ್ಮ ಈ ಕೃತಿಯಲ್ಲಿ ಶೃಂಗಾರಪಾಳ್ಯವು ನಂದ ಸಾಮ್ರಾಜ್ಯದ ಒಂದು ಗಡಿ ದುರ್ಗವೆಂತಲೂ ಚಂದ್ರಗುಪ್ತನ ಭಾವ ಮೈದುನನಾದ ಸಾರಂಭನು ಆ ದುರ್ಗದ ರಕ್ಷಕನೆಂದೂ ಹೇಳಲಾಗಿದೆ (ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಶಿಂಗ್ರಿಪಾಳ್ಯವೆಂಬ ಗ್ರಾಮವಿದೆ[24]).

ಇದೇ ರೀತಿಯಲ್ಲಿ ಕಾಶಪ್ರಸ್ಥ, ಕೌಂಡಪ್ರಸ್ಥ, ಸುರಭಿವಾಪಿ, ಚಂಪಕವತಿ ಮೊದಲಾದ ಸ್ಥಳಗಳನ್ನು ಹೇಳುವಾಗ ಕವಿಯು ಆಗಿನ ಮೈಸೂರು ಸಂಸ್ಥಾನದ ನಿರ್ದಿಷ್ಟ ಸ್ಥಳಗಳನ್ನು ಗಮನದಲ್ಲಿಟ್ಟು ಕೊಂಡೇ ಹೇಳುತ್ತಿದ್ದಾನೆಂದೆನಿಸುತ್ತದೆ.

ಶತ್ರುಗಳು ಪಾಟಲೀಪುರದ ಸಮೀಪಕ್ಕೆ ಬಂದಾಗ ನಂದರ ದೂತರು ರಾಕ್ಷಸನಲ್ಲಿಗೆ ಬಂದು 'ಇನ್ನೂ ಹೆಚ್ಚುಬಂದರೆ ರಿಪುಗಳು ನಮ್ಮ ಸರಪಣಿಯ ಸೇತುವೆಯಂ ಹಿಡಿಯುವರು' ಎಂದರಂತೆ. ಶ್ರೀರಂಗಪಟ್ಟಣದಲ್ಲಿ ರಂಗನಾಥ ಸ್ವಾಮಿ ದೇವಾಲಯದ ದಕ್ಷಿಣ ಭಾಗದಲ್ಲಿ ಟಿಪ್ಪುಸುಲ್ತಾನನು ಫ್ರೆಂಚ್ ಇಂಜೀನಿಯರ ಡಿ· ಹ್ಯಾವಿಲೇಂಡನ ಸಹಾಯದಿಂದ ತೂಗಾಡುವ ಸೇತುವೆ ಕಟ್ಟಿಸಿದ್ದನು. ಕವಿಯು ಈ ಸೇತುವೆಯನ್ನೇ ಗಮನದಲ್ಲಿಟ್ಟುಕೊಂಡು ಹೇಳುತ್ತಿದ್ದಾನೆಂದು ಒಪ್ಪುವುದಾದರೆ ಶ್ರೀರಂಗಪಟ್ಟಣವನ್ನೇ ಪಾಟಲೀಪುರಕ್ಕೆ ಹೋಲಿಸಿ ಹೇಳಲಾಗಿದೆ ಎಂದು ತಿಳಿಯಬಹುದು.

ನದಿಗಳು: ಪಾಟಲೀಪುರವು ಗಂಗಾ ನದಿಯ ತೀರದಲ್ಲಿತ್ತು ಎಂದು ಈ ಕೃತಿಯಲ್ಲಿ ಹೇಳಿದ್ದು ಲಂಪಾಕಾಧಿಪತಿಯನ್ನು ಎದುರಿಸಲು ಶರಾವತಿಯ ತೀರದಲ್ಲಿ ಇಳಿಯಬೇಕೆಂದು ಪರ್ವತರಾಜನು ಶಬರವರ್ಮನಿಗೆ ಅಪ್ಪಣೆ ಮಾಡುತ್ತಾನೆ — ಎಂದು ಹೇಳಲಾಗಿದೆ.

'ಶರಾವತಿ ಕರ್ನಾಟಕದ ನದಿ. ಪರ್ವತ, ಲಂಪಾಕ ರಾಜ್ಯಗಳು ಉತ್ತರದ ರಾಜ್ಯಗಳು. ಇವುಗಳಿಗೂ ಶರಾವತಿಗೂ ಸಂಬಂಧವೇನು? (ಉತ್ತರ ಭಾರತದಲ್ಲಿ ಶರಾವತಿಯೆಂಬ ನದಿಯೇನಾದರೂ

ಉಂಟೋ? ಹಾಗೆ ಇದ್ದರೂ ಈ ವಿಷಯ ಕವಿಗೆ ತಿಳಿದಿತ್ತೇ?[25]) ಎಂಬುದಾಗಿ ವಿಮರ್ಶಕರೊಬ್ಬರು ಆಕ್ಷೇಪವೆತ್ತಿದ್ದಾರೆ.

ಉತ್ತರ ಭಾರತದಲ್ಲಿ ಶರಾವತಿಯೆಂಬ ನದಿಯಿತ್ತು. ಅದನ್ನು ಈಗ ಸಬರ್ಮತಿ ನದಿ ಎಂದು ಕರೆಯುತ್ತಾರೆ. ಅಮರಕೋಶದಲ್ಲಿ[26] ಇದರ ಬಗ್ಗೆ ವಿವರಗಳು ಸಿಗುತ್ತವೆ. ಶಾಸ್ತ್ರಾಧ್ಯಯನದ ಸಂದರ್ಭದಲ್ಲಿ ಈ ಕೋಶವನ್ನು ಕಂಠಪಾಠ ಮಾಡುವ ಕ್ರಮ ಹಿಂದಿನ ಕಾಲದಲ್ಲಿತ್ತಾದ್ದರಿಂದ ಕವಿಗೆ ಈ ನದಿಯ ಪರಿಚಯವಿತ್ತೆಂದು ಹೇಳಬಹುದಾಗಿದೆ. ಕವಿಯು ಶರಾವತಿಯನ್ನಲ್ಲದೇ ಶತದ್ರು, ವಿಪಾಶಾ, ಶೋಣ ಮೊದಲಾದ ಉತ್ತರ ಭಾರತದ ನದಿಗಳನ್ನು ಹೆಸರಿಸಿದ್ದೂ ಈ ಮಾತನ್ನು ಸಮರ್ಥಿಸುತ್ತದೆ.

ಹಾಗೆ ಕವಿ ಅಘನಾಶಿನಿಯೆಂಬ ನದಿಯ ದಂಡೆಯಲ್ಲಿ ಸೈನ್ಯ ಬೀಡು ಬಿಟ್ಟಿತ್ತೆಂದು ಹೇಳುತ್ತಾನೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಗೋಕರ್ಣ ಕ್ಷೇತ್ರದ ಬಳಿ ಈ ಹೆಸರಿನ ನದಿ ಇರುವುದಾದರೂ — ಈ ಶಬ್ದದ ಅರ್ಥ 'ಪಾಪವನ್ನು ಕಳೆಯುವಂಥಾದ್ದು' ಎಂದಾದ್ದರಿಂದ ಈ ಹೆಸರು ಎಲ್ಲಾ (ಪುಣ್ಯ) ನದಿಗಳಿಗೂ ಅನ್ವಯಿಸಬಹುದಾಗಿದೆ.

ಇತರ ವಿಚಾರಗಳು: ವಾಣಿ ವಿಲಾಸ ತೋಟ, ಉಕ್ಕಡ, ಚಾವಡಿಗಳು, ಮೊದಲಾದ ಸ್ಥಾನ ನಿರ್ದೇಶ ಶಬ್ದಗಳು, ಜೀಯಾ, ಬುದ್ಧಿ, ಯಜಮಾನರೇ, ಅಮ್ಮಣ್ಣಿಯವರೇ ಮೊದಲಾದ ಸಂಬೋಧನೆಗಳು ಮೈಸೂರು ಒಡೆಯರ ಆಸ್ಥಾನದಲ್ಲಿ ಪ್ರಚಾರದಲ್ಲಿದ್ದವುಗಳೇ ಆಗಿವೆ.

<u>ಸಮಕಾಲೀನ ಮತಧರ್ಮ ವಿಚಾರ:</u> ಮುಮ್ಮಡಿಯವರು ಧಾರ್ಮಿಕ ಮನೋಭಾವದವರಾದ ಕಾರಣ ವಿವಿಧ ಮಠಗಳ ಯತಿಗಳವರನ್ನು ಕರೆಯಿಸಿ ನಾನಾ ವಿಧವಾದ ಉತ್ಸವ ಸಮಾರಾಧನ ಪಾದ ಪೂಜಾದಿಗಳನ್ನು ಮಾಡಿಸಿ, ಅಮೂಲ್ಯವಾದ ಅನೇಕ ವಸ್ತ್ರ, ಪಾತ್ರ, ಕಾಣಿಕೆಗಳನ್ನು ಒಪ್ಪಿಸಿ ಪೂಜೆ ಮಾಡುತ್ತಿದ್ದರು[27].

ಸರ್ವಾರ್ಥಸಿದ್ಧಿಯ ಅರಮನೆಗೆ ವೀತಿಹೋತ್ರ ಮುನಿಗಳು ಬಂದಾಗ ಮತ್ತು ಚಂದ್ರಗುಪ್ತನ ಪಟ್ಟಾಭಿಷೇಕವಾದಾಗ ಇಂದುಶರ್ಮರೇ ಮೊದಲಾದ ಬ್ರಾಹ್ಮಣರನ್ನು ಆತ ಉಪಚರಿಸಿದನು ಎಂಬಾಗ ಕವಿಯು ತನ್ನ ಕಣ್ಣಾರೆ ಕಂಡ ತನ್ನ ದೊರೆಯ ದಾನ ಧರ್ಮಾದಿಗಳನ್ನು ವಿವರಿಸುತ್ತಿದ್ದನೆಂದು ಕಾಣುತ್ತದೆ.

ದೊರೆಗಳು, ತ್ರಿಮತಸ್ಥ ಬ್ರಾಹ್ಮಣರು ಮಾಡಬೇಕೆಂದು ಕೇಳಿಕೊಂಡಂತೆ ಅಗ್ನಿಷ್ಟೋಮ, ಅತಿರಾತ್ರ, ವಾಜಪೇಯ, ಗರುಡಚಯನ, ಸರ್ವತೋಮುಖ, ಬೃಹಸ್ಪತಿ ಸವನ ಮುಂತಾದ ಅನೇಕ ಕ್ರತುಗಳನ್ನು ಮಾಡಿಸಿದ್ದರು[28].

ಇಂತಹ ಯಾಗಗಳನ್ನು ಮಾಡುವಾಗ ಋತ್ವಿಕ್ಕುಗಳು ಡಂಭಾಚಾರದಿಂದ ವರ್ತಿಸುತ್ತಿದ್ದಿರಬೇಕು. ಅದನ್ನು ಲೇವಡಿ ಮಾಡುವ ಉದ್ದೇಶದಿಂದ ಕವಿಯು ಈ ಕೃತಿಯಲ್ಲಿ ಮೌನೋಪವಾಸಿಯನ್ನು

ವರ್ಣಿಸುವಾಗ —' ನೆಲದಲ್ಲಿ ಜೋಲುವ ಜಟಾಭಾರದಿಂದ ನ್ಯಗ್ರೋಧ ವೃಕ್ಷದಂತೆ ತೋರುತ್ತ, ಕೋಮಲ ದರ್ಭೆಗಳಿಂ ಸುತ್ತಿಸುತ್ತಿರುವ ಹವಳದ ಜಪಮಾಲೆಯಿಂದಲೂ, ಭ್ರೂಮಧ್ಯದಲ್ಲಿ ವಕ್ರಾಕಾರವೇ ಮೂರ್ತೀಭವಿಸಿ ಬಂದಂತೆ ತ್ರಿಪುಂಡ್ರ ಭಸ್ಮಾಂಕಿತರಾದ ಫಾಲದೇಶದಿಂದಲೂ ಕಕ್ಷಗತಯೋಗದಂಡಗಳಿಂದಲೂ ಪಾದುಕಾಗ್ರಮಂ ನೋಕುವ ಕೃಷ್ಣಾಜಿನೋತ್ತರೀಯದಿಂದಲೂ ಮಾನುಷಯೋಗಿವೇಷಮಂ ಧರಿಸಿ ಮಂತ್ರಮಂ ಜಪಿಸುವ ಮಾರೀಚನೋ ಎಂಬಂತೆ' ಬರುತ್ತಿದ್ದನು ಎಂದು ಹೇಳುವಲ್ಲಿ ಹೀಗೆ ವಿಡಂಬಿಸಿ ಹೇಳಿದ್ದಾನೆ. ಮಾನೋಪವಾಸಿಯ ಶಿಷ್ಯರೂ ಅಷ್ಟೆ: ' ಶೂದ್ರಸ್ಪರ್ಶಕ್ಕೆ ಬೆದರಿದವರಂತೆ ದೂರದಲ್ಲಿ ನಿಂತು, ಕುಚೋದಕಗಳಿಂದ ಒಬ್ಬರಿಗೊಬ್ಬರು ಪ್ರೋಕ್ಷಣೆಯಂಗೆಯ್ಯುತ್ತ, ಸ್ಪರ್ಶಿಸಿದರೆ ಹಿಮ್ಮೆಟ್ಟುವ ಕುಳೀರಕನಂತೆ ಹಿಂದಕ್ಕೆ ಸರಿಯುತ್ತಿದ್ದರಂತೆ'. ಇದೂ ಕೂಡ ಮಡಿಯ ಹೆಸರಿನಲ್ಲಿ ಮಾಡುವ ಕಪಟಾಚಾರಣೆಯನ್ನು ಗೇಲಿ ಮಾಡುವುದೇ ಆಗಿದೆ. ಹೀಗೆ ಕವಿ ಕಣ್ಣಾರೆ ಕಂಡ ಬ್ರಾಹ್ಮಣರ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾನೆ.

ಬೌದ್ಧಮತ ವಿಚಾರ: ಪ್ರಾಚೀನ ಕಾಲದಲ್ಲಿ ಬೌದ್ಧ ಧರ್ಮವು ಕರ್ನಾಟಕದಲ್ಲಿ ಪ್ರಚಾರದಲ್ಲಿದ್ದರೂ ದಕ್ಷಿಣ ಕರ್ನಾಟಕದಲ್ಲಿ, ಹಳೆಯ ಮೈಸೂರಿನ ಭಾಗದಲ್ಲಿ ಅದು ಹೆಚ್ಚಾಗಿ ಹರಡಿದಂತೆ ಕಾಣುವುದಿಲ್ಲವೆಂದು ಚಿದಾನಂದ ಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ[29]. ಕರ್ನಾಟಕದಲ್ಲಿ ಬೌದ್ಧಧರ್ಮದ ಕೊನೆಯ ಉಲ್ಲೇಖವೊಂದು 16ನೆಯ ಶತಮಾನದ ಶಾಸನದಲ್ಲಿ ದೊರಕುವುದಾದರೂ ಹೆಚ್ಚು ಕಡಿಮೆ 13ನೆಯ ಶತಮಾನದ ಹೊತ್ತಿಗೆ ಅದು ತನ್ನ ಪ್ರಭಾವವನ್ನು ಕಳೆದುಕೊಂಡಿರಬೇಕು.[30] ಅಂದರೆ ಕವಿಯ ಕಾಲಕ್ಕೆ ಬೌದ್ಧ ಧರ್ಮವು ಮೈಸೂರಿನಲ್ಲಿ ಪ್ರಚಾರದಲ್ಲಿರಲಿಲ್ಲವೆಂದಾಯಿತು. ಆದರೆ ಬೌದ್ಧ ದರ್ಶನವು ಪ್ರಾಚೀನ ವಿದ್ಯಾಭ್ಯಾಸದ ಅಭ್ಯಾಸ ವಿಷಯಗಳಲ್ಲೊಂದಾಗಿತ್ತು[31]. ಆದ್ದರಿಂದ ಕವಿಯು ಬೌದ್ಧ ದರ್ಶನವನ್ನು ಅಧ್ಯಯನ ಮಾಡಿ, ತಾನು ಹೇಳಹೊರಟ ಕಥೆಯು ನಡೆದ ಕಾಲಕ್ಕೆ ಅದು ಹೊಂದುತ್ತಿದ್ದುದರಿಂದ ಅದನ್ನು ಅಳವಡಿಸಿಕೊಂಡಿದ್ದಾನೆಂದು ತಿಳಿಯಬಹುದಾಗಿದೆ.

ಈ ಕೃತಿಯಲ್ಲಿ ಕ್ಷಪಣಕನು ' ಮಾಯಾಧಾರವೇ ', ' ಬುದ್ಧೇಶನೇ ' — ಎಂದು ಸಂಬೋಧಿಸುವುದು ' ಧರ್ಮಿಷ್ಠರಿಗೆ ಶ್ರೇಯೋಸ್ತು ', ' ಧರ್ಮಾಭಿವೃದ್ಧಿರಸ್ತು ' ಎಂದು ಮೊದಲಾಗಿ ಹರಸುವುದು, ಮಾತನಾಡದೇ ನಾಲಗೆಯ ಚೊಂದೆಯಿಂದ ಸನ್ನೆ ಮಾಡುವುದು, ಸ್ಥಾಣುವಿನಂತೆ ಕುಳಿತುಕೊಳ್ಳುವುದು — ಹೀಗೆ ವರ್ಣಿಸುತ್ತಾನೆಂಬುದನ್ನು ಓದಿದಾಗ ಕವಿಗೆ ಈ ಧರ್ಮದ ಆಚಾರ ವಿಚಾರಗಳ ಬಗ್ಗೆ ಆಳವಾದ ಜ್ಞಾನವಿತ್ತು ಎಂದು ತಿಳಿಯುವುದು.

ತನ್ನನ್ನು ಪರೀಕ್ಷೆ ಮಾಡಲು ಶಿಷ್ಯಭಾವದಿಂದ ಬಂದ ಬ್ರಾಹ್ಮಣನನ್ನು ಕಂಡು ' ಆತನ ಹಣೆಯಲ್ಲಿರುವ ತಿಲಕದ ಕಲೆಯಂ ಕಂಡು ಇವನು ಬೌದ್ಧನಲ್ಲ, ಬೌದ್ಧರು ಶೂನ್ಯಲಲಾಟರು ಈತನು ನಮ್ಮ ಪರೀಕ್ಷಾರ್ಥವಾಗಿ ಬಂದಿರಬೇಕೆಂದು ನಿಶ್ಚಯಿಸಿ ಅವನಿಗೆ ಮುಂಡನಮಂ ಮಾಡಿಸಿ ಅವನ ವಸ್ತ್ರಗಳೆಲ್ಲಮಂ

ಮಾರ್ಗಸ್ಥರಿಗೆ ಕೊಡಿಸಿ, ಅವನ ಕೈಯಲ್ಲಿ ಅನ್ನ ಪಾನಕ್ಕೆ ಕಪ್ಪರವನ್ನಿತ್ತು ಪುನಃಪರಿಪಾಕಕ್ಕೆ ಬರುವ ಪರ್ಯಂತರ ಅಯಾಚಿತ ವೃತ್ತಿಯಿಂ ಜೀವಿಸುತ್ತ ಚೈತ್ಯವಂದನಾದಿಗಳಂ ಮಾಡುತ್ತ ಗುರುಭಕ್ತಿನಿರತನಾಗಿದ್ದರೆ ಪುನಃ ಪರಿಪಾಕವೆಂದು ತಿಳಿದು ನಿನಗೆ ಪರತತ್ತ್ವವನ್ನುಪದೇಶಿಸುವೆವು. ನಮ್ಮ ಪೀಠಕ್ಕೆ ಮುಂದೆ ನೀನೇ ಕರ್ತನಾಗುವೆ... ಎಂದು ಹೇಳಿ ಮೌನವಂ ಧರಿಸಿದನು' ಎಂಬ ಮಾತಿನ ಕವಿಯ ಸೂಕ್ಷ್ಮ ಬುದ್ಧಿಯ ಜತೆಗೆ ಆತನ ವಿಡಂಬನ ಶಕ್ತಿಯ ಪರಿಚಯವೂ ನಮಗಾಗುವುದು. ಅಂತೂ ಇಲ್ಲಿಯ ಬೌದ್ಧ ಸನ್ಯಾಸಿಯ ಚಿತ್ರಣ ಜೀವಂತವಾಗಿದೆ [32].

ಸಮರ ಚಿತ್ರಣ

ಒಂದು ಸಾವಿರ ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯದಲ್ಲಿ ಸಮರಕ್ಕೆ ಸಂಬಂಧಿಸಿದಂತೆ ಬಹಳಷ್ಟು ವಿಚಾರಗಳು ಬಂದಿವೆ. ಅಷ್ಟಾದಶ ವರ್ಣನೆಗಳಲ್ಲಿ ಯುದ್ಧವರ್ಣನೆ, ಪುರವರ್ಣನೆಗಳು ಬರುತ್ತವೆ. ಕನ್ನಡ ಕಾವ್ಯಗಳಲ್ಲಿ ಬಂದಿರುವ ಯುದ್ಧಕ್ಕೆ ಸಂಬಂಧಿಸಿದ ವಿಚಾರಗಳನ್ನು ಹೆಕ್ಕಿ ತೆಗೆದು ವಿಮರ್ಶಾತ್ಮಕವಾಗಿ ಅಧ್ಯಯನವಾದದ್ದು ಮಾತ್ರ ಕಡಿಮೆ. ಈ ನಿಟ್ಟಿನಲ್ಲಿ ಡಾ: ಕೆ. ಶ್ರೀಕಂಠಯ್ಯನವರ 'ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು' ಒಂದು ಗಮನಾರ್ಹ ಕೃತಿ. ಇದಕ್ಕಿಂತ ಮೊದಲೇ ಪ್ರಕಟವಾಗಿದ್ದ ಬೆಟಗೇರಿ ಕೃಷ್ಣಶರ್ಮರ 'ಕರ್ನಾಟಕ ಜನಜೀವನ' ದಲ್ಲಿ ಕನ್ನಡಿಗರ ಕೋಟೆಗಾಳಗದ ಬಗ್ಗೆ ವಿಷದವಾಗಿ ಚರ್ಚಿಸಿದ್ದಾರೆ. ಎಂ. ಚಿದಾನಂದಮೂರ್ತಿಯವರು ತಮ್ಮ ' ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ವೆಂಬ ಪ್ರೌಢಪ್ರಬಂಧದಲ್ಲಿ ಯುದ್ಧಕಲೆಯ ಬಗ್ಗೆ ವಿವರಗಳನ್ನು ನೀಡಿದ್ದಾರೆ. ಈ ಕೃತಿಗಳಲ್ಲಿ ಹೇಳಿದ ಯುದ್ಧಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತಾಪಿಸುತ್ತಾ 'ಮುದ್ರಾಮಂಜೂಷ' ದಲ್ಲಿ ಇದೇ ವಿಷಯ ಹೇಗೆ ಹೆಚ್ಚು ಸ್ಪಷ್ಟವಾಗಿ, ವಿವರವಾಗಿ ವರ್ಣಿತವಾಗಿದೆಯೆಂಬುದನ್ನು ಇಲ್ಲಿ ತೋರಿಸಿ ಕೊಡಲಾಗಿದೆ.

ಸೇನಾಬಲ

ಸುಭದ್ರವಾದ ಸಾಮ್ರಾಜ್ಯ ಸ್ಥಾಪನೆಗೆ ಸೈನ್ಯವೇ ತಳಹದಿ. ಪ್ರಾಚೀನ ಭಾರತದಲ್ಲಿ ರಾಜ್ಯದ ಸಪ್ತಾಂಗ[33]ಗಳಲ್ಲಿ ಸೈನ್ಯವನ್ನು ಒಂದು ಅಂಗವಾಗಿ ಪರಿಗಣಿಸಲಾಗಿತ್ತು. ಹಾಗೆಯೇ ಕ್ಷತ್ರಿಯರಿಗೆ ಯುದ್ಧವೆನ್ನುವುದು ಸಹಜವಾಗಿತ್ತು. ಯುದ್ಧದಲ್ಲಿ ಗೆದ್ದರೆ ರಾಜ್ಯಶ್ರೀಯೂ ಸತ್ತರೆ ವೀರಮರಣವೂ ಪ್ರಾಪ್ತಿಯಾಗುವುದೆಂಬ ನಂಬಿಕೆಯಿತ್ತು.

ಈ ಕೃತಿಯಲ್ಲಿ ಕವಿಯು ಇತಿಹಾಸ ಪ್ರಸಿದ್ಧವಾದ ಚಂದ್ರಗುಪ್ತ — ಚಾಣಕ್ಯರ ಕಥೆಯನ್ನು ಆಯ್ದುಕೊಂಡಿದ್ದರೂ, ಆ ಕಥೆಯನ್ನು ತನ್ನ ' ಪ್ರಾದೇಶಿಕ, ಸಾಂಸ್ಕೃತಿಕ, ವ್ಯಕ್ತಿವಿಶಿಷ್ಟ ಪ್ರತಿಭೆಯ

ಮೂಲಕ ಪುನರ ವ್ಯಾಖ್ಯಾನಿಸ ಹೊರಟದ್ದು' ಸ್ಪಷ್ಟವಾಗಿದೆ. ಹಾಗಾಗಿ ಇಲ್ಲಿ ಯುದ್ಧದ ಚಿತ್ರಣಗಳನ್ನು ಕೊಡುವಾಗ ಕೆಲವೊಮ್ಮೆ ಸಮಕಾಲೀನ ಘಟನೆ, ಸಂಪ್ರದಾಯಗಳನ್ನು ಹೇಳಿದರೆ ಇನ್ನು ಕೆಲವೊಮ್ಮೆ ಪ್ರಾಚೀನ ಪರಂಪರೆಗನುಗುಣವಾಗಿ ಅಂದರೆ ಕಥೆ ಘಟಿಸಿದ ದೇಶ ಕಾಲಕ್ಕೆ ಹೊಂದಿಕೆಯಾಗುವ ವಿಚಾರಗಳನ್ನು ಹೇಳಿದ್ದಾನೆಂದು ಗೊತ್ತಾಗುವುದು. ಆದ್ದರಿಂದ ಸಮಕಾಲೀನ ವಿಚಾರಗಳನ್ನು ಪ್ರತ್ಯೇಕಿಸಿ ನೋಡುವಾಗ ಇತರ ಆಕರಗಳ ಸಹಾಯದಿಂದ ನಿರ್ಣಯ ಹೇಳುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

<u>ಸೇನಾ ಬಲದ ವಿಂಗಡಣೆ:</u> ಹಿಂದಿನ ಸಂಪ್ರದಾಯದಂತೆ ಸೈನ್ಯವನ್ನು ಕಾಲಾಳು, ಕುದುರೆ, ಆನೆ ಮತ್ತು ರಥವೆಂದು ನಾಲ್ಕು ಭಾಗಗಳಾಗಿ ವಿಂಗಡಿಸುವುದು ವಾಡಿಕೆ[34]. ಡಾ: ಚಿದಾನಂದ ಮೂರ್ತಿಯವರು ಹೇಳುವ — ' ಚತುರಂಗ ಬಲದಲ್ಲಿ ರಥ ಬಹಳ ಹಿಂದೆಯೇ ಕಣ್ಮರೆಯಾಗಿ ಆನೆ, ಕುದುರೆ, ಪದಾತಿ ದಳ ಪ್ರಬಲವಾಗಿತ್ತು. ಕಾಳಿದಾಸನ ಕಾಲಕ್ಕಿಂತ ಎಷ್ಟೋ ಹಿಂದೆಯೇ ರಥ ಬಿಟ್ಟುಹೋಗಿತ್ತು.' [35] ಎಂಬ ಮಾತನ್ನು ಶ್ರೀಕಂಠಯ್ಯನವರು ಉದ್ಧರಿಸಿ — ' ವಿಜಯನಗರ ಕಾಲದ ಕವಿಗಳಾಗಲೀ ಮತ್ತಿನ ಕವಿಗಳಾಗಲೀ ಯುದ್ಧದ ನಿರ್ಣಯದ ಸಂದರ್ಭದಲ್ಲಿ ರಥವನ್ನು ಪ್ರಸ್ತಾಪಿಸಿದ್ದರೆ ಅದು ಕೇವಲ ಹಿಂದಿನ ಸಂಪ್ರದಾಯದ ಅನುಕರಣೆಯಿಂದ ಹಾಗೆ ಹೇಳಿರುವ ಸಾಧ್ಯತೆಯಿದೆ.' [36] ಎಂದಿದ್ದಾರೆ.

ಆದರೆ ' ಮುದ್ರಾಮಂಜೂಷ' ದಲ್ಲಿ ರಥಗಳ ಹಾಗೂ ಕುದುರೆಗಳನ್ನು ಕಟ್ಟಿ 'ಓಡಿಸುವ ರಥಗಳ ಪ್ರಸ್ತಾಪವಗಳಿವೆ[37]. ಇದರಿಂದ ಕವಿಯ ಕಾಲದಲ್ಲಿ ಕುದುರೆಗಳನ್ನು ಕಟ್ಟಿ 'ಓಡಿಸುವ ರಥಗಳಿದ್ದುವೆಂದು ಊಹಿಸಬಹುದಾಗಿದೆ. ಇದು ನಂದರ ಕಾಲಕ್ಕೆ ಹೊಂದಿಕೆಯೂ ಆಗುವುದು.

<u>ಚತುರಂಗ ಬಲ:</u> ಸೈನ್ಯದ ದೊಡ್ಡ ಪಾಲು ಕಾಲ್ದಳವಾಗುವುದು ಸ್ವಾಭಾವಿಕ. ಪರ್ವತರಾಜನ ಪರವಾಗಿ ನಂದರಾಜ್ಯದ ಮೇಲೆ ಯುದ್ಧಕ್ಕೆ ಹೊರಟ ಕುದ್ದಾಳಕನಲ್ಲಿ ಆರು ಲಕ್ಷ ಕಾಲಾಳುಗಳಿದ್ದರಂತೆ. ಅಲ್ಲದೇ ರಾಕ್ಷಸನ ಕಡೆಯ ಗೂಢಚಾರರು ತಿಳಿದಂತೆ ಪರ್ವತೇಶ್ವರನ ವಶವರ್ತಿಯಾದ ಸೇನೆಯಲ್ಲಿ ಚಿತ್ರವರ್ಮನದ್ದು ಮೂರು ಲಕ್ಷ, ಸಿಂಹನಾದನದ್ದು ಎರಡು ಲಕ್ಷ, ಪುಷ್ಕರಾಕ್ಷನದ್ದು ನಾಲ್ಕು ಲಕ್ಷ, ಸಿಂಧುಷೇಣನದ್ದು ಮೂರು ಲಕ್ಷ, ಮೇಘನಾದನದ್ದು ನಾಲ್ಕು ಲಕ್ಷ, ಮಗಧಪತಿಯದು ಅರ್ಧ ಲಕ್ಷ, ಗಾಂಧಾರಪತಿಯದು ನಾಲ್ಕು ಲಕ್ಷ, ಶಕಸೇನೆ ಎರಡು ಲಕ್ಷ, ಚೀಣರದು ಒಂದು ಲಕ್ಷ, ಹೂಣರದೂ ಒಂದು ಲಕ್ಷ, ಕಿರಾತರದು ಮೂರು ಲಕ್ಷ; ಇದರೊಂದಿಗೆ ಪಾರ್ವತೇಯ ಸೇನೆ ಒಂಬತ್ತು ಲಕ್ಷ — ಒಟ್ಟು ಮೂವತ್ತಾರುವರೆ ಲಕ್ಷದ ಸೈನ್ಯವಿದ್ದಿತಂತೆ. ಇದು ಸ್ವಲ್ಪ ಅತಿಶಯೋಕ್ತಿಯಿಂದ ಕೂಡಿದ್ದಿರಬಹುದು [37ಎ].

ಇದಕ್ಕೆ ಪ್ರತಿಯಾಗಿ ನಂದಪಾಹಿನಿಯ ಬಾಗುರಾಯಣನಲ್ಲಿ ಎರಡು ಲಕ್ಷ ಸೇನೆ, ಡಿಂಗಿರಾತ — ಭದ್ರಭಟರ ಬಳಿ ಎರಡು ಲಕ್ಷ ತುರಗಗಳು, ಎರಡು ಸಾವಿರ ಮದಗಜಗಳು ಮತ್ತು ಮೂರು ಲಕ್ಷ ಪದಾತಿಗಳು, ವಿಜಯವರ್ಮ — ಬಲಗುಪ್ತರ ಬಳಿ ಎಂಟು ಲಕ್ಷ ಸೇನೆ ಹಾಗೂ ಪುರುಷದತ್ತ — ರೋಹಿತಾಶ್ವರ ಬಳಿ ಎಂಟು ಸೇನೆ — ಇದ್ದುದನ್ನು ಅಂಕಿ ಸಂಖ್ಯೆಗಳೊಂದಿಗೆ ಹೇಳಿದ್ದರೂ ಒಟ್ಟಿನಲ್ಲಿ ಪರ್ವತರಾಜನ

ಬಲಕ್ಕಿಂತಲೂ ನಂದಸೇನೆಯು ಅಧಿಕವಾಗಿತ್ತೆಂಬ ವಿಚಾರವನ್ನು ಚಾಣಕ್ಯನು ಚಂದ್ರಗುಪ್ತನಲ್ಲಿ ಹೇಳಿದ್ದನು.

ಎರಡೂ ಕಡೆಗಳಲ್ಲಿಯೂ — ರಥಸ್ಥರು ರಥಿಕರನ್ನು, ಗಜಾರೂಢರು ವಾರಣಾರೋಹಕರನ್ನು, ತುರಗಾರೂಢರು ಅಶ್ವಸಾದಿಗಳನ್ನು, ಪದಾತಿ ವರ್ಗವು ಕಾಲಾಳುಗಳನ್ನು ಪ್ರಹರಿಸುತ್ತ ಯುದ್ಧಮಾಡುವುದು ಯುದ್ಧದ ಸಾಂಪ್ರದಾಯಿಕ ಕ್ರಮವೇ ಆಗಿತ್ತು. ಆನೆಯ ಮೇಲೆ ಅಂಬಾರಿ ಕಟ್ಟಿ ಯುದ್ಧ ಮಾಡುವುದು, ರಥಗಳಿಗೆ ಕುದುರೆಗಳನ್ನು ಕಟ್ಟಿ ಹೋರಾಡುವುದು — ಮೊದಲಾದವುಗಳ ಸೂಚನೆ ಅಲ್ಲಲ್ಲಿ ಸಿಗುತ್ತದೆ. ಶತ್ರುಗಳ ಕೋಟೆಯನ್ನು ವಶಪಡಿಸಿಕೊಳ್ಳಲು ಅಗಳನ್ನು ದಾಟುವುದು ದುಸ್ಸಾಧ್ಯವೆಂದು ಕಂಡುಬಂದಾಗ ತಮ್ಮ ಕಡೆಯ ' ಮದದಾನೆಯ ಹಿಂಡುಗಳಿಗೆ ಕಣ್ಣುಗಳನ್ನು ಕಟ್ಟಿ ಹಿಂಭಾಗದಲ್ಲಿ ನಿಂತು ಆ ಗಜಗಳನ್ನು 'ಓಡಿಸುತ್ತ [illegible] ತಂದು ಆ ಪಟ್ಟಣದ [illegible] ಅಗಳಲ್ಲಿ ಕೆಡಹಿ ... ಅದನ್ನೇ ತುಳಿಯುತ್ತ ಬಂದು ಪ್ರಾಕಾರವನ್ನು ಹಿಡಿದು ಹತ್ತುತ್ತಿದ್ದರು.

ಈ ಎಲ್ಲಾ ಅಂಶಗಳನ್ನು ಹೇಳುವಾಗ ಕವಿಯು ತಾನು ಕಣ್ಣಾರೆ ಕಂಡಿದ್ದ ಯುದ್ಧದ ಕುರಿತೇ ಹೇಳುತ್ತಿದ್ದಾನೆಂದು ಎನ್ನಿಸುವುದು.

ಆದರೆ ವಿಜಯನಗರ ಕಾಲದಲ್ಲಿ ಪ್ರಚಾರದಲ್ಲಿದ್ದ ವಿದೇಶೀ ಪ್ರವಾಸಿಗರೂ ಸಮಕಾಲೀನ ಕವಿಗಳೂ ಗುರುತಿಸಿದಂತೆ —' ಸಮರದಾನೆಗಳ ಸೊಂಡಿಲಿಗೆ ಬಿಗಿದಿರುತ್ತಿದ್ದ ಉದ್ದವಾದ ಹಾಗೂ ಹರಿತವಾದ ಕತ್ತಿ[38]ಗಳ ಪ್ರಸ್ತಾಪ ಈ ಕೃತಿಯಲ್ಲಿಲ್ಲ. ಬಹುಶ: ಹದಿನಾರನೆಯ ಶತಮಾನದಲ್ಲಿದ್ದ ಆ ಪದ್ಧತಿ ಕಾಲಾಂತರದಲ್ಲಿ ಲುಪ್ತವಾಗಿರಬಹುದು.

ಹ್ಯೂಯೆನತ್ಸಾಂಗನು ತನ್ನ ಪ್ರವಾಸ ಕಥನದಲ್ಲಿ ಪುಲಕೇಶಿಯ ಸೈನ್ಯವನ್ನು ವರ್ಣಿಸುತ್ತ — ' ಅವರು ಯುದ್ಧಕ್ಕೆ ಮುನ್ನ ಮದ್ಯವನ್ನು ಕುಡಿದು ತಮ್ಮ ಆನೆಗಳಿಗೂ ಮದ್ಯವನ್ನು ಕುಡಿಸಿ ಶತ್ರುಗಳ ಮೇಲೆ ಬಿಡುತ್ತಾರೆ' ಎಂದು ಹೇಳಿದ್ದನ್ನು ಉದ್ಧರಿಸಿ ಡಾ: ಚಿದಾನಂದ ಮೂರ್ತಿಯವರು — ' ಶಾಸನಗಳಾಗಲೀ, ಕಾವ್ಯಗಳಾಗಲೀ ಇದನ್ನು ಪೋಷಿಸುವುದಿಲ್ಲ' ವೆಂದು ಹೇಳಿದ್ದಾರೆ[39]. ನಮ್ಮ ಈ ಕೃತಿಯಲ್ಲೂ ಆನೆಗಳಿಗೆ ಮದ್ಯ ಕುಡಿಸುವ ವಿಚಾರ ಬಂದಿಲ್ಲ. ಬಹುಶ: ಈ ಸಂಪ್ರದಾಯವು ಕವಿಯ ಕಾಲದಲ್ಲಿದ್ದಿರಲಿಕ್ಕಿಲ್ಲ.

ಸೈನ್ಯದಲ್ಲಿ ಇಂತಿಷ್ಟು ಕಾಲಾಳು, ಕುದುರೆ, ಆನೆಗಳಿದ್ದರೆ ಅದನ್ನು ಒಂದು ಘಟಕವೆಂದು ಭಾವಿಸಿ, ಅಂತಹ ಎಷ್ಟು ಘಟಕಗಳು ಸೈನ್ಯದಲ್ಲಿದ್ದವು — ಎಂಬುದನ್ನು ಹೇಳುವುದರ ಮೂಲಕ ಸೈನ್ಯಶಕ್ತಿಯನ್ನು ತಿಳಿಸುವುದು ಒಂದು ಪದ್ಧತಿಯೆಂದು ತೋರುತ್ತದೆ ಎನ್ನುವ ಶ್ರೀಕಂಠಯ್ಯನವರು ' ಶುಕ್ರನೀತಿ'ಯಲ್ಲಿ ಹಾಗೆ ಹೇಳಿದ್ದನ್ನು ತೋರಿಸಿಕೊಟ್ಟಿದ್ದಾರೆ[40]. ಇಂತಹ ಕ್ರಮ ವಿಜಯನಗರದ ಅರಸರ ಕಾಲದಲ್ಲಿಯೂ ಇತ್ತು ಎಂಬುದಕ್ಕೆ ಅವರು ನಂಜುಂಡ ಕವಿ ಹೇಳಿರುವ ಮಾತಂಗಿ ಸೈನ್ಯ ಬಲದ ವರ್ಣನೆಯ ಸಂದರ್ಭವನ್ನು ಸೂಚಿಸುತ್ತಾರೆ. ಆದರೆ ಈ ಕ್ರಮವನ್ನು ಮುಮ್ಮಡಿಯವರ ಆಳಿತ ಕಾಲದಲ್ಲಿ ಅನುಸರಿಸಿದಂತೆ ಕಂಡು ಬರುವುದಿಲ್ಲ. ಹಾಗಾಗಿ ' ಮುದ್ರಾಮಂಜೂಷ' ದಲ್ಲಿ ಸೈನ್ಯವನ್ನು ಆ ರೀತಿ ವಿಭಜಿಸಿದ್ದರ ಚಿತ್ರಣವಿಲ್ಲ.

ಆದರೂ ಆನೆ, ಕುದುರೆ, ಕಾಲಾಳುಗಳನ್ನು ಧಾರಾಳವಾಗಿ ಉಪಯೋಗಿಸುತ್ತಿದ್ದರು. ಆನೆಗಳಿಗೆ ಹೆಸರಿಟ್ಟು ಕರೆಯುವ ಕ್ರಮವೂ ಪ್ರಾಚೀನವಾದದ್ದೇ. ಪರ್ವತರಾಜನು ನಂದ ರಾಜ್ಯದ ಮೇಲೆ ಯುದ್ಧಕ್ಕೆ ಹೊರಟ ಸಮಯದಲ್ಲಿ ಚಂದ್ರಗುಪ್ತನಿಗೆ ಒದಗಿಸಿದ ಆನೆಯ ಹೆಸರು 'ಅಳಗಿರಿ' ಎಂದು ಹೇಳಿದೆ.

ಒಂಟೆ: 'ಒಂಟೆಗಳು ವಿಜಯನಗರದ ಸೈನ್ಯಬಲದ ಒಂದು ವಿಭಾಗವಾಗಿದ್ದರೂ ಅವುಗಳ ವಿಷಯವಾಗಿ ಸಾಹಿತ್ಯದಲ್ಲಾಗಲೀ, ವಿದೇಶೀಯರ ಬರವಣಿಗೆಯಲ್ಲಾಗಲೀ ಹೆಚ್ಚು ವಿವರಗಳು ದೊರೆಯುವುದಿಲ್ಲ' ವೆಂದು ಶ್ರೀಕಂಠಯ್ಯನವರು ಹೇಳಿದ್ದಾರೆ[41]. ಆದರೆ 'ಮುದ್ರಾಮಂಜೂಷ'ದಲ್ಲಿ ಯುದ್ಧದ ಸಂದರ್ಭದಲ್ಲಿ ಒಂಟೆಗಳನ್ನು ಉಪಯೋಗಿಸಿಕೊಂಡದ್ದರ ಬಗ್ಗೆ ನಮಗೆ ಕೆಲವು ಮಾಹಿತಿಗಳು ಸಿಗುತ್ತವೆ. ಉದಾಹರಣೆಗಾಗಿ — 'ಪರ್ವತರಾಜನ ಸೇನೆಯು ನಂದರಾಜ್ಯದ ಗಡಿ ಪ್ರದೇಶಗಳಲ್ಲಿ ಮುನ್ನುಗ್ಗಿ ಬರುತ್ತಿದ್ದಾಗ ಕಾಂಚಪ್ರಸ್ಥವೆಂಬ ದೊಡ್ಡ ಗಡಿಯನ್ನು ಕಾದುಕೊಂಡಿದ್ದ ಗಡಿ ರಕ್ಷಕನು ಸಮೃದ್ಧವಾದ ಆ ಸ್ಥಳವನ್ನು ಬಿಟ್ಟು ಓಡಿಹೋದನಂತೆ. ಆಗ ನೆರೆಗಡಿಯ ದುರ್ಗಪಾಲಕನು ಉಷ್ಟ್ರರೂಢರಾದ ಚಾರರ ಕೈಯಲ್ಲಿ ಲೇಖನವನ್ನು ಕೊಟ್ಟು ಈ ಸುದ್ದಿಯನ್ನು ರಾಕ್ಷಸನಿಗೆ ತಲುಪಿಸಿದ್ದನು. ಯುದ್ಧ ಆರಂಭವಾದ ವೇಳೆಯೂ ಅಷ್ಟೆ. ಒಂಟೆಯನ್ನು ಹತ್ತಿಕೊಂಡು ವೇಗದಿಂದ ಬಂದ ದೂತರು ತಾವು ತಂದಿದ್ದ ಕಾಗದವನ್ನು ರಾಕ್ಷಸನಿಗೆ ಕೊಟ್ಟರಂತೆ.

ಮೈಸೂರು ಒಡೆಯರ ಈ ಕಾಲದಲ್ಲಿ ಯುದ್ಧದಲ್ಲಿ ಒಂಟೆಗಳನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ನಮಗೆ ಹಲವು ಸಾಕ್ಷ್ಯಗಳು ಸಿಗುತ್ತವೆ:

(1) ಪೂರ್ಣಯ್ಯನು ಸೈನಿಕರ ಹಣವನ್ನು ಒಂಟೆಗಳ ಮೇಲೆ ಶ್ರೀರಂಗ ಪಟ್ಟಣಕ್ಕೆ ಸಾಗಿಸಿದ್ದನು[42].

(2) ಹೈದರಲ್ಲಿಖಾನರು ನಾಜರುಜಂಗರ ಖಜಾನೆದ್ರವ್ಯವೆಲ್ಲ ದಿಕ್ಕಾಪಾಲಾಗಿ ಲೂಟಿಸಿ ಕೊಂಡೂ ಹೋಗುವರಲ್ಲಿ ಕೆಲವರ ಹೊಡದು ಆ ಪೈಕಿ ಹದಿನೈದು ವಂಟೆ ಮೇಲಣ ಅಕಬರೀ ಮೊಹರಾ ಹೇರುಗಳನ್ನು ಹಸ್ತಗತಾ ಮಾಡಿಕೊಂಡರು[43].

ಇದರಿಂದ ಸಮಕಾಲೀನ ವಿಚಾರಗಳಿಂದ ಪ್ರಭಾವಿತನಾಗಿಯೇ ಕವಿಯು ತನ್ನ ಕೃತಿಯಲ್ಲಿ ಬಣ್ಣಿಸುತ್ತಿದ್ದಾನೆಂಬ ವಿಚಾರವು ಸ್ಪಷ್ಟವಾಗುವುದು.

ದೋಣಿ: ಯುದ್ಧಕ್ಕೆ ಹೊರಟಾಗ ಮಾರ್ಗ ಮಧ್ಯದ ನದಿಗಳಲ್ಲಿ ಸೇನೆ ಆಯಾಸವಿಲ್ಲದಂತೆ ದಾಟುವುದಕ್ಕೆ ನಾವೆಗಳನ್ನು ಜೊತೆಗೊಳಿಸಿಕೊಳ್ಳುತ್ತಿದ್ದರು. ಪರ್ವತರಾಜನು ನಂದರಾಜಾಭಿಮುಖವಾಗಿ ಹೊರಟಾಗ ಮೂವತ್ತು ಸಾವಿರ ನಾವೆಗಳ ಮುಖ್ಯಸ್ಥನಾಗಿ ದಾಶನೆಂಬವನು ಹೊರಟಿದ್ದನು. ಯುದ್ಧ ಆರಂಭವಾದ ವೇಳೆ ನಂದರ ಕಡೆಯ ಭದ್ರಭಟಾದಿಗಳು ತಟಸ್ಥರಾದುದನ್ನು ತಿಳಿದ ಪರ್ವತರಾಜನು ತನ್ನ ಕಡೆಯ ಹೂಣ ಚೀಣ ಕಿರಾತಾಧಿಪತಿಗಳನ್ನು ಕುರಿತು — 'ನೀವೆಲ್ಲರೂ ಬಲಸಮೇತರಾಗಿ ನಾವೆಗಳನ್ನು ಹತ್ತಿ ಸರಯೂ ಸಂಗಮದಿಂದ ಹೋಗಿ ಈ ರಾತ್ರಿಯಲ್ಲೇ ಪಾಟಲೀಪುರಕ್ಕೆ ಮುತ್ತಿಗೆಯನ್ನು ಹಾಕಬೇಕೆಂದು' ಆಜ್ಞಾಪಿಸುತ್ತಾನೆ.

ಇತ್ತ ಯುದ್ಧಭೂಮಿಯಿಂದ ಬಂದ ಚಾರರು ನಂದರಿಗೆ ಕೈಮುಗಿದು — 'ಬುದ್ಧಿ, ಖಡ್ಗಪಾಣಿಗಳಾದ ಪದಾತಿವರ್ಗದಿಂದ ಯುಕ್ತವಾದ ಶತ್ರುಗಳ ಐದು ಸಾವಿರ ನಾವೆಗಳು ಶೋಣಭದ್ರಾ ನದಿಯೊಳಗೆ ಬಂದು ನಮ್ಮ 'ಒಡೆಗಳನ್ನು ಹಿಡಿದು ನಾವಿಕರನ್ನು ಪ್ರಹರಿಸಿ, ನದಿಯನ್ನು ದಾಟಿ ಬಂದು ಧ್ವಜವನ್ನು ನೆಟ್ಟು ವ್ಯೂಹಗಳನ್ನು ರಚಿಸಿಕೊಂಡಿದ್ದಾರೆ' ಎಂದು ತಿಳಿಸುತ್ತಾರೆ. ಅದನ್ನು ಕೇಳಿದ ನಂದರು — 'ತಮ್ಮ ಸೇನೆಗಳು ಗಂಡಕೀ ಪ್ರಾಂತ್ಯವನ್ನು ಬಿಟ್ಟು, ಮಾರ್ಗಾಂತರದಿಂದ ಶೋಣಭದ್ರಾನದಿಯನ್ನು ದಾಟಿ ಬಂದು — ಶತ್ರುಗಳನ್ನು ಮುಂದೆ ದಾಟಲು ಬಿಡದಂತೆ ನಿಲ್ಲಿಸಲು ಹೇಳುತ್ತಾರೆ. ಆದರೂ ಸರಯೂ ನದಿಯ ಮಾರ್ಗವಾಗಿ ಪರ್ವತರಾಜನ ಕಡೆಯ ಹತ್ತು ಸಾವಿರ ನಾವೆಗಳು ಸೇನಾಸಮೇತರಾಗಿ ಗಂಗಾ ಸಂಗಮಕ್ಕೆ ಬಂದು ಗಂಗಾ ನದಿಯನ್ನು ದಾಟಿ ಪಟ್ಟಣವನ್ನು ಮುತ್ತಿದವಂತೆ.

'ಹೈದರಲಿಖಾನನು ಹುಡುಕಿಸಿ ಪಬ್ಬ ಅಂಬಿಗರವನು ಸಿಕ್ಕಿದವನಾಗಿ ಅವನನ್ನು ಹಿಡಿತರಿಸಿ ... ಉತ್ತಮಪಾಳ್ಯದ ವೆಂಕಟರಾವ್ ತೋಷಖಾನೆ ಶ್ರೀನಿವಾಸ ಜೀವಾಜೀಮಿರಾ ಅಲ್ಲಿರಜಾಖಾನರು ಸಹಾ ಆ ಟೋಕರ ಪಬ್ಬ ಅಂಬಿಗನಿಂದಾ ಶುಕ್ರವಾರದ ಪ್ಯಾಟೆ ಕಡಗಿನಲ್ಲಿ ನದಿ ದಾಟಿ ಹೋದರು' ಎಂದು ಹೈದರನಾಮೆಯಲ್ಲಿ ಹೇಳಿದೆ (ಪು. 46, 47)

ಶ್ರೀರಂಗಪಟ್ಟಣವು ದ್ವೀಪದಂತಿದ್ದು ಜಲದುರ್ಗವಾಗಿರುವುದರಿಂದ ಇಲ್ಲಿ ನಾವೆಗಳನ್ನು ಯುದ್ಧಗಳಲ್ಲಿ ಸಾಕಷ್ಟು ಪ್ರಭಾವಯುತವಾಗಿ ಬಳಸಿಕೊಂಡಿರುವ ಸಾಧ್ಯತೆ ಇದೆ.

ಸಮರ ಸಿಬ್ಬಂದಿ: ವಿವಿಧ ನಮೂನೆಯ ಸೈನಿಕರಲ್ಲದೇ ರಾಯಸದವರು, ರಾಯಭಾರಿಗಳಾದ ನಿಯೋಗಿಗಳು, ಗುಪ್ತಚಾರರು ಮೊದಲಾದವರು ರಾಜನ ಅನುವರ್ತಿಗಳಾಗಿ ಕೆಲಸ ಮಾಡುತ್ತಿದ್ದರು ಮತ್ತು ತಮ್ಮ ರಾಜರ ಗೆಲುವಿಗಾಗಿ ನಿಷ್ಠೆಯಿಂದ ಪ್ರಾಣವನ್ನು ಸಹ ಪಣವಾಗಿ ಒಡ್ಡಿಕೊಳ್ಳುತ್ತಿದ್ದರು.

ರಾಯಸದವರು: ಇವರು ರಾಜರ ಹೆಸರಿನಿಂದ ಪತ್ರಗಳನ್ನು ಬರೆಯುವವರು. ಸಾಮಾನ್ಯವಾಗಿ ರಾಜಶಾಸನ ಲೇಖಕರೂಗಳಾದ ಇವರು ಕುಲಪರಂಪರೆಯಿಂದ ಆಪ್ತರಾದವರು.

ಪ್ರಕೃತ ಯುದ್ಧದ ಮೊದಲು ರಾಕ್ಷಸನು ಭೇದೋಪಾಯದಿಂದ ಪರ್ವತರಾಜನನ್ನು ಗೆಲ್ಲಬೇಕೆಂದು ಬಯಸಿ ಆತನ ಬಳಿಯಲ್ಲಿ ಪ್ರೀತಿಪಾತ್ರರಾಗಿಯೂ ವರ್ತಕರಾಗಿಯೂ ವ್ಯಾಪಾರ ಮುಖದಿಂದ ಜೀವಿಸುತ್ತಿರುವ ತನ್ನ ಕಡೆಯ ಎಂಟು ಮಂದಿ ಗೂಢ ಮಂತ್ರಿಗಳ ಹೆಸರನ್ನು ಹೇಳುವ ಸಮಯದಲ್ಲಿ ಚಾಣಕ್ಯನಿಂದ ಪ್ರೇಷಿತನಾದ ಜೀವಸಿದ್ಧಿಯು ಅಲ್ಲಿ ಧ್ಯಾನಾರೂಢನಾಗಿ ಕುಳಿತಿದ್ದುದರಿಂದ ಆತನ ಭೇದೋಪಾಯ ಭಂಗವಾಯಿತು. ರಾಕ್ಷಸನ ದಾಕ್ಷಿಣ್ಯವೇ ಕಾರ್ಯಭಂಗವಾಗಲು ಕಾರಣವಾಯಿತು. ರಾಯಸದವರಂತೂ ರಾಜನಿಷ್ಠರೇ ಆಗಿದ್ದರು.

ರಾಕ್ಷಸನ ಇನ್ನೊಬ್ಬ ರಾಯಸದವನಾದ ಶಕಟದಾಸನು ತನ್ನ ಹುದ್ದೆಯ ಜವಾಬ್ದಾರಿಯನ್ನು ಮರೆತು ಹೊಸತಾಗಿ ಪರಿಚಿತನಾದ ಸಿದ್ಧಾರ್ಥಕನು ಕೇಳಿದ ಮಾತ್ರಕ್ಕೆ ಆತನು ತಂದಿದ್ದ ಪತ್ರದ ಪ್ರತಿಯನ್ನು ಬರೆದು ಕೊಡುವವನಾದ. ಈತನ ಬೇಜವಾಬ್ದಾರಿಯು ಚಾಣಕ್ಯನ ಕೆಲಸವನ್ನು ಸುಲಭ ಮಾಡಿತು.

ಒಟ್ಟಿನಲ್ಲಿ ರಾಜಕಾರ್ಯಸಿದ್ಧಿಯಲ್ಲಿ ರಾಯಸದವರ ಪಾತ್ರ ಹಿರಿದಾದುದು. ಯುದ್ಧದ ಸಮಯದಲ್ಲಂತೂ ಇವರು ಕಣ್ಣಲ್ಲಿ ಕಣ್ಣಿಟ್ಟು ಜಾಗೃತರಾಗದಿದ್ದರೆ ರಾಜರ ಗೆಲುವಿಗೇ ಧಕ್ಕೆ ಬರುವ ಸಾಧ್ಯತೆ ಇದೆ. ಈ ಚಿತ್ರಣ ಇಲ್ಲಿ ಚೆನ್ನಾಗಿ ಮೂಡಿಬಂದಿದೆ.

<u>ರಾಯಭಾರಿಗಳಾದ ನಿಯೋಗಿಗಳು:</u> ರಾಜತಂತ್ರಜ್ಞರಾದ ರಾಯಸದವರು ತಮ್ಮ ಬುದ್ಧಿವಂತಿಕೆಯನ್ನು ಪತ್ರ ಬರೆಯುವುದರಲ್ಲಿ ತೋರಿಸಿದರೆ, ಅದನ್ನು ಪರರಾಜರ ಬಳಿ ಕೊಂಡೊಯ್ದು ಯಶಸ್ವಿಗೊಳಿಸಬೇಕಾದ ಪಾಲು ನಿಯೋಗಿಗಳು.

ಯುದ್ಧದ ಸಮಯದಲ್ಲಂತೂ ನಿಯೋಗಿಗಳು ತಮ್ಮ ರಾಜರ ಸಂದೇಶಗಳನ್ನು ಪರರಾಜರ ಬಳಿಗೆ ಕೊಂಡೊಯ್ಯುವ ಕೆಲಸ ಮಾಡುತ್ತಿದ್ದರು. ಅಲ್ಲಿ ಹೋಗಿ ಪರರಾಜರ ಸಮ್ಮುಖದಲ್ಲಿ ಕಾಣಿಸಿಕೊಂಡು, ತಾವು ತಂದ ಕೈಗಾಣಿಕೆಗಳನ್ನು ಒಪ್ಪಿಸಿ ಸಂದರ್ಭಕ್ಕೆ ತಕ್ಕಂತೆ ಮಾತನಾಡುತ್ತಿದ್ದರು. ಮಾತುಕತೆಯ ಸಂದರ್ಭದಲ್ಲಿ ಚಲನವಲನಗಳಿಂದಲೇ ಪರರಾಜರ ಅಭಿಪ್ರಾಯಗಳನ್ನು ಗ್ರಹಿಸಿ, ಕೊನೆಯಲ್ಲಿ ಆ ರಾಜರು ಕೊಟ್ಟ ವೀಳೆಯವನ್ನು ಸ್ವೀಕರಿಸಿ ಬಿಡಾರದಲ್ಲಿ ನಿಂತು ಮುಂದಿನ ಪರಿಣಾಮವನ್ನು ನಿರೀಕ್ಷಿಸುತ್ತಿದ್ದರು. ತಮ್ಮ ಕಾರ್ಯವನ್ನು ಸಾಧಿಸಿಕೊಂಡ ನಂತರವೇ ಹಿಂತಿರುಗುತ್ತಿದ್ದರು.

ಪರ್ವತರಾಜನ ಕಡೆಯ ಕಮಲಾಕ್ಷನೆಂಬ ನಿಯೋಗಿಯು ಚಾಣಕ್ಯನ ಆದೇಶದಂತೆ ಕಾಮರೂಪಾಧಿಪತಿಯ ಆಸ್ಥಾನಕ್ಕೆ ಹೋಗಿ ಆ ರಾಜನಿಗೆ ಲಂಪಾಕಪತಿಯ ಮೇಲೆ ಸಿಟ್ಟು ಬಂದು ದಂಡೆತ್ತಿ ಹೋಗುವಂತೆ ಮಾಡುತ್ತಾನೆ. ಮತ್ತೆ ಅದೇ ನಿಯೋಗಿಯು ಕಾಶೀರಾಜನ ಆಸ್ಥಾನಕ್ಕೆ ಹೋಗಿ ಮಾತನಾಡಿ, ಅಲ್ಲಿ ನಡೆದ ವಿದ್ಯಮಾನಗಳನ್ನೆಲ್ಲಾ ತಿಳಿಯುವಲ್ಲಿ ಮತ್ತು ಆ ರಾಜನನ್ನು (ಕಪಟದಿಂದಲಾದರೂ) ಪರ್ವತರಾಜನ ಪರವಾಗಿ ಯುದ್ಧಕ್ಕೆ ಬರುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾನೆ.

ಇತ್ತ ಎರಡನೆಯ ದಿವಸದ ಯುದ್ಧದಲ್ಲಿ ನಂದರಿಗೇ ಜಯವುಂಟಾಗಿದ್ದರೂ ರಾಕ್ಷಸನು, ಸಂಧಿಯೆಂದು ಕಾಲಕಳೆಯುತ್ತ ದಕ್ಷಿಣ ದಿಕ್ಕಿನಿಂದ ಸೈನ್ಯವನ್ನು ತರಿಸಿಕೊಳ್ಳುವ ಇಚ್ಛೆಯಿಂದ ವಿಷ್ಣುದಾಸನೆಂಬ ನಿಯೋಗಿಯನ್ನು ಪರ್ವತರಾಜನ ದಂಡಿನ ಪಾಳೆಯಕ್ಕೆ ಕಳುಹಿಸುತ್ತಾನೆ. ಆತನು ಬಂದು – 'ಚಂದ್ರಗುಪ್ತನನ್ನು ನಂದರ ವಶಕ್ಕೆ ಒಪ್ಪಿಸಿಕೊಡುವಂತೆ' ರಾಕ್ಷಸನು ತಿಳಿಸಿದ ವಚನವನ್ನು ನಯಭಯಪೂರ್ವಕವಾಗಿ ಹೇಳುತ್ತಾನೆ. ವಸ್ತುತಃ ನಿಯೋಗಿಯ ಈ ಮಾತಿನಿಂದ ಪರ್ವತರಾಜನ ಮನಸ್ಸು ಅತ್ತ ಕಡೆ ವಾಲುತ್ತದೆ. ಬಾಯ್ದೆರೆಯಾಗಿ ಆತನು – 'ಚಂದ್ರಗುಪ್ತನನ್ನು ಒಪ್ಪಿಸಲು ಅಸಾಧ್ಯ' ವೆಂದು ತಿಳಿಸಿದರೂ ಮರ್ಮಜ್ಞನಾದ ಆ ನಿಯೋಗಿಯು ಪರ್ವತರಾಜನ ಮನಸ್ಸಿನ ದ್ವಂದ್ವಭಾವವನ್ನು ಗ್ರಹಿಸಿ ರಾಕ್ಷಸನಿಗೆ ತಿಳಿಸುತ್ತಾನೆ.

ಹೀಗೆ ನಿಂತೋಳಿಗಳು ಬುದ್ಧಿಶಾಲಿಗಳಾಗಿ ತಮ್ಮ ಸ್ವಾಮಿಕಾರ್ಯವನ್ನು ನೆರವೇರಿಸಿಕೊಳ್ಳುತ್ತಾ, ಪರರಾಜರು ಕೊಡುವ ವಸ್ತ್ರಭೂಷಣ ತಾಂಬೂಲಾದಿಗಳನ್ನು ಸ್ವೀಕರಿಸುತ್ತ, ಯುಕ್ತೋಚಿತವಾಗಿ ವರ್ತಿಸುತ್ತಿದ್ದರು.

<u>ಗುಪ್ತಚಾರರು:</u> 'ರಾಜಾನಃ ಚಾರ ಚಕ್ಷುಷಃ' 'ಚಾರೈಃ ಪಶ್ಯಂತಿ ರಾಜಾನಃ' ಎಂಬೀ ಮಾತುಗಳಿಂದ 'ರಾಜನಿಗೆ ಗುಪ್ತಚರರು ಕಣ್ಣುಗಳಿದ್ದಂತೆ' ಎಂಬುದು ಸ್ಪಷ್ಟವಾಗುವುದು. ವೈದಿಕ ಕಾಲದಲ್ಲಿಯೂ ಈ ಗುಪ್ತಚರ ವ್ಯವಸ್ಥೆ ಅಸ್ತಿತ್ವದಲ್ಲಿದ್ದಿತಂತೆ [44]. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸತ್ರಿ, ಕಾಪಟಿಕ, ಉದಾಸ್ಥಿತ, ತಾಪಸ, ಪರಿವ್ರಾಜಿಕಾ ಮೊದಲಾದ ಗುಪ್ತಚಾರರ ಬಗ್ಗೆ ಹೇಳಿದೆ (ಅಧ್ಯಾಯ 5ರಲ್ಲಿ ವಿವರ ಸಹಿತ ಹೇಳಿದೆ).

ಗಡಿ ಪ್ರದೇಶದಿಂದ ಬಂದ ಒಣಗಿದ ಕಂಠದೇಶವುಳ್ಳ ಆಯುಧ ರಹಿತವಾದ ಗೂಢಚಾರರ ಮೈಮೇಲೆ ನೀರುಗಳನ್ನು ತಳಿದು ಪಾನವನ್ನು ಮಾಡಿಸಿದ ಸ್ವಲ್ಪ ಕಾಲದ ಮೇಲೆ ಆ ಚಾರರು ಚೇತರಿಸಿಕೊಂಡು — 'ಬುದ್ಧೀ, ನಾವು ಶತ್ರುಗಳ ದಂಡಿನಿಂದ ಹೊರಟು ಹನ್ನೆರಡು ದಿನಗಳಾದುವು. ಎಂಟು ಹೊತ್ತು ಆಹಾರವೂ ಹದಿನೈದು ಹೊತ್ತು ಜಲಪಾನವೂ ದೊರಕಿದೆ. ನಿದ್ರೆಗೆ ಅವಕಾಶವೇ ಇಲ್ಲ. ದಿನವೊಂದಕ್ಕೆ ಎಂಟು ಗಾವುದ ಪ್ರಕಾರ ಅಹೋರಾತ್ರಿಯಲ್ಲೂ ಪ್ರಯಾಣವು ಸ್ವಾಮಿಯವರ ಅನುಪ್ರಭಾವದಿಂದ ತಮ್ಮ ಸನ್ನಿಧಿಗೆ ಬಂದೆವಲ್ಲದೇ ಈ ಭಾಗದಲ್ಲಿ ಮನುಷ್ಯ ಯತ್ನವನ್ನು ಕಾಣೆವು' ಎಂದು ಹೇಳಿದರೂ ಅವರ ಸಾಹಸ, ಸ್ವಾಮಿನಿಷ್ಠೆ ವೇದ್ಯವಂತಹದಾಗಿದೆ.

ಯುದ್ಧವು ಆರಂಭವಾಗುವಾಗ ಶತ್ರುಗಳ ಗೂಢಚಾರರನ್ನು ಅವರ ವೇಷ, ಭೂಷಣ, ಭಾಷಾ ವ್ಯತ್ಯಾಸಗಳಿಂದ ತಿಳಿದು ಹಿಡಿದು ಬಂಧಿಸಿ ರಾಜರಿಗೆ ಒಪ್ಪಿಸುತ್ತಿದ್ದರು. ಹೀಗೆಯೇ ರಾಕ್ಷಸನಿಂದ ನೇಮಿಸಲ್ಪಟ್ಟಿದ್ದ ಚಾರರು ಪರ್ವತರಾಜನ ಸೈನ್ಯದಲ್ಲಿ ಸಿಕ್ಕಿಬಿದ್ದಾಗ ಚಂದ್ರಗುಪ್ತನು — 'ಈ ಚಾರರಿಗೆ ನಮ್ಮ ಸೇನೆಗಳೆಲ್ಲವನ್ನು ತೋರಿಸಿ ಕಶೆಗಳಿಂದ ಹತ್ತು ಪ್ರಹಾರಂಗೆಯ್ದು ದಂಡಿನಿಂದ ಹೊರಡಿಸಿಬಿಡಿ' ಎಂದು ಆಜ್ಞಾಪಿಸುತ್ತಾನೆ. ಇಂತಹ ರಾಜಾಜ್ಞೆಗಳನ್ನು ಕವಿಯು ತನ್ನ ಕಿವಿಯಾರೆ ಕೇಳಿರಬೇಕು. ಅಂದರೆ ಪರದೇಶದ ಗೂಢಚಾರರಿಗೆ ಅವಮಾನವನ್ನು ಮಾಡುತ್ತಿದ್ದರೇ ಹೊರತು ಮರಣದಂಡನೆಯ ಶಿಕ್ಷೆ ವಿಧಿಸುತ್ತಿರಲಿಲ್ಲವೆಂದು ಗೊತ್ತಾಗುತ್ತದೆ.

ಪಾಟಲೀಪುರದಿಂದ ಜೋಗಿಯ ವೇಷವನ್ನು ಧರಿಸಿ ಬಂದು ಸಿಕ್ಕಿಬಿದ್ದ ಚಾರನಿಗೆ ನಾಸಿಕಾಚ್ಛೇದನೆ[45]ವನ್ನು ಮಾಡಿಸಿ ದಂಡಿನಲ್ಲಿ ಡಂಗುರವನ್ನು ಹಾಕಿ ಸಾರಿಸಿದರಂತೆ. ಇದೆಲ್ಲವನ್ನು ನೋಡಿ ಪಾಟಲೀಪುರದಿಂದ ಬಂದಿದ್ದ ಮಿಕ್ಕ ಚಾರರೂ ಭಯಗ್ರಸ್ತರಾಗಿ ತಮ್ಮ ಬಳಿಯಲ್ಲಿದ್ದ ಕಾಗದಗಳನ್ನು ಹರಿದು ಭಕ್ಷಿಸಿ ತಪ್ಪಿಸಿಕೊಂಡು ಹಿಂದಿರುಗಿ ಹೋದರಂತೆ.

ಹೀಗೆ ಹೊಟ್ಟೆಪಾಡಿಗಾಗಿ ಪರರಾಜ್ಯದಲ್ಲಿ ಸೇವೆ ಮಾಡುತ್ತಿದ್ದ ಇಂತಹ ಗೂಢಚಾರರಲ್ಲಿ ಅಪಾರದೇಶಭಕ್ತಿ, ರಾಜನಿಷ್ಠೆ ಇರುತ್ತಿತ್ತು. ತಮ್ಮ ಜೀವವನ್ನೇ ಪಣವಿಟ್ಟಾದರೂ ಇವರು ಸ್ವಾಮಿಕಾರ್ಯ ಮಾಡುತ್ತಿದ್ದರು. ಕುದುರೆಗಳನ್ನು, ಒಂಟೆಗಳನ್ನು 'ಏರಿಕೊಂಡು ಬಂದು ಇವರು ತಮ್ಮ ರಾಜರಿಗೆ ಶತ್ರು

ರಾಜರ ಯುದ್ಧೋಪಕ್ರಮಗಳನ್ನು ತಿಳಿಸುತ್ತಿದ್ದರು.

<u>ಉಡುಗೆ ತೊಡುಗೆ:</u> ಯುದ್ಧದಲ್ಲಿ ಪಾಲ್ಗೊಳ್ಳುವ ರಾಜರುಗಳು, ಮಂತ್ರಿಗಳು, ಸೇನಾಪತಿಗಳು ಮತ್ತು ಸೈನಿಕರು ವೀರೋಚಿತವಾಗಿ ಉಡುಗೆ – ತೊಡುಗೆಗಳನ್ನು ಧರಿಸುತ್ತಿದ್ದುದು ಹಿಂದಿನಿಂದಲೂ ನಡೆದು ಬಂದ ರೂಢಿಯಾಗಿದೆ.

ನಂದರು ದಿವ್ಯ ಮಾಲ್ಯಾನುಲೇಪನಾಭರಣಗಳನ್ನು ಧರಿಸಿ ದಂಡಿನ ಪಾಳಯಕ್ಕೆ ಹೊರಟಿದ್ದರು. ರಾಕ್ಷಸನು ಕವಚವನ್ನು ಧರಿಸಿ ಭರ್ಜಿಯನ್ನು ಹಿಡಿದು ಸಮರಕ್ಕೆ ತೆರಳುತ್ತಿದ್ದನು.

ಗುಪ್ತಚರರು ನೋಡಿ ಬಂದು ಹೇಳಿದಂತೆ ಪರ್ವತೇಶ್ವರನ ಕಡೆಯ ವಿವಿಧ ರಾಜರುಗಳ ಉಡುಗೆ – ತೊಡುಗೆ ಮತ್ತು ಧ್ವಜಗಳು ಹೀಗಿದ್ದುವು. ಕಿರಾತ ಸೇನೆಯದ್ದು ನೀಲವರ್ಣ ಧ್ವಜ; ಹೂಣರದ್ದು ರಕ್ತ ವರ್ಣದ ವಸ್ತ್ರ ಹಾಗೂ ಹಂಸಚರಣ ಲಕ್ಷಣ ಲಕ್ಷಿತವಾದ ಧ್ವಜಪತಾಕೆ; ಚೀನ ಸೇನೆಯದು ಹರಿದ್ವರ್ಣ ರಂಜಿತ ವಸನ, ಮಯೂರ ಪಿಂಛ ಲಕ್ಷಣ ಲಕ್ಷಿತವಾದ ಧ್ವಜ; ಶಕಸೇನೆಯದು ಕಾಷಾಯವಸ್ತ್ರ, ತ್ರಿಪುಂಡ್ರಲಾಂಛನ ಲಾಂಛಿತ ಧ್ವಜ; ಸಿಂಧುಪತಿಯದು ಪೀತವರ್ಣ ವರ್ಣಿತ ವಸನ ಮತ್ತು ಹಲಾಂಛನ ಲಾಂಛಿತ ಧ್ವಜ; ಮಲಯ ಪತಿ ಸಿಂಹನಾದನದು ಕಪಿಲವರ್ಣದ ಬಟ್ಟೆ ಮತ್ತು ಕಾಳಧ್ವಜ; ಚಿತ್ರವರ್ಮನದು ಚಿತ್ರವಸ್ತ್ರ ಮತ್ತು ಚಿತ್ರಮೃಗ ಲಾಂಛಿತಕೇತನ; ಪಾರ್ವತೀಯ ಸೇನೆಯದು ಶುಭ್ರ (ಬಿಳಿ?) ವಸ್ತ್ರ, ಧೂಮರೇಖಾ ಲಾಂಛನ; ಸಿಂಧುಪತಿಯದು ಬಭ್ರುವರ್ಣವಸನ ಮತ್ತು ವ್ಯಾಘ್ರಲಾಂಛನ.

ಇವರಲ್ಲದೇ ನಂದರ ಅನುಯಾಯಿಗಳಾದ ಕಾಶಿರಾಜನ ಕಡೆಯವರು ವಿಭೂತಿ ರುದ್ರಾಕ್ಷಗಳನ್ನಲಂಕರಿಸಿಕೊಂಡು ಅದೇ ರೀತಿಯಲ್ಲಿರುವ ವಸ್ತ್ರಾದಿಗಳನ್ನು ಧರಿಸಿದ್ದುದರ ಬಗ್ಗೆಯೂ ಇಲ್ಲಿ ಮಾಹಿತಿ ಇದೆ.

ಇಲ್ಲಿ ಕವಿ ಯಾವ ಆಧಾರದಿಂದ ಇಷ್ಟು ಸ್ಪಷ್ಟ ಚಿತ್ರಣವನ್ನು ಕೊಡುತ್ತಿದ್ದಾನೆಂದು ಗೊತ್ತಾಗುವುದಿಲ್ಲ. ಆದರೆ ಬಹು ಹಿಂದಿನ ಕಾಲದಿಂದಲೂ ಭಾರತದಲ್ಲಿ ರಾಜರಿಗೆ ತಮ್ಮದೇ ಆದ ಸಮವಸ್ತ್ರ ಮತ್ತು ಧ್ವಜ ಲಾಂಛನಗಳಿದ್ದುವೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ[46].

<u>ಆಯುಧಗಳು ಹಾಗೂ ಸಂರಕ್ಷಕ ಸಾಧನಗಳು</u>

ಸೈನಿಕರು ಯುದ್ಧಕ್ಕೆ ಹೊರಟಾಗ ಯಾವ ಯಾವ ಆಯುಧಗಳನ್ನು ಹೊಂದಿರುತ್ತಿದ್ದರು, ತಮ್ಮ ದೇಹವನ್ನು ಯಾವ ರೀತಿ ರಕ್ಷಣೆ ಮಾಡಿಕೊಳ್ಳುತ್ತಿದ್ದರು – ಎಂಬ ವಿಷಯಗಳ ಬಗ್ಗೆ ಇಲ್ಲಿ ಅನೇಕ ವಿವರಗಳು ದೊರೆಯುತ್ತವೆ.

ಆಯುಧಗಳು: ಪರ್ವತರಾಜನ ಸೇನೆಯು ಬರುವುದೆಂಬ ವರ್ತಮಾನವನ್ನು ಬೇಹುಗಾರರಿಂದ ತಿಳಿದ ರಾಕ್ಷಸನು ಭಾಗುರಾಯಣನಲ್ಲಿ — 'ನೀನು ಕೋಟೆ, ಕೊತ್ತಲ, ಉಕ್ಕಡ ಮುಂತಾದ ಸ್ಥಳಗಳಲ್ಲಿ ಫಿರಂಗಿ, ಶೂಲ, ಪ್ರಾಸ, ಕುಂತ, ಶತಘ್ನಿ, ಖಡ್ಗ, ತುಪಾಕ, ಬಾಣ, ಮದ್ದುಗುಂಡು ಮೊದಲಾದ ಯುದ್ಧ ಸಾಮಾಗ್ರಿಗಳನ್ನು ಒದಗಿಸಿಕೊಂಡು ··· ಪುರವನ್ನು ರಕ್ಷಿಸುವವನಾಗು' ಎನ್ನುತ್ತಾನೆ. ಯುದ್ಧ ಆರಂಭವಾದ ದಿನ ನಂದರ ಕಡೆಯ ಅರುವತ್ತು ಫಿರಂಗಿಗಳು ಶತ್ರುಗಳ ವಶವಾದುವು. ಶತ್ರುಗಳು ಮರಳಿ ಮರಳಿ ಪ್ರಾಕಾರದ ಮೂಲವನ್ನು ಹಿಡಿದು 'ಏಣಿಗಳನ್ನೇರಿಸಿ ದುರ್ಗವನ್ನು ಹತ್ತುವುದಕ್ಕೆ ಯತ್ನವನ್ನು ಮಾಡುತ್ತಿರಲು ಆಗ ಕೋಟೆಯಿಂದ ಒಂದೇ ಸವನೆ ಎರಚುವ ಕಾಯ್ದ ಸೀಸದ ಮಳೆಯಿಂದಲೂ ಫಿರಂಗಿಯ ಗುಂಡುಗಳ ತಂಡಗಳಿಂದಲೂ, ಶತಘ್ನೀಘಾತಗಳಿಂದಲೂ, ಬಾಣವೃಷ್ಟಿಗಳಿಂದಲೂ, ಶೂಲ ಪ್ರಾಸಾದ್ಯಾಯುಧಗಳ ಪೆಟ್ಟುಗಳಿಂದಲೂ ಶತ್ರುಸೇನೆಯು ಛಿನ್ನಾಭಿನ್ನವಾದವು. ಚಾಣಕ್ಯರ ಅಣತಿಯಂತೆ ಶೇಖರನು ನಂದರನ್ನು ಪಾಶಗಳನ್ನು ಬೀಸಿ ಹಿಡಿದು ಬಂಧಿಸಿ ಕಾಲುಗಳಿಗೆ ನೇಣುಗಳನ್ನು ಬೀರಿ ಎಳೆಸಿ ಸಂಹರಿಸಿದನು.

ಈ ಮೇಲಿನ ವಾಕ್ಯಗಳಿಂದ ಫಿರಂಗಿ, ಶೂಲ, ಪ್ರಾಸ, ಪಟ್ಟಿಸ, ಕುಂತ, ಶತಘ್ನಿ, ಖಡ್ಗ, ತುಪಾಕ, ಬಾಣ, ಮದ್ದುಗುಂಡು, ತೋಮರ, ಚಕ್ರ, ಗದಾ, ಪರಿಘ, ಭೇಡಿಯ, ನಿಷಂಗ, ಚಾಪ, ಭಲ್ಲೆಯ, ಕವಚ, ನೇಜಿಯ, ಮುಸಲ, ದಂಡ, ಅರ್ಧಚಂದ್ರ ಬಾಣ ಮತ್ತು ಪಾಶ ಇವುಗಳನ್ನು ಆಯುಧ ಮತ್ತು ಸಂರಕ್ಷಕ ಸಾಧನಗಳಾಗಿ ಉಪಯೋಗಿಸುತ್ತಿದ್ದುದು ತಿಳಿದುಬರುತ್ತದೆ.

ಮೇಲೆ ಹೆಸರಿಸಿದವುಗಳಲ್ಲಿ ಕೆಲವು ಭಿನ್ನ ಭಿನ್ನ ಹೆಸರುಗಳಿಂದ ಸೂಚಿಸಲ್ಪಟ್ಟಿದ್ದರೂ ಅವು ಒಂದೇ ಆಯುಧವಾಗಿರುವ ಸಾಧ್ಯತೆ ಇದೆ. ಹಾಗಾಗಿ ಈ ಆಯುಧಗಳ ಅರ್ಥ ಮತ್ತು ಪ್ರಯೋಗ ವಿಧಾನಗಳನ್ನು ಗುರುತಿಸಿದೆ.

೧. ಖಡ್ಗ : ಕತ್ತಿಯ ನಮೂನೆ ವಿಶೇಷ. ಅನೇಕ ಪ್ರಭೇದಗಳಿವೆ. ಸೀಳುವ ಸಾಧನಗಳು.

೨. ಬಿಲ್ಲುಬಾಣಗಳು: ಇದರಲ್ಲಿಯೂ ವಿಭಿನ್ನ ರೀತಿಯವುಗಳಿವೆ. ಉದಾ: ಅರ್ಧಚಂದ್ರ ಬಾಣ.

೩. ಈಟಿ[47] : ಭರ್ಜಿ, ಪಟ್ಟಿಸ, ಕುಂತ, ಭಲ್ಲೆಯ, ನೇಜಿಯ, ಸಬಳ.

೪. ಶೂಲ : ಕೆಲವು ಕೋಶಕಾರರು ಇದನ್ನೂ ಈಟಿ ಎಂದು ಕರೆದಿದ್ದಾರೆ. ಚೂಪಾದ ತುದಿಯುಳ್ಳ ಒಂದು ಬಗೆಯ ಆಯುಧ.

೫. ಪ್ರಾಸ : ಒಂದು ಬಗೆಯ ಆಯುಧ.

೬. ಪರಿಘ : ಅಗುಳಿ, ಒಂದು ಬಗೆಯ ಆಯುಧ.

೭. ತೋಮರ : ಕಬ್ಬಿಣದ ಗದೆ.

೮. ಮುಸಲ : ಒನಕೆಯಂತಹ, ತಿವಿಯುವ ಸಾಧನ.

೯. ದಂಡ : ಕೋಲು (ಚಾಣಕ್ಯನು ಇದನ್ನು ಹಿಡಿದಿದ್ದನು).

೧೦. ಚಕ್ರ : ಉರುಟಾದ ಆಯುಧ.

೧೧. ಪಾಶ[48] : ಹಗ್ಗ

೧೨. ನಿಷಂಗ : ಬತ್ತಳಿಕೆ.

೧೩. ಫಿರಂಗಿ[49] : ತುಪಾಕ, ಮದ್ದುಗುಂಡು, ಶತಘ್ನಿ.

<u>ಸಂರಕ್ಷಕ ಸಾಧನಗಳು:</u> ಯುದ್ಧದಲ್ಲಿ ಸೈನಿಕರು ತಮ್ಮನ್ನು ಹಾಗೂ ತಾವು ಹೊಂದಿರುವ ಆನೆ, ಕುದುರೆಗಳನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ನಾನಾ ರೀತಿಯ ಸಂರಕ್ಷಕ ಸಾಧನಗಳನ್ನು ಉಪಯೋಗಿಸುತ್ತಿದ್ದರು. ಇಲ್ಲಿ ಹೇಳಲಾದ ಸಂರಕ್ಷಕ ಸಾಧನಗಳು ಇಂತಿವೆ:

೧೪. ಕವಚ : ಮುಖ್ಯವಾಗಿ ತಲೆ, ಬಾಹುಗಳು ಮತ್ತು ದೇಹ ಇವುಗಳನ್ನು ರಕ್ಷಿಸಿಕೊಳ್ಳುವ ಸಾಧನ.

೧೫. ಖೇಡಯ[50] : ಇದನ್ನು ಖೇಟಕ, ಗುರಾಣಿ, ಫಲಕಗಳೆಂದೂ ಕರೆಯುವರು. ಸೈನಿಕರು ಯುದ್ಧದಲ್ಲಿ ಇದನ್ನು ಮುಂದೆ ಹಿಡಿದಾಗ ಕೊರಳಿನಿಂದ ಸೊಂಟದ ವರೆಗೆ ಸಂರಕ್ಷಣೆಯಾಗುತ್ತಿತ್ತು. ಖೇಡಯವನ್ನು ಎಡಗೈಯಲ್ಲಿ ಹಿಡಿದು ಸಂರಕ್ಷಿಸಿಕೊಳ್ಳುತ್ತ, ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಹೋರಾಡುವುದು ಸಾಮಾನ್ಯ ಪದ್ಧತಿಯಾಗಿತ್ತು.

ಕನ್ನಡದ ಕೆಲವು ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ 'ಬತ್ತೀಸಾಯುಧ' (ಮೂವತ್ತೆರಡು ಆಯುಧಗಳು) ಗಳ ಹೆಸರು, ಉಲ್ಲೇಖ ಕಂಡುಬರುತ್ತದೆ[51]. ಆದರೆ ಇಲ್ಲಿ ಅಷ್ಟು ಆಯುಧಗಳನ್ನು ಹೆಸರಿಸಿಲ್ಲ. ಹಾಗಾಗಿ ಕವಿ ತನ್ನ ಕಾಲದಲ್ಲಿ ಪ್ರಚಾರದಲ್ಲಿದ್ದ ಆಯುಧಗಳನ್ನಷ್ಟೇ ಉಪಯೋಗಿಸಿದಂತೆ ಚಿತ್ರಿಸಿದ್ದಾನೆಂದು ಹೇಳಬಹುದು.

<u>ಕೋಟೆ ಹತ್ತುವ ಸಾಧನ :</u> ಬೆಟಗೇರಿ ಕೃಷ್ಣ ಶರ್ಮರು 'ಕನ್ನಡಿಗರ ಕೋಟೆ ಕಾಳಗ'[52] ಲೇಖನದಲ್ಲಿ — 'ಕೋಟೆಕಾಳಗದ ವಿಚಾರದಲ್ಲಿ ನಮ್ಮಲ್ಲಿ ಬಹುಜನರಿಗೆ ಗೊತ್ತಿರುವ ಸಂಗತಿಯೆಂದರೆ ಉಡುವಿನ ಸಹಾಯದಿಂದ ಕೋಟೆಯ ಮೇಲೆ ಹತ್ತಿ ಹೋಗುವುದು. ಪರಂಪರೆ ಗೊತ್ತಿಲ್ಲದೆ ಬರೆದ ಕೆಲವು ಮರಾಠಿ ಕಾದಂಬರಿಗಳ ಮೂಲಕ, ಈ ಮಾತು ಬಂದು ನಮ್ಮ ಸಾಹಿತ್ಯದಲ್ಲಿಯೂ ನುಸುಳಿಕೊಂಡಿದೆ. ಕೋಟೆಯೊಳಗಿನವರು ಅಜಾಗರೂಕರಾಗಿರುವಾಗ ಕಳ್ಳತನದಿಂದ ಒಬ್ಬಿಬ್ಬರು ಮಾತ್ರ ಹತ್ತಿ ಹೋಗಲಿಕ್ಕೆ ಸಾಧನವಾಗಬಹುದಾದ ಉಡುವೇ ಕೋಟೆಕಾಳಗದ ಮುಖ್ಯ ಉಪಕರಣವಾಗಿ ನಮ್ಮ ಹಲವು ಜನ ಸಾಹಿತ್ಯಕರ ಮನದಲ್ಲಿ ಮನೆ ಮಾಡಿದೆ...' ಎಂದಿದ್ದಾರೆ.

ಆದರೆ 'ಮುದ್ರಾಮಂಜೂಷ' ದಲ್ಲಿ ಚಾರರು ಬಂದು ನಂದರಿಗೆ ಹೇಳುವ — 'ಬುದ್ಧೀ, ಈ ದಿನ ಸೂರ್ಯೋದಯದ ಸಮಯದಲ್ಲಿ ಶತ್ರುಗಳ ಚೀನ ಸೇನೆಯು ನಮ್ಮ ನಂದರಗಢವನ್ನಾಕ್ರಮಿಸ ಬೇಕೆಂದು ನಾಲ್ಕು ದಿಕ್ಕಿನಲ್ಲಿಯೂ ಚೋರ ಮಾರ್ಗವನ್ನು ಹುಡುಕುತ್ತಾ, ಅಲ್ಲಲ್ಲಿ ಗುಹೆಗಳಲ್ಲಿ ಉಡುಗಳಿಗೆ ಹಗ್ಗವಂ ಕಟ್ಟಿ ಮೇಲಕ್ಕೇರುತ್ತ, ನೂಲೇಣಿಗಳಂ ಜೋಡಿಸಿ, ಮೇಲಣ ಮಾರ್ಗವನ್ನು

ಹಿಡಿಯುತ್ತ, ದುರ್ಗವನ್ನು ಮುತ್ತುತ್ತ ಬರುತ್ತಿದ್ದರು' ಎಂಬ ಈ ಮಾತಿನಿಂದ ಊಹೆಗಳನ್ನು ಕಟ್ಟಿಕೊಳ್ಳಬಹುದು. ಕೋಟೆಯನ್ನೇರುವ ಉಪಾಯ ಕನ್ನಡ ನಾಡಿನಲ್ಲಿ ಮೊದಲಿನಿಂದಲೂ ಇತ್ತು. ಮರಾಠಿ ಕಾದಂಬರಿಗಳ ಮೂಲಕ ಈ ಹೇಳಿಕೆ ಬಂದದ್ದಲ್ಲವೆಂಬ ವಿಚಾರವು ತಿಳಿದುಬರುವುದು.

ದಂಡಯಾತ್ರೆಯಲ್ಲಿ ಪಾಳೆಯ (ಶಿಬಿರ)

ಸಮರದಲ್ಲಿ ಮುಖ್ಯವಾಗಿ ಎರಡು ರೀತಿಯ ವ್ಯವಸ್ಥೆಗಳನ್ನು ಗುರುತಿಸಬಹುದು. ಬೇರೆ ಒಂದು ದೇಶದ ಮೇಲೆ ದಂಡೆತ್ತಿ ಹೋಗಬೇಕಾದಾಗ ಮಾಡಿಕೊಳ್ಳುವ ವ್ಯವಸ್ಥೆ ಹಾಗೂ ಬೇರೆ ದೇಶದ ರಾಜನೊಬ್ಬ ತನ್ನ ರಾಜ್ಯದ ಮೇಲೆ ಮುತ್ತಿಗೆ ಹಾಕಲು ಬರುತ್ತಿದ್ದಾನೆಂಬ ಸುದ್ದಿ ತಿಳಿದಾಗ ಮಾಡಿಕೊಳ್ಳಬೇಕಾದ ವ್ಯವಸ್ಥೆ. ಇವು ಇಲ್ಲಿ ಕ್ರಮವಾಗಿ ಪರ್ವತರಾಜ ಹಾಗೂ ರಾಕ್ಷಸನು ಮಾಡಿಕೊಳ್ಳುವ ವ್ಯವಸ್ಥೆಯಿಂದ ತಿಳಿದುಬರುವುದು.

ದಂಡಯಾತ್ರೆಯಲ್ಲಿ, ಸೇನೆ ಬೀಡುಬಿಟ್ಟಾಗ ಪಾಳೆಯವನ್ನು ರಕ್ಷಿಸಲು ' ತಳಿ ಮುಳುವೇಲಿ' ಗಳನ್ನು ಹೊಂದುತ್ತಿದ್ದರೆಂದು ಹೇಳುವ ಬೆಟಗೇರಿಯವರು ಅವುಗಳ ವಿವರಣೆಯನ್ನು ಹೀಗೆ ಕೊಡುತ್ತಾರೆ:-

" ಕೋಟೆಯ ಮುತ್ತಿಗೆಗೆಂದು ಬಂದವರು ... ತಮಗೆ ಶತ್ರುಗಳಿಂದ ತೊಂದರೆಯುಂಟಾಗದಂತೆ ತಮ್ಮ ಪಾಳೆಯದ ಸುತ್ತಲೂ ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ನಿಲ್ಲಿಸಿ ಅವುಗಳಿಗೆ ಮುಳುವೇಲಿಗಳನ್ನು ಬಿಗಿಯುತ್ತಿದ್ದರು. ಈ ಮುಳುವೇಲಿಗಳು ಕಾಲಾನುಸಾರವಾಗಿ ಕಬ್ಬಿಣದ ಮುಳ್ಳಿನ ತಂತಿಯಿಂದ ಮಾಡಿದವೂ ಆಗಿರಬಹುದು - [53].

ವಿಜಯನಗರದ ಅರಸರ ಕಾಲದಲ್ಲಿ ಊರಿನ ಹೊರ ವಲಯದಲ್ಲಿ ರಾಜನ ದಂಡು ಬೀಡು ಬಿಟ್ಟಿರುವಾಗ, ಪಾಳೆಯವನ್ನು ಹಾಗೂ ರಾಜನ ಡೇರೆಯನ್ನು ಯಾವ ರೀತಿ ರಕ್ಷಿಸುತ್ತಿದ್ದರೆಂದು ನ್ಯೂನಿಜನು ಹೇಳಿದ್ದಾನೆ: " ದಂಡು ಬೀಡುಬಿಟ್ಟ ರಾಜನ ಡೇರೆಯ ಸುತ್ತ ಮುಳ್ಳಿನ ದೊಡ್ಡ ಬೇಲಿ ಹಾಕಿ ಒಂದು ಕಡೆ ಮಾತ್ರ ಬಾಗಿಲು ಬಿಟ್ಟಿದ್ದರು. ಬಾಗಿಲನ್ನು ಮತ್ತು ಸುತ್ತಮುತ್ತಣ ಪ್ರದೇಶವನ್ನೂ ರಕ್ಷಣಾ ಪಡೆಯವರು ಶಿಸ್ತಿನಿಂದ ಕಾಯುತ್ತಿದ್ದರು - [54].

ವಿದೇಶೀ ಪ್ರವಾಸಿ ಹೇಳುವ ಈ ಹೇಳಿಕೆಗೆ ಕುಮಾರವ್ಯಾಸನ ಕಾವ್ಯದಲ್ಲಿ ಸಮರ್ಥನೆ ಸಿಗುತ್ತದೆ. ಭೀಷ್ಮಪರ್ವದಲ್ಲಿ ಕವಿ ಕುರುಬಲದ ಪಾಳೆಯವನ್ನು ವರ್ಣಿಸುತ್ತ — " ಗುಡಿಗಳನು ಬಲಿಸಿದರು ಲೋಹದ ತಳಿಕೆಗಳನಳವಡಿಸಿ ಬೀಡಿನ ನಡುವೆ ರಚಿಸಿದರವನೀ ಪಾಲನ ಮಂದಿರವ - [55] ಎಂದು ಹೇಳುತ್ತಾನೆ.

ಆದರೆ ಇದಕ್ಕಿಂತ ಸ್ಪಷ್ಟವಾದ, ಕಣ್ಣಿಗೆ ಕಟ್ಟುವಂತಹ ಪಾಳೆಯದ ಚಿತ್ರವನ್ನು ' ಮುದ್ರಾ ಮಂಜೂಷ' ದಲ್ಲಿ ಕೊಟ್ಟಿದೆ.

ನಂದರನ್ನು ನಿರ್ಮೂಲಿಸಿ ಚಂದ್ರಗುಪ್ತನನ್ನು ನಂದ ರಾಜ್ಯದ ಉತ್ತರಾಧಿಕಾರಿಯನ್ನಾಗಿ ಮಾಡಿದರೆ ತನಗೆ ಅರ್ಧ ರಾಜ್ಯ ಸಿಗುವುದೆಂಬ ಆಸೆಯಿಂದ ಪರ್ವತರಾಜನು ತನ್ನ ಸೇನಾ ಸಮೇತನಾಗಿ ಬಂದು ಅಘನಾಶಿನೀ ನದಿಯ ತೀರದಲ್ಲಿರುವ ಮಹಾವನ ಪಂಕ್ತಿಯಲ್ಲಿಳಿದು ಗುಡಾರವನ್ನು ಹಾಕಿಸುತ್ತಾನೆ. ಹಿಮಾಚಲ ಶಿಖರದಂತೆ ಉನ್ನತವಾಗಿರುವ ಕನಕ ಕಲಶ ಸಹಸ್ರ ಶೋಭಿತಗಳಾದ ಪಟಗೃಹಗಳಲ್ಲಿ ಅರಸುಗಳೆಲ್ಲರೂ ಇಳಿದು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದರು.

ಪರ್ವತರಾಜನ ಸೇನೆಯು ಉತ್ತರ ದಿಕ್ಕಿನಿಂದ ಆಕ್ರಮಿಸಿ ಬರುವುದೆಂದು ಕೇಳಿ ತಿಳಿದ ನಂದರು ತಮ್ಮ ನಗರದ ವಾಯುವ್ಯ ದಿಕ್ಕಿನಲ್ಲಿ ಗಂಗಾ ಸರಯೂ ಸಂಗಮದ ಉತ್ತರ ಭಾಗದಲ್ಲಿ ತಿಟ್ಟಾಗಿ ಇರುವ ಸ್ಥಳವನ್ನು ನೋಡಿ ಅಲ್ಲಿ ರಾಜಭವನದಂತೆ ರಾಜಯೋಗ್ಯವಾದ ಗುಡಾರವನ್ನು ಹಾಕಿಸಿದ್ದರು. ಅದು ಅತ್ಯುನ್ನತವಾದ ಮುಕ್ತಾಮಯವಾದ ಮೇಲು ಕಟ್ಟುಗಳಿಂದ ಹೊಳೆಯುತ್ತಿತ್ತು. ಅದರಲ್ಲಿ ನಂದರು ಪುಷ್ಪಮಾಲಂಕಾರಗಳಿಂದ ಮನೋಹರವಾದ ಮೃದುಶಯನದಲ್ಲಿ ಕುಳಿತು ಆಪ್ತ ಮಿತ್ರರಾದ ರಾಜಕುಮಾರರಿಂದ ಕೂಡಿ ರಾಜಭೋಗಗಳನ್ನು ಪರಿಗ್ರಹಿಸುತ್ತಿದ್ದರು. ಹಾಗೆಯೇ ನಂದರ ಸಂಗಡ ಬಂದ ಸೇನಾ ಜನರು ತಮ್ಮ ತಮ್ಮ ಗುಡಾರಗಳಲ್ಲಿ ವಿಶ್ರಮಿಸಿಕೊಂಡು ತಮ್ಮ ತಮ್ಮ ಅಧಿಕಾರಗಳನ್ನು ನೋಡುತ್ತಿದ್ದರು.


ಇಂತಹ ಗುಡಾರದ ಸುತ್ತಲೂ ತೀಕ್ಷ್ಣಗಳಾದ ಶೂಲಗಳನ್ನು ನೆಡಿಸಿ ಅವರ ಸುತ್ತಲೂ ಭಲ್ಲೆಯದವರನ್ನು ನಿಲ್ಲಿಸಿದ್ದರು. ಅದರ ಹೊರಗೆ ಖಡ್ಗಪಾಣಿಗಳಾದ ತುರಗಾರೂಢರನ್ನು ನೆರೆಗೊಳಿಸಿದ್ದರು. ಅದರ ಹೊರ ವಲಯದಲ್ಲಿ ಫಿರಂಗಿಗಳನ್ನು ಜೋಡಿಸಿ ಜಾವಿಗೆಯವರನ್ನು ಸಂಸ್ಥಾನಿಸಿ ಅದರ ಸುತ್ತಲೂ ಮಹಾ ಗಂಭೀರವಾದ ಅಗಳನ್ನು ತೋಡಿಸಿ ಅದಕ್ಕೆ ನದೀ ಜಲವು ಬರುವಂತೆ ಮಾಡಿ ಸಿದ್ಧಪಡಿಸುತ್ತಿದ್ದರು (ಚಿತ್ರನೋಡಿ).

ಇದು ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಹಾಕುತ್ತಿದ್ದ ಗುಡಾರದ ಚಿತ್ರವಾಗಿದ್ದಿರಬೇಕು. ಕವಿ ತಾನು ಕಣ್ಣಾರೆ ಕಂಡದ್ದನ್ನು ಇಲ್ಲಿ ಸ್ಪಷ್ಟವಾಗಿ ವಿವರಿಸಿದಂತೆ ಕಾಣುತ್ತದೆ [56].

ಯುದ್ಧ ಆರಂಭವಾಗಲು ಕಾರಣವಾಗಬಹುದಾದ ಸನ್ನಿವೇಶಗಳ ಪಟ್ಟಿಯನ್ನೇ ಇಲ್ಲಿ ಕೊಟ್ಟಿದೆ:

1. ಅನ್ಯಾಯಗಳಲ್ಲಿ ಪಕ್ಷಪಾತವುಂಟಾಗುವುದು.
2. ಮರ್ಮಜ್ಞರನ್ನು ಕೆಣಕಿ ಭಯ ವಿಶ್ವಾಸಗಳನ್ನು ತಪ್ಪಿಸಿಕೊಳ್ಳುವುದು.
3. ಪ್ರಜಾ ಯೋಗಕ್ಷೇಮವನ್ನು ವಿಚಾರಿಸದ ಕಾರಣ ತುಂಟ ಜನಗಳಿಂದ ರಾಜ್ಯತಂತ್ರ ಕೆಡುವುದು.
4. ಸ್ವಾಮಿಭೃತ್ಯರಿಗೆ ಮನಸ್ತಾಪ ಬರುವುದು.
5. ಮಂತ್ರಿಗಳು ಸ್ವಾಮಿಭಕ್ತಿಯನ್ನು ಬಿಡುವುದು.
6. ಮಂತ್ರಿಯ ರಹಸ್ಯವು ದುಷ್ಟ ಸ್ತ್ರೀಯರಿಗೆ ತಿಳಿಯುವುದು.
7. ಸಚಿವರಿಲ್ಲದ ಬಾಲಕನಿಗೆ ಪ್ರಭು ಪದವು ದೊರಕುವುದು.
8. ವೇತನಗಳು ನೌಕರರಿಗೆ ಕಾಲಕಾಲಗಳಿಗೆ ಸರಿಯಾಗಿ ಸಿಗದೆ ಇರುವುದು.

ಸೇನಾ ಶಿಬಿರ



1. ಗುಡಾರ 2. ಶೂಲಗಳು 3. ಭಲ್ಲೆಯವರು

4. ಖಡ್ಗಪಾಣಿಯಾದ ತುರಗಾರೂಢರು 5. ಫಿರಂಗಿಗಳು

6. ಜಾಬಿಗೆಯವರು 7. ಅಗಳು (ನೀರು).

9. ದೇಶಾಂತರದ ಜನರಿಗೆ ಹೆಚ್ಚಿನ ಸ್ವಾತಂತ್ರ್ಯ ಸಿಗುವುದು.

10. ಚೋರರನ್ನು ನಿಗ್ರಹಿಸದೆ ಉಪೇಕ್ಷಿಸುವುದು.

11 ಪರಭೃತ್ಯರಾದ ಗೂಢಮಂತ್ರಿಗಳು ಈ ಪ್ರಭು ಪರಂಪರೆಯಲ್ಲಿ ಉಂಟಾಗುವುದು.

12. ಗೂಢದನ್ಯಗಳಾದ ಕರಣಿಕರ ಲೆಕ್ಕದ ನಿಪುಣತ್ವಕ್ಕೆ ಅನ್ಯದ ಕೊಡುವುದು.

13. ಸ್ವಜನವು ಶತ್ರುಗಳನ್ನಾಶ್ರಯಿಸುವುದು.

14. ಕೋಶಗಳಲ್ಲಿ ಆಕಾಶವೇ ಉಳಿಯುವುದು ... ಮೊದಲಾದವು.

<u>ಯುದ್ಧ ಮುನ್ಸೂಚನೆ:</u> ಒಂದು ದೇಶದ ರಾಜನು ಮತ್ತೊಂದು ದೇಶದ ಮೇಲೆ ದಂಡೆತ್ತಿ ಹೋಗ ಬೇಕೆಂದು ನಿಶ್ಚಯಿಸಿದಾಗ ಆ ದೇಶಾಭಿಮುಖವಾಗಿ ದಂಡಯಾತ್ರಾ ಸೂಚಕವಾದ ಸೇನಾಧ್ವಜವನ್ನು ಪ್ರತಿಷ್ಠಿಸಿ ಬಹುಸೇನೆಯಿಂದ ರಕ್ಷಿಸುತ್ತಿದ್ದನು. ಪುಂಡು ಪಾಳೆಯಗಾರರು ಪರದೇಶದ ಎಲ್ಲೆಕಟ್ಟಿನ ಗ್ರಾಮಗಳನ್ನು ಮುಂಚಿತವಾಗಿಯೇ ಸೂರೆಗೊಳ್ಳುವುದಕ್ಕೆ ಯತ್ನಿಸುತ್ತಿದ್ದರು.

ಅದೇ ಯುದ್ಧ ಭೀತಿಗೆ ಒಳಗಾದ ರಾಜನ ಸೈನ್ಯದ ಬೇಹುಗಾರರು ಶತ್ರುಗಳ ಗೂಢಚಾರರನ್ನು ಬಣ್ಣ, ವೇಷ, ಭಾಷಾ ವ್ಯತ್ಯಾಸಗಳಿಂದ ಗುರುತಿಸಿ ಹಿಡಿದು ಬಂಧಿಸಿ ರಾಜನಿಗೆ ಒಪ್ಪಿಸುತ್ತಿದ್ದರು. ಆ ದೇಶದ ಗಡಿ ನಾಡಿನ ಪ್ರಜೆಗಳು ಪರದೇಶದ ಚಿಲ್ಲೆಚೊಲ್ಲೆಪ ದ್ರವದಿಂದ ವಲಸೆ ಹೋಗುತ್ತಿದ್ದರು. ದೇಶದ ತಲೆಕಟ್ಟಿನಲ್ಲಿ ದುರ್ಗಮವಾದ ದುರ್ಗಗಳನ್ನು ಶತ್ರುಗಳು ವಶಪಡಿಸಿಕೊಳ್ಳುತ್ತಿದ್ದರು. ಶತ್ರುಗಳು ಮಣಿನ ರತ್ನಗಳಿಗೂ ವಸ್ತ್ರಗಳಿಗೂ ಬಣ್ಣಹಾಕುವ ಬಣ್ಣಗಾರರ ಮಾಲಕ ಮೃಷಾ ವರ್ತಮಾನವನ್ನು ಕಲ್ಪಿಸುತ್ತಿದ್ದರು. ಗಡಿನಾಡಿನಲ್ಲಿನ ಗೋವುಗಳನ್ನು ಅಪಹರಿಸುತ್ತಿದ್ದರು. ಸುಂದರಿಯರಾದ ಸ್ತ್ರೀಯರನ್ನು ಕದ್ದುಕೊಂಡು ಹೋಗುತ್ತಿದ್ದರು.

<u>ಯುದ್ಧ ಆರಂಭಿಸುವ ಮುನ್ನ:</u> ರಾಜರು ದೂರದ ದೇಶಗಳಲ್ಲಿರುವ ತಮ್ಮ ಸೇನೆಗಳನ್ನು ತ್ವರಿತದಿಂದ ಬರುವಂತೆ ಪತ್ರ ಬರೆಯಿಸಿ ಕರೆಯಿಸಿಕೊಳ್ಳುತ್ತಿದ್ದರು. ಆಗಮಿಸಲಿರುವ ಶತ್ರುಗಳ ರಾಜಧಾನಿಯ ಮೇಲೆ ತಮ್ಮ ಮಿತ್ರ ಪಕ್ಷದವರು ದಂಡೆತ್ತಿ ಹೋಗುವಂತೆ 'ಏರ್ಪಾಡು ಮಾಡುತ್ತಿದ್ದರು. ಶತ್ರು ಪಕ್ಷದವರು ಇಲ್ಲಿಗೆ ಬಾರದಂತೆ ಮಿತ್ರಪಕ್ಷದವರಿಗೆ — ಶತ್ರುಗಳ ರಾಜಧಾನಿಯನ್ನು ವಶಪಡಿಸಿಕೊಂಡರೆ ಆ ದೇಶ ಕೋಶಗಳೆಲ್ಲ ನಿಮಗೇ ಕೊಡಲ್ಪಡುವುದು — ಎಂದು ಆಮಿಷ ತೋರಿಸಲಾಗುವುದು. ರಾಯಸವನ್ನು ಕೊಂಡುಹೋಗುವ ಚಾಕರರಿಗೆ ಒಂದು ವರ್ಷದ ಸಂಬಳವನ್ನು ಉಚಿತವಾಗಿ ಕೊಟ್ಟು ಪ್ರೋತ್ಸಾಹಿಸಲಾಗುವುದು. ಪ್ರಧಾನಾಮಾತ್ಯನನ್ನು ಅನರ್ಘ್ಯ ವಸ್ತ್ರಭೂಷಣ ಗಂಧಮಾಲ್ಯ ಕರ್ಪೂರ ಸಹಿತ ಅಲಂಕರಿಸಿ ಆತನಿಗೆ ವೀಳೆಯವನ್ನು ಕೊಡಲಾಗುವುದು. ಅರಸರಿಗೆ ಗ್ರಹಬಲವೆಂತಿರುವದೋ ಎಂದು ಜ್ಯೋತಿಷ್ಯರನ್ನು ಕೇಳಿಕೊಳ್ಳುವುದು ... ಇತ್ಯಾದಿಮುಂಜಾಗ್ರತಾ ಕ್ರಮಗಳನ್ನು ಅನುಸರಿಸುತ್ತಿದ್ದರು.

<u>ಯುದ್ಧ ಆರಂಭವಾದ ಮೇಲೆ:</u> ಹಳಬರಾಗಿದ್ದ ಜನರನ್ನು ಮೇಲ್ವಿಚಾರಕರಾಗಿ ನೇಮಿಸಿಕೊಂಡು,

ಹೆಚ್ಚಾದ ಸಂಬಳದಿಂದ ಸೈನಿಕರಿಗೆ ಉತ್ಸಾಹ ಹೆಚ್ಚುವಂತೆ ಮಾಡುತ್ತ, ಕಾವಲವರಿಗೆ ಇದ್ದ ಕಡೆಯಲ್ಲೇ ಅನ್ನೋದಕಗಳನ್ನು ಒದಗಿಸಿಕೊಡುತ್ತ — ತಮ್ಮ ಪುರವನ್ನು ರಕ್ಷಿಸಿಕೊಳ್ಳುವುದು. ಶತ್ರುಗಳು ಬರುವ ಮಾರ್ಗಕ್ಕೆ ಇದಿರಾಗಿ ಹೋಗಿ, ಅವರಿಗೆ ನೀರು ದೊರಕದಂತೆ ಮಾರ್ಗದಲ್ಲಿದ್ದ ಉದಕಗಳನ್ನು ಕೆಡಿಸುತ್ತ ಅಶಕ್ಯವಾದ ಮಡುವುಗಳಲ್ಲಿ ವಿಷಗಳನ್ನು ಕದಡುವುದು. ತೃಣಕಾಷ್ಠಗಳಿಗೆ ಬೆಂಕಿಕೊಟ್ಟು ನೆಳಲು ದೊರೆಯದಂತೆ ಮಾಡುವುದು. ಆ ಪ್ರದೇಶದ ಜನಗಳಿಗೆ ಕಂದಾಯವನ್ನು ಬಿಡಿಸಿ ದಂಡಿನ ಮಾರ್ಗವನ್ನು ತಪ್ಪಿಸಿ ಹೊರಚ್ಚಾದ ಕೋಟೆ ದುರ್ಗಗಳಿಗೆ ಕಳುಹಿಸುವುದು. ಶತ್ರುಗಳ ಸೈನ್ಯಕ್ಕೆ ಬರುವ ಧನಧಾನ್ಯಗಳನ್ನು ಸೂರೆ ಮಾಡುವುದು. ರಾತ್ರಿ ಕಾಲದಲ್ಲಿ ಸಮಯ ದೊರಕಿದರೆ ಹೊಕ್ಕು ಪರರಾಜರ ಸೈನ್ಯವನ್ನು ಭೇದಿಸುವುದು. ಶತ್ರುಗಳ ವೈದ್ಯ, ಅಡಿಗೆಯವ, ಪರಿಚಾರಕ, ಮಡಿವಾಳ ಮೊದಲಾದವರ ಮುಖದಿಂದ ಔಷಧಾನ್ನಗಳಲ್ಲಿ ವಿಷಚೂರ್ಣ ಪ್ರಯೋಗವನ್ನು ಮಾಡಿಸುವುದು. ಮದ್ಯ, ಭಂಗಿ, ಹೊಗೆಸೊಪ್ಪು, ಷಾರಾಮ್ಲ, ಯಳ್ಳು, ಬೆಲ್ಲ, ತುಪ್ಪಗಳಲ್ಲಿ ಪಕ್ವವಾದ ವಿಷಚೂರ್ಣಗಳನ್ನು ಬೆರೆಸುವುದು. ಶತ್ರುಸೇನೆಯಲ್ಲಿ ರಾತ್ರಿ ವೇಳೆಯಲ್ಲಿ ಇಂತಹ ಅಂಗಡಿಗಳನ್ನಿಟ್ಟು ಅಗ್ಗವಾಗಿ ಮಾರಿ ಅರುಣೋದಯದ ಸಮಯದಲ್ಲಿ ಕಾಣಿಸಿಕೊಳ್ಳದಂತೆ ಕಪಟ ವರ್ತಕರನ್ನು ನೇಮಿಸುವುದು. ಗಾಳಿಗಿದಿರಾಗಿ ಬೆಂಕಿಗೆ ವಿಷಚೂರ್ಣವನ್ನು ಎರೆಚಿ ಆ ಧೂಮಸ್ಪರ್ಶದಿಂದ ಶತ್ರುಜನಗಳಿಗೆ ಕ್ಷುದ್ರರೋಗಗಳುಂಟಾಗುವಂತೆ ಮಾಡುವುದು. ಮಾರ್ಗದ ಇಕ್ಕಟ್ಟಾದ ಕಣಿವೆಗಳಲ್ಲಿ ನೆಲಸುರಂಗಗಳನ್ನು ಮಾಡಿಸಿ ಮದ್ದುಗಳನ್ನು ಹೂಳಿಸಿ ಅಲ್ಲಿಗೆ ಶತ್ರುಗಳು ಬಂದು ತಲುಪಿದಾಗ ಸುರಂಗಕ್ಕೆ ಬೆಂಕಿ ಕೊಟ್ಟು ಶತ್ರುಗಳನ್ನು ಸಂಹರಿಸುವುದು. ಗೂಢಚಾರರಿಂದ ಶತ್ರುಗಳ ಉತ್ಸಾಹ, ಉಪೇಕ್ಷೆ, ಕೋಪ, ಸ್ವಜನಪ್ರೀತಿ, ಮತ್ತತೆ ಮೊದಲಾದವುಗಳನ್ನು ತಿಳಿಯುತ್ತ ಅದಕ್ಕೆ ಪ್ರತೀಕಾರದ ಯತ್ನವನ್ನು ಮಾಡುವುದು. ಯುದ್ಧ ಭೂಮಿಯ ಹಳ್ಳ ತಿಟ್ಟುಗಳನ್ನರಿತು ವ್ಯೂಹವನ್ನು ರಚಿಸುತ್ತ ಶತ್ರು ಸೇನೆ ಸ್ವಲ್ಪವಾಗಿದ್ದರೆ ಹೆಚ್ಚಾಗಿ ಕಾಣಿಸುತ್ತ, ಹೆಚ್ಚಾಗಿದ್ದರೆ ಸ್ವಲ್ಪವಾಗಿ ತೋರಿ ಅಧಿಕವನ್ನು ನಿಗ್ರಹಿಸುತ್ತ ಸಮಯೋಚಿತವಾಗಿ ವರ್ತಿಸುವುದು. ತಮ್ಮ ಕಡೆಯವರು, ಸುಳ್ಳು ನೆವ ಹೇಳಿ ಹೇಡಿಗಳಾಗಿ ಯುದ್ಧಕ್ಕೆ ಹೋಗದೇ ನಿಂತವರನ್ನು ಯಥೋಕ್ತವಾಗಿ ಶಿಕ್ಷಿಸಲಾಗುವುದೆಂದು ಪುರದ ಬೀದಿಗಳಲ್ಲಿ ಡಂಗುರವ ಹಾಕಿ ಸಾರಿಸುವುದು. ಯುದ್ಧ ಮಾಡದಿದ್ದುದು ಕಂಡುಬಂದಲ್ಲಿ ಬಾಯ ತಂಬುಲವನ್ನು ಅವರ ಮುಖದ ಮೇಲೆ ಉಗುಳುವಂತೆ ಭಲ್ಲರ ಫೌಜನ್ನು ನೇಮಿಸುವುದು. ಫಿರಂಗಿ ಬಾಯಿಗೆ ಅಂತಹವರನ್ನು ಕಟ್ಟಿ ಕೊಲ್ಲಿಸುವುದು.

<u>ಯುದ್ಧ ಆಗುತ್ತಿರುವಾಗ:</u> ಶತ್ರುಗಳ ಆಯುಧವನ್ನು ತಂದವನಿಗೆ ನಾಲ್ಕಾರು ಮೊಹರುಗಳನ್ನು, ಶಿರಸ್ಸನ್ನು ತಂದವರಿಗೆ ನೂರಾರು ಮೊಹರುಗಳನ್ನು, ಗಜಾರೂಢರನ್ನು ಸಂಹರಿಸಿದವರಿಗೆ ಸಾವಿರಾರು ಮೊಹರುಗಳನ್ನು, ಸೇನಾಪತಿಗಳ ಶಿರಸ್ಸನ್ನು ತಂದವರಿಗೆ ಲಕ್ಷೋಪಲಕ್ಷ ಮೊಹರುಗಳನ್ನು ಬಹುಮಾನವಾಗಿ ಕೊಡುತ್ತಿದ್ದರು.

<u>ವಿಜಯೋತ್ಸವ ಆಚರಣೆ:</u> ಶತ್ರುವಿನ ಸಂಹಾರವಾದಾಗ ವೀರಭಟರ ಸಿಂಹನಾದಗಳೂ ಜಯಭೇರಿ ಶಬ್ದಗಳೂ ಫಿರಂಗಿ ಧ್ವನಿಗಳೂ ಸಮುದ್ರಘೋಷದಂತೆ ಭೂಮಂಡಲವನ್ನು ಮುಚ್ಚುತ್ತಿತ್ತು. ಆಗ ಸೇನಾ ಜನರು ಒಬ್ಬರನ್ನೊಬ್ಬರು ಆಲಿಂಗಿಸುತ್ತ, ಬಾಹುಗಳನ್ನು ತಟ್ಟುತ್ತ, 'ನೀನು ಶೂರ, ನೀನು ಶೂರ' ನೆಂದು ಸ್ತುತಿಸುತ್ತ, ನಾಟ್ಯಗಳನ್ನವಲೋಕಿಸುತ್ತ, ಸಕ್ಕರೆಗಳನ್ನು ಬೀರಿಸುತ್ತ, ಗಂಧಮಾಲಿಕೆಗಳಿಂದಲಂಕರಿಸುತ್ತ, ವಿವಿಧ ಪಾನಗಳನ್ನು ಸೇವಿಸುತ್ತ [57] ಸಂತೋಷದಲ್ಲಿರುತ್ತಿದ್ದರು. ಕವಿಯು ಕಣ್ಣಾರೆ ಕಂಡಿದ್ದಿರಬಹುದಾದ ಇಂತಹ ವಿಜಯೋತ್ಸವ ಆಚರಣೆಯನ್ನು ಚಂದ್ರಗುಪ್ತನ ಕಡೆಯವರು ಆಚರಿಸಿದರು ಎಂದು ಇಲ್ಲಿ ಹೇಳಿದೆ.

ಇದನ್ನೆಲ್ಲ ಗಮನಿಸುವಾಗ ನಮಗೆ ತಿಳಿದುಬರುವ ಸಂಗತಿಯೆಂದರೆ — 'ಮುದ್ರಾಮಂಜೂಷ' ವು ಕಾವ್ಯದೃಷ್ಟಿಯಿಂದ ಚೇತೋಹಾರಿ ಕೃತಿಯಾದಂತೆ ಸಮಕಾಲೀನ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದಲೂ ಅಷ್ಟೇ ಮುಖ್ಯವಾದುದಾಗಿದೆ.

ಟಿಪ್ಪಣಿಗಳು

1. ನೋಡಿ. ಶ್ರೀಕಂಠಯ್ಯ ಕೆ. 1983. 'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ'. ಮೈಸೂರು. ಪು. 14 – 15.

2. ಉದ್ಧೃತ: ರಾಗೌ. 1992 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು. ಮೈಸೂರು ಪು.6.

3. 'ಇತಿಹಾಸ ಮರುಕಳಿಸುತ್ತದೆ' ಎಂಬ ಮಾತಿನಂತೆ ಕವಿಗೆ ತಾನು ಹೇಳಹೊರಟ ಕಥೆಗೂ ಮೈಸೂರಿನ ಅಂದಿನ ಸ್ಥಿತಿಗೂ ಹೋಲಿಕೆ ಕಾಣುತ್ತಿತ್ತು. ನಂದರ ದರ್ಪ ವೈಭವಗಳು ಟಿಪ್ಪುಸುಲ್ತಾನನ ದರ್ಪ ವೈಭವಗಳನ್ನು, ಚಂದ್ರಗುಪ್ತನ ಅಸಹಾಯಕತೆಯು ಮುಮ್ಮಡಿಯವರ ಅಸಹಾಯಕತೆಯನ್ನೂ, ರಾಕ್ಷಸನ ಸ್ವಾಮಿಭಕ್ತಿಯು ಪೂರ್ಣಯ್ಯನ ಸ್ವಾಮಿಭಕ್ತಿಯನ್ನು ನೆನಪಿಗೆ ತರುವಂತಿದೆ. ಚಂದ್ರಗುಪ್ತನಿಗೆ ಪಟ್ಟಾಭಿಷೇಕವಾಗುವಂತೆ ಮಾಡಿದ ಚಾಣಕ್ಯನ ಕೆಲಸವನ್ನು ಇಲ್ಲಿ ಹ್ಯಾರಿಸ ಎಂಬ ಬ್ರಿಟಿಷ ಅಧಿಕಾರಿಯು ಮಾಡಿದ್ದನು.

4. ಹೈದರಅಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ಇಸ್ಲಾಂ ಸಂಸ್ಕೃತಿ ಹಾಗೂ ಫಾರಸಿ ಭಾಷೆಗೆ ವಿಶೇಷ ಪ್ರಾಧಾನ್ಯತೆ ಲಭಿಸಿದ್ದರೂ ಮತ್ತೆ ಅಧಿಕಾರವು ಮೈಸೂರು ಒಡೆಯರ ವಂಶಸ್ಥರಿಗೆ ಸಿಕ್ಕಿದ್ದರಿಂದ ಭಾರತೀಯ ಸನಾತನ ಸಂಸ್ಕೃತಿಯ ಪುನರುತ್ಥಾನಕ್ಕೆ ಸಹಕಾರಿಯಾಯಿತು. ಮುಮ್ಮಡಿಯವರ ಆಸ್ಥಾನದಲ್ಲಿ ಶ್ರೀಮತಸ್ಥ ಬ್ರಾಹ್ಮಣರು, ವೀರಶೈವರು, ಜೈನರುಗಳು ವಿವಿಧ ಸ್ಥಾನಗಳನ್ನು ಅಲಂಕರಿಸಿದ್ದರು (ವಿವರಗಳಿಗೆ: ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ ೨)

5. ಈ ವಿವರಗಳೆಲ್ಲ 'ಸ್ಟ್ಯಾಂಡರ್ಡ ಡಿಕ್ಷನರಿ ಆಫ ಫೋಕಲೋರ ಅಂಡ ಲೆಜೆಂಡ 2' ಪು. 1143 – 44 ಗಳಲ್ಲಿವೆ. ಅವುಗಳನ್ನು ಕೆ. ಅನಂತರಾಮು ಅವರ ನಿರೂಪಣೆಯಿಂದ ಸಂಗ್ರಹಿಸಿದೆ. ನೋಡಿ. 'ಬ್ರಹ್ಮಶಿವ: ಒಂದು ಅಧ್ಯಯನ' 1991. ಪು 364.

6. ತನ್ನ ಗ್ರಹಗತಿ ಕ್ರೂರವಾಗಿದೆ ಎಂಬುದಾಗಿ ಜ್ಯೋತಿಷ್ಯರಿಂದ ತಿಳಿದುಕೊಂಡ ಟಿಪ್ಪುಸುಲ್ತಾನನು ಕಂಟಕದ ಪರಿಹಾರಕ್ಕಾಗಿ ಚೆನ್ನಪಟ್ಟಣದ ಖ್ಯಾತ ಪುರೋಹಿತರ ನೇತೃತ್ವದಲ್ಲಿ ಜಪ ಮಾಡಿಸಿದ್ದನು (ವಿವರಗಳಿಗೆ: ನಂಜುಂಡಸ್ವಾಮಿ ಎ.ಎಸ. 1986 'ಕರ್ನಾಟಕದ ಪಾಳೆಯಗಾರರು ಮತ್ತು ಒಡೆಯರ ಇತಿಹಾಸ' ಧಾರವಾಡ ಪು. 139 –90).

7. ನಮ್ಮ ದೇಶದಲ್ಲಿ ಹಿಂದಿನಿಂದಲೂ ದೇವಸ್ಥಾನದ ನಿರ್ಮಾಣ, ಜೀರ್ಣೋದ್ಧಾರದ ವಿಷಯದಲ್ಲಿ ಜನರು ಹೆಚ್ಚು ಹುರುಪು – ಉತ್ಸಾಹಗಳನ್ನು ತೋರಿಸುತ್ತಿದ್ದರು. ಅದರಲ್ಲಿಯೂ ಮುಖ್ಯವಾಗಿ ವರ್ತಕರು ತಮ್ಮ ಧರ್ಮವೆಂಬಂತೆ ಭಾವಿಸಿ ಆ ಕಾರ್ಯವನ್ನು ನಿರ್ವಹಿಸುತ್ತಿದ್ದರು (ಕ.ಶಾ.ಸಂ.ಅಧ್ಯಯನವು ಪು. 180).

8. ಕ.ಶಾ.ಸಾಂ. ಅಧ್ಯಯನ. ಪು 313.

9. 'ಅರ್ಥಶಾಸ್ತ್ರ' ಪು. 246, 254 – 255.

10. ಕ್ರಮಸಂಖ್ಯೆ 8, ಪು 314. 'ಕರ್ನಾಟಕದಲ್ಲಿ ಸತಿ ಪದ್ಧತಿ' ಪು. 5, 6.

10ಎ.

11. 'ಶ್ರೀಮನ್ಮಹಾರಾಜರವರ ವಂಶಾವಳಿ' ಭಾಗ ೧ ಪು 62.

12. 'ಕರ್ನಾಟಕ' (ವಿಷಯ ವಿಶ್ವಕೋಶ) ಪು 1198.

13. ವಿವರಗಳಿಗೆ: 'ಕರ್ನಾಟಕದಲ್ಲಿ ಸತಿ ಪದ್ಧತಿ' ಪು. 163 (ಅಡಿಟಿಪ್ಪಣಿ ಸಂಖ್ಯೆ 132).

14. ಮರಣದಂಡನೆಗೆ ಗುರಿಯಾದವರ ಕೊರಳಿಗೆ ಎಕ್ಕದ ಹೂವಿನ ಮಾಲೆಯನ್ನು ತೊಡಿಸುತ್ತಾರೆಂಬ ವಿಚಾರವು ಶಿಷ್ಟಸಾಹಿತ್ಯದಲ್ಲಿ ಪ್ರಕಟವಾದಂತಿಲ್ಲ. ಎಕ್ಕೆಯು ಸ್ಮಶಾನ ಪ್ರದೇಶ, ಬಂಜರುಭೂಮಿಯಲ್ಲಿ ಬೆಳೆಯುವ ಸಸ್ಯ. ಇದರ ಹೂವನ್ನು ಸಾಮಾನ್ಯವಾಗಿ ಯಾರೂ ಧರಿಸುವುದಿಲ್ಲ. ಶಿವನು ಸ್ಮಶಾನ ವಾಸಿಯಾದುದರಿಂದ ಈ ಹೂವು ಶಿವನಿಗೆ, ಶಿವಗಣಗಳಿಗೆ ಪ್ರಿಯವೆಂಬ ನಂಬಿಕೆಯಿದೆ. ಆ ಕಾರಣದಿಂದಲೇ ಮರಣದಂಡನೆಗೆ ಗುರಿಯಾದವರ ಕೊರಳಿಗೆ ಈ ಹಾರವನ್ನು ತೊಡಿಸುತ್ತಿದ್ದಿರಬಹುದು. ತುಳುನಾಡಿನ ಚೆನ್ನುಕುಣಿತದಲ್ಲಿ ಚೆನ್ನು ಎಕ್ಕದ ಹೂವಿನ ಮಾಲೆಯನ್ನು ಧರಿಸುತ್ತಾಳೆ. ಇದು 'ಬಡತನ ಮತ್ತು ಅನಾಥ ಪ್ರಜ್ಞೆಯನ್ನು ಸಂಕೇತಿಸುತ್ತದೆ' ಎಂದು ಶ್ರೀ ಪಾಲ್ತಾಡಿ ರಾಮಕೃಷ್ಣಾಚಾರ ಅವರು ಅಭಿಪ್ರಾಯಪಟ್ಟಿದ್ದಾರೆ.

15. ಟಿಪ್ಪುಸುಲ್ತಾನನ ಕಾಲದಲ್ಲಿ ಶಿರಶ್ಛೇದಕರೆಂಬ ಆಳುಗಳ ಕೈಯಲ್ಲಿ ಅಪರಾಧಿಗಳನ್ನು ಕೊಲ್ಲಿಸುತ್ತಿದ್ದರು (ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ ೨ ಪು 22).

16. – ಅದೇ – ಪು. 125.

16ಎ. – ಅದೇ – ಪು. 125–127. ಕ.ಶಾ.ಸಾಂ.ಅ. ಪು. 282.

17. ಇದು ಅಸಾಂಗತ್ಯ ದೋಷವಲ್ಲವೇ? ಎಂದು ಅನುಮಾನ ಬರಬಹುದು. ಈ ಪ್ರಶ್ನೆಗೆ ಉತ್ತರ ಡಾ: ಶಿವರುದ್ರಪ್ಪನವರ ಮಾತಿನಲ್ಲಿರುವುದರಿಂದ ಅದನ್ನಿಲ್ಲಿ ಉದ್ಧರಿಸುತ್ತಿದ್ದೇನೆ.

'ಕನ್ನಡ ಸಾಹಿತ್ಯದ ವೈಶಿಷ್ಟ್ಯವೇ ಅದರ ರಾಷ್ಟ್ರೀಯತೆಯಲ್ಲಿದೆ. ಅಂದರೆ ರಾಷ್ಟ್ರೀಯ ಮಹತ್ವವುಳ್ಳ ಅಥವಾ ಮಹತ ಪರಂಪರೆಯ ವಸ್ತುಗಳನ್ನು, ಇತರ ಎಲ್ಲಾ ಭಾಷೆಗಳವರಂತೆ ನಮ್ಮ ಕವಿಗಳು ತೆಗೆದುಕೊಂಡರೂ, ಕನ್ನಡ ಕವಿಗಳು ಪಂಪನಿಂದ ಕುವೆಂಪುವಿನ ವರೆಗೆ, ಆ ವಸ್ತುಗಳನ್ನು ಯಥಾವತ್ತಾಗಿ ಅನುಸರಿಸದೆ, ಅನುವಾದಿಸದೆ ತಮ್ಮ ಪ್ರಾದೇಶಿಕ ಸಾಂಸ್ಕೃತಿಕ ವ್ಯಕ್ತಿವಿಶಿಷ್ಟ ಪ್ರತಿಭೆಯ ಮೂಲಕ ಪುನರವ್ಯಾಖ್ಯಾನಿಸುವ ಕ್ರಮವನ್ನು ನಾವು ಗುರುತಿಸಬಹುದು ... ಹೀಗೆ ಮಹತ ಪರಂಪರೆಯ ವಸ್ತುಗಳನ್ನು ತಮ್ಮ ಉಪರಾಷ್ಟ್ರೀಯತೆಯಲ್ಲಿ ಸಂಭವಿಸುವಂತೆ ಮಾಡುವುದರಲ್ಲಿ ... ಕನ್ನಡ ಸಾಹಿತ್ಯದ ವಿಶಿಷ್ಟತೆಗಳು ಪ್ರಕಟವಾಗಿವೆ (ಉದ್ಧೃತ 'ದವನಸಿರಿ' ಪು. 20).

ಇದನ್ನು ಗಮನಿಸಿದರೆ ಪಾಟಲೀಪುರದಲ್ಲಿ ಬ್ರಾಹ್ಮಣರು ಕರ್ಣಾಟಕಾಂಧ್ರ ದ್ರಾವಿಡ ಭಾಷೆಗಳಲ್ಲಿ ಮಾತನಾಡಿದರೆಂದು ಹೇಳಿದ್ದರಿಂದ ಕವಿಯ ವಿಶಿಷ್ಟತೆಯು ದರ್ಶನವಾಯಿತೇ ಹೊರತು ದೋಷವಾಗಲಿಲ್ಲ.

17ಎ. ಸನ 1818ರಲ್ಲಿ ಮಹಾರಾಷ್ಟ್ರ ದೇಶದಲ್ಲಿ ಮಹೋನ್ನತರಾಗಿದ್ದ ಪುಣೆ ಪೇಶ್ವೆಯವರು ಬ್ರಿಟಿಷರವರಿಗೆ ಎದುರಾಳಿಗಳೆನಿಸಿ ತಮಗೆ ಒಂದು ಶತಾಬ್ದದಿಂದಲೂ ಬಂದಿದ್ದ ವೈಭವವನ್ನು ಕಳೆದುಕೊಂಡರು. ಆಗ ಅಲ್ಲಿನ ಪ್ರಮುಖರು ದೇಶಾಂತರಗತರಾಗಬೇಕಾಯಿತು (ಅದೇ ಪು 52–53).

17ಬಿ. ತಿ.ತಾ. ಶರ್ಮ 1971. 'ಚಾರಿತ್ರಿಕ ದಾಖಲೆಗಳು' ಪು. 39.

18. ನೋಡಿ 'ಕರ್ನಾಟಕ' ವಿಷಯ ವಿಶ್ವಕೋಶ ಪು. 1144 – 45.

19. ನೋಡಿ. ಅದೇ ಪು. 138–39.

20. ಅದೇ. ಪು 543–44.

21. 'ಶ್ರೀಮನ್ಮಹಾರಾಜರವರ ವಂಶಾವಳಿ' ಭಾಗ ೨ ಪು. 33–34.

22. – ಅದೇ– ಭಾಗ ೧ ಪು. 82.

23. – ಅದೇ– ಭಾಗ ೨ ಪು. 132,134.

24. 'ಕರ್ನಾಟಕ ಗ್ರಾಮಸೂಚಿ' ಪು. 197.

25. ಶಂಕರನಾರಾಯಣ ರಾವ್ ಎಚ್.ಎಂ. 'ಕೆಂಪುನಾರಾಯಣ: ಕವಿ ಮತ್ತು ಕೃತಿ' ಪು. 151.

26. ನೋಡಿ: ಬಾಲಸುಬ್ರಹ್ಮಣ್ಯ ಎನ್. 1970. 'ಅಮರಕೋಶ' ಪು. (xvii) ಮತ್ತು 40.

27. 'ಶ್ರೀಮನ್ಮಹಾರಾಜರವರ ವಂಶಾವಳಿ ಪು. 170.

28. – ಅದೇ – ಪು. 170.

29. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪು. 121.

30. ವಸಂತಕುಮಾರ ತಾಳ್ತಜೆ. 'ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ' ಪು. 93.

31. ಕ್ರಮಸಂಖ್ಯೆ 29, ಪು 117.

32. 'ಈಗ ನಮಗೆ ಸಿಗುವ ಹಳಗನ್ನಡ, ನಡುಗನ್ನಡಗಳ ಅನೇಕ ಕೃತಿಗಳಲ್ಲಿ ಬೌದ್ಧ ಧರ್ಮದ ಉಲ್ಲೇಖ, ವಿವರಗಳು ಸಿಗುತ್ತವಾದರೂ ಹೆಚ್ಚಾಗಿ ಆ ಉಲ್ಲೇಖಗಳು ಬೌದ್ಧ ವಿಡಂಬನೆಗಾಗಿಯೇ ಮಾಡಿದವುಗಳೆಂಬುದು ಗಮನಾರ್ಹ' ಎಂದು ತಾಳ್ತಜೆ ವಸಂತ ಕುಮಾರ ರವರು ಅಭಿಪ್ರಾಯ ಪಟ್ಟಿದ್ದಾರೆ (ಸಾರಸ ಪು 19). ಅಲ್ಲದೇ, ಟಿ.ವಿ. ವೆಂಕಟಾಚಲ ಶಾಸ್ತ್ರಿಗಳವರು 1983ರ ದಶಂಬರ ಕೊನೆಯಲ್ಲಿ ಬೆಂಗಳೂರಿನ ಮಿಥಿಕ ಸೊಸೈಟಿಯ ಆಶ್ರಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧದಲ್ಲಿ ಈ ಬಗ್ಗೆ ಚರ್ಚಿಸಿರುವುದನ್ನು ಉಲ್ಲೇಖಿಸಿದ್ದಾರೆ.

33. ಸ್ವಾಮಿ, ಅಮಾತ್ಯ, ದುರ್ಗ, ಕೋಶ, ಮಿತ್ರ ಮತ್ತು ರಾಷ್ಟ್ರ — ಇವು ಉಳಿದ ಆರು ಅಂಗಗಳು.

34. ಉದ್ಧೃತ: ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು ಅಡಿಟಿಪ್ಪಣಿ ಸಂಖ್ಯೆ 12. ಪು. 8.

35. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. 261–2.

36. ಕ್ರ.ಸಂ. 34, ಪು.3.

37. ಉದಾ: 1) ನಂದರ ರಥಧ್ವಜ ಪತಾಕೆಗಳನ್ನು ಹದ್ದು ಹಂಗಗಳಡರಿದವು.

2) ರಾಕ್ಷಸನು ರಥವನ್ನೇರಿ ಅತಿರಭಸದಿಂದ ರಥವನ್ನೋಡಿಸುತ್ತ ಶತ್ರುಗಳ ತಲೆ ಹಾರಿಸುತ್ತಿದ್ದನು

3) ಶತ್ರುರಥಿಕರ ಧನುಸ್ಸುಗಳನ್ನು ಛೇದಿಸಿ ··· 'ಒಡುವ ತೇರಾಳ್ಗಳಂ ಸಂಹರಿಸುತ್ತಿದ್ದರು.

4) ಎರಡು ಪಡೆಗಳಲ್ಲಿಯೂ ರಥಸ್ಥರು ರಥಿಕರನ್ನು ··· ಪ್ರಹರಿಸುತ್ತ ಯುದ್ಧ ಮಾಡುತ್ತಿದ್ದರು.

5) ಪರ ಸೈನ್ಯವು ಪಲಾಯನಗೈಯಲು ರಾಕ್ಷಸನು ಅರಿಗಳನ್ನೋಡಿಸಿ ರಥದಿಂದಿಳಿದು ತುರಗವನ್ನೇರಿ ಪುರವಂ ಪೊಕ್ಕನು. ಇತ್ಯಾದಿ.

37ಎ. ಹೈದರಲ್ಲಿಖಾನನ ಸಮಯದಲ್ಲಿ 1,10,000 ಕಂದಾಚಾರ ಇಲಾಖೆಯ ಶಿಬಂಧಿಗಳಿದ್ದರು.
12,000 ಕಂದಾಚಾರದವರು ಸೈನ್ಯದಲ್ಲಿದ್ದರು (ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ ೨ ಪು 19)
ಕ್ರಿ.ಶ. 1802ರಲ್ಲಿ 1,500 ಸವಾರರು, 3,000 ಬಾರಿನವರು, 2,500 ಜವಾನರು
12,000 ಕಂದಾಚಾರದವರು ಮೈಸೂರು ಸೈನ್ಯದಲ್ಲಿದ್ದರು (ಅದೇ ಪು 18).

38. ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ. ಪು 124.

39. ಕ್ರ.ಸಂ. 35, ಪು 265.

40. ಕ್ರ.ಸಂ. 34, ಪು 2.

41. ಕ್ರ.ಸಂ. 38, ಪು 125.

42. 'ಕರ್ನಾಟಕ' ವಿಷಯ ವಿಶ್ವಕೋಶ ಪು.922.

43. ಶರ್ಮಾ ತಿ. ತಾ. 'ಚಾರಿತ್ರಿಕ ದಾಖಲೆಗಳು' ಪು 26.

44. ಜೋಶಿ ಜಿ.ಜಿ. 'ಕೌಟಿಲ್ಯನ ರಾಜ್ಯಪದ್ಧತಿಯ ಸಮೀಕ್ಷೆ' ಪು 26.

45. 'ಆರ್ಕಾಟಿನ ನವಾಬನ ಕಡೆಯ ದಿವಾನ ಶಿದ್ದೋಜಿ ಘೋರ್ಪಡೆ ಎಂಬವನು ಬಹಳ ಸೇನೆಯನ್ನು ತೆಗೆದುಕೊಂಡು ಬಂದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ದೊಡ್ಡ ಕೃಷ್ಣರಾಜ ಒಡೆಯರ (1714–32)ರವರು ಕೋಟೆಯ ಮೇಲಿನಿಂದ ಬಹಳವಾಗಿ ಗುಂಡುಗಳನ್ನು ಹೊಡೆದು ಯುದ್ಧ ಮಾಡುವ ಸಮಯದಲ್ಲಿ, ಇವರ ಪೆಟ್ಟನ್ನು ತಾಳಲಾರದೆ 'ಓಡಿ ಹೋಗುತ್ತಿರುವ ಅವರ ದಂಡಿನ

ಬೆನ್ನಟ್ಟಿ ಹೋಗಿ ಯುದ್ಧ ಮಾಡಿ ಕೆಲವು ಜನಗಳ ಕಿವಿ ಮೂಗುಗಳ ಕೊಯ್ಯಿಸಿ ಆ ದಂಡಿನಲ್ಲಿದ್ದ ಆನೆ ಕುದುರೆ ವಸ್ತ್ರಾಭರಣ ಮುಂತಾದವನ್ನು ವಶಪಡಿಸಿಕೊಂಡರು (ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ ೧ ಪು 160).

ಕರಾಚೂರಿ ನಂಜರಾಜಯ್ಯನು ಅರಮನೆಯ ಬಾಗಿಲ್ಗೆ ಗುಂಡು ಹೊಡೆಸಿದಾಗ ಇಮ್ಮಡಿ ಕೃಷ್ಣರಾಜ ಒಡೆಯರ (1734—66) ರವರು ತಮ್ಮ ಕಡೆಯ ಜನಗಳನ್ನು ಒಳಗೆ ಬಿಟ್ಟು, ಆಚೆಗೆ ಬಂದು ತಮ್ಮ ಪರಾಕ್ರಮದಿಂದ ನಂಜರಾಜ ಕಡೆಯ ಕೆಲವು ಜನಗಳನ್ನು ಹೊಡೆದೋಡಿಸಿ, ಕೆಲವರಿಗೆ ಪ್ರಾಣಾಂತ ಶಿಕ್ಷೆಗಳನ್ನು ಮಾಡಿ, ಇನ್ನು ಕೆಲವರಿಗೆ ಕಿವಿ ಮೂಗುಗಳನ್ನು ಕೊಯ್ಯಿಸಿ ಬಂದೋಬಸ್ತು ಮಾಡಿದರು (ಅದೇ ಪು 184).

ಇದೆಲ್ಲ ಗಮನಿಸಿಯೇ ಬೆಟಗೇರಿಯವರು — 'ವೈರಿ ಸೈನ್ಯದ ಮೂಗು ಕೊಯ್ಯುದು ಬಿಡುವುದೂ ಒಂದು ಮೈಸೂರಿನವರ ಯುದ್ಧದ ವೈಶಿಷ್ಟ್ಯವೆಂದು ಕಾಣುತ್ತದೆ' ಎಂದಿದ್ದಾರೆ. (ಕರ್ನಾಟಕ ಜನಜೀವನ ಪು 142).

46. ಇಲ್ಲಿ ಉಕ್ತವಾದ ಧ್ವಜ ಲಾಂಛನಗಳಲ್ಲಿ ಪ್ರಾಚೀನ ಕರ್ನಾಟಕದ ಅರಸರ ಧ್ವಜ ಲಾಂಛನಗಳು ಯಾವುದೂ ಇಲ್ಲ. ಉದಾಹರಣೆ: ಚಾಲುಕ್ಯರ ವರಾಹಧ್ವಜ, ರಾಷ್ಟ್ರಕೂಟರ ಗರುಡಧ್ವಜ, ಹೊಯ್ಸಳರ — 'ಸಳನು ಸಿಂಹನನ್ನು ಕೊಂದ' ಸಂಕೇತದ ಮತ್ತು ಆನೆಯ ಚಿತ್ರವಿರುವ ಪತಾಕೆ, ಸಮಕಾಲೀನ ಮೈಸೂರರಸರ ಗಂಡಭೇರುಂಡ ಮೊದಲಾದವು. ಆದರೆ ಇಲ್ಲಿ ಉಕ್ತವಾದ ವ್ಯಾಘ್ರ ಲಾಂಛನ ಟಿಪ್ಪುವಿನದಾಗಿರಬೇಕು. ಆತ ತನ್ನ ಸೈನಿಕರಿಗೆಲ್ಲ ಹುಲಿಪಟ್ಟೆಯ ಬಟ್ಟೆಯನ್ನೇ ಸಮವಸ್ತ್ರವನ್ನಾಗಿ ಕೊಟ್ಟಿದ್ದ. ಆತನ ಫ್ರೆಂಚ ಮಾದರಿಯ ಕುರ್ಚಿಗಳ ಮೇಲೆ ಹುಲಿಮುಖದ ಲಾಂಛನವನ್ನು ಹಾಕಿಸಿದ್ದಾನೆ (ನೋಡಿ: ಗೋವಿಂದ ಮೂರ್ತಿ ದೇಸಾಯಿ 'ವಿದೇಶದಲ್ಲಿ ವಿಜೃಂಭಿಸುತ್ತಿರುವ ಟಿಪ್ಪುಸ್ಮಾರಕಗಳು ತಾ.2.10.94ರ ಸುಧಾ ವಾರಪತ್ರಿಕೆ ಪು 6). ಇನ್ನು, ಮರಾಠರದ್ದು ಕಾಷಾಯವಸ್ತ್ರದ ಸಮವಸ್ತ್ರವಿದ್ದಿರಬೇಕೆಂದು ಡಾ: ಹಾವನೂರರು ನನ್ನಲ್ಲಿ ತಿಳಿಸಿದ್ದಾರೆ (ಹೆಚ್ಚಿನ ವಿವರಗಳಿಗೆ ಕ.ಶಾ.ಸಾಂ. ಅಧ್ಯಯನ ಪು 336).

ಕ್ರಿ.ಶ. 1804ರಲ್ಲಿ ಮೈಸೂರಿನಲ್ಲಿ ಗೋಲಂದಾಜಿ ಪಟಾಲಂ ಇತ್ತು. ಇವರಿಗೆಲ್ಲ ಬ್ರಿಟಿಷ ಇಲಾಖೆಯ ಜನರಂತೆ ದಿರಸು ಕೊಡಲ್ಪಟ್ಟಿತ್ತು (ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ ೨ ಪು 19)

47. ಕೃಷ್ಣಶರ್ಮ ಬೆಟಗೇರಿ 1971. 'ಕರ್ನಾಟಕ ಜನಜೀವನ' ಪು 57.

48. ಹಗ್ಗದಿಂದ ಮಾಡಿದ ಆಯುಧಗಳಾಗಿ ಪಾಶ, ಬೀಸುವಲೆ, ಜೋತ್ತಿಗೆ, ಬೀರ್ಗ, ಕವಣೆ, ಗಾಳ, ನೂಲೇಣಿಗಳನ್ನು ಬೆಟಗೇರಿಯವರು ಸೂಚಿಸಿದ್ದಾರೆ (ಅದೇ ಪು 59). 'ಮುದ್ರಾಮಂಜೂಷ' ದಲ್ಲಿ ಚಾಣಕ್ಯರ ಹೇಳಿಕೆಯಂತೆ ಶಿಖರನು ನೀಟಾದ ಉರುಳುಗಳನ್ನು ಬೀಸಿ ನಂದರನ್ನು ನೆಲಕ್ಕೆ ಕೆಡವಿ ಬಂಧಿಸಿ ಪ್ರಹರಿಸಿದನು — ಎಂದು ಹೇಳಿದೆ.

49. ಅ) ಬಂದೂಕು, ತೋಪು, 'ಗನಪೌಡರ' ಮೊದಲಾದವು ಹಿಂದೆ ಭಾರತೀಯರಿಗೆ ತಿಳಿದಿರಲಿಲ್ಲ. ಪೋರ್ಚುಗೀಸರ ಆಗಮನದ ನಂತರ ಪಾಶ್ಚಾತ್ಯ ಪಂಡಿತರಿಂದ ಇದು ಪರಿಶೋಧಿಸಲ್ಪಟ್ಟು ಪ್ರಚಾರದಲ್ಲಿ ಬಂದಿತೆಂಬುದು ಇತಿಹಾಸದಿಂದ ತಿಳಿಯುತ್ತದೆ ಎಂಬುದು ಒಂದು ಮತವಾದರೆ ಪೋರ್ಚುಗೀಸರಿಗಿಂತಲೂ ಮೊದಲು ಬಂದೂಕಿನ ಬಗ್ಗೆ ಭಾರತೀಯರಿಗೆ ಗೊತ್ತಿತ್ತೆಂಬುದು ಮತ್ತೊಂದು ವಾದವಾಗಿದೆ. ಇದನ್ನು ಸಮರ್ಥಿಸುವವರು 'ನೋರಾ' ಎಂಬ ವಸ್ತುವಿನ ಕುರಿತು 'ಸುವರ್ಚಿಕಾ' ಮೊದಲಾಗಿ ಆಯುರ್ವೇದ ಗ್ರಂಥಗಳಲ್ಲಿ ಉಲ್ಲೇಖಿತವಾದುದನ್ನು ತೋರಿಸುತ್ತಾರೆ. ಆದರೆ ವಸ್ತುಶಃ 'ಗನಪೌಡರ' ಇತ್ತೀಚಿನ ಶತಮಾನದ್ದೆಂದೂ ಪ್ರಾಚೀನ ಗ್ರಂಥಗಳಲ್ಲಿ ಇತ್ತೀಚಿನವರು ಅದನ್ನು ಸೇರಿಸಿ ಪ್ರಮಾಣಬದ್ಧಗೊಳಿಸುವ ಪ್ರಯತ್ನ ಮಾಡಿರಬಹುದೆಂದೂ ತಿಳಿಯಬಹುದಾಗಿದೆ. (ಶ್ರೀ ರಾಜೇಶ್ವರ ಶಾಸ್ತ್ರೀ ದ್ರಾವಿಡ, ಶುಕ್ರನೀತಿ ಗ್ರಂಥದ ಭೂಮಿಕೆಯಲ್ಲಿ).

ಆ) ಈ ವಿಷಯದಲ್ಲಿ ಕೆಲವು ವಿದ್ವಾಂಸರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಹೇಳಿ, ಶಾಸನಗಳಲ್ಲಾಗಲೀ, ಸಾಹಿತ್ಯ ಕೃತಿಗಳಲ್ಲಾಗಲೀ ಇದರ ಪ್ರಸ್ತಾಪ ಇಲ್ಲದಿರುವುದರಿಂದ 'ಪ್ರಾಚೀನ ಕನ್ನಡಿಗರಿಗೆ ಸಿಡಿಮದ್ದಿನ ಬಳಕೆ ತಿಳಿದಿರಲಿಲ್ಲವೆಂದು ಖಚಿತವಾಗಿ ಹೇಳಬಹುದು' ಎಂದು ಚಿದಾನಂದ ಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ (ಕ.ಶಾ.ಸಾಂ.ಅ.ಪು 279).

ಇ) ಫಿರಂಗಿ, ಗುಂಡುಗೋವಿ, ಶತಘ್ನಿ ಮುಂತಾದ ಸಿಡಿಮದ್ದಿನ ಆಯುಧಗಳು ಹದಿನಾರನೆಯ ಶತಮಾನದಿಂದ ಈಚಿನ ಕಾವ್ಯಗಳಲ್ಲಿ ಯಥೇಷ್ಟವಾಗಿ ಕಾಣಸಿಕೊಳ್ಳುತ್ತವೆ ಎಂದು ಬೆಟಗೇರಿ ಕೃಷ್ಣಶರ್ಮರು ಹೇಳಿದ್ದಾರೆ (ಕರ್ನಾಟಕ ಜನಜೀವನ ಪು 26).

ಈ ಎಲ್ಲ ಅಂಶಗಳನ್ನು ಗಮನಿಸುವಾಗ ಕವಿಯು ಸಮಕಾಲೀನವಾಗಿ ಉಪಯೋಗಿಸುತ್ತಿದ್ದ 'ಫಿರಂಗಿ' ಯನ್ನು ತಾನು ಹೇಳುವ ಐತಿಹಾಸಿಕ ಯುದ್ಧದಲ್ಲಿ ಸಮಾವೇಶಗೊಳಿಸಿದ್ದಾನೆಂದು ನಿಸ್ಸಂಶಯವಾಗಿ ಹೇಳಬಹುದು.

50. ಕ್ರ.ಸಂ. 38 ಪು 121.

51. ಉದ್ಧೃತ ಕ್ರ.ಸಂ. 38 ಪು 132.

52. ಕ್ರ.ಸಂ 47, ಪು 5.

53. ಕ್ರ.ಸಂ 38, ಪು 58.

54. ಉದ್ಧೃತ ಕ್ರ.ಸಂ 34 ಪು 38–39.

55. ಅದೇ ಪು 39.

56. ಯುದ್ಧಕ್ಕಾಗಿ ಹೊರಟ ರಾಜರು ಶಿಬಿರಗಳಲ್ಲಿ ಬೀಡುಬಿಡುತ್ತಿದ್ದರು. ಬೀಡುಗಳನ್ನು ಸಾಮಾನ್ಯವಾಗಿ ಜಲಸಮೃದ್ಧವಾದ ಸ್ಥಳಗಳಲ್ಲಿ ಬಿಡುತ್ತಿದ್ದರು (ಕ.ಶಾ.ಸಾಂ.ಅಧ್ಯಯನ ಪು 258).

57. ಹಿಲ್ಟನ ಬ್ರೌನ ಎಂಬವನು ಬರೆದ ಮದ್ರಾಸಿನ ಪ್ಯಾರಿ ಅಂಡ ಕಂಪೆನಿಯ ಚರಿತ್ರೆಯಲ್ಲಿ — ' ಈಸ್ಟ್ ಇಂಡಿಯಾ ಕಂಪೆನಿಯ ಸಿಪಾಯಿಗಳು ಕ್ರಿ.ಶ. 1799ರಲ್ಲಿ ಶ್ರೀರಂಗಪಟ್ಟಣದ ಮುತ್ತಿಗೆಯ ಸಮಯದಲ್ಲಿ ಕಾಫಿ ಕುಡಿಯುತ್ತಿದ್ದರು' ಎಂದು ಬರೆದಿದ್ದಾನೆ (ಪು.63). ಈ ವಿಚಾರವನ್ನು ಪತ್ರ ಮೂಲಕ ನನಗೆ ತಿಳಿಸಿದವರು ಮಣಿಪಾಲದ ಡಾ: ನ.ಕೃ. ತಿಂಗಳಾಯರವರು.

ಕವಿಯು ಮೌರ್ಯಕುಮಾರರು 'ಕಾಪಿಶಾಯನ' ವೆಂಬ ಮದ್ಯ ಕುಡಿದು ಅಮಲೇರಿ ವಿಪರೀತವಾಗಿ ವರ್ತಿಸಿ ತಮ್ಮ ಮೃತ್ಯುವ ತಂದುಕೊಂಡರೆಂದು ನಂದರ ಬಾಯಿಯಿಂದ ಹೇಳಿಸಿದ್ದಾನೆ. ಕವಿಯು ಇದೇ ಕಾಫಿಯನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದಿರಬಹುದು. ಕೆಲವು ಸಮಯದ ಹಿಂದಿನವರೆಗೂ ಕಾಫಿಯು ಅಮಲು ಪದಾರ್ಥವೆಂಬ ಭಾವನೆ ಜನಸಾಮಾನ್ಯರಲ್ಲಿದ್ದಿತ್ತು.

ಅಧ್ಯಾಯ ಏಳು

ಹಿಂದಿಯಲ್ಲಿ ' ಚಂದ್ರಗುಪ್ತ ' ಸಾಹಿತ್ಯ — 252 – 255

ಪ್ರಸ್ತಾವನೆ – ದೇಶಭಾಷೆಗಳಲ್ಲಿ ಚಂದ್ರಗುಪ್ತ ಸಾಹಿತ್ಯ – ಖಡೀಬೋಲೀ ಹಿಂದಿ – ಭಾರತೇಂದು ಹರಿಶ್ಚಂದ್ರ – ಬದರೀನಾಥ ಭಟ್ಟ – ದ್ವಿಜೇಂದ್ರ ಲಾಲರಾಯ – ಜಯಶಂಕರ ಪ್ರಸಾದ – ರಾಷ್ಟ್ರೀಯ ದೃಷ್ಟಿಕೋನ – ನಂದ ಸಾಮ್ರಾಜ್ಯದ ಹೊರಗಿನ ಪಾತ್ರಗಳು – ವಿಶೇಷ ಸ್ತ್ರೀ ಪಾತ್ರಗಳು – ವಿದೇಶೀ ಆಕ್ರಮಣವನ್ನು ತಡೆಯಲು ಬಲಿಷ್ಠ ಸಾಮ್ರಾಜ್ಯ ನಿರ್ಮಾಣದ ಆಶಯ – ದಾಕ್ಷಿಣಾತ್ಯ ವ್ಯಕ್ತಿ ಚಿತ್ರಣೆಯ ಪಾಠಗಳ ಹೋಲಿಕೆ. ಸಾಹಿತ್ಯ ಕೃತಿಗಳು ಭೌಗೋಲಿಕ ಹಾಗೂ ಸನ್ನಿವೇಶದ ಸೃಷ್ಟಿಗಳು – ಎಂಬ ನಿರ್ಣಯ.

–೦–

ಅಧ್ಯಾಯ ಏಳು

ಹಿಂದಿಯಲ್ಲಿ 'ಚಂದ್ರಗುಪ್ತ' ಸಾಹಿತ್ಯ

ಭಾರತೀಯರಿಗೆ ಚಂದ್ರಗುಪ್ತ–ಚಾಣಕ್ಯರ ಕಥೆ ಸುಪರಿಚಿತ. ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಬದುಕಿದ್ದ ಇವರ ಬಗ್ಗೆ ನಾನಾ ರೀತಿಯ ಕಥೆಗಳು, ಐತಿಹ್ಯಗಳು ಹುಟ್ಟಿಕೊಂಡಿದ್ದುವು. ಇವರ ಕಥೆಯ ಬೌದ್ಧ, ಜೈನ ಮೂಲದ ಪಾಠಾಂತರಗಳು ಈ ಕಥೆಯೊಂದಿಗೆ ತಮ್ಮ ತಮ್ಮ ಮತದ ಮಹತ್ವವನ್ನು ಹೇಳಹೊರಟಿದ್ದರೆ, ಫಾರಸೀ ಪಾಠಾಂತರದೊಂದಿಗೆ ಜಗದ್ವಿಜೇತ ಅಲೆಕ್ಸಾಂಡರನ ಕಥೆಯ ತಳಕು ಕಂಡುಬರುತ್ತದೆ. ದೇಶೀಯ ಭಾಷೆಗಳಲ್ಲಿ ಈ ಕಥೆಯು ಪ್ರಾದೇಶಿಕ, ಭೌಗೋಳಿಕ ಅಂಶಗಳನ್ನು ಗರ್ಭೀಕರಿಸಿಕೊಂಡಿದೆ. ಹಾಗಾಗಿ ಉತ್ತರ ಭಾರತದ ಪ್ರಮುಖ ಭಾಷೆಯಾದ ಹಿಂದಿಯಲ್ಲಿ ಈ ಕಥೆಯು ರೂಪುಗೊಂಡ ಬಗೆಯನ್ನು ಗಮನಿಸಲಾಗುವುದು.

ಹಿಂದಿ ಭಾಷೆಯು ಆಧುನಿಕ ರೂಪವಾದ ಖಡೀಬೋಲಿಯು ರೂಪುಗೊಳ್ಳುತ್ತಿರುವಾಗ, ವಿವಿಧ ಭಾಷೆಗಳಿಂದ ಇಲ್ಲಿ ಅನುವಾದಗಳು ಕಾಣಿಸಿಕೊಂಡುವು. ಹೀಗೆ ಆರಂಭದ ಹಂತದಲ್ಲಿ ಸಂಸ್ಕೃತ ನಾಟಕಗಳು ಅನುವಾದಗೊಳ್ಳುತ್ತಿದ್ದಾಗ ಹಿಂದಿ ನವೋದಯದ ಹರಿಕಾರರಾದ ಭಾರತೇಂದು ಹರಿಶ್ಚಂದ್ರ (ಕ್ರಿ.ಶ. 1850 – 1885) ರವರು ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕವನ್ನು ಕ್ರಿ.ಶ. 1878ರಲ್ಲಿ ಅನುವಾದಿಸಿದರು.[1] ಭಾರತದ ಪ್ರಾಚೀನತೆಯ ಬಗ್ಗೆ ಅವರಿಗೆ ವಿಶೇಷ ಒಲವಿದ್ದುದರಿಂದ ಅವರು ಹೆಚ್ಚಿನ ವೈಯಕ್ತಿಕ ಸ್ವಾತಂತ್ರ್ಯವನ್ನು ವಹಿಸಿಕೊಳ್ಳದೆ ಈ ನಾಟಕವನ್ನು ಭಾಷಾಂತರಿಸಿದ್ದರು.

ಇದರಲ್ಲಿ ಪೂರ್ವಕಥೆಯಿಲ್ಲ. ನಂದರ ಪತನಾನಂತರ ಚಾಣಕ್ಯ ಮತ್ತು ರಾಕ್ಷಸರು ಪರಸ್ಪರರನ್ನು ಸೋಲಿಸಲು ತೋರಿಸಿದ ಕುಟಿಲ ನೀತಿ, ಕೊನೆಯಲ್ಲಿ ರಾಕ್ಷಸನು ಸೋತು ಚಂದ್ರಗುಪ್ತನ ಮಂತ್ರಿಯಾಗಲು ಒಪ್ಪಿಕೊಳ್ಳುವುದು — ಇಲ್ಲಿಯ ವಸ್ತುವಾಗಿದೆ; ಮೂಲ ನಾಟಕದಲ್ಲಿದ್ದುದಕ್ಕಿಂತ ಬೇರೆ ಪಾತ್ರಗಳನ್ನು ತಾರದೇ ಆಗತಾನೆ ರೂಪುಗೊಳ್ಳುತ್ತಿರುವ ಭಾಷೆಯಲ್ಲಿ ಪ್ರಾಚೀನ ಭಾರತದ ಪ್ರಥಮ ಸಾಮ್ರಾಜ್ಯ ಸ್ಥಾಪಕರ ಕಥೆಯನ್ನು ಹೇಳಿದ್ದೇ ಈ ನಾಟಕದ ವೈಶಿಷ್ಟ್ಯವಾಗಿದೆ.

ಮತ್ತೆ, ಈ ಶತಮಾನದ ಆರಂಭದ ದಶಕದಲ್ಲಿ 'ಚಂದ್ರಗುಪ್ತ' ನಾಟಕವನ್ನು ಬರೆದಿದ್ದ ಬದರೀನಾಥ ಭಟ್ಟ (ಕ್ರಿ.ಶ. 1891–1932)ರು ಐತಿಹಾಸಿಕ ವಸ್ತುಗಳನ್ನು ಆಯ್ದುಕೊಂಡು, ಫಾರಸೀ ರಂಗಮಂಚದಿಂದ ಪ್ರಭಾವಿತರಾಗಿ ನಾಟಕವನ್ನು ಬರೆದವರು[2]. ಕಲಾತ್ಮಕ ವೈಭವದ ದೃಷ್ಟಿಯಿಂದ ಇವರ ಐತಿಹಾಸಿಕ ನಾಟಕಗಳು, ಪೌರಾಣಿಕ ನಾಟಕಗಳಿಗಿಂತ ಕಡಿಮೆ ದರ್ಜೆಯವುಗಳಾದರೂ ಅವುಗಳಲ್ಲಿ ಸಮಸಾಮಯಿಕ ಸಮಸ್ಯೆಗಳ ಬಗ್ಗೆ, ಇಲ್ಲಿಯ ವಿಕೃತಿಗಳ ಬಗ್ಗೆ ಲೇವಡಿ ಮಾಡಿದ್ದು ವಿಶೇಷವಾಗಿದೆ. ಇವರು ಬರೆದ ನಾಟಕಗಳ ಮೇಲೆ ಫ್ರೆಂಚ ನಾಟಕಕಾರ ಮೋಲಿಯರನ ಪ್ರಭಾವವಿದೆಯೆನ್ನುತ್ತಾರೆ[2ಎ]. ಅಂತೂ ವಿಶಾಖದತ್ತನ

ವರ್ಷಸ್ಸಿನಿಂದ ದೂರವಾಗಿ ಚಂದ್ರಗುಪ್ತನ ಕುರಿತಾಗಿ ಮೊದಲು ನಾಟಕ ಬರೆದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಮೊದಲು ನಾಟಕ ಬರೆದ ಭಾರತೇಂದು ಮತ್ತು ಮುಂದೆ ಬರಲಿರುವ ಜಯಶಂಕರ ಪ್ರಸಾದರ ಕೊಂಡಿಯಾಗಿ ಇವರು ಪ್ರಸಿದ್ಧರಾಗಿದ್ದಾರೆ.

ಇದೇ ಸಮಯದಲ್ಲಿ ಬಂಗಾಳಿ ಭಾಷೆಯಿಂದ ಕೂಡಾ ಕಥೆ, ಕಾದಂಬರಿ, ನಾಟಕಗಳು ಹಿಂದಿಗೆ ಭಾಷಾಂತರಗೊಳ್ಳುತ್ತಿದ್ದುವು. ಕ್ರಿ.ಶ. 1917ರಲ್ಲಿ ದ್ವಿಜೇಂದ್ರಲಾಲ ರಾಯರ 'ಚಂದ್ರಗುಪ್ತ' ನಾಟಕವು ಬಂಗಾಳಿ ಭಾಷೆಯಿಂದ ಅನುವಾದವಾಗಿ ಹಿಂದಿಗೆ ಬಂದು ಬಹಳ ಪ್ರಚಾರದಲ್ಲಿತ್ತು[3]. ಇದರಲ್ಲಿ ಸ್ವಂತಿಕೆಯ ಕೆಲವು ಅಂಶಗಳು ಕಾಣಿಸಿಕೊಂಡಿದ್ದರೂ ಅದು ಪೂರ್ಣ ವಿಕಸಿತಗೊಂಡದ್ದು ಪ್ರಸಾದರಲ್ಲಿಯೇ.

ಜಯಶಂಕರ ಪ್ರಸಾದ (ಕ್ರಿ.ಶ. 1889–1937) ರು ಆಧುನಿಕ ಹಿಂದಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ ಧೀಮಂತ ಕವಿಗಳು[4]. ಪ್ರಾಚೀನ ಭಾರತದ ಗರಿಮೆ ಹಿರಿಮೆಗಳನ್ನು ಕೊಂಡಾಡುವುದರಲ್ಲಿ ಅವರಿಗೆ ವಿಶೇಷ ಆಸಕ್ತಿ. ಉದಾತ್ತ ಪಾತ್ರಗಳ ಮೂಲಕ ರಾಷ್ಟ್ರಭಕ್ತಿಯನ್ನು ಪ್ರಕಟಿಸುವುದರಲ್ಲಿಯೂ ಅವರು ಸಿದ್ಧಹಸ್ತರು. ತಮ್ಮ ಹದಿನೇಳನೆಯ ವಯಸ್ಸಿನಿಂದಲೇ ಅವರು ಬರೆಯಲು ಆರಂಭಿಸಿದ್ದರು.

'ಕಲ್ಯಾಣಿ ಪರಿಣಯ' ವೆಂಬ ರೂಪದಿಂದ ತಮ್ಮ ಕೃತಿಯನ್ನು ತಿದ್ದಿ ಕ್ರಿ.ಶ. 1931ರಲ್ಲಿ ಪ್ರಸಾದರು 'ಚಂದ್ರಗುಪ್ತ' ನಾಟಕವನ್ನು ರಚಿಸಿದರು. ಇಲ್ಲಿ ಅವರು ಇತಿಹಾಸದ ವಸ್ತುವನ್ನು ಸ್ವೀಕರಿಸಿದ್ದರೂ ತಮ್ಮ ದೃಷ್ಟಿಕೋನವನ್ನು ಯೋಗ್ಯವಾಗಿ ಪ್ರಸ್ತುತಪಡಿಸಲು ಸಾಕಷ್ಟು ಕಲ್ಪನೆಯನ್ನು ಆಶ್ರಯಿಸಿದರು. ಹಾಗಾಗಿ ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಭಾವನೆಗೆ ಇಲ್ಲಿ ಒತ್ತು ಕೊಡಲು ಸಾಧ್ಯವಾಗಿದೆ. ಅಭಿಜಾತ ಕುಲೋತ್ಪನ್ನನೂ, ಪರಮ ತೇಜಸ್ವಿಯೂ ಪೌರುಷವಂತನೂ ಆದ ಚಂದ್ರಗುಪ್ತನ ವ್ಯಕ್ತಿಚಿತ್ರಣದಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ[5].

ಈ ನಾಟಕದ ನಾಲ್ಕು ಅಂಕಗಳಲ್ಲಿ ಒಟ್ಟು ನಲವತ್ತನಾಲ್ಕು ದೃಶ್ಯಗಳಿವೆ. ಇಲ್ಲಿಯ ಘಟನೆಗಳು ನಂದ ಸಾಮ್ರಾಜ್ಯದ ರಾಜಧಾನಿಯಾದ ಪಾಟಲೀಪುರಕಿಂತ ಬಹುದೂರ ವಿಪಾಶಾ ನದಿದಂಡೆಯಲ್ಲಿ ಜರಗುತ್ತವೆ. ವಿಶಾಖದತ್ತನ ನಾಟಕದಲ್ಲಿ ಚಾಣಕ್ಯ ಮುಖ್ಯಪಾತ್ರವಾದರೆ ಇಲ್ಲಿ ಚಂದ್ರಗುಪ್ತನೇ ನಾಯಕ ಹಾಗೂ ಆತನದೇ ಮುಖ್ಯಪಾತ್ರ. ದಾಂಡ್ಯಾಯನನೆಂಬ ತಪಸ್ವಿಯ ಇರುವಿಕೆಯಿಂದ ಇಲ್ಲಿ ಚಾಣಕ್ಯನ ಪ್ರಭಾವ ಕುಗ್ಗಿದೆ. ಇಲ್ಲಿಯ ಇತರ ಪ್ರಮುಖ ಪಾತ್ರಗಳೂ ಅಷ್ಟೇ. ನಂದ ಸಾಮ್ರಾಜ್ಯದ ಒಳಗಿನವರಿಗಿಂತ ಹೊರಗಿನವರೇ ಹೆಚ್ಚು. ಗಾಂಧಾರ, ಮಾಳವದ ರಾಜಕುಮಾರರು, ಗ್ರೀಕ ವಿಜೇತ ಸಿಕಂದರ, ಆತನ ಸೇನಾಪತಿ ಸೆಲ್ಯೂಕಸ — ಮೊದಲಾದವರು ಇಲ್ಲಿಯ ಪ್ರಮುಖ ಪುರುಷಪಾತ್ರಗಳು. ಸಂಸ್ಕೃತ ನಾಟಕದಲ್ಲಿ ಸ್ತ್ರೀ ಪಾತ್ರಗಳೇ ಇಲ್ಲವೆಂಬಷ್ಟು ಕಡಿಮೆ. ಅಲ್ಲಿ ಶೃಂಗಾರಕ್ಕೆ ಅವಕಾಶವೇ ಇಲ್ಲ. ಆದರೆ ಈ ನಾಟಕದಲ್ಲಿ ತಕ್ಷಶಿಲೆಯ, ಮಗಧದ, ಸಿಂಧು ದೇಶದ ರಾಜಕುಮಾರಿಯರು, ಶಕಟಾರನ ಮಗಳು ಸುವಾಸಿನಿ, ಸೆಲ್ಯೂಕಸನ

ಮಗಳು ಕಾರ್ನೇಲಿಯಾ — ಪ್ರಮುಖ ಸ್ತ್ರೀ ಪಾತ್ರಗಳಾಗಿ ಕಾಣಿಸಿಕೊಳ್ಳುತ್ತಾರೆ. ಪ್ರೀತಿಯ ಆಕರ್ಷಣೆಗೆ ಸೋಲುತ್ತ, ರಾಷ್ಟ್ರಭಕ್ತಿಯ ಪ್ರದರ್ಶನ ಮಾಡುವ ಈ ಪಾತ್ರಗಳು ನಾಟಕದ ಆದಿಯಿಂದ ಅಂತ್ಯದವರೆಗೆ ಹರಡಿಕೊಂಡಿವೆ[6].

ಹೀಗೆ 'ಚಂದ್ರಗುಪ್ತ' ನಾಟಕದಲ್ಲಿ ಪ್ರಸಾದರು ವಿದೇಶೀ ಆಕ್ರಮಣಗಳು ಮತ್ತು ರಾಜಕೀಯ ಒಳಸಂಚುಗಳ ಹಿನ್ನೆಲೆಯಲ್ಲಿ ಭಾರತದ ರಾಷ್ಟ್ರೀಯತೆಯ ಜನನ ಮತ್ತು ಬೆಳವಣಿಗೆಯನ್ನು ಚಿತ್ರಿಸಲು ಮೌರ್ಯರ ಕಾಲವನ್ನು ಆಧರಿಸಿದರು. ಈ ಯುಗದಲ್ಲಿ ಮಹಾಮತಿ ಮತ್ತು ರಾಜಪ್ರತಿಷ್ಠಾಪಕ ಚಾಣಕ್ಯನು ಚಂದ್ರಗುಪ್ತನ ಸಾಮ್ರಾಜ್ಯದಲ್ಲಿ ಸಮಗ್ರ ರಾಷ್ಟ್ರದ ಏಕೀಕರಣವನ್ನು ಸಾಧಿಸಿದ್ದೇ ಅಲ್ಲದೆ ರಾಕ್ಷಸನನ್ನು ಚಂದ್ರಗುಪ್ತನ ಪ್ರಧಾನ ಮಂತ್ರಿಯನ್ನಾಗಿ ನಿಯುಕ್ತಿ ಮಾಡಿ, ಎಲ್ಲ ಆಂತರಿಕ ವಿರೋಧಗಳನ್ನು ಬಗೆಹರಿಸುವ ನೈಪುಣ್ಯ ತೋರಿದನು. ಗ್ರೀಕ ದಳಪತಿಯ ಕುವರಿ ಕಾರ್ನೇಲಿಯಾ ಜತೆ ಚಂದ್ರಗುಪ್ತನ ವಿವಾಹವನ್ನು ಸಂಪನ್ನಗೊಳಿಸಿ, ಗ್ರೀಕರೊಡನೆ ದೀರ್ಘಕಾಲದಿಂದ ಬೆಳೆದು ಬಂದಿದ್ದ ಸಮರ ಪರಂಪರೆಯನ್ನು ಅಂತ್ಯಗೊಳಿಸಿದನು. ಹೀಗೆ ಪ್ರಸಾದರು ತಮ್ಮ ಪ್ರತಿಭೆ, ಕಲ್ಪನೆಗಳನ್ನು ಸೂಕ್ತವಾಗಿ ಬಳಸಿಕೊಳ್ಳುವ ಹಕ್ಕನ್ನು ಬಿಟ್ಟುಕೊಡದೆ ಇತಿಹಾಸಕ್ಕೆ ಪ್ರಾಮಾಣಿಕರಾಗಿರಲು ಪ್ರಯತ್ನಿಸಿದ್ದಾರೆ[7].

ಕೆಂಪುನಾರಾಯಣ ಮತ್ತು ಜಯಶಂಕರ ಪ್ರಸಾದ

ವಿಶಾಖದತ್ತನ ಸಂಸ್ಕೃತ ನಾಟಕ 'ಮುದ್ರಾರಾಕ್ಷಸ' ದಲ್ಲಿ ಮುಖ್ಯಪಾತ್ರ ಚಾಣಕ್ಯನದೆಂದು ಹಿಂದೆ ಗಮನಿಸಿದೆ. ಪಾಟಲೀಪುರದಲ್ಲಿ ನಂದರ ಮರಣಾನಂತರ ರಾಜ್ಯಸ್ಥಾಪನೆಗೆ ಚಾಣಕ್ಯ ಮತ್ತು ರಾಕ್ಷಸರಲ್ಲಾದ ಘರ್ಷಣೆಯೇ ಅಲ್ಲಿನ ವಸ್ತುವಾಗಿದೆ. ಹಾಗಾಗಿ ನಾಟಕದ ಘಟನಾ ಸ್ಥಳ ಪಾಟಲೀಪುರವೇ ಆಗಿದೆ. ಇಲ್ಲಿ ವಿದೇಶೀ ಆಕ್ರಮಣಕಾರರಾದ ಅಲೆಕ್ಸಾಂಡರ ಅಥವಾ ಸೆಲ್ಯೂಕಸನ ಪ್ರಸ್ತಾವವಿಲ್ಲ. ಕೇವಲ ಒಬ್ಬಳು ಪ್ರತಿಹಾರಿ ಶೋಣೋತ್ತರೆಯ ಪಾತ್ರವಿದೆ.

ಈ ನಾಟಕವನ್ನೇ ಆಧರಿಸಿ ಗದ್ಯ ಪದ್ಯಗಳಲ್ಲಿ ಇದೇ ವಸ್ತುವನ್ನಿಟ್ಟುಕೊಂಡು ಸಂಸ್ಕೃತದಲ್ಲಿ ಕೃತಿ ರಚನೆ ಮಾಡಿದ್ದ ದಾಕ್ಷಿಣಾತ್ಯರಾದ ಮಹಾದೇವ, ರವಿನರ್ತಕರಾಗಲೀ, ಕನ್ನಡದ ಕೆಂಪುನಾರಾಯಣನಾಗಲೀ ವಿದೇಶೀ ಆಕ್ರಮಣವನ್ನು ಪ್ರಮುಖ ಘಟನೆಯನ್ನಾಗಿ ಚಿತ್ರಿಸಿಲ್ಲ. ನಂದರು ಬಂಧುಗಳನ್ನು ಕೊಂದು, ಸ್ವಜನ ವಿರೋಧವನ್ನು ಕಟ್ಟಿಕೊಂಡಾಗ, ಚಂದ್ರಗುಪ್ತನು ಚಾಣಕ್ಯನನ್ನು ಆಶ್ರಯಿಸಿ, ನೆಪಕ್ಕೆ ಮಾತ್ರ ಪರ್ವತರಾಜನನ್ನು ಯುದ್ಧಕ್ಕೆ ಕರೆತಂದು, ನಂದರು ಸಂಹರಿಸಿದ್ದನ್ನು ಇಲ್ಲಿ ವಿಸ್ತರಿಸಿ ಹೇಳಿದೆ.

ಈ ಕೃತಿಕಾರರು ದಕ್ಷಿಣ ಭಾರತದವರಾದುದರಿಂದ ಪರರಾಷ್ಟ್ರಗಳ ಆಕ್ರಮಣದ ಭಯ ಅವರನ್ನು ಉತ್ತರ ಭಾರತದವರಷ್ಟು ಕಾಡಲಿಲ್ಲ. ಹಾಗಾಗಿ ತಮ್ಮ ಕೃತಿ ರಚನೆ ಮಾಡುವಾಗ ರಾಜ್ಯದಲ್ಲಿಯ ಒಳಜಗಳಗಳನ್ನು ಚಿತ್ರಿಸುವುದರಲ್ಲಿಯೇ ಅವರು ತಮ್ಮ ಪ್ರತಿಭೆಯನ್ನು ಮೆರೆಯಿಸಿದರು. ಅದೇ ಉತ್ತರಭಾರತದ

ದವರಿಗೆ ಹೊರಗಿನವರ ಆಕ್ರಮಣದ ಭೀತಿಯು ಸಾರ್ವಕಾಲಿಕವಾದ್ದರಿಂದ ಅಲ್ಲಿಯ ಕೃತಿಕಾರರು ದೇಶ ಪ್ರೇಮವನ್ನು ಜಾಗ್ರತಗೊಳಿಸಲು, ವಿದೇಶೀಯರನ್ನು ಹೊಡೆದೋಡಿಸಲು ಪ್ರೇರಿಸುವಂತೆ ಕೃತಿ ರಚನೆ ಮಾಡುವುದು ಅಲ್ಲಿಯ ಭೌಗೋಳಿಕ ಅವಶ್ಯಕತೆಯೂ ಆಗಿತ್ತು.

ಈ ಅಂಶಗಳನ್ನು ಗಮನಿಸಿದಾಗ 'ಚಂದ್ರಗುಪ್ತ' ಸಾಹಿತ್ಯದ ದಾಕ್ಷಿಣಾತ್ಯ ಪಾಲವು ರಾಜರುಗಳ ರಾಜ್ಯದ ಒಳ ಜಗಳಗಳಿಗೆ ಒತ್ತುಕೊಟ್ಟರೆ, ಉತ್ತರೀಯ ಪಾಲವು ಇಡೀ ಭಾರತವನ್ನು ವಿದೇಶೀ ಆಕ್ರಮಣದಿಂದ ರಕ್ಷಿಸಿ ಬಲಿಷ್ಠ 'ಏಕಾಧಿಪತ್ಯ ಸಾಮ್ರಾಜ್ಯವನ್ನು ಕಟ್ಟುವಲ್ಲಿ ವಿಶೇಷ ಒತ್ತನ್ನು ನೀಡಿವೆ — ಎಂದು ಮನಗಾಣಬಹುದಾಗಿದೆ. ಹೀಗಾಗಲು ಭೌಗೋಳಿಕ ಕಾರಣವೇ ಪ್ರಮುಖವೆಂದೂ, ಆ ಸನ್ನಿವೇಶಗಳು ಕೃತಿರಚನೆ ಮಾಡುವವರಿಗೆ ವಿಶೇಷ ಪ್ರೇರಣೆ ನೀಡುವುದರಿಂದಲೇ ಕೃತಿಗಳು 'ಸನ್ನಿವೇಶದ ಸೃಷ್ಟಿಗಳು' ಎಂದು ನಿರ್ಣಯಿಸಬಹುದಾಗಿದೆ. ಜಯಶಂಕರ ಪ್ರಸಾದರು ಈ ಕೃತಿ ರಚನೆ ಮಾಡುತ್ತಿದ್ದ ಕಾಲದಲ್ಲಿ, ಬ್ರಿಟಿಷರನ್ನು ಹೊಡೆದೋಡಿಸಲು ಇಲ್ಲಿ ನಡೆಯುತ್ತಿದ್ದ ಹೋರಾಟವು ಇದಕ್ಕೆ ಪೂರಕ ಸನ್ನಿವೇಶವನ್ನುಂಟು ಮಾಡಿತ್ತು — ಎಂಬುದೂ ಗಮನಿಸಬಹುದಾದ ಅಂಶವಾಗಿದೆ.

●●●●●● ●●●●●●

ಟಿಪ್ಪಣಿಗಳು

1. ಧೀರೇಂದ್ರ ವರ್ಮಾ (ಪ್ರಧಾನ ಸಂಪಾದಕರು) 1963 — 'ಹಿಂದಿ ಸಾಹಿತ್ಯಕೋಶ' ಭಾಗ ಎರಡು. ವಾರಣಾಸಿ. ಪು. 382.

2, 2ಎ. ಅದೇ. ಪು. 341.

3. ವಿವರಗಳಿಗೆ ಅದೇ ಪು. 161.

4. ವಿವರಗಳಿಗೆ: ಕೃಷ್ಣಮೂರ್ತಿ ಎಂ.ಎಸ. 1976. 'ಹಿಂದಿ ಸಾಹಿತ್ಯ' ಮೈಸೂರು.ಪು.262–265.

5; 6, 7. ಕ್ರಮಸಂಖ್ಯೆ 1, ಪು. 162–63.

ಅಧ್ಯಾಯ ಎಂಟು

ಒಟ್ಟು ನೋಟ : 256 – 260

ಮುದ್ರಾಮಂಜೂಷ : ಕನ್ನಡ ಸಾಹಿತ್ಯ ಇತಿಹಾಸ ದೃಷ್ಟಿಯಿಂದ ಇತ್ತೀಚಿನ ಕೃತಿ — ಅಶುದ್ಧಪಾಠದ ಪ್ರಚಾರ — ಕನ್ನಡಿಗರ ಅಲಕ್ಷ್ಯ — ಕವಿಯ ವಂಶಸ್ಥರಲ್ಲಿ ದೊರೆತ ಹಸ್ತಪ್ರತಿ — ಉತ್ತರದಿಂದ ದಕ್ಷಿಣದವರೆಗಿನ ಕಥೆಗಳು — ಪಾಠಾಂತರಗಳು ಅಳವಡಿಸಿದ ವಿವಿಧ ಶಾಸ್ತ್ರಗಳು — ಸಮಕಾಲೀನ ವಿಚಾರಗಳು — ಚಾರಿತ್ರಿಕ ಕಾವ್ಯಗಳಲ್ಲಿ ಮುದ್ರಾಮಂಜೂಷದ ಸ್ಥಾನ — ಕೃತಿರಚನೆಯಲ್ಲಿ ಭೌಗೋಳಿಕ ಮಹತ್ವ — ಸಂಸ್ಕೃತದಲ್ಲಿ ಪ್ರತಿಜ್ಞೆ ಕೌಟಿಲ್ಯ ನಾಟಕ — ಕನ್ನಡದಲ್ಲಿ ಇದನ್ನಾಧರಿಸಿದ ಕಾದಂಬರಿಗಳು — ಕಾವ್ಯ — ಯಕ್ಷಗಾನ ಪ್ರಸಂಗಗಳು — ಒಟ್ಟಿನಲ್ಲಿ ಹಿನ್ನೆಲೆ — ಮುನ್ನೆಲೆ. ಹಸ್ತಪ್ರತಿಯ ಮುದ್ರಣದ ಆವಶ್ಯಕತೆ.

ಅಧ್ಯಾಯ ಎಂಟು

ಒಟ್ಟುನೋಟ

ಸುದೀರ್ಘವಾದ ಕನ್ನಡ ಸಾಹಿತ್ಯ ಇತಿಹಾಸದ ದೃಷ್ಟಿಯಿಂದ ಗಮನಿಸಿದರೆ 'ಮುದ್ರಾಮಂಜೂಷ'ವು ಇತ್ತೀಚಿನ ಕೃತಿಯೇ. ಕೇವಲ ನೂರ ಎಪ್ಪತ್ತು ವರ್ಷಗಳಷ್ಟು ಹಿಂದಷ್ಟೇ ರಚಿತವಾಗಿದ್ದರೂ ಇದರ ಭಾಷೆ ಹಳಗನ್ನಡವೆಂಬ ಅಳುಕು ಕೆಲವರಿಗಿದ್ದಂತಿದೆ. ಆದರೆ ವಿದೇಶೀ ಮಿಶನರಿಗಳು ಇದರ ಮಹತ್ವವನ್ನು ಗುರುತಿಸಿ ಇದನ್ನು ಕಳೆದ ಶತಮಾನದಲ್ಲಿಯೇ ಮುದ್ರಿಸಿ ಹೊರತಂದರು. ಕೇವಲ ಎಂಬತ್ತು ವರ್ಷಗಳಲ್ಲಿ ಒಂಬತ್ತು ಸಲ ಮುದ್ರಣವಾದದ್ದೇ ಈ ಗ್ರಂಥದ ಮಹತ್ವವನ್ನು, ಜನಪ್ರಿಯತೆಯನ್ನೂ ಸಾರಿ ಹೇಳುತ್ತದೆ. ಇಷ್ಟಾದರೂ ಇದಕ್ಕೆ ಸಿಗಬೇಕಾದ ಗೌರವ, ಮಾನ್ಯತೆಗಳು ಕನ್ನಡಿಗರಿಂದ ದೊರಕದೆ, ಇದು ಅಲಕ್ಷ್ಯಕ್ಕೀಡಾಗಿದೆ ಎಂದೇ ಹೇಳಬೇಕಾಗುವುದು. 'ಏಕೆಂದರೆ ಮುದ್ರಿತ ಪ್ರತಿಯ ಸಂಪಾದಕರು ಮೂಲಪಾಠವನ್ನು ತಿದ್ದಿಕೊಂಡಿದ್ದರು. ಅದನ್ನವರು ನಮ್ರರಾಗಿ ಹೇಳಿಕೊಂಡಿದ್ದರೂ, ಈ ಕೃತಿಯ ಶುದ್ಧಪಾಠದ ಕಡೆಗೆ ವಿದ್ವಾಂಸರ, ಸಂಶೋಧಕರ ದೃಷ್ಟಿ ಅಷ್ಟಾಗಿ ಹರಿದಿಲ್ಲ. ಕವಿಯ ವಂಶಸ್ಥರು ಇದ್ದರೂ ಅವರನ್ನು ಗುರುತಿಸುವ ಪ್ರಯತ್ನ ಆಗಿಲ್ಲ. ಹಾಗಾಗಿ ಈ ಅಧ್ಯಯನದಲ್ಲಿ ಈ ಎಲ್ಲ ಕಡೆಗೆ ವಿಶೇಷ ಗಮನಹರಿಸಿದೆ.

ಡಾ: ಟಿ.ವಿ. ವೆಂಕಟಾಚಲ ಶಾಸ್ತ್ರಿಗಳವರು ಕೊಟ್ಟ ಸೂಚನೆಯ ಮೇರೆಗೆ ಕವಿಯ ವಂಶಸ್ಥರಾದ ಶ್ರೀಮತಿ ಲಲಿತಮ್ಮ ನಾಡಿಗರವರನ್ನು ಸಂಪರ್ಕಿಸಲಾಯಿತು. ಅವರಲ್ಲಿದ್ದ 'ಮುದ್ರಾಮಂಜೂಷ'ದ ಹಸ್ತಪ್ರತಿಯನ್ನು ಪಡೆದು ಅದನ್ನೇ ಆಧಾರವಾಗಿಟ್ಟುಕೊಂಡು ಈ ಅಧ್ಯಯನವನ್ನು ನಡೆಸಲಾಗಿದೆ. ಈಗಾಗಲೇ ಉಪಲಬ್ಧವಿರುವ ಪ್ರತಿಗಳು ಮತ್ತು ಈ ಹಸ್ತಪ್ರತಿಯು ಒಂದೇ ನಮೂನೆಯಿರುವುದರಿಂದ ಮುದ್ರಿತ ಪ್ರತಿಕಾರರು ಮಾತ್ರ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ — ಎಂಬ ನಿರ್ಣಯಕ್ಕೆ ಬರಲಾಗಿದೆ. ಮುದ್ರಿತ ಪ್ರತಿಯ ಒಂಬತ್ತು ಆವೃತ್ತಿಗಳು ಪ್ರಕಟವಾದ ವರ್ಷಗಳನ್ನು ಸೂಚಿಸಿ, ಅವುಗಳಲ್ಲಿಯ ಲೋಪ, ದೋಷಗಳನ್ನು ತೋರಿಸಿದೆ. ಇತ್ತೀಚೆಗೆ, ಕ್ರಿ.ಶ. 1985ರಲ್ಲಿ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಈ ಕೃತಿಯ ಒಂಬತ್ತನೆಯ ಮುದ್ರಣದ ಯಥಾಪ್ರತಿಯನ್ನು ಪುನ: ಮುದ್ರಿಸಿದ್ದರೂ — ಅದರಲ್ಲಿ ಹೊಸತಾಗಿ ಸೇರಿಕೊಂಡ ತಪ್ಪುಗಳನ್ನು ತೋರಿಸಿಕೊಟ್ಟಿದೆ.

ಹಸ್ತಪ್ರತಿಯ ಪ್ರತಿ ಅಧ್ಯಾಯದ ಆರಂಭದಲ್ಲಿ 'ಗುಂಜಾನರಸಿಂಹಾಯ ನಮ:' ಎಂದಿರುವುದರಿಂದಲೂ ಲಲಿತಮ್ಮನವರ ಹೇಳಿಕೆಯಿಂದಲೂ 'ಗುಂಜಾನರಸಿಂಹ'ನ ದೇವಾಲಯವಿರುವ ತಿರುಮಕೂಡಲು ನರಸೀಪುರವು ಕವಿಯ ಹುಟ್ಟೂರೆಂದು ತೀರ್ಮಾನಿಸಿದೆ. 'ಸೋಸಲೆ ಗರಳಪುರಿ ಶಾಸ್ತ್ರಿಗಳ ಚರಿತ್ರೆ'ಯಲ್ಲಿಯ ದಾಖಲೆಗಳಿಂದ ಮತ್ತು ಲಲಿತಮ್ಮನವರ ಹೇಳಿಕೆಯಿಂದ ಕವಿಯ ವಂಶವೃಕ್ಷವನ್ನು ಸಿದ್ಧಪಡಿಸಲಾಗಿದೆ. ಕವಿಯ ಮಗ, ಮೊಮ್ಮಗ ಮೊದಲಾದವರು ರಾಜಾಸ್ಥಾನದ ವೈದ್ಯಪಂಡಿತರಾಗಿದ್ದುದೂ ಅನ್ಯ ದಾಖಲೆಗಳಿಂದ ಸಿದ್ಧವಾಗಿದೆ. ಕವಿಯ ವಂಶಸ್ಥರಲ್ಲಿ ದೊರೆತ ಇತರ ಗ್ರಂಥಗಳ ಹಸ್ತಪ್ರತಿಗಳ ಎಡೆ ಎಡೆಗಳಲ್ಲಿ ಕವಿಯ

ವೈಯಕ್ತಿಕ ವಿಚಾರದ ಮಾಹಿತಿಗಳೂ ಸಿಕ್ಕಿವೆ. ಇದರಿಂದ ಕವಿಯನ್ನು 'ಸಾರಣಶಾಸ್ತ್ರ' ಗಳೆಂದು ಕರೆಯುತ್ತಿದ್ದರೆಂದು ತಿಳಿದುಬಂದಿದೆ. ಹೀಗೆ ಕವಿ ಮತ್ತು ಕೃತಿಯ ಬಗ್ಗೆ ಹಲವು ಮಹತ್ವಪೂರ್ಣ ಸಂಗತಿಗಳನ್ನು ಬೆಳಕಿಗೆ ತರಲಾಗಿದೆ.

ನಮ್ಮ ದೇಶದಲ್ಲಿ 'ಚಂದ್ರಗುಪ್ತ—ಚಾಣಕ್ಯ' ರ ಕಥೆಯು ವಿವಿಧ ರೂಪಗಳಲ್ಲಿ ಪ್ರಕಟವಾಗಿದೆ. ವಿವಿಧ ಪುರಾಣಗಳು, ಜೈನ — ಬೌದ್ಧ — ಫಾರಸೀ ಪಾಠಾಂತರಗಳು, 'ಮುದ್ರಾರಾಕ್ಷಸ' ನಾಟಕ — ಅದರ ಪೂರ್ವಕಥೆಗಳು — ಹೀಗೆ ವಿವಿಧ ಗ್ರಂಥಗಳು ವಿವಿಧ ಭಾಷೆಗಳಲ್ಲಿ ಈ ಕಥೆಯನ್ನು ಹೇಳುತ್ತಿದ್ದರೂ, ಕನ್ನಡದಲ್ಲಿ ಆ ಎಲ್ಲಾ ಪಾಠಾಂತರಗಳನ್ನು ಒಂದೆಡೆಗೆ ತರುವ ಪ್ರಯತ್ನ ಇದುವರೆಗೆ ಆಗಿಲ್ಲ. ಹಾಗಾಗಿ ಸಂಸ್ಕೃತ ಮೂಲದ ಈ ಕಥೆಗಳನ್ನು ಒಂದೆಡೆ ತರಲಾಗಿದೆ, ಅಲ್ಲದೇ ಉತ್ತರದವರಿಗಿಂತ ದಕ್ಷಿಣದವರೇ ಈ ಕಥೆ ಹೇಳಲು ಹೆಚ್ಚು ಉತ್ಸಾಹ ತೋರಿಸಿದ್ದಾರೆ — ಎಂಬುದನ್ನು ಗಮನಿಸಲಾಗಿದೆ.

ಈ ಕೃತಿಯ ಕಥಾ ವಸ್ತುವಿನ ಉತ್ತರಾರ್ಧ ಭಾಗವು 'ಮುದ್ರಾರಾಕ್ಷಸ' ನಾಟಕದಲ್ಲಿದ್ದರೂ ಇದು ಆ ನಾಟಕದ ಯಥಾವತ ಅನುವಾದವಲ್ಲ. ಕವಿಯು ಹೊಸದಾಗಿ ಅನೇಕ ಅಂಶಗಳನ್ನು ಸೇರಿಸಿಕೊಂಡಿದ್ದಾನೆ. ನಾಟಕದಲ್ಲಿಯ ಕಥಾ ಸರಣಿಯಲ್ಲಿ ಮಾರ್ಪಾಡು ತಂದಿದ್ದಾನೆ. ಪಾತ್ರಗಳಿಗೆ ಸ್ವಂತಿಕೆಯನ್ನು ತಂದುಕೊಟ್ಟಿದ್ದಾನೆ. ವಿಶಿಷ್ಟವಾದ ಭಾಷಾ ಶೈಲಿಯನ್ನು ಉಪಯೋಗಿಸಿದ್ದಾನೆ, ಅಷ್ಟಾದಶ ವರ್ಣನೆಗಳನ್ನೂ, ನವರಸಗಳನ್ನೂ, ಅಲಂಕಾರಗಳನ್ನೂ ತಂದು — ಈ ಕೃತಿಯನ್ನು ಒಂದು ಮಹಾಕಾವ್ಯದ ಎತ್ತರಕ್ಕೆ ಏರಿಸಿದ್ದಾನೆ. ಅಷ್ಟಲ್ಲದೇ ರಾಜಾಸ್ಥಾನದ ವಿದ್ವಾಂಸರುಗಳನ್ನಲ್ಲದೆ ಜನಸಾಮಾನ್ಯರನ್ನೂ ಗಮನದಲ್ಲಿಟ್ಟುಕೊಂಡುದರಿಂದ, ಮಾನವ ಸ್ವಭಾವದ ಸೂಕ್ಷ್ಮಗಳನ್ನು ಅತ್ಯಂತ ಪ್ರಭಾವಿತನಾಗಿ ದಾಖಲಿಸಿದ್ದಾನೆ. ಹಾಗಾಗಿ ಇದು ಸಾಂಪ್ರದಾಯಿಕ ಹಾಗೂ ಹೊಸ ಪರಂಪರೆಯ ಸುವರ್ಣ ಸೇತುವಾಗಿ ಪರಿಣಮಿಸಿದೆ. ಈ ಎಲ್ಲ ಅಂಶಗಳನ್ನು ಉದಾಹರಣೆಗಳೊಂದಿಗೆ ತೋರಿಸಿಕೊಟ್ಟಿದೆ.

ಮುದ್ರಾಮಂಜೂಷವು ಒಂದು ಯುದ್ಧಕಾವ್ಯ. ಇದರ ಪ್ರಮುಖ್ಯ ಪಾತ್ರ ಚಾಣಕ್ಯನದು. ಆತನಿಗೆ ಕೌಟಿಲ್ಯನೆಂಬ ಹೆಸರಿತ್ತೆಂದೂ 'ಅರ್ಥಶಾಸ್ತ್ರ' ವು ಆತನದೇ ಕೃತಿಯೆಂದೂ ಪ್ರಸಿದ್ಧಿಪಡೆದದ್ದು ಜನಜನಿತವಾದ ವಿಚಾರ. ಹಾಗಾಗಿ ಇಲ್ಲಿ 'ಅರ್ಥಶಾಸ್ತ್ರ' ವನ್ನು ಅಂತೆಯೇ ಜ್ಯೋತಿಷ, ಶಾಲಿಹೋತ್ರ (ಪಶುವೈದ್ಯ ವಿಜ್ಞಾನ) ಯೋಗ, ಶಿಲ್ಪಶಾಸ್ತ್ರಗಳನ್ನೂ ಹದವರಿತು ಅಳವಡಿಸಿಕೊಂಡದ್ದನ್ನು ಗುರುತಿಸಲಾಗಿದೆ.

'ಕವಿಯು ಸಮಾಜದ ಕೂಸು. ಕೃತಿಯು ಸಮಾಜದ ಕೈಗನ್ನಡಿ' ಎಂಬ ಮಾತೊಂದಿದೆ. ಕವಿಯು ತನ್ನ ಸುತ್ತಮುತ್ತ ನಡೆಯುತ್ತಿರುವ ಘಟನೆಗಳಿಂದ ಪ್ರಭಾವಿತನಾಗುವುದು ಸ್ವಾಭಾವಿಕ. ಈ ಕೃತಿಯಲ್ಲಿ ಅದು ರಚನೆಯಾದ ಕಾಲದ ಮೈಸೂರಿನ ಚಿತ್ರಣ ಹೇಗೆ ದಾಖಲಾಗಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ತೋರಿಸಲಾಗಿದೆ.

" ಕನ್ನಡದಲ್ಲಿ ಚಾರಿತ್ರಿಕ ಕಾವ್ಯಗಳೇ ವಿರಳ. ಪ್ರಾರಂಭ ಯುಗದ (10–12 ಶತಮಾನಗಳ) ಕನ್ನಡ ಸಾಹಿತ್ಯ ಚಾರಿತ್ರಿಕ ಧ್ವನಿಯನ್ನು ಮಾತ್ರ ಹೊಂದಿರುವಂತಹದಾಗಿದೆ. ಅಲ್ಲಿ ಐತಿಹಾಸಿಕ ವ್ಯಕ್ತಿಗಳು ಪೌರಾಣಿಕ ಪುರುಷರೊಂದಿಗೆ ಸಮೀಕರಿಸಲ್ಪಟ್ಟವರಾಗಿದ್ದಾರೆ. ಆ ಯುಗದಿಂದ ಮುಂದಕ್ಕೆ ಬಂದರೆ ' ನರರನ್ನು ಹೊಗಳುವುದು ಪೊಲ್ಲಮೆ' ಎಂಬ ಧೋರಣೆ ಪ್ರಬಲವಾಗಿ ಕನ್ನಡ ಸಾಹಿತ್ಯದಲ್ಲಿ ತಲೆದೋರಿತ್ತು. ಹೀಗಾಗಿ ಶುದ್ಧ ಚಾರಿತ್ರಿಕ ಕಾವ್ಯಗಳು ಮೊದಲಿನ ಕನ್ನಡ ಸಾಹಿತ್ಯದಲ್ಲಿ ಕಾಣಬರಲೇ ಇಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸಿಕೊಂಡ ಕೆಲೆರಿಕೆಯ ಚಾರಿತ್ರಿಕ ಕಾವ್ಯಗಳು ವಾಸ್ತವವಾಗಿ ಧಾರ್ಮಿಕವೇ ಆಗಿದ್ದುವು. ಇದರಿಂದ ನಮಗೆ ಮೊಟ್ಟಮೊದಲಿಗೆ ಚಾರಿತ್ರಿಕ ಅಥವಾ ವೀರಕಾವ್ಯವೆಂಬ ಹಣೆಪಟ್ಟಿಯಲ್ಲಿ ಸಿಕ್ಕುವಂತಹ ಕೃತಿಯೇ ಹದಿನಾರನೇ ಶತಮಾನದ ರಾಮನಾಥ ಚರಿತ್ರೆ. ಈ ಕಾವ್ಯದ ತರುವಾಯ ಐತಿಹಾಸಿಕಾಂಶಗಳ ಮೇಲೆ ' ತೋಟದರಾಯನ ಸಾಂಗತ್ಯ' ವೆಂಬ ಮತ್ತೊಂದು ಚಾರಿತ್ರಿಕ ಕಾವ್ಯ ರಚನೆಯಾಗಿದೆ ... ಶುದ್ಧವಾಗಿ ಚಾರಿತ್ರಿಕ ಉದ್ದೇಶದಿಂದ ರಚನೆಯಾಗಹೊರಟದ್ದು ಗೋವಿಂದ ವೈದ್ಯನ ' ಕಂಠೀರವ ನರಸರಾಜ ವಿಜಯ' ವು.

" ಕಂಠೀರವ ನರಸರಾಜ ವಿಜಯದ ಬಳಿಕ ಐತಿಹಾಸಿಕ ಸಂಗತಿಗಳನ್ನೊಳಗೊಂಡ ಕಾವ್ಯಗಳು ಚಂಪೂ, ಗದ್ಯ ಪ್ರಕಾರಗಳಲ್ಲಿ ರಚನೆಯಾಗಿವೆ. ಇದನ್ನು ಗಮನಿಸಿದರೆ ಬೆರಳೆಣಿಕೆಗೆ ಸಿಗುವಂತಹ ಒಂದೆರಡು ಕೃತಿಗಳನ್ನು ಬಿಟ್ಟರೆ ಚಾರಿತ್ರಿಕ ಗ್ರಂಥಗಳ ಸಾಮೂಹಿಕ ಸೃಜನ ಮೈಸೂರರಸರ ಕಾಲಕ್ಕೆ ಹಾಗೂ ' ಕಂಠೀರವ ನರಸರಾಜ ವಿಜಯ' ದ ಮುಂದಿನ ಅವಧಿಯಲ್ಲಿ ಎಂಬುದು ತಿಳಿಯುತ್ತದೆ [1].

ಕೆಂಪನಾರಾಯಣನದು ಐತಿಹಾಸಿಕ ಪರಿಕಲ್ಪನೆಯನ್ನು ತಳೆದ, ಸಮಕಾಲೀನ ಅಂಶಗಳನ್ನೊಳಗೊಂಡ ಒಳ್ಳೆಯ ಕಾವ್ಯ — ಅಭಿವ್ಯಕ್ತಿ ಚಾತುರ್ಯ, ಯುಗಧರ್ಮದ ಜನಜೀವನ ಇವುಗಳಿಂದಾಗಿ ಇದು ಚಾರಿತ್ರಿಕ ಹಾಗೂ ಕಾವ್ಯ — ಎರಡೂ ದೃಷ್ಟಿಯಿಂದ ಎಲ್ಲರ ಮೆಚ್ಚುಗೆಗಳಿಸಲು ಸಮರ್ಥವಾದ ಕೃತಿಯಾಗಿದೆ.


ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳನ್ನು ಗುರುತಿಸಿದ ರಾಮೇಗೌಡರು ' ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಂಬಂಧಿಸಿದಂತೆ ಕೆಲವಾರು ಸಣ್ಣಪುಟ್ಟ ಕೃತಿಗಳು ರಚಿತವಾಗಿವೆ. ಉದಾಹರಣೆಗೆ, ಶ್ರೀನಿವಾಸನ(೧೮೪೦)' ಕೃಷ್ಣರಾಜ ವರ್ಷ ವರ್ಧಂತೀ ಶತಕ', ಮುದ್ದಗಿರಿ ನಂಜಪ್ಪರ (೧೮೫೦)' ಕೃಷ್ಣರಾಜೇಂದ್ರ ವಿಲಾಸ', ದೇವಲಾಪುರದ ನಂಜುಂಡನ (೧೮೫೧)' ಕೃಷ್ಣರಾಜ ಪಟ್ಟಾಭಿಷೇಕ ವರ್ಣನೆ' ಅಳಿಯ ಲಿಂಗರಾಜನ (೧೮೨೨-೨೫)' ನರಪತಿ ಚರಿತ' ಮೊದಲಾದವುಗಳನ್ನು ಹೆಸರಿಸಬಹುದು. ಇವೆಲ್ಲ ಒಂದು ರೀತಿಯಲ್ಲಿ ಸ್ತುತಿರೂಪದ ಕೃತಿಗಳು. ವರ್ಧಂತಿ ಉತ್ಸವವೋ ಯುಶೋವರ್ಣನೆಯೋ ಇವುಗಳ ಪ್ರೇರಣೆಯಾಗಿರುತ್ತದೆ. ಇಷ್ಟನ್ನು ಬಿಟ್ಟರೆ ಮಹತ್ತ್ವದ ಅಂಶಗಳೇನೂ ಇರುವುದಿಲ್ಲ [2] ಎಂದಿದ್ದಾರೆ. ಅವರ ಈ ಅಭಿಪ್ರಾಯ ಸರಿಯಲ್ಲ. 'ಏಕೆಂದರೆ ಕ್ರಿ.ಶ. 1823ರಲ್ಲಿ ಕೃತಿ ರಚನೆ ಮಾಡಿದ ಕೆಂಪನಾರಾಯಣನ ಈ ಕೃತಿಯಲ್ಲಿ ಸಾಕಷ್ಟು ಚಾರಿತ್ರಿಕಾಂಶಗಳಿವೆ. ಅದನ್ನು ಈ ಅಧ್ಯಯನದಲ್ಲಿ ತೋರಿಸಿಕೊಡಲಾಗಿದೆ.

' ಚಂದ್ರಗುಪ್ತ — ಚಾಣಕ್ಯರ ಕಥೆ' ಯು ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿನ

ಭಾರತೀಯರಿಗೆ ಸುಪರಿಚಿತವಾದುದು. ದೇಶದ ವಿವಿಧ ಭಾಷೆಗಳಲ್ಲಿ ಈ ಕಥೆಯು ಪ್ರಾದೇಶಿಕ ಹಾಗೂ ಭೌಗೋಳಿಕ ಸಂಗತಿಗಳನ್ನು ಅಳವಡಿಸಿಕೊಂಡಿದ್ದು, ಉತ್ತರ ಭಾರತದ ಪ್ರಮುಖ ಭಾಷೆಯಾದ ಹಿಂದಿಯಲ್ಲಿ ಈ ಕಥೆಯು ರೂಪುಗೊಂಡ ಬಗೆಯನ್ನು ಗುರುತಿಸಲಾಗಿದೆ. ಅದನ್ನು ದಕ್ಷಿಣ ಭಾರತೀಯರ ಕೃತಿಗಳೊಂದಿಗೆ ಹೋಲಿಸಿ ನೋಡಲಾಗಿದೆ. ಇದರಿಂದ 'ಚಂದ್ರಗುಪ್ತ' ಸಾಹಿತ್ಯದ ದಾಕ್ಷಿಣಾತ್ಯ ಪಾಠವು ರಾಜರುಗಳ ಒಳಜಗಳಗಳಿಗೆ ಒತ್ತುಕೊಟ್ಟಿದೆ ಮತ್ತು ಔತ್ತರೇಯ ಪಾಠವು [illegible] ಇಡೀ ಭಾರತವನ್ನು ವಿದೇಶೀ ಆಕ್ರಮಣದಿಂದ ರಕ್ಷಿಸಿ ಬಲಿಷ್ಠ 'ಏಕಾಧಿಪತ್ಯ ಸಾಮ್ರಾಜ್ಯವನ್ನು ಕಟ್ಟುವಲ್ಲಿ ವಿಶೇಷ ಒತ್ತನ್ನು ನೀಡಿದೆ ಎಂಬುದನ್ನು ಮನಗಾಣಲಾಗಿದೆ. ಹೀಗಾಗಲು ಭೌಗೋಳಿಕ ಕಾರಣವೇ ಪ್ರಮುಖವೆಂದೂ, ಅಲ್ಲಲ್ಲಿಯ ಸನ್ನಿವೇಶಗಳು ಕೃತಿರಚನೆ ಮಾಡುವವರಿಗೆ ವಿಶೇಷ ಪ್ರೇರಣೆ ನೀಡಿರುವುದರಿಂದ ಕೃತಿಗಳು 'ಸನ್ನಿವೇಶದ ಸೃಷ್ಟಿಗಳು' ಎಂದೂ ನಿರ್ಣಯಕ್ಕೆ ಬರಲಾಗಿದೆ.

'ಮುದ್ರಾಮಂಜೂಷ' ದಿಂದ ಪ್ರಭಾವಿತವಾಗಿ ಸಂಸ್ಕೃತದಲ್ಲಿ ಒಂದು ನಾಟಕದ ರಚನೆಯಾಗಿದೆ. ಭಾಸನ 'ಸ್ವಪ್ನವಾಸವದತ್ತಾ' ನಾಟಕಕ್ಕೆ ಪೂರಕವಾಗಿ 'ಪ್ರತಿಜ್ಞಾ ಯೌಗಂಧರಾಯಣ' ನಾಟಕವಿರುವಂತೆ ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದ ಪೂರ್ವ ಕಥೆಯನ್ನು ಹೇಳುವ ಈ ನಾಟಕದ ಹೆಸರು 'ಪ್ರತಿಜ್ಞಾ ಕೌಟಿಲ್ಯ' ವೆಂದಾಗಿದೆ. ಇದನ್ನು ಕ್ರಿ.ಶ. 1970ರಲ್ಲಿ ಜಗ್ಗೂವಕುಳರೆಂಬ ಕವಿಗಳು ಬರೆದಿದ್ದಾರೆ. ಕನ್ನಡದಲ್ಲಿ ಕ್ರಿ.ಶ. 1912ರಲ್ಲಿಯೇ ಗಳಗನಾಥರು 'ಮುದ್ರಾಮಂಜೂಷ' ವನ್ನಾಧರಿಸಿ 'ವೈಭವ' ವೆಂಬ ಐತಿಹಾಸಿಕ ಕಾದಂಬರಿಯನ್ನು ಬರೆದಿದ್ದರು. ಕ್ರಿ.ಶ. 1960ರಲ್ಲಿ ಎಚ್.ಎಂ. ಶಂಕರನಾರಾಯಣ ರಾವ ರವರು 'ಮುದ್ರೆಯುಂಗುರ' ವೆಂಬ ಕಾದಂಬರಿಯನ್ನೂ ಕ್ರಿ.ಶ. 1988ರಲ್ಲಿ ರುದ್ರಮೂರ್ತಿ ಶಾಸ್ತ್ರಿಗಳವರು 'ಚತುರ ಚಾಣಕ್ಯ' ವೆಂಬ ಕಾದಂಬರಿಯನ್ನೂ ಬರೆದಿದ್ದಾರೆ. ಕನ್ನಡದ ಜನಪ್ರಿಯ ವಾರಪತ್ರಿಕೆ 'ತರಂಗ' ದಲ್ಲಿ ಕೆ.ಎನ್. ನಾರಾಯಣಾಚಾರ್ಯರು ಬರೆದ — ಇದೇ ವಸ್ತುವನ್ನೊಳಗೊಂಡ ಕಾದಂಬರಿ 'ಆಚಾರ್ಯ ಚಾಣಕ್ಯ' ಧಾರಾವಾಹಿಯಾಗಿ ಪ್ರಕಟವಾಗಿದೆ. 'ಮುದ್ರಾರಾಕ್ಷಸ' ನಾಟಕದ ಅನುವಾದಗಳೂ ಕನ್ನಡದಲ್ಲಿ ಸಾಕಷ್ಟು ಬಂದಿವೆ[3]. ಒಟ್ಟಿನಲ್ಲಿ ಚಂದ್ರಗುಪ್ತ — ಚಾಣಕ್ಯರಿಗೆ ಸಂಬಂಧಪಟ್ಟ ಅನೇಕ ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿವೆ (ನಕ್ಷೆ ನೋಡಿ) ಎಂಬುದು ಸಂತೋಷದ ವಿಷಯವಾದರೂ 'ಮುದ್ರಾಮಂಜೂಷ' ವನ್ನು ಮೀರಿಸುವಂತಹ ಕೃತಿ ಇನ್ನೂ ಬಂದಿಲ್ಲ. ಹಾಗಾಗಿ, ಕವಿಯ ನೈಜ ಪ್ರತಿಭೆಯನ್ನು ಗುರುತಿಸಲು ಶುದ್ಧ ಪಾಠವಿರುವ, ಕವಿಯ ವಂಶಸ್ಥರಲ್ಲಿ ದೊರೆತ ಹಸ್ತಪ್ರತಿಯ ಮುದ್ರಣದ ಅವಶ್ಯಕತೆಯಿದೆ — ಎಂದು ಸ್ಪಷ್ಟವಾಗಿ ಹೇಳಬಹುದಾಗಿದೆ.

'ಮುದ್ರಾಮಂಜೂಷ' ದ ಹಿನ್ನೆಲೆ ಮತ್ತು ಮುನ್ನೆಲೆ



ಜಗ್ಗುವಕುಳಭೂಷಣ
1970
'ಪ್ರತಿಜ್ಞಾಕೌಟಿಲ್ಯಂ'
(ಸಂಸ್ಕೃತ ನಾಟಕ)

1) ಗಳಗನಾಥರು
1912
'ವೈಭವ'
(ಕನ್ನಡ ಕಾದಂಬರಿ)

2) ಶಂಕರನಾರಾಯಣ ರಾವ್ ಎಚ್.ಎಂ.
1960
'ಮುದ್ರೆಯುಂಗುರ'
(ಕನ್ನಡ ಕಾದಂಬರಿ)

3) ರುದ್ರಮೂರ್ತಿ ಶಾಸ್ತ್ರಿ
1988
'ಚತುರ ಚಾಣಕ್ಯ'
(ಕನ್ನಡ ಕಾದಂಬರಿ)

4) ನಾರಾಯಣಾಚಾರ್ಯ ಕೆ.ಎಸ್.
1991
'ಆಚಾರ್ಯ ಚಾಣಕ್ಯ'
(ಕನ್ನಡ ಕಾದಂಬರಿ)

ತಾಳ್ತಜೆ ಕೃಷ್ಣ ಭಟ್ಟ
'ಚಾಣಕ್ಯ ಸಾಹಸ'
(ಕನ್ನಡ ಕಾವ್ಯ)

1) ನಾರಾಯಣ ಉಪಾಧ್ಯ
1975
'ಚಂದ್ರಗುಪ್ತ ಚರಿತೆ'
(ಕನ್ನಡ ಯಕ್ಷಗಾನ ಪ್ರಸಂಗ)

2) ತಾಳ್ತಜೆ ಕೃಷ್ಣ ಭಟ್ಟ
'ಆರ್ಯ ಚಾಣಕ್ಯ'
(ಕನ್ನಡ ಯಕ್ಷಗಾನ ಪ್ರಸಂಗ)

ಟಿಪ್ಪಣಿಗಳು

1. ವಿಜಯಲಕ್ಷ್ಮಿ ಆರ್.ಎಸ್. 1982 'ಗೋವಿಂದ ವೈದ್ಯ' (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ೫ ರಲ್ಲಿ) ಬೆಂಗಳೂರು ಪು. 29–34.
2. ರಾಮೇಗೌಡ 1992 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಮೈಸೂರು ಪು 454.
3. ನೋಡಿ: ಅನುಬಂಧ.

ಅನುಬಂಧ - ೧

ನಾಮಾನುಕ್ರಮಣಿಕೆ

(ಈ ಗ್ರಂಥದಲ್ಲಿ ಬಂದಂತಹ ವ್ಯಕ್ತಿ, ನಗರ, ನದಿ, ಪರ್ವತ ಮೊದಲಾದವುಗಳ ಹೆಸರುಗಳ ಅನುಕ್ರಮಣಿಕೆ)

ಅಂಗಾರವರ್ಮ : ಪರ್ವತೇಶ್ವರನ ಸೋದರಮಾವ. ಯುದ್ಧ ಸಮಯದಲ್ಲಿ ಪರ್ವತರಾಜ್ಯದ ರಾಜಧಾನಿಯ ಪುರರಕ್ಷಕನಾಗಿದ್ದವನು.

ಅಘನಾಶಿನೀ ನದಿ : ನಂದರ ವಿರುದ್ಧ ಯುದ್ಧಕ್ಕೆ ಹೊರಟಾಗ ಪರ್ವತಸೇನೆಯು ಈ ನದೀ ದಂಡೆಯಲ್ಲಿ ಸೇರಿತ್ತು.

ಅವಂತೀ ದೇಶಾಧಿಪ : ನಂದರ ಸಾಮಂತ ರಾಜ.

ಅಳಗಿರಿ : ಚಂದ್ರಗುಪ್ತನಿಗೆ ಪರ್ವತರಾಜನು ಒದಗಿಸಿದ ಮದದಾನೆ. (ಮುದ್ರಾರಾಕ್ಷಸ — ನಾಟಕದಲ್ಲಿ ಚಂದ್ರಗುಪ್ತನ ಆನೆಯ ಹೆಸರು ಚಂದ್ರಲೇಖ)

ಆಂಧ್ರರಾಜ : ನಂದರ ಪಕ್ಷದವನಾದರೂ ಈತ ಯುದ್ಧ ಸಮಯದಲ್ಲಿ ಶತ್ರುಗಳ ಪರ ವಹಿಸಿದ್ದ.

ಇಂದುಶರ್ಮ : ನೈಮಿಷಾರಣ್ಯದಲ್ಲಿ ಮನೆ ಮಾಡಿಕೊಂಡಿದ್ದ ಚಾಣಕ್ಯನ ಮಿತ್ರ.

ಉಪನಂದ : ನಂದರಲ್ಲಿ ಮೂರನೆಯವನು.

ಉಲೂಕ : ಪರ್ವತರಾಜನ ವೃದ್ಧ ಮಂತ್ರಿ.

'ಓಢ್ರದೇಶಾಧಿಪ : ನಂದರ ಮೇಲೆ ಹಿಂದೆ ಯುದ್ಧಕ್ಕೆ ಬಂದಿದ್ದವನು.

ಕಮಲಾಪೀಡ : ಪರ್ವತೇಶ್ವರನ ಕಡೆಯ ನಿಯೋಗಿ.

ಕರಭಕ : ರಾಕ್ಷಸನ ಗುಪ್ತಚರ.

ಕರ್ಕಟಕ : ರಾಕ್ಷಸನ ಕಡೆಯವನಾದ ಭವನಪಾಲಕ.

ಕಲವಿಂಕ : ಮಲಯಕೇತುವಿನ ಕಂಚುಕಿ.

ಕಲಶ : ರಾಕ್ಷಸನಿಗೆ ಆಪ್ತನಾದ, ಚಂದ್ರಗುಪ್ತನ ಆಸ್ಥಾನದ ಸ್ತುತಿಪಾಠಕ.

ಕಳಿಂಗ : ನಂದರ ಸಾಮಂತರಾಜ.

ಕಾಂತಿಮಾಲಿನಿ : ಪರ್ವತರಾಜನ ಪುತ್ರಿ.

ಕಾಂಭೋಜಪತಿ : ಪರ್ವತೇಶ್ವರನ ಅಧೀನರಾಜ.

ಕಾಪಿಶಾಯನ : ಮದ್ಯವಿಶೇಷ.

ಕಾಮಂದಕ ಮುನಿ : ಪ್ರಾಚೀನ ಕಾಲದಲ್ಲಿದ್ದ, ರಾಜನೀತಿ ಉಪದೇಶಕ ಮುನಿ.

ಕಾಮರೂಪ ದೇಶಾಧಿಪತಿ : ನರಕಾಸುರನ ವಂಶದಲ್ಲಿ ಜನಿಸಿದವನು. ಚಾಣಕ್ಯನ ಭೇದನೀತಿ ಗೊಳಗಾಗಿ ಲಂಪಾಕಾಧಿಪತಿಯನ್ನು ಸೋಲಿಸುತ್ತಾನೆ.

ಕಾಲನೇಮಿ : ಪುಲಸ್ತ್ಯಪುತ್ರನ ಕಾರ್ಯಕ್ಕೋಸ್ಕರ ಋಷಿ ವೇಷವನ್ನು ಧರಿಸಿ, ಆಂಜನೇಯನನ್ನು ವಂಚಿಸಲೆಳಸಿದವನು.

ಕಾಶಿದೇಶಾಧೀಶ್ವರ : ದಿವೋದಾಸ ಮಹಾರಾಜರ ವಂಶಸ್ಥ, ನಂದರ ಆಪ್ತಮಿತ್ರ.

ಕಿಟ್ಟಂಭಟ್ಟ : ಪಾಟಲೀಪುರದ ಒಬ್ಬ ವೈದಿಕ ಬ್ರಾಹ್ಮಣ.

ಕಿರಾತಾಧಿಪತಿ : ಪರ್ವತರಾಜನ ಅಧೀನನು.

ಕಿಶೋರ ಘೋರ್ಪಡೆ : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ಕೀಕಸದೇಶ : ಪರ್ವತರಾಜನ ದೇಶದ ಹೆಸರು.

ಕುದ್ದಾಲಿಕ : ಪರ್ವತರಾಜನ ಸೇನಾ ಮುಂದಾಳು.

ಕುಪ್ಪಶಾಸ್ತ್ರಿ : ಪಾಟಲೀಪುರದ ಒಬ್ಬ ವೈದಿಕ ಬ್ರಾಹ್ಮಣ.

ಕುಮಾರಭವನ : ನಂದರ ವಿನೋದದ ವಿಹಾರ ಗೃಹ.

ಕುರುನಂದ : ನಂದರಲ್ಲಿ ಆರನೆಯವನು.

ಕುಲೂತಪತಿ : ಪರ್ವತೇಶ್ವರನ ಅಧೀನರಾಜ.

ಕುಶಬರ್ಹಿ : ಚಾಣಕ್ಯನ ಶಿಷ್ಯ.

ಕುಸುಮಪುರ : ಪಾಟಲೀಪುರದ ಇನ್ನೊಂದು ಹೆಸರು.

ಕುಸುಮರೇಖೆ : ಸುನಂದಾ ದೇವಿಯ ಆಪ್ತಚೇಟಿ.

ಕೃಷ್ಣದಾಸ : ಮಲಯಪತಿ ಸಂಹನಾದನಲ್ಲಿದ್ದ ನಂದರ ಗೂಢಮಂತ್ರಿ.

ಕೇಶವದಾಸ : ಕಾಶಿಪಟ್ಟಣದಲ್ಲಿದ್ದನೆಂದು ಹೇಳಲಾದ ವರ್ತಕ.

ಕೊಂಕಣಪತಿ : ಈತ ನಂದರ ಪರವಾಗಿ ಯುದ್ಧಕ್ಕೆ ಹೋಗಿದ್ದರೂ ಅಲ್ಲಿ ಯುದ್ಧಮಾಡದೇ ಶತ್ರುಗಳಿಗೆ ಮಿತ್ರನಂತಿದ್ದ.

ಕೌಮುದೀ ಮಹೋತ್ಸವ : ಶರತ್ಕಾಲದಲ್ಲಿ ಪಾಟಲೀಪುರದಲ್ಲಿ ಜರಗುವ ಉತ್ಸವ ವಿಶೇಷ.

ಕ್ರೌಂಚಪ್ರಸ್ಥ : ನಂದ ಸಾಮ್ರಾಜ್ಯದ ಗಡಿನಾಡ ಪ್ರದೇಶ.

ಕ್ಷಾಮಕ : ಸರ್ವಾರ್ಥಸಿದ್ಧಿರಾಯನ ಬೀಸಣಿಗೆಯ ಭೃತ್ಯ.

ಗಂಗಾನದಿ : ಪರ್ವತೇಶ್ವರನ ಸೇನೆಯು ಪಾಟಲೀಪುರಕ್ಕೆ ಬರಲು ದಾಟಬೇಕಾಗಿದ್ದ ನದಿ.

ಗಂಡಕೀ ನದಿ : ಪಾಟಲೀಪುರದ ಆಗ್ನೇಯ ದಿಕ್ಕಿನಲ್ಲಿರುವ ನದಿ.

ಗಂಧಮಾದನ : ನಂದರ ಪಟ್ಟದಾನೆ.

ಗಾಂಧಾರಪತಿ : ಪರ್ವತರಾಜನ ಸಾಮಂತ.

ಗಿರಿವರ್ಮ (ಲಂಪಾಕಾಧಿಪತಿ) : ಪರ್ವತರಾಜ್ಯದ ಮೇಲೆ ದಂಡೆತ್ತಿಬರಲು ಸಿದ್ಧತೆ ಮಾಡಿದ್ದವನು.

ಗಿರಿವ್ರಜ : ಪರ್ವತೇಶ್ವರನ ಸೇನೆಯು ಪಾಟಲೀಪುರಕ್ಕೆ ಬರಲು ದಾಟಬೇಕಾಗಿದ್ದ ಸ್ಥಳ.

ಗುಪ್ತಿ : ಸ್ವರ್ಣದಂಡದಲ್ಲಿ ಹುದುಗಿಸಿಟ್ಟುಕೊಂಡಿದ್ದ ರಾಕ್ಷಸನ ಶಸ್ತ್ರ.

ಗೊಲ್ಲ : ನಂದರ ಒಳ ಬೊಕ್ಕಸದ ಅಧಿಕಾರಿ.

ಗೌಡದೇಶ : ನಂದರ ಸಾಮ್ರಾಜ್ಯ.

ಘೂರ್ಜರದೇಶಾಧಿಪ : ನಂದರ ಸಾಮಂತರಾಜ.

ಚಂದನದಾಸ : ರಾಕ್ಷಸನಿಗೆ ಪ್ರಿಯನಾದ ಪಾಟಲೀಪುರದ ವರ್ತಕ, ಬುದ್ಧಮತಸ್ಥ ಬಳೆಗಾರ ಶೆಟ್ಟಿ.

ಚಂದ್ರಗುಪ್ತ : ಮೌರ್ಯಪುತ್ರ. ಕೊನೆಯಲ್ಲಿ ಗೌಡದೇಶಾಧಿಪತಿ.

ಚಂಪಕಪತಿ : ನಂದರ ದುರ್ಗವೊಂದರ ರಕ್ಷಕ.

ಚಾಣಕ್ಯ : ಮಹಾತೇಜಸ್ವಿಯಾದ ಬ್ರಾಹ್ಮಣ. ದಂಡನೀತಿಶಾಸ್ತ್ರವಿಶಾರದ.

ಚಿತ್ರವರ್ಮ (ಕುಲೂತಪತಿ) : ಪರ್ವತೇಶ್ವರನ ಅಧೀನರಾಜ.

ಚೀಣದೇಶಾಧಿಪತಿ : ಪರ್ವತೇಶ್ವರನ ಅಧೀನರಾಜ.

ಚೋರರು : ಚಾಣಕ್ಯನು ನೇಮಿಸಿದ್ದ ಕಳ್ಳಭಟರು.

ಛಾಗಮಚ್ಛ : ಚಾಣಕ್ಯನ ಪ್ರಿಯಶಿಷ್ಯ.

ಜನಶಾಂತ : ಚಂಪಕಾವತಿ ನಗರದ ಮುಖ್ಯಸ್ಥ.

ಜೀಮೂತ : ಚೀನ ದೇಶಾಧಿಪತಿಯ ತಮ್ಮ.

ಜೀವಸಿದ್ಧಿ : ಬೌದ್ಧ ಸನ್ಯಾಸಿ ವೇಷದ ಇಂದುಶರ್ಮ (ಕ್ಷಪಣಕ).

ಜ್ಯೇಷ್ಠ ನಂದ : ನಂದ ರಾಜಕುಮಾರರಲ್ಲಿ ಹಿರಿಯವನು.

ಡಿಂಗಿರಾತ : ನಂದರ ಅಷ್ಟಸೇನಾಪತಿಗಳಲ್ಲೊಬ್ಬ.

ತರಂಗಿಣೀನದಿ : ಕಾಮರೂಪ ಮತ್ತು ಲಂಪಾಕ ರಾಜ್ಯಗಳ ನಡುವಿರುವ ನದಿ.

ತುಲಜಾ ಖಂಡು : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ದಂಡಕ : ಪಾಟಲೀಪುರದ ತಳವಾರ.

ದಂಡಪಾಶಕ : ಪಾಟಲೀಪುರದ ಶೂಲಾರೋಹಣಾಧಿಕಾರಿ.

ದಾತ್ಯೂಹಕ : ಪರ್ವತರಾಜನ ಒಬ್ಬ ಕಂಚುಕಿ.

ದಾರುವರ್ಮ	:	ರಾಕ್ಷಸನ ಆಪ್ತನಾದ ಶಿಲ್ಪಿ.
ದಾಶ	:	ಪರ್ವತರಾಜನ ಅನುಯಾಯಿ; ನಾವಿಕರ ಮುಖಂಡ.
ದುರ್ಗಪಾಲಕ	:	ಪಾಟಲೀಪುರದವನು.
ಧನಗುಪ್ತ	:	ಕುಲೂತಪತಿಯಲ್ಲಿರುವ ನಂದರ ಗೂಢಮಂತ್ರಿ.
ಧನಸೇನ	:	ಬಳೆಗಾರ ಶೆಟ್ಟಿ ಚಂದನದಾಸನ ಆಪ್ತಮಿತ್ರ.
ನಿಪುಣಕ	:	ಇಂಗಿತಜ್ಞನಾದ ಚಾಣಕ್ಯನ ದೂತ.
ನೈಮಿಷಾರಣ್ಯ	:	ಗೋಮತೀ ತೀರದಲ್ಲಿದ್ದ ಮಹಾಪವಿತ್ರವಾದ ವನ.
ಪತ್ತೇ ಬಹದ್ದೂರ	:	ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.
ಪರಶುರಾಮ	:	ಭೃಗುಕುಲೋತ್ಪನ್ನನಾಗಿ ಕ್ಷತ್ರಿಯ ಕುಲವನ್ನು ನಾಶ ಮಾಡಿದವನು.
ಪರ್ವತೇಶ್ವರ	:	ಕೀಕಸ ರಾಜ್ಯಾಧಿಪತಿ. ಅಪರಿಮಿತ ಸೇನಾಪರಿವೃತನು.
ಪಶುಲೋಮಕ	:	ಚಾಣಕ್ಯನ ಒಬ್ಬ ಶಿಷ್ಯ.
ಪಾಪಾಶಾಸ್ತ್ರಿ	:	ಪಾಟಲೀಪುರದ ಒಬ್ಬ ವೈದಿಕ ಬ್ರಾಹ್ಮಣ.
ಪಾಟಲೀಪುರ	:	ಗೌಡ ದೇಶದ ರಾಜಧಾನಿ.
ಪಿಂಗಲ	:	ರಾಕ್ಷಸನ ಒಬ್ಬ ದೂತ.
ಪುರುಷೋತ್ತಮಲಾಲ	:	ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.
ಪುರುಷದತ್ತ	:	ನಂದರ ಅಷ್ಟಸೇನಾಪತಿಗಳಲ್ಲೊಬ್ಬ.
ಪುಷ್ಕರಾಕ್ಷ (ಕಾಶ್ಮೀರಪತಿ)	:	ಪರ್ವತೇಶ್ವರನ ಅಧೀನರಾಜ.
ಪುಷ್ಕರ	:	ಮಲಯಕೇತುವಿನ ಒಬ್ಬ ಕಂಚುಕಿ.
ಪುಷ್ಪದಂತ	:	ನಂದರ ವೃದ್ಧಮಂತ್ರಿಯಾದ ವಕ್ರನಾಸನ ಪುತ್ರ.
ಪ್ರನಂದ	:	ನಂದರಲ್ಲಿ ನಾಲ್ಕನೆಯವನು.
ಪ್ರಯಾಗ	:	ಗಂಗಾ ಯಮುನಾ ಸಂಗಮ ಸ್ಥಳ. ಮಹೋದಯ ಪುಣ್ಯಕಾಲ ಸ್ನಾನವಿಶೇಷ.
ಪ್ರಿಯನಂದ	:	ನಂದರಲ್ಲಿ 'ಏಳನೆಯವನು.
ಪ್ರಾಗ್ಜ್ಯೋತಿಷಪುರ	:	ಕಾಮರೂಪ ದೇಶದ ರಾಜಧಾನಿ.
ಬಂಗಾಳಪತಿ	:	ಹಿಂದೆ ನಂದರ ಮೇಲೆ ಯುದ್ಧಕ್ಕೆ ಬಂದಿದ್ದವನು. ಈಗ ಅಧೀನರಾಜ.
ಬಂದಿಭಟ್ಟ	:	ಪಾಟಲೀಪುರದ ನಿವಾಸಿ ವೈದಿಕ ಬ್ರಾಹ್ಮಣ.
ಬರ್ಬರಕ	:	ನಂದರ ಪಟ್ಟದಾನೆಯ ಮಾವುತ.
ಬಾಗುರಾಯಣ	:	ನಂದರ ಅಷ್ಟಸೇನಾಪತಿಗಳಲ್ಲಿ ಪ್ರಮುಖ. ಮಲಯಕೇತುವನ್ನು ನಂಬಿಸಿ ಆತನಿಗೆ ಆಪ್ತನಾಗಿ ಇದ್ದವನು.
ಬಾಲದಾಸ	:	ಕಾಂಭೋಜದಲ್ಲಿದ್ದ ನಂದರ ಗೂಢಮಂತ್ರಿ.

ಭದ್ರಕ : ವಿಂಧ್ಯವನವಾಸಿಯಾದ ನಂದರ ಕಡೆಯ ಭಿಲ್ಲ ಸೇನಾಧಿಪತಿ.

ಭದ್ರಭಟ : ನಂದರ ಅಷ್ಟ ಸೇನಾಪತಿಗಳಲ್ಲೊಬ್ಬ.

ಭವನಾಧಿಕಾರಿ : ನಂದರ ಅರಮನೆಯ ಅಧಿಕಾರಿ.

ಭಿಲ್ಲಮಾತಂಗ : ಪರ್ವತರಾಜನ ಕಡೆಯ ಕಿರಾತಾಧಿಪತಿ.

ಭೋಜಪತಿ : ನಂದರ ಸಾಮಂತರಾಜ.

ಮಗಧಪತಿ : ಪರ್ವತರಾಜನ ಕಡೆಯಿಂದ ನಂದರ ವಿರುದ್ಧ ಯುದ್ಧಕ್ಕೆ ಬಂದವನು.

ಮತ್ಸ್ಯದೇಶಾಧಿಪತಿ : ನಂದರ ಆಪ್ತಮಿತ್ರರಲ್ಲೊಬ್ಬ.

ಮರಾಳಕ : ಚಾಣಕ್ಯನು ನೇಮಿಸಿದ್ದ ಗೂಢಚಾರ.

ಮಲಯಕೇತು : ಪರ್ವತರಾಜನ ಕುಮಾರಕ.

ಮಲ್ಲಭಟ್ಟ : ಪಾಟಲೀಪುರದ ನಿವಾಸಿ ವೈದಿಕ ಬ್ರಾಹ್ಮಣ.

ಮಹತಾಪಜಂಗ : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ಮಹಾನದಿ : ಪಾಟಲೀಪುರಕ್ಕೆ ಅಗಳಾಗಿರುವ ನದಿ.

ಮಾತಂಗ : ಪರ್ವತೇಶ್ವರನ ಅಧೀನನಾದ ಕಿರಾತಾಧಿಪತಿ.

ಮಾರ್ವಾಡದೇಶಾಧಿಪತಿ : ನಂದರ ಸಾಮಂತರಾಜ.

ಮಾನಸೋಪವಾಸಿ : ಇಂದು-ಶರ್ಮನ ಶಿಷ್ಯ.

ಮಿತ್ರನಂದ : ನಂದರಲ್ಲಿ ಎಂಟನೆಯವನು.

ಮುಕುಂದ ಗೋಸಾವಿ: ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ಮುಕುಂದದಾಸ : ಪಾರಶೀಕಪತಿಯಲ್ಲಿ ನಂದರ ಗೂಢಮಂತ್ರಿ.

ಮುಯಾಶೀ ಗ್ರಾಮ : ನಂದ ಸೇನಾಪತಿ ಡಿಂಗಿರಾತನ ವಶವಿದ್ದ ಗ್ರಾಮ.

ಮುನವಳ್ಳಿ ಕಣವೆ : ಯುದ್ಧಾರಂಭದಲ್ಲಿ ಇಲ್ಲಿಯ ಹಳ್ಳದಲ್ಲಿ ಶಕಸೇನೆ ನಿಂತಿತ್ತು.

ಮುರಾದೇವಿ : ಸರ್ವಾರ್ಥಸಿದ್ಧಿಯ ಅತಿ ಪ್ರೇಮಾಸ್ಪದಳಾದ ಪ್ರಿಯಪತ್ನಿ.

ಮೇಘನಾದ (ಪಾರಶೀಕಪತಿ) : ಪರ್ವತೇಶ್ವರನ ಅಧೀನ ರಾಜ.

ಮೈತ್ರಿಲ : ನಂದರ ಮಿತ್ರಪಕ್ಷದವ.

ಮೌರ್ಯ : ಸರ್ವಾರ್ಥಸಿದ್ಧಿರಾಯನ ದಾಸೀಪುತ್ರ.

ಯಶವಂತರಾವ : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ರಾಜಪುರಾಣಿಕ : ನಂದರ ಆಸ್ಥಾನದಲ್ಲಿಯ ಪುರಾಣಪಾಠ ಹೇಳುತ್ತಿದ್ದವನು.

ರಾಮಸಿಂಗ : ನಂದ ಸಾಮ್ರಾಜ್ಯದ ಗಡಿನಾಡು ಕಾಶಪ್ರಸ್ಥದಲ್ಲಿದ್ದ ಅಧಿಕಾರಿ.

ರಾಮಾಜಿವಾಘ್ಮಾರ : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ರಾಯಸದವ : ರಾಜಶಾಸನ ಲೇಖಕ.

ರುಕ್ಮ : ನಂದರ ಕೋಶಾಧಿಕಾರಿ.

ರುದ್ರವರ್ಮ : ನಂದರ ಪಕ್ಷದವ. ಮಗಧಪತಿಯ ಸಂಬಂಧಿ.

ಲಘ್ನನೋಜ : ಮಲಯಕೇತುವಿನ ಬಳಿಗೆ ಬಂದ ನಂದರ ಕಡೆಯ ಸರದಾರ.

ಲೋಕನಂದನ : ನಂದರಲ್ಲಿ ಐದನೆಯವನು.

ಲೋಹಿತಾಕ್ಷ : ನಂದರ ಅಷ್ಟಸೇನಾಪತಿಗಳಲ್ಲೊಬ್ಬ.

ವಕ್ರನಾಸ : ಸರ್ವಾರ್ಥಸಿದ್ಧಿಯ ವೃದ್ಧಮಂತ್ರಿ.

ವಜ್ರದಾಸ : ಗಾಂಧಾರಪತಿಯಲ್ಲಿ ನಂದರ ಗೂಢಮಂತ್ರಿ.

ವತ್ಸಲಾಯನ : ಬಾಗುರಾಯಣನ ತಮ್ಮ.

ವಲ್ಲಭರಾಜ : ವಿಷಕನ್ಯೆಯು ಈತನ ಮಗಳೆಂದು ಕ್ಷಪಣಕನು ಹೇಳುತ್ತಾನೆ.

ವಸಂತವನ : ಪಾಟಲೀಪುರದ ಉತ್ತರದಿಕ್ಕಿನಲ್ಲಿದ್ದ ವನ.

ವಾಣೀವಿಲಾಸ : ವಿದ್ವಾಂಸರ ಗೋಷ್ಠಿಗೆ ಯೋಗ್ಯವೆನ್ನಲಾದ ಪಾಟಲೀಪುರದ ಅರಮನೆಯ ತೋಟ.

ವಾಸಕ : ರಾಕ್ಷಸನ ಕಡೆಯ ಗೂಢಚಾರ.

ವಿಜಯ : ಚಂದ್ರಗುಪ್ತನ ಆಸ್ಥಾನದಲ್ಲಿದ್ದ, ರಾಕ್ಷಸನ ಕಡೆಯ ವಂದಿ ಮಾಗಧ.

ವಿಜಯವರ್ಮ : ನಂದರ ಅಷ್ಟಸೇನಾಪತಿಗಳಲ್ಲೊಬ್ಬ.

ವಿಜಯಸಿಂಗು : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ವಿದರ್ಭ : ನಂದರ ಸಾಮಂತರಾಜ.

ವಿನಂದ. : ನಂದರಲ್ಲಿ ಒಂಬತ್ತನೆಯವನು.

ವಿನತ : ರಾಕ್ಷಸನ ಮೈಗಾವಲಿನ ಜನಕ್ಕೆ ಗೊತ್ತುಗಾರ.

ವಿರಾಧಗುಪ್ತ : ರಾಕ್ಷಸನ ಕಡೆಯ ಗುಪ್ತಚಾರ.

ವಿರೂಪಾಕ್ಷ : ಮೌರ್ಯನಿಂದ ಕಾಶಿಯಲ್ಲಿ ಪ್ರತಿಷ್ಠಾಪಿತವಾಗಿದೆಯೆಂದು ಹೇಳಲಾದ ದೇವರು.

ವಿರೋಚನ : ಪರ್ವತರಾಜನ ತಮ್ಮ.

ವಿಶ್ವಾವಸು : ಒಬ್ಬ ಬ್ರಾಹ್ಮಣ.

ವಿಷಕನ್ಯೆ : ರಾಕ್ಷಸನಿಂದ ಚಂದ್ರಗುಪ್ತನ ಬಳಿಗೆ ಕಳುಹಿಸಲ್ಪಟ್ಟವಳು.

ವಿಷ್ವಚುಂಬಿನಿ : ಚಾಣಕ್ಯನ ಬಳಿಯಿರುವ, ಶಿಲೆಯಿಂದ ನಿರ್ಮಿಸಲಾದ ಬಟ್ಟಲು.

ವಿಷ್ಣುದಾಸ (1) : ನಂದರ ಕಡೆಯ ನಿಯೋಗಿ.

ವಿಷ್ಣುದಾಸ (2) : ಚಂದನದಾಸನ ಮಿತ್ರ, ಪಾಟಲೀಪುರದ ವರ್ತಕ.

ವೀತಹವ್ಯ : ಸರ್ವಾರ್ಥಸಿದ್ಧಿರಾಯನ ಬಳಿ ಬಂದ ಮುನಿ.

ವೀರವರ್ಮ
('ಒಢ್ರದೇಶಾಧಿಪತಿ) : ನಂದರ ಸಾಮಂತರಾಜ.

ವೇಗವರ್ಮ : ಇಂದುಶರ್ಮನ ಶಿಷ್ಯ.

ವೇಣರಾಯ : ಶುದ್ಧ ಕ್ಷತ್ರಿಯನಾಗಿದ್ದರೂ ದುರಾತ್ಮಕನಾದ ಅರಸು.

ಶಕಟದಾಸ : ಲೋಕಾಂತಯುತ ವತಸ್ಥ, ರಾಕ್ಷಸನ ರಾಯಸದವನು.

ಶಕಸೇನಾಪತಿ : ಪರ್ವತರಾಜನ ಅಧೀನರಾಜ.

ಶಬರವರ್ಮ : ಪರ್ವತರಾಜನ ಮಂತ್ರಿ. ಶೇಖರನ ಸೋದರಮಾವ.

ಶರಾವತಿ ನದಿ : ಶಾಹುರೀಪಟ್ಟಣದ ಸರಹದ್ದಿನಲ್ಲಿರುವ ನದಿ.

ಶಾರ್ಙ್ಗರವ : ಚಾಣಕ್ಯನ ಪ್ರಿಯಶಿಷ್ಯ.

ಶಾರೀಕಶೆಟ್ಟಿ : ಕಾಶ್ಮೀರಪತಿಯಲ್ಲಿ ನಂದರ ಗೂಢಮಂತ್ರಿ.

ಶಾಹುರೀನಗರ : ಪರ್ವತರಾಜ್ಯದ ರಾಜಧಾನಿ.

ಶಿವವರ್ಮ : ಸುಂದರಗಢದ ದುರ್ಗಪಾಲಕ.

ಶೀಘ್ರಕಾರಿ : ಚಾಣಕ್ಯನ ಶಿಷ್ಯ.

ಶುಕ್ರಾಚಾರ್ಯ : ಭೃಗುನಂದನ.

ಶೂರಸೇನ (ನಾಗ್ನ ದೇಶಾಧಿಪತಿ) : ಗಿರಿವರ್ಮನ ಮಿತ್ರತ್ವ ಬೆಳೆಸಿದವನು.

ಶೂರಸೀ ಜಪ : ನಂದರು ಶತ್ರು ನಿಗ್ರಹಾರ್ಥವಾಗಿ ಮಾಡಲು ಅಪೇಕ್ಷಿಸಿದ್ದ ಜಪಹೋಮ.

ಶೃಂಗಾರಪಾಳ್ಯ : ನಂದ ಸಾಮ್ರಾಜ್ಯದ ಒಂದು ಭಾಗ.

ಶೇಖರ : ಚಂದ್ರಗುಪ್ತನ ಅಂತಃಪುರದ ಕಂಚುಕಿ.

ಶೋಣಭದ್ರಾನದಿ : ಪರ್ವತಸೇನೆಯು ಪಾಟಲೀಪುರಕ್ಕೆ ಬರಲು ದಾಟಬೇಕಾಗಿದ್ದ ನದಿ.

ಷಂಷೇರ್ ಬಾಬು : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ಸಮಿದ್ಧಾರ್ಥಕ : ಇಂದುಶರ್ಮನ ಶಿಷ್ಯ.

ಸರಯೂ ನದಿ : ನಂದರು ಯುದ್ಧಕ್ಕೆ ಹೊರಟಾಗ ಈ ನದಿ ದಂಡೆಯಲ್ಲಿ ಇಳಿಯುತ್ತಾರೆ.

ಸರ್ವಾರ್ಥಸಿದ್ಧಿ : ಚಂದ್ರವಂಶದ ಅರಸು — ಗೌಡದೇಶಾಧಿಪತಿ.

ಸಿಂಧುಷೇಣ(ಸಿಂಧುಪತಿ) : ಪರ್ವತರಾಜನ ಅಧೀನರಾಜ.

ಸಿಂಧೂಕಾಕರ : ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.

ಸಿಂಹನಾದ(ಮಲಯಪತಿ) : ಪರ್ವತೇಶ್ವರನ ಅಧೀನರಾಜ.

ಸಿಂಹಬಲ : ನಂದರ ಸೇನಾಧ್ಯಕ್ಷ.

ಸಿದ್ಧಾರ್ಥಕ : ಇಂದುಶರ್ಮನ ಶಿಷ್ಯ.

ಸುಂದರಗಢ : ಗಿರಿವ್ರಜದ ಬಳಿಯ ಕೋಟೆ.

ಸುಗಾಂಗ : ಪಾಟಲೀಪುರದ ಪ್ರಾಸಾದ.

ಸುನಂದ : ನಂದರಲ್ಲಿ ಎರಡನೆಯವನು.

ಸುನಂದಾದೇವಿ : ಸರ್ವಾರ್ಥಸಿದ್ಧಿ ರಾಯನ ಪಟ್ಟದರಸಿ.

ಸುಮತಿ : ನಂದರ ವೃದ್ಧ ಮಂತ್ರಿ.

ಸುರಭಿವಾಹಿ	:	ಸರಯೂ ತೀರದಲ್ಲಿದ್ದು, ನಂದರಿಗೆ ಸೇರಿದ್ದ ಪ್ರದೇಶ.
ಸೂರ್ಯವರ್ಮ (ಕಾಮರೂಪದೇಶಾಧಿಪತಿ)	:	ಭೂದೇವಿಗೆ ಪಾತ್ರನಾದ ಭಗದತ್ತನ ವಂಶಸ್ಥ.
ಸೂಲಗಿತ್ತಿ	:	ಪಾಟಲೀಪುರವಾಸಿ, ನಿಪುಣೆಯರಾದ ಗೂಢಚಾರಳು.
ಸೌರಂಭ	:	ಚಂದ್ರಗುಪ್ತನ ಭಾವ ಮೈದುನ.
ಸೌರಾಷ್ಟ್ರಾಧಿಪತಿ	:	ನಂದರ ಸಾಮಂತರಾಜ.
ಹಂಸಕ	:	ಪರ್ವತರಾಜನ ವೃದ್ಧಕಂಚುಕಿ ('ಮುದ್ರಾರಾಕ್ಷಸ' ನಾಟಕದಲ್ಲಿ ಈತನ ಹೆಸರು ಜಾಜಲಿ ಎಂದಿದೆ).
ಹಿಮಸ್ಕೃತ ಖಾನ	:	ಮಲಯಕೇತುವಿನ ಬಳಿ ಬಂದ ನಂದರ ಕಡೆಯ ಸರದಾರ.
ಹೀರಕದಾನ	:	ಸಿಂಧುಪತಿಯ ಬಳಿಯಲ್ಲಿದ್ದ ನಂದರ ಗೂಢಮಂತ್ರಿ.
ಹೂಣದೇಶಾಧಿಪತಿ	:	ಪರ್ವತೇಶ್ವರನ ಅಧೀನರಾಜ.
ಹೊನ್ನಗಟ್ಟ	:	(ಕನಕಗಿರಿ?) ನಂದರ ಸಾಮ್ರಾಜ್ಯದ ಗಡಿನಾಡ ಪ್ರಾಂತ.

•••••••

ಅನುಬಂಧ - ೨

ಸೂಕ್ತಿಗಳು

ಸಂಸ್ಕೃತ

ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ ।

ಅನುಚಿತ ಕಾರ್ಯಾರಂಭಃ ಸ್ವಜನ ವಿರೋಧೋ ಬಲೀಯಸಿ ಸ್ಪರ್ಧಾ ।

ಅನ್ಯಂ ಇಂದ್ರಂ ಕರಿಷ್ಯಾಮಿ ಲೋಕಂ ವಾ ಸ್ಯಾತ ಅನಿಂದ್ರಕಂ ।

ಅಸ್ಮಾಭಿಃ ಯದನುಷ್ಠೇಯಂ ಗಂಧರ್ವೈಃ ತದನುಷ್ಠಿತಮ್ ।

ಕಸ್ಯ ಸೌಖ್ಯಂ ನಿರಂತರಂ ?

ಗತಂ ನ ಶೋಚಂತೀತ ಪ್ರಾಜ್ಞಃ ।

ಜ್ಞಾತಿಶ್ಚೇತ ಅನಲೇನ ಕಿಂ ?

ರಾಜ್ಞೋ ರಾಷ್ಟ್ರಕೃತಂ ಪಾಪಂ ।

ವಿಧಿವಿಹಿತಂ ಬುದ್ಧಿರನುಸರತಿ ।

ವಿಪದಿ ಧೈರ್ಯಂ ಅಥ ಅಭ್ಯುದಯೇ ಕ್ಷಮಾ ।

ಸಂಘೇ ಶಕ್ತಿಃ ಕತಾ ಯುಗೇ ।

ಕನ್ನಡ

ಅಕಾಲ ಫಲಪುಷ್ಪವು ನೋಡುವವರಿಗೆ ರಮಣೀಯವಾಗಿ ಕಂಡರೂ ಪ್ರಜಾಪೀಡಾ ಸೂಚಕಗಳಾದುದರಿಂದ ಶಿಷ್ಟಗ್ರಾಹ್ಯಗಳಲ್ಲ.

ಅಗ್ನಿಯೊಡನೆ ತೃಣಗಳಿಗೆ ಕಲಹವುಂಟೇ?

ಅರಸುಗಳಿಗೆ ಪರಸ್ಪರ ವೈರವುಂಟಾದರೆ ಮಾತ್ಸ್ಯನ್ಯಾಯದಂತೆ ಪ್ರಬಲನು ದುರ್ಬಲನಂ ನಿಗ್ರಹಿಸುವನು.

ಅರಸುಗಳಿಗೆ ಮಹಾಲಾಭ ಭ್ರಾಂತಿವುಂಟಾದರೆ ಸುಖವನ್ನಾಗಲೀ, ಸತ್ಯವನ್ನಾಗಲೀ, ದಾಕ್ಷಿಣ್ಯವನ್ನಾಗಲೀ ತ್ಯಜಿಸುವರು.

ಅವಲಂಬನ ವೃಕ್ಷವಿಲ್ಲದ ಮಾಲತೀ ಲತೆಯಂತೆ — ಅರಣ್ಯದ ಬೆಳದಿಂಗಳಂತೆ — ವಿಧವೆಯ ಯೌವನವು ವ್ಯರ್ಥವು.

ಅಶಿಕ್ಷಿತವಾದ ಗಜವು ಮಾವುತನಂ ನಿರಾಕರಿಸಿದರೆ ಅದು ಮಾವುತನ ದೋಷವಲ್ಲದೆ ಗಜನಿಷ್ಠ ದೋಷವಲ್ಲವು.

ಅಡಿದ ಮಾತು ಕೂಡಿ ಬಂದರೆ ಮನುಷ್ಯನು ಎಂದಿನಂತೆ ಇರುವನೇ?

ಆಪತ್ತು ಸಮಯದಲ್ಲಾದರೂ ವಿಮರ್ಶೆಯಿಂದ ಕಾರ್ಯವಂ ಮಾಡಬೇಕು.

ಇಹದಲ್ಲಿ ಲೌಕಿಕ ಕಾರ್ಯವನ್ನರಿತು ಕೊಡೋಣವೆಂಬುದೇ ತ್ಯಾಗವು; ದೇಶಕಾಲ ಪಾತ್ರವರಿತು ಕೊಡೋಣವೆಂಬುದೇ ದಾನವು.

ಉಭಯಸೇನೆ ಒಂದೆಡೆ ನಿಂತರೆ ಕ್ಷಾಮವೂ ಕ್ಷುದ್ರರೋಗಪ್ರದವೂ ತಟ್ಟುವುದರಿಂದ ಪ್ರಜಾಕ್ಷೋಭೆಯುಂಟಾಗುವುದು.

ಎಷ್ಟಾದರೂ ಜನರಿಗೆ ಸ್ವಾಭಿಮಾನ ತಪ್ಪುವದುಂಟೇ?

ಐಶ್ವರ್ಯಮದವೆಂಬ ನೇತ್ರರೋಗವು ಅಂಜನಸಾಧ್ಯವಾಗದು.

ಕಳೆದುಹೋದ ಮಾತಿಗೆ ಕಳವಳಗೊಂಡು ಫಲವೇನು?

ಕೋಪವಿದ್ದವರಲ್ಲೇ ಆಶ್ರಿತಾಭಿಮಾನವು ದೃಢವಾಗಿರುವುದು.

ಕೋಪವಿಲ್ಲದ ಪುರುಷನು ಹೆಣ್ಣುಕುರಿಯಂತೆ ಲೌಕಿಕ ಜನಕ್ಕೆ ಸುಲಭನಾದಾನು.

ಕ್ಷಣಿಕಚಿತ್ತನಾದ ಪುರುಷನೈಶ್ವರ್ಯದಂತೆ ಭಾಗ್ಯವೆಲ್ಲವೂ ಬಯಲಾಗುವುದು.

ಕ್ಷಪಣಕರ ದರ್ಶನವು ಅಪಶಕುನವು.

ಗುಣಶಾಲಿಯಾದ ಶತ್ರುವು ಕೈವಶನಾದರೆ ಗುಣಜ್ಞರಾದವರು ಅವನಂ ಅಪಮಾನಗೊಳಿಸರು.

ಜ್ವರ ಬಂದವನಿಗೆ ದೋಷ ಸಾಂಕರ್ಯವು, ಸನ್ನಿಪಾತವು, ಅಪಥ್ಯಸೇವನೆಯು ಸಹವುಂಟಾದರೆ ಮಹೌಷಧಿಗಳಿಂದಲಾದರೂ ಅಸಾಧ್ಯವಾಗುವುದು.

ತಪವನ್ನಾದರಿಸುವ ಮಹಾತ್ಮರಿಗೆ ತಪೋಲೇಶವ್ಯಯದಲ್ಲಿ ಲೋಭವುಂಟು.

ದಂಡನೀತಿ ಶಾಸ್ತ್ರದಲ್ಲಿ ಸ್ವಾಯತ್ತ, ಸಚಿವಾಯತ್ತ, ಉಭಯಾಯತ್ತವೆಂದು ತ್ರಿಸಿದ್ಧಿಗಳು.

ದರ್ಪಣಯಂ ಸಂಪಾದಿಸಿಯಿರಲು ಹಸ್ತವಂ ಸುಡಿಸಲೇತಕ್ಕೆ?

ದರ್ಪಣಯಿರುವಲ್ಲಿ ಹಸ್ತಕ್ಕೆ ಶಕೆವುಂಟೇ?

ದೈವಬಲವು ಯಾವ ಪುರುಷನಲ್ಲಿ ಹ್ಯಾಗಿರುವುದೋ?

ದೈವವಿಲಾಸವು ಅನ್ಯಾದೃಶವು.

ದೈವವೇ ಪ್ರಮಾಣವೆಂದು ಪುರುಷಹೀನರಾದವರು ಹೇಳುವರು.

ದೈವಸಂಕಲ್ಪವು ಬಲಿಷ್ಠವು.

ನಿಪುಣರಾದವರು ಅಧರಸ್ಪರ್ಶದಿಂದಲೂ ಮುಖಚೇಷ್ಟೆಯಿಂದಲೂ ನೋಡಿ ರಹಸ್ಯಕಾರ್ಯವಂ ಊಹಿಸುವುದುಂಟು.

ನೆರೆಮನೆಯಲ್ಲಿ ಎದ್ದಿರುವ ಕಿಚ್ಚನ್ನು ಅಲ್ಲಿಯೇ ಶಾಂತವಂ ಮಾಡದಿದ್ದರೆ ಸ್ವಗೃಹವಂ ದಹಿಸುವುದು.

ಪುರುಷಲಕ್ಷಣವೆಂಬುದು ಬಹುವಿಮರ್ಶಾಸಾಧ್ಯವು.

ಪ್ರಜಾದ್ರವ್ಯದಲ್ಲಿ ಪ್ರಭುವಿಗೆ ಸ್ವತ್ವವಿಲ್ಲ.

ಪ್ರಭುಪದಕ್ಕೆ ಯೋಗ್ಯನಾದವಂಗೆ ಆಪತ್ತು — ಸಂಪತ್ತು ಒದಗಿದ ಸಮಯದಲ್ಲಿ ವಿಮರ್ಶೆಯಿರಬೇಕು.

ಬಹುಮಂದಿ ಒಡಹುಟ್ಟಿದವರು ಉಳ್ಳವಗೆ ಬಹುಕ್ಲೇಶವುಂಟು.

ಬಾಲಕರ ವಾಕ್ಯವೂ ಹುಚ್ಚರ ವಾಕ್ಯವೂ ವಿನೋದಕ್ಕೆ ಯೋಗ್ಯವಲ್ಲದೇ ವಿಷಾದಕ್ಕೆ ಯೋಗ್ಯವಲ್ಲ.

ದಿಟ್ಟದಂತೆ ಒದಗುತ್ತಿದ್ದ ವಿಪತ್ತೆಲ್ಲವೂ ಮಂಜಿನಂತೆ ಕರಗಿಹೋಯಿತು.

ಬ್ರಾಹ್ಮ್ಯ ತೇಜಸ್ಸು ಕ್ಷಾತ್ರ ತೇಜಸ್ಸಂ ತಿರಸ್ಕರಿಸುವದೆಂಬರ್ಥವು ಪುರಾಣಸಿದ್ಧವು.

ಮಂಜು ಮುಸುಕಿದರೆ ಪರ್ವತ ಕರಗಬೇಕಾಯಿತು.

ಮಧುಘೃತಗಳು ಸಮನಾಗಿ ಮಿಳಿತವಾದರೆ ಸೇವಿಸುವರಿಗೆ ವಿಷವಾಗುವುದು.

ಮಿಂಚಿಹೋದ ಮಾತಿಗೆ ಮಿಡುಕಿ ಫಲವೇನು?

ಮೀರಿಹೋದ ಕಾರ್ಯಕ್ಕೆ ವಿಮರ್ಶೆಯಿಂದ ಫಲವಿಲ್ಲ.

ಮೇಘೋದಯದಂತೆ ರಾಜಕಾರ್ಯ ಹ್ಯಾಗೆ ಒದಗುವುದೋ ತಿಳಿಯಲಶಕ್ಯ.

ಯಥಾರ್ಥವಾಗಿ ಗುರುಗಳಂ ನಿರಾಕರಿಸಿದವನು ಶ್ರೇಯೋವಂತನಾಗುವದುಂಟೇ?

ಯೌವನ ಮದವೆಂಬ ಅಂಧಕಾರವು ಸೂರ್ಯಾದಿಗಳಿಂ ತೊಲಗಲಾರವು.

ರಾಜಕಾರ್ಯವು ಬಹುಪ್ರಯತ್ನ ಸಾಧ್ಯವು; ಅದುಬಿಟ್ಟಿಂದೊಮ್ಮೆಗೆ ಪರ್ಯವಸಾನವಾಗತಕ್ಕದ್ದಲ್ಲ

ರಾಜಕಾರ್ಯ ರಹಸ್ಯಾಲೋಚನೆಯಲ್ಲಿ ಅನ್ಯವಾದ ಪಂಜರಸ್ಥ ಶುಕ ಸಹ ಅಲ್ಲಿರಕೂಡದು.

ಲೋಕದಲ್ಲಿ ವಿಮರ್ಶೆಯಿಲ್ಲದೇ ಮಾಡುವ ಕೋಪವು, ವ್ಯಸನವು ಅನರ್ಥಕ್ಕೆ ಕಾರಣವು.

ಲೋಕದಲ್ಲಿ ಭೂತದಯೆಯೆಂಬುದು ಮುಖ್ಯ ಧರ್ಮವು.

ಲೋಕದಲ್ಲಿ ಬಾಲಕರು ಪ್ರಭುವಾದರೆ ವಂಚಕರು ಗುರುಹಿರಿಯರಲ್ಲಿ ವಿಶ್ವಾಸವಂ ತಪ್ಪಿಸುವರು.

ಲೋಹವನ್ನಾಕರ್ಷಿಸುವ ಧರ್ಮವು ಸಹಜ ಕಲ್ಲಿನ ಸ್ವಭಾವವು.

ವಂಚಕರೊಡನೆ ಮಂತ್ರಾಲೋಚನೆಯಂಗೆಯ್ಯುವವನ ಚಿಂತಿತಾರ್ಥಗಳು ವ್ಯರ್ಥವಾಗುವವು.

ವಿಮರ್ಶಾಪೂರ್ವಕವಾಗಿ ಕಾರ್ಯವನ್ನಾಚರಿಸುವ ಅರಸಿಗೆ ಆಪತ್ತೆಲ್ಲವೂ ಸಂಪತ್ತುಗಳೇ ಆಗುವವು.

ವಿಮರ್ಶಾಪೂರ್ವಕ ಮಾಡಿದ ಕೋಪವು ಯಶಸ್ಕರವು; ಕೋಪಪೂರ್ವಕವಾಗಿ ಮಾಡಿದ ವಿಮರ್ಶೆಯು ಹಾನಿಕರವು.

ವೈದ್ಯರಂ ಪಾಠಕರಂ ಪರೀಕ್ಷಿಸದೇ ಪ್ರಭುವಾದವನು ಪರಿಗ್ರಹಿಸನು.

ವ್ಯಾಘ್ರಶಿಶುವಂ ಮಾರ್ಜಾಲವೆಂದು ಉಪೇಕ್ಷಿಸಿದರೆ ಕಾಲಾಂತರದಲ್ಲಿ ಹೆಬ್ಬುಲಿಯಾಗುವುದು.

ಶತ್ರುವು ಅಲ್ಪಸತ್ವನೆಂದು ಮಹತ ಪ್ರಯತ್ನವಂ ಮಾಡದೇ ಇರಕೂಡದು.

ಶುದ್ಧ ಕ್ಷತ್ರಿಯ ಸಂತತಿಯು ಶಿಶಿರಾಂತದ ವೃಕ್ಷಪರ್ಣದಂತೆ ವಿರಳವು.

ಶ್ರೀಮಂತರಾಗಿ, ಯೌವನಶಾಲಿಗಳಾಗಿ, ರೂಪವಂತರಾಗಿ, ವಿನಯ ರಹಿತರಾಗಿ ಇರೋಣವೆಂಬುದೊಂದೊಂದು ಮಾತ್ರವೇ ಅನರ್ಥಕಾರಿಯು.

ಸರ್ಪಕ್ಕೆ ಕ್ಷೀರವನ್ನೆರೆದು ಸಲಹಿದಂತಾಯಿತು.

ಸಹಜಮನವ ಮೂರ್ಖಸ್ತ್ರೀಯರುಗಳು ಆದರಿಸುವ ದುಷ್ಕೃತ್ಯವು.

ಹೊಟ್ಟೆಗೆ ಇಲ್ಲದಿರುವವರು ಮತ್ತೇನು ಮಾಡ್ಯಾರು?

ಹೋಲಿಕೆಗಳಲ್ಲಿ

ಅಂಜನದ ಮೂಲವಂ ತಡಕುವವನ ಹಸ್ತಕ್ಕೆ ಅಲ್ಲಿಯೇ ನಿಧಿ ದೊರಕಿದಂತೆ.

ಅಂಧಕನಿಗೆ ನೇತ್ರಪ್ರಕಾಶವುಂಟಾದಂತೆ

ಅಗ್ನಿಶಿಖೆಯಲ್ಲಿ ಆಹಾರ ಬುದ್ಧಿಯಿಂದೆರಗುವ ಪತಂಗಗಳಂತೆ

ಅಗ್ನಿಗೆ ಚಂಡಮಾರುತ ಸಹಾಯವಾದಂತೆ

ಅಜಾ ಯುದ್ಧದಂತೆ

ಅತಿಭಾಷೆಯನಾಡುವವನ ಅಜ್ಞೆ ತೋರುವಂತೆ

ಅನಾಥಳಾದ ಸುಂದರಿಯಂ ವಿಟಜನ ಆಕ್ರಮಿಸಲೆಳಸುವಂತೆ

ಅರಣ್ಯದಲ್ಲಿರುವ ಗಜವಂ ದಾಹಿದಾನೆಗಳಿಂದ ವಂದನೆಗೈಸಿ ಹಿಡಿತಂದು ಪಟ್ಟದಾನೆಯಂ ಮಾಡುವಂತೆ.

ಅಜನ್ಮಸಿದ್ಧವಾದ ಗಜಸಿಂಹ ವೈರದಂತೆ

ಆಜ್ಯಾಹುತಿಯಿಂದ ಪ್ರಜ್ವಲಿಸುವ ಅಗ್ನಿಯಂತೆ

ಆಹಾರವಂ ತೋರಿಸಿ ಮಡಹುಗಳ ದೆಸೆಯಿಂದ ಮಹಾಮತ್ಸ್ಯಗಳಂ ಹೊರಕ್ಕೆ ತೆಗೆಯುವಂತೆ

ಎಳೆಗಂಟಿ ಕರುವಿದ್ದೆಡೆಗೆ ಬರುವಂತೆ

ಕೃತಘ್ನ ರೋಗಿಗೆ ಮಾಡಿದ ಚಿಕಿತ್ಸಾ ಸದೃಶ

ಕ್ಷೀರಾಂಬುಧಿಯು ಇಕ್ಷುಸಾಗರದೊಡನೆ ಸಂಭವಿಸಿದಂತೆ

ಗುಮ್ಮನೆಂದು ಬಾಲಕನಂ ಬೆದರಿಸುವಂತೆ

ಜಲತರಂಗಗಳಲ್ಲಿ ಪ್ರತಿಫಲಿಸುವ ಸೂರ್ಯಬಿಂಬದಂತೆ

ತಂಡುಲ ಮಾತ್ರ ಉಳಿದಿದ್ದ ಅಗ್ನಿಕಣವು ವಾಯು ಸಹಾಯದಿಂದ ವನವೆಲ್ಲವಂ ದಹಿಸುವಂತೆ.

ತಪ್ತಾಯೋ ನ್ಯಾಯದಂತೆ

ದುಷ್ಟ ಮಾರ್ಜಾಲವಂ ನಯದಿಂದ ಸಮೀಪಕ್ಕೆ ಕರೆದು ಉಷ್ಣೋದಕವಂ ಎರಚಿ ಹೊರಡಿಸುವಂತೆ.

ಧನದ ಆಶೆಗೆ ಮರುಳಾಗಿ ದೇಹವಂ ಮಾಡಿಕೊಂಡಂತೆ.

ನಾಯಿಗಳ ಹಿಂಡಿಗೆ ಸಿಕ್ಕಿ ಹಲ್ಲು ಕಿರಿಯುತಿರುವ ವಾನರನಂತೆ

ಪಂಕದಲ್ಲಿ ಬಿದ್ದ ಮದಗಜದಂತೆ

ಪಂಚಾಕ್ಷರೀ ಕಲಶಜಲಗಳಿಂ ಸ್ವಾತಂತ್ರ್ಯವು ತೊಳೆದುಹೋದಂತೆ

ಪರಸ್ತ್ರೀ ಮುಖಾವಲೋಕನ — ಚತುರ್ಥೀ ಚಂದ್ರದರ್ಶನದಂತೆ

ಪಾತ್ರವರಿತು ಕೊಟ್ಟವನ ಸುಕೃತದಂತೆ

ಪುಷ್ಪಮಾಲಿಕೆಗಳಂ ನೋಡಿ ಸರ್ಪಗಳೆಂದು ಭ್ರಾಂತುಪಟ್ಟು 'ಓಡುವನ ತೆರದಿ

ಪೂರ್ಣಚಂದ್ರ ಚಂದ್ರಿಕಾನಿಕರದಂತಿಪ್ಪ ಮುಗುಳುನಗೆ

ಪ್ರಿಯತಮನೆದುರಿಗೆ ವಿಲಾಸವಂ ತೋರಿಸುವ ಜಾರಸ್ತ್ರೀಯಂತೆ

ಬಡವರ ಮನೆಗೆ ಭಾಗ್ಯದೇವತೆ ಬಂದಂತೆ

ಬಲದಲ್ಲಿ ಮೃತವಾಗುವ ಹೆಗ್ಗಣಗಳಂತೆ

ಬೇಟೆಗಾರರು ಮೃಗಗಳ ತಾಳಿತವ್ಯವಂನೋಕ್ಷಿಡದಂತೆ

ಭಾಮಿನೀ ಪುರುಷಾಲಿಂಗನ ಬಂಧದಂತೆ

ಭೃತ್ಯರೊಡನೆ ಸರಸವಾಡುವವನ ಗೌರವದಂತೆ

ಮಾಂಸಭ್ರಾಂತಿಗೆ ದಾವಾನಲ ಶಿಖೆಗೆ ಜಿಹ್ವಾಗ್ರವಂ ಚಾಚುವ ಮೃಗರಾಜನಂತೆ

ಮಾಷಕ ಸಂಗ್ರಹಕ್ಕೆ ಪರ್ವತಭೇದನವಂ ಮಾಡದೇಯಿರುವಂತೆ

ವಪನವಂ ಮಾಡಿಕೊಂಡ ಬಳಿಕ ಅಂತುಷ್ಯವರ್ತಕ್ಕೆ ದಿನ ಯಾಕ್ಯಗಿದೆಯೆಂದು ಕೇಳಿದಂತೆ.

ವೃಕ್ಷದ ಮೂಲವಂ ಛೇದಿಸಿ ಶಾಖೋಪಶಾಖೆಗಳಂ ಒಣಗಿಸುವಂತೆ

ವ್ಯಾಘ್ರನಿಗ್ರಹಕ್ಕೆ ಚೋರರಂ ನೇಮಿಸುವಂತೆ

ಶತ್ರುಗಳ ಮೇಲೆ ಮೀಸೆಯಂ ತಿರುವುವ ವೀರನಂದದಿ

ಶೀತಲವಾದ ಉದಕಸೇಚನೆಯಿಂದ ಮತ್ತೆ ಪ್ರಜ್ವಲಿಸುವ ಬಡಬಾಗ್ನಿಯಂತೆ

ಸಿಂಹನಖಪ್ರಹಾರದಿಂದ ಅಸುವಂ ಬಿಟ್ಟಿರುವ ಮದ್ಗಜದಂತೆ

ಸೂರ್ಯನಿಗೆ ದೀಪೋಪಚಾರದಂತೆ

ಹನಿಗೂಡಿ ಹಳ್ಳವಾಗಿ ನದಿಯಾಗುವ ರೀತಿಗೆ

ಹುತ್ತವಂ ಹೊಗುವ ಸರ್ಪದಂತೆ.

•••••• ••••••• •••••••

ಅನುಬಂಧ ೨

ಆಧಾರ ಪಠ್ಯಯ ಸೂಚಿ

1. ಗ್ರಂಥಗಳು

(ಅ) ಕನ್ನಡ

ಅನಂತರಂಗಾಚಾರ ಎನ್.ಎಸ್.	1975	'ವಿಶಾಖದತ್ತನ ಮುದ್ರಾರಾಕ್ಷಸ' ಪ್ರಸಾರಾಂಗ ಮೈಸೂರು.
ಅನಂತರಾಮು ಕೆ	1991	'ಬ್ರಹ್ಮಶಿವ — ಒಂದು ಅಧ್ಯಯನ' ಅನಂತ ಪ್ರಕಾಶನ, ವಿಹೇಶೇಷ್ಣ ರಸ್ತೆ, ಮೈಸೂರು.
ಆದ್ಯರಂಗಾಚಾರ್ಯ (ಅನು.)	1984	'ನಾಟ್ಯಶಾಸ್ತ್ರ' ಅಕ್ಷರ ಪ್ರಕಾಶನ, ಹೆಗ್ಗೋಡು
ಕುರ್ತಕೋಟಿ ಕೆ.ಡಿ.	1962	'ಯುಗಧರ್ಮ ಮತ್ತು ಸಾಹಿತ್ಯದರ್ಶನ' ಮನೋಹರ ಗ್ರಂಥಮಾಲಾ, ಧಾರವಾಡ.
ಕೃಷ್ಣಕುಮಾರಿ ಸಿ.ಪಿ.	1976	'ನಾಗವರ್ಮನ ಕರ್ಣಾಟಕ ಕಾದಂಬರಿ' ಪ್ರಸಾರಾಂಗ, ಮೈಸೂರು.
ಕೃಷ್ಣ ಭಟ್ಟ ಕೆ	1972(ದ್ವಿತೀಯ)	'ಕೌಟಿಲ್ಯನ ಅರ್ಥಶಾಸ್ತ್ರ, ಸಮಾಜ ಪುಸ್ತಕಾಲಯ, ಧಾರವಾಡ.
ಕೃಷ್ಣಮೂರ್ತಿ ಕೆ	1961	'ರವಿಕೀರ್ತನ ವಿರಚಿತ ಮುದ್ರಾರಾಕ್ಷಸ ಕಥಾಸಾರ' ಶಾರದಾ ಮಂದಿರ, ಮೈಸೂರು.
ಕೃಷ್ಣಮೂರ್ತಿ ಎಂ ಎಸ್	1976	'ಹಿಂದಿ ಸಾಹಿತ್ಯ' ಪ್ರಸಾರಾಂಗ, ಮೈಸೂರು.
ಕೃಷ್ಣರಾವ ಎಂ.ವಿ ಮತ್ತು ಕೇಶವ ಭಟ್ಟ ಎಂ	1970	'ಕರ್ಣಾಟಕದ ಇತಿಹಾಸ ದರ್ಶನ' ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು.
ಕೃಷ್ಣಶರ್ಮಾ ಬೆಟಗೇರಿ	1971(ತೃತೀಯ)	'ಕರ್ಣಾಟಕ ಜನಜೀವನ' ಸಮಾಜ ಪುಸ್ತಕಾಲಯ, ಧಾರವಾಡ.
ಕೃಷ್ಣಶಾಸ್ತ್ರಿ ಎ.ಆರ	1970(ತೃತೀಯ)	'ಸಂಸ್ಕೃತ ನಾಟಕ' ಪ್ರಸಾರಾಂಗ ಮೈಸೂರು.
	1989	'ಕಥಾಮೃತ' ಗೀತಾ ಬುಕ ಹೌಸ,ಮೈಸೂರು.
ಗಣಪತಿ ಮೊಳೆಯಾರ (ಅನು.)	1971	'ಮುದ್ರಾರಾಕ್ಷಸ' ವಿವೇಕ ಸಾಹಿತ್ಯಮಾಲೆ, ಮಂಗಳೂರು.
ಗೋಪಾಲ ಬಾ.ರಾ. (ಸಂ.)	1976	'ಎಪಿಗ್ರಾಫಿಯಾ ಕರ್ನಾಟಿಕಾ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಚಿದಾನಂದಮೂರ್ತಿ ಎಂ	1979 (ದ್ವಿತೀಯ)	'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪ್ರಸಾರಾಂಗ ಮೈಸೂರು.
ಜಯರಾಮ ಎ.ಎಸ್.	1983	'ಹತ್ತೊಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ' ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು.
ಜವರೇಗೌಡ ದೇ.	1978	'ಗದ್ಯಶ್ರೀ' ಡಿ.ವಿ.ಕೆ. ಮೂರ್ತಿ, ಮೈಸೂರು.
ಜೋಶಿ ಜಿ.ಜಿ.	1991	'ಕೌಟಿಲ್ಯನ ರಾಜ್ಯಪದ್ಧತಿಯ ಸಮೀಕ್ಷೆ' ಶರತ ಪ್ರಕಾಶನ ಮಂದಿರ ಬೆಳಗಾಂವಿ.
ಜ್ಯೋತ್ಸ್ನಾ ಕಾಮತ್	1988	'ಕರ್ನಾಟಕದ ಶಿಕ್ಷಣ ಪರಂಪರೆ' ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.
ತಿ.ತಾ. ಶರ್ಮ	1971	'ಚಾರಿತ್ರಿಕ ದಾಖಲೆಗಳು' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
	1974	'ಕಂಠೀರವ ನರಸರಾಜ ವಿಜಯ' ಪ್ರಸಾರಾಂಗ, ಮೈಸೂರು.
ತಿಮ್ಮಣ್ಣಯ್ಯ ಗಂಜಾಂ (ಅನು.)	1948	'ವಿಷ್ಣುಪುರಾಣಂ ' ಶ್ರೀ ಜಯಚಾಮ ರಾಜೇಂದ್ರ ಗ್ರಂಥರತ್ನಮಾಲೆ, ಮೈಸೂರು.
ನಂಜುಂಡಸ್ವಾಮಿ ಎ.ಎಸ್.	1986	'ಕರ್ನಾಟಕದ ಪಾಳೆಯಗಾರರು ಮತ್ತು ಒಡೆಯರ ಇತಿಹಾಸ' ಸಮಾಜ ಪುಸ್ತಕಾಲಯ, ಧಾರವಾಡ.
ನರಸಿಂಹಾಚಾರ್ ಡಿ.ಎಲ್. (ಸಂ.	1978 (ಆರನೆಯ)	'ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ' ಡಿವಿಕೆ ಮೂರ್ತಿ, ಮೈಸೂರು.
ನರಸಿಂಹಾಚಾರ್ಯ ಆರ್	1974 (ದ್ವಿತೀಯ)	'ಕರ್ನಾಟಕ ಕವಿಚರಿತೆ — ' ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ, ಬೆಂಗಳೂರು.
ನಾಗಭೂಷಣ ಸ್ವಾಮಿ ಓ ಎಲ್	1983	'ವಿಮರ್ಶೆಯ ಪರಿಭಾಷೆ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ.
ನಾಯಕ ಹಾ.ಮಾ. (ಪ್ರ.ಸಂ.)	1979	'ಕರ್ನಾಟಕ: ಕನ್ನಡ ವಿಷಯ ವಿಶ್ವಕೋಶ' ಕನ್ನಡ ಅಧ್ಯಯನ ಸಂಸ್ಥೆ, [illegible] ಮೈಸೂರು.
ಬಸವಾರಾಧ್ಯ ಎನ್ (ಸಂ.)	1982	'ಪ್ರಾಚೀನ ಕನ್ನಡ ಗದ್ಯ ವಿಕಾಸ' ಪ್ರಾಚ್ಯಕಾವ್ಯ ಪ್ರಕಾಶನ ಮಂದಿರ, ಬೆಂಗಳೂರು.
ಬಾಲಸುಬ್ರಹ್ಮಣ್ಯ ಎಸ್. (ಸಂ.)		'ಅಮರಸಿಂಹನ ಅಮರಕೋಶ' ಪ್ರಸಾರಾಂಗ, ಮೈಸೂರು.

ಭೀಮರಾವ ಚಿಟಗುಪ್ಪಿ	1974	'ವಾಗ್ದೇವಿಯ ಭಂಡಾರ ಒಡೆದ ಕನ್ನಡ ಕವಿಗಳು' ದ್ವೈಪಾಯನ ಟ್ರಸ್ಟ್, ಮುಂಬಯಿ.
ಮರಿಯಪ್ಪ ಭಟ್ಟ ಎಂ	1972	'ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ' ಭಾರತೀ ಪ್ರಕಾಶನ, ಮೈಸೂರು.
ಮುಗಳಿ ರಂ.ಶ್ರೀ	1971(ಪಂಚಮ)	'ಕನ್ನಡ ಸಾಹಿತ್ಯ ಚರಿತ್ರೆ' ಉಷಾಸಾಹಿತ್ಯಮಾಲೆ — ಮೈಸೂರು.
ಮುತ್ತಣ್ಣ ಐ.ಮಾ.	1969	'೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಮೈಸೂರು.
ರಂಗರಾವ ಎಂ (ಸಂ.)	1931	'ದಿವಾನ ಪೂರ್ಣಯ್ಯನವರು' ಸುಬೋಧ ಗ್ರಂಥಮಾಲಾ, ಬೆಂಗಳೂರು.
ರಂಗಾಚಾರಿ ವಾಜಪೇಯ (ಅನು)	1947	'ಶ್ರೀಮತ್ಸ್ಯಮಹಾಪುರಾಣವು' ಶ್ರೀ ಜಯಚಾಮ ರಾಜೇಂದ್ರ ಗ್ರಂಥರತ್ನಮಾಲೆ, ಮೈಸೂರು.
ರಾಗಾ	1992	'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಚಿತ್ರಕೂಟ, ಮೈಸೂರು.
ರಾಜರತ್ನಂ ಜಿ.ಪಿ.	1954	'ಅಶೋಕನ ಮಾರ್ಗ' ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು.
ರಾಮಕೃಷ್ಣ ರಾವ ಬಿ (ಸಂ.)	1916	'ಶ್ರೀಮನ್ಮಹಾರಾಜರವರ ವಂಶಾವಳಿ — ಭಾಗ ೧' ಸರಕಾರಿ ಮುದ್ರಣಾಲಯ ಶಾಖೆ, ಮೈಸೂರು.
	1922	'ಶ್ರೀ ಮನ್ಮಹಾರಾಜರವರ ವಂಶಾವಳಿ ಭಾಗ ೨' ಸರಕಾರಿ ಮುದ್ರಣಾಲಯ ಶಾಖೆ, ಮೈಸೂರು.
ರಾಮರಾವ ಬೆನಗಲ ಮತ್ತು ಸುಂದರಶಾಸ್ತ್ರಿ ಪಾನ್ಯಂ (ಸಂ)	1968(ತೃತೀಯ)	'ಪುರಾಣನಾಮ ಚೂಡಾಮಣಿ' ಪ್ರಸಾರಾಂಗ ಮೈಸೂರು.
ಲಿಂಗಯ್ಯ ಎಂ ಕೆ	1982	'ಮೈಸೂರು ಒಂದು ಅಧ್ಯಯನ' ಪ್ರಸಾರಾಂಗ, ಮೈಸೂರು.
ವಸಂತಕುಮಾರ, ತಾಳ್ತಜೆ	1985	'ಸಾರಸ' ಚಿರಸಾಹಿತ್ಯ ಪ್ರಕಾಶನ, ಬನಶಂಕರಿ, ಬೆಂಗಳೂರು.
	1988	'ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ' ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.
ವಿವೇಕ ರೈ ಬಿ.ಎ. (ಸಂ)	1987	'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು' ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
ವೆಂಕಟರಮಣ ಶಾಸ್ತ್ರೀ ಸಿ	1919	'ನೋಣನಲೆ ಗರಳಪುರಿ ಶಾಸ್ತ್ರಿಗಳ ಚರಿತ್ರೆ', ಕಾದಂಬರೀ ಸಂಗ್ರಹ ಗ್ರಂಥಮಾಲಾ, ಮೈಸೂರು.

ವೆಂಕಟರಾಮಪ್ಪ ಕೆ	1974	'ಕನ್ನಡ ಸಾಹಿತ್ಯ ಚರಿತ್ರೆ' ಶಾರದಾ ಮಂದಿರ, ಮೈಸೂರು.
ವೆಂಕಟಾಚಲ ಶಾಸ್ತ್ರೀ ಟಿ ವಿ	1991	'ಹಳೆಯ ಹೊನ್ನು' ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ಶಂಕರನಾರಾಯಣ ಉಡುಪ	1990	'ಮುದ್ರಾಮಂಜೂಷ': ಹಸ್ತಪ್ರತಿಗಳ ಮತ್ತು ಮುದ್ರಿತ ಪ್ರತಿಗಳ ಪರಸ್ಪರ ಸಂಬಂಧ' ಕನ್ನಡ ವಿಭಾಗ, ಮುಂಬಯಿ, ವಿ.ವಿ.ಮುಂಬಯಿ (ಅಪ್ರಕಟಿತ)
ಶಂಕರನಾರಾಯಣ ರಾವ್ ಎಚ ಎಂ.	1945	'ಚಂದ್ರಗುಪ್ತ ವಿಜಯ' ಶಾರದಾ ಮಂದಿರ, ಮೈಸೂರು.
	1960	'ಮುದ್ರೆಯುಂಗುರ, ಶಾರದಾ ಮಂದಿರ, ಮೈಸೂರು
	1977	'ಕೆಂಪುನಾರಾಯಣ: ಕವಿ ಮತ್ತು ಕೃತಿ' ಗೀತಾ ಬುಕ ಹೌಸ, ಮೈಸೂರು.
ಶಾಮರಾಯ ತ.ಸು.	1964	'ಕನ್ನಡ ಸಾಹಿತ್ಯ ಚರಿತ್ರೆ: ಒಂದು ಸಮೀಕ್ಷೆ' ತವೆಂ ಸ್ಮಾರಕ ಗ್ರಂಥಮಾಲೆ, ಮೈಸೂರು.
ಶಿವರುದ್ರಪ್ಪ ಜಿ.ಎಸ. (ಪ್ರ.ಸಂ.)	1932	'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ — ೫'. ವಿಶ್ವಭಾರತಿ, ಬೆಂಗಳೂರು.
ಶೀಲ ಬಿ.ಎಸ.	1991	'ಕರ್ನಾಟಕದಲ್ಲಿ ಸತಿಪದ್ಧತಿ' ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.
ಶೇಷಗಿರಿರಾವ ಎಚ.ಎಸ. (ಸಂ.)	1990	'ಭಾರತೀಯ ಸಾಹಿತ್ಯ ಸಮೀಕ್ಷೆ ಭಾಗ ೨'. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಶ್ರೀಕಂಠಮೂರ್ತಿ ಕೆ.ಆರ.	1972	'ಕರ್ನಾಟಕದ ಆಯುರ್ವೇದ ಇತಿಹಾಸ' ಪ್ರಸಾರಾಂಗ, ಮೈಸೂರು.
ಶ್ರೀಕಂಠಯ್ಯ ಕೆ	1983	'ಕನ್ನಡ ಕಾವ್ಯಗಳಲ್ಲಿ ನವರ ಚಿತ್ರಗಳು' ಪ್ರಸಾರಾಂಗ, ಮೈಸೂರು.
	1983	'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನ ಜೀವನ ಚಿತ್ರ' ಗೀತಾ ಬುಕ ಹೌಸ, ಮೈಸೂರು.
ಶ್ರೀಕಂಠಯ್ಯ ತೀ.ನಂ.	1942	'ರಾಕ್ಷಸನ ಮುದ್ರಿಕೆ' ಕಾವ್ಯಾಲಯ ಮೈಸೂರು.
	1990 (ಪಂಚಮ)	'ಭಾರತೀಯ ಕಾವ್ಯ ಮೀಮಾಂಸೆ' ಪ್ರಸಾರಾಂಗ, ಮೈಸೂರು.
ಶ್ರೀನಿವಾಸ ಹಾವನೂರ	1974	'ಹೊಸಗನ್ನಡದ ಅರುಣೋದಯ' ಪ್ರಸಾರಾಂಗ, ಮೈಸೂರು.
	1982	'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ ಇತ್ಯಾದಿ' ಅನನ್ಯ ಪ್ರಕಾಶನ ಮೈಸೂರು.

ಸೇತುಮಾಧವಾಚಾರ ಆರ	(ಅನು)	1948	'ಶ್ರೀಮದ್ವಾಯು ಮಹಾಪುರಾಣಮ್' ಶ್ರೀಜಯಚಾಮರಾಜೇಂದ್ರ ಗ್ರಂಥರತ್ನಮಾಲೆ, ಮೈಸೂರು.
ಸುಬ್ಬಣ್ಣ ಕೆ.ವಿ.	(ಅನು)	1992	'ದಶರೂಪಕ' ಅಕ್ಷರ ಪ್ರಕಾಶನ, ಹೆಗ್ಗೋಡು, ಶಿವಮೊಗ್ಗ.
ಸಣ್ಣಯ್ಯ ಬಿ.ಎಸ್.	(ಸಂ.)	1988	'ದೇವಚಂದ್ರ ವಿರಚಿತ ರಾಜಾವಳೀ ಕಥಾಸಾರ' ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
ಹನುಮಂತಾಚಾರ ಬಿ.	(ಸಂ.)	1956	'ಕಾಮಂದಕೀಯ ನೀತಿಸಾರ ವ್ಯಾಖ್ಯಾ ಟೀಕೆ' 'ಓರಿಯಂಟಲ ಸಿರೀಸ, ಮದ್ರಾಸ.

(ಆ) ಸಂಸ್ಕೃತ

'ಕಾಮಂದಕೀಯ ನೀತಿಸಾರ'

ಆನಂದಾಶ್ರಮ ಸಂಸ್ಕೃತ ಗ್ರಂಥಾವಲಿ, ಪುಣೆ

ಕೃಷ್ಣಶಂಕರ ಶಾಸ್ತ್ರೀ		1975	'ಶ್ರೀಮದ್ಭಾಗವತ ಮಹಾಪುರಾಣಮ್ ದ್ವಾದಶ: ಸ್ಕಂಧ:', ಶ್ರೀಭಾಗವತ ವಿದ್ಯಾಪೀಠ — ಅಹಮದಾಬಾದ.
ಠಾಕುರ ಪ್ರಸಾದ ಮಿಶ್ರ		1981	'ಚಾಣಕ್ಯ ಚರಿತಮ್' ಕೃಷ್ಣದಾನ ಅಕಾಡೆಮೀ ವಾರಣಾಸೀ.
ತೆಲಾಂಗ್ ಕೆ.ಟಿ.	(ಸಂ.)	1918	'ಮುದ್ರಾರಾಕ್ಷಸಮ್' ನಿರ್ಣಯ ಸಾಗರ ಪ್ರೆಸ, ಮುಂಬಯಿ ~~(ಸಂಸ್ಕೃತ~~)
ಬ್ರಹ್ಮಶಂಕರ ಮಿಶ್ರ	(ಸಂ.)	1967	'ಶುಕ್ರನೀತಿ' ಚೌಖಂಬಾ ಸಂಸ್ಕೃತ ಸಂಸ್ಥಾನ ವಾರಣಾಸಿ.
ವಿಜಯಶಂಕರ ಮಿಶ್ರ		1947	'ಚಾಣಕ್ಯಸೂತ್ರಂ' ಚೌಖಂಬಾ ಸಂಸ್ಕೃತಸಿರೀಸ ಬನಾರಸ.
ಶಾಮಾಶಾಸ್ತ್ರಿ ಆರ.	(ಸಂ.)	1924	'ಕೌಟಿಲೀಯಂ ಅರ್ಥಶಾಸ್ತ್ರಮ್' 'ಓರಿಯಂಟಲ ಲೈಬ್ರರಿ ಪಬ್ಲಿಕೇಶನ್ಸ ಮೈಸೂರು.
ಶಿವದತ್ತ ಮಿಶ್ರ ಶಾಸ್ತ್ರೀ		1986	'ಚಾಣಕ್ಯ ನೀತಿದರ್ಪಣ' ಕೃಷ್ಣದಾಸ ಅಕಾಡೆಮೀ ವಾರಣಾಸೀ.
ಸತ್ಯವ್ರತ ಸಿಂಹ (ಸಂ.)		1973	'ಮುದ್ರಾರಾಕ್ಷಸ ನಾಟಕಮ್' ಚೌಖಂಬಾ ಸಂಸ್ಕೃತ ಸಿರೀಸ ವಾರಣಾಸಿ.

(ಇ) ENGLISH

Narayanachandra Bandyopadhyaya 1982 'Kautilya' Indological book house, Varanasi.

Panchapakeshi Ayyar A.S. 1951 'Chandragupta and Chanakya' V.Ramaswami Sastrulu and sons, Madras.

Raghavan V (Ed.) 1973 'The Mudrarakshasanataka Katha of Mahadeva', T.M.S.S.M. Library, THANJAVUR.

Shama Sastry R (8th Ed.) 1967 'Kautilya's Arthasastra' Mysore printing & Publishing house, Mysore.

Vettam Mani (Ed.) 1989 'Puranic Encyclopaedia' Motilal Banarasidas, Delhi.

(ಈ) ಹಿಂದಿ

ಇಂದ್ರ ಎಂ.ಎ. (ಅನು) 1987 'ಕೌಟಿಲ್ಯ ಅರ್ಥಶಾಸ್ತ್ರ' ರಾಜಪಾಲ ಎಂಡ ಸನ್ಸ, ದೆಹಲಿ.

ಜಯಶಂಕರ ಪ್ರಸಾದ 1978 (13ನೆಯ ಮುದ್ರಣ) 'ಚಂದ್ರಗುಪ್ತ' ಪ್ರಸಾದ ಮಂದಿರ, ವಾರಣಾಸಿ.

ಧೀರೇಂದ್ರ ವರ್ಮಾ (ಪ್ರ.ಸಂ.) 1963 'ಹಿಂದಿ ಸಾಹಿತ್ಯ ಕೋಶ' ಜ್ಞಾನಮಂಡಲ ಲಿ. ವಾರಣಾಸಿ.

ರಾಮನಾರಾಯಣದತ್ತ (ಸಂ.) 1959 'ಮಹಾಭಾರತ ಕೀ ನಾಮಾನುಕ್ರಮಣಿಕಾ' ಗೀತಾಪ್ರೆಸ, ಗೋರಖಪುರ.

2. ಲೇಖನಗಳು

ಕೃಷ್ಣಶಾಸ್ತ್ರಿ ಎ.ಆರ್. ಏಪ್ರಿಲ 1932 'ಕರ್ನಾಟಕ ಮುದ್ರಾರಾಕ್ಷಸ ನಾಟಕಂ' ಆಂಗೀರಸ ಸಂ:ರದ ಚೈತ್ರ. ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು.

ಗೋವಿಂದ ಪೈ 1956 'ವಿಶಾಖದತ್ತನ ಮುದ್ರಾರಾಕ್ಷಸದಲ್ಲಿ 'ವೃಷಲ' ಎಂಬ ಶಬ್ದ' ಅಭಿವಂದನೆ — ಎ.ಆರ್.ಕೃ. ಸಂಭಾವನಾ ಗ್ರಂಥ ಪ್ರಕಟನ ಸಮಿತಿ, ಮೈಸೂರು.

ಗೋವಿಂದ ಮೂರ್ತಿ ದೇಸಾಯಿ	2–10–1994	'ವಿದೇಶಗಳಲ್ಲಿ ವಿಜೃಂಭಿಸುತ್ತಿರುವ ಟಿಪ್ಪುವಿನ ಸ್ಮಾರಕಗಳು' ಸುಧಾ ವಾರಪತ್ರಿಕೆ, ಬೆಂಗಳೂರು.
ನಾಗರಾಜಯ್ಯ ಹಂ.ಪ.	—	'ಚಾಣಾಕ್ಯ ರಿಸಿಯ ಕಥೆ — ಪರಾಮರ್ಶೆ' ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
ಪಾರಿಶವಾಡ, ಶೇಷ ಭಿ.	1927 ಮೇ	'ಮುದ್ರಾರಾಕ್ಷಸ — ಮುದ್ರಾಮಂಜೂಷಗಳ ಅಲ್ಪ ಪರಿಚಯ' ಸಂಪುಟ ೨೧ ಸಂಚಿಕೆ ೨೪ ವಾಗ್ಭೂಷಣ ಬೆಂಗಳೂರು.
ಭುಜಬಲಶಾಸ್ತ್ರೀ ಕೆ	1933 ಅಕ್ಟೋಬರ	'ಮುದ್ರಾರಾಕ್ಷಸದ ಕ್ಷಪಣಕ' ಶ್ರೀಮುಖ ಸಂ:ರದ ಅಶ್ವಯುಜ. ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ ಬೆಂಗಳೂರು.
ರಾಮಚಂದ್ರಮೂರ್ತಿ ಎಚ್.ಕೆ.	25–10–94	'ಕನ್ನಡದ ಮೊದಲ ಐತಿಹಾಸಿಕ ಕಾದಂಬರಿ' ಕನ್ನಡ ಪ್ರಭ, ಬೆಂಗಳೂರು.
ವೆಂಕಟನಾರಾಯಣಪ್ಪ ಬೆಳ್ಳಾವೆ	1932 ಅಕ್ಟೋಬರ	'ಮುದ್ರಾರಾಕ್ಷಸ — ಮುದ್ರಾಮಂಜೂಷ' ಶಾಹಾಶಾ ಆಂಗೀರಸ ಸಂಪುಟ ಅಶ್ವಯುಜ ಸಂಚಿಕೆ ಕ.ಸಾ.ಪ. ಪತ್ರಿಕೆ, ಬೆಂಗಳೂರು.
ವೆಂಕಟರಾಮಯ್ಯ ಸಿ.ಕೆ.	೨.1963	'ಕೆಂಪನಾರಾಯಣ' ಕನ್ನಡ ನುಡಿ ಸಂ.ಸಂ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
ವೆಂಕಟಾಚಲ ಶಾಸ್ತ್ರೀ ಟಿ.ವಿ.	ಜ:ಫೆ: 1980.	'ಕೆಂಪುನಾರಾಯಣ ಒಂದು ಟಿಪ್ಪಣಿ' ಸಂಪುಟ ೨ ಸಂಚಿಕೆ ೧ ಸಂಶೋಧನ ಪ್ರಸಾರಂಗ ಗುಲಬರ್ಗಾ ~~1991~~
	1991	ಕನ್ನಡ ಸಾಹಿತ್ಯಕ್ಕೆ ಮೈಸೂರು ಒಡೆಯರ ಕೊಡುಗೆ ೨೮೫-೨೮೬ ಸಂಯುಕ್ತ ಸಂಚಿಕೆ ಪ್ರಬುದ್ಧ ಕರ್ಣಾಟಕ. ಮೈಸೂರು.
ಶಂಕರನಾರಾಯಣ ಉಡುಪ	16–6–1991	'ಕನ್ನಡದ ವಿಶಿಷ್ಟ ಗದ್ಯ ಕವಿ: ಕೆಂಪುನಾರಾಯಣ' ಸಂಯುಕ್ತ ಕರ್ನಾಟಕ, ಬೆಂಗಳೂರು.
ಶಂಕರನಾರಾಯಣ ರಾವ ಎಚ್.ಎಂ.	1966	'ಮಹಾದೇವ — ರವಿನರ್ತಕ' ಉಪಾಯನ — ಪ್ರೊ: ಡಿ.ಎಲ್.ಎನ್. ಅವರಿಗೆ ಒಪ್ಪಿಸಿದ ಪ್ರಬಂಧಗಳ ಸಂಪುಟ — ಮೈಸೂರು.

••••••••••